ಯೇಸುಕ್ರಿಸ್ತ ಮತ್ತು ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದ

ಸಂಶೋಧಕ

ಫಾದರ್ ಜೆ. ಪ್ರಕಾಶ್ ಫ್ರಾನ್ಸಿಸ್

ಮಾರ್ಗದರ್ಶಕರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದಾಯಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿ.ಹೆಚ್.ಡಿ., ಪದವಿಗಾಗಿ
ಸಾದರ ಪಡಿಸಿದ ಮಹಾಪ್ರಬಂಧ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

2006

ಯೇಸುಕ್ರಿಸ್ತ ಮತ್ತು ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದ

ಯೇಸುಕ್ರಿಸ್ತ ಮತ್ತು ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದ

ಸಂಶೋಧಕ
ಫಾದರ್ ಜೆ. ಪ್ರಕಾಶ್ ಫ್ರಾನ್ಸಿಸ್

ಮಾರ್ಗದರ್ಶಕರು
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ
ಸಾದರ ಪಡಿಸಿದ **ಮಹಾಪ್ರಬಂಧ**

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೬

ಮಾರ್ಗದರ್ಶಕರ ದೃಢೀಕರಣ ಪತ್ರ

ಫಾದರ್ ಜೆ. ಪ್ರಕಾಶ್ ಫ್ರಾನ್ಸಿಸ್ ಇವರು 'ಯೇಸುಕ್ರಿಸ್ತ ಮತ್ತು ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದ' ಎಂಬ ಶೀರ್ಷಿಕೆಯ ಪಿಎಚ್.ಡಿ., ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ವೆಂದು ನಾನು ದೃಢೀಕರಿಸುತ್ತೇನೆ.

ದಿನಾಂಕ : 25-10-2006

ಸ್ಥಳ : ವಿದ್ಯಾರಣ್ಯ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಮಾರ್ಗದರ್ಶಕರು

ಪ್ರಮಾಣ ಪತ್ರ

‘ಯೇಸುಕ್ರಿಸ್ತ ಮತ್ತು ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದ’ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಲು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಬಳಸಿಕೊಂಡಿಲ್ಲವೆಂದು ನಾನು ಪ್ರಮಾಣೀಕರಿಸುತ್ತೇನೆ.

ದಿನಾಂಕ: **ಫಾದರ್ ಜೆ. ಪ್ರಕಾಶ್ ಫ್ರಾನ್ಸಿಸ್**

ಸ್ಥಳ : ವಿದ್ಯಾರಣ್ಯ, ಹಂಪಿ ಸಂಶೋಧನಾ ವಿದ್ಯಾರ್ಥಿ

ಅಧ್ಯಾಯ ೧
ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ೨
ಧಾರ್ಮಿಕ ಸಂವಾದದ ನೆಲೆಗಳು

ಅಧ್ಯಾಯ – ೩
ಕರ್ನಾಟಕ: ಧಾರ್ಮಿಕ ಸಂವಾದದ ಪರಂಪರೆಗಳು

ಅಧ್ಯಾಯ – ೪

ಯೇಸುಕ್ರಿಸ್ತ ಹಾಗೂ ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದದಲ್ಲಿನ ಸಮಾನ ಚಿಂತನೆಗಳ ಸ್ವರೂಪ

ಅಧ್ಯಾಯ - ೫

ಯೇಸುಕ್ರಿಸ್ತ ಹಾಗೂ ಬಸವಣ್ಣನವರ ಧಾರ್ಮಿಕ ಸಂವಾದದಲ್ಲಿನ ಸಾಮಾಜಿಕ ಸಮಾನತೆಯ ನವಸಮಾಜ

ಅಧ್ಯಾಯ ೬

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧.೧ ಅಧ್ಯಯನ ಉದ್ದೇಶ

ಜೀವ-ಜಗತ್ತು-ಜಗದೀಶ್ವರ (GOD - WORLD - MAN) ಇವುಗಳ ರಚನೆ, ಸ್ವರೂಪ, ಸಂಬಂಧಗಳನ್ನು ಕುರಿತ ಚಿಂತನೆ ಹಾಗೂ ಜೀವನದ ಪರಮ ಗುರಿ ಆತ್ಮಸಾಕ್ಷಾತ್ಕಾರದ ಅನುಪಮ ಸಿರಿಗಳನ್ನು ಕುರಿತ ವಿವೇಚನೆ. ಇವು ಬಹು ಹಿಂದಿನಿಂದಲೂ ಈ ನಾಡಿನಲ್ಲಿ ಸಾಗಿ ಬಂದಿವೆ, ಬೆಳೆದು ನಿಂದಿವೆ.

ಇಂದು ನಮ್ಮ ರಾಷ್ಟ್ರವು ಇತಿಹಾಸದ ಒಂದು ಸಂಧಿಕಾಲದಲ್ಲಿದೆ. ಸರ್ವ ಧರ್ಮಗಳು ಸಮಾನತೆಯಿಂದ ಬಾಳಲು ಆಶಿಸುತ್ತಿರುವ ಕಾಲವಾಗಿದೆ. ಯಾವ ಧರ್ಮವು ಮೇಲಲ್ಲ ಹಾಗೂ ಕೀಳಲ್ಲ. ಎಲ್ಲಾ ಧರ್ಮಗಳು ಒಟ್ಟಾಗಿ ಬಾಳಿ ಬೆಳೆದು ಬೆಳಗುವ ಕಾಲವೂ ಇದಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಬಹು ಸಂಖ್ಯಾಕ ಜನರು ಸುಮಾರು ಎಂಟು ಶತಮಾನಗಳಿಗಿಂತಲೂ ಹಿಂದಿನಿಂದ ಆಚರಿಸಿಕೊಂಡು ಬಂದಿರುವ ವೀರಶೈವ ಧರ್ಮದ ನಾಯಕನಾದ ಬಸವಣ್ಣ ಹಾಗೂ ೨೦ ಶತಮಾನಗಳಿಗೂ ಮಿಗಿಲಾಗಿ ಕ್ರಿಸ್ತ ಬೋಧನೆಗಳನ್ನು ಅನುಸರಿಸುತ್ತಾ ಬಂದಿರುವ ಕ್ರೈಸ್ತರ ಅಧಿನಾಯಕ, ಪ್ರೇರಕ, ಪೋಷಕ ಯೇಸುಕ್ರಿಸ್ತ ಇವರಿಬ್ಬರ ಬೋಧನೆಗಳ ನಡುವೆ ಇರುವ ಸಮಾನವಾದ ಸಂವಾದದ ಅಂಶಗಳನ್ನು ಪರಿಶೀಲಿಸುವ ಉದ್ದೇಶ ಈ ಅಧ್ಯಯನದ ಮುಖ್ಯ ಆಶಯವಾಗಿದೆ. ನಾವಿಂದು ಬದುಕುವ ಸಮಾಜ ತುಸು ವಿಚಿತ್ರವೆನಿಸುತ್ತಿದೆ. ಏಕೆಂದರೆ ನಡೆ-ನುಡಿ, ಆಚಾರ ವಿಚಾರ ಹಾಗೂ ಕ್ರಿಯೆ ಜ್ಞಾನಗಳಲ್ಲಿ ತಾಳಮೇಳ ಅಳಿದು ಹೋಗಿ ದ್ವಂದ್ವವನ್ನು ಸದಾ ಕಾಣುತ್ತಿದ್ದೇವೆ. ನಮ್ಮ ನುಡಿ ಒಂದು ವಿಧವಾದರೆ ನಮ್ಮ ನಡೆ ಮತ್ತೊಂದು ರೀತಿ. ಹೀಗೆ ನುಡಿಗೂ ನಡೆಗೂ ಸಮನ್ವಯವಿಲ್ಲದೆ ಸಮಾಜದ ಬದುಕು ಶ್ರುತಿ ತಪ್ಪಿದ ಗೀತೆಯಾಗಿದೆ.

"ನಮ್ಮದು ಜಾತ್ಯತೀತ ರಾಷ್ಟ್ರ ಎನ್ನುತ್ತೇವೆ. ಆದರೆ ದೈನಂದಿನ ಬದುಕಿನಲ್ಲಿ ಎಲ್ಲವೂ ನಡೆಯುವುದು ಜಾತೀಯತೆಯ ಆಧಾರದ ಮೇಲೆಯೆ. 'ಕಾಯಕವೇ ಕೈಲಾಸ' ಎನ್ನುತ್ತೇವೆ ಆದರೆ ಸೋಮಾರಿಯಾಗಿ ಕಾಲ ಕಳೆಯಲಿಚ್ಛಿಸುತ್ತೇವೆ. ಹೀಗೆ ಸಮಾಜದ ಸ್ತರಗಳಲ್ಲಿ ಹಾಗೂ ವೈಯಕ್ತಿಕವಾಗಿ ನಾವು ದ್ವಂದ್ವವನ್ನೇ ಕಾಣುತ್ತೇವೆ.

ನಮ್ಮ ದೇಶ ಅನೇಕ ಸಾಂಸ್ಕೃತಿಕ ಸಮುದಾಯಗಳ ಸಿದ್ಧಾಂತ ದರ್ಶನಗಳ ತವರೂರು ಎಂದು ಬಡಬಡಿಸುತ್ತೇವೆ. "ಆದರೆ ನಾವು ಒಂದೇ ಪ್ರದೇಶದಲ್ಲಿ ಹಾಗೂ ಕಾಲಘಟ್ಟದಲ್ಲಿ ಜೀವಿಸಿದರೂ ಇನ್ನೂ

ಪರಸ್ಪರ ಅನ್ಯರಾಗಿ ಒಬ್ಬರಿಗೊಬ್ಬರು (Aliens) ಉಳಿದಿದ್ದೇವೆ. ನಮ್ಮ ಅಕ್ಕ ಪಕ್ಕದಲ್ಲಿರುವ ಧರ್ಮಗಳನ್ನು ದರ್ಶನಗಳನ್ನು ಕುರಿತು ನಮ್ಮ ಓದು, ಅಧ್ಯಯನ, ಸಂಶೋಧನೆಗಳು, ಬಹುಮಟ್ಟಿಗೆ ಶೂನ್ಯವಾಗಿವೆ. ಇದೇ ನಮ್ಮ ಸಂವಾದನೆ ಅರ್ಥಾತ್ ನಮ್ಮ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭ (Context) ಕ್ಕೂ ನಮ್ಮ ವೈಯಕ್ತಿಕ ಬದುಕಿಗೂ ಸಂಬಂಧಗಳೇ ಇಲ್ಲದೇ ನಾವಿಂದು ಕೂಪ ಮಂಡೂಕರಂತೆ ಬಾಳುತ್ತೇವೆ."[7] ಹೀಗಿರುವಲ್ಲಿ ಕ್ರೈಸ್ತರು ಯೇಸುಕ್ರಿಸ್ತನನ್ನು ಕೇವಲ ಚರ್ಚ್‌ಗೆ ಸೀಮಿತಗೊಳಿಸಿಕೊಳ್ಳದೆ, ಬಸವಣ್ಣನನ್ನು ಲಿಂಗಾಯಿತರು ಗುಡಿಗೆ ಸೀಮಿತಗೊಳಿಸಿಕೊಳ್ಳದೆ, ಗುಡಿ-ಗೋಪುರ ಚರ್ಚ್‌ಗಳಿಗೆ ಅತೀತವಾಗಿ ನೋಡುವ ಯತ್ನ ಈ ಅಧ್ಯಯನದಲ್ಲಿ ನಡೆಸಿದ್ದೇನೆ. ಈ ಇಬ್ಬರು ಪುರುಷರ ವಿಶ್ವಮಾನವ ನಿಲುವನ್ನು, ದಯೆಯನ್ನು, ಮಾನವ ಸಮಾಜದ ನವ ನಿರ್ಮಾಣವನ್ನು ತೋರಿಸುವ ಪ್ರಯತ್ನವೂ ಈ ಪ್ರಬಂಧದ ಆಶಯವಾಗಿದೆ.

ಬಸವಣ್ಣ ಮತ್ತು ಯೇಸುಕ್ರಿಸ್ತ ಇಬ್ಬರು ಯುಗಪುರುಷರು. ಮೂಢ ನಂಬಿಕೆಗಳಿಂದ, ಪುರೋಹಿತ ಶಾಹಿಯ ದಬ್ಬಾಳಿಕೆಯಿಂದ ನಲುಗಿ ಹೋಗಿದ್ದ ಅಂತ್ಯಜರ ಬದುಕಿಗೆ ಆಶಾಕಿರಣವಾಗಿ ಮೂಡಿ ಬಂದವರು. ಇಬ್ಬರೂ ಸಮಾಜೋ-ಧಾರ್ಮಿಕ ಕ್ರಾಂತಿಯನ್ನು/ಆಂದೋಲನವನ್ನು ತಮ್ಮ ತಮ್ಮ ಕಾಲಘಟ್ಟಗಳಲ್ಲಿ ಆರಂಭಿಸಿದರು. ತಮ್ಮ ಜೊತೆ ನಿಷ್ಠಾವಂತ ಶಿಷ್ಯರ ತಂಡವನ್ನು ಅದಕ್ಕಿಂತ ಮಿಗಿಲಾಗಿ ಮಹಾ ವಿಚಾರ ಧಾರೆಯನ್ನು ಈ ಜಗತ್ತಿಗೆ ಬಿಟ್ಟುಹೋದರು.

ಈ ಮೇಲಿನ ಅಂಶಗಳಿಂದಾಗಿ ಇಂದಿಗೂ ಯೇಸುಕ್ರಿಸ್ತನ ಕ್ರೈಸ್ತ ಧರ್ಮವು, ಬಸವಣ್ಣನ ಲಿಂಗಾಯತ ಧರ್ಮವು ಪ್ರಸ್ತುತವೆನಿಸಿ ನಮ್ಮ ನಡುವೆ ಜನಪ್ರಿಯವಾಗಿ ಉಳಿದಿದೆ. ಯಾವುದೇ ಧರ್ಮದ ನಾಯಕರು ತಮ್ಮ ಜೀವನಾನುಭವ, ಲೋಕಾನುಭವದ ಆಧಾರದ ಮೇಲೆ ತಾವು ಕಂಡ ದರ್ಶನ, ಅರ್ಥ ಮಾಡಿಕೊಂಡ ಪರಮ ಸತ್ಯದ ಆಧಾರದಿಂದ ತಮ್ಮದೇ ಆದ ತತ್ವ, ಮಾರ್ಗ, ಸಿದ್ಧಾಂತಗಳ ಪ್ರತಿಪಾದನೆ ಮಾಡುತ್ತಾರಷ್ಟೆ. ಕಾಲಕ್ರಮೇಣ ಮುಂದಿನ ತಲೆಮಾರುಗಳಲ್ಲಿ ಇವರು ಪ್ರತಿಪಾದಿಸಿದ ತತ್ವಗಳಿಗೆ / ಮಾರ್ಗ/ ಸಿದ್ಧಾಂತಗಳಿಗೆ ಪುರೋಹಿತಶಾಹಿಗಳು ಚೌಕಟ್ಟನ್ನು ನೀಡಿ ಮತೀಯ ಸಂರಚನೆ ಮಾಡುತ್ತಾರೆ. ಯೇಸುಕ್ರಿಸ್ತ ಹಾಗೂ ಬಸವಣ್ಣ ಇವರಿಬ್ಬರ ವಿಷಯದಲ್ಲಿ ಆದದ್ದು ಹೀಗೆಯೇ. ಯೇಸುಕ್ರಿಸ್ತ ತನ್ನ ಹಿಂಬಾಲಕರೊಂದಿಗೆ ಆರಂಭಿಸಿದ್ದು ಯೇಶ್ವಾಂದೋಲನವೇ ಹೊರತು ಅದೊಂದು ಮತವಲ್ಲ - ಅದೇ ರೀತಿ ಬಸವಾದಿ ಶರಣರು ಆಂಶಿಕವಾಗಿ ಚಳುವಳಿ ಕಟ್ಟಿದರೇ ಹೊರತು ಮತವನ್ನಲ್ಲ. ಮತವೆನ್ನುವುದು ವ್ಯಕ್ತಿಗತವಾದುದು. ಧರ್ಮ ಎನ್ನುವುದು ವಿಶ್ವಾತ್ಮಕವಾದುದು. ಈ ಅಂಶದ ಜಾಡನ್ನು ಹಿಡಿದು ನಾವು ಸಾಗಬೇಕಾಗಿದೆ. ಮತ ಎಂಬುದಕ್ಕೆ Religion ಎಂದೂ ಧರ್ಮ ಎಂಬುದಕ್ಕೆ ಸಮಾನ ಪರಿಭಾಷೆ ರಿಲಿಜಿಯನ್ ಅಲ್ಲವೆಂದೂ ಪ್ರಬಂಧದ ಉದ್ದಕ್ಕೂ ಪ್ರತಿವಾದಿಸಲಾಗಿದೆ.

ನಮ್ಮ ಸಮಾಜದ ಇಂದಿನ ಪರಿಸ್ಥಿತಿ ಯೇಸು ಬಸವಣ್ಣನವರ ಕಾಲದ ಪರಿಸ್ಥಿತಿಗಿಂತ ಭಿನ್ನವಾಗೇನಿಲ್ಲ. ಈ ಅಧ್ಯಯನದಲ್ಲಿ ಈ ಇಬ್ಬರು ಮಹಾತ್ಮರ ಜಗದ್ ಜ್ಯೋತಿಗಳ ಸಮಾನ ಚಿಂತನೆಗಳನ್ನು ಸೂಕ್ಷ್ಮವಾಗಿ ನೋಡುವ ಉದ್ದೇಶವೇ ಪುಟಪುಟಗಳಲ್ಲಿ ಕಾಣಿಸುವ ಯತ್ನ ಮಾಡಿದೆ.

"ವಿರಸವೇ ತಾಂಡವಾಡುತ್ತಿರುವ ಇಂದಿನ ಕಾಲದಲ್ಲಿ ಶೋಷಿತ ಮಾನವನನ್ನೇ ಕಾಣದ ಪರಮಾತ್ಮನ

ಕುರುಹನ್ನಾಗಿ ಸ್ವೀಕರಿಸಿ, ಆತನಲ್ಲಿ ಯೇಸುಕ್ರಿಸ್ತನನ್ನು / ಶಿವನನ್ನು ಕಂಡು ಧ್ಯಾನಿಸಿ ಆತನ ವಿಮೋಚನ ಕಾರ್ಯದಲ್ಲಿಯೇ ಸರ್ವಾರ್ಪಣ ಭಾವದಿಂದ ತಲ್ಲೀನವಾಗಿ ಬಾಳುವುದು ಕ್ರಿಸ್ತಯೋಗ/ ಶಿವಯೋಗ. ಹೀಗೆ ಪರಹಿತ ಸಹಬಾಳ್ವೆಯಿಂದ ಜೀವಾತ್ಮ ಕರ್ತಾರನ ಕಮ್ಮಟದಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು 'ಅಲ್ಲಿ' ಸಲ್ಲುವಂತೆ 'ಇಲ್ಲಿ' ಬಾಳಬಲ್ಲ ವ್ಯಕ್ತಿಗಳ/ಶರಣರ ಸಮಾಜವೇ ಯೇಸು ಸಾರುವ ದೇವರ ರಾಜ್ಯ - ಬಸವಣ್ಣ ಸಾರುವ ಶಿವಸಾಮ್ರಾಜ್ಯ."[೨]

ಈ ಇಬ್ಬರೂ ಮಹನೀಯರ ಬೋಧನೆಗಳ ಸಮಾನ ಅಂಶಗಳನ್ನು ಸಂವಾದದ ಹಿನ್ನೆಲೆಯಲ್ಲಿ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ. ಇದು ಇಂದಿನ ವರ್ತಮಾನದ ತುರ್ತು ಕೂಡ ಆಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಯೇಸುಕ್ರಿಸ್ತ ಮತ್ತು ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಚಿಂತನೆ ಬಹು ವಿಶಾಲವಾದುದು ಹಾಗೂ ವ್ಯಾಪಕವಾದುದಷ್ಟೆ. ಕರ್ನಾಟಕದಲ್ಲಿ ಇದುವರೆಗೂ ಬಸವಣ್ಣ ಹಾಗೂ ಯೇಸುಕ್ರಿಸ್ತರ ನಡುವಿನ ಧಾರ್ಮಿಕ ಸಂವಾದದ ಆಳವಾದ ಅಧ್ಯಯನ ನಡೆದಂತೆ ಕಂಡುಬಂದಿಲ್ಲ. ಅಲ್ಲಲ್ಲಿ ಇಬ್ಬರೂ ಮಹಾನೀಯರ ಬಗ್ಗೆ ಬಿಡಿಬಿಡಿ ಲೇಖನಗಳು ಪ್ರಕಟವಾಗಿದ್ದರೂ ಸಮಗ್ರವಾದ ಅಧ್ಯಯನ ಇನ್ನೂ ಆಗದಿರುವುದನ್ನು ಮನಗಂಡು ಧಾರ್ಮಿಕ ಸಂವಾದದ ವ್ಯಾಪ್ತಿ ವಿಸ್ತಾರವಾಗಿರುವಂತೆ ನೋಡಲಾಗಿದೆ.

ಧಾರ್ಮಿಕ ಸಂವಾದದ ಪರಿಕಲ್ಪನೆಯನ್ನು ಜಾಗತಿಕ ಹಿನ್ನೆಲೆಯಲ್ಲಿ ಹಾಗೂ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕದಲ್ಲಿ ಧಾರ್ಮಿಕ ಸಂವಾದದ ಪರಂಪರೆ ಹಾಗೂ ಪರಿಕಲ್ಪನೆಯನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಹಿಂದೂ-ಮುಸ್ಲಿಂ; ಮುಸ್ಲಿಂ-ಕ್ರೈಸ್ತ, ಹಿಂದೂ-ಕ್ರೈಸ್ತ; ಬೌದ್ಧ-ಕ್ರೈಸ್ತ; ಹೀಗೆ ಅನೇಕ ಧರ್ಮಗಳ ನಡುವೆ ಧಾರ್ಮಿಕ ಸಂವಾದ ವಿವಿಧ ಸ್ತರಗಳಲ್ಲಿ ಉನ್ನತ ಶ್ರೇಣಿಯಲ್ಲಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ, ಇತ್ತೀಚಿನ ದಿನಗಳಲ್ಲಿ ಈ ಸಂವಾದಗಳು ಹೀಗೆ ರೂಪಗೊಳ್ಳುತ್ತಿವೆ ಎಂಬುದರ ಕಿರು ಪರಿಚಯವನ್ನು ಕಾಣಬಹುದಾಗಿದೆ. ಅದೇರೀತಿ ಬಹು ಧರ್ಮಿಯರ ನಾಡಾದ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಧಾರ್ಮಿಕ ಸಂವಾದದ ವಿವಿಧ ಮಜಲುಗಳನ್ನು ಪ್ರಗತಿಯನ್ನು ಇದರ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಧಾರ್ಮಿಕ ಮಹಾಪುರುಷರಲ್ಲಿ ಮೂರು ಬಗೆಯ ವ್ಯಕ್ತಿಗಳುಂಟು. ಒಬ್ಬರು ಆಚಾರ್ಯರು, ಇನ್ನೊಬ್ಬರು ಪ್ರವಾದಿಗಳು, ಮೂರನೆಯವರು ಸಂತರು. ಶಂಕರ, ಮಧ್ವ, ರಾಮಾನುಜರು ಆಚಾರ್ಯರಾದರೆ, ಯೇಸು ಬುದ್ಧ, ಬಸವೇಶ್ವರರು ಪ್ರವಾದಿಗಳು. ಮೂರನೆಯವರು ಸಂತರು. ಇವರು ವ್ಯಕ್ತಿಗತ ಉದ್ಧಾರದಲ್ಲಿ ನಿರತರು. ಹೆಚ್ಚೆಂದರೆ ಕೆಲವು ಅನುಯಾಯಿಗಳಿಂದಾಗಿ ಇವರ ವಿಚಾರಗಳು ಬೆಳೆಯುತ್ತವೆ. ಆಚಾರ್ಯರು ಧರ್ಮ ಪ್ರವರ್ತಕರೆಂಬಂತೆ ತತ್ವಗಳಿಗೆ ಸಂವಿಧಾನಾತ್ಮಕ ಮುದ್ರೆ ಬಿತ್ತಿದರೆ, ಪ್ರವಾದಿಗಳು ತಾವು ಧರ್ಮ ಪ್ರಸಾರಕರೆಂಬಂತೆ ಹೃದಯದಿಂದ ಹೃದಯಕ್ಕೆ ಮುಟ್ಟುವ ಬಿಡಿಸೂಕ್ತಿಗಳನ್ನು ಹೇಳುತ್ತಾರೆ. ಯೇಸು ಮತ್ತು ಬಸವಣ್ಣನವರು ಸೂಕ್ತಿಗಳ ವ್ಯಾಪ್ತಿಯನ್ನು ಪ್ರಸ್ತುತ ಅಧ್ಯಯನವು ಪರಿಶೀಲಿಸುತ್ತದೆ.

ಆಚಾರ್ಯ ಪರಂಪರೆಯಲ್ಲಿ, ಶಂಕರ, ಮಧ್ವ, ರಾಮಾನುಜರನ್ನೂ ಪ್ರವಾದಿ ಪರಂಪರೆಯಲ್ಲಿ ಬುದ್ಧ, ಮಹಾವೀರ ಇತ್ಯಾದಿ ಪ್ರಮುಖರನ್ನೂ ದಾಸ ಪರಂಪರೆಯಲ್ಲಿ ಪುರಂದರದಾಸರು, ಕನಕದಾಸರನ್ನೂ ಅವಧೂತ ಪರಂಪರೆಯ ಧಾರ್ಮಿಕ ಸಂವಾದಗಳ ಅಧ್ಯಯನವನ್ನು ಇದರ ವ್ಯಾಪ್ತಿಗೆ ತರಲಾಗಿದೆ.

ಅಧ್ಯಯನವು ಮುಂದುವರೆದಂತೆ ಬಸವಣ್ಣ ಮತ್ತು ಯೇಸುಕ್ರಿಸ್ತರ ಬೋಧನೆಗಳ ನಡುವೆ ಸಮಾನ ಚಿಂತನೆಗಳ ಒಳನೋಟಗಳನ್ನು ಇಲ್ಲಿ ಕೊಡಲಾಗಿದೆ. ಈ ಇಬ್ಬರು ಸಮಾಜ ಸುಧಾರಕರಾಗಿ, ಧಾರ್ಮಿಕ ನಾಯಕರಾಗಿ, ಅನುಭಾವಿಗಳಾಗಿ ಅನುಭವಿಸಿದ ಭಗವತ್ ಪ್ರೇಮ ಪಾಮರರಿಗೆ ಪಾವನ ಪಥ ತೋರಿಸಲು

ಮಾಡಿದ ಬೋಧನೆಗಳನ್ನು ಸಮಾನ ನೆಲೆಗಳಲ್ಲಿ ಗುರುತಿಸಿ ಇವರಿಬ್ಬರಿಗೂ ಇರುವ ವಿಶ್ವಾತ್ಮಕ ನಿಲುವು-ಒಲವುಗಳನ್ನು ಗುರುತಿಸಲಾಗಿದೆ.

ಬಸವಣ್ಣ ಮತ್ತು ಯೇಸುಕ್ರಿಸ್ತರಿಬ್ಬರೂ ತಮ್ಮ ತಮ್ಮ ಕಾಲಘಟ್ಟಗಳಲ್ಲಿ ಪುರೋಹಿತ ಶಾಹಿಯ ಕಪಿಮುಷ್ಠಿಯ ವಿರುದ್ಧ ನಡೆಸಿದ ಹೋರಾಟ, ಅಂತ್ಯಜರ ಉದ್ಧಾರಕ್ಕಾಗಿ ನಡೆಸಿದ ಸಮಾಜೋ-ಧಾರ್ಮಿಕ ಆಂದೋಲನದತ್ತ ಪ್ರಸ್ತುತ ಅಧ್ಯಯನವು ಮುಖಮಾಡಿದೆ. ಯೇಸುವಿನ ಪರ್ವತ ಪ್ರಸಂಗ ಹಾಗೂ ಬಸವಣ್ಣನವರ ಅನುಭವ ಮಂಟಪದ ಸಾರವನ್ನು ಒಟ್ಟಾಗಿ ಹಿಡಿದು ಇಬ್ಬರ ಗಮನ ಬೇರೆಯಾಗಿದ್ದರೂ ಗಮ್ಯ ಸ್ಥಾನ ಒಂದೇ ಎಂಬುದನ್ನು ತೋರಿಸಲಾಗಿದೆ.

ಪರ್ವತ ಪ್ರಸಂಗದಲ್ಲಿ ಯೇಸು ತನ್ನ ಆತ್ಮದ ಮೂಲಕ ಸಂಗೀತ ಹಾಡಿದರೆ; ಅನುಭವ ಮಂಟಪದಲ್ಲಿ ಬಸವಣ್ಣ ಆತ್ಮಕಲ್ಯಾಣದ ರಾಗವನ್ನೇ ಶರಣರ ಜೊತೆ ಸಂಯೋಜಿಸಿದ್ದಾನೆ. ಯೇಸುಕ್ರಿಸ್ತನ ಕಾಲದ ಪ್ಯಾಲೆಸ್ಟೇನ್ ದೇಶದ ಸಾಮಾಜಿಕ ಸ್ಥಿತಿಗತಿಗಳತ್ತ ಬೆಳಕು ಚೆಲ್ಲುವುದರ ಮೂಲಕ ಯೇಸುಕ್ರಿಸ್ತನ ಸಾಮಾಜಿಕ ಒಲವು ನಿಲುವನ್ನು, ಹನ್ನೆರಡನೇ ಶತಮಾನದ ಕರ್ನಾಟಕದಲ್ಲಿ ಸಾಮಾಜಿಕ ಪರಿಸ್ಥಿತಿಯನ್ನು ಅವಲೋಕಿಸುವುದರ ಮೂಲಕ ಬಸವಣ್ಣನ ಸಾಮಾಜಿಕ ಒಲವು ನಿಲುವುಗಳನ್ನು ಜೊತೆಗೆ ಸಾಮಾಜಿಕ ಹಾಗೂ ನೈತಿಕ ಶೋಧದ ನೆಲೆಗಳಲ್ಲಿ ಧಾರ್ಮಿಕ ಸಂವಾದದ ಅಧ್ಯಯನವೂ ನಡೆಯುತ್ತದೆ.

೧.೩ ಅಧ್ಯಯನದ ಸ್ವರೂಪ

ಈ ಮಹಾ ಪ್ರಬಂಧವು ಪ್ರಾಮುಖ್ಯವಾಗಿ ತೌಲನಿಕ ವಿಶ್ಲೇಷಣೆಯನ್ನು ಪ್ರಧಾನವಾಗಿ ಹಿಡಿಯುತ್ತದೆ. ಈ ತುಲನಾತ್ಮಕ ಅಧ್ಯಯನದ ಹಿಂದೆ ದೇವತಾಶಾಸ್ತ್ರ ಮತ್ತು ಭಾರತೀಯ ಜ್ಞಾನ ಶಾಸ್ತ್ರದ ಅನುಸಂಧಾನ ಶಾಸ್ತ್ರೋಪ ಕ್ರಮಗಳನ್ನು ಗಮನಿಸಲಾಗಿದೆ. ಸಂಶೋಧನೆಯ ಹಿಂದಿರುವ ತಾತ್ವಿಕ ಸಿದ್ಧಾಂತ ಕೂಡ ಇದೇ ಆಗಿದೆ.

ಬಸವಣ್ಣ ಮತ್ತು ಯೇಸುಕ್ರಿಸ್ತರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದದ ಅಧ್ಯಯನ ಮಾಡುವಲ್ಲಿ ಭಾಷ್ಯಾತ್ಮಕ/ವ್ಯಾಖ್ಯಾನಾತ್ಮಕ (Hermeneutical), ವಿಶ್ಲೇಷಣಾತ್ಮಕ (Analytical) ಸಂವಾದಾತ್ಮಕ Dialogical) ಮುಂತಾದ ಅಧ್ಯಯನ ಪದ್ಧತಿ(Methodology) ಗಳನ್ನು ಅನುಸರಿಸಬಹುದಾದರೂ ಪ್ರಸ್ತುತ ಅಧ್ಯಯನದಲ್ಲಿ ಸಂವಾದಾತ್ಮಕ ಪದ್ಧತಿಯನ್ನು ಪ್ರಮುಖವಾಗಿ ಅಳವಡಿಸಲಾಗಿದೆ.

ಹಲವು ಮತಧರ್ಮಗಳು, ದರ್ಶನಗಳು ಕೂಡಿ ಬಾಳುತ್ತಿರುವ ಭಾರತೀಯ ಮಣ್ಣಿನಲ್ಲಿ ಸಾಮರಸ್ಯದಿಂದ ಬಾಳುವುದೇ ಎಲ್ಲ ದರ್ಶನಗಳ ಹೆಗ್ಗುರಿ. ನಮ್ಮ ಬಾಳಿನಲ್ಲಿ ಸಾಮರಸ್ಯ ಭಾವೈಕತೆ ಇಲ್ಲದಿದ್ದರೆ ದೇವ-ಮಾನವನ ನಡುವಿನ ಪ್ರೀತಿ ಸಾಧಿಸುವುದು ಸುಳ್ಳೆಂದು ಯೇಸುಕ್ರಿಸ್ತ ಸಾರಿದರೆ; ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ ಎಂದು ಬಸವಣ್ಣ ಸಾರುತ್ತಾನೆ. ಈ ಸಹಬಾಳ್ವೆಯ (Co-living) ಸಂದರ್ಭದಲ್ಲಿ ಸಂವಾದಾತ್ಮಕ ಪದ್ಧತಿ ಅತ್ಯುತ್ತಮ ಸಂವಹನ ತಂತ್ರವೆನಿಸಿಕೊಂಡಿದೆ. ದಾರ್ಶನಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ, ಸಂವಾದವು ಭಾರತದಲ್ಲಿ ಉಪನಿಷತ್ಕಾಲದಿಂದಲೂ, ಪಾಶ್ಚಾತ್ಯ ದೇಶಗಳಲ್ಲಿ ಸಾಕ್ರೆಟಿಸನ ಕಾಲದಿಂದಲೂ ಪ್ರಚಲಿತವಾಗಿತ್ತು.

ಈ ಸಂವಾದಾತ್ಮಕ ಪದ್ಧತಿಯಲ್ಲಿ ಪರಸ್ಪರ ಅರ್ಥೈಸುವುದಕ್ಕೆ ಹೆಚ್ಚಿನ ಆದ್ಯತೆಯಿಂದ, ಯೇಸುಕ್ರಿಸ್ತ ಹಾಗೂ ಬಸವಣ್ಣ ಇಬ್ಬರೂ ಸತ್ಯದ ಅನ್ವೇಷಣೆಯಲ್ಲಿ ಸಹ ಯಾತ್ರಿಕರಂತೆ ಮುಂದೆ ಸಾಗಿದವರು. 'ಮಾನವನ ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ವಿಭಿನ್ನ ಪ್ರದೇಶ ಸೀಮೆಗಳಲ್ಲಿ ವೈವಿಧ್ಯಮಯವಾದ ಮನಃಸ್ಥಿತಿ ಉಂಟಾದ ಸೀಮಾತೀತ ಅನುಭಾವದ (Depth experience) ಅಭಿವ್ಯಕ್ತಿಗಳಲ್ಲಿ ಕೆಲವೊಂದು ಭಿನ್ನತೆಗಳಿರುವುದು ಸಹಜ. ಆದರೂ ಈ ದರ್ಶನಗಳನ್ನು/ಕಾಣ್ಕೆಗಳನ್ನು ಪರಸ್ಪರ ಸೇರಿ ಅರ್ಥೈಸಿಕೊಂಡು ಅವುಗಳ ಸ್ಥಲ (Ground) ವನ್ನು ಅನ್ವೇಷಿಸುವುದೇ ಸಂವಾದದ ಉದ್ದೇಶವಾಗಿದೆ. ಹೀಗೆ ಅರ್ಥೈಸುತ್ತಿರುವಾಗ ತಂತಮ್ಮ ದರ್ಶನಗಳ ವಿಮರ್ಶಾತ್ಮಕ ಪುನರಾವಲೋಕನ (Self-critical attitude) ಅಗತ್ಯವೆನಿಸಿಕೊಳ್ಳ ಬಹುದು. ಲಭ್ಯವಾಗಬಹುದಾದ ಹೊಸತನದಿಂದ ವಿಭಿನ್ನ ಸಮಾಜಗಳ ನಡುವೆ ಅನ್ಯೋನ್ಯತೆ ಉಂಟಾಗಿ ಮಾನವ ಸಮಾಜ ಹೆಚ್ಚೆಚ್ಚು ಮಾನವೀಯಗೊಳ್ಳಬಹುದು. ಸ್ವಮುಖಿ ಮುಕ್ತಿ-ಪ್ರಜ್ಞೆ ಸಮಾಜದ ಮುಖಿಯಾದಾಗ ಸಾಮಾಜಿಕ ಅಡ್ಡಗೋಡೆಗಳು ನೆಲಕಚ್ಚಿ ಅಂತರ್-ಸಮಾಜಿಕ ಸೇತುವೆಗಳಾಗುವುದು

ಸಾಧ್ಯ. ಆಗಮಾತ್ರ ವ್ಯಷ್ಟಿಪ್ರಜ್ಞೆಯ ಜನ ಹಾಗೂ ಸಮುದಾಯಗಳು, ಸಮಷ್ಟಿಪ್ರಜ್ಞೆಯ ವಸುದೈವಕುಟುಬಕಂ ಶಿವಸಾಮ್ರಾಜ್ಯ / ದೈವಿರಾಜ್ಯ ಆಗಿ ರೂಪಾಂತರ ಹೊಂದುತ್ತವೆ."[೩]

ಈ ಹಿನ್ನೆಲೆಯಲ್ಲಿ ಯೇಸುಕ್ರಿಸ್ತ ಮತ್ತು ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದದ ಅಧ್ಯಯನವನ್ನು ಬೆಳಸಲಾಗಿದೆ. ಸಂವಾದಕ್ಕೆ ಎತ್ತಿಕೊಳ್ಳಲಾಗಿದೆ.

ಟಿಪ್ಪಣಿಗಳು

೧. ಡಾ. ವಿಲ್ಯಂ ಮಾಡ್ತಾ, **ವೀರಶೈವ ದರ್ಶನ,** ಕ್ರೈಸ್ತ ಮತ್ತು ವೀರಶೈವ, ಪುಟ ೬೨.

೨. ಅದೇ ಪುಟ ೭೩ ೩. ಅದೇ ಪುಟ ೬೬

ಅಧ್ಯಾಯ - ೨

೨.೧ ಧಾರ್ಮಿಕ ಸಂವಾದದ ವ್ಯಾಖ್ಯಾನ

"'ಧಾರ್ಮಿಕ ಸಂವಾದ' ಎಂಬ ಪದದ ಮೂಲ ಅರ್ಥವನ್ನು ಶೋಧಿಸಿದಾಗ ಸಂವಾದ ಎಂಬ ಪದಕ್ಕೆ ಗ್ರೀಕ್ ಭಾಷೆಯಲ್ಲಿ 'ಸಂಭಾಷಿಸು' ಎಂಬುದೇ ಅರ್ಥ. ಪಾಶ್ಚಾತ್ಯ ಬೌದ್ಧಿಕ ಇತಿಹಾಸವು ಸಂವಾದ ಎಂಬುದನ್ನು ಪ್ರಧಾನವಾಗಿ 'ಸಂಭಾಷಣೆ ರೂಪದಲ್ಲಿರುವ ಒಂದು ಆಂಶಿಕ ಲಿಖಿತ ಕಾರ್ಯ' ಎಂದೇ ಬಿಂಬಿಸುತ್ತದೆ."[೧]

ಮನುಕುಲದ ಇತಿಹಾಸದಲ್ಲಿ ಅನೇಕ ಧರ್ಮಗಳು ಮೂಡಿಬಂದಿವೆ ಹಾಗೂ ಬರುತ್ತಲೇ ಇವೆ. ಇಲ್ಲಿ ಪ್ರತಿಯೊಂದು ಧರ್ಮದ ನಂಬಿಕೆಗಳನ್ನು ಪೂಜಾ ವಿದಿ ವಿಧಾನಗಳನ್ನು, ನೈತಿಕತೆಯನ್ನು ಮೊದಲಿನಿಂದಲೂ ಅಂದರೆ ವೈವಿಧ್ಯಮಯ ಧರ್ಮಗಳು ಪರಸ್ಪರ ಮುಖಾಮುಖಿಯಾದಾಗಿನಿಂದಲೂ ಕ್ರಮಬದ್ಧವಾಗಿ, ತುಲನಾತ್ಮಕವಾಗಿ, ದಾಖಲಿಸಿರಲಿಲ್ಲ. 'ಧಾರ್ಮಿಕ ಸಂವಾದ' ಎಂಬ ಪದ ಇಪ್ಪತ್ತನೆ ಶತಮಾನದ ಉತ್ತರಾರ್ಧದಲ್ಲಿ ಪ್ರಧಾನವಾಗಿ ಕಾಣಿಸಿಕೊಂಡರೂ, ಅನೇಕ ಧರ್ಮಗಳ ಸಂಪ್ರದಾಯದಲ್ಲಿ ಧಾರ್ಮಿಕ ಸಂವಾದ ಹಿಂದಿನಿಂದಲೂ ನಡೆದಿತ್ತು.

ಧರ್ಮ ಮತ್ತು ತತ್ವಶಾಸ್ತ್ರಗಳ ಮೇಲೆ ಲಿಖಿತ ಸಂಭಾಷಣೆ ಅಥವಾ ಸಂವಾದದ ಚರಿತ್ರೆ ತುಸು ದೀರ್ಘವಾದುದು. ಇವುಗಳಲ್ಲಿ ತುಂಬಾ ಹಿಂದಿನದೆಂದರೆ ಪ್ಲೇಟೋನ ಸಂವಾದಗಳು. ಇವು ಸಾಕ್ರೆಟಿಸ್‌ನ ಬೋಧನಾ ಮಾರ್ಗದ ಪ್ಲೇಟೋನ ಸಂವಾದಗಳು. ಇವು ಸಾಕ್ರೆಟಿಸ್‌ನ ಬೋಧನಾ ಮಾರ್ಗದ ಪ್ರಶ್ನೋತ್ತರ ರೂಪದಲ್ಲಿ ಪ್ಲೇಟೋನ ಸಂಭಾಷಣೆಗಳು ಮೂಡಿಬಂದಿವೆ. ಬಹುತೇಕ ಧಾರ್ಮಿಕ ಪರಂಪರೆಗಳಲ್ಲಿ ಗುರು-ಶಿಷ್ಯರ ಸಂವಾದಗಳನ್ನು ಲಿಖಿತವಾಗಿ ದಾಖಲಿಸಿದ್ದಾರೆ. ಇವುಗಳ ಉದ್ದೇಶ ಆಳವಾದ ಸತ್ಯವನ್ನು ಮತ್ತೊಬ್ಬರಿಗೆ ತಿಳಿಯಪಡಿಸುವುದೇ ಆಗಿದೆ.

ಇಲ್ಲಿ ಶಿಷ್ಯ ಸಾಧಕನಾಗಿದ್ದು ಗುರುವಿನಲ್ಲಿ ಶ್ರದ್ಧೆ ಹಾಗೂ ಭಕ್ತಿಯನ್ನು ತೋರಿಸುತ್ತಾ ಪ್ರಶ್ನೆಯನ್ನು ಕೇಳುತ್ತಾನೆ. ಗುರು ತನ್ನ ಅರಿವಿನಿಂದ ಅಥವಾ ತನಗೆ ತನ್ನ ಗುರುವಿನಿಂದ ದೊರೆತ ಜ್ಞಾನದಿಂದ, ಅಥವಾ ರೂಡಿಯಲ್ಲಿರುವ ಆಳವಾದ ಸತ್ಯಗಳನ್ನು ಮೌಖಿಕವಾಗಿ ತನ್ನ ಶಿಷ್ಯನಿಗೆ ತಿಳಿಯಪಡಿಸುತ್ತಾನೆ. ಈ ರೀತಿಯ ಸಂವಾದಗಳನ್ನು ಭಾರತೀಯ ಪರಂಪರೆಯಲ್ಲಿ ಅದರಲ್ಲೂ ಮುಖ್ಯವಾಗಿ ಹಿಂದೂ ಮತ್ತು ಬೌದ್ಧ ಪರಂಪರೆಯಲ್ಲಿ ಕಾಣಬಹುದಾಗಿದೆ.

ಇಲ್ಲಿ ಗುರು ಮತ್ತು ಶಿಷ್ಯರಲ್ಲಿ ನಂಬಿಕೆ ಮತ್ತು ವಿಶ್ವಾಸದ ಒಂದು ಸಂಬಂಧ ಇವರಿಬ್ಬರ ನಡುವೆ ಸ್ಥಾಪಿಸಲ್ಪಟ್ಟಿದೆ. ಶಿಷ್ಯ ಗುರುವಿನಿಂದ ಸೂಚನೆ, ಸಲಹೆ, ಉತ್ತರ ಹಾಗೂ ಜ್ಞಾನವನ್ನು ತನ್ನ ಪ್ರಶ್ನೆಗಳ

ಮೂಲಕ ತಿಳಿದುಕೊಳ್ಳುತ್ತಾನೆ. ಬಹುತೇಕ ಉಪನಿಷತ್‌ಗಳು ಹಾಗೂ ಭಗವದ್ಗೀತೆ ಮತ್ತು ಬೌದ್ಧರ ಪಾಲಿ ಗ್ರಂಥಗಳು ಪ್ರಶ್ನೋತ್ತರಗಳಿಂದಲೇ ತುಂಬಿರುವುದನ್ನು ನಾವು ಕಾಣಬಹುದು.

ಇನ್ನು ಯೆಹೂದಿ-ಕ್ರೈಸ್ತ ಪರಂಪರೆಯನ್ನು ಅವಲೋಕಿಸಿದಾಗ ಇಲ್ಲೂ ಸಹ ಬೋಧನೆಗಳು ಸಂವಾದದ ರೂಪ ಹಿಡಿದಿರುವುದನ್ನು ಕಾಣುತ್ತೇವೆ. ಯೆಹೂದಿಗಳ ಧಾರ್ಮಿಕ ಗ್ರಂಥ 'ತೋರಾ' ರಬ್ಬಿಗಳಿಂದ ಅವರ ಶಿಷ್ಯರುಗಳಿಗೆ ಮೌಖಿಕವಾಗಿ ಹರಿದು ಬರುವುದನ್ನು ಕಾಣುತ್ತೇವೆ. ಇಲ್ಲೂ ಸಹ ಗುರು-ಶಿಷ್ಯರುಗಳ ನಡುವಿನ ಪ್ರಶ್ನೋತ್ತರ ಪರಂಪರೆ ಉಂಟು!

ಇನ್ನು ಯೇಸುಕ್ರಿಸ್ತನ ಬೋಧನೆಗಳನ್ನು ನೋಡುವಾಗ ಅವೆಲ್ಲವೂ ಹೆಚ್ಚಿನಾಂಶ ಸಂಭಾಷಣೆಯ ರೂಪದಲ್ಲೇ ಇವೆ. ಯೇಸುಕ್ರಿಸ್ತ ತನ್ನ ಜೊತೆಗಾರರೊಂದಿಗೆ, ಶಿಷ್ಯರೊಂದಿಗೆ ನಡೆಸಿದ ಸಂಭಾಷಣೆಗಳ ಚೌಕಟ್ಟೇ ಆತನ ಬೋಧನೆಯಾಗಿದೆ.

ಈ ಹಿನ್ನೆಲೆಯಲ್ಲಿ ನಾವು ಸಂವಾದವನ್ನು ಗಮನಿಸುವಾಗ ಇಲ್ಲಿ ಸಂವಾದಕ್ಕಿಂತ 'ಅರಿತವನ ಅರಿಯದವನಿಗೆ ಅರಿವನ್ನು ಮೂಡಿಸುವುದೇ ಎದ್ದು ಕಾಣುತ್ತದೆ.'[೨]

"ಏಳು ಜಾಗ್ರತನಾಗು! ಶ್ರೇಷ್ಠರನ್ನು ಅನುಸರಿಸಿ ಸತ್ಯ ಸಾಕ್ಷಾತ್ಕಾರವನ್ನು ಪಡೆ." (ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಬೋಧತ)" ಎಂದು ಕಠೋಪನಿಷತ್ತಿನಲ್ಲಿ ಗುರು ಶಿಷ್ಯನಿಗೆ ಕರೆ ಕೊಡುತ್ತಾನೆ. ಎಲ್ಲವನ್ನು ತ್ಯಜಿಸಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಅನಾದಿ ಕಾಲದಿಂದಲೂ ಶಾಸ್ತ್ರಗಳು ಹೇಳುತ್ತಲೇ ಬಂದಿವೆ. ಈ ಕರೆಗೆ ಓಗೊಟ್ಟು ಪೂರ್ವ. ಪಶ್ಚಿಮ ದೇಶದಲ್ಲಿ ಸಾವಿರಾರು ಜನರು ತಮ್ಮದೆಲ್ಲವನ್ನೂ ತ್ಯಜಿಸಿ ಭಗವಂತನ ಕಡೆಗೆ ಯಾತ್ರೆ ಹೊರಟಿರುವರು. ಸಾಮಾನ್ಯ ಜನರಿಗೆ ಈ ಪ್ರಪಂಚ ಮತ್ತು ಅದು ನೀಡುವ ಸುಖ ಭೋಗಗಳೇ ಅತಿ ಮುಖ್ಯ. ಆದರೆ, ಅಧ್ಯಾತ್ಮಿಕ ಜೀವಿಗಳು ಈ ಪ್ರಪಂಚದಲ್ಲಿ ಎಷ್ಟೇ ಪ್ರಲೋಭನೆಗಳಿದ್ದರೂ ತ್ಯಾಗ ಮತ್ತು ಸೇವೆಯ ಹಾದಿಯನ್ನೇ ಆರಿಸಿಕೊಳ್ಳುತ್ತಾರೆ.

"ಪ್ರತಿಯೊಬ್ಬನ ಜೀವನದಲ್ಲಿ ಒಂದಲ್ಲ ಒಂದು ದಿನ ಆಧ್ಯಾತ್ಮಿಕ ಆದರ್ಶದ ಕಡೆಗೆ ಕಿವಿಗೊಡುವ ಸಮಯ ಬರುತ್ತದೆ. ಆಗ ಅವನು ಅದನ್ನು ಖಂಡಿತ ಕಡೆಗಣಿಸಲಾರ. ಈ ಪ್ರಪಂಚದಲ್ಲಿ ಯಾವುದು ಅವನಿಗೆ ತೃಪ್ತಿ ನೀಡಲಾರದು. ಆ ದಿವ್ಯ ಕರೆಗೆ ಓಗೊಟ್ಟಲ್ಲದೆ ಅವನಿಗೆ ಮನಃಶಾಂತಿ ದೊರಕುವುದಿಲ್ಲ. ಈ ಅಂತರಿಕ ಪ್ರಜ್ಞೆ ಮತ್ತು ಉನ್ನತ ಆದರ್ಶವನ್ನು ಅನುಸರಿಸಬೇಕೆಂಬ ತೀವ್ರ ಹಂಬಲ - ಇವು ಅಧ್ಯಾತ್ಮಿಕ ದಜೀವನದ ಪ್ರಾರಂಭಾವಸ್ಥೆ, ಆಧ್ಯಾತ್ಮಿಕ ಆದರ್ಶ ಅವನ ಮನಸ್ಸನ್ನು ಪ್ರಬಲವಾಗಿ ಆಕರ್ಷಿಸಿ ಅವನ ಜೀವನದುದ್ದಕ್ಕೂ ಅವನನ್ನು ಆಶ್ರಯಿಸಿಕೊಂಡೇ ಇರುತ್ತದೆ. ಪ್ರಾಪಂಚಿಕ ಆದರ್ಶವನ್ನು ಬಿಟ್ಟು ಅಧ್ಯಾತ್ಮಿಕ ಆದರ್ಶವನ್ನು ಹಿಡಿಯುವುದೇ ಆಧ್ಯಾತ್ಮಿಕ ಪರಿವರ್ತನೆ.' ಇದರೊಂದಿಗೆ ಆಧ್ಯಾತ್ಮಿಕ ಜೀವನ ಆರಂಭವಾಗುತ್ತದೆ. ಕೆಲವರಲ್ಲಿ ಈ ಪರಿವರ್ತನೆ ದಿಢೀರನೇ ನಡೆಯುತ್ತದೆ. ಮತ್ತೆ ಕೆಲವರಲ್ಲಿ ಕ್ರಮೇಣ

ಆಗುವುದು. ಈ ರೀತಿಯ ನೈಜ ಪರಿವರ್ತನೆ ಆಗುವುದು, ಯಾವುದೇ ದೇಶದಲ್ಲಾಗಲಿ ಕಾಲದಲ್ಲಾಗಲಿ ಎಲ್ಲೋ ಕೆಲವರಲ್ಲಿ ಮಾತ್ರ. ಎಲ್ಲರೂ ಆಧ್ಯಾತ್ಮಿಕ ವ್ಯಕ್ತಿಗಳಾಗಬೇಕೆಂಬ ಆದರ್ಶವು ಎಷ್ಟೇ ಸುಂದರವಾಗಿ ಕಂಡರೂ ಅದು ಅಸಾಧ್ಯ. ಸಾವಿರದಲ್ಲಿ ಕೆಲವರು ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಾರೆ, ಮತ್ತೆ ಅಂಥವರಲ್ಲಿ ಕೆಲವರು ಮಾತ್ರ ಅಂತಿಮ ಸಿದ್ಧಿಯನ್ನು ಪಡೆಯುವರು ಎಂದು ಭಗವದ್ಗೀತೆ ಹೇಳುತ್ತದೆ."[೪]

ಧಾರ್ಮಿಕ ಸಂವಾದಕ್ಕೆ ಕಾಲಿಡುವ ಮುಂಚೆ ವ್ಯಕ್ತಿ ಆಧ್ಯಾತ್ಮಿಕ ಜೀವನ ನಡೆಸುತ್ತಿದ್ದರೆ, ಅನುಭಾವಿಯಾಗಿದ್ದರೆ ಆತನು ಅನೇಕ ಸತ್ಯಗಳನ್ನು ನಿಚ್ಚಳವಾಗಿ ಅರ್ಥಮಾಡಿಕೊಳ್ಳಲು ಸಾದ್ಯ.

ಧಾರ್ಮಿಕ ಸಂವಾದವನ್ನು ಆದಿಯಿಂದಲೂ ಕಾಣುತ್ತಲೆ ಇದ್ದೇವೆ. ಈ ನಿಟ್ಟಿನಲ್ಲಿ ಅವುಗಳ ವಿಧ ವಿಧಾನಗಳನ್ನು ಅವಲೋಕಿಸುವ ಆದಿಯಿಂದಲೂ ಮಾನವ ತಾನು ಯಾರು? ಎಲ್ಲಿದ ಬಂದೆ? ಯಾಕೆ ಬಂದೆ ಎಲ್ಲಿಗೆ ಹೋಗುವೆ? ಪಾಪ ಪುಣ್ಯದ ಕಲ್ಪನೆ ಏನು? ಈ ಜೀವನದ ಉದ್ದೇಶ ಏನು? ಆನಂದದಾಯಕವಾದ ಮಾರ್ಗ ಎಲ್ಲಿದೆ? ಮರಣಾನಂತರ ಪ್ರಾಣ/ಜೀವ ಏನಾಗುತ್ತದೆ? ಮರಣ, ನ್ಯಾಯ ನಿರ್ಣಯ, ಪುನರ್ಜನ್ಮ ಇವೆಲ್ಲದರ ಅರ್ಥವೇನು? ನಮ್ಮ ಪಯಣ ಎತ್ತ? ಇತ್ಯಾದಿಗಳ ಬಗ್ಗೆ ಚಿಂತಿಸುತ್ತಲೆ ಇದ್ದಾನೆ. ಇದಕ್ಕೆ ಬೃಹದಾರಣ್ಯಕ ಉಪನಿಷತ್ ಹೀಗೆಂದು ದೈವಕ್ಕೆ ಬೇಡಿಕೊಳ್ಳುತ್ತದೆ.

"ಅಸತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ"[೫]

ಇದು ಕತ್ತಲೆಯಲ್ಲಿ ತೊಳಲಾಡುತ್ತಿರುವ ಮನುಷ್ಯನಿಗೆ ಈ ಮಾತಿನ ಮಂತ್ರ ತುಂಬಾ ಆಸರೆಯಾಗುತ್ತದೆ.

೨.೨ ಧಾರ್ಮಿಕ ಸಂವಾದದ ವಿಧಾನಗಳು

ಇಂದಿನ ಬಹು ಧರ್ಮಿಯರು ಬಾಳುತ್ತಿರುವ ಸಮಾಜದಲ್ಲಿ ಧಾರ್ಮಿಕ ಸಂವಾದದ ಅನೇಕ ವಿಧಾನಗಳನ್ನು ಕಾಣಬಹುದಾಗಿದೆ.[೬]

೧. ಚರ್ಚಾ ವಿಧಾನ: ಈ ವಿಧಾನವು ಪರಸ್ಪರ ಬೇಟಿಯಾಗುವುದು ಉನ್ನತ ಮಟ್ಟದ ಸಮರ್ಥ ಬೌದ್ಧಿಕ ವಿಚಾರಣೆಗಳು, ಪರಸ್ಪರ ಧಾರ್ಮಿಕ ತತ್ವಗಳ ಶ್ರವಣ, ಚರ್ಚೆ ಇದನ್ನು ಒಳಗೊಂಡಿದೆ. ಈ ರೀತಿಯ ಧಾರ್ಮಿಕ ಸಂವಾದವು ಹೊಸದೇನಲ್ಲ. ಉನ್ನತ ಬೌದ್ಧಿಕ ನೆಲೆಯಲ್ಲಿ ಪರಸ್ಪರ ಸಮಾನ ಬುದ್ಧಿಮಟ್ಟದಲ್ಲಿ ಇದು ಲಾಭದಾಯಕವಾಗಿರುತ್ತದೆ. ಏಕೆಂದರೆ, ಸಂವಾದ ಮಾಡುವ ಇಬ್ಬರು ಸಮಾನರಾಗಿದ್ದು- ಇಬ್ಬರಲ್ಲೂ ಆಲಿಸುವತ್ತ ಸಂವಾದಿಸುವ ಮನಸ್ಸಿರುತ್ತದೆ. ಇದು ಚರ್ಚಾ ಸಂವಾದದ ಒಂದು ಬಗೆಯಾಗಿರುತ್ತದೆ.

೨. ಮಾನವೀಯ ಸಂವಾದ: ಈ ವಿಧಾನವನ್ನು ಬೂಬೆರಿಯನ್ ಸಂವಾದದ ವಿಧಾನವೆಂದು ಕರೆಯುತ್ತಾರೆ. ಸಂವಾದದಲ್ಲಿ ಇಬ್ಬರು ಸಾಮಾನ್ಯರು ಮಾನವೀಯ ನೆಲೆಯಲ್ಲಿ ಬೇಟಿಯಾಗಿ ತಮ್ಮ ಧಾರ್ಮಿಕ ನಂಬಿಕೆಗಳು ಏನೇ ಇರಲಿ ಅವನ್ನೆಲ್ಲಾ ಪಕ್ಕಕ್ಕಿಟ್ಟು ಮಾನವೀಯ ನೆಲೆಯಲ್ಲಿ ಮೌಕ್ತಿಗತವಾಗಿ ಸಂವಾದಿಸುತ್ತಾರೆ. ಈ ವಿಧಾನದಲ್ಲಿನ ಒಂದು ದೊಡ್ಡ ಕೊರತೆಯೆಂದರೆ ಕೇವಲ ವೈಯಕ್ತಿಕ ನೆಲೆಯಲ್ಲಿ ಇದು ಅಂತ್ಯ ಕಾಣುತ್ತದೆ. ನಾವು ಇಲ್ಲಿ ಒಂದು ಅಂಶವನ್ನು ಸ್ಪಷ್ಟವಾಗಿ ಗಮನಿಸಬೇಕು. ಮಾನವ ಮೂಲಭೂತವಾಗಿ ಸಮಾಜಜೀವಿ ತಮ್ಮ ಸಮಾಜದ ಸಹಕಾರ ಅದರ ರೀತಿ-ರಿವಾಜುಗಳು, ನಂಬಿಕೆಗಳನ್ನು ಬಿಟ್ಟು ಒಂಟಿಯಾಗಿ ಬದುಕುವುದು ತ್ರಾಸದಾಯಕ ವೈಯಕ್ತಿಕ ಮಟ್ಟದಲ್ಲಿ ಈ ವಿಧಾನ ಒಪ್ಪಬಹುದಾದರೂ, ಸಮುದಾಯದ ಮಟ್ಟದಲ್ಲಿ ಅಷ್ಟೊಂದು ಸರಾಗವಾಗಿರುವುದಿಲ್ಲ ಸಮಾಜವನ್ನು ಹೊರತುಪಡಿಸುವುದು ಬಹಳ ಸಲ ಅಸಾಧ್ಯ. ಈ ವಿಧಾನವು ಉನ್ನತ ವ್ಯಕ್ತಿಗಳಲ್ಲಿ ವ್ಯಕ್ತವಾಗಿದ್ದರೂ ವಾಸ್ತವಿಕತೆಯಿಂದ ತುಸು ದೂರವಾಗಿದೆ.

೩. ಜಾತ್ಯತೀತ ಸಂವಾದ: ಈ ಪ್ರಪಂಚದಲ್ಲಿ ಅನೇಕ ಕ್ರಿಯೆಗಳು ವಿವಿಧ ಧಾರ್ಮಿಕ ವರ್ಗದವರನ್ನು ಒಳಗೊಂಡು ನಡೆಸಬೇಕಾಗುತ್ತದೆ. ಇಲ್ಲಿ ಯಾವುದೇ ಧರ್ಮ (ಪ್ರಮುಖ) ಮತ ನಂಬಿಕೆ ಪ್ರಮುಖವಾಗಿರುವುದಿಲ್ಲ ಬದಲಾಗಿ ಸರ್ವರಿಗೆ ಒಳಿತನ್ನು ಉಂಟುಮಾಡುವ ಕಾರ್ಯಕ್ರಮವೇ ಮುಖ್ಯವಾಗಿರುತ್ತದೆ. 'ಸರ್ವೋ ಜನೋ ಸುಖಿನೋ ಭವಂತು' ಎಂಬ ನೀತಿಗೆ ಅನುಗಣವಾಗಿ ಕಾರ್ಯವನ್ನು ನಿರ್ವಹಿಸುತ್ತದೆ. ಅರವತ್ತು-ಎಪ್ಪತ್ತರ (೬೦-೭೦) ದಶಕದಲ್ಲಿ ಜಾತ್ಯತೀತ ಸಂವಾದವು ಮುಂಚೂಮಿಯಲ್ಲಿತ್ತು. ಈ ಸಂವಾದದ ವಿಧಾನವು ನಂಬಿಕೆಯ ಪ್ರಶ್ನೆಯನ್ನು ಬದಿಗೊತ್ತಿ ಜಾತ್ಯತೀತವಾಗಿ ವರ್ತಿಸುವುದನ್ನು ಕಾಣುತ್ತೇವೆ. ಇಲ್ಲಿ ಪಾರಮಾರ್ಥಿಕ ವಿಷಯಗಳಿಗಿಂತ, ಆದಿ

ಭೌತಿಕ ಪ್ರಪಂಚಕ್ಕಿಂತ, ವಾಸ್ತವಿಕ ಪ್ರಪಂಚ ಆಧುನಿಕ ಮಾನವ ಆತನ ಚರಿತೆಗೆ ಒತ್ತು ಕೊಡುವುದರ ಮೂಲಕ ಎಲ್ಲಾ ಮತ, ಧರ್ಮಗಳನ್ನು ಮೀರಿ ಸಂವಾದದಲ್ಲಿ ತೊಡಗುತ್ತಾರೆ. ಈ ಸಂವಾದದಲ್ಲಿ ತೊಡಗುವವರು ಯಾವುದೇ ಮತ, ಪಂಥ, ಧರ್ಮದ ನಿಲುವಿಗೆ ಅಂಟಿಕೊಳ್ಳದೇ ಮಾನವನ ಏಳಿಗೆಯ ಬಗ್ಗೆ ಆತನ ಉದ್ಧಾರದ ಬಗ್ಗೆ ಚಿಂತಿಸಿ ಸಂವಾದಿಸುತ್ತಾರೆ.

೪. ಆಧ್ಯಾತ್ಮಿಕ ಸಂವಾದ: ಆಧ್ಯಾತ್ಮಕ ಸಂವಾದವು ಪ್ರಧಾನವಾಗಿ ಆಶ್ರಮ ವಾಸಿಗಳಿಗೆ. ಧ್ಯಾನ ಜೀವಿಗಳಿಗೆ ಹಾಗೂ ಪೌರಾತ್ಯ ಆಧ್ಯಾತ್ಮಿಕತೆಯಲ್ಲಿ ಮುಂಚೂಣಿಯಲ್ಲಿರುವವರಿಗೆ ಹೇಳಿ ಮಾಡಿಸಿದ ವಿಧಾನವಾಗಿದೆ. ಈ ವಿಧಾನದಲ್ಲಿ ಚರ್ಚೆ ಅಥವಾ ವಿಶ್ಲೇಷಣೆಗೆ, ಹೆಚ್ಚಿನ ಒತ್ತು ಇಲ್ಲಿ ಬದಲಾಗಿ ಪ್ರಾರ್ಥನೆ ಮತ್ತು ಧ್ಯಾನಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪೌರಾತ್ಯ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅನೇಕ ಆಶ್ರಮಗಳು ಮತ್ತು ಧ್ಯಾನ ಕೇಂದ್ರಗಳು ತಲೆ ಎತ್ತಿರುವುದನ್ನು ಕಾಣುತ್ತೇವೆ. ಇಲ್ಲಿ (ಏಕೇಶ್ವರ) ಏಕದೇವೋಪಾಸನೆಗೆ, ಹೆಚ್ಚಿನ ಆದ್ಯತೆ ಈ ತತ್ವವು ಭಾರತೀಯ ವೇದಾಂತಕ್ಕೆ ಹತ್ತಿರವಾಗಿದೆ. ತಮ್ಮ ಆರಾಧನ ವಿಧಿಯಲ್ಲಿ ಪೌರಾತ್ಯ ಮತ್ತು ಪಾಶ್ಚಿಮಾತ್ಯ ಧರ್ಮಗಳ ಗ್ರಂಥಗಳನ್ನು ಉಪಯೋಗಿಸುತ್ತಾರೆ. ಇಲ್ಲಿ ಅಧ್ಯಾತ್ಮಿಕ ಅನುಭವಕ್ಕೆ ಹೆಚ್ಚಿನ ಮಹತ್ವ ಗ್ರಂಥ ಜ್ಞಾನಕ್ಕಿಂತಲೂ ಅನುಭಾವಕ್ಕೆ, ಸಾಕ್ಷಾತ್ಕಾರಕ್ಕೆ ಒಲವು ಸಮಾಧಿ ಸ್ಥಿತಿಗೆ ಹೆಚ್ಚಿನ ಆದ್ಯತೆ.

ಇತ್ತೀಚೀನ ವರ್ಷಗಳಲ್ಲಿ ಸಾಮಾಜಿಕ ಆರ್ಥಿಕ ರಂಗಗಳಲ್ಲಿ ಬದಲಾವಣೆಯನ್ನು ಕಾಣುತ್ತಿರುವಾಗ ಧಾರ್ಮಿಕ ರಂಗದಲ್ಲೂ ಸಹ ಬದಲಾವಣೆಯ ಗಾಳಿ ಬೀಸುತ್ತಿರುವುದನ್ನು ಕಾಣುತ್ತೇವೆ. ಬಹು ಧರ್ಮೀಯ ವಾತಾವರಣದಲ್ಲಿ ಧರ್ಮದ ಸಂವಾದಗಳು ಕೋಮು ಸಾಮರಸ್ಯವನ್ನು ಕಾಪಾಡಲು ಸಹಾಯ ಮಾಡುತ್ತಿವೆ.

೨.೩ ಧಾರ್ಮಿಕ ಸಂವಾದದ ಅಗತ್ಯತೆ

ವಿಶ್ವದ ಬಹುತೇಕ ಎಲ್ಲಾ ತತ್ವಶಾಸ್ತ್ರಜ್ಞರು, ದಾರ್ಶನಿಕರು ಮನುಷ್ಯ ಮತ್ತು ಆತನ ಸ್ವಯಂ ಅನ್ನು ಅರ್ಥ ಮಾಡಿಕೊಳ್ಳುವತ್ತ ತಮ್ಮ ಕಾಳಜಿಯನ್ನು ತೋರಿಸಿದ್ದಾರೆ. ಮಾನವನು ಸಹ ತನ್ನ ಇರುವಿಕೆ ಮತ್ತು ತನ್ನ ಇತಿಹಾಸವನ್ನು ತಿಳಿದುಕೊಳ್ಳಲು ಇಚ್ಛಿಸುತ್ತಾನೆ. ತನ್ನ ಚರಿತೆಯ ಬೆಳಕಿ. ನಡಿಯಲ್ಲಿ ಮಾನವ ತನ್ನ ಗಮ್ಯಸ್ಥಾನವನ್ನು ಅರಿಯಲೆತ್ನಿಸುತ್ತಾನೆ. "ಈ ನಿಟ್ಟಿನಲ್ಲಿ ಸುಪ್ರಸಿದ್ಧ ಚರಿತ್ರಾಕಾರನಾದ ಆರ್‌ನಾಲ್ಡ್ ಟೋನಿ ಬಿ. ರವರು ಮನುಕುಲದ ಆದಿಯಿಂದ ಇಲ್ಲಿಯವರೆಗೆ ಪ್ರಪಂಚದ ಮಾವವನ ಇತಿಹಾಸವನ್ನು ಕುರಿತು ಹತ್ತು ಸಂಪುಟಗಳ ಬೃಹತ್ ಚರಿತೆಯನ್ನು ಬರೆದಿದ್ದಾರೆ. ಅಂತಿಮವಾಗಿ ಅವರು ಹೇಳುವುದೆಂದರೆ ಮಾನವನ ಇತಿಹಾಸದಲ್ಲಿ ಧರ್ಮವು ಕೇಂದ್ರ ಬಿಂದುವಾಗಿ ನಿಲ್ಲುತ್ತದೆ, ನನ್ನ ಈ ಅಧ್ಯಾಯನದಲ್ಲಿ ಕಂಡುಕೊಂಡ ಸತ್ಯವೆಂದರೆ ಧರ್ಮವು ಮಾನವನ ಇರುವಿಕೆಯ ಕೀಲಿಕೈ ಆಗಿದೆ. ಇದನ್ನು ನಾನು ನಂಬುತ್ತೇನೆ. ವಿಶಾಲ ಮನೋಭಾವದ ಭಾರತೀಯ ತತ್ವ 'ವಸುಧೈವ ಕುಟುಂಬಕಂ' ಎಂಬ ಭಾರತೀಯ ಸ್ಫೂರ್ತಿಯ ಹಿನ್ನೆಲೆಯಲ್ಲಿ ಎಲ್ಲಾ ಧರ್ಮಗಳು (ಮುಕ್ತಿಗಾಗಿ) ಮಾನವನ ಮುಕ್ತಿಗಾಗಿ ದಾರಿ ತೋರಿಸುವ ಪಥಗಳಾಗಿದೆ. ಆದ್ದರಿಂದ ನಾವು ಪರಸ್ಪರ ಮತ್ತೊಬ್ಬರನ್ನು ನಾಶ ಮಾಡುವುದರ ಬದಲಾಗಿ 'ವಸುಧೈವ ಕುಟುಂಬಕಂ' ಎಂಬಂತೆ ಒಂದಾಗಿ ಬಾಳುವುದೇ ಯುಕ್ತವಾಗಿದೆ."[2]

ಪ್ರಪಂಚದ ಎಲ್ಲಾ ರಂಗದಲ್ಲಿ ನಾವಿಂದು ಸ್ಪರ್ಧೆಯನ್ನು ಕಾಣುತ್ತೇವೆ. ಇದೊಂದು ಸ್ಪರ್ಧಾತ್ಮಕ ಜಗತ್ತಾಗಿದೆ. ಧರ್ಮಯುದ್ಧಗಳು, ಕೋಮು ಗಲಭೆಗಳು ಮನುಕುಲವನ್ನು ವಿನಾಶದತ್ತ ಕೊಂಡೊಯ್ಯುತ್ತಿರುವ ಈ ದಿನಗಳಲ್ಲಿ ಪರಸ್ಪರ ಧರ್ಮಗಳನ್ನು ಅರ್ಥಮಾಡಿಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಧಾರ್ಮಿಕ ಸಾಮರಸ್ಯಯಿಂದ ಬಾಳಲು ಈ ಧಾರ್ಮಿಕ ಸಂವಾದವು ಇಂದಿನ ಪ್ರಪಂಚದ ತುರ್ತು ಅಗತ್ಯಗಳಲ್ಲಿ ಒಂದಾಗಿದೆ. ಧಾರ್ಮಿಕ ಸಂವಾದದ ಅಗತ್ಯತೆಯನ್ನು ಅರ್ಥಮಾಡಿಕೊಳ್ಳಲು ನಾವು ಮನುಕುಲದ ಆದಿಯಿಂದ ಇಲ್ಲಿಯ ತನಕ ಅದರ ಕತೆ, ತತ್ವ, ವಾಸ್ತು, ಶಿಲ್ಪ, ಸಾಹಿತ್ಯ, ಸಂಗೀತ, ಮತ, ಧರ್ಮ ಇದೆಲ್ಲವನ್ನು ನಾವು ಅಭ್ಯಸಿಸಬೇಕಾಗಿದೆ. ಈ ಎಲ್ಲದರ ಹಿಂದೆ ಧರ್ಮ ಇರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಮಾನವನ ಎಲ್ಲಾ ಕೃತಿಗಳಲ್ಲಿ ಕಾರ್ಯಗಳಲ್ಲಿ ಧರ್ಮ ತನ್ನ ಛಾಪನ್ನು ಮೂಡಿಸಿದೆ. ಮನುಕುಲದ ಇತಿಹಾಸದಿಂದ ಇಲ್ಲಿಯ ತನಕ ಆತನ ಎಲ್ಲಾ ಮಾನವೀಯ ಕಾರ್ಯಗಳ ಹಿಂದೆ ಧಾರ್ಮಿಕ ಪ್ರೋತ್ಸಾಹ, ಉತ್ತೇಜನ ಇದೆ. ಪ್ರಪಂಚದ ಅತ್ಯುನ್ನತವಾದ ಉತ್ಕೃಷ್ಟವಾದ ಗ್ರಂಥಗಳಾಗಲಿ, ಕಾರ್ಯಗಳಾಗಲಿ ಧರ್ಮಕ್ಕೆ ಸಮರ್ಪಣೆಯಾಗಿದೆ. ಉದಾ: ಮಹಾಭಾರತ ರಾಮಾಯಣ, ಡಾಂಟೆ ಕವಿಯ ಡಿವೈನ್ ಕಾಮಿಡಿ ಮಿಲ್ಟನ್ ಕವಿಯ ಪ್ಯಾರಡೈರ್ಸ್ ಲಾಸ್ಟ್ ಮತ್ತು ಪ್ಯಾರಡೈಸ್ ರೀ ಗೈಯಿನ್ಸ್, ಬೈಬಲ್, ವಚನಕಾರರ ವಚನಗಳು ಇತ್ಯಾದಿಗಳು ಇವೆಲ್ಲವು ಮನುಷ್ಯನ ಧರ್ಮದೊಂದಿಗೆ ಎಂತಹ ಅವಿನಾಭಾವದ ಸಂಬಂಧ ಹೊಂದಿದೆ ಎಂಬುದನ್ನು ತೋರಿಸುತ್ತದೆ. ಧರ್ಮವಿಲ್ಲದೆ ಮನುಷ್ಯನಿಲ್ಲ, ಮನುಷ್ಯನಿಲ್ಲದೆ ಧರ್ಮವಿಲ್ಲ.

ಧರ್ಮ ಮನುಷ್ಯನ ದೇಹದಲ್ಲಿ ರಕ್ತದಂತೆ ಆತನೊಂದಿಗೆ ಪ್ರವಹಿಸುತ್ತಾ ಇದೆ. ಫ್ಲೋಟೋನ ಮೆರೆಗೆ "ಎಲ್ಲಾ ನೈಜ ಜ್ಞಾನವು ಸಹ ಒಂದು ಪುನರ್ ಮನನವಾಗಿದೆ. ಮಾನವನ ಆತ್ಮ ಸದಾ ಕಾಲವು ಯಾವುದು ಒಳಿತೋ, ಸತ್ಯವೋ ಸುಂದರವೋ ಅದನ್ನೆ ಅನುಸರಿಸುತ್ತದೆ." ಇದನ್ನು ಸಂತ ಆಗಷ್ಟಿನ್‌ರವರು ಈ ರೀತಿ ಹೇಳುತ್ತಾರೆ. "ಓ ದೇವ ನೀನು ನಮ್ಮನ್ನು ನಿನಗಾಗಿ ಸೃಷಿಸಿದೆ ನಮ್ಮ ಹೃದಯಗಳಾದರೊ ನನ್ನನ್ನು ಸೇರುವ ತನಕ ಅದಕ್ಕೆ ವಿಶ್ರಾಂತಿ ಇಲ್ಲ."

ಹಿಂದಿನ ಕಾಲದಲ್ಲಿ ಮಾನವ ಧಾರ್ಮಿಕ ಜೀವಿಯಾಗಿದ್ದ ದೇವರು ಧರ್ಮ ಇತ್ಯಾದಿಗಳನ್ನು ಸುಲಭವಾಗಿ ನಂಬುತ್ತಿದ್ದ. ಆದರೆ ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಮುಂದುವರೆದಂತೆಲ್ಲಾ ಆತನಲ್ಲಿ ದಿನೇ ದಿನೇ ಧರ್ಮದಲ್ಲಿನ ನಂಬಿಕೆ ಕಮ್ಮಿಯಾಗುತ್ತಾ ಬರುತ್ತದೆ. ಇಲ್ಲಿ ನಾವು ಒಂದು ಅಂಶವನ್ನು ಸ್ಪಷ್ಟವಾಗಿ ಗಮನಿಸಬೇಕು. ಆಧುನಿಕ ಮಾನವನಿಗೆ ಧರ್ಮವನ್ನು ಅವನ ಪರಿಭಾಷೆಯಲ್ಲಿಯೇ ಈ ಕಾಲಕ್ಕೆ ಅನುಗುಣವಾಗಿ ಹೇಳುವ ಅಗತ್ಯ ಹೆಚ್ಚಾಗಿದೆ. ಧರ್ಮ, ದೇವರು ಇಲ್ಲವೆಂದು ವಾದಿಸುತ್ತ ತನ್ನ ಕಬ್ಬಿಣದ ದಂಡದಿಂದ ಧರ್ಮ ದೇವರನ್ನು ಉಚ್ಚಾಟಿಸಿದ್ದ ರಾಜ್ಯ ದೇಶದಲ್ಲಿ ಕಮ್ಯೂನಿಸಂ ಜೊತೆಗೆ ಜೊತೆ ಜೊತೆಯಾಗಿ ಧರ್ಮ ಬೆಳೆದಿರುವುದು ಮಾನವ, ಧರ್ಮ ಮತ್ತು ದೇವರಿಗೆ ಎಷ್ಟೊಂದು ಅಂಟಿಕೊಂಡಿದ್ದಾನೆ ಎಂಬುದು ಗೋಚರಿಸುತ್ತದೆ. 'ಅಲ್ಲಾ'ನಿಗೆ ಸಂಪೂರ್ಣ ಶರಣಾಗತಿಯಾಗುವುದನ್ನು ಇಸ್ಲಾಂ ಧರ್ಮ ಬೋಧಿಸಿದರೆ, ದೇವರ ಚಿತ್ತಕ್ಕೆ ಪ್ರತಿಯೊಬ್ಬರು ಮಣಿಯಬೇಕೆಂಬುದನ್ನು ಕ್ರೈಸ್ತಧರ್ಮ ಹೇಳಿದರೆ, ಹಿಂದೂ ಧರ್ಮದಲ್ಲಿ ನಮ್ಮೆಲ್ಲರ ಇಂದಿನ ಸ್ಥಿತಿಗೆ ಹಿಂದಿನ ಕರ್ಮಗಳೇ ಕಾರಣವೆಂದು ಹೇಳುತ್ತದೆ.

ಜಾನ್ ಡಿಬೇರವರ ಪ್ರಕಾರ ಪ್ರಕೃತಿದತ್ತವಾಗಿ ಬದುಕುವುದು ಮನುಕುಲದ ಆಂತರಿಕ ನಂಬಿಕೆಯಾಗಿದೆ. ಪ್ರಕೃತಿ ಧರ್ಮ ಮಾನವ, ಜೀವ, ಜಗತ್ತು. (ಈಶ್ವರ) ಜಗದೀಶ್ವರ ಇವೆಲ್ಲವು ಒಂದಕ್ಕೊಂದು ಮಿಳಿತಗೊಂಡಿದೆ. ಮಾನವ ವೈಜ್ಞಾನಿಕವಾಗಲಿ, ತಾಂತ್ರಿಕವಾಗಲಿ ತಾನು ಎಷ್ಟು ಮುಂದುವರಿದಿದ್ದರೂ, ಸಕಲ ಸುಖ ಸುಪ್ಪತ್ತಿನಲ್ಲಿ ತೇಲಾಡುತ್ತಿದ್ದರು, ದಟ್ಟ ದಾರಿದ್ರ್ಯತೆಯಲ್ಲಿ ತೊಳಲಾಡುತ್ತಿದ್ದರು ತನಗಿಂತಲು ವೈಶಿಷ್ಟವಾದ ನೈಸರ್ಗಿಕ, ಇಂದ್ರಿಯಾತೀತವಾದ ಶಕ್ತಿಯೊಂದು ಈ ಜಗತ್ತಿನಲ್ಲಿದೆ ಎಂಬ ಮೂಲಭೂತ ನಂಬಿಕೆಯನ್ನು ಅವನಿಂದ ತೆಗೆದುಹಾಕಲು ಸಾಧ್ಯವಿಲ್ಲ.

ಇದಕ್ಕೆ ಉದಾಹರಣೆಯಾಗಿ ಗ್ರೀಕ್ ದಾರ್ಶನಿಕ ಅರಿಸ್ಟಾಟಲ್ ಅವರು ಮೊಟ್ಟೆಗೆ ತಾನು ಮರಿಯಾಗುವ ಸಹಜವಾದ ಬಯಕೆ ಇದೆ. ಇದು ಅದರ ನೈಸರ್ಗಿಕ ಧರ್ಮ. ಹಾನ್ಸ್ ದ್ರೆಶ್ ೧೮೬೭-೧೯೪೦ ಇತ್ತೀಚಿನ ವರ್ಷಗಳಲ್ಲಿ ಎಂಬುವವರು ಎಲ್ಲಾ ಪ್ರಾಣಿಗಳ ಭ್ರೂಣಗಳನ್ನು ಅಭ್ಯಸಿಸಿ ಕಂಡುಕೊಂಡಿದ್ದೆಂದರೆ ಭ್ರೂಣಕ್ಕೆ ಅದರ ಯಾವುದಾದರೂ ಒಂದು ಭಾಗಕ್ಕೆ ಅಪಘಾತವಾದಾಗ ಭಾಗಗಳು ಅದರ ಸಹಾಯಕ್ಕೆ ಧಾವಿಸಿ ಭ್ರೂಣವು ಪರಿಪೂರ್ಣವಾಗಿರುವಂತೆ ನೋಡಿಕೊಳ್ಳುತ್ತವೆ. ಇದನ್ನು ನಾವು ನಮ್ಮ ದೈನಂದಿನ ಜೀವನದಲ್ಲಿ ನಮ್ಮ ದೇಹದ ಒಂದು ಭಾಗಕ್ಕಾದರೆ ಆಘಾತ ನಮ್ಮ ದೇಹದ ಇತರೆ ಭಾಗಗಳು ಸ್ಪಂದಿಸುತ್ತದೆ ಎಂಬುದನ್ನು ನೋಡಿ ತಿಳಿಯಬಹುದು.

ಅದೇ ರೀತಿ ಪ್ರತಿಯೊಬ್ಬ ಮನುಷ್ಯನಲ್ಲೂ ತಾನು ಪರಿಪೂರ್ಣವಾಗಬೇಕೆಂಬ ಬಯಕೆ ಇದ್ದೆ ಇರುತ್ತದೆ.

ತನ್ನ ಉನ್ನತ ಧ್ಯೇಯವನ್ನು ದೇವ ದೇವತೆಗಳಲ್ಲಿ ಹುಡುಕಿ ಅದನ್ನು ತನ್ನಲ್ಲಿ ಅಳವಡಿಸಿಕೊಂಡು ಪರಿಪೂರ್ಣನಾಗುವುದರತ್ತ ಸಾಗುವುದು ಆತನ ಸಹಜ ಸ್ವಭಾವವಾಗಿದೆ. ತನ್ನನ್ನು ತಾನು ಪರಿಪೂರ್ಣಗೊಳಿಸುವುದರತ್ತ ಮುನ್ನುಗ್ಗುವ ಮನುಷ್ಯನಿಗೆ 'ಧರ್ಮ' ಟಾನಿಕ್‌ನಂತೆ ಕೆಲಸ ಮಾಡುತ್ತದೆ. ಎಲ್ಲಿಯ ತನಕ ಮನುಷ್ಯ ತನ್ನನ್ನು ತಾನು ಪರಿಪೂರ್ಣದತ್ತ ರೂಪಿಸಿಕೊಳ್ಳಲು ಯತ್ನಿಸುವನೋ ಅಲ್ಲಿಯ ತನಕ ಅವನಲ್ಲಿ ಆತ್ಮದ ಉನ್ನತ ಆದರ್ಶ ಮನದಲ್ಲಿರುತ್ತದೆ.

ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಪರಿಪೂರ್ಣತೆಯತ್ತ ಧಾವಿಸುವ ಮನುಷ್ಯನಿಗೆ ಧರ್ಮವೆನ್ನುವುದು ಅಗತ್ಯವಾಗಿ ಅವನ ಗುರಿಯಾಗಿರುತ್ತದೆ. ಆದಕಾರಣ ಧರ್ಮವೆನ್ನುವುದು ಸ್ವಾಭಾವಿಕವಾಗಿ ಆತನ ಉಸಿರಾಗಿರುತ್ತದೆ, ಯೋಚನೆಯಾಗಿರುತ್ತದೆ. ಧರ್ಮವೇ ತಾನಾಗಬೇಕೆಂಬ ಅದಮ್ಯ ಬಯಕೆ ಇರುತ್ತದೆ.

"ಅಂತಿಮವಾಗಿ ಯಾವುದೇ ಧರ್ಮಕ್ಕೆ ಸಂಸ್ಕೃತಿಯ ಲೇಪವಿರುತ್ತದೆ. ಆದರೆ ಅದು ಸ್ವಾಭಾವಿಕವಾಗಿ ಮನುಷ್ಯನ ಅಂತಸತ್ವವಾಗಿದ್ದು ಆತನಿಂದ ಎಂದಿಗೂ ಆಗಲಿ ಹೋಗುವುದಿಲ್ಲ."[೮]

ಪ್ರಕೃತಿಯಲ್ಲಿ ಮಾನವ ಸೃಷ್ಟಿಯೇ ಮುಕುಟಮಣಿ. ಹೀಗಾಗಿ ಪ್ರಾಣಿ ಪ್ರಪಂಚದಲ್ಲಿ ಇಡೀ ವಿಶ್ವದಲ್ಲಿ ಆತನ ಬುದ್ಧಿಮತ್ತೆಗೆ ಸಮನಾದ ಬೇರೊಂದು ಪ್ರಾಣಿಯಿಲ್ಲ. ಹೀಗಿರುವಲ್ಲಿ ಇಡೀ ವಿಶ್ವದ ಇತಿಹಾಸ ಆತನ ಸುತ್ತಲೇ ಸುತ್ತುತ್ತಿರುತ್ತದೆ. ವೈಜ್ಞಾನಿಕ ಅಧ್ಯಯನವು ಧರ್ಮದೊಂದಿಗೆ ಕೈಜೋಡಿಸುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ಧರ್ಮ ಮಾನವನನ್ನು ಪರಿಪೂರ್ಣವಾಗಿ ಪರಿಶೀಲಿಸಿದರೆ, ವಿಜ್ಞಾನ ಆತನನ್ನು ಆಂಶಿಕವಾಗಿ ಪರಿಶೀಲಿಸುತ್ತದೆ. ವಿಜ್ಞಾನದ ಭಾಷೆ ಘಟನೆಗಳಿಂದಲೆ ಧರ್ಮದ ಭಾಷೆ ಪರಿಪೂರ್ಣತೆ ಹೀಗಾಗಿ ವಿಜ್ಞಾನ ಮತ್ತು ಧರ್ಮಕ್ಕೆ ತಾಳ ಮೇಳವಿಲ್ಲದಂತಾಗಿದೆ. ಇದನ್ನು ಸರಿಪಡಿಸುವ ಕರ್ತವ್ಯ ವಿಜ್ಞಾನಿಗಳ ಮತ್ತು ಧಾರ್ಮಿಕ ನಾಯಕರ ಕರ್ತವ್ಯವಾಗಿದೆ. ಧಾರ್ಮಿಕ ಸಂವಾದವು ನಮಗೆ ವಿವಿಧ ಧರ್ಮಗಳಲ್ಲಿ ಸಮಾನವಾದ ಒಪ್ಪಿಗೆಯಾಗುವಂತಹ ಅಂಶಗಳನ್ನು ತೋರಿಸುತ್ತದೆ. ಎಲ್ಲಾ ಧರ್ಮಗಳ ನೈತಿಕ ಸಂಹಿತೆ ಹೆಚ್ಚು ಕಡಿಮೆ ಒಂದು ಆಗಿದೆ ಹೀಗಾಗಿ ಎಲ್ಲಾ ಧರ್ಮಗಳು ಸಾಮಾನ್ಯವಾದ ನೈತಿಕ ಸಂಹಿತೆಯನ್ನು ಬೋಧಿಸುತ್ತದೆ ಎಂಬುದನ್ನು ತಮ್ಮ ವಿವಿಧ ಧರ್ಮಗಳ ಧಾರ್ಮಿಕ ಸಂವಾದಗಳಲ್ಲಿ ಕಾಣಬಹುದು. ಮೋಶೆ ಧರ್ಮಶಾಸ್ತ್ರದ ಮೊದಲ ಐದು ದೈವಜ್ಞೆಗಳನ್ನು ಬಿಟ್ಟರೆ ಉಳಿದ ಐದು ಆಜ್ಞೆಗಳು ಎಲ್ಲಾ ಭಾರತೀಯ ಧರ್ಮಗಳಲ್ಲಿ ಕಾಣುತ್ತೇವೆ. ಜೈನರು ಇವನ್ನು ಪಂಚ ಮಹಾವ್ರತಗಳೆನ್ನುತ್ತಾರೆ. ನಿಮಗೆ ಜನರು ಏನೇನು ಮಾಡಬೇಕೆಂದು ಅಪೇಕ್ಷಿಸುತ್ತಾರೋ ಅದನ್ನೇ ಅವರಿಗೆ ಮಾಡಿರಿ. ಎಂದು ಕ್ರೈಸ್ತ ಧರ್ಮ ಬೋಧಿಸಿದರೆ, ತನ್ನ ಸುಖವನ್ನು ಬಯಸುವವನು ಇತರ ಸುಖವನ್ನು ಬಯಸಬೇಕು ಎನ್ನುತ್ತದೆ ಬೌದ್ಧ ಧರ್ಮ.

ಧಾರ್ಮಿಕ ಸಂವಾದವು ನಮ್ಮಲ್ಲಿ ಬೇರೆ ಧರ್ಮಗಳ ಬಗ್ಗೆ ಸಹನೆಯನ್ನು, ಗೌರವವನ್ನು ಉಂಟುಮಾಡುತ್ತದೆ. ವಿವಿಧ ಧಾರ್ಮಿಕ ಸಂವಾದಗಳ ಅಧ್ಯಯನವು ತಾನು ಪ್ರತಿಪಾದಿಸುವ ಧರ್ಮವನ್ನೆ ಆಳವಾಗಿ ಅರಿಯಲು ಸಹಾಯ ಮಾಡುತ್ತದೆ. ಉದಾ: ಬಿಟ್ಟೊ ಎಂಬಾತನು ಹಿಂದೂ ಧರ್ಮವನ್ನು ಅಭ್ಯಾಸಿಸಿ 'The idea of the holy' ಎಂಬ ಪುಸ್ತಕವನ್ನು ಬರೆದ. ಅದೇ ರೀತಿ ಪಾಲ್ ತೇಲಿಚ್ ಎಂಬುವವನು ಅದ್ವೈತವನ್ನು ಅಭ್ಯಾಸಿಸಿ ಧಾರ್ಮಿಕ ಸಂಕೇತಗಳ ಸಿದ್ಧಾಂತ ಎಂಬ ಯಶಸ್ವಿ ಸಿದ್ಧಾಂತವನ್ನು ಮಂಡಿಸಿದ.

ಧಾರ್ಮಿಕ ಸಂವಾದದ ಅಧ್ಯಯನದ ಉದ್ದೇಶ ಮತಾಂತರವಲ್ಲ, ಬದಲಾಗಿ ಒಬ್ಬ ಒಳ್ಳೆಯ ಕ್ರೈಸ್ತನನ್ನು ಇನ್ನೂ ಒಬ್ಬ ಒಳ್ಳೆಯ ಕ್ರೈಸ್ತನನ್ನಾಗಿ ಮಾಡುವುದು; ಒಬ್ಬ ಹಿಂದೂವನ್ನು ಇನ್ನು ಒಬ್ಬ ಉತ್ತಮ ಹಿಂದೂವನ್ನಾಗಿ ಮಾಡುವುದೇ ಆಗಿದೆ. ಇದರ ಜೊತೆಗೆ ತಾನು ನಂಬಿ ಆಚರಿಸುವ ಧರ್ಮವನ್ನು ಅದರ ಮೂಲಭೂತ ತತ್ವಗಳನ್ನು ಕಂಡುಹಿಡಿಯುವುದೇ ಧಾರ್ಮಿಕ ಸಂವಾದ ಉದ್ದೇಶವಾಗಿದೆ. ಆದ ಕಾರಣ ಧಾರ್ಮಿಕ ಸಂವಾದ ಅಧ್ಯಯನವು ನಮ್ಮಲ್ಲಿ ವಿವಿಧ ಧರ್ಮಗಳನ್ನು ಗೌರವಿಸುವಂತಹ ಹಾಗೂ ಆ ಧರ್ಮಗಳಲ್ಲಿನ ಒಳಿತನ್ನು ಅನುಸರಿಸಿ ಸಾಮರಸ್ಯದ ಜೀವನವನ್ನು ಎಲ್ಲಾ ಧರ್ಮೀಯರೊಂದಿಗೆ ನಡೆಸುವುದನ್ನು ಉತ್ತೇಜಿಸುತ್ತದೆ. ಈ ಧಾರ್ಮಿಕ ಸಂವಾದದ ಅಧ್ಯಯನವು ಕೆಲವೊಮ್ಮೆ ಎರಡು ಧರ್ಮಗಳನ್ನು ಒಟ್ಟುಗೂಡಿಸುವ ಅಥವಾ ಎರಡು ಧರ್ಮಗಳ ಬುನಾದಿಗಳ ಮೇಲೆ ಹೊಸದೊಂದು ಧರ್ಮವನ್ನು ರೂಪಿಸುವುದನ್ನು ನೋಡುತ್ತೇವೆ. ಉದಾ: ಸೂಫಿ ಸಂತರ ಹಿಂದೂ ಮತ್ತು ಇಸ್ಲಾಂ ಧರ್ಮದ ಐಕ್ಯತೆಯ ದೂತರಾಗಿ ಕಾಣುತ್ತಾರೆ. ಉಪನಿಷತ್ ಅವರ ತಲೆಯಾದರೆ ಇಸ್ಲಾಂ ಅವರ ಹೃದಯದಂತೆ ಕಾಣುತ್ತದೆ.

ಕ್ರೈಸ್ತ ಧರ್ಮ ಮತ್ತು ಉಪನಿಷತ್‌ಗಳ ಅಧ್ಯಯನವು ಬ್ರಹ್ಮ ಸಮಾಜದ ಉಗಮಕ್ಕೆ ಕಾರಣವಾಗಿದೆ. ಈ ಬ್ರಹ್ಮ ಸಮಾಜವು ಹಿಂದೂ ಧರ್ಮದ ಸುಧಾರಣೆಯಾಗಿ ಸತಿ ಪದ್ಧತಿ, ವಿಗ್ರರಾಧನೆ ಜಾತಿ ಪದ್ಧತಿಯ ವಿರುದ್ಧ ಹೋರಾಡಿತು.

ಧಾರ್ಮಿಕ ಸಂವಾದವು ವಿವಿಧ ಧರ್ಮಗಳಲ್ಲಿ ಐಕ್ಯತೆ ಸಾಮರಸ್ಯವನ್ನು ತಂದು ಪರಸ್ಪರ ಹೊಡೆದಾಡುವುದರ ಬದಲು ಧರ್ಮಗಳು ಐಕ್ಯಮತ್ಯದಿಂದ ಬಾಳಲು ಅನುವು ಮಾಡಿಕೊಡುತ್ತದೆ. ಇಲ್ಲಿ ಐಕ್ಯತೆ ಎಂದರೆ ಧಾರ್ಮಿಕ ನಡತೆ ಮತ್ತು ನಂಬಿಕೆಗಳ ಸಮಾನತೆಯಲ್ಲ ಬದಲಾಗಿ ಎಲ್ಲಾ ಧರ್ಮಗಳನ್ನು ಪರಸ್ಪರ ಸೌಹಾರ್ದತೆಯಿಂದ ಒಟ್ಟುಗೂಡಿಸಿ ಒಂದಾಗಿ ಬಾಳುವುದೇ ಆಗಿದೆ. ಶಂಕರಾಚಾರ್ಯರ ಅದ್ವೈತ ಸಿದ್ಧಾಂತದಲ್ಲಿನ ವ್ಯತ್ಯಾಸ ರಹಿತ ಬ್ರಹ್ಮವನ್ನು ಎಲ್ಲ ಧರ್ಮಿಯರೂ ಒಪ್ಪ ಬಹುದಾದ ಒಂದು ಸಿದ್ಧಾಂತವಾಗಿದೆ.

ಧಾರ್ಮಿಕ ಸಂವಾದವು ಸುಗಮವಾಗಿರಬೇಕಾದರೆ, ಜೀವಂತಧರ್ಮಗಳ ಒಳ ಅರಿವನ್ನು ಕಾಣಬೇಕಾದರೆ ಕೆಲವು ಸಾಮಾನ್ಯ ವಿಷಯಗಳನ್ನು ನಾವು ಗಮನದಲ್ಲಿಟ್ಟುಕೊಳ್ಳ ಬೇಕಾಗಿದೆ. ದೈವದ ಅಸ್ತಿತ್ವದ ಬಗೆಗಿನ ಸಿದ್ಧಾಂತ, ಜಗತ್, ಆತ್ಮ, ಸ್ವರ್ಗ-ನರಕ, ನ್ಯಾಯ ತೀರ್ಪಿನದಿನ, ಆತ್ಮನ ಅಂತಿಮ ಸ್ಥಿತಿಗತಿ ಇವೆಲ್ಲವು ಧಾರ್ಮಿಕ ಸಂವಾದದಲ್ಲಿನ ಸಾಮಾನ್ಯ ವಿಷಯಗಳು.

ಇವುಗಳ ಜೊತೆಗೆ ಇನ್ನು ಕೆಲವು ಮಹತ್ವದ ಸಿದ್ದಾಂತಗಳತ್ತ ನಾವು ಗಮನಿಸಬೇಕು. ಕ್ರೈಸ್ತಧರ್ಮದ ಪಾಪ ಪರಿಹಾರ ಸಿದ್ಧಾಂತ, ಹಿಂದುಧರ್ಮದ ಪುನರ್ ಜನ್ಮ ಸಿದ್ಧಾಂತ, ಪ್ರಾರ್ಥನೆ ಮತ್ತು ಧ್ಯಾನ ಇವೆಲ್ಲವನ್ನು ಗಮನಿಸತಕ್ಕದ್ದು. "ಈ ಹಿನ್ನೆಲೆಯಲ್ಲಿ ಎಲ್ಲ ಭಾರತೀಯ ಧರ್ಮಗಳ ಐತಿಹಾಸಿಕ ಬೆಳವಣಿಗೆ ಬಗ್ಗೆ ಒಂದು ಅಧ್ಯಯನವನ್ನು ಶ್ರೀ ಮಸಿಹ ರವರು ಕೈಗೊಂಡಿದ್ದಾರೆ. ಇದರ ಉದ್ದೇಶ ಮತ್ತೊಮ್ಮೆ ಎಲ್ಲ ಧರ್ಮಗಳನ್ನು ವಿಶೇಷವಾಗಿ ಅವುಗಳ ಉಗಮ ಮತ್ತು ಲಕ್ಷಣಗಳನ್ನು ಒಟ್ಟು ಮಾಡುವುದೇ ಆಗಿದೆ.

ದೈವವು ಅಸ್ತಿತ್ವದಲ್ಲಿದ್ದು ಅದು ಮನುಕುಲದ ಚರಿತೆಯಲ್ಲೂ, ಪ್ರತಿಯೊಬ್ಬ ವ್ಯಕ್ತಿಯಲ್ಲೂ, ಇಡೀ ಬ್ರಹ್ಮಾಂಡದಲ್ಲೂ ಸಕ್ರಿಯವಾಗಿದೆ. ಈ ಅಂಶವು ನಂಬುಗೆಯ ಆಧಾರದಮೇಲೆ ನಿಂತಿದ್ದು ಇದೊಂದು

ಧಾರ್ಮಿಕಸಂವಾದದಲ್ಲಿನ ಒಂದು ಕನಿಷ್ಠ ಸಾಮಾನ್ಯ ಅಂಶವಾಗಿದೆ. ಮಾನವ ಮತ್ತು ಆತನಿಗೆ ಅತ್ಯಂತ ಪ್ರಿಯವಾದ ನಂಬಿಕೆಗಳು ಎಂದಿಗೂ ನಾಶವಾಗುವುದಿಲ್ಲ ಎಂಬ ನಂಬಿಕೆ ಅನಾದಿಯಿಂದಲೂ ಇದೆ.

ಇತ್ತೀಚಿನ ಧಾರ್ಮಿಕ ಸಂವಾದಗಳಲ್ಲಿ 'ಮಾನವನಲ್ಲಿರುವ ದೈವ' ವನ್ನು ಅರಿಯುವತ್ತ ಹೆಚ್ಚಿನ ಒಲವನ್ನು ತೋರಿಸಲಾಗುತ್ತದೆ. ಆತ್ಮ ಸಾಕ್ಷಾತ್ಕಾರ ಅಂದರೆ ತಾನು ದೈವದೊಳಗಿದ್ದು ತನ್ನೊಳಗೆ ದೈವವಿದ್ದು ಅದನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂಬುದೇ ಆಗಿದೆ. ಎಲ್ಲಾ ಧಾರ್ಮಿಕ ಗ್ರಂಥಗಳು, ಮಂತ್ರಗಳು, ಧಾರ್ಮಿಕ ವಿಧಿ ವಿಧಾನಗಳು, ಧಾರ್ಮಿಕ ಆಚರಣೆಗಳಿಗಿಂತ ಮಿಗಿಲಾದುದು ಆತ್ಮನ ಅರಿವು. ಈ ನಿಟ್ಟಿನಲ್ಲಿ ಎಲ್ಲಾ ಧರ್ಮಗಳ ಧಾರ್ಮಿಕ ನಾಯಕರು, ಮಾನವನಲ್ಲಿರುವ ದೈವವನ್ನು ಸಾಕ್ಷಾತ್ಕರಿಸುವತ್ತ ತಮ್ಮ ತಮ್ಮ ಧರ್ಮದ ಅನುಯಾಯಿಗಳಿಗೆ ನೆರವಾಗಬೇಕು. ಆಗ ಮಾತ್ರ ಧಾರ್ಮಿಕ ಸಂವಾದಕ್ಕೆ ಹೆಚ್ಚು ಅರ್ಥಬರುತ್ತದೆ.

'ನೀವು ದೇವರುಗಳು' ಎನ್ನುವ ಕ್ರೈಸ್ತಧರ್ಮ, ಅಥವಾ 'ದೈವವು ನಿಮ್ಮೊಳಗಿದೆ' ಎನ್ನುವ ಉಪನಿಷತ್ ಯೋಚನಾಲಹರಿ, 'ದೈವದ ಸುಪುತ್ರರು ನೀವು' ಎನ್ನುವ ಇಸ್ಲಾಂ ಧರ್ಮ, ಮೂಲಭೂತವಾಗಿ ಹೇಳುವುದು ಒಂದೇ. 'ನಾವೆಲ್ಲರು ದೈವದ ಅಂಶಗಳು' ಪುನಃ ನಾವು ಅವನನ್ನೇ ಸೇರಿಕೊಳ್ಳ ಬೇಕು.' ಇದೇ ಜೀವನದ ಗುರಿ. ಇದನ್ನೇ ರಾಮಾನುಜರು, ಗುರುನಾನಕರು, ಶ್ರೀರಾಮಕೃಷ್ಣರು, ಕನಕದಾಸರು, ಪುರಂದರದಾಸರು, ವಚನಕಾರರು ಎಲ್ಲಾ ದಾರ್ಶನಿಕರು ಒತ್ತಿ ಹೇಳಿದ್ದಾರೆ.

"ಬುದ್ಧನನ್ನು ಅರಿಯುವವನು ಕಡೆಗೆ ಬುದ್ಧನೇ ಆಗುತ್ತಾನೆ. ಇದೇ 'ಅಪ್ಪೋ ದೀಪೋಭವ' ಎಂಬುದರ ಅರ್ಥ. ಯೇಸುಕ್ರಿಸ್ತನು ಸಹ 'ನಿಮ್ಮ ತಂದೆಯಂತೆ' ನೀವು ಪರಿಪೂರ್ಣ ರಾಗಿ" ಎಂದು ಹೇಳುವುದರ ಅರ್ಥವು ಇದೇ ಆಗಿದೆ."[೬]

ನಿಜವಾದ ಅಧ್ಯಾತ್ಮಿಕ ಸಾಧಕನಿಗೆ ಎಲ್ಲೆಡೆ ಎಲ್ಲೆಲ್ಲೂ ದೈವವೇ ಕಾಣುತ್ತದೆ. ಅವ ಯಾವ ಧರ್ಮವನ್ನು ದ್ವೇಷಿಸಲಾರ. ಬದಲಾಗಿ ಎಲ್ಲ ಧರ್ಮಗಳನ್ನು ಸಮಾನವಾಗಿ ಪ್ರೀತಿಸಿ 'ದೈವ ತಂದೆಯ ಮುಂದೆ ನಾವೆಲ್ಲಾ ಒಂದೇ' ಎಂದು ತಿಳಿದು ಬಾಳುತ್ತಾನೆ.

ಇಂದಿನ ಪರಿಸ್ಥಿತಿಯಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗಿ 'ಧಾರ್ಮಿಕ ಸಂವಾದ'ದ ಅಗತ್ಯತೆ ಹೆಚ್ಚು ಹೆಚ್ಚಾಗಿ ಕಾಣಬರುತ್ತಿದೆ. ಧಾರ್ಮಿಕ ಮೂಲಭೂತವಾದ, ಪರಧರ್ಮ, ಸಂಹಿಷ್ಣುತೆ, ಧಾರ್ಮಿಕ ಭಯೋತ್ಪಾದನೆಗಳು ತಾಂಡವವಾಡುತ್ತಿರುವ ಈ ವೇಳೆಯಲ್ಲಿ ಧಾರ್ಮಿಕ ಸಂವಾದಗಳು ತುಸು ಮಟ್ಟಿಗಾದರೂ ಶಾಂತಿ, ಸಮಭಾವ, ಸಹಬಾಳ್ವೆಯನ್ನು ನಡೆಸಲು ಸಹಕಾರಿಯಾಗುತ್ತವೆ.

೨.೪ ಕ್ರೈಸ್ತಧರ್ಮದ ದೃಷ್ಟಿಯಲ್ಲಿ ಧಾರ್ಮಿಕ ಸಂವಾದ

ಈ ಪ್ರಪಂಚ ಹತ್ತಾರು ಧರ್ಮಗಳ ಬೀಡಾಗಿದೆ. ಒಟ್ಟು ಜನಸಂಖ್ಯೆಯ ಪ್ರತಿಶತ ೧೮ರಷ್ಟು ಕೆಥೋಲಿಕ ಕ್ರೈಸ್ತರಿದ್ದಾರೆ. ಪ್ರಪಂಚದ ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗದಷ್ಟು ಕ್ರೈಸ್ತರಿದ್ದಾರೆ. ಪ್ರತಿಶತ ೧೭ರಷ್ಟು ಮುಸ್ಲಿಮರು, ಪ್ರತಿಶತ ೧೩ರಷ್ಟು ಹಿಂದುಗಳು, ಪ್ರತಿಶತ ೭ರಷ್ಟು ಬೌದ್ಧರು ಇದ್ದಾರೆ. ಜೊತೆಗೆ ಅಲ್ಪ ಪ್ರಮಾಣದಲ್ಲಿ ಸಿಕ್ಕರು, ಬರಯಿಗಳು, ಜತುರುಷ್ಟರು, ಸಿಂಟೋ ಹಾಗೂ ಇತರ ಧರ್ಮದವರಿದ್ದಾರೆ.[೧೦]

"ಈ ಹಿನ್ನೆಲೆಯಲ್ಲಿ ವಿವಿಧ ಧರ್ಮಗಳ ಜೊತೆ ಕ್ರೈಸ್ತಧರ್ಮವು ಉತ್ತಮ ಸಂಬಂಧವನ್ನು ಹೊಂದಲು ತನ್ನ ಅಂತರ್-ಧರ್ಮೀಯ ಸಂಬಂಧದ ಘಟಕವು ಸದಾ ಯತ್ನಿಸುತ್ತಿದೆ. ಮಾನವ ಕುಲಕ್ಕೆ ತನ್ನ ಐಕ್ಯದ ಪ್ರಜ್ಞೆ ಹಿಂದೆಂದೂ ಇಲ್ಲದಷ್ಟು ಈಗ ಮೂಡುತ್ತಿದೆ. ಆದರೆ, ಅದೇ ಸಮಯದಲ್ಲಿ ಯುದ್ಧದಿಂದ, ಧಾರ್ಮಿಕ ಭಯೋತ್ಪಾದನೆಯಿಂದಾಗಿ ಮತೀಯ ಮೂಲಭೂತವಾದಿಗಳಿಂದಾಗಿ ಆಗುತ್ತಿರುವ ಅನಾಹುತಗಳನ್ನು, ಚಿಂತಾಕ್ರಾಂತವಾಗಿ ಮನುಕುಲ ಅತ್ಯಂತ ಭಯವನ್ನು ಅನುಭವಿಸುತ್ತಿದೆ. ಐಕಮತ್ಯಕ್ಕೂ, ಯುದ್ಧಗಳಿಗೂ ಇರುವ ಈ ವಿರುದ್ಧತೆಯಿಂದ ಮಾನವಕುಲ ತನ್ನ ಪರಿಪಕ್ವತೆಯನ್ನೇ ಪ್ರಶ್ನಿಸುವಂತಾಗಿದೆ. ಆದುದರಿಂದ ಕ್ರೈಸ್ತಭಕ್ತರು ಎಲ್ಲ ಮಾನವರೊಂದಿಗೆ ಸಹಕರಿಸಿ ವಿಶ್ವಶಾಂತಿಯನ್ನು ಸಾಧಿಸಬೇಕೆಂದು ಅದಕ್ಕಾಗಿ ದುಡಿಯುವವರು ನಿಜವಾಗಿ ಭಾಗ್ಯವಂತರೆಂದೂ- "ಏಕಂದರೆ ಇವರು ದೇವರ ಮಕ್ಕಳೆಂದು ಕರೆಯಲ್ಪಡುವರು"[೧೧] ಎಂಬುದು ಕ್ರೈಸ್ತಧರ್ಮದ ನೋಟ.

ಧರ್ಮಗಳ ವೈವಿಧ್ಯತೆಯನ್ನು ಕುರಿತು ಇತ್ತೀಚೆಗೆ ತಮ್ಮ ಲೇಖನದಲ್ಲಿ ಕಾರ್ಡಿನಾಲ್ ಅರಿನ್‌ಜೆ ರವರು ಈ ರೀತಿ ಬರೆದಿದ್ದಾರೆ: "ಧರ್ಮಗಳು ಬಹುಸಂಖ್ಯಾತರ ಜೀವನ ಮಾರ್ಗಗಳಾಗಿವೆ. ಆತ್ಮಗಳನ್ನು ಪ್ರಜ್ವಲಗೊಳಿಸುವ ಜೀವಂತ ಉದಾಹರಣೆಗಳಾಗಿ ಈ ಧರ್ಮಗಳು ಮೂಡಿಬಂದಿವೆ. ಧರ್ಮಗಳು, ಮಾನವನ ಸಹಸ್ರಾರು ವರ್ಷಗಳ ದೇವರ ಹುಡುಕಾಟವನ್ನು ಪ್ರತಿಧ್ವನಿಸುತ್ತವೆ. ಧರ್ಮಗಳು ನೂರಾರು ತಲೆಮಾರು ಗಳಿಂದ ಜನರಿಗೆ ಬದುಕುವುದು ಹೇಗೆ? ಪ್ರಾರ್ಥಿಸುವುದು ಹೇಗೆ? ಮತ್ತು ಈ ಭೂಮಿಯ ಮೇಲೆ ಮಾನವನ ಅಸ್ತಿತ್ವದ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಎದುರಿಸಿವ ಬಗೆಯನ್ನು ತಿಳಿಸುತ್ತವೆ. ಒಟ್ಟಿನಲ್ಲಿ ಅಂತರ್-ಧರ್ಮಿಯ ಸಂವಾದವು ಪ್ರಪಂಚದಲ್ಲಿ ಧಾರ್ಮಿಕ ವೈವಿಧ್ಯತೆಯನ್ನು ಎತ್ತಿಹಿಡಿದು, ಪೋಷಿಸಿ, ಅಭಿವ್ಯಕ್ತ ಗೊಳಿಸುತ್ತದೆ."[೧೨]

ಆಧುನಿಕ ಸಮೂಹ ಮಾಧ್ಯಮಗಳು, ತಂತ್ರಜ್ಞಾನಗಳು ಈ ಪ್ರಪಂಚವನ್ನು ದಿನೇ ದಿನೇ ತ್ವರಿತವಾಗಿ ಚಿಕ್ಕದಾಗಿಸುತ್ತಿವೆ. ಮನುಕುಲ ಮೊದಲಿಗಿಂತಲೂ ಹೆಚ್ಚು ಹೆಚ್ಚು ಹತ್ತಿರವಾಗಿ ಒಂದುಗೂಡುತ್ತಿವೆ. ಜನ

ಜನಾಂಗಗಳ ಬಾಂಧವ್ಯ ವೃದ್ಧಿಯಾಗುತ್ತಿವೆ. ವಿಶ್ವದ ಮನುಜರೆಲ್ಲಾ 'ವಸುಧೈವ ಕುಟುಂಬಕಂ' ಎಂಬಂತೆ ಒಂದೇ ಕುಟುಂಬಕ್ಕೆ ಸೇರಿದವರೆಂಬ ಭಾವನೆ ಬೆಳೆಯುತ್ತಿದೆ.

ಈ ಎಲ್ಲಾ ಬೆಳವಣಿಗೆಗಳನ್ನು ಚರ್ಚ್ ಅತ್ಯಾಸಕ್ತಿಯಿಂದ ಗಮನಿಸುತ್ತಿದೆ. ಎಲ್ಲ ಜನರಲ್ಲಿ ಪ್ರೀತಿಯನ್ನು, ಒಗ್ಗಟ್ಟನ್ನು, ಪರಧರ್ಮಗಳ ಸಹಿಷ್ಣುತೆಯನ್ನು ವಿವಿಧ ಧರ್ಮಗಳನ್ನು ಗೌರವಿಸುವಂತೆ ಮಾಡುವುದು ಹಾಗೂ ದೈವ ಪ್ರಜ್ಞೆಯನ್ನು ಎಲ್ಲರಲ್ಲೂ ಹುಟ್ಟಿಸುವಂತೆ ಮಾಡುವುದು ಚರ್ಚ್‌ನ ಕರ್ತವ್ಯವಾಗಿದೆ.

ಎಲ್ಲಾ ಮನುಷ್ಯರಿಗೂ ಒಂದೇ ಆದಿ, ಒಂದೇ ಅಂತ್ಯವಿರುವ ಕಾರಣ ಎಲ್ಲರೂ ಒಂದೇ ಕುಟುಂಬದವರು. ಎಲ್ಲರೂ ದೇವರಿಂದಲೇ ಬಂದವರು; ದೇವರ ರೂಪದಲ್ಲಿ ಎಲ್ಲರೂ ಸೃಷ್ಟಿಯಾದವರು. ಎಲ್ಲರಗುರಿ ಒಂದೇ. ದೈವಪ್ರೀತಿ, ಮೈತ್ರಿಯನ್ನು ಸವಿದು ಅವರ ದರ್ಶನದಲ್ಲಿ ನಿತ್ಯಾನಂದಿಸಲು ಸೃಷ್ಟಿಯಾದವರು. ಈ ಗುರಿಸಾಧನೆಗಾಗಿ ದೇವರು ತನ್ನ ಮಕ್ಕಳಿಗೆ ಸದಾ ಮಾರ್ಗದರ್ಶಕರಾಗಿದ್ದಾರೆ ಎಂಬುದು ಕ್ರೈಸ್ತ ಮತದ ಅಂಬೋಣ.

ಧಾರ್ಮಿಕ ಸಂವಾದದ ಹಿನ್ನಲೆಯಲ್ಲಿ ಕ್ರೈಸ್ತಮತದ ನಿಲುವಿನತ್ತ ಗಮನಹರಿಸಿದಾಗ ಅದು ಎಲ್ಲ ಧರ್ಮಗಳ ಬಗ್ಗೆ ಆಸಕ್ತಿ ಇರುವುದನ್ನು ಕಾಣುತ್ತೇವೆ. ಎಲ್ಲ ಧರ್ಮಿಯರ ನಡುವೆ ಐಕ್ಯತೆಯನ್ನು ಬೆಳೆಸುವ ಕರ್ತವ್ಯ ಕ್ರೈಸ್ತಧರ್ಮದ್ದಾಗಿದೆ. ಸಹಸ್ರಾರು ವರ್ಷಗಳಿಂದ ಮಾನವನ ಮೂಲಭೂತ ಪ್ರಶ್ನೆಗಳಿಗೆ, ಉತ್ತರವನ್ನು ಜನರು ಎಲ್ಲಾ ಮತಗಳಿಂದ ನಿರೀಕ್ಷಿಸುತ್ತಾರೆ. ಪ್ರಶ್ನೆಗಳಿಗೆ ಉತ್ತರ ಹುಡುಕುವ ಯತ್ನದಲ್ಲಿ ನಾನಾ ಜನಾಂಗದವರು ಈ ಪ್ರಪಂಚದ ಘಟನೆಗಳನ್ನು ಮಾನವರ ಗುರಿ ಧ್ಯೇಯಗಳನ್ನು ಆಳುವ ಆಂತರ್ಯ ಶಕ್ತಿಯೊಂದನ್ನು ಸ್ವಲ್ಪ ಮಟ್ಟಿಗಾದರೂ ಮನಗಂಡಿದ್ದಾರೆ. ಕೆಲವರಿಗೆ ಪರಮಾತ್ಮನೊಬ್ಬನಲ್ಲಿ ನಂಬಿಕೆ ಇದೆ. ಮಾತ್ರವಲ್ಲ ದೇವರೊಬ್ಬನೇ ತಂದೆ ಎಂಬ ವಿಶ್ವಾಸ ಸಹ ಇದೆ. ಈ ಮನೋದೃಷ್ಟಿ, ನಂಬಿಕೆ ಅವರ ಜೀವನವನ್ನು ಹೊಕ್ಕು ಅವರಲ್ಲಿ ಆಳವಾದ ಒಂದು ಧಾರ್ಮಿಕ ಮನೋಭಾವವನ್ನು ಉಂಟುಮಾಡಿದೆ.

ಕ್ಯಾಥೊಲಿಕ್ ಚರ್ಚ್‌ನ್ನು ಆಧುನಿಕತೆಗೆ ನವೀಕರಣಕ್ಕೆ ಒಳಪಡಿಸಿದ ದ್ವಿತೀಯ ವ್ಯಾಟಿಕನ್ ಸಮ್ಮೇಳನವು ಹಿಂದೂ, ಬೌದ್ಧ, ಇಸ್ಲಾಂ, ಯೆಹೂದ್ಯ ಹಾಗೂ ಇತರ ಎಲ್ಲ ಧರ್ಮದಲ್ಲಿನ ಒಳ್ಳೆಯ ಅಂಶಗಳನ್ನು ತೆಗೆದುಕೊಂಡು ಅವರೊಂದಿಗೆ ಧಾರ್ಮಿಕ ನೆಲೆಯಲ್ಲಿ ಸಂವಾದಿಸಿ ಉತ್ತಮ ಸಹಬಾಳ್ವೆಯನ್ನು ಬಾಳಲು ಕರೆ ನೀಡುತ್ತದೆ.

ಹಿಂದೂ ಧರ್ಮಿಯರು ದೈವಶಾಸ್ತ್ರೀಯ ಸಿದ್ಧಾಂತಗಳನ್ನು ದೈವಿಕ ಗೂಢ ತತ್ವಗಳನ್ನು ಧ್ಯಾನಿಸಿ ಅದನ್ನು ವೇದಗಳು, ಉಪನಿಷತ್, ಭಗವದ್‌ಗೀತೆಗಳು, ಅಸಂಖ್ಯಾಕ ಪುರಾಣಗಳಿಂದಲೂ, ತತ್ವ ವಿಚಾರಕ ಪರಿಶೋಧನೆಯಿಂದಲೂ ವ್ಯಕ್ತಪಡಿಸುತ್ತಾರೆ. ಹಿಂದೂಧರ್ಮ ಬಹುದೇವ ದೇವತೆಗಳನ್ನು ಉಪಾಸಿಸುವ ಧರ್ಮವಾಗಿದೆ. ಜೊತೆಗೆ ಏಕ ದೇವತೋಪಾಸನೆಯೂ ಇದೆ. ಇಲ್ಲಿ ಸುಗುಣ ಬ್ರಹ್ಮವು ಉಂಟು, ನಿರ್ಗುಣ ಬ್ರಹ್ಮವು ಉಂಟು. ಭಗವಂತನನ್ನು ಮುಟ್ಟಲು ಜ್ಞಾನ, ಭಕ್ತಿ, ಕರ್ಮ, ರಾಜಮಾರ್ಗಗಳನ್ನು ಆಯ್ದುಕೊಳ್ಳುವಂತೆ ಧರ್ಮ ಬೋಧಿಸುತ್ತದೆ.

ನಾಸ್ತಿಕ ಧರ್ಮವಾದ ಬೌದ್ಧ ಮತವು ಸಹ ಈ ಚಂಚಲ ಪ್ರಪಂಚದ ಮೂಲ ಅಪೂರ್ಣತೆಯನ್ನು

ಮನಗಂಡಿದೆ. ಮನುಷ್ಯನು ಭಕ್ತಿ ಭರವಸೆಯಿಂದ ಸಂಪೂರ್ಣ ವಿಮುಕ್ತಿಯನ್ನು ಪಡೆಯಬಹುದೆಂದು ತನ್ನ ಸ್ವ ಪ್ರಯತ್ನದಿಂದಾಗಲೀ ಮೇಲಿನ ಸಹಾಯದಿಂದಾಗಲೀ ಪರಮ ಜ್ಞಾನೋದಯವನ್ನು ಹೊಂದ ಬಹುದೆಂದು ಅದು ಬೋಧಿಸುತ್ತದೆ.

ಕಥೋಲಿಕ್ ಚರ್ಚ್ ಹಿಂದೂ ಮತ್ತು ಬೌದ್ಧಮತಗಳಲ್ಲಿರುವ ಸತ್ಯವಾದ ಪವಿತ್ರವಾದ ಯಾವ ಅಂಶವನ್ನೂ ನಿರಾಕರಿಸುವುದಿಲ್ಲ. ಹಿಂದೂ ಮತ್ತು ಬೌದ್ಧಧರ್ಮದಲ್ಲಿನ ಬಾಳಿನ ಮತ್ತು ನಡವಳಿಕೆಯ ನಿಯಮ, ರೀತಿ-ನೀತಿಗಳೂ ಕ್ಯಾಥಲಿಕ್ ಚರ್ಚ್ ಬೋಧನೆಗಳಿಗಿಂತ ಬಿನ್ನವಾಗಿದ್ದರೂ ಆ ಧರ್ಮಗಳಲ್ಲಿನ ಒಳಿತಿನ ಅಂಶಗಳನ್ನು ಸಮಾನ ಅಂಶಗಳನ್ನು ಚರ್ಚ್ ಪೂಜ್ಯಭಾವದಿಂದ ಗೌರವಿಸುತ್ತದೆ.

ಎರಡನೇ ಅತಿದೊಡ್ಡ ಧರ್ಮ ಇಸ್ಲಾಂ ಆಗಿದೆ. ಮುಸ್ಲಿಮರು ಏಕದೇವೋಪಾಸಕರು, ದೇವರು ಸ್ವಜೀವಿ. ತಮ್ಮಿಂದ ತಾವಾಗಿರುವರು, ಸರ್ವಶಕ್ತ, ಸರ್ವಜ್ಞಾನಿ, ದಯಾಪರ, ಇಹಪರಗಳ ಸೃಷ್ಟಿಕರ್ತ ಎಂಬ ನಂಬಿಕೆಯಿಂದ ಜೀವಿಸುತ್ತಾರೆ. ಯೇಸುಕ್ರಿಸ್ತರನ್ನು ಅವರೊಬ್ಬ ಪ್ರವಾದಿ ಎಂದೂ, ತಾಯಿ ಮರಿಯಮ್ಮನರನ್ನು ಸನ್ಮಾನಿಸಿ ಭಕ್ತಿಯಿಂದ ಸ್ಮರಿಸಿಕೊಳ್ಳುತ್ತಾರೆ. ನೈತಿಕ ಜೀವನಕ್ಕೆ ಜಪ, ಉಪವಾಸ ಮತ್ತು ದಾನಧರ್ಮಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ. ಮರು ಜೀವನದ ಸಂಭಾವನೆಯನ್ನು ನಿರೀಕ್ಷಿಸುತ್ತಾರೆ.

ಕ್ಯಾಥೋಲಿಕ್ ಚರ್ಚ್ ಮುಸ್ಲಿಂ ಸಿದ್ಧಾಂತಗಳನ್ನು ಗೌರವಿಸುವುದರ ಜೊತೆಗೆ ಶತಶತಮಾನಗಳಿಂದ ಇರುವ ವ್ಯಾಜ್ಯ ವಿವಾದ ವೈಮನಸ್ಸುಗಳನ್ನು ಮರೆತು ಬಿಡುವಂತೆ ಕರೆ ನೀಡುತ್ತದೆ.

ಒಟ್ಟಿನಲ್ಲಿ ಎಲ್ಲಾ ಧರ್ಮಗಳಲ್ಲಿರುವ ಒಳ್ಳೆಯದೆಲ್ಲಾ ದೈವಕೃತ್ಯವೆಂದು ಶ್ಲಾಘಿಸಬೇಕೆಂದೂ ಅವುಗಳಲ್ಲಿರುವ ಅಧ್ಯಾತ್ಮಿಕ, ಸಮಾಜ-ಸಂಸ್ಕೃತಿಯ ಹಾಗೂ ನೈತಿಕ ಮೌಲ್ಯಗಳನ್ನು ಬಹಳವಾಗಿ ಮಾನ್ಯ ಮಾಡಬೇಕೆಂದೂ ಚರ್ಚ್ ಪ್ರೋತ್ಸಾಹಿಸುತ್ತಿದೆ. ಇಂತಹ ಭಾವನೆಯಿಂದ ಇತರ ಧರ್ಮದವರೊಡನೆ ಮೈತ್ರಿಯಿಂದ ಸಂವಾದಿಸಿ ಅವರೊಡನೆ ಸಹಕರಿಸುವಂತೆ ಮಾಡಬೇಕು. ಆದರೆ ಈ ವರ್ತನೆ ವಿವೇಕದಿಂದಲೂ ಪ್ರೀತಿಯಿಂದಲೂ ಕೂಡಿರಬೇಕು ಮತ್ತು ಕ್ರೈಸ್ತ ಮತಕ್ಕೆ, ಜೀವನಕ್ಕೂ ಸಾಕ್ಷ್ಯವಾಗಿರಬೇಕು. ಸಾಮಾಜಿಕ ನೀತಿ, ನೈತಿಕ ಕ್ಷೇಮ, ಎಲ್ಲ ಜನರ ಶಾಂತಿ ಮತ್ತು ಸ್ವಾತಂತ್ರ್ಯ ಮೊದಲಾದ ಸಾರ್ವಜನಿಕ ಯೋಜನೆಗಳಲ್ಲಿ ಬೇರೆ ಧರ್ಮಿಯರೊಡನೆ ಸೇರಿ ಅನ್ಯೋನ್ಯವಾಗಿ ಸಹಕರಿಸಬೇಕು.

ಝೂಡಾಯಿಸಂ ನೆರಳಿನಲ್ಲೇ ಬೆಳೆದು ಬಂದ ಕ್ರೈಸ್ತಧರ್ಮಕ್ಕೆ ಯಾವಾಗಲೂ ಯೆಹೂದ್ಯ ಧರ್ಮದ ಬಗ್ಗೆ ಮೃದು ಧೋರಣೆಯನ್ನೇ ಹೊಂದಿತ್ತು. ಕ್ಯಾಥೋಲಿಕ್ ಚರ್ಚ್ ಯೆಹೂದ್ಯರೊಡನೆ ಪರಸ್ಪರ ಅರಿವಿನಿಂದಲೂ ಗೌರವದಿಂದಲೂ ಸಹೋದರ ಭಾವನೆಯಿಂದಲೂ ಸಂವಾದಿಸಬೇಕೆಂದು ಪ್ರೋತ್ಸಾಹಿಸುತ್ತದೆ. ಯೆಹೂದ್ಯ ಅಧಿಕಾರಿಗಳು ಮತ್ತು ಅವರ ಅನುಯಾಯಿಗಳು ಯೇಸುಕ್ರಿಸ್ತನ ಮರಣಕ್ಕಾಗಿ ಒತ್ತಾಯ ಪಡಿಸಿದ್ದೇನೋ ನಿಜ. ಆದರೆ ಅದನ್ನು ಅಂದಿನಿಂದ ಇಂದಿನವರೆಗೂ ಎಲ್ಲಾ ಯೆಹೂದ್ಯರ ಮೇಲೆ ಹೊರಿಸುವುದು ತರವಲ್ಲ.

'ಪ್ರತಿಯೊಬ್ಬ ಮಾನವನು ದೇವರ ಪ್ರತಿರೂಪ. ಪರಿಸ್ಥಿತಿ ಹೀಗಿರುವಾಗ ಅನ್ಯಧರ್ಮಿಯನನ್ನು

ಸಹೋದರನಂತೆ ಕಂಡು ಆದರಿಸಲು ನಿರಾಕರಿಸಿದರೆ ನಾವು ಸರ್ವರ ತಂದೆಯಾದ ದೇವರನ್ನು ಪ್ರಾರ್ಥಿಸಲು ಯೋಗ್ಯವಲ್ಲ ಎಂದು ಕ್ಯಾಥೋಲಿಕ್ ಚರ್ಚ್ ಸಾರುತ್ತದೆ. ಯಾರು ಬೇರೆಯವರನ್ನು ಪ್ರೀತಿಸುವುದಿಲ್ಲವೋ, ಆತನಿಗೆ ದೇವರ ಅರಿವಿಲ್ಲ ಎಂಬ ದೈವ ವಾಕ್ಯದ ಆಧಾರದ ಮೇಲೆ ಎಲ್ಲರನ್ನೂ ಪ್ರೀತಿಸಿ, ಗೌರವಿಸಿ, ಸಹಬಾಳ್ವೆಯ ಜೀವನ ನಡೆಸುತ್ತಾ ಎಲ್ಲ ಧರ್ಮಿಯರ ನಡುವೆ ಜನಾಂಗ ಬೇಧ, ವರ್ಣಬೇಧ, ಅಂತಸ್ತು ಬೇಧ, ಮಾಡದೆ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲರೊಂದಿಗೆ ಶಾಂತಿ ಸಮಾಧಾನದಿಂದ ಬಾಳಬೇಕೆಂದು ಕರೆ ನೀಡುತ್ತದೆ.

ಧಾರ್ಮಿಕ ಸಂವಾದವು ಕ್ರೈಸ್ತಧರ್ಮದಲ್ಲಿ ಭದ್ರವಾದ ತಳಹದಿಯ ಮೇಲೆ ನಡೆಯುತ್ತಿದೆ. ದ್ವಿತೀಯ ಜಾನ್‌ಪೌಲ್ ಜಗದ್ಗುರುಗಳು ತಮ್ಮ ಪಾಲನ ಪತ್ರ "ತೆರ್‌ತಿಯೋ ಮಿಲಿಯಾನಿಯೊ ಆದ್‌ವೆನಿಯಂತೆ"ಯಲ್ಲಿ ಕ್ರೈಸ್ತ ಧಾರ್ಮಿಕ ಸಂವಾದದ ತಳಹದಿಯನ್ನು ಸ್ಪಷ್ಟಪಡಿಸಿದ್ದಾರೆ. ಅದರಲ್ಲಿ ಪೂಜ್ಯರು ಈ ರೀತಿ ಹೇಳುತ್ತಾರೆ. "....ಯೇಸುಕ್ರಿಸ್ತ ಕೇವಲ 'ದೇವರ ಹೆಸರಿನಲ್ಲಿ' ಎಂಬಂತೆ ಪ್ರವಾದಿಗಳ ರೀತಿಯಲ್ಲಿ ಮಾತನಾಡಲಿಲ್ಲ, ಬದಲಾಗಿ ವಾರ್ತೆಯಾದ ತಾನು ಮಾನವನಾಗಿ ಬಂದನು. ಇಲ್ಲಿ ದೈವ ಮಾನವ ರೂಪ ತಾಳುತ್ತದೆ. ಆರಂಭದಿಂದ ವಿವಿಧ ಧರ್ಮಗಳ ಮಾನವ ದೇವರನ್ನು ಹುಡುಕುತ್ತಿದ್ದರೆ ಇಲ್ಲಿ ದೈವವೇ ಮಾನವ ರೂಪ ತಾಳುತ್ತದೆ. ಇದೇ ಕ್ರೈಸ್ತ ಧರ್ಮದ ವಿಭಿನ್ನತೆ. ಕ್ರೈಸ್ತ ಧರ್ಮದ ಆರಂಭ ಬಿಂದು ದೇವರ ವಾರ್ತೆ ಮನುಷ್ಯರಾಗುವುದು ಇಲ್ಲಿ ಕೇವಲ ಮಾನವ ದೇವರನ್ನು ಹುಡುಕುವುದಲ್ಲ ಬದಲಾಗಿ ದೇವರು ಸಹ ಮಾನವನಾಗಿ ಅವನೊಂದಿಗೆ ಮಾತನಾಡಿ ಆತನಿಗೆ ದಾರಿ ತೋರಿ ಬೋಧಿಸಿದ. ಇದನ್ನು ಯೊವಾನನ್ನು ಬರೆದ ಶುಭ ಸಂದೇಶದ ಮುನ್ನುಡಿಯಲ್ಲಿ ಕಾಣುತ್ತೇವೆ. "ದೇವರನ್ನು ಯಾರೂ ಎಂದೂ ಕಂಡಿಲ್ಲ! ಯಾವನು ಏಕಪುತ್ರನೂ ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು."[೧೩]

ದೇವರ ವಾರ್ತೆಯ ಅವತಾರ, ಮಾನವ ಧರ್ಮಗಳ ಕಾಯುವಿಕೆಯನ್ನು ಆಶೆಯನ್ನು ಪೂರ್ತಿಗೊಳಿಸುತ್ತದೆ. ಈ ಸಂಪೂರ್ಣಗೊಳಿಸುವ ಕ್ರಿಯೆಯು ದೇವರಿಂದಲೇ ಮಾಡಲ್ಪಟ್ಟು ಮಾನವನ ಎಲ್ಲಾ ನಿರೀಕ್ಷೆಗಳನ್ನು ಮೀರಿ ನಡೆದಿದೆ. ಇದು ದೇವರ ದಯೆಯ ರಹಸ್ಯ."[೧೪]

ಚರ್ಚ್ ಇತರೆ ಧರ್ಮಗಳ ಸಂಪ್ರದಾಯವನ್ನು ಗೌರವಿಸಿ ಅವುಗಳೊಂದಿಗೆ ಮನುಕುಲದ ಒಳಿತಿಗಾಗಿ ಸಹಕರಿಸಲು ಆಶಿಸುತ್ತದೆ. ಈ ರೀತಿ ಮಾಡುವಾಗ ಬೇರೆ ಧರ್ಮಗಳಲ್ಲೂ ಅವುಗಳ ಸಂಪ್ರದಾಯಗಳಲ್ಲೂ ಸುಂದರವಾದ, ಸತ್ಯವಾದ ಮತ್ತು ಒಳ್ಳೆಯ ಅಂಶಗಳಿಗೆ ಎಂಬುದನ್ನು ಒಪ್ಪಿಕೊಳ್ಳುತ್ತದೆ. ದೇವರ ವಾರ್ತೆ ಕ್ರೈಸ್ತನಿಗೆ ಹೊರತಾಗಿ ಯಾವುದೂ ಇಲ್ಲಿ ಎಂಬ ಅಭಿಪ್ರಾಯವನ್ನು ಹೊಂದಿದೆ.

ಇಡೀ ವಿಶ್ವವೇ ಕ್ರಿಸ್ತನ ಅವತಾರ ರಹಸ್ಯವನ್ನು ಪ್ರಕಟಪಡಿಸುತ್ತದೆ. ಅಲ್ಲಲ್ಲಿ ಆಂಶಿಕ ಕ್ರೈಸ್ತ ಗುಣಗಳ ಬೀಜಗಳನ್ನು ಕಂಡರೂ ಕ್ರಿಸ್ತನಲ್ಲೇ ಎಲ್ಲಾ ಗುಣಗಳು ಪ್ರಕಟವಾಗಿವೆ. ಇದರಿಂದ ಬೇರೆ ಧರ್ಮಗಳ ಸಂಪ್ರದಾಯಗಳಲ್ಲಿ ಅಪೂರ್ಣವಾದ ದೇವರ ವಾಕ್ಯದ ಬೀಜಗಳು ಅಲ್ಲಲ್ಲಿ ಕಂಡುಬರುವುದನ್ನು ಆಗ ಅವುಗಳ ಸತ್ಯ ಮತ್ತು ಒಳಿತಿನ ಅಂಶಗಳು ಕಂಡುಬಂದಿರುವುದನ್ನು ಚರ್ಚ್ ಒಪ್ಪಿಕೊಳ್ಳುತ್ತದೆ.

೧. ಬೇರೆ ಧರ್ಮಗಳ ಸಂಪ್ರದಾಯಗಳಲ್ಲೂ ದೈವೀ ಕೃಪೆಯ ಅಂಶಗಳಿಗೆ ಎಂಬುದನ್ನು ಚರ್ಚ್ ಒಪ್ಪಿಕೊಳ್ಳುತ್ತದೆ.

೨. ಬೇರೆ ಧರ್ಮಿಯರೊಂದಿಗೆ ಸಂವಾದ ನೆಡೆಸುವುದೆಂದರೆ 'ಮುಕ್ತಿಯ ಸಂವಾದ' ಎಂಬುದು ಅದರ ಅರಿವಾಗಿದೆ.

೩. ಅಂತರ್-ಧರ್ಮೀಯ ಸಂವಾದದ ಮೂಲಕ ಪರಸ್ಪರ ನಂಬಿಕೆಗಳನ್ನು ಶ್ರೀಮಂತಗೊಳಿಸಬಹುದಾಗಿದೆ.

೪. ಬೇರೆ ಧರ್ಮೀಯರು ಮಾಡುವ ಪ್ರಾರ್ಥನೆಗಳು ಫಲಕಾರಿಯಾಗಿವೆ ಏಕೆಂದರೆ ಅವುಗಳೆಲ್ಲವನ್ನು ಕೇಳುವವನು ಒಬ್ಬನೇ ದೇವರು.

೫. ಭೂಪರ ಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ, ಸಿಂಹಾಸನಗಳಾಗಲಿ, ಪ್ರಭುತ್ವಗಳಾಗಲಿ ದೊರೆತನಗಳಾಗಲಿ, ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರ ವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು ಎಂಬುದನ್ನು ಒತ್ತಿ ಹಿಡಿದು ಇಡೀ ಮನುಕುಲವನ್ನು ಇದರ ಅಡಿ ಐಕ್ಯಗೊಳಿಸಬೇಕಾಗಿದೆ.

ಕ್ಯಾಥೋಲಿಕ್ ಧರ್ಮಸಭೆ (ಚರ್ಚ್) ಅಂತರ್-ಧರ್ಮೀಯ ಸಂವಾದ ಪ್ರೋತ್ಸಾಹಿಸುವುದರ ಜೊತೆಗೆ ಧರ್ಮಗಳ ನಡುವಿನಲ್ಲಿರುವ ಧಾರ್ಮಿಕ ಒಳ ಸಂಪ್ರದಾಯಗಳಲ್ಲೂ ಸಂವಾದಗಳು ನಡೆಯುವಂತೆ ಉತ್ತೇಜಿಸುತ್ತದೆ. ಈ ರೀತಿ ಮಾಡುವುದರ ಮೂಲಕ ತಾನು ಕ್ರಿಸ್ತನ ಸಂಸ್ಕಾರವನ್ನು ನೆರವೇರಿಸುವ ಒಂದು ಸಾಧನ ಹಾಗೂ ಎಲ್ಲಾ ಸಮುದಾಯಗಳ ನಡುವೆ ಐಕ್ಯತೆಯನ್ನು ತರುವ ಸಾಧನವಾಗಿ ತೋರಿಸಿಕೊಳ್ಳಲು ಇಚ್ಛಿಸುತ್ತದೆ.

ಧರ್ಮ ಸಭೆಯು ತಾನು ಪವಿತ್ರಾತ್ಮರಿಂದ ಪ್ರೇರಿತಳಾಗಿ ಎಲ್ಲಾ ಧರ್ಮಿಯರನ್ನು ಆಹ್ವಾನಿಸಿ ಅವರನ್ನು ಉತ್ತೇಜಿಸಿ ಪರಸ್ಪರ ಭೇಟಿ ಮಾಡಿ, ಸಂವಾದಕ್ಕೆ ಸಹಕರಿಸುವುದನ್ನು ಇಚ್ಛಿಸುತ್ತದೆ. ಈ ಮೂಲಕ ಎಲ್ಲಾ ಧರ್ಮಿಯರಲ್ಲಿ ಶುದ್ಧ ಸಾತ್ವಿಕ ಜೀವನ, ನ್ಯಾಯ, ಪ್ರೀತಿ ಮತ್ತು ಶಾಂತಿಯ ದೈವೀರಾಜ್ಯ ನೆರವೇರುವಂತೆ ತನ್ನ ಧಾರ್ಮಿಕ ಸಂವಾದದ ಮೂಲಕ ಇಷ್ಟಪಡುತ್ತದೆ.

ಚರ್ಚ್ ತಾನು ಧಾರ್ಮಿಕ ಸಂವಾದದಲ್ಲಿ ತೊಡಗುವುದರ ಮೂಲಕ ತನ್ನ ಧರ್ಮದಲ್ಲಿನ ತನ್ನ ನಂಬುಗೆಯನ್ನು ಇನ್ನಷ್ಟು ಬಲಪಡಿಸಿಕೊಳ್ಳಬಹುದೆಂದು ನಂಬುತ್ತದೆ. ಏಕೆಂದರೆ ಸಂವಾದದಲ್ಲಿ ಬೇರೆ ಧರ್ಮಿಯರು ಎತ್ತುವ ಪ್ರಶ್ನೆಗಳ ಮೂಲಕ ತನ್ನ ಧರ್ಮದ ವಿಧಿ ವಿಧಾನಗಳನ್ನು ಓರೆ-ಕೋರೆಗಳನ್ನು ಪ್ರಮಾಣಿಕವಾಗಿ ಪರಿಶೀಲಿಸಿ ಆತ್ಮಪರಿಶೋಧನೆ ಮಾಡಿಕೊಳ್ಳುವ ಅವಕಾಶ ಧಾರ್ಮಿಕ ಸಂವಾದದಲ್ಲಿ ಇದೆ ಎಂಬುದು ಚರ್ಚ್‌ನ ನಿಲುವಾಗಿದೆ.

"ವಿಶ್ವ ಧರ್ಮ ಕುರಿತು 'ಯೂನಿ ತಾತಿಸ್ ರೆಡೆನ್‌ತಿಗ್ರಾಸಿಯೊ' ಎಂಬ ದಾಖಲೆ ಕಥೋಲಿಕ ಮತ್ತು ಇತರ ಕ್ರೈಸ್ತರ ಸಂಬಂಧದ ಹೊಸ ಪರ್ವವನ್ನೇ ಆರಂಭಿಸಿತು. ತನ್ನ ಹಳೆಯ ಭಿನ್ನ ಭೇದಗಳನ್ನು

ಬದಿಗೊತ್ತಿ ಕಥೋಲಿಕ್ ಧರ್ಮಸಭೆ, ಕ್ರೈಸ್ತ ಧರ್ಮದ ಒಡಕಿನಲ್ಲಿ ತನ್ನ ಪಾಲನ್ನು ಒಪ್ಪಿಕೊಂಡಿತು. ಕ್ರೈಸ್ತ ಒಳ ಪಂಡಗಳ ನಂಬಿಕೆ ಮತ್ತು ಆಚರಣೆಗಳಿಂದ ಬೇರೆಯಾಗಿದ್ದರೂ, ಕಥೋಲಿಕರು ಅವರನ್ನು ಯೇಸುಕ್ರಿಸ್ತರಲ್ಲಿ ಸಹೋದರನ ಸಹೋದರಿಯರೆಂದು ಭಾವಿಸಬೇಕೆಂದು ಈ ದಾಖಲೆ ಹೇಳುತ್ತದೆ. ಕ್ರೈಸ್ತ ಒಳ ಪಂಗಡಗಳ ನಡುವೆ ಇರುವ ಭಿನ್ನತೆಗಳನ್ನು ಬದಿಗಿರಿಸಿ ಸಾಮಾನ್ಯ ನಂಬಿಕೆಗಳ ಬಗ್ಗೆ ಹೆಚ್ಚು ಒತ್ತು ಕೊಡುತ್ತದೆ."[೧೫]

ಬೇರೆ ಕ್ರೈಸ್ತರೊಂದಿಗೆ ಏಕತೆ ಸಾಧಿಸಲು ಕಥೋಲಿಕರು ವಿಶ್ವ ಕ್ರೈಸ್ತತೆಯ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಕರೆ ನೀಡಿ ವಾಸ್ತವಿಕ ಮಾರ್ಗಸೂಚಿಗಳನ್ನು ಸೂಚಿಸುತ್ತದೆ. ಕ್ರೈಸ್ತ ಒಳ ಪಂಗಡಗಳ ಹುಸಿ ಹೊಂದಾಣಿಕೆ ಸಂವಾದದ ಬಗ್ಗೆ ಕಥೋಲಿಕರಿಗೆ ವಿಶೇಷವಾದ ಎಚ್ಚರಿಕೆ ನೀಡುತ್ತದೆ. ಏಕತೆಗೋಸ್ಕರ ಕಥೋಲಿಕ್ ವಿಶ್ವಾಸವನ್ನೇ ಬಿಟ್ಟುಕೊಡುವುದರ ಬದಲಾಗಿ ಸಂವಾದಗಳ ಮೂಲಕ ಭಿನ್ನತೆ ಮತ್ತು ಸಾಮಾನ್ಯ ನಂಬಿಕೆಗಳನ್ನು ಕಂಡುಹಿಡಿಯಲು ಕರೆ ನೀಡುತ್ತದೆ.

"ಕ್ರೈಸ್ತೇತರ ಧರ್ಮಗಳನ್ನು ಕುರಿತು 'Nostra Aetate ಎಂಬ ಪತ್ರದಲ್ಲಿ ಇತ್ಯಾತ್ಮಕ ಪರಿಶೀಲನೆ ನಡೆಸಿತು. ಬೇರೆ ಧರ್ಮಗಳಲ್ಲಿರುವ ಯಾವುದೇ ಒಳಿತು ಮತ್ತು ಸತ್ಯಗಳನ್ನು ಕಥೋಲಿಕ್ ಧರ್ಮ ಸಭೆ ಗೌರವಿಸುತ್ತದೆ. 'ಇನ್ನೂ ಕ್ರೈಸ್ತ ಧರ್ಮವನ್ನು ಒಪ್ಪಿಕೊಳ್ಳದೇ ತಮ್ಮ ಮನಸಾಕ್ಷಿ ಮೂಲಕ ಕಂಡುಕೊಂಡ ಸತ್ಯವನ್ನು ಅನುಸರಿಸುತ್ತಿರುವವರಿಗೂ ದೇವರು ಕರುಣೆ ತೋರಿ ರಕ್ಷಣೆ ನೀಡುತ್ತಾರೆ; ಎಂದು ಈ ದಾಖಲೆ ಹೇಳುತ್ತದೆ. ಆದರೂ, ಮಾನವ ಕುಲದ ಪರಿಪೂರ್ಣ ರಕ್ಷಕ ಯೇಸುಕ್ರಿಸ್ತರೊಬ್ಬರೇ ಎಂಬುದನ್ನು ಕ್ರೈಸ್ತೇತರಿಗೆ ಸಾರುವುದನ್ನು ಕ್ರೈಸ್ತರು ನಿಲ್ಲಿಸಬಾರದೆಂದು ಈ ದಾಖಲೆ ಒತ್ತುಕೊಟ್ಟು ಹೇಳುತ್ತದೆ. ಈ ಸಂದೇಶವನ್ನು ಕೇಳಿಸಿಕೊಳ್ಳದ ಅನೇಕರು ಕಳೆದು ಹೋಗಬಹುದು ಎಂದು ಹೇಳುತ್ತದೆ.

ಕ್ರೈಸ್ತರೊಂದಿಗೆ ವಿಶೇಷ ಸಂಬಂಧವುಳ್ಳ ಹಾಗೂ ಯೇಸುಕ್ರಿಸ್ತರ ಬರುವಿಕೆಗೆ ನಿಷ್ಠೆಯಿಂದ ದಾರಿಯನ್ನು ಸೃಷ್ಟಿಸಿದ ಅಬ್ರಹಾಮ, ಮೋಶೆ ಮತ್ತು ಪ್ರವಾದಿಗಳ ಮೂಲಕ ವಿಶೇಷ ಸ್ಥಾನ ಪಡೆದಿರುವ, ಯೆಹೂದಿಗಳ ಬಗೆಗೆ ಈ ಘೋಷಣೆಯಲ್ಲಿ ವಿಶೇಷ ಕಾಳಜಿ ವ್ಯಕ್ತಪಡಿಸಲಾಗಿದೆ. ಈ ದಾಖಲೆಯಲ್ಲಿ ಯೆಹೂದಿಗಳಿಗೆ ವಿರೋಧವಾಗಿರುವ ಎಲ್ಲಾ ಭಾವನೆ ಅಥವಾ ಭಿನ್ನತೆಗಳನ್ನು ತಿರಸ್ಕರಿಸಲಾಗಿದೆ."[೧೬]

ವಿಶ್ವ ಮಾನವೀಯ ಸಂಬಂಧಗಳಿಗೆ ಸಂಬಂಧಿಸಿದಂತೆ ಇತರ ಕ್ರೈಸ್ತ ಪಂಗಡಗಳು ಕ್ರೈಸ್ತೇತರರು ಮತ್ತು ಜಗತ್ತಿನೊಂದಿಗಿನ ಸಂಬಂಧದ ವಿಷಯದಲ್ಲಿ ಕಥೋಲಿಕ್ ಧರ್ಮಸಭೆ ಅನೇಕ ಬೆಳವಣಿಗೆಗಳನ್ನು ಕಂಡಿತು. ವಿಶ್ವ ಕ್ರೈಸ್ತತೆ ಎಂಬುದು ಬಹುತೇಕ ಕಥೋಲಿಕರಿಗೆ ಹೊಸ ಶಬ್ಧವಾಗಿತ್ತು. ಉಳಿದ ಕ್ರೈಸ್ತ ಪಂಗಡದವರು ಸಹೋದರ ಸಹೋದರಿಯರೆಂಬ ಭಾವನೆ ಮೂಡಿಸುವಲ್ಲಿ ಹಾಗೂ ಪರಂಪರೆಗಳಲ್ಲಿ ನಿಜವಾದ ಮತ್ತು ಒಳ್ಳೆಯ ಅಂಶಗಳನ್ನು ಗೌರವಿಸುವಲ್ಲಿ ಸಹಾಯ ಮಾಡಿದೆ.

ಈ ಸಂವಾದಗಳನ್ನು ದ್ವಿತೀಯ ವ್ಯಾಟಿಕನ್ ಪರಿಷತ್ತು ಪ್ರೋತ್ಸಾಹಿಸಿತು. ಇದರ ಪರಿಣಾಮ ಶಾಂತಿ ಮತ್ತು ನ್ಯಾಯದ ಪ್ರತಿಪಾದನೆಗಾಗಿ ಸಮಾಜದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬ ಆಳವಾದ ಅರಿವು ಜನರಲ್ಲಿ ಉಂಟಾಯಿತು. ಸಾಮಾಜಿಕ ನ್ಯಾಯದ ಹಂಬಲ, ಬಡವರ ಬಗೆಗಿನ ಕಾಳಜಿ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಶೋಷಣೆಯಿಂದ ಸ್ವಾತಂತ್ರ್ಯದ ಬಯಕೆಗಳು ಧರ್ಮಸಭೆಯನ್ನು ವ್ಯಾಪಿಸಿಕೊಳ್ಳತೊಡಗಿತ್ತು.

೨.೫. ಧಾರ್ಮಿಕ ಸಂವಾದಗಳು ನಡೆದು ಬಂದ ದಾರಿ

"ಆದಿಯಿಂದ ಗುರು ತನಗೆ ಪ್ರಶ್ನೆ ಕೇಳಿದ ಶಿಷ್ಯನಿಗೆ ಉತ್ತರ ನೀಡುತ್ತಿದ್ದ. ಪ್ರಶ್ನೋತ್ತರಗಳನ್ನು ಸಂಭಾಷಣೆಯ ರೂಪದಲ್ಲಿ ದಾಖಲಿಸುತ್ತಿದ್ದರು. ಇದನ್ನು ಉಪನಿಷತ್‌ಗಳ ಕಾಲದಲ್ಲಿ ಸ್ಪಷ್ಟವಾಗಿ ಕಾಣಬಹುದು. ಪಾಶ್ಚಾತ್ಯ ಸಾಹಿತ್ಯದಲ್ಲಿ ಕೃತಕವಾದ ಇಲ್ಲವೆ ಊಹಾಪೋಹದ ಮಾತುಕತೆಗಳನ್ನು, ಸಂಭಾಷಣೆಗಳನ್ನು ದಾಖಲಿಸುವ ಪದ್ಧತಿ ಮಧ್ಯಯುಗೀನ ಕಾಲದ ಮುಂಚೆ ಜಾರಿಯಲ್ಲಿತ್ತು. ಮುಖ್ಯವಾಗಿ ಧರ್ಮ ಮತ್ತು ಅದಿಭೌತಿಕ ವಿಷಯಗಳ ಮೇಲೆ ಸಂಭಾಷಣೆಗಳನ್ನು ಊಹಾತ್ಮಕವಾಗಿ ಬರೆಯುತ್ತಿದ್ದರು. ಈ ಶೈಲಿಗೆ ಸ್ಪಷ್ಟ ಉದಾಹರಣೆ ಎಂದರೆ ಹದಿಮೂರನೆ ಶತಮಾನದ ಆದಿಭಾಗದಲ್ಲಿ ಐಸ್‌ಲ್ಯಾಂಡರ್ ಸ್ನೋರಿ ಸ್ಟರ್‌ಲರ್‌ಸನ್‌ನು ಬರೆದ Prose eddaದಲ್ಲಿ ಗಾಂಗ್‌ಲೇರಿಯು ನಾರ್‌ಸ್ ಪುರಾಣದ ಬಗ್ಗೆ ಮೂವರು ಪ್ರಶ್ನಾಕಾರರನ್ನು ಸೃಷ್ಟಿಸುತ್ತಾನೆ. ಈ ರೀತಿಯ ಪ್ರಶ್ನಾಕಾರರು ಮುಂದೆ ಅನೇಕ ಮಂದಿ ಬರುವುದನ್ನು ಕಾಣುತ್ತೇವೆ. Dialogue concerning natural Religion ಕೃತಿ ಬರೆದ ಡೇವಿಡ್ ಹ್ಯೂಮ್ (೧೭೭೯), ಆರ್.ಎ. ವಾಗನ್ ಬರೆದ 'Hours with the Mystics' (೧೮೫೬) ಮತ್ತು ನಿನಿಯನ್ ಸ್ಮಾರ್ಟ್ ಬರೆದ A dialogue of Religions ಕೃತಿಗಳಲ್ಲಿ ಈ ಶೈಲಿಯನ್ನು ಕಾಣಬಹುದು.

ಈ ಪ್ರಶ್ನೋತ್ತರ ಮಾದರಿಯ ಶೈಲಿಯನ್ನು ನಾಟಕ ಶಾಲೆಗಳಲ್ಲಿ ಕಾದಂಬರಿಗಳಲ್ಲಿ ತಿಳುವಳಿಕೆ ನೀಡಲು, ಬೋದಿಸಲು ಉಪಯೋಗಿಸುವುದನ್ನು ಕಾಣಬಹುದು. ಮುಂದೆ ಬಂದ ಮಾರ್ಟಿನ್ ಲೂಥರನ್‌ನ Tischreden (Table Talk 1566) ಕೃತಿಯ ರೀತಿಯಲ್ಲಿ ಸಂಭಾಷಣೆಗಳನ್ನು ದಾಖಲಿಸುವುದನ್ನು ಕಡಿತಗೊಳಿಸಲಾಗಿದೆ."[೧೭]

ಈ ರೀತಿಯ ಊಹಾತ್ಮಕ ಸಂಭಾಷಣೆಗಳು, ಸಂವಾದಗಳು ಕೆಲವೊಮ್ಮೆ ಅಂತರ್-ಧರ್ಮೀಯ ವಿವಾದಗಳಿಗೆ ತುತ್ತಾಗಿವೆ. ತನ್ನ ಧರ್ಮದ ವಿರೋಧಿಗೆ ಅವನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ ತನ್ನ ಧರ್ಮ ಶ್ರೇಷ್ಠವೆಂದು ಸಾರಿ ವಿರೋಧಿ ಧರ್ಮವನ್ನು ಖಂಡಿಸುವ ಪದ್ಧತಿ ಹೆಚ್ಚುಕಾಲ ಬಾಳಲಿಲ್ಲ. ವಾದ-ವಿವಾದ, ಸಾಕ್ಷಿ-ರುಜುವಾತುಗಳ ನಂತರ ಸೋತವನು ಗೆದ್ದವನಿಗೆ ಶರಣಾಗತನಾಗಿ ಗೆದ್ದವನು ಧರ್ಮವನ್ನು ಪಾಲಿಸಬೇಕಾದುದು ಧರ್ಮವಾಗಿತ್ತು. ಆದರೆ ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನದಲ್ಲಿ ವಿವಿಧ ಧರ್ಮಗಳ ಸಂಪ್ರದಾಯಗಳ ನಡುವೆ ಸಂಪರ್ಕ ಹೆಚ್ಚಿ ಧರ್ಮಗಳ ತಿರುಳುಗಳು ಅವುಗಳಲ್ಲಿನ ಆಚಾರ-ವಿಚಾರಗಳ ಬಗ್ಗೆ ಸಂವಾದಗಳು ಅನುಯಾಯಿಗಳ ಮಟ್ಟದಲ್ಲಿ ನಡೆದವು. ಅದೇ ಸಮಯದಲ್ಲಿ ಪಾಶ್ಚಾತ್ಯ ದೇಶಗಳು ಆರ್ಥಿಕವಾಗಿ ರಾಜಕೀಯವಾಗಿ ಬಲಾಢ್ಯವಾಗಿದ್ದವು. ಕ್ರೈಸ್ತ ಮಿಷಿನರಿಗಳಿಗೆ ಧರ್ಮ ಪ್ರಸಾರಕ್ಕೆ ಪ್ರಶಸ್ತವಾದ ವೇದಿಕೆ ಸಿದ್ಧವಾಗಿತ್ತು. ಅದೇ ಸಮಯದಲ್ಲಿ ಭಾರತದಲ್ಲಿ ಹಿಂದೂ-ಮುಸ್ಲಿಂ ಒಳ ಜಗಳಗಳು ನಡದೆ ಇದ್ದವು.

"ಈ ಎಲ್ಲದರ ಜೊತೆ ಪ್ರತಿಯೊಬ್ಬ ಬಾರತೀಯ ಹೆಮ್ಮೆ ಪಡುವಂತ ಕೆಲಸವನ್ನು ಧಾರ್ಮಿಕವಾಗಿ ಅಕ್ಬರ್ ಚಕ್ರವರ್ತಿ ಮಾಡಿದ. ಸುಮಾರು ೧೫೭೫ರಲ್ಲಿ ದೀನ್-ಇಲಾಹಿ ಎಂಬ ಸರ್ವ ಧರ್ಮಗಳ ಸಮ್ಮಿಲನವಾದ ಧರ್ಮವನ್ನು ಸ್ಥಾಪಿಸಿದ. ಇವನ ದರ್ಬಾರಿನಲ್ಲಿದ್ದ ಸೂಫಿ ಸಂತನೊಬ್ಬ ಈ ರೀತಿ ಉದ್ಗರಿಸಿದ."[೧೮]

'ನಿನ್ನ ಧರ್ಮ ಏನೇ ಇರಲಿ, ನಿನಗಿಂತ ವಿಭಿನ್ನವಾಗಿ ಚಿಂತಿಸುವರೊಂದಿಗೆ, ಜೀವಿಸು ನೀನು ವಿಭಿನ್ನ ಮತೀಯರೊಂದಿಗೆ, ಸ್ವಾತಂತ್ರವಾಗಿ ಬೆರೆಯಲಾಗದಿದ್ದರೆ ಮತ್ತು ಅವರ ಬೋಧನೆಗಳಿಂದ ನೀನು ಕೋಪೋದ್ರಿಕನಾಗದಿದ್ದರೆ, ಆಗ ನಿನಗೆ ಶಾಂತಿ ಲಭಿಸಿದೆ, ಮತ್ತು ಸೃಷ್ಟಿಯ ಕಲೆಯಲ್ಲಿ ನೀನು ಪ್ರವೀಣನಾಗಿರುವಿ.'

ಅಕ್ಬರ್ ಸ್ಥಾಪಿಸಿದ ದಿನ್-ಇ-ಲಾಹಿ ಧರ್ಮ ಆ ಕಾಲದಲ್ಲಿ ವಿವಿಧ ಧರ್ಮಗಳಿಗೆ ಭಾರತೀಯರು ಎಷ್ಟೊಂದು ಸಹಿಷ್ಣುತೆ ಹೊಂದಿದ್ದರು ಎಂಬುದನ್ನು ಕೋರಿಸುತ್ತದೆ.

"೧೯ನೇ ಶತಮಾನದ ಕಡೆಯ ಭಾಗದಲ್ಲಿ ವಿಶ್ವದ ಎಲ್ಲಾ ಧಾರ್ಮಿಕ ನಾಯಕರುಗಳನ್ನು ಒಂದೆಡೆ ಸೇರಿಸಿ, ಧಾರ್ಮಿಕ ವಿವಾದಗಳಿಗೆ ಮಂಗಳ ಹಾಡಿ, ಕೋಮು ಸಾಮರಸ್ಯ ತರುವತ್ತ ಯತ್ನಗಳು ನಡೆದವು, ಇದಕ್ಕೆ ಉದಾ:ಯಾಗಿ ೧೮೯೩ರಲ್ಲಿ ಅಮೇರಿಕಾದ ಚಿಕಾಗೋದಲ್ಲಿ ವಿಶ್ವಧರ್ಮಗಳ ಸಂಸತ್ತು ನಡೆಯಿತ್ತು. ಇದಕ್ಕೆ ವಿಶ್ವದ ಎಲ್ಲಾ ಧರ್ಮಗಳ, ಸಂಪ್ರದಾಯಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಸಂಸತ್ತಿನ ಮೂಲಕ ಶ್ರೀ ರಾಮಕೃಷ್ಣರ ಶಿಷ್ಯರಾದ ಸ್ವಾಮಿ ವಿವೇಕಾನಂದರ ಮೂಲಕ ಪಶ್ಚಿಮದಲ್ಲಿ ಹಿಂದೂ ಧರ್ಮದ ಪರಿಚಯ ಆರಂಭವಾಯಿತು. ಎಲ್ಲಾ ಧರ್ಮಗಳು ಪರಬ್ರಹ್ಮವನ್ನು ಹುಡುಕುವ ದಾರಿಗಳಾಗಿವೆ ಎಂಬ ಅಂಶವನ್ನು "ತಿಯೋ ಸೆಫಿಕಲ್ ಸೊಸೈಟಿ" ಬಲವಾಗಿ ಸಮರ್ಥಿಸಿತು. ಇದಾದ ನಂತರ ಚಿಕಾಗೋ ಧಾರ್ಮಿಕ ಸಂಸತ್ತಿನ ಸ್ಫೂರ್ತಿಯ ಮುಂದುವರಿದ ಭಾಗವಾಗಿ ಅಂತರರಾಷ್ಟ್ರೀಯ ಐಕ್ಯತಾ ಸಮಿತಿ ಮತ್ತು ಉದಾರವಾದಿ ಧಾರ್ಮಿಕ ತತ್ವ ಶಾಸ್ತ್ರಜ್ಞರು ಹಾಗೂ ಸಹಾಯಕರು ೧೯೦೧ ರಿಂದ ೧೯೧೩ರ ವರೆಗೆ ಕೆಲಸ ಮಾಡಿದರು ಈ ಸಮಿತಿಯ ಮುಖ್ಯ ಗುರಿ ಒಬ್ಬ ಧರ್ಮೀಯರಿಗೆ ಇನ್ನೊಬ್ಬ ಧರ್ಮವನ್ನು ಪರಿಚಯಿಸುವುದು, ಧರ್ಮಗಳ ವಿಶ್ವಾತ್ಮಕ ಅಂಶಗಳಿಗೆ ಒತ್ತು ನೀಡುವುದು ಪ್ರಪಂಚದ ನೈತಿಕತೆಯನ್ನು ಎತ್ತಿ ಹಿಡಿಯುವುದೇ ಆಗಿತ್ತು. ಮೊದಲನೇ ಮಹಾಯುದ್ಧದಿಂದಾಗಿ ಇವರ ಯತ್ನಗಳಿಗೆ ಕೊಂಚ ತಡೆಯುಂಟಾಯಿತು. ಯುದ್ಧದ ನಂತರ ೧೯೨೯ರಲ್ಲಿ 'World Fellowship of faiths.' ಸಮ್ಮೇಳನವು ನಡೆಯಿತು.

ಎಂಟು ವರ್ಷಗಳ ತರುವಾಯ ರೂಡಾಲ್ಫ್ ಓಟೋ ಎಂಬುವವನು ಅಂತರ್ ಧರ್ಮೀಯ ಕೂಟವನ್ನು ಸ್ಥಾಪಿಸಿದ ಇದರ ಮುಖ್ಯ ಉದ್ದೇಶ ಎಲ್ಲಾ ಆ ಧರ್ಮಗಳ ಆಸ್ತಿಕರನ್ನು ಸೇರಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೊಂದಲ ಮತ್ತು ಒತ್ತಡವನ್ನು ಕಡಿಮೆ ಮಾಡುವುದೇ ಆಗಿತ್ತು.

ಹಿಂದೂಗಳು ಧಾರ್ಮಿಕ ಸಂವಾದಕ್ಕೆ ಹೆಚ್ಚಿನ ಮುಕ್ತ ಮನಸ್ಸನ್ನು ಹೊಂದಿದ್ದರು. ಸರ್ವೆಪಲ್ಲಿ ರಾಧ

ಕೃಷ್ಣನ್ ವಿವಿಧ ಧರ್ಮಗಳನ್ನು ಅಭ್ಯಾಸ ಮಾಡಿ ಎಲ್ಲಾ ಧರ್ಮಗಳು ಅದೇ ಗುರಿ, ಅದೇ ತೊಳಲಾಟ ಅದೇ ನಂಬಿಕೆಯನ್ನು ಒಂದಿವೆ ಎಂಬುದಾಗಿ ಅಂತಾರಾಷ್ಟ್ರೀಯ ವಕ್ತಾರರಾಗಿ ತಿಳಿಸುತ್ತಾರೆ.

"ಯುದ್ಧಗಳ ನಡುವೆಯು ಜಾಗತಿಕ ಮಟ್ಟದಲ್ಲಿ ಅಲ್ಲಲ್ಲಿ ಧಾರ್ಮಿಕ ಸಂವಾದಗಳು ನಡೆಯುತ್ತವೆ ಇದ್ದವು. ಧಾರ್ಮಿಕ ಸಂಪತ್ತುಗಳು, ಸಮ್ಮೇಳನಗಳು, ಸಮಿತಿಗಳು ವಿಶ್ವಸಂಸ್ಥೆಯ ಮಾದರಿಯಲ್ಲೇ ಧಾರ್ಮಿಕ ನಾಯಕರುಗಳನ್ನು ಸಮಾನ ಧ್ಯೇಯ ಗುರಿಗಳೊಂದಿಗೆ ಒಂದುಗೂಡಿಸುವ ಯತ್ನ ನಡೆಸುತ್ತಾ ಜೊತೆಗೆ ಎಲ್ಲಾ ಕ್ರೈಸ್ತ ಪ್ರಮುಖ ಒಳಪಂಗಡಗಳ ಸಂವಾದಗಳು ನಡೆದವು. ಮೊದಲನೇ ಮಹಾಯುದ್ಧದ ಕಾಲದಲ್ಲಿ ಗೊಂದಲದಿಂದ ಕೂಡಿದ್ದ ಸಮಯದಲ್ಲಿ ಧಾರ್ಮಿಕ ಸಂವಾದದ ಪದ ತನ್ನ ಆಧುನಿಕ ಅರ್ಥದೊಂದಿಗೆ ಪ್ರವೇಶಿಸಿತ್ತು. ಮಾರ್ಟಿನ್ ಭೂಬೇರ್ ಎಂಬುವವನು ನಾನು ಮತ್ತು ನೀನು ಎಂಬ ಪ್ರಣಾಳಿಕೆಯನ್ನು ಹೊರತಂದು ಪ್ರತಿಯೊಬ್ಬ ವ್ಯಕ್ತಿಯನ್ನು ಸ್ವೀಕರಿಸಿ ಮನುಷ್ಯರಂತೆ ಸ್ವೀಕರಿಸುವುದಕ್ಕೆ ಆಗ್ರಯಿಸಿದನು. ಸ್ವತಃ ಯಹೂದಿಯಾಗಿದ್ದ ಭೂಬೇರ್ ಜನಾಂಗೀಯ, ಧಾರ್ಮಿಕ ಆರ್ಥಿಕ ತುಳಿತಕ್ಕೆ ಒಳಗಾಗಿದ್ದನು.

ಎರಡನೇ ಮಹಾಯುದ್ಧದ ನಂತರವೇ ಧಾರ್ಮಿಕ ಸಂವಾದ ಹೆಚ್ಚು ಹೆಚ್ಚು ಪ್ರವರ್ಧಮಾನಕ್ಕೆ ಬರತೊಡಗಿತ್ತು. ಆ ಸಮಯದಲ್ಲಾಗಲೇ ರಾಜಕೀಯ ಮತ್ತು ಧಾರ್ಮಿಕ ಪದ್ಧತಿಗಳು ಪ್ರಪಂಚದಲ್ಲಿ ಶೀಘ್ರವಾಗಿ ಬದಲಾಗತೊಡಗಿದವು ಅನೇಕ ಸ್ವತಂತ್ರ ರಾಷ್ಟ್ರಗಳು ಉದಯವಾಗತೊಡಗಿದವು. ಹಿಂದೂಗಳಿಗಾಗಿ ಹಿಂದೂಸ್ಥಾನ್ ಮುಸ್ಲಿಂಮರಿಗಾಗಿ ಪಾಕಿಸ್ತಾನ್ ಉದಯವಾಯಿತು. ಹಿಂದೂ ಮುಸ್ಲಿಂ ಧಾರ್ಮಿಕ ಸಂವಾದ ಯಶಸ್ವಿಯಾಗಲೇ ಇಲ್ಲ ಪಾಶ್ಚಿಮಾತ್ಯ ರಾಷ್ಟ್ರಗಳು ಕ್ರೈಸ್ತ ಧರ್ಮದ ಪ್ರಗತಿಪರ ಮತ್ತು ಸಂಪ್ರದಾಯವಾದಿಗಳ ನಿಲುವುಗಳ ನಡುವೆ ಸಿಲುಕಿತು.

ಈ ಒಂದು ಹಿನ್ನೆಲೆಯಲ್ಲಿ ಧಾರ್ಮಿಕ ಸಂವಾದಗಳು ೧೯೬೦-೭೦ರ ದಶಕದಲ್ಲಿ ತಾರಾತೊಲಿಕ್ ಮತ್ತು ಪ್ರೊಟ್ಸೆಂಡ್‌ರ ನಡುವೆ ಹಾಗೂ ತೃತೀಯ ಜಗತ್ತಿನಲ್ಲಿ ಜನಪ್ರಿಯವಾಗಿ ಮೂಡಿಬಂದವು.[೧೯]

ಕೊನೆ ಟಿಪ್ಪಣಿ

೧. Mircea Eliade (Editor in chief), *The Encyclopedia of Religion,* Volume 12. Page 335

೨. ಅದೇ ಪುಟ ೩೩೫

೩. ಸ್ವಾಮಿ ಸೋಮನಾಥಾನಂದ, ಉಪನಿಷತ್ ಭಾವಧಾರೆ, ಕಠೋಪನಿಷತ್, ಪುಟ. ೧೨೪

೪. ಸ್ವಾಮಿ ಯತೀಶ್ವರಾನಂದ, ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ, ಪುಟ ೪

೫. ಸ್ವಾಮಿ ಸೋಮನಾಥಾನಂದ, ಉಪನಿಷತ್ ಭಾವಧಾರೆ, ಬೃಹದಾರಣ್ಯಕ ಉಪನಿಷತ್, ಪುಟ. ೩೨೦

೬. Mircea Eliade (Editor in chief), *'The Encyclopedia of Religion',* Volume 12. Page 337

೭. *'The observer'* october 24, 1954 p. 6.

೮. Y. Masih, 'A Comparative Study of Religions', P. 8

೯. ಅದೇ ಪುಟ ೧೪

೧೦. D. Barnettr, 'W0rld Christian encyclopedia', P. 782

೧೧. 'ಎರಡನೇ ವ್ಯಾಟಿಕನ್ ಮಂಜರಿ', ಪುಟ. ೩೩

೧೨. Fr. Felix Machado, 'The Teaching of christianity', P. 106

೧೩. ಯೊವಾನ್ನ ೧-೧೬

೧೪. Dr. Emilia pao la pacelli, ed., 'Omnis Terra', May. 2001 P. 201

೧೫. ಸಂಚಲನ, 'ಚರ್ಚ್ ಇತಿಹಾಸ', ೧೯೯೯ ಪುಟ. ೧೪೪

೧೬. ಅಲ್ಲೇ ಪುಟ. ೧೪೫

೧೭. Mircea Eliade (Editor in chief), The Encyclopedia of Religion, Volume 12. Page 341

೧೮. ಅಲ್ಲೇ ಪುಟ ೩೪೨

೧೯. ಅಲ್ಲೇ ಪುಟ ೩೪೩

ಅಧ್ಯಾಯ - ೩

ಕರ್ನಾಟಕದಲ್ಲಿನ ಧಾರ್ಮಿಕ ಸಂವಾದದ ಪರಂಪರೆಗಳು

೩.೧ ಆಚಾರ್ಯ ಪರಂಪರೆ ಮತ್ತು ಧಾರ್ಮಿಕ ಸಂವಾದಗಳು

"ಮಾನವನಿಗೆ ತಾನು ಮತ್ತು ತನ್ನ ಸುತ್ತಲೂ ಇರುವುದು ಮೊದಲು ಕಾಣಬಂದು, ಆಮೇಲೆ ಇವೆರಡಕ್ಕೂ ಕಾರಣವಾದುದೊಂದು ಇರಬಹುದು ಎಂಬ ಕಲ್ಪನೆ ಬಂದಿತು. ಹೀಗೆ ನಾವು ಇರುವ ಈ ಪ್ರಪಂಚದ ಮೂರು ತತ್ತ್ವಗಳಾದ ಚಿತ್-ಅಚಿತ್-ಈಶ್ವರ ಅಥವಾ ಪುರುಷ-ಪ್ರಕೃತಿ-ಪರಮಾತ್ಮ ಅಥವಾ ಜೀವ-ಜಗತ್ತು-ಜಗನ್ನಿಯಾಮಕ ಈ ಮೂರನ್ನು ವಿವರಿಸಿ ಇವುಗಳ ಪರಸ್ಪರ ಸಂಘಟನೆ-ಸಂವಾದಗಳನ್ನು ತಿಳಿಸುವುದೇ ಎಲ್ಲ ದರ್ಶನ, ಶಾಸ್ತ್ರ, ಸಿದ್ಧಾಂತಗಳ ಗುರಿಯಾಗಿದೆ.[೧]

ಈ ಸಿದ್ಧಾಂತಗಳನ್ನು ಜನರಿಗೆ ತಿಳಿಹೇಳುವ ಒಂದು ವರ್ಗದ ಆಚಾರ್ಯರು ತಮ್ಮಗಳ ಜೀವಿತಾವಧಿಯಲ್ಲೆ ತಮ್ಮ ವಾದಗಳನ್ನು ಸಿದ್ಧಾಂತಗಳನ್ನು ಕಟ್ಟಿ ಅವಕ್ಕೆ ರೂಪಕೊಟ್ಟು ಅವನ್ನು ಪ್ರಚುರ ಪಡಿಸುತ್ತಾರೆ. ಇಂತಹ ಆಚಾರ್ಯರುಗಳು ಸಮಾಜದ ಅಂಕುಡೊಂಕುಗಳನ್ನು ತಿದ್ದುವುದಕ್ಕಾಗಲಿ ಮತ್ತೊಂದಕ್ಕಾಗಲಿ ಕೈಹಾಕದೆ ಮಠದೊಳಗಿದ್ದ ಕೇವಲ ಧಾರ್ಮಿಕ, ಆಧ್ಯಾತ್ಮಿಕ, ಪರಮಾರ್ಥಿಕದತ್ತ ಗಮನ ಹರಿಸುತ್ತಾರೆ.

"ಆಚಾರ್ಯ ಪರಂಪರೆಗೆ ಉದಾಹರಣೆಯಾಗಿ ಶಂಕರ, ಮಾಧ್ವ, ರಾಮಾನುಜ ಹಾಗೂ ಇತರೆ ಆಚಾರ್ಯರು ನಿಲ್ಲುತ್ತಾರೆ. ಇವರು ಸಮಾಜವನ್ನು ಅದರ ಅಸಮಾನತೆಯನ್ನು ತಿದ್ದುವುದಕ್ಕೆ ಕೈಹಾಕಿದ್ದರಿಂದ ಸಮಾಜ ಇವರು ಜೀವಂತವಾಗಿದ್ದರೂ ಗೌರವಿಸುತ್ತದೆ. ಇವರು ಸತ್ತ ನಂತರವು ಗೌರವಿಸುತ್ತದೆ. ಆರಂಭದಲ್ಲಿ ದೇವಾಲಯದ ಅರ್ಚಕ, ಮಠದ ಆಚಾರ್ಯರು ಧರ್ಮದ ಹೆಸರಿನಲ್ಲಿ ಪುರೋಹಿತ ಸತ್ತೆಯನ್ನು ಗಟ್ಟಿಗೊಳಿಸಿದರು.[೨] ಬಸವಣ್ಣನ ಕಾಲದ ಹೊತ್ತಿಗೆ ಈ ಆಚಾರ್ಯ ಪರಂಪರೆ ಸಮೃದ್ಧವಾಗಿ ಮಠಮಾನ್ಯಗಳಲ್ಲಿ ಬೆಳೆದು ನಿಂತಿತ್ತು. ಆಚಾರ್ಯ ಪರಂಪರೆಗೆ ಪ್ರತಿಯಾಗಿ ಪ್ರವಾದಿ ಪರಂಪರೆ ಬೆಳೆಯುವುದನ್ನು ಇತಿಹಾಸದ ಕಾಲಘಟ್ಟದಲ್ಲಿ ನೋಡಬಹುದಾಗಿದೆ. ಆಚಾರ್ಯ ಪರಂಪರೆ ಮತ್ತು ಧಾರ್ಮಿಕ ಸಂವಾದಗಳ ಹಿನ್ನೆಲೆಯಲ್ಲಿ ಆಚಾರ್ಯತ್ರಯರಾದ ಶಾಂಕರ, ರಾಮಾನುಜ ಮತ್ತು ಮಧ್ವರ ಸಿದ್ಧಾಂತಗಳಾದ ಅದ್ವೈತ, ವಿಶಿಷ್ಟಾದ್ವೈತ ಹಾಗೂ ದ್ವೈತವನ್ನು ಅವಲೋಕಿಸಿ ಯೇಸುಕ್ರಿಸ್ತ ಹಾಗೂ ಆಚಾರ್ಯ ಪರಂಪರೆಯಲ್ಲಿನ ಬೋಧನೆಗಳ ಸಮಾನ ಅಂಶಗಳನ್ನು ಎತ್ತಿ ತೋರಿಸುವ ಯತ್ನ ಇಲ್ಲಿದೆ.

ಶಾಂಕರನ 'ಏಕಂ ಏವಂ ಅದ್ವಿತೀಯ ಬ್ರಹ್ಮ', ಕೆಲವೊಮ್ಮೆ ಯೇಸುಕ್ರಿಸ್ತನು ನಾನೂ ತಂದೆಯೂ ಒಂದೇ ಆಗಿದ್ದೇವೆ ಎನ್ನುವ ಕ್ರೈಸ್ತಾದ್ವೈತಕ್ಕೆ ಸಂವಾದಿಯಾಗಿ ನೆಲೆ ನಿಲ್ಲುವಂತೆ ಕಾಣುತ್ತದೆ. ಅದೇರೀತಿ ರಾಮಾನುಜನ ಬೋಧನೆ ಹಾಗೂ ಯೇಸುಕ್ರಿಸ್ತನ ಬೋಧನೆಗಳನ್ನು ಅವಲೋಕಿಸುವಾಗ ಇವರಿಬ್ಬರ

ಸಮಾನ ಬೋಧನೆಗಳು ಇಡೀ ಜಗತ್ತಿನ ಜನತೆಯು ಅನುಸರಿಸಬಹುದಾದ ಪ್ರಣಾಳಿಕೆಗಳಾಗುವಂತೆ ಕಾಣುತ್ತವೆ.

ಮಧ್ವರ ಸಿದ್ಧಾಂತ ಕ್ರೈಸ್ತ ಸಿದ್ಧಾಂತಕ್ಕೆ ತುಸು ವ್ಯತಿರಿಕ್ತವಾಗಿದ್ದರೂ ಇಬ್ಬರ ಜೀವನದಲ್ಲಿ ಕಾಕತಾಳಿಯವೆನ್ನುವಷ್ಟು ಸಮಾನ ಅಂಶಗಳಿವೆ. ಆದರೆ, ಜೀವ ಜೀವರಲ್ಲಿ ಬೇಧಗಳಿವೆ. ಎಲ್ಲರೂ ಸಮಾನರಲ್ಲ ಎಂಬ ಅಂಶ ವಿವಾದಕ್ಕೆ ಒಳಗಾಗಿದ್ದರೂ; ಮಧ್ವರು ಪ್ರತಿಪಾದಿಸಿದ 'ಭಕ್ತಿ' ಸರ್ವಕಾಲಕ್ಕೂ ಅನುಸರಣೆಯ ಯೋಗ್ಯವಾದುದು.

ಶಂಕರಾಚಾರ್ಯ, ಮಧ್ವಾಚಾರ್ಯ ಮತ್ತು ರಾಮಾನುಜಾಚಾರ್ಯ ಈ ಮೂವರು ಕರುನಾಡಿನ ಜನ ಜೀವನದಲ್ಲಿ ಹಾದುಹೋಗಿದ್ದಾರೆ. ಈ ಹಿನ್ನೆಲೆಯಲ್ಲಿ ಇವರೊಂದಿಗೆ ಯೇಸುಕ್ರಿಸ್ತನ ಧಾರ್ಮಿಕ ಸಂವಾದವು ಔಚಿತ್ಯಪೂರ್ಣವಾಗಿದೆ.

೩.೧.೧ ಶಂಕರಾಚಾರ್ಯ-ಅದ್ವೈತ ಸಿದ್ಧಾಂತ

ಸುಮಾರು ಸಾವಿರದ ಇನ್ನೂರು ವರ್ಷಗಳ ಹಿಂದೆ ಭಾರತೀಯ ದರ್ಶನಾಕಾಶದಲ್ಲಿ ಬೆಳಗಿದ ಉಜ್ವಲ ತಾರೆ ಆದಿಗುರು ಶಂಕರಾಚಾರ್ಯ. ಅಲ್ಪಾಯುಷ್ಯದಲ್ಲಿಯೇ ಅವರ ಶರೀರನಾಶವಾದರೂ ಅಕ್ಷರ ಶರೀರದಿಂದ ಅವರಿನ್ನೂ ಹೊಳೆಯುತ್ತಲೆ ಇದ್ದಾರೆ. "ಶಂಕರಾಚಾರ್ಯ ಎಂಟನೇ ಶತಮಾನದಲ್ಲಿ ಕೇರಳದ ಕಾಲಟಿ ಪ್ರಾಂತ್ಯದಲ್ಲಿ ಜನ್ಮತಾಳಿ ಬಾಲ್ಯದಲ್ಲೇ ಸನ್ಯಾಸ ಸ್ವೀಕರಿಸಿ ಗೋವಿಂದ ಭಗವತ್ಪಾದರಲ್ಲಿ ಶಿಷ್ಯವೃತ್ತಿ ಮಾಡಿದ. ಪ್ರಸ್ಥಾನ ತ್ರಯಗಳಾದ ಶ್ರೀ ಭಗವದ್ಗೀತೆ, ಬ್ರಹ್ಮಸೂತ್ರ, ಉಪನಿಷತ್ತುಗಳಿಗೆ ಭಾಷ್ಯಗಳನ್ನು ರಚಿಸಿದ ಅದ್ಭುತ ಪ್ರತಿಭೆ, ಪಾಂಡಿತ್ಯ ಹೊಂದಿದ್ದ ಆತ ವಿದ್ವತ್ತಿನ ಮೇರು ಶಿಖರವಾಗಿದ್ದ."[೩]

ಸಮಗ್ರ ಭಾರತವನ್ನು ಸುತ್ತಿ ಅವೈದಿಕ ಸಿದ್ಧಾಂತಗಳನ್ನು ಖಂಡಿಸಿ ಅದರ ಅನುಯಾಯಿಗಳನ್ನು ಮೂಲ ವಾಹಿನಿಗೆ ಸೇರಿಸಿದ. ನಿರ್ಗುಣ ಬ್ರಹ್ಮೋಪಾಸಕನು, ತಾರ್ಕಿಕನು ಆಗಿದ್ದ ಶಂಕರನು ಭಕ್ತಿವರೇಣ್ಯನು ಆಗಿದ್ದ[೪] ಜ್ಞಾನಿಯಾಗಿದ್ದರೂ ಭಕ್ತಿ ಮಾರ್ಗ ಪ್ರತಿಪಾದನೆ ಮಾಡಿ ಅನೇಕ ಸ್ತೋತ್ರಗಳನ್ನು ರಚಿಸಿ ಜನ ಸಾಮಾನ್ಯರನ್ನು ಭಕ್ತಿ-ಜ್ಞಾನ-ವೈರಾಗ್ಯದ ಮೂಲಕ ಬ್ರಹ್ಮನನ್ನು ಅರಿಯುವಂತೆ ಪ್ರೇರೇಪಿಸಿದ.

ತಾನು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತದ ಪರಂಪರೆ ಮುಂದುವರಿಯುವುದಕ್ಕಾಗಿ ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದ. ತನ್ನ ಮೂವತ್ತೆರಡನೇ ವಯಸ್ಸಿನಲ್ಲಿ ಆತ ಮುಕ್ತನಾದ.

"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಽ ಪರಃ"

ಬ್ರಹ್ಮವು ಸತ್ಯ, ಜಗತ್ತು ಮಿಥ್ಯೆ, ಜೀವವು ಬ್ರಹ್ಮವೇ ಅದಕ್ಕಿಂತ ಬೇರೆಯಲ್ಲ. ಇದೇ ಅದ್ವೈತ ಮತದ ಸಾರ ಸರ್ವಸ್ವ. ಇದು ಅದ್ವೈತ ವೇದಾಂತದ ಡಿಂಡಿಮ ಘೋಷ.[೫] ಅದ್ವೈತ ಎಂದರೇನು? ಎಂದರೆ ಎರಡಲ್ಲದಿರುವುದು. ಬ್ರಹ್ಮ ಮತ್ತು ಆತ್ಮ ಇವೆರಡೂ ಒಂದೇ, ಇದನ್ನುಳಿದು ಬೇರೇನೂ ಇಲ್ಲ ಎಂಬುದೇ ಅದ್ವೈತ ಜ್ಞಾನ. ನಾನು-ನೀನು, ಅವನು-ಅವಳು, ನಾನು-ಅವನು; ಅವನು-ನಾನು; ಮನುಷ್ಯ-ಜಗತ್ತು, ಮನುಷ್ಯ-ಭಗವಂತ ಹೀಗೆ ವಿಂಗಡ ಮಾಡುವುದೇ ದ್ವೈತ. ಇವು ಬೇರೆ ಬೇರೆಯಲ್ಲ ಒಂದೇ ಎನ್ನುವುದೇ ಅದ್ವೈತ.

"ಅದ್ವೈತ ಸಿದ್ಧಾಂತದಲ್ಲಿ ಪ್ರತಿಪಾದಿಸಿರುವ ವಿಷಯಗಳು ಮುಖ್ಯವಾಗಿ ಎಂಟು- ೧) ಬ್ರಹ್ಮ ೨) ಜಗತ್ತು ೩) ಮಾಯೆ ೪) ಈಶ್ವರ ೫) ಜೀವ ೬) ಸೃಷ್ಟಿ ೭) ಸಂಸಾರ ಬಂಧನ ೮) ಮೋಕ್ಷ"[೬]

ಬ್ರಹ್ಮ ಮತ್ತು ಆತ್ಮ ಎರಡೂ ಒಂದೇ. ಶ್ರುತಿಗಳು ಬ್ರಹ್ಮವನ್ನು ಆತ್ಮನೆಂದೇ ಕರೆದಿವೆ. ಬ್ರಹ್ಮವು ನಮ್ಮ ಆತ್ಮದ ಆತ್ಮ. ಪರಮಾತ್ಮನು ನಮ್ಮ ಹೃದಯದಲ್ಲೇ ಇರುವವನು. ಅವನು ಒಂದು ಫಲಕ, ಅದರ ಮೇಲೆ ಮೂಡಿ ಮೆರೆಯುವ ಬಣ್ಣದ ಬೊಂಬೆಗಳು ನಾವು. ನಮ್ಮ ಅಸ್ತಿತ್ವದ ನೆಲೆಗಟ್ಟೆ ಅವನು. ಈ

ಬ್ರಹ್ಮವು ತಾನು ಅಭಿವ್ಯಕ್ತಿಗೊಂಡು ಆನಂದ ಪಡಲು ಮಾಡಿಕೊಂಡ ಒಂದು ಮುಖವೇ ಆತ್ಮ. ಈ ಆತ್ಮನು ಧರಿಸಿರುವ ದೇಹವೆಂಬ ಹೊದಿಕೆಯೇ ಈ ವ್ಯತ್ಯಾಸಕ್ಕೆ ಕಾರಣ. ಬ್ರಹ್ಮನನ್ನು ನೇರವಾಗಿ ಅರಿಯಲಾರದವರು ನಾಮರೂಪಾತೀತನಾದ ಈ ಬ್ರಹ್ಮಕ್ಕೆ ನಾಮರೂಪಾದಿಗಳನ್ನು ಕೊಟ್ಟು ಉಪಾಸಾನಾರ್ಥವಾಗಿ ಇಟ್ಟುಕೊಳ್ಳುತ್ತಾರೆ.

ಈ ಬ್ರಹ್ಮ ಅಥವಾ ಆತ್ಮ ಎನ್ನುವುದು ಭೌತವಸ್ತುವಲ್ಲ. ಇದಕ್ಕೆ ದೇಹವಿಲ್ಲ, ರೂಪವಿಲ್ಲ, ಇಂದ್ರಿಯಗಳಲ್ಲಿ, ಮನಸ್ಸೂ ಇಲ್ಲ, ಬುದ್ಧಿಯೂ ಇಲ್ಲ, ಅಹಂಕಾರವೂ ಇಲ್ಲ, ಯಾವ ಗುಣ ವಿಶೇಷವೂ ಇಲ್ಲ, ಇದಕ್ಕೆ ವಿಶಿಷ್ಟವಾದ ಯಾವ ಗುರುತೂ ಇಲ್ಲ. ಇದು ಎಲ್ಲಾ ದೇಶ-ಕಾಲ-ವಸ್ತುವನ್ನು ಒಳಗೊಂಡಿರುವುದು; ಅವುಗಳನ್ನು ವ್ಯಾಪಿಸಿರುವುದು. ಇದಕ್ಕೆ ಬಹುವಚನ ಪ್ರಯೋಗವಿಲ್ಲ. ಇದನ್ನು ಹೊರಗಿನ ಪರೀಕ್ಷೆಗಳಿಂದ ರುಜುವಾತು ಮಾಡಲಾಗುವುದಿಲ್ಲ. ಅನುಮಾನ, ಪ್ರಮಾಣ ಅಥವಾ ತರ್ಕದಿಂದ ಸಿದ್ಧಪಡಿಸಲೂ ಆಗುವುದಿಲ್ಲ. ಇದು ವಾಙ್ಮನಸ್ಸುಗಳಿಗೆ ಗ್ರಾಹ್ಯವಲ್ಲ. ಈ ಬ್ರಹ್ಮವೇ ನಮ್ಮೆಲ್ಲರ ಆತ್ಮ. ಇದೇ ಸತ್-ಚಿತ್ ಆನಂದ ರೂಪವಾದದ್ದು".[೭]

ಆತ್ಮವು ಉದಯಿಸುವುದು ಇಲ್ಲ, ಅಸ್ತಂಗತವಾಗುದು ಇಲ್ಲ. ಶರೀರವು ಹುಟ್ಟಿದರೆ ಆತ್ಮ ಹುಟ್ಟಿದಂತಲ್ಲ, ಅದು ಹೋದರೂ ಆತ್ಮ ಹೋದಂತೆಯೂ ಅಲ್ಲ- ಜೀವಾತ್ಮ ಎಂದು ನಾವು ಯಾವುದನ್ನು ಕರೆಯುತ್ತೇವೆಯೋ ಅದೇ ಈ ದೇಹವನ್ನು ಆಳುತ್ತಿರುವ ಚೇತನ. ಅದೇ ಪ್ರಾಣಾಧಾರವಾದುದು.

ಇನ್ನು ಅದ್ವೈತದಲ್ಲಿ 'ಮಾಯೆ' ಎಂಬುದು ಬಹಳ ಪ್ರಮುಖವಾದ ಪರಿಕಲ್ಪನೆ. ಮಾಯೆ ಎಂದರೆ ವಸ್ತುಗಳ ಸ್ಥಾನಪಲ್ಲಟ. ಉಪಾದಿಯನ್ನುಂಟುಮಾಡುವುದು, ಇಲ್ಲದಿರುವುದನ್ನು ಇರುವಂತೆ ತೋರಿಸಿಕೊಡುವಂಥಾದ್ದು. ಇದು ಸತ್ಯವನ್ನು ಮುಚ್ಚಿ ಅಸತ್ಯವನ್ನು ಮುಂದೆ ಒಡ್ಡುತ್ತದೆ. ಹೀಗೆ ಮುಚ್ಚುವ ಶಕ್ತಿಯನ್ನು 'ಆವರಣ'ವೆಂದು, ಮುಂದೆ ಒಡ್ಡುವುದನ್ನು 'ವಿಕ್ಷೇಪ' ಎಂದೂ ಕರೆಯುತ್ತಾರೆ.

"ಶಂಕರಾಚಾರ್ಯರು ವ್ಯವಹಾರ ಕಾಲದಲ್ಲಿ ಈ ಪ್ರಪಂಚವನ್ನು ಒಪ್ಪಿಕೊಳ್ಳುತ್ತಾರೆ ಆದರೆ, ಪರಮಾರ್ಥ ದೆಸೆಯಲ್ಲಿ ನಿರಾಕರಿಸುತ್ತಾರೆ. ಇಲ್ಲಿ ಮಿಥ್ಯಾ ಎಂದರೆ ಅಸತ್ಯವಲ್ಲ ಬದಲಾಗಿ ಸದಾ ಬದಲಾವಣೆ ಹೊಂದುತ್ತಿರುವುದು, ತೋರಿ ಅಡಗುವುದೆಂದರ್ಥ. ಬ್ರಹ್ಮವನ್ನು ತಿಳಿಯಬೇಕಾದರೆ ಆತ್ಮ ವಿಚಾರ ಮಾಡಬೇಕು. ಅಂದರೆ 'ನಾನು' ಎಂಬುವುದರಿಂದ 'ನಾನಲ್ಲ' ಎಂಬುದನ್ನೆಲ್ಲಾ ಕಳೆಯುತ್ತಾ ಬರಬೇಕು, ವಿಶ್ಲೇಷಿಸಬೇಕು. ಆಗ 'ನಾನು' ಎಂಬುದು 'ಬ್ರಹ್ಮ' ಎಂದು ಅರಿವಾಗುತ್ತದೆ.

"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ"- ಇದೇ ಅದ್ವೈತ ಸಿದ್ಧಾಂತದ ಸಾರ, ಅಡಿಗಲ್ಲು, ಮೂಲ ಮಂತ್ರ. ಈ ಸಿದ್ಧಾಂತ ಪ್ರಾಚೀನವಾದುದು. ಉಪನಿಷತ್ತುಗಳಲ್ಲಿ ಅದ್ವೈತ ಪರವಾದ ವಾಕ್ಯಗಳು ಹೇರಳವಾಗಿವೆ. ಶ್ರೀಶಂಕರನು ಅದ್ವೈತ ತತ್ವದಲ್ಲಿರುವ ಪ್ರಚಂಡ ಶಕ್ತಿಯನ್ನು ಸರ್ವತೋ ಭದ್ರತೆಯನ್ನೂ ಊರ್ಜಿತಗೊಳಿಸಿದರು. ಸ್ಥಿರವಾದ ಆಸ್ತಿ ಭಾರದ ಮೇಲೆ ಭದ್ರವಾಗಿ ನಿಲ್ಲುವಂತೆ ಮಾಡಿದ; ಪುನಃ ಪ್ರತಿಷ್ಠಾಪಿಸಿದರು. ಶ್ರುತಿ-ತರ್ಕ, ಸಗುಣ-ನಿರ್ಗುಣ, ಕರ್ಮ-ಭಕ್ತಿ, ಜ್ಞಾನ-ವ್ಯವಹಾರ, ವೇದಾಂತ ಇವೆಲ್ಲವುಗಳ ಸುಂದರ ಸಮನ್ವಯವು ಅದ್ವೈತದಲ್ಲಿ ಮಾತ್ರ ಸಿಗುತ್ತದೆ".[೮]

೩.೧.೨ ಶಂಕರಾಚಾರ್ಯ ಮತ್ತು ಯೇಸುಕ್ರಿಸ್ತರ ಬೋಧನೆಗಳಲ್ಲಿನ ಸಾಮ್ಯತೆಗಳು

ಭಾರತದ ಆಧ್ಯಾತ್ಮಿಕ ಲೋಕದ ಮಹಾಚೇತನ ಆದಿಶಂಕರಾಚಾರ್ಯ ಮತ್ತು ಮನುಕುಲದ ಇತಿಹಾಸವನ್ನೇ ತನ್ನ ಜನನದಿಂದಾಗಿ ವಿಭಾಗಿಸಿದ ಶಕಪುರುಷ ಯೇಸುಕ್ರಿಸ್ತರ ಬೋಧನೆಗಳನ್ನು ಒಟ್ಟಾಗಿ ನೋಡಿದಾಗ ಅನೇಕ ಸಮಾನ ಅಂಶಗಳಿರುವುದು ಕಣ್ಣಿಗೆ ರಾಚುತ್ತದೆ. ಭಕ್ತಿ-ಜ್ಞಾನ-ವೈರಾಗ್ಯದ ಮೂಲಕ ಭಾರತೀಯರನ್ನು ನಿರಂತರವಾಗಿ ಪ್ರಭಾವಿಸುತ್ತಿರುವ ಸಂತರು ಒಂದು ಕಡೆಯಾದರೆ; ಪ್ರಪಂಚದ ಮೂರನೇ ಒಂದು ಭಾಗದಷ್ಟು ಜನರನ್ನು ತನ್ನ ಪ್ರೀತಿ-ಶಾಂತಿ-ಸೇವೆ-ಸಹೋದರ ಭಾವನೆಯಿಂದಾಗಿ, ಸೆಳೆಯುತ್ತಿರುವ ಯೇಸುಕ್ರಿಸ್ತ ಇನ್ನೊಂದೆಡೆ. ಇವುಗಳಲ್ಲಿನ ಕೆಲವು ಸಮಾನ ಅಂಶಗಳನ್ನು ಈಗ ಗಮನಿಸೋಣ.

೧. "ಚಕ್ರವರ್ತಿಗೆ ಸಲ್ಲತಕ್ಕದ್ದನ್ನು ಚಕ್ರವರ್ತಿಗೂ ದೇವರಿಗೆ ಸಲ್ಲತಕ್ಕದ್ದನ್ನು ದೇವರಿಗೂ ಸಲ್ಲಿಸಿರಿ" ಎಂದು ಯೇಸುಕ್ರಿಸ್ತ ತನ್ನ ಶಿಷ್ಯರಿಗೆ ತಿಳಿಸಿದರೆ. ದೇವತೆಗೆ ಸಲ್ಲಬೇಕಾದುದನ್ನು ದೇವತೆಗೂ, ದೊರೆಗೆ ಸಲ್ಲಬೇಕಾದುದನ್ನು ದೊರೆಗೂ ಸಲ್ಲಿಸಲು ಅದ್ವೈತ ಸಿದ್ಧಾಂತ ತಿಳಿಸುತ್ತದೆ. ನೀರಿನಲ್ಲಿಯೆ ಬೆಳೆದಿರುವ ತಾವರೆ ಎಲೆಯಂತೆ ಅಸಂಗನಾಗಿರಬೇಕೆಂದು ಬೋಧಿಸುತ್ತದೆ.[೧೦]

೨. 'ಏಕಂ ಏವಂ ಅದ್ವಿತೀಯ ಬ್ರಹ್ಮಂ' ಎಂದು ಶಂಕರಾಚಾರ್ಯರು ಹೇಳಿ ಅದ್ವೈತದ ಡಿಂಡಿಮವನ್ನು ಘೋಷಿಸಿದರೆ; ಯೇಸುಕ್ರಿಸ್ತನು "ನಾನು ತಂದೆಯಲ್ಲಿದ್ದೇನೆ ತಂದೆಯು ನನ್ನಲ್ಲಿ ಇದ್ದಾನೆ.[೧೧] ಎಂದು ಹೇಳುವುದರ ಮೂಲಕ ಯೇಸುಕ್ರಿಸ್ತ ತನ್ನ ಕ್ರಿಸ್ತಾದ್ವೈತವನ್ನು ಘೋಷಿಸುತ್ತಾನೆ.

೩. ಶಂಕರಾಚಾರ್ಯರ ಬೋಧನೆಯನ್ನು ಅವಲೋಕಿಸಿದಾಗ ಲೋಕ ಸಂಪರ್ಕ ಬೇಡವೆಂದಾಗಲೀ, ಸಂಪೂರ್ಣ ತ್ಯಾಗವನ್ನಾಗಲಿ ಹೇಳುವುದಿಲ್ಲ. ಕಳಂಕ ರಹಿತವಾದ ಯಾವ ಕಾರ್ಯವನ್ನು ಬೇಡವೆನ್ನುವುದಿಲ್ಲ. ಯಾವುದು ವಿಹಿತವೋ, ಸಂದರ್ಭೋಚಿತವೋ, ಲೋಕ ಸಂಗ್ರಹವೋ ಆ ಕೆಲಸವನ್ನು ಅದರ ಪರಿಣಾಮದಲ್ಲಿ ಆಸಕ್ತಿ ಇಲ್ಲದೇ ಮಾಡಬೇಕೆಂದು ಹೇಳುತ್ತಾನೆ. ಕ್ರಿಯೆಯಲ್ಲಿ ದ್ವೈತವೂ ಅಂತಃಕರಣದಲ್ಲಿ ಅದ್ವೈತವೂ ಇರಬೇಕೆಂದು ತಿಳಿಸುತ್ತಾನೆ. ಯೇಸುಕ್ರಿಸ್ತನ ಬೋಧನೆಯಲ್ಲೂ ಇವೇ ಅಂಶವನ್ನು ನಾವು ಕಾಣುತ್ತೇವೆ.

೪. ಕ್ರೈಸ್ತ ದರ್ಶನದಲ್ಲಿ "ಜೀವಾತ್ಮನು ಅನುಭಾವಿತನಾಗಿ ಪರಮಾತ್ಮನಲ್ಲಿ ಸತಿಪತಿ ಭಾವದಿಂದ ತನ್ಮಯನಾಗಿ ಸ್ಥಿರಗೊಂಡಾಗ ಅಲ್ಲಿ 'ಅಹಂ ಪ್ರಜ್ಞೆ' ಅಳಿದುಹೋಗಿ 'ಸೋಽಹಂ ಪ್ರಜ್ಞೆ' ಉಳಿಯುತ್ತದೆ. ಇಲ್ಲಿ ಪ್ರತ್ಯೇಕತಾಭಾವಕ್ಕೆ ಸ್ಥಾನವೇ ಇಲ್ಲ. ಈ ಅನುಭಾವಗಮ್ಯ ಐಕ್ಯತೆ ಅದ್ವೈತ ಸ್ವರೂಪದ್ದಾಗಿದೆ. ಇದೆ ಜೀವನ್ಮುಕ್ತಿ.[೧೨] ಎಂದು ಕಾಣುತ್ತೇವೆ. ಶಂಕರನ ಅದ್ವೈತ ದರ್ಶನದಲ್ಲಿ ಆತ್ಮ ಸತ್ಯವನ್ನು ತಿಳಿದುಕೊಳ್ಳಬೇಕಾದರೆ ಮನಸ್ಸು ಸಂಪೂರ್ಣ ಶುದ್ಧವಾಗಿರಬೇಕು. ಜ್ಞಾನದ ಮೂಲಕ ಅಜ್ಞಾನವು ನಾಶವಾದರೆ ಆತ್ಮವು ತನ್ನಷ್ಟಕ್ಕೆ ತಾನೇ ಗೋಚರವಾಗುತ್ತದೆ. ಇದನ್ನೇ ಮೋಕ್ಷ ಎಂದು ಕರೆಯುತ್ತಾರೆ.

ಮೋಕ್ಷವೆಂದರೆ ಜನ್ಮ, ಮೃತ್ಯು, ಸುಖ-ದುಃಖಗಳಿಂದ ಪಾರಾಗಿ ಶಾಶ್ವತ ಆನಂದವನ್ನು ಪಡೆಯುವುದೇ ಆಗಿದೆ. ಮೋಕ್ಷವು ಆತ್ಮದ ನಿತ್ಯ ಸ್ವಭಾವವಾದುದರಿಂದ ಅದನ್ನೂ ಸಾಧಿಸಲು ಈ ಭೌತಿಕ ಶರೀರವು ಸಾವಿಗೊಳಗಾಗುವ ವರೆಗೂ ಕಾಯಬೇಕಾಗಿಲ್ಲ. ಈ ದೇಹದಲ್ಲಿರುವಾಗಲೇ ಜ್ಞಾನವಾದೊಡನೆ ಮೋಕ್ಷ ಸಿದ್ಧವಾಗುತ್ತದೆ. ಇದಕ್ಕೆ ಜೀವನ್ಮುಕ್ತಿ ಎಂದು ಕರೆಯುತ್ತಾರೆ.

೫. ಅನೇಕ ವಿಷಯಗಳಲ್ಲಿ ವಿಶೇಷವಾಗಿ ನೈತಿಕ ಬೋಧನೆಗಳು, ನೈಷ್ಠಿಕ ಆಚರಣೆಗಳು ಇತ್ಯಾದಿಗಳಲ್ಲಿ ಒಬ್ಬರ ಬೋಧನೆ ಇನ್ನೊಬ್ಬರ ಬೋಧನೆಗೆ ಪೂರಕವಾಗಿವೆ. ಯೇಸುಕ್ರಿಸ್ತ ಬೋಧಿಸಿ ಪರ್ವತ ಮೇಲಿನ ಪ್ರಸಂಗದಲ್ಲಿನ ಎಲ್ಲಾ ನೈತಿಕ ಅಂಶಗಳನ್ನು ಸ್ಥೂಲವಾಗಿ ಶಂಕರನ ಬೋಧನೆಗಳಲ್ಲಿ ಗಮನಿಸಬಹುದು.

ಹೀಗೆ ಇಬ್ಬರೂ ಮಹಾನ್ ಅದ್ವೈತಿಗಳು ತಮ್ಮ ಬೋಧನೆಗಳಲ್ಲಿ ಒಂದನ್ನೊಂದು ಹೋಲುವ ಹಲವು ಅಂಶಗಳನ್ನು ಪ್ರಚುರಪಡಿಸಿದ್ದಾರೆ.

೩.೨ ಶ್ರೀ ಮಧ್ವಾಚಾರ್ಯರು - ದ್ವೈತ ಸಿದ್ಧಾಂತ

ಮಧ್ವಾಚಾರ್ಯರು ಕ್ರಿ.ಶ. ೧೨೩೮ರಲ್ಲಿ ಉಡುಪಿ ಬಳಿಯ ಪಾಜಕ ಎಂಬ ಊರಿನಲ್ಲಿ ನಾರಾಯಣ ಭಟ್ಟ ಹಾಗೂ ವೇದಾವತಿ ದಂಪತಿಗಳಿಗೆ ಜನಿಸಿದರು.[೧೩] ಬಾಲ್ಯದಲ್ಲಿ ತೋಟಂತಿಲ್ಲಾಯರ ಬಳಿ ವಿದ್ಯಾಭ್ಯಾಸ ನಡೆಯಿತು. ತದನಂತರ ಅಚ್ಯುತ ಪ್ರೇಕ್ಷಕರಲ್ಲಿ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿದರು.[೧೪] ಬಳಿಕ ಲೋಕ ಸಂಚಾರಿಯಾಗಿ ದೇಶದ ವಿವಿಧ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ ತಾವು ಪ್ರತಿಪಾದಿಸಿದ ದ್ವೈತ ಸಿದ್ಧಾಂತವನ್ನು ಪ್ರಚುರಪಡಿಸಿದರು. ಮಧ್ವಾಚಾರ್ಯರು ತಮ್ಮ ಜೀವಿತ ಕಾಲದಲ್ಲಿ ಒಟ್ಟು ೨೯ ಗ್ರಂಥಗಳನ್ನು ರಚಿಸಿದರೆಂದು ತ್ರಿವಿಕ್ರಮ ಪಂಡಿತರು ಹೇಳುತ್ತಾರೆ.[೧೫] ಕಲಿಯುಗದ ಜನರನ್ನು ಸನ್ಮಾರ್ಗ ಪ್ರವರ್ತಕರನ್ನಾಗಿಸಿ ಮೋಕ್ಷಗಳಿಸಲು ಸರಳವೂ ಸುಲಭವೂ ಆದ ಮಾರ್ಗವನ್ನು ಹಾಕಿಕೊಡುವುದರಲ್ಲಿ ನೆರವಾಗುವಂಥ ಕೃತಿಗಳನ್ನು ರಚಿಸಿ ಮಧ್ವ ಸಿದ್ಧಾಂತವನ್ನು ಸಾರಿದ್ದಾರೆ.

ಮಧ್ವಸಿದ್ಧಾಂತವನ್ನು ಸಂಕ್ಷಿಪ್ತವಾಗಿ ಈ ಸಂಸ್ಕೃತ ಶ್ಲೋಕದ ಮೂಲಕ ತಿಳಿಸಬಹುದು.

ಶ್ರೀ ಮನ್ಮಧ್ವಮತೇ ಹರಿಃ ಪರತರಸ್ಸತ್ಯಂ ಜಗತ್ತತ್ತ್ವತೋ
ಭೇದೋ ಜೀವಗಣಾ ಹರೇರನುಚರಾ
ನೀಚೋಚ್ಚ ಭಾವಂ ಗತಾಃ

ಮುಕ್ತಿರ್ನೈಜ ಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಮೈಕವೇದ್ಯೋ ಹರಿಃ[೧೬]

ಮಧ್ವಮತದಲ್ಲಿ ಶ್ರೀಹರಿಯು ಸರ್ವೋತ್ತಮನು. ಜಗತ್ ಸತ್ಯವು ಭೇದಗಳು (ಪಂಚ ಭೇದಗಳು) ತತ್ತ್ವತಃ ನಿಜವಾದವುಗಳು, ಜೀವಗಳು ಪರಮಾತ್ಮನ ವಶವರ್ತಿಗಳಾಗಿದ್ದು ತಾರತಮ್ಯದಿಂದ ನೀಚೋಚ್ಚಭಾವವುಳ್ಳವುಗಳು. ನೈಜ ಸುಖದ ಅನುಭೂತಿಯೇ ಮುಕ್ತಿ. ಅಮಲವಾದ ಭಕ್ತಿಯೆ ಅದಕ್ಕೆ ಸಾಧನ. ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ ಇವೇ ಪ್ರಮಾಣಗಳು ಅಥವಾ ಸತ್ಯಜ್ಞಾನದ ಸಾಧನಗಳು ಹಾಗೂ ಅಖಿಲ ವೇದಗಳ ಸಹಾಯದಿಂದಲೆ ಹರಿಯು ಜ್ಞೇಯನು. ಹರಿಯು ಸರ್ವೋತ್ತಮನಾಗಿದ್ದು ಲಕ್ಷ್ಮೀ ಬ್ರಹ್ಮಾದಿ ದೇವತೆಗಳು ಅವರವರ ತಾರತಮ್ಯದ ಪ್ರಕಾರ ಶ್ರೇಷ್ಠ ಮತ್ತು ಕನಿಷ್ಠರು. ಹರಿಯು ಅಥವಾ ಪರಮಾತ್ಮನು ಸರ್ವಜ್ಞನು, ಪೂರ್ಣ ಸ್ವತಂತ್ರನು ಹಾಗೂ ಸರ್ವಗುಣ ಸಂಪನ್ನನು, ಅವನೇ ಸ್ವೇಚ್ಛೆಯಿಂದ ಲಕ್ಷ್ಮಿಯ ಮುಖಾಂತರ ಸೃಷ್ಟಿಯನ್ನು ಸೃಜಿಸುವನು.

ಲಕ್ಷ್ಮೀ ಮುಂತಾದ ದೇವತೆಗಳಿಗೆ ಹಾಗೂ ಜೀವಗಳಿಗೆ ದತ್ತ ಸ್ವಾತಂತ್ರ್ಯವಿರುವುದು. ಆ ಮಟ್ಟಿಗೆ ಮಾತ್ರ ಅವರು ಸ್ವತಂತ್ರರು. ಅವರು ಪರಮಾತ್ಮನಿಗೆ ಅಧೀನರು. ಜೀವಗಳೆಲ್ಲ ಪರಮಾತ್ಮನ ಪ್ರತಿಬಿಂಬಗಳು, ಪರಮಾತ್ಮನು ಬಿಂಬಮೂರ್ತಿ.

ಚೇತನಗಳಲ್ಲಿ ಕ್ಷರ ಮತ್ತು ಅಕ್ಷರ ಎಂದು ಎರಡು ವಿಧ. ಲಕ್ಷ್ಮಿಯು ಅಕ್ಷರ ಚೇತನ ಉಳಿದವರೆಲ್ಲಾ ಕ್ಷರ ಚೇತನರು. ಲಕ್ಷ್ಮಿಯು ಎರಡೂ ವಿಧದ ಚೇತನರಲ್ಲಿ ವ್ಯಾಪ್ತಳು. ಪರಮಾತ್ಮನು ಎಲ್ಲೆಲ್ಲಿಯೂ ವ್ಯಾಪ್ತನು. ಸೃಷ್ಟಿಯು ಸತ್ಯವು ಅದಕ್ಕೆ ಅಸ್ತಿತ್ವವಿದೆ. ಅದು ಪ್ರಕೃತಿಯ ವಿಸ್ತಾರ. ಜೀವಗಳು ಪ್ರಕೃತಿಯ ಬಂಧನದಿಂದ ಸುಖದುಃಖ, ಜನ್ಮ ಮರಣ ಮುಂತಾದವುಗಳಿಗೀಡಾಗುವವು. ಜೀವಗಳಲ್ಲಿ ಸಾತ್ವಿಕ, ರಾಜಸ, ತಾಮಸ ಎಂದು ಮೂರು ಬೇಧಗಳು. ಸಾತ್ವಿಕ ಜೀವಗಳು ಮಾತ್ರ ಮುಕ್ತಿಯೋಗ್ಯರು. ಪ್ರಕೃತಿ ಬಂಧದಿಂದ ಪಾರಾದರೆಂದರೆ ಅವರು ಮುಕ್ತರಾಗುವರು. ಇತರ ಜೀವಗಳಿಗೆ ನಿಜವಾದ ಮುಕ್ತಿ ಇಲ್ಲ.

ಪರಮಾತ್ಮ ಪ್ರಸಾದದಿಂದಲೆ ಈ ಮುಕ್ತಿ ದೊರಕುವುದು. ಈ ಪ್ರಸಾದಕ್ಕೆ ಸರ್ವಾರ್ಪಣಯುಕ್ತ ಭಕ್ತಿಯೆ ಮುಖ್ಯ ಸಾಧನ. ಅದು ಜ್ಞಾನಪೂರ್ವಕವಿದ್ದರೆ ದೃಢವಾಗುವುದು, ನೈಷ್ಠಿಕವಾಗುವುದು.

ಗುರು ಶುಶ್ರೂಷೆ ಮುಂತಾದವುಗಳಿಂದ ಅಂತಃಕರಣ ಶುದ್ಧಿಯಾಗುವದು. ಅದರಿಂದ ಜ್ಞಾನೋದಯ, ಭಕ್ತಿ ಮುಂತಾದವುಗಳುಂಟಾಗಿ ಮುಂದೆ ಮುಕ್ತಿ ಅಳವಡುವುದು.

ಜೀವಗಳಲ್ಲಿಯೂ ತಾರತಮ್ಯವಿರುವದು. ಅದನ್ನು ಹೆಚ್ಚು ಕಡಿಮೆ ಮಾಡುವುದು ಸಾಧ್ಯವಿಲ್ಲ. ಯಾವ ಹೆಚ್ಚು ಕಡಿಮೆಗಳು ಆಗವೆಂಬುದನ್ನು ತೋರಿಸಲು ಪಂಚ ಭೇದಗಳನ್ನು ಹೇಳಿರುವರು. ಅವಾವೆಂದರೆ ಜೀವ ಜೀವಕೆ ಬೇಧ, ಜೀವ ಜಡಕೆ ಭೇದ, ಜೀವ ಈಶಗೆ ಭೇದ, ಜಡ ಜಡಕೆ ಭೇದ, ಜಡ ಈಶಗೆ ಭೇದ. ಇವು ಅನಾದಿಯಿಂದ ಕಾಯಂ ಇರುವುವು.

೩.೨.೧ ಶ್ರೀ ಮಧ್ವಾಚಾರ್ಯರ ಜೀವನ-
ಯೇಸುಕ್ರಿಸ್ತರ ಜೀವನದ ನಡುವೆ ಇರುವ ಸಾಮ್ಯತೆಗಳು

ಆಚಾರ್ಯ ತ್ರಯರಲ್ಲಿ ಒಬ್ಬರೆನಿಸಿದ ಮಧ್ವಾಚಾರ್ಯರ ಜೀವನಕ್ಕೂ ಶಕ ಪುರುಷ ಯೇಸುಕ್ರಿಸ್ತನ ಜೀವನಕ್ಕೂ ನಡುವೆ ಅನೇಕ ರೀತಿಯ ಸಾಮ್ಯತೆಗಳಿರುವುದು ಆಶ್ಚರ್ಯವೆನಿಸುತ್ತದೆ. ಆದರೂ ಅವು ಸತ್ಯವಾಗಿವೆ.

ಮಧ್ವಾಚಾರ್ಯರ ಜೀವನವನ್ನು ತಿಳಿಸುವ ಅಧಿಕೃತ ಮೂಲಗ್ರಂಥವಾದ 'ಸುಮಧ್ವಯ ವಿಜಯ' ಹಾಗೂ ಬೈಬಲ್‌ನಲ್ಲಿ ಯೇಸುಕ್ರಿಸ್ತನ ಜೀವನವನ್ನು ತಿಳಿಸುವ 'ಹೊಸ ಒಡಂಬಡಿಕೆ' ಭಾಗದಿಂದ ಆಯ್ದ ಸಮಾನ ಅಂಶಗಳು ಹೇಗೆ ಇಬ್ಬರು ಮಹಾತ್ಮರ ಜೀವನದಲ್ಲಿ ಮೂಡಿ ಬಂದಿವೆ ಎಂಬುದು ಗೋಚರವಾಗುತ್ತದೆ.

ಮಧ್ವಾಚಾರ್ಯರ ಕಾಲದಲ್ಲಾಗಲೇ ಕ್ರೈಸ್ತಧರ್ಮದ ಪರಿಚಯ ಭಾರತದಲ್ಲಿತ್ತು. ಯೇಸುಕ್ರಿಸ್ತನ ನೇರ ಶಿಷ್ಯರಲ್ಲಿ ಒಬ್ಬನಾದ ದಿದಿಮನೆಂಬ ತೋಮನು ಭಾರತಕ್ಕೆ ಕ್ರಿ.ಶ. ೫೦ರ ಆಸುಪಾಸಿನಲ್ಲಿ ಬಂದಿದ್ದು ಕೇರಳ ಹಾಗೂ ತಮಿಳುನಾಡಿನಲ್ಲಿ ಸುವಾರ್ತೆ ಸಾರಿ ಅನೇಕರನ್ನು ಕ್ರೈಸ್ತ ಮತಾವಲಂಬಿಗಳನ್ನಾಗಿಸಿದ ಎಂಬುದು ಒಂದು ಪ್ರತೀತಿ. ಹೀಗಾಗಿ ೧೩ನೇ ಶತಮಾನದಲ್ಲಿ ಬಾಳಿದ ಮಧ್ವಾಚಾರ್ಯರಿಗೆ ಯೇಸುಕ್ರಿಸ್ತನ ಧರ್ಮದ ಪರಿಚಯ ಇತ್ತೆಂದು ಹೇಳುವ ಅಂಶವನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲು ಬರುವುದಿಲ್ಲ.

ಚರಿತ್ರೆಕಾರರಾದ ಫಾದರ್ ಹೆಚ್. ಹೋಸ್ಟನ್‌ರವರು ತಮ್ಮ ಪುಸ್ತಕವಾದ "Antiquities from San Thome" ಎಂಬ ಪುಸ್ತಕದಲ್ಲಿ ಈ ರೀತಿ ದಾಖಲಿಸಿದ್ದಾರೆ. "In soon embelishment it is impossible not to see traces of christian influence......"[೧೭] (ಈ ಸ್ವಾರಸ್ಯಕರ ಘಟನೆಗಳಲ್ಲಿ ಕ್ರೈಸ್ತ ಪ್ರಭಾವವನ್ನು ನೋಡದಿರುವುದು ಅಸಾಧ್ಯ ಎಂದಿದ್ದಾರೆ.)

ಯೇಸುಕ್ರಿಸ್ತ ಹಾಗೂ ಮಧ್ವಾಚಾರ್ಯರ ಜೀವನದ ಘಟನೆಗಳನ್ನು ಅಕ್ಕ ಪಕ್ಕದಲ್ಲಿಟ್ಟು ನೋಡುವ ಕಾರ್ಯವನ್ನು ಫಾದರ್ ಡಾ. ಐ. ಅಂತಪ್ಪನವರು "ಉತ್ತರ ಕರ್ನಾಟಕದಲ್ಲಿ ಕ್ರೈಸ್ತ ಧರ್ಮದ ಉಗಮ" ಎಂಬ ಪುಸ್ತಕದಲ್ಲಿ ಮಾಡಿದ್ದಾರೆ. ಈ ಇಬ್ಬರು ಮಹನೀಯರ ಜೀವನ ಘಟನೆಗಳನ್ನು ನೋಡುವಾಗ ಬಹುತೇಕ ಒಂದೇ ರೀತಿ ಇರುವುದನ್ನು ಕಂಡು ಸೋಜಿಗವೆನಿಸುತ್ತದೆ. ಅವುಗಳಲ್ಲಿ ಕೆಲವು ಅಂಶಗಳನ್ನು ಗಮನಿಸಬಹುದು.

೧. ಯೇಸುಕ್ರಿಸ್ತನ ಜನನ ಅದ್ಭುತವಾದ ರೀತಿಯಲ್ಲಿ ಕನ್ನಿಕೆಯ ಉದರದಿಂದ ಆಯಿತು. ಹುಟ್ಟುವುದಕ್ಕೆ ಮುಂಚೆ ಗಾಬ್ರಿಯೇಲ್ ಎಂಬ ದೇವದೂತನಿಂದ ಕನ್ಯಾಮರಿಮಳಿಗೆ ಮುನ್ಸೂಚನೆ ಕೊಡಲಾಗಿತ್ತು.[೧೮]

ಅದೇ ರೀತಿ ಮಧ್ವರ ತಂದೆ ತಾಯಿಗಳಾದ ಮಧ್ಯಗೇಹ ಹಾಗೂ ವೇದಾವತಿಗಳಿಗೆ "ಮಹಾಪುರುಷನೋರ್ವನು ಶೀಘ್ರದಲ್ಲಿ ಅವತರಿಸಲಿರುವನು" ಎಂದು ಉಚ್ಚ ಸ್ವರದಿಂದ ನುಡಿಯಲಾಗಿತ್ತು.[೧೯]

೨. "ದೇವರ ವಾಣಿ(ವಾಕ್) ಆದವರು ಮನುಷ್ಯರಾದರು."[೨೦] ಮರಿಯಳೇ ಕೇಳು - "ಪವಿತ್ರಾತ್ಮ ನಿನ್ನ ಮೇಲೆ ಬರುವನು; ಪರಾತ್ಪರ ದೇವನ ಶಕ್ತಿ ನನ್ನನ್ನು ಆವರಿಸುವುದು. ಈ ಕಾರಣ ನಿನ್ನಲ್ಲಿ ಹುಟ್ಟುವ ಆ ಪವಿತ್ರ ಶಿಶು 'ದೇವರ ಪುತ್ರ' ಎನಿಸಿಕೊಳ್ಳುವನು."[೨೧] ಎಂಬುದಾಗಿ ಯೇಸುಕ್ರಿಸ್ತನ ಜನನವನ್ನು ಬೈಬಲ್ ವಿವರಿಸಿದೆ. ಮಧ್ವರ ಜನನವನ್ನು ಶ್ರೀ ವಾಯುದೇವರ ಅವತಾರ ಎಂದು ವರ್ಣಿಸಲಾಗಿದೆ.[೨೨]

೩. ಯೇಸುಕ್ರಿಸ್ತ ಜನ್ಮಸ್ಥಳ ಬೇತ್ಲಹೇಮ್.[೨೩] ಮಧ್ವಾಚಾರ್ಯರ ಜನ್ಮಸ್ಥಳ ಪಾಜಕ.[೨೪] ಇಲ್ಲಿ ನಾವು ಒಂದು ಅಂಶವನ್ನು ಗಮನಿಸಬೇಕು. ಮುಂಬೈ, ಮಂಗಳೂರು ಬೀದರ ಈ ಮೂರು ಜಿಲ್ಲಾ ಕೇಂದ್ರಗಳ ಸಮೀಪದಲ್ಲಿ 'ಕಲ್ಯಾಣ'ವೆಂಬ ಊರಿದೆ. ಕ್ರಿ.ಶ. ಏಳನೇ ಶತಮಾನಕ್ಕೂ ಹಿಂದಿನಿಂದಲೂ ಕ್ರೈಸ್ತರಿದ್ದರೆಂಬ ಅಭಿಪ್ರಾಯ ಕ್ರೈಸ್ತ ಇತಿಹಾಸ ತಜ್ಞರಲ್ಲಿ ಇಂದಿಗೂ ಪ್ರಚಲಿತವಾದುದು.[೨೫] ಈ ಅಂಶದ ಮೂಲಕ ತಿಳುವಾಗಿ ಮಧ್ವರಿಗೆ ಕ್ರೈಸ್ತಧರ್ಮದ ಪರಿಚಯವಿತ್ತೆಂದು ಹೇಳಬಹುದಾಗಿದೆ.

೪. ಯಹೂದಿಗಳ ವಾಡಿಕೆಯಂತೆ ಯೇಸುವಿನ ತಂದೆ ತಾಯಿಗಳು ಯೇಸುಕ್ರಿಸ್ತನನ್ನು[೨೬] ಜೆರುಸಲೇಮಿನ ದೇವಾಲಯಕ್ಕೆ ತಂದು ದೇವರಿಗೆ ಕಾಣಿಕೆಯಾಗಿ ಒಪ್ಪಿಸಿದರು. ಇಲ್ಲಿ ಮಗು ಮಧ್ವಾಚಾರ್ಯರನ್ನು ಸಹ ತಂದೆತಾಯಿಗಳು ಉಡುಪಿಗೆ ತಂದು ಅಲ್ಲಿ ಅನಂತೇಶ್ವರ ಸ್ವಾಮಿಗೆ ಕಾಣಿಕೆಯಾಗಿ ಅರ್ಪಿಸಿದರು.[೨೭]

೫. ಹೆರೋದರಸನು ಯಹೂದ್ಯರ ಅರಸ ಹುಟ್ಟಿದ್ದಾನೆ ಎಂದು ಕೇಳಿ ತಲ್ಲಣಗೊಂಡ. ತನ್ನ ಪೀಠಕ್ಕೆ ಎಲ್ಲಿ ಸಂಚಕಾರ ಬರುತ್ತದೋ ಎಂದು ತತ್ತರಗೊಂಡ. ಪರಿಣಾಮವಾಗಿ ಕಂದ ಯೇಸುವನ್ನು ಕೊಲ್ಲಿಸಲು ಹವಣಿಸಿದ. ಆದರೆ ಕಂದ ಯೇಸು ಎಳೆ ಕಂದಗಳ ಮರಣ ಹೋಮದಿಂದ ಅದ್ಭುತಕರವಾದ ರೀತಿಯಲ್ಲಿ ಪಾರಾಯಿತು.[೨೮] ಮಧ್ವರ ಜೀವನದಲ್ಲಿ ಮಧ್ಯಗೇಹ ಮತ್ತು ವೇದಾವತಿ ದಂಪತಿಗಳು ಉಡುಪಿಯಿಂದ ಪಾಜಕದ ತಮ್ಮ ಮನೆಗೆ ಮಧ್ಯರಾತ್ರಿಯ ವೇಳೆಯಲ್ಲಿ ಕಾಡಿನ ಮಾರ್ಗವಾಗಿ ಹಿಂತಿರುಗುವಾಗ ಪಿಶಾಚಿ ಪೀಡಿತನೊಬ್ಬ ರಕ್ತಕಾರತೊಡಗಿದೆ. ಆದರೆ ಆ ಮಗು ಲೋಕೇಶ್ವರನೆಂದು ಪೀಡಿಸದೆ ಬಿಡುತ್ತಾನೆ.[೨೯]

೬. ತನ್ನ ಹನ್ನೆರಡನೇ ವಯಸ್ಸಿನಲ್ಲಿ ಯೇಸುಕ್ರಿಸ್ತ ಹಬ್ಬಕ್ಕಾಗಿ ಜೆರುಸಲೇಮ್ ದೇವಾಲಯಕ್ಕೆ ಹೋಗಿ ಹಬ್ಬ ಮುಗಿದು ವಾಪಸು ಆಗುವಾಗ ಮಗನನ್ನು ಕಾಣದೇ ಮಾತೆ ಮರಿಯಮ್ಮ ಹಾಗೂ ಜೋಸೆಫರು ದಿಗಿಲುಗೊಳ್ಳುತ್ತಾರೆ. ಆದರೆ ದುಃಖತಪ್ತರಾಗಿ ಹುಡುಕಿಕೊಂಡು ಮತ್ತೆ ಮಹಾದೇವಾಲಯಕ್ಕೆ ಬಂದಾಗ ಅಲ್ಲಿ ಮಗನನ್ನು ಕಂಡು ಆಶ್ಚರ್ಯಪಡುತ್ತಾರೆ.[೩೦] ತಂದೆತಾಯಿಗಳಿಂದ ಕಣ್ಮರೆಯಾದ ಬಾಲ ಮಧ್ವ ಹಿಂತಿರುಗಿ ಅನಂತೇಶ್ವರ ದೇವಾಲಯದಲ್ಲಿ ಕಾಣಿಸಿಕೊಳ್ಳುತ್ತಾನೆ.[೩೧]

೭. ಬಾಲಕನಾಗಿದ್ದಾಗಲೇ ಯೇಸುಕ್ರಿಸ್ತ ಪಂಡಿತರ ನಡುವೆ ತನ್ನ ಧಾರ್ಮಿಕ ಪಾಂಡಿತ್ಯವನ್ನು ತೋರಿಸಿದ.

ಯೇಸುವಿನ ಜ್ಞಾನವನ್ನು ಕಂಡವರೆಲ್ಲಾ ಬೆರಗಾದರು.[೩೨] ಅದೇರೀತಿ ಬಾಲ್ಯದಲ್ಲೇ ಬಾಲ ಮಧ್ವ ಶಿವಭಟ್ಟನೆಂಬ ಪೌರಾಣಿಕನನ್ನೇ ತಿದ್ದಿ ಪುರಾಣ ಕೇಳುತ್ತಿದ್ದವರನ್ನು ಚಕಿತಗೊಳಿಸಿದ.[೩೩]

೮. ಯೇಸುಕ್ರಿಸ್ತ 'ಪುರುಷೋತ್ತಮ' ಎನಿಸಿಕೊಂಡ ಸ್ನಾನಿಕ ಯೊವಾನ್ನನಿಂದ ದೀಕ್ಷಾಸ್ನಾನ ಪಡೆಯುತ್ತಾನೆ.[೩೪] ಗುರುಗಳಾದ ಅಚ್ಯುತ ಪ್ರೇಕ್ಷ ಎಂಬುವರು ಪೂರ್ಣಪ್ರಜ್ಞನಾದ ಮಧ್ವನಿಗೆ ಶಂಖದಲ್ಲಿ ತುಂಬಿಸಲ್ಪಟ್ಟ ಪುಣ್ಯಜಲದಿಂದ ಅಭಿಷೇಕ ಮಾಡಿದರು.[೩೫] ಈ ಅಚ್ಯುತ ಪ್ರೇಕ್ಷನನ್ನು 'ಪುರುಷೋತ್ತಮ ತೀರ್ಥ' ಎಂದು ಕರೆಯುತ್ತಾರೆ.

೯. ಯೇಸುಕ್ರಿಸ್ತ "ಸ್ವರ್ಗ ಸಾಮ್ರಾಜ್ಯ"ವನ್ನು ಕುರಿತು ಬೋಧಿಸಲು ಆರಂಭಿಸುತ್ತಾರೆ.[೩೬] ಮಧ್ವರನ್ನು "ವೇದಾಂತ ಸಾಮ್ರಾಜ್ಯದ ಪರಿಪಾಲನ ಕಾರ್ಯಕ್ಕೆ" ಅಧಿಪತಿಗಳನ್ನಾಗಿ ಪುರುಷೋತ್ತಮ ತೀರ್ಥರು ಅಭಿಷೇಕ ಮಾಡುತ್ತಾರೆ.[೩೭]

೧೦. ಯೇಸುಕ್ರಿಸ್ತ ಹನ್ನೆರಡು ಮಂದಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.[೩೮] ಮದ್ವರ ಪ್ರಮುಖ ಶಿಷ್ಯರಲ್ಲಿ ಹತ್ತು ಮಂದಿಯನ್ನು ಹೆಸರಿಸಲಾಗಿದೆ[೩೯] ಯೇಸುವಿನ ಶಿಷ್ಯರ ಕೃತಿ ಕಾರ್ಯಗಳಲ್ಲಿ ಮಾಧ್ವರ ಶಿಷ್ಯರ ಕೃತಿ ಕಾರ್ಯಗಳಲ್ಲಿ ಬಹುಮಟ್ಟಿನ ಹೋಲಿಕೆಗಳಿರುವುದು ಸೋಜಿಗವಾಗಿದೆ.

೧೧. ಯೇಸುಕ್ರಿಸ್ತ ಹಾಗೂ ಮಧ್ವ ಇಬ್ಬರೂ ಮಾಡಿದ ಅದ್ಭುತ ಪವಾಡಗಳು ದಾಖಲಾಗಿವೆ.

೧೨. ಯೇಸುಕ್ರಿಸ್ತನ ಸ್ವರ್ಗಾರೋಹಣವನ್ನು ಲೂಕ್‌ನು ಈ ರೀತಿ ದಾಖಲಿಸುತ್ತಾನೆ. "ಕಟ್ಟಕಡೆಗೆ ಯೇಸುಸ್ವಾಮಿ ಶಿಷ್ಯರನ್ನು ಬೆಥಾನಿಯ ಎಂಬ ಊರಿನ ವರೆಗೆ ಕರೆದುಕೊಂಡು ಹೋದರು. ಅಲ್ಲಿ ತಮ್ಮ ಕರಗಳನ್ನೆತ್ತಿ ಆಶೀರ್ವದಿಸಿದರು. ಆಶೀರ್ವದಿಸುತ್ತಿದ್ದ ಹಾಗೆಯೇ ಅವರನ್ನು ಬೀಳ್ಕೊಟ್ಟರು ಮತ್ತು ಸ್ವರ್ಗಕ್ಕೆ ಒಯ್ಯಲ್ಪಟ್ಟರು.[೪೦]

ಪ್ರೊ. ವ್ಯಾಸನಕೆರೆ ಪ್ರಭಂಜನಾಚಾರ್ಯರು 'ಸುಮಧ್ವ ವಿಜಯ'ದ ಕನ್ನಡ ಅವತರಿಣಿಕೆಯಲ್ಲಿ ಮಧ್ವರ ಕಡೆಯ ದಿನಗಳನ್ನು ಈ ರೀತಿ ದಾಖಲಿಸುತ್ತಾರೆ. ಶ್ರೀ ಮಧ್ವಾಚಾರ್ಯರು ಮನುಷ್ಯರ ಕಣ್ಣಿಗೆ ಕಾಣಿಸಿದ್ದು, ೭೦ ವರ್ಷಗಳ ಕಾಲ; ಅವರು ಉತ್ತರ ಬದರಿಗೆ (ಅದೃಶ್ಯರಾಗಿ) ತೆರಳಿದ ದಿನ ಪಿಂಗಳ ಮಾಘ ಶುದ್ಧ ನವಮಿ."[೪೧]

ಹೀಗೆ ಯೇಸುಕ್ರಿಸ್ತ ಹಾಗೂ ಮಧ್ವಾಚಾರ್ಯರ ಜೀವನದಲ್ಲಿ ಅತೀತ ಘಟನೆಗಳು ಒಂದಕ್ಕೊಂದು ಹೋಲಿಕೆಯಾಗಿರುವಂತೆ ಕಾಣುತ್ತವೆ. ಇಬ್ಬರ ಬದುಕಿನಲ್ಲೂ ಸಮಾನಾಂತರವಾದ ಪವಾಡಗಳು ಕಾಣಸಿಗುತ್ತವೆ. ಶಿಷ್ಯರ ಆಯ್ಕೆ, ಶುಭ ಸಂದೇಶ ಪ್ರಚಾರ-ಮಧ್ವರ ದ್ವೈತ ಸಿದ್ಧಾಂತ ಪ್ರಚಾರ, ಇತ್ಯಾದಿ, ಹೀಗೆ ಅನೇಕ ಸಂಗತಿಗಳಲ್ಲಿ ಸಾಮ್ಯತೆಗಳು ತುಂಬಾ ಇವೆ ಎಂಬುದಾಗಿ ಶ್ರೀ ಕೃಷ್ಣಸ್ವಾಮಿ ಅಯ್ಯರವರು ದಾಖಲಿಸುತ್ತಾರೆ.

"The flight to he temple of Udupi, the boyhood of the teacher, the fasting and prayers before the proclamation of the faith, multiplying loaves and even such phrises as GIVING OUT THE GOOD NEWS and FISHING FOR MEN. These are too numberous to put down as result of mere coincidence......"[42]

೩.೨.೨ ಮಧ್ವಾಚಾರ್ಯ ಮತ್ತು ಯೇಸುಕ್ರಿಸ್ತರ ಬೋಧನೆಗಳಲ್ಲಿನ ಸಮಾನಾಂಶಗಳು

ಯೇಸುಕ್ರಿಸ್ತ ಹಾಗೂ ಮಧ್ವಾಚಾರ್ಯರು ವಿಭಿನ್ನ ಕಾಲಘಟ್ಟದಲ್ಲಿ ಜೀವಿಸಿ ವಿಭಿನ್ನವಾದ ಸಮಾಜದಲ್ಲಿ ಜೀವಿಸಿದ್ದರೂ ಕೆಲವು ಸಮಾನ ಅಂಶಗಳನ್ನು ನಾವು ಕಾಣಬಹುದು. ಯೇಸುಕ್ರಿಸ್ತನ ಬೋಧನೆಯಂತೆ ಈ ಜಗತ್ತನ್ನು ದೇವರು ಸೃಷ್ಟಿಸಿದ್ದು ಲೋಕ ಸತ್ಯವಾಗಿದೆ. ಮಧ್ವಾಚಾರ್ಯರು ಈ ಜಗತ್ತನ್ನು ಮಿಥ್ಯೆ, ಮಾಯೆ ಎಂಬುದಾಗಿ ಕರೆಯುವುದಿಲ್ಲ. ಬದಲಾಗಿ ಈ ಜಗತ್ತು ಸತ್ಯವಾಗಿದೆ ಎನ್ನುತ್ತಾರೆ. ಜೀವಿಯ ಮುಕ್ತಿಗೆ ಭಕ್ತಿಯೇ ಸಾಧನ ಎಂದು ಭಕ್ತಿಪಂಥ ಮಧ್ವ ಮತ್ತು ಕ್ರಿಸ್ತ ಇಬ್ಬರೂ ಎತ್ತಿ ಹಿಡಿಯುತ್ತಾರೆ.

“ಜೀವಾತ್ಮನು ಪರಮಾತ್ಮನ ಸ್ವಯಂ ಪ್ರೇರಿತ ಬಾಹ್ಯಾಭಿವ್ಯಕ್ತಿ, ಮಾನವನಲ್ಲಿ ಮನೋಮಯ/ ಪ್ರಜ್ಞಾಮಯವಾಗಿರುವುದರಿಂದ ಜೀವಾತ್ಮನ ಪಾರಮಾರ್ಥಿಕ ಸಂಬಂಧ ಪಾಲುದಾರ (Participative) ಸ್ವಭಾವದ್ದಾಗಿದೆ. ಈ ಕಾರಣದಿಂದಾಗಿ, ಕ್ರೈಸ್ತ ದರ್ಶನದಲ್ಲಿ ಮಾನವನನ್ನು ಪರಮಾತ್ಮನ ಪ್ರತೀಕ ಎನ್ನುತ್ತಾರೆ.

ಜೀವಾತ್ಮನು ಪರಮಾತ್ಮನ ಕಾರ್ಯವಾದರೆ
ಪರಮಾತ್ಮ ಜೀವಾತ್ಮನ ಕಾರಣ
ಇಲ್ಲಿ ದ್ವೈತಭಾವ ಸ್ಪಷ್ಟವಾಗಿದೆ.[೪೩]

ಆದರೆ, ಈ ದ್ವೈತಭಾವವನ್ನು ದಾಟಿ ಯೇಸುಕ್ರಿಸ್ತ ಮುಂದೆ ಹೋಗಿ ಅದ್ವೈತದಲ್ಲಿ ಒಂದಾಗಾವುದನ್ನು ಕಾಣುತ್ತೇವೆ.

ಇನ್ನೊಂದು ಸಮಾನತೆಯನ್ನು ಇಲ್ಲಿ ಕಾಣಬಹುದಾಗಿದೆ. “ಯೇಸುಸ್ವಾಮಿ ಶಿಲುಬೆ ಯಾತನೆ ಈಡಾಗುವ ಹಿಂದಿನ ದಿನ, ರಾತ್ರಿ ಭೋಜನದ ವೇಳೆಯಲ್ಲಿ ಗೋಧಿ ರೊಟ್ಟಿಯನ್ನು ತೆಗೆದುಕೊಂಡು ತಮ್ಮ ಶಿಷ್ಯರಿಗೆ ಕೊಡುತ್ತಾ, “ಇದನ್ನು ತೆಗೆದುಕೊಂಡು ನೀವೆಲ್ಲರೂ ಭುಂಜಿಸಿರಿ; ಇದು ನಿಮಗಾಗಿ ಒಪ್ಪಿಸಲಾಗುವ ನನ್ನ ಶರೀರ” ಎಂದರು. ಅಂತೆಯೇ ದ್ರಾಕ್ಷಾರಸದಿಂದ ತುಂಬಿದ್ದ ಪಾತ್ರೆಯನ್ನು ಕೊಡುತ್ತ, “ಇದನ್ನು ತೆಗೆದುಕೊಂಡು ನೀವೆಲ್ಲರೂ ಪಾನ ಮಾಡಿರಿ; ಇದು ಸಮಸ್ತ ಜನರ ಪಾಪ ಕ್ಷಮೆಗಾಗಿ ಸುರಿಸಲಾಗುವ ನನ್ನ ರಕ್ತ” ಎಂದರು. ಹೀಗೆ ಪ್ರಾಚೀನ ಯಜ್ಞಗಳನ್ನು ತಮ್ಮ ಸ್ವಮೇಧದಿಂದ ಪರಿಪೂರ್ಣಗೊಳಿಸಿ, ಶಾಶ್ವತವಾದ ಯಜ್ಞಬಲಿಯನ್ನು (ಪಿಷ್ಟ ಪಶು) ಸ್ಥಾಪಿಸಿದರು ಎಂಬುದು ಕ್ರೈಸ್ತ ಸಿದ್ಧಾಂತ. ಮಧ್ವಾಚಾರ್ಯರು ಶ್ರೀಕೃಷ್ಣನ ಪ್ರತಿಮೆಯನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ಒಂದು ಯಜ್ಞವನ್ನು ಏರ್ಪಡಿಸಿದ್ದರು. ಇದು ರಾಜಸೂಯ ಯಾಗವಾಗಿತ್ತು. ಮಧ್ವರು ತಮ್ಮ ಮುಂದಿನ ಶ್ರೀ ವಿಷ್ಣುತೀರ್ಥ ಯಜ್ಞದಲ್ಲಿ ಹೋತೃ (ಋತ್ವಿಕ್)ಗಳಾಗಿದ್ದರು.

ರಾಜಸೂಯಾಗದಲ್ಲಿ ಹಸುಗಳನ್ನು, ಮೇಕೆಗಳನ್ನು ಬಲಿಕೊಡುವ ಪದ್ಧತಿ ಇತ್ತು. ಬಹಳ ಪ್ರಾಚೀನ

ಕಾಲದಲ್ಲಿ ನರಬಲಿಯನ್ನು ಕೊಡುತ್ತಿದ್ದರು. ಹೆಂಡ ಸರಾಯಿಗಳನ್ನು ಆಹುತಿ ರೂಪದಲ್ಲಿ ನೀಡಲಾಗುತ್ತಿತ್ತು. ಹೀಗೆ ಪ್ರಾಣಬಲಿ ಕೊಡುವುದು ಮಾಧ್ವನಿಗೆ ಹಿಂಸೆಯಾಗಿ ಕಾಣಿಸಿತು. ಇದಕ್ಕೆ ಬದಲಾಗಿ ಅಕ್ಕಿ ಹಿಟ್ಟಿನಿಂದ ಮಾಡಿದ ಪಿಷ್ಠ ಪಶುವನ್ನು ಬಲಿ ಕೊಡುವುದನ್ನು ಮಾಧ್ವರು ಜಾರಿಗೆ ತಂದರು. ಮಧ್ವರು ಪ್ರಾಣಿ ಬಲಿಯನ್ನು ಉಗ್ರವಾಗಿ ಖಂಡಿಸಿ ಯಜ್ಞ ಯಾಗಾದಿಗಳಲ್ಲಿ ಪ್ರಾಣಿ ಬಲಿಗೆ ತಡೆ ಹಾಕಿ ಪಿಷ್ಠ ಪಶುವಿನ ಬಲಿಯು ಪ್ರಾಣಿಯ ಕಾರ್ಯವನ್ನೇ ಮಾಡುವಂತೆ ಮಾಡಿದರು".[೪೫]

ಇಲ್ಲಿ ಕ್ರಿಸ್ತನ ಗೋಧಿ ರೊಟ್ಟಿಯಾಗಿ ಶಾಶ್ವತ ಬಲಿ ಹಾಗೂ ಮಾಧ್ವರ ಅಕ್ಕಿ ಹಿಟ್ಟಿನ ಪಿಷ್ಠ ಪಶುವಿನ ಬಲಿಯನ್ನು ಹೋಲಿಕೆ ಮಾಡಿದಾಗ ಇಬ್ಬರ ನಿಲುವು ಅನನ್ಯ ಸಾದೃಶ ಹೋಲಿಕೆ ಕಂಡುಬರುತ್ತದೆ. ಪ್ರಾಣಿಹಿಂಸೆ, ಪ್ರಾಣಬಲಿಯನ್ನು ತಡೆಗಟ್ಟಿ ದೈವಕ್ಕೆ ಬೇಕಾದ ಕರುಣೆ, ದಯೆ, ಅನುಕಂಪ ಎಂಬುದನ್ನು ತೋರಿಸುವುದೇ ಆಗಿದೆ.

The prevailing practice was to sloughter animals by a proces of slow torture. This idea of torute was revolting o madhva, who therefore directed a powerful attack against animal slaughter in or out side sacrifice. The result is that madhvas have given up this practice all together and in their yagnas, it is only animal. form made of rice - flour that does the duty for the live victins.[46]

೩.೩ ಶ್ರೀರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಸಿದ್ಧಾಂತ

ಕ್ರಿ.ಶ. ೧೦೧೭ರಲ್ಲಿ ಇಂದಿನ ಚೆನ್ನೈ ಸಮೀಪದ ಪೆರಂಬೂದೂರು ಎಂಬಲ್ಲಿ ಶ್ರೀಯುತ ಕೇಶವಾಚಾರ್ಯ ಮತ್ತು ಕಾಂತಿಮತಿಯ ಮಗನಾಗಿ ಶ್ರೀ ರಾಮಾನುಜಾಚಾರ್ಯರು ಜನಿಸಿದರು.[೪೭] ಬಾಲ್ಯದಲ್ಲಿ ಪ್ರಚಂಡ ಬಾಲಕನಾಗಿ ಬೆಳೆದ. ಸಕಲ ವಿದ್ಯೆಗಳನ್ನು ಅಭ್ಯಸಿಸಿದ. ತಮ್ಮ ಹದಿನಾರನೇ ವಯಸ್ಸಿನಲ್ಲಿ ರಕ್ಷಂಬಾಳ್ ಎಂಬ ಯುವತಿಯನ್ನು ಮದುವೆಯಾದ. ಆರಂಭದಲ್ಲಿ ಯಾದವಪ್ರಕಾಶ ಗುರುಗಳಿಂದ ಅಭ್ಯಸಿಸಿದ. ಅದ್ವೈತ ಸಿದ್ಧಾಂತ ಅಷ್ಟೊಂದು ಸರಿಯಾಗಿ ಕಾಣಲಿಲ್ಲ. ಗುಪ್ತವಾಗಿ ಹರಿಯುತ್ತಿದ್ದ ವಿಶಿಷ್ಠಾದ್ವೈತಕ್ಕೆ ಸಿದ್ಧಾಂತ ರೂಪ ನೀಡಿದ ರಾಮಾನುಜಾಚಾರ್ಯ ಸಂಸಾರದಿಂದ ವಿಮುಖನಾಗಿ ಸನ್ಯಾಸಿಯಾದ.[೪೮] ಯಾಮುನಾಚಾರ್ಯರ ಶಿಷ್ಯರಾದ ಕಾಂಚೀಪೂರ್ಣ, ಮಹಾಪೂರ್ಣ, ಗೋಪಿಪೂರ್ಣ, ಮಾಲಾಧರ ಮತ್ತು ವರರಂಗದಲ್ಲಿ ಕಲಿತು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರಚುರ ಪಡಿಸಿದರು.೪೯ ತಮಿಳುನಾಡಿನ ಶೈವರಾಜನಾದ ಕರಿಕಾಲಚೋಳ "ಶಿವನಿಗಿಂತ ದೊಡ್ಡ ದೇವರಿಲ್ಲ" ಎಂದು ಯಾರು ಹೇಳುವುದಿಲ್ಲವೋ ಅಂಥವರನ್ನು ಸದೆ ಬಡಿಯುತಿದ್ದ. ರಾಜನ ಉಪಟಳಕ್ಕೆ ಹೆದರಿ ಕರ್ನಾಟಕದ ಮೇಲು ಕೋಟೆಗೆ ಬಂದು ಅಲ್ಲಿನ ಪ್ರಕೃತಿಸಿರಿಗೆ ಮನಸೋತು ಅಲ್ಲಿಯೇ ತನ್ನ ಶಿಷ್ಯರೊಂದಿಗೆ ನೆಲೆಸಿದ. ಆದರೂ ಅವನ ಮನ ಶ್ರೀರಂಗನನ್ನು ನೆನೆಯುತ್ತಿತ್ತು.

ಹೊಯ್ಸಳರ ದೊರೆ ಬಿಟ್ಟಿದೇವನು ರಾಮಾನುಜನ ವಿಶಿಷ್ಠಾದ್ವೈತ ಸಿದ್ಧಾಂತವನ್ನು ಒಪ್ಪಿ ವೈಷ್ಣವನಾದ. ಆಗ ರಾಮಾನುಜರಿಗೆ ರಾಜಾಶ್ರಯ ದೊರೆಯಿತು. ವಿಷ್ಣುವರ್ಧನನು ಬೇಲೂರಿನಲ್ಲಿ ಸುಂದರವಾದ ಚೆನ್ನಕೇಶವ ದೇವಾಲಯವನ್ನು ನಿರ್ಮಿಸಿದ. ತೊಂಡೆನೂರಿನಲ್ಲಿ ನಂಬಿ ನಾರಾಯಣ, ಬೇಲೂರಿನಲ್ಲಿ ವಿಜಯ ನಾರಾಯಣ, ಗದಗಿನಲ್ಲಿ ವೀರ ನಾರಾಯಣ, ಮೇಲುಕೋಟೆಯಲ್ಲಿ ಚೆಲುವ ನಾರಾಯಣ, ತಲಕಾಡಿನಲ್ಲಿ ಕೀರ್ತಿ ನಾರಾಯಣ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಾಕಾರ್ಯವನ್ನು ಏರ್ಪಡಿಸಿದ. ವಿಶಿಷ್ಟಾದ್ವೈತಕ್ಕೆ ಕರ್ನಾಟಕದಲ್ಲಿ ಭದ್ರವಾದ ನೆಲೆ ಸಿಕ್ಕಿತು. ರಾಮಾನುಜ ತನ್ನ ಶಿಷ್ಯರೊಂದಿಗೆ ಕೂಡಿ ೭೪ ಮಠಗಳನ್ನು ಸ್ಥಾಪಿಸಿದರು. 'ವಿಶಿಷ್ಟಾದ್ವೈತ' ಭಾರತೀಯ ದರ್ಶನದಲ್ಲಿ ಉತ್ತಮ ಸ್ಥಾನ ಸಿಗುವಂತೆ ಮಾಡಿದ ಮಹಾಪುರುಷ ರಾಮಾನುಜ.

"ಅದ್ವೈತ್ವವು "ಬ್ರಹ್ಮವೊಂದೇ ಸತ್ಯ; ಎರಡಿಲ್ಲ. ಉಳಿದದ್ದೆಲ್ಲ ಕೇವಲ ತೋರಿಕೆ" ಎನ್ನುತ್ತದೆ. ಏಕಮೇವಾದ್ವತೀಯಂ ಎಂಬ ಮಾತನ್ನು ಅದು ಹೀಗೆ ಅರ್ಥ ಮಾಡುತ್ತದೆ. ರಾಮಾನುಜರು ಪ್ರತಿಪಾದಿಸಿದ ವಿಶಿಷ್ಟಾದ್ವೈತವೂ ಬ್ರಹ್ಮಸತ್ಯವೆಂದು ಹೇಳುತ್ತದೆ. ಆದರೆ, ಇದಕ್ಕೆ ಎರಡು ವಿಶೇಷಣಗಳಿವೆ. ಅವು ಚಿತ್ ಮತ್ತು ಅಚಿತ್. ಇವೆರಡೂ ಪರಬ್ರಹ್ಮನ ಶರೀರಗಳು. ರಾಮಾನುಜಾಚಾರ್ಯರ ಬ್ರಹ್ಮ ನಿರ್ಗುಣ ಬ್ರಹ್ಮನಲ್ಲ; ಚಿತ್ ಅಚಿತ್ ವಿಶಿಷ್ಟವಾದ ಚಿತ್ತು ಅಚಿತ್ತುಗಳಿಂದ ಕೂಡಿದ ಬ್ರಹ್ಮ, "ಚಿದಚಿದ್ವಿಶಿಷ್ಟಂ ತತ್ವಂ".

ಎಲ್ಲಕ್ಕಿಂತ ಮಿಗಿಲಾದ್ದು ಪರಬ್ರಹ್ಮ ಅಥವಾ ಈಶ್ವರ. ಇದನ್ನು ಮೀರಿಸುವ ತತ್ತ್ವವಾವುದೂ ಇಲ್ಲ. ಇದು ಪರತತ್ತ್ವ. ನಿತ್ಯವೂ, ಸತ್ಯವೂ, ಜ್ಞಾನಾನಂದಮಯವೂ, ಸರ್ವವ್ಯಾಪಕವೂ, ಸರ್ವಜ್ಞವೂ, ಸರ್ವಶಕ್ತವೂ ಆದದ್ದು ಇದು. ಇದರಲ್ಲಿ ದೋಷಗಳಿಲ್ಲ. ಇದು ಎಲ್ಲ ಜಗತ್ತಿಗೆ ಕಾರಣ. ಚಿತ್ ಅಚಿತ್‌ಗಳು ಶರೀರ. ಶರೀರಿ ಇಲ್ಲದೆ ಶರೀರ ಇರಲಾರದು. ಚಿತ್ ಎಂಬುದು ಜೀವ. ಅಚಿತ್ ಎನ್ನುವುದು ಜಡವಾದ ಜಗತ್ತು. ಹೀಗೆ ಈಶ್ವರ, ಚಿತ್-ಅಚಿತ್ ಮೂರೂ ವಿಶಿಷ್ಟಾದ್ವೈತದ ತತ್ತ್ವತ್ರಯ.

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ದೇವರು, ಜೀವರು, ಪ್ರಕೃತಿ ಇವು ಮೂರೂ ಪ್ರತ್ಯೇಕ. ಆದರೆ ಉಳಿದ ಎರಡೂ ಎಂದರೆ ಜೀವರೂ ಪ್ರಕೃತಿಯೂ ದೇವರಿಗೆ ಅಧೀನ. ರಾಮಾನುಜರ ದೃಷ್ಟಿಯಲ್ಲಿ ಈ ವ್ಯತ್ಯಾಸವೇ ಪ್ರಧಾನವಾದದ್ದು.

ಬ್ರಹ್ಮವು ಯಾವಾಗಲೂ ಬದಲಾವಣೆ ಹೊಂದುವ ಪ್ರಕೃತಿಯನ್ನೂ, ಸುಖ-ದುಃಖಗಳನ್ನು ಭೋಗಿಸುವ ಜೀವನನ್ನೂ ಶರೀರವಾಗಿ ಹೊಂದಿದ್ದರೂ ಕೂಡ, ಪ್ರಕೃತಿ ಜೀವರುಗಳ ದೋಷಗಳು ಬ್ರಹ್ಮಕ್ಕೆ ಅಂಟುವುದಿಲ್ಲ. ರಾಮಾನುಜಾಚಾರ್ಯರ ದೃಷ್ಟಿಯಲ್ಲಿ ಬ್ರಹ್ಮ ಸಗುಣ ಇಲ್ಲದಿದ್ದರೆ, "ಬ್ರಹ್ಮವು ಸತ್ಯ, ಜ್ಞಾನ, ಅನಂತ" ಎಂಬ ಉಪನಿಷದ್ವಾಕ್ಯಕ್ಕೆ ಅರ್ಥವಿಲ್ಲ.

ಮಾಯೆಯೆಂಬುದೇ ಇಲ್ಲ. ಪ್ರತಿಯೊಂದು ಅರಿವಿಗೂ ಅದಕ್ಕೆ ಸಂಬಂಧಪಟ್ಟ ವಸ್ತು ಇರಲೇಬೇಕು. ಬ್ರಹ್ಮ ಅಥವಾ ಈಶ್ವರನನ್ನೂ ಪ್ರತ್ಯಕ್ಷದಿಂದಾಗಲೀ ಅನುಮಾನದಿಂದಾಗಲಿ ಅರಿಯುವುದು ಸಾಧ್ಯವಿಲ್ಲ; ವೇದ ಶಾಸ್ತ್ರ ಪ್ರಮಾಣದಿಂದಲೇ (ಶಬ್ದಪ್ರಮಾಣದಿಂದಲೇ) ಅರಿಯಬೇಕು. ವೇದಶಾಸ್ತ್ರ ಪುರಾಣಗಳು ಬ್ರಹ್ಮನು ನಿರ್ಗುಣನೆಂದು ಹೇಳುವುದಿಲ್ಲ.

ಜೀವಾತ್ಮನು ಕೆಲವು ಅಂಶಗಳನ್ನು ಪರಮಾತ್ಮನಂತೆ. ಇನ್ನು ಕೆಲವು ಅಂಶಗಳಲ್ಲಿ ಪರಮಾತ್ಮನಿಗಿಂತ ವಿಲಕ್ಷಣ. ಜೀವನು ಅಣು ಸ್ವರೂಪ. ಇವನು ಪರಮಾತ್ಮನ ಭೃತ್ಯ. ಆದರೂ ಒಂದು ರೀತಿಯಲ್ಲಿ ಸ್ವತಂತ್ರ. ಕರ್ಮಾನುಸಾರವಾಗಿ ಇವನಿಗೆ ಪಂಚಭೂತಮಯ ಶರೀರ ಪ್ರಾಪ್ತವಾಗುವುದು. ಇವನು ಜ್ಞಾನಾನಂದ ಸ್ವರೂಪನಾದರೂ ಅನಾದಿಕರ್ಮದಿಂದ ಆವೃತ. ಇವನು ಅಣುಪರಿಮಾಣ. ಆಯಾ ಶರೀರದ ಹೃದಯವೇ ಇವನ ವಾಸಸ್ಥಾನ. ಆದರೂ ಇವನ ಜ್ಞಾನವು ಇಡೀ ಶರೀರದಲ್ಲಿ ವ್ಯಾಪಿಸಿಕೊಂಡಿರುತ್ತದೆ. ಆದ್ದರಿಂದಲೇ ಜೀವನಿಗೆ ಶರೀರದ ಎಲ್ಲ ವೇದನೆಯ ಅನುಭವವೂ ಆಗುತ್ತದೆ.

ಜೀವನು ಯಾವ ಕೆಲಸ ಮಾಡಬೇಕಾದರೂ ಅದಕ್ಕೆ ಭಗವದ್ ಇಚ್ಛೆ ಇರಬೇಕು. ಆದ್ದರಿಂದ ಜೀವನು ಪರತಂತ್ರ ಕರ್ತೃ. ಆದರೂ ಅವನು ಕರ್ಮಫಲವನ್ನು ಅನುಭವಿಸುವನು. ಇದಕ್ಕೆ ಕಾರಣವಿಲ್ಲದೆ ಇಲ್ಲ. ಜೀವನು ಅಸ್ವತಂತ್ರನಾದರೂ ಅವನು ತನ್ನ ಇಚ್ಛೆಯಂತೆಯೇ ಕರ್ಮಗಳಲ್ಲಿ ತೊಡಗುವನು. ಯಾವುದು ಸರಿ? ಯಾವುದು ಸರಿಯಲ್ಲ? ಎಂಬುದನ್ನು ಅರಿತು ಒಂದು ಕಾರ್ಯದಲ್ಲಿ ತೊಡಗುವುದರಿಂದ ಅವನು ಕರ್ಮಫಲವನ್ನನುಭವಿಸಬೇಕಾಗುವುದು. ಆದರೆ ಯಾವ ಪ್ರಯತ್ನದಲ್ಲಿ ತೊಡಗಿದರೂ ಅದು ಸಿದ್ಧಿಸಬೇಕಾದರೆ ಈಶ್ವರನ ಅನುಮತಿ ಬೇಕು. ಆದ್ದರಿಂದ ಅವನು ಪರತಂತ್ರ ಕರ್ತೃ.

ಪ್ರಕೃತಿಯ ಸಂಬಂಧವಾದ ದೇಹದಿಂದ ಬಿಡುಗಡೆ ಹೊಂದುವುದೇ ಮುಕ್ತಿ. ಕರ್ಮಬಂಧವು ನಾಶವಾದ

ಮೇಲೆ ಜೀವನ ಸ್ವಾಭಾವಿಕ ಸ್ವರೂಪ ಪ್ರಕಾಶಿಸುವುದು. ಆ ಸ್ವಾಭಾವಿಕ ರೂಪದಿಂದ ವೈಕುಂಠವೆಂಬ ದೇಶ ವಿಶೇಷದಲ್ಲಿ ಪರಬ್ರಹ್ಮ ಪರಮಾತ್ಮನ ಅನುಭವವನ್ನು ಮಾಡಿಕೊಂಡು, ಆ ಅನುಭವದಿಂದ ಉಂಟಾಗುವ ಪ್ರೀತಿಯಿಂದ ಪ್ರೇರಿತನಾಗಿ ಭಗವಂತನ ಚರಣಾರವಿಂದದಲ್ಲಿ ಎಲ್ಲ ವಿಧವಾದ ಕೈಂಕರ್ಯವನ್ನೂ ಮಾಡುತ್ತಿರುವುದೇ ಮುಕ್ತಿಯ ಪರಾಕಾಷ್ಠೆ.

ಮುಕ್ತಿಗೆ ಎರಡು ಉಪಾಯಗಳುಂಟು. ಅವು ಭಕ್ತಿ ಮತ್ತು ಪ್ರಪತ್ತಿ. ನಮ್ಮ ಅಂತರಾತ್ಮನಾದವನು ಈಶ್ವರ ಎಂಬ ತತ್ತ್ವವನ್ನು ಕುರಿತು ಚಿಂತಿಸಿದಾಗ ಭಕ್ತಿ ಹುಟ್ಟುತ್ತದೆ.[೫೦] ಭಕ್ತಿ ಬರಿಯ ಉದ್ರೇಕವಾಗಲಿ, ಅಂಧಪ್ರೇಮವಾಗಲಿ ಅಲ್ಲ. ಜ್ಞಾನದಿಂದ ಕೂಡಿರತಕ್ಕದ್ದು. ಈಶ್ವರನ ಈ ಜ್ಞಾನವನ್ನು ಹೊಂದಿ ಅವನ ಇಚ್ಛೆಯಂತೆ ನಡೆಯುವುದೇ ಭಕ್ತಿ. ಜ್ಞಾನ ಕರ್ಮಗಳ ಮೂಲಕ ಭಕ್ತಿ ಹುಟ್ಟುತ್ತದೆ. ಜ್ಞಾನ ಕರ್ಮಗಳೆರಡಕ್ಕೂ ಭಕ್ತಿಯೇ ಗುರಿ. ಅದರಿಂದ ಸಾಕ್ಷಾತ್ಕಾರ ಲಭಿಸುತ್ತದೆ.

"ರಾಮಾನುಜರ ದೃಷ್ಟಿಯಲ್ಲಿ ಬ್ರಹ್ಮ ಭುವನಸುಂದರ. ಜಗತ್ತು, ಸೂರ್ಯ, ಚಂದ್ರ, ನಕ್ಷತ್ರಗಳಿಂದ ಕೂಡಿದ ವಿಶ್ವವೆಲ್ಲ ಅವನ ಶರೀರ. ಪರಮಾತ್ಮನ ಈ ಸೌಂದರ್ಯವನ್ನು ಅರಿತು ನಮ್ಮ ಸ್ವಭಾವವನ್ನು ಪರಿವರ್ತಿಸಿಕೊಳ್ಳಬೇಕು. ಎಲ್ಲ ರಸಗಳೂ ಬ್ರಹ್ಮರಸದಲ್ಲಿ ಪರ್ಯವಸಾನವಾಗಬೇಕು. ಬ್ರಹ್ಮಾನಂದವಾಗಬೇಕು. "ರಸೋವೈಸಃ ರಸಗ್ಗಹ್ಯೆವಾಯಂ ಲಬ್ಧಾಃ ನಂದೀ ಭವತಿ." ಬ್ರಹ್ಮ ಅನಂತ ಆನಂದ ಪರಿಪೂರ್ಣ. 'ಭೂಮನ್' ಎಂದು ಹೇಳುತ್ತಾರೆ. ಇವನು ನಿರ್ಗುಣನಲ್ಲ, ಸಗುಣ. ಈ ಭೂಮವಿದ್ಯೆಯನ್ನು ಅರಿಯುವುದನ್ನು, ಬ್ರಹ್ಮನಂದವನ್ನು ಪಡೆಯುವುದನ್ನು, ಜೀವನು ಕಲಿಯಬೇಕು. ಇದಕ್ಕೆ ಕೈಂಕರ್ಯವೇ ಸಾಧನ. ಕೈಂಕರ್ಯವೆಂದರೆ ನಿಷ್ಕಾಮಸೇವೆ. ದೇವರ ಆಳಾಗುವುದು, ತನ್ಮೂಲಕ ಅವಿದ್ಯೆಯಿಂದಲೂ ಪ್ರಕೃತಿ ಸಂಬಂಧದಿಂದಲೂ ನಿವೃತ್ತಿ ಹೊಂದುವುದೇ ಕೈಂಕರ್ಯ. ಕೈಂಕರ್ಯ ಪ್ರಾಪ್ತಿಗಾಗಿ ನಿತ್ಯವೂ ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸುತ್ತಿರಬೇಕು. ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಗಳಿಂದ ಪರಿಪೂರ್ಣ ಚೇತನನನಾಗಿ, ಶಮದಮವೇ ಮುಂತಾದ ಗುಣಗಳಿಂದಲೂ, ಎಲ್ಲ ಭೂತಗಳಲ್ಲಿ ಅನುಕಂಪ ಹೊಂದುವುದರಿಂದಲೂ, ಆಹಾರ ಶುದ್ಧಿ ಕಾಯಶುದ್ಧಿಗಳಿಂದಲೂ ಯೋಗ್ಯತೆ ಸಂಪಾದಿಸಿ, ಅರಿಷಡ್ವರ್ಗಗಳನ್ನು ಜಯಿಸಿ, ಆತ್ಮಗುಣವೆಂಬ ಪುಷ್ಪವಾಗಿ, ತಾಯಿಯಾದ ಶ್ರೀದೇವಿಯ ಮೂಲಕ ಶ್ರೀಯಃಪತಿಯಲ್ಲಿ ಶರಣಾಗತಿ ಹೊಂದಬೇಕು. ಇದು ರಾಮಾನುಜರು ಬೋಧಿಸಿದ ಶ್ರೀವೈಷ್ಣವಧರ್ಮದ ಸಾರ".[೫೧]

ರಾಮಾನುಜಾಚಾರ್ಯರು ವೇದಾಂತದಲ್ಲಿ ಉಕ್ತವಾದ ವಿಶಿಷ್ಟವೂ ವ್ಯವಹಾರ್ಯವೂ ಸಮರ್ಪಕವೂ ಸಮಗ್ರವೂ ಆದ ದರ್ಶನವೊಂದನ್ನು ನೀಡಿದರು. ಅವರು ತಮ್ಮ ದರ್ಶನದಲ್ಲಿ ನಿರಾಶೆಯನ್ನಾಗಲಿ, ಅನುಭವಕ್ಕೆ ನಿಲುಕದ ಯಾವ ಸೂತ್ರವನ್ನಾಗಲಿ ಸೂಚಿಸಲಿಲ್ಲ. ಕಣ್ಣಿಗೆ ಕಾಣುವ ಎಲ್ಲವೂ ಸತ್ಯ ಎಂದು ಹೇಳಿದರು. ಮಾಯಾವಾದ ರಾಮನುಜರ ವೇಳೆಗಾಗಲೇ ಹಲವು ಬಗೆಯ ಸಂಶಯಗಳಿಗೆ ಎಡೆ ಕೊಟ್ಟಿತ್ತು. ತತ್ತ್ವಕ್ಕೂ ಆಚರಣೆಗೂ ನಡುವೆ ಏರ್ಪಟ್ಟಿದ್ದ ದೊಡ್ಡ ಕಂದರಕ್ಕೆ ವಿಶಿಷ್ಟಾದ್ವೈತದ ಸೇತುವೆ ಕಟ್ಟಿದ ಕೀರ್ತಿ ರಾಮಾನುಜರಿಗೆ ಸಲ್ಲಬೇಕು. ಪರಮಪದ ಸೋಪಾನವನ್ನು ನಿರ್ಮಿಸಿ, ಇದರ ಮೂಲಕ ಎಲ್ಲ ಜನರೂ ತಮ್ಮ ಜೀವನದ ಪರಮಗುರಿಯನ್ನು ಸಾಧಿಸಿಕೊಳ್ಳುವುದು ಸುಲಭವಾಗುವಂತೆ ಮಾಡಿದರು ಶ್ರೀ ರಾಮಾನುಜಾಚಾರ್ಯರು.

೩.೩.೧ ಶ್ರೀರಾಮಾನುಜಾಚಾರ್ಯ ಹಾಗೂ ಯೇಸುಕ್ರಿಸ್ತನ ನಡುವಿನ ಸಮಾನ ಧಾರ್ಮಿಕ ಅಂಶಗಳು

ಸ್ವಾಮಿ ವಿವೇಕಾನಂದರ ಮಾತಿನಲ್ಲಿ ಹೇಳುವುದಾದರೆ "Ramanujan with his sariri-Sarira Bhawa of God and world, a most practical philosophy, a great appeal to the emotions, on entire deniall of birthrights before spiritual attainments and its appeal through popular tongue, completely succeeded in brining the masses back to the Vedic Religion."[52]

ಶ್ರೀ ರಾಮಾನುಜರ ಬಗ್ಗೆ ಸ್ವಾಮಿ ವಿವೇಕಾನಂದರು ಮನಸಾರೆ ಹೊಗಳಿ ಜನ ಸಾಮಾನ್ಯರನ್ನು ವೈದಿಕ ಧರ್ಮದೆಡೆಗೆ ತನ್ನ ಸಿದ್ಧಾಂತ ಹಾಗೂ ತಳ ಸಮುದಾಯದವರೊಂದಿಗಿರುವ ಪ್ರೀತಿಯ ಭಾವನೆಗಳಿಂದ ಸೆಳೆದ ಮಹಾನುಭಾವ ಎಂದು ಕರೆದಿದ್ದಾರೆ.

“ಯೇಸುಕ್ರಿಸ್ತನು ಸಹ ಗುಡಿಪೂಜೆಯನ್ನು ನಿರಾಕರಿಸಿ ಭಾವಪೂಜೆಗೆ ಅಗ್ರಸ್ಥಾನವನ್ನು ನೀಡಿ ಪರರಲ್ಲಿ ಪರಮಾತ್ಮನನ್ನು ಕಾಣುವಂತೆ ಬೋಧಿಸಿದ. ಎಲ್ಲರನ್ನು ಸಮತಾಭಾವದಿಂದ ಕಾಣಲು ಉಪಯುಕ್ತವಾಗಿರುವ ಸಹಪಂಕ್ತಿ ಭೋಜನಕ್ಕೆ ಪೂಜಾವಿಧಿಗಳ ಸ್ಥಾನವನ್ನು ಕಲ್ಪಿಸಿಕೊಟ್ಟರು. ಹೀಗೆ ಭೋಜನ ಸಂಕೇತದ ಮೂಲಕ ತನ್ನನ್ನೇ ಪರರ ಸೇವೆಗೋಸ್ಕರ ಅರ್ಪಿಸುವ ಹೊಸ ಪೂಜಾವಿಧಾನವೊಂದನ್ನು ಸ್ಥಾಪಿಸಿದ. ಮೌಢ್ಯತೆಗೆ ಅಂಟಿಕೊಂಡಿದ್ದ ಪುರೋಹಿತ ಶಾಹಿಗಳ ಆಡುಂಬೋಲವಾಗಿ ‘ಅಲ್ಲಿ’ಗೆ ಹೋಗುತ್ತಿದ್ದ ಧರ್ಮವನ್ನು ‘ಇಲ್ಲಿ’ಗೆ ತಂದಿಟ್ಟು ಜೀವಾತ್ಮನ ಮತ್ತು ಪರಮಾತ್ಮನ ನಡುವಿನ ಕಂದರವನ್ನು ನಾಶಪಡಿಸಿದನಲ್ಲದೆ ಮಾನವ ಸಮಾಜವೇ ದೇವ-ಸ್ಥಾನ ಎಂಬ ಅರಿವನ್ನು ಯೇಸು ಮೂಡಿಸಿ ಹೊಸ ಶಕೆ ಆರಂಭಿಸಿದ.”[೫೩]

* ‘ಆತ್ಮೋದ್ಧಾರಕ್ಕಾಗಿ ಮೊದಲು ತವಕ ಪಡಿರಿ’[೫೪] ಎಂದು ಯೇಸುಕ್ರಿಸ್ತ ತನ್ನ ಅನುಯಾಯಿಗಳಿಗೆ ಹೇಳಿದರೆ; ಆತ್ಮೋದ್ಧಾರಕ್ಕಾಗಿ ಸರಿಯಾದ ಗುರುವನ್ನು ಆಶ್ರಯಿಸಿ ಅವರಲ್ಲಿ ಪೂರ್ಣ ನಂಬಿಕೆಯನ್ನು ಇಟ್ಟುಕೊಳ್ಳಿರೆಂದು ರಾಮಾನುಜ ತಿಳಿಸಿದ.

* “ನಾನು ಪಿತನೂ ಒಂದೇ ಆಗಿದ್ದೇವೆ”[೫೫] ಎಂದು ಹೇಳುವ ಮೂಲಕ ನನ್ನಂತೆ ಭಗವಂತನನ್ನು ಸೇರುವುದು ನಿಮ್ಮ ಜೀವನದ ಲಕ್ಷ್ಯವಾಗಿರಲಿ ಎಂದು ಕರೆಯಿತ್ತರೆ; ರಾಮಾನುಜರು ಸಹ ಭಗವಂತನನ್ನು ಸೇರುವುದೇ ನಿಮ್ಮ ಜೀವನದ ಮುಖ್ಯ ಗುರಿ ಆಗಿರಲಿ ಎನ್ನುತ್ತಾರೆ.[೫೬]

* “ದುಡಿದು ಭಾರಹೊತ್ತು ಬಳಲಿ ಬೆಂಡಾಗಿರುವ ಸರ್ವ ಜನರೇ, ನೀವೆಲ್ಲರೂ ನನ್ನ ಬಲಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುತ್ತೇನೆ.”[೫೭] ಎನ್ನುವುದರ ಮೂಲಕ ತನ್ನಲ್ಲಿ ಸಂಪೂರ್ಣ ಪ್ರಪತ್ತಿಯನ್ನು

ಕ್ರಿಸ್ತ ತನ್ನ ಅನುಯಾಯಿಗಳಲ್ಲಿ ಕೇಳಿದರೆ; ರಾಮಾನುಜರು ಸಹ ಅದನ್ನೇ ಹೇಳುತ್ತಾರೆ ಭಗವಂತನಲ್ಲಿ ಸಂಪೂರ್ಣ ಶರಣಾಗತಿ ಮಾಡಿ, ನಂತರ ನಿಮ್ಮ ಭಾರವನ್ನು ಭಗವಂತನ ಮೇಲೆ ಹಾಕಿ ಸದಾ ದ್ವಯ ಮಂತ್ರವನ್ನು ಜಪಿಸುತ್ತಿರಿ[೫೮] ಎನ್ನುತ್ತಾರೆ.

* "ಒಬ್ಬನು ಅವನೆಷ್ಟೆ ಕನಿಷ್ಠನಾಗಿರಲಿ ನೀವು ಹೀಗೆ ಮಾಡಿದಾಗಲೆಲ್ಲಾ ಅದನ್ನು ನನಗೇ ಮಾಡಿದಿರಿ.[೫೯]" ಎನ್ನುವುದರ ಮೂಲಕ ಪರರ ಸೇವೆಯೆ ಪರಮಾತ್ಮನ ಸೇವೆ ಎಂದು ಯೇಸು ತಿಳಿಸುತ್ತಾನೆ. ರಾಮಾನುಜರು ಸಹ ಭಗವಂತ ಸೇವೆಗಿಂತ, ಭಾಗವತರ ಹಾಗೂ ದೀನದಲಿತರ ಮೇಲುಕೀಳು, ಬಡವ-ಬಲ್ಲಿದ ಎಂಬ ಬೇದ ಭಾವ ಎನಿಸದೆ ಸೇವೆ ಮಾಡಿದರೆ ಭಗವಂತ ಸುಪ್ರೀತನಾಗುತ್ತಾನೆ ಎಂದು ತಿಳಿಸುತ್ತಾನೆ.

ಯೇಸುಕ್ರಿಸ್ತ ಹಾಗೂ ರಾಮಾನುಜ ಇಬ್ಬರೂ ಸಹ ತಮ್ಮ ಅನುಯಾಯಿಗಳಿಗೆ ಈ ರೀತಿಯ ಸಮಾನಾರ್ಥ ಸಂದೇಶ ನೀಡುತ್ತಾರೆ: ಪ್ರಾಪಂಚಿಕ ವಿಷಯಗಳ ಕಡೆಗೆ ಎಳೆಯುವ ಭೋಗ ಭಾಗ್ಯಗಳಿಗೆ ಮರುಳಾಗದೆ, ಮನುಷ್ಯನ ಜೀವನವು ಪರರ ಸೇವೆಗಾಗಿ ಇದೆ. ಸ್ವಾರ್ಥಕ್ಕಾಗಿ ಅಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆನ್ನುತ್ತಾರೆ. ನಿಮ್ಮ ಉದ್ಯೋಗ ಮತ್ತಿತರ ಕೆಲಸಗಳಲ್ಲಿ ನೀವು ಮಾಡುವ ಕರ್ತವ್ಯ ಕರ್ಮಗಳು ಇಹಲೋಕದಲ್ಲಿ ಯಶಸ್ಸು ಮತ್ತು ಹಣಗಳಿಸುವ ಸಲುವಾಗಿ ಆಗದೆ ಜನತಾ ಜನಾರ್ಧನನ ಸೇವೆಗಾಗಿ ಆಗುವಂತೆ ಎಚ್ಚರವಹಿಸಿ" ಎನ್ನುತ್ತಾರೆ.

ಯೇಸುಕ್ರಿಸ್ತ ಹಾಗೂ ರಾಮಾನುಜರ ಸಮಾನ ಧಾರ್ಮಿಕ ಬೋಧನೆಗಳನ್ನು ಅವಲೋಕಿಸುವಾಗ ಇವರಿಬ್ಬರ ಸಮಾನ ಬೋಧನೆಗಳು ಇಡೀ ಜಗತ್ತಿನ ಜನತೆಯು ಅನುಸರಿಸಬಹುದಾದ ಜೀವನ ಸೂತ್ರ ಆಗಿದೆ ಎಂಬುದನ್ನು ಎಲ್ಲರೂ ಮನಗಾಣಬಹುದಾಗಿದೆ.

೩.೪ ಪ್ರವಾದಿ ಪರಂಪರೆ ಮತ್ತು ಧಾರ್ಮಿಕ ಸಂವಾದಗಳು

ದೇವರ ಸಂದೇಶವನ್ನು ಮನುಕುಲಕ್ಕೆ ನೀಡಲು ಕರೆಯಲ್ಪಟ್ಟ ವ್ಯಕ್ತಿಯೇ ಪ್ರವಾದಿ. "ಬೈಬಲ್‌ನಲ್ಲಿ ಹೆಚ್ಚಾಗಿ ಪ್ರವಾದಿ ಪರಂಪರೆಯನ್ನು ಕಾಣುತ್ತೇವೆ. ಪ್ರವಾದಿಗಳ ಕ್ರಿಯೆಗಳಾಗಲಿ, ಮಾತುಗಳಾಗಲಿ ಬಹಳಷ್ಟು ಸಾರಿ ಸಾಂಕೇತಿಕ ರೂಪದಲ್ಲಿದ್ದು. ಇವು ನಂಬಿಕೆ, ಭರವಸೆ ಹಾಗೂ ಎಚ್ಚರಿಕೆಯನ್ನು ಕೊಡುವಂತಹವಾಗಿವೆ. ಯಹೂದಿ ಸಮುದಾಯವು ತನ್ನ ದೇವರಿಗೆ ನಂಬಿಕಸ್ಥರಾಗಿ ಬಾಳುವಂತೆ ಪದೇ ಪದೇ ಪ್ರವಾದಿಗಳು ಕರೆ ನೀಡುತ್ತಾರೆ.[೬೦]

"ಯೆಹೂದಿ ಹಾಗೂ ಕ್ರೈಸ್ತ ಧರ್ಮಗಳೆರಡೂ ಪ್ರವಾದಿಯ ಸುತ್ತ ಕೇಂದ್ರೀಕೃತವಾಗಿವೆ.[೬೧] ಬಹುತೇಕ ಪ್ರವಾದಿಗಳ ಜೀವನ ಅತ್ಯಂತ ಶೋಚನೀಯವಾಗಿರುವುದನ್ನು ಬೈಬಲ್ ಗ್ರಂಥದಲ್ಲಿ ಕಾಣಬಹುದಾಗಿದೆ. ಬೈಬಲ್ ಗ್ರಂಥದಲ್ಲಿ ಬರುವ ಪ್ರವಾದಿಗಳೆಲ್ಲರು ಮುಂದಿನ ಜೀವನ ಸುಖಕರವಾಗಿರಲು 'ಯಾವೆ' ದೇವರಿಗೆ ನಂಬಿಕಸ್ಥರಾಗಿ ನ್ಯಾಯಬದ್ಧವಾದ ಜೀವನವನ್ನು ಜೀವಿಸುವಂತೆ ಪ್ರವಾದಿಸುತ್ತಾರೆ.

ಇದು ಕ್ರೈಸ್ತ ಧರ್ಮದ ಪ್ರವಾದಿ ಪರಂಪರೆಯಾದರೆ, "ಹಿಂದೂ ಧರ್ಮದಲ್ಲಿ ಅದರಲ್ಲೂ ಪ್ರಾಚೀನ ಭಾರತದಲ್ಲಿ ಕಾಲಜ್ಞಾನವನ್ನು ಮುಖ್ಯವಾಗಿ ಶಕುನ ಮತ್ತು ಉತ್ಪಾತಗಳಿಂದ ಉಂಟಾಗುವ ದುಷ್ಪರಿಣಾಮಗಳನ್ನು ಪರಿಹರಿಸಿಕೊಳ್ಳಲು ಬಳಸುತ್ತಿದ್ದರು.[೬೨] ಪ್ರವಾದಿಗಳ ಬದುಕು ಅಷ್ಟೊಂದು ಸುಖಕರವಾಗಿರುವುದಿಲ್ಲ. ಏಕೆಂದರೆ ಇವರು ನೇರವಾಗಿ ಸಮಾಜದಲ್ಲಿ ನಡೆಯುವ ಅಕ್ರಮ, ಅನ್ಯಾಯ, ಅತ್ಯಾಚಾರಗಳನ್ನು ಖಂಡಿಸಿ ಪಟ್ಟಭದ್ರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ದೇವರ ಅಭಿಲಾಷೆಯನ್ನು ತಿಳಿಸಬೇಕಾಗುತ್ತಿತ್ತು.

ಜನ ಸಾಮಾನ್ಯರ, ರಾಜ ಮಹಾರಾಜರ, ಅಧಿಕಾರ ವರ್ಗದವರ, ವ್ಯಾಪಾರಸ್ಥರ, ಸೈನಿಕರ ಹೀಗೆ ಸಮಾಜದ ಎಲ್ಲಾ ವರ್ಗದ ಜನತೆಗೆ ಅವರ ಬಾಳಿಗೆ ಬೇಕಾಗಿರುವ ಭರವಸೆಯನ್ನು, ಹಾಗೂ ತಪ್ಪು ಮಾಡಿದಾಗ ಖಂಡನೆಯನ್ನು ಎಚ್ಚರಿಕೆಯನ್ನು ಉಂಟುಮಾಡಿ ಸದಾ ರುಜುಮಾರ್ಗದಲ್ಲೇ ಜೀವನ ಸಾಗಿಸುವಂತೆ ಮಾಡುವುದೇ ಪ್ರವಾದಿಗಳ ಕರ್ತವ್ಯ. ಹೀಗೆ ವ್ಯಕ್ತಿ ಸಮಾಜವನ್ನು ತಿದ್ದಲು ಹೊರಡುವಾಗ ಅನೇಕ ರೀತಿಯ ತೊಂದರೆಗಳು, ತಾಪತ್ರಯಗಳು, ಜೀವ ಭಯ ಸಹಜ. ಇದು ಧಾರ್ಮಿಕ ರಂಗದಲ್ಲಾಗಿರಬಹುದು, ಆಡಳಿತ ರಂಗದಲ್ಲಾಗಿರಬಹುದು ಅಥವಾ ಸಮಾಜಿಕ ರಂಗದಲ್ಲಾಗಿರಬಹುದು. ಒಟ್ಟಿನಲ್ಲಿ ಪ್ರಗತಿಗೆ ಸುಧಾರಣೆಗೆ ಯಾವಾಗಲು ಪಟ್ಟಭದ್ರರಿಂದ ವಿರೋಧ ಇದ್ದೇ ಇರುತ್ತದೆ. ಜನರ ಅಜ್ಞಾನ ಮೂಡನಂಬಿಕೆಗಳನ್ನೇ ಬಂಡವಾಳವಾಗಿಸಿಕೊಂಡು ಜೀವಿಸುತ್ತಿರುವ ಪುರೋಹಿತಶಾಹಿಯ ವಿರುದ್ಧ ಧಾರ್ಮಿಕ ಸುಧಾರಣೆ ತಂದಾಗ, ಆ ವರ್ಗ ಪ್ರವಾದಿಯ ವಿರುದ್ಧ ಹೋರಾಡಿ ಅಂತಹ ಪ್ರವಾದಿಯನ್ನು

ಹೊಸಕಿ ಹಾಕುವುದು ಸಹಜವೇ ಆಗಿದೆ. ಹೀಗೆ ಪ್ರವಾದಿಗಳು ಬದುಕಿದ್ದಾಗ ಅವರ ಜೀವನ ಅಸಹನೀಯವಾಗಿರುತ್ತದೆ. ಜೀವನಾದಾದ್ಯಂತ ಹಿಂಸೆ, ನೋವು, ಬಳಲಿಕೆಗೆ ಒಳಗಾಗಬೇಕಾಗುತ್ತದೆ. ಆದರೆ ಮರಣದ ನಂತರ ಅವರ ಯೋಜನೆ-ಯೋಜನೆ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳುವ ಆಪ್ತವರ್ಗ ಅವರನ್ನು ಪೂಜಿಸಿ, ಗೌರವಿಸಿ ದೈವತ್ವಕ್ಕೆ ಏದುರಿಸಿ ಅವರ ಸಿದ್ಧಾಂತವನ್ನು ಬೋಧನೆಯನ್ನು ಪ್ರಚುರಪಡಿಸುತ್ತದೆ.

ಈ ಪ್ರವಾದಿ ಪರಂಪರೆಗಳ ಸಾಲಿನಲ್ಲಿ ಯೇಸುಕ್ರಿಸ್ತ, ಬುದ್ಧ, ಮಹಾವೀರ, ಬಸವಾದಿ ಶರಣರನ್ನು ಇನ್ನೂ ಅನೇಕರನ್ನು ಗುರುತಿಸಬಹುದು. ತಮ್ಮಗಳ ಜೀವಿತ ಕಾಲದಲ್ಲಿ ಸಾಮಾಜಿಕ ಧಾರ್ಮಿಕ ಬದಲಾವಣೆಗಾಗಿ ಹೋರಾಡಿ ಬಡಿದಾಡಿ ಸಮಾಜೋ-ಧಾರ್ಮಿಕ ಚಳುವಳಿಯನ್ನು ಆರಂಭಿಸಿ ತುಳಿತಕ್ಕೆ ಒಳಗಾದವರಿಗೆ ಆಶಾಕಿರಣವಾಗಿ ಮೂಡಿ ಬಂದವರು. ಆದರೆ ಈ ಪ್ರವಾದಿಗಳು ಬದುಕಿದಾಗ ಅವರಲ್ಲಿ ಕೆಲವರನ್ನು ಕಲ್ಲೆಸೆದು ಕೊಂದರು, ಮತ್ತೆ ಕೆಲವರನ್ನು ಶಿಲುಬೆಗೇರಿಸಿದರು, ಹಲವರನ್ನು ಈ ದೇಹದಿಂದಲೇ ದೂರವಾಗುವಂತೆ ಮಾಡಿ ಹಿಂಸಿಸಿದರು. ಆಯಾಯಾ ಸಮಾಜದ ಪಟ್ಟಭದ್ರರುಗಳು. ಹೀಗೆ ಸಾಗುವ ಪ್ರವಾದಿ ಪರಂಪರೆ ಆಚಾರ್ಯ ಪರಂಪರೆಗಿಂತ ಭಿನ್ನವಾಗಿ ಸಾಗಿ ಸಮಾಜೋ ಧಾರ್ಮಿಕತೆಯ ಸರ್ವಾಂಗೀಣ ಪ್ರಗತಿಗೆ ತನ್ನನ್ನೂ ಮೀಸಲಾಗಿರಿಸುವುದನ್ನು ನೋಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಾಯದಲ್ಲಿ ಬುದ್ಧ, ಮಹಾವೀರ, ದಾಸರು ಹಾಗೂ ಅವಧೂತರೊಂದಿಗಿನ ಧಾರ್ಮಿಕ ಸಂವಾದವನ್ನು ಕಾಣಬಹುದಾಗಿದೆ.

೩.೪.೧ ಗೌತಮ ಬುದ್ಧನ ಬೌದ್ಧ ಧರ್ಮ

ಗೌತಮ ಬುದ್ಧನು ಶ್ರೀಮಂತನಾದ ಶುದ್ಧೋದನ ಮಾಯಾದೇವಿಯವರ ಮಗ. ಪ್ರಸ್ತುತ ಬಿಹಾರದಲ್ಲಿರುವ ಕಪಿಲವಸ್ತು ಎಂಬಲ್ಲಿ ಕ್ರಿ.ಪೂ. ೫೦೦ ವರ್ಷಗಳ ಹಿಂದೆ ಅಂದರೆ, ಐತಿಹ್ಯದ ಪ್ರಕಾರ ಕ್ರಿ.ಪೂ. ೫೬೩ನೇ ಇಸವಿ, ವೈಶಾಖ ಶುದ್ಧ ಪೂರ್ಣಿಮೆಯ ದಿನ ಜನಿಸಿದ.[೬೩] ಸಿರಿವಂತಿಕೆ ಗೌತಮನಿಗೆ ಸುಖ ನೀಡಲಿಲ್ಲ. ಪುತ್ರ ಪತ್ನಿಯರು ಅವನ ಮನಕ್ಕೆ ಮುದ ನೀಡಲಿಲ್ಲ. ಈ ಬದುಕು ಏಕೆ? ಈ ಜೀವ ಆರಂಭವಾದುದು ಎಲ್ಲಿಂದ? ಹೋಗುವುದೆಲ್ಲಿಗೆ? ಎಂಬುದರ ಬಗ್ಗೆ ಜಿಜ್ಞಾಸು ಆಗಿ ಚಿಂತಿಸತೊಡಗಿದ. ಕಡೆಗೆ ತನ್ನ ರಾಜ್ಯ, ಪತ್ನಿ, ಪುತ್ರನನ್ನು ತೊರೆದು ಆತ್ಮ ವಿಕಸನದ ಮಾರ್ಗದತ್ತ ಮುನ್ನಡೆದ ಏಳು ವರ್ಷಗಳ ಕಠಿಣ ತಪಸ್ಸಿನ ನಂತರ ವೈಶಾಖ ಶುದ್ಧ ಪೂರ್ಣಿಮೆಯಂದು ಗಯೆಯಲ್ಲಿ ಅರಳಿಮರದ ಕೆಳಗೆ ಕುಳಿತು ಧ್ಯಾನಿಸುವಾಗ ಜ್ಞಾನೋದಯವಾಯಿತು.

"ಗೌತಮನಾದವನು ಬೋಧಿ ದೃಷ್ಟಿಯನ್ನು ಪಡೆದು ಬದ್ಧನಾದ ಸಂದರ್ಭದಲ್ಲಿ ಮನುಷ್ಯನ ದುಃಖಕ್ಕೆ ಕಾರಣವಾದ ನಾಲ್ಕು ಶ್ರೇಷ್ಠ ಸತ್ಯಗಳನ್ನು ಮತ್ತು ಅವುಗಳಿಂದ ವ್ಯಕ್ತಿ ಪಾರಾಗಬೇಕಾದರೆ ಅನುಸರಿಸಬೇಕಾದ ಅಷ್ಟಾಂಗ ಮಾರ್ಗಗಳನ್ನು ಕಂಡುಕೊಂಡ. ಆಗ ಅವನ ಮುಂದೆ ಮನುಷ್ಯರನ್ನು ಕಾಡುವ ಪ್ರಲೋಭನೆಗಳ, ಕಾಮನೆಗಳ ರೂಪವಾದ ಮಾರನು ಮತ್ತೊಮ್ಮೆ ಬಂದು 'ಇನ್ನು ಬದ್ಧನಾಗಿರುವ ನೀನು ಈ ಲೋಕವನ್ನು ತ್ಯಜಿಸಬಹುದು' ಎಂದು ಹೇಳಿದ. ಬಳಿಕ ಬುದ್ಧನು 'ಗತ್ತಿನ ಜೀವರುಗಳೆಲ್ಲ ಬುದ್ಧನಾಗುವ ದಾರಿಯಲ್ಲಿ ಸಾಗಬೇಕು. ಅಲ್ಲಿವರೆಗೂ ನಾನು ಬರಲಾರೆ' ಎಂದು ಮಾರನ ಮಾತನ್ನು ತಿರಸ್ಕರಿಸಿದ.[೬೪]

ಬುದ್ಧನು ತಾನು ಕಂಡುಕೊಂಡ ಸತ್ಯಗಳನ್ನು ಜಗತ್ತಿನ ಎಲ್ಲ ಮೂಲೆಗಳಿಗೂ ಸಾರಲು ನಿಶ್ಚಯಿಸಿದ. ಕ್ಲೇಶಗಳ ಧೂಳಿನಿಂದ ಮಸುಕಾಗಿರುವ ಜಗತ್ತಿನ ಜೀವರಾಶಿಗಳ ಕಣ್ಣನ್ನು ಶುಚಿಯಾಗಿಸಿ, ಅವೂ ಬುದ್ಧನ ಕಣ್ಣನ್ನು ಪಡೆದುಕೊಳ್ಳುವ ದಾರಿಯನ್ನು ತೋರಿಸಲು ಹೊರಟ.

"ಅರಿವು ಮೈದೋರಿದ ಸಂದರ್ಭದಲ್ಲಿ ಭಗವಾನ್ ಬುದ್ಧನು ತಾನು ಕಂಡುಕೊಂಡ ನಂತರ ಇತರರಿಗೆ ಬೋಧಿಸಿದ ನಾಲ್ಕು ಶ್ರೇಷ್ಠ ಸತ್ಯಗಳು ಇವು.

೧. ಬದುಕು ದುಃಖದಿಂದ ಕೂಡಿದೆ.

೨. ದುಃಖದ ಉದಯ

೩. ದುಃಖ ನಿವಾರಣೆ

೪. ದುಃಖ ನಿವಾರಣೆಯ ಮಾರ್ಗ[೬೫]

೧. ಬದುಕು ದುಃಖದಿಂದ ಕೂಡಿದೆ.

ಬದುಕು ದುಃಖದಿಂದ ಕೂಡಿದೆ ಎಂಬುದು ಮೊದಲನೆಯ ಸತ್ಯ. ಹುಟ್ಟು, ಸಾವು, ಮುಪ್ಪು, ರೋಗ ರುಜಿನಗಳು ಬದುಕನ್ನು ಯಾತನಮಯವನ್ನಾಗಿಸಿವೆ. ಬೇಕೆನಿಸುವ ಸಂಬಂಧ ದೂರವಾಗುವುದರಿಂದ ವಿಯೋಗ, ಎಲ್ಲವೂ ಬದುಕನ್ನು ದುಃಖಮಯವನ್ನಾಗಿಸಿವೆ. ನಾವು ಯಾವುದನ್ನು ಬದುಕಿನಲ್ಲಿ ಸುಖಮಯ ಕ್ಷಣಗಳೆಂದು ಪರಿಗಣಿಸುತ್ತೇವೆಯೋ, ಆ ಕ್ಷಣಕ್ಕಾಗಿ ಕಾತರಿಸುವುದೂ ಕೂಡ ಮತ್ತೆ ಮತ್ತೆ ದುಃಖವೇ ಆಗಿರುತ್ತದೆ. ಪ್ರತಿ ಕ್ಷಣದಲ್ಲೂ ಎಲ್ಲವೂ ಬದಲಾಗುತ್ತಿರುವ ಈ ಪ್ರಪಂಚದಲ್ಲಿ ಸುಖವೆಂಬುದು ಶಾಶ್ವತ ನೆಲೆಯಲ್ಲ. ಅದೂ ಕೂಡ ಬದುಕನ್ನು ದುಃಖದತ್ತ ಕೊಂಡೊಯ್ಯುವ ತತ್‌ಕ್ಷಣದ ಅವಸ್ಥೆ ಮಾತ್ರ. ಅಂದರೆ ಬದುಕನ್ನು ಅದರಿಂದ ಹೊರಗೆ ನಿಂತು ನೋಡಿದಾಗ ಕಾಣುವ ಸ್ಥಿರ ಸತ್ಯವೆಂದರೆ, ಬುದುಕು ದುಃಖದಿಂದ ಕೂಡಿದೆ ಎಂಬುದು.

೨. ದುಃಖದ ಉದಯ

ದುಃಖದ ಉದಯ. ವ್ಯಕ್ತಿಯ ಬಯಕೆಗಳೆ ದುಃಖದ ಉದಯಕ್ಕೆ ಕಾರಣವಾಗುತ್ತವೆ ಎಂಬುದು ಎರಡನೆಯ ಶ್ರೇಷ್ಠ ಸತ್ಯ. ವ್ಯಕ್ತಿಯ ಬಯಕೆಗಳು ಹಲವಾರು. ಇಂದ್ರಿಯ ಭೋಗಗಳು, ಶಕ್ತಿ, ಸಂಪತ್ತು, ಅಧಿಕಾರದ ಅಭಿಲಾಷೆ ಇತ್ಯಾದಿ. ಇದಿಷ್ಟೆ ಅಲ್ಲದೆ, ಕಲ್ಪನೆಗಳಿಗೆ, ಭಾವನೆಗಳಿಗೆ, ಅಭಿಪ್ರಾಯಗಳಿಗೆ, ಸಿದ್ಧಾಂತಗಳಿಗೆ, ನಂಬಿಕೆಗಳಿಗೆ ಅಂಟಿಕೊಂಡಿರುವುದು. ಬಯಕೆಯ ಇನ್ನೊಂದು ಮುಖವೇ ಆಗಿರುತ್ತದೆ. ಅರ್ಥಾತ್, ವ್ಯಕ್ತಿಯ ಯಾವುದೇ ಸ್ವಾರ್ಥಪರ ಆಸೆ ಆಕಾಂಕ್ಷೆಗಳು ಅಂತಿಮವಾಗಿ ದುಃಖದ ಉದಯಕ್ಕೆ ಫಲವತ್ತಾದ ನೆಲೆಗಳಾಗಿಯೇ ಕಾರ್ಯ ನಿರ್ವಹಿಸುತ್ತವೆ.

೩. ದುಃಖ ನಿವಾರಣೆ

ದುಃಖ ನಿವಾರಣೆಯೇ ಮೂರನೆಯ ಶ್ರೇಷ್ಠ ಸತ್ಯ. ವ್ಯಕ್ತಿ ತನ್ನ ಆಶೆ, ಬಯಕೆ ಅಥವಾ ತೃಷೆಗಳನ್ನು ಇಲ್ಲವಾಗಿಸಿಕೊಂಡಲ್ಲಿ, ಅವನಿಗೆ ಜೀವನದಲ್ಲಿ ಪಡೆದುಕೊಳ್ಳಲು ಏನೂ ಇಲ್ಲವಾದುದರಿಂದಾಗಿ ಯಾವ ಸಂಕಷ್ಟಗಳಿಗೂ ಅವನು ಸಿಕ್ಕಿಕೊಳ್ಳುವುದಿಲ್ಲ. ಅತೃಪ್ತ ಆಸೆ, ಬಯಕೆಗಳ ಪೂರೈಕೆಗಾಗಿ ಮತ್ತೊಂದು ಜನ್ಮವೆತ್ತಬೇಕಾಗುತ್ತದೆ. ಮತ್ತೆ ಜನ್ಮವೆತ್ತಿದಾಗ ಹೊಸ ಹೊಸ ಆಶೆ, ಬಯಕೆಗಳು ಚಿಗುರುತ್ತವೆ. ಹೊಸ ಬಯಕೆಗಳ ಪೂರೈಕೆಗಾಗಿ ಜೀವ ಮರುಹುಟ್ಟು ಪಡೆಯುವತ್ತ ಧಾವಿಸುತ್ತದೆ. ಹೀಗೆ ವ್ಯಕ್ತಿ ಹುಟ್ಟು ಸಾವುಗಳ ಭವಚಕ್ರದಲ್ಲಿ ಸಿಲುಕಬೇಕಾಗುತ್ತದೆ.

೪. ದುಃಖದ ನಿವಾರಣೆಯ ಮಾರ್ಗ

ದುಃಖ ನಿವಾರಣೆಯ ಮಾರ್ಗವೆ ನಾಲ್ಕನೆಯ ಶ್ರೇಷ್ಠ ಸತ್ಯ. "ವ್ಯಕ್ತಿ ಹುಟ್ಟು ಸಾವುಗಳ ಭವಚಕ್ರದಿಂದ ಪಾರಾಗಲು ಇರುವ ಏಕೈಕ ಉಪಾಯವೆಂದರೆ ಬಯಕೆಗಳನ್ನು ಇಲ್ಲವಾಗಿಸಿಕೊಳ್ಳುವುದು ಮಾತ್ರ. ಆಶೆ ಬಯಕೆಗಳನ್ನು ಇಲ್ಲವಾಗಿಸಿಕೊಂಡು, ಹುಟ್ಟು ಸಾವುಗಳ ಭವಚಕ್ರದಿಂದ ಪಾರಾಗಬೇಕಾದರೆ, ವ್ಯಕ್ತಿ ಅನುಸರಿಸಬೇಕಾದ ಮಾರ್ಗವೆ ಬುದ್ಧನು ಕಂಡುಕೊಂಡ ನಾಲ್ಕನೆಯ ಸತ್ಯ. ಅದನ್ನೆ ಅಷ್ಟಾಂಗಿಕ ಮಾರ್ಗವೆಂದು ಕರೆಯಲಾಗಿದೆ. ಇದನ್ನು ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಚನ, ಸಮ್ಯಕ್ ಕ್ರಿಯಾ,

ಸಮ್ಯಕ್ ಅಜೀವ, ಸಮ್ಯಕ್ ಏಕಾಗ್ರತೆ, ಸಮ್ಯಕ್ ಪ್ರಯತ್ನ ಮತ್ತು ಸಮ್ಯಕ್ ಭಾವ ಎಂಬ ಎಂಟು ಅಂಗಗಳಲ್ಲಿ ವಿಭಾಗಿಸಲಾಗಿದೆ".[೬೬]

ಬುದ್ಧನ ಈ ಅಷ್ಟಾಂಗ ಮಾರ್ಗ ಇಡೀ ಜಗತ್ತಿನ ಸರ್ವ ಜನರನ್ನು ಆಹ್ವಾನಿಸಿ ಬುದ್ಧರಾಗುವಂತೆ ಕರೆನೀಡುತ್ತದೆ. ಬುದ್ಧನ ಈ ಬೋಧನೆ ವೈದಿಕಶಾಹಿಯು, ಕುಯುಕ್ತಿಗೆ ಬಲಿಯಾಗಿ ಪುರೋಹಿತಶಾಯಿಯ ದಬ್ಬಾಳಿಕೆಗೆ ಒಳಗಾಗಿ ನಲುಗಿದ್ದ ಜನಸಾಮಾನ್ಯರಿಗೆ ಅಮೃತ ಸಿಂಚನವನ್ನು ಉಂಟುಮಾಡಿತು. ಬುದ್ಧನ ಈ ಮಾರ್ಗ ಜನಪ್ರಿಯ ಮಾರ್ಗವಾಗಿ ಭಾರತ ಹಾಗೂ ಇತರೆ ಪೌರಾತ್ಯ ರಾಷ್ಟ್ರಗಳಲ್ಲೆಲ್ಲಾ ಬಹುಬೇಗನೆ ಪಸರಿಸಿತು.

"ಮಾನವ ಜಗತ್ತಿನ ಬುದ್ಧ ದೇವನು ಪ್ರೇಮ, ಕರುಣೆ, ಅನುಕಂಪಗಳ ದಾರಿಯನ್ನು ತೋರಿದ್ದಾನೆ. ಲೋಕದ ಎಲ್ಲ ದುಃಖಗಳ ಆಚೆಗೆ ಮುನ್ನಡೆದು ಗಂಧವತಿ ಪೃಥ್ವಿಯ ನಿಜದ ಕಂದಮ್ಮಗಳಾಗಿ ತುಂಬು ಪ್ರಸನ್ನತೆಯಿಂದ ಬದುಕುವ ಬಗೆಗೆ ನಮಗೆಲ್ಲ ದಾರಿದೀಪವಾಗಿದ್ದಾನೆ".[೬೭] ಎಂಬ ನುಡಿ ಆರ್ಯಸತ್ಯಗಳೇ ಆಗಿವೆ.

೩.೪.೨ ಯೇಸುಕ್ರಿಸ್ತ ಹಾಗೂ ಗೌತಮ ಬುದ್ದರ ನಡುವಿನ ಹೋಲಿಕೆಗಳು

ಹೊಸ ಒಡಂಬಡಿಕೆಯಲ್ಲಿ ಅದರಲ್ಲೂ ಮುಖ್ಯವಾಗಿ ಪರ್ವತದ ಮೇಲಿನ ಪ್ರಸಂಗದಲ್ಲಿ ಯೇಸುಕ್ರಿಸ್ತನು ಬಿಂಬಿಸುವ ದೇವರ ಚಿತ್ರಕ್ಕೂ ಹಳೆ ಒಡಂಬಡಿಕೆಯಲ್ಲಿ ಬಿಂಬಿಸಿರುವ ದೇವರ ಚಿತ್ರಕ್ಕೂ ವ್ಯತ್ಯಾಸವಿದೆ.

ಹಳೆ ಒಡಂಬಡಿಕೆಯಲ್ಲಿ ದೇವರು ಮುಯ್ಯಿ ತೀರಿಸುವ ದೇವರಾಗಿ ಪ್ರತೀಕಾರ ಮಾಡುವ ದೇವರಾಗಿದ್ದಾರೆ.[೬೮] ತಾನು ಆಯ್ದುಕೊಂಡ ಇಸ್ರಾಯೇಲ್ ಜನಾಂಗದವರು ತಪ್ಪು ಮಾಡಿದಾಗ ಅವರನ್ನು ದಂಡಿಸುವ, ಶಿಕ್ಷಿಸುವ ದೇವರಾಗಿದ್ದಾರೆ. ಮೋಡಗಳ ಮರೆಯಲ್ಲಿ ತನ್ನ ಸಿಂಹಾಸನದಲ್ಲಿ ಕುಳಿತು ತನ್ನ ಜನರನ್ನು ಉಗ್ರವಾಗಿ ಶಿಕ್ಷಿಸುವ ದೇವರ ಚಿತ್ರ ಹಳೆ ಒಡಂಬಡಿಕೆಯಲ್ಲಿದೆ.

ಆದರೆ, ಪರ್ವತ ಪ್ರಸಂಗದಲ್ಲಿ ಯೇಸುಕ್ರಿಸ್ತ ದೇವರನ್ನು ವಿಭಿನ್ನವಾಗಿ ತೋರಿಸುತ್ತಾನೆ. ದೇವರು ಪ್ರೀತಿಸುವ ದೇವರಿದ್ದಾನೆ- ಕ್ಷಮಿಸುವ ದೇವರಾಗಿದ್ದಾನೆ - ಮುರಿದ ಹೃದಯಗಳನ್ನು ಒಂದುಗೂಡಿಸುವ ದೇವರಾಗಿದ್ದಾನೆ. - "ನಿನ್ನಂತೆಯೆ ನಿನ್ನ ನೆರೆಹೊರೆಯವರನ್ನು ಪ್ರೀತಿಸು - ನಿನ್ನ ಬಲಗೆನ್ನೆಯನ್ನು ಹೊಡೆದವನಿಗೆ ನಿನ್ನ ಎಡಗೆನ್ನೆಯನ್ನು ತೋರಿಸು, ಎನ್ನುವ ಕ್ಷಮಾ ಗುಣದ ದೇವರಾಗಿದ್ದಾನೆ".[೬೯] ಹೊಸ ಒಡಂಬಡಿಕೆಯಲ್ಲಿ ಯೇಸುಕ್ರಿಸ್ತ ದೇವರನ್ನು ಪ್ರೀತಿಸುವ ತಂದೆಯಾಗಿ, ಕ್ಷಮಿಸುವ ತಂದೆಯಾಗಿ ಕರುಣಾಮಯಿಯಾಗಿ ಚಿತ್ರಿಸಿದ್ದಾನೆ. ಯೇಸುಸ್ವಾಮಿಯ ಕಾಲದಲ್ಲಿ ಮೆಡಿಟರೆನಿಯನ್ ಹಾಗೂ ಸುತ್ತಮುತ್ತ ವಾಸಿಸುತ್ತಿದ್ದ ಸೆಮೆಟಿಕ್ ಜನ ಸಮುದಾಯದಲ್ಲಿ ಎಲ್ಲೂ ದೇವರನ್ನು ಕರುಣಾಮಯಿ, ಕ್ಷಮಾನಿಧಿ, ಪ್ರೀತಿ ಸ್ವರೂಪಿ ಎಂದು ಬಿಂಬಿಸುತ್ತಿರಲಿಲ್ಲ. ಬದಲಾಗಿ ದೇವರನ್ನು ಉಗ್ರಪ್ರತಾಪಿ, ಶಿಕ್ಷಿಸಿ, ದಂಡಿಸಿ, ಬೆದರಿಸುವ ದೇವರಾಗಿ ಕಾಣಲಾಗುತ್ತಿತ್ತು. ಹಾಗಾದರೆ ಯೇಸುಕ್ರಿಸ್ತನಿಗೆ ಪರ್ವತ ಮೇಲಿನ ಪ್ರಸಂಗದಲ್ಲಿ ತೋರಿದ ದೇವರ ಚಿತ್ರಣ, ಪರಿಕಲ್ಪನೆ ಆತನಲ್ಲಿ ಬಂದಿದ್ದಾದರೂ ಹೇಗೆ? ಈ ಪ್ರಶ್ನೆಗೆ ಶ್ರೀಯುತ ಹೋಲ್ಗರ್ ಕರೆಸ್ಟೆನ್‌ರವರು "Jesus lived in India" ಎಂಬ ಪುಸ್ತಕದಲ್ಲಿ ಈ ರೀತಿ ದಾಖಲಿಸಿದ್ದಾರೆ."

ಈ ಪ್ರಶ್ನೆಗೆ ಬುದ್ಧನ ಕಾಲದ ನಂತರ ಬರೆದ ಗ್ರಂಥಗಳಲ್ಲಿ ಉತ್ತರವನ್ನು ಕಾಣಬಹುದು. 'ಲಲಿತ ವಿಸ್ತರ' ಎಂಬ ಸಂಸ್ಕೃತ ಭಾಷೆಯಲ್ಲಿ ಬರೆದ ಬುದ್ಧನ ಆತ್ಮಕಥನದಲ್ಲಿ ಸ್ವಲ್ಪಮಟ್ಟಿಗೆ ಉತ್ತರವನ್ನು ಕಾಣಬಹುದು. ಲಲಿತ ವಿಸ್ತರದಲ್ಲಿ ಬುದ್ಧ ಈ ರೀತಿ ಹೇಳುತ್ತಾನೆ. "ನಿರ್ವಾಣ ಹೊಂದುವುದೇ ನಿಜವಾದ ಜ್ಞಾನ- ಇದು ಅತ್ಯಂತ ಪರೋಮೊಚ್ಚ ಆಶೀರ್ವಾದ. ಪ್ರೀತಿಯಿಂದ ದ್ವೇಷವನ್ನು ನಿರ್ಮೂಲನ ಮಾಡಲು ಸಾಧ್ಯ; ಪರಿಪೂರ್ಣ ಪ್ರೀತಿಯಿಂದ ಕೆಡುಕನ್ನು ಗೆಲ್ಲಲು ಸಾಧ್ಯ..... ನಿಮ್ಮ ನೆರೆಯವರಿಗೆ ಕಟುವಾದ ಮಾತುಗಳನ್ನು ಆಡಬೇಡಿರಿ ಅವರು ಸಹ ನಿಮ್ಮೊಂದಿಗೆ ನೀವು ನಡೆದುಕೊಳ್ಳುವ ರೀತಿಯಲ್ಲೆ ನಡೆದುಕೊಳ್ಳುವರು."[೭೦]

ಇತ್ತ ಯೇಸುಕ್ರಿಸ್ತನ ಮಾತುಗಳನ್ನು ಗಮನಿಸುವ ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಮಾಡಿರಿ. ಇದೇ ಧರ್ಮಶಾಸ್ತ್ರದ ತಾತ್ಪರ್ಯ."[೭೧]

"ಒಮ್ಮೆ ಸುನಪೂರ್ತಾದ ವಣಿಕನೊರ್ವ ಬಂದು ಬುದ್ಧನನ್ನು ಉಪದೇಶಿಸಬೇಕೆಂದು ಕೇಳಿಕೊಂಡ. ಜನರು ಹಿಂಸಾ ಪ್ರವೃತ್ತರು, ಅನೇಕ ಬಾರಿ ಅನಗತ್ಯವಾಗಿ ಕಿರುಕುಳ ನೀಡಿ ಹೊಡೆದು ಬಡೆದು ಕೊಲ್ಲುವರು. ಆಗ ನೀನು ತಿಳಿ, ಮರಣ ಕೆಡುಕಲ್ಲ. ಬದಲಾಗಿ ಅದು ಮಹಾನವಮಿ ಎಂಬುದಾಗಿ".[೨೨] ಯೇಸುಕ್ರಿಸ್ತನು ಸಹ ತನ್ನ ಶಿಷ್ಯರಿಗೆ "ನಿನ್ನ ಸಹೋದರರನ ಮೇಲೆ ಸಿಟ್ಟಾಗಬೇಡ - ತನ್ನ ಸಹೋದರರನ ಮೇಲೆ ಸಿಟ್ಟುಗೊಳ್ಳುವ ಪ್ರತಿಯೊಬ್ಬನು ನ್ಯಾಯ ವಿಚಾರಣೆಗೆ ಗುರಿಯಾಗುವನು. ತನ್ನ ಸಹೋದರನನ್ನು ನೋಡಿ, ಛೀ ನೀಚಾ, ಮೂರ್ಖಾ ಅನ್ನುವವನು ಅಗ್ನಿ ನರಕಕ್ಕೆ ಗುರಿಯಾಗುವನು".[೨೩] ಕೆಡುಕನ್ನು ಎದುರಿಸಬೇಡ. ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು. ನಿನ್ನ ಸಂಗಡ ವ್ಯಾಜ್ಯ ಮಾಡಿ ನಿನ್ನ ಒಳ ಅಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನು ಕೊಟ್ಟು ಬಿಡು. ನಿನ್ನ ವೈರಿಗಳನ್ನು ಪ್ರೀತಿಸಿರಿ. ನಿಮ್ಮ ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ.[೨೪]

ಬುದ್ಧ ತನ್ನ ಆಪ್ತ ಶಿಷ್ಯ ಆನಂದನಿಗೆ "ನನ್ನನ್ನು ನಂಬು ಆನಂದ! ನನ್ನನ್ನು ನಂಬುವ ಎಲ್ಲರಿಗೂ ಪರಮಾನಂದ ಲಭಿಸುವುದು." ಅದೇ ರೀತಿ ಯೇಸುಕ್ರಿಸ್ತ ತನ್ನ ಶಿಷ್ಯರಿಗೆ "ನಿಮ್ಮ ಹೃದಯಗಳು ಕಳವಳಗೊಳ್ಳದಿರಲಿ. ನನ್ನನ್ನು ನಂಬಿರಿ....."[೨೫] ಒಮ್ಮೆ ಬುದ್ಧ ದಾನದ ಬಗ್ಗೆ ವಿವರಿಸುತ್ತ ದಾನ ಮಾಡುವುದೆಂದರೆ ಬೀಜವನ್ನು ಒಳ್ಳೆಯ ಭೂಮಿಯಲ್ಲಿ ಬಿತ್ತಿದ ಹಾಗೆ. ಅದು ಬಹುವಾಗಿ ಫಲವನ್ನು ನೀಡುವುದು. ಇದೇ ಹೋಲಿಕೆಯನ್ನು ಯೇಸು ಸ್ವಾಮಿಯ ಬೋಧನೆಯಲ್ಲೂ ಕಾಣಬಹುದು. ಬುದ್ಧ ಆಹಾರದ ಬಗ್ಗೆ ಮಾತನಾಡುತ್ತಾ - ತಿಂದ ಆಹಾರ ಮನುಷ್ಯನನ್ನು ನಾಶ ಮಾಡುವುದಿಲ್ಲ. ಬದಲಾಗಿ ಕೊಲೆ, ಸುಳ್ಳು, ಸೂಳೆಗಾರಿಕೆ ಇವೆಲ್ಲವನ್ನು ಯೋಚಿಸುವುದರ ಮೂಲಕವು ಮನುಷ್ಯ ಖಂಡಿತವಾಗಿ ನಾಶವಾಗುತದ್ದಾನೆ. ಇತ್ತ ಯೇಸುವಿನ ವಾಕ್ಯಗಳನ್ನು ಗಮನಿಸುವುದಾದರೆ "ಬಾಯೊಳಕ್ಕೆ ಹೋಗುವ ಆಹಾರವು ಹೊಟ್ಟೆಯಲ್ಲಿ ಸೇರಿ ಬಹಿರ್ದೆಶೆಯ ಮೂಲಕ ಹೊರಹೋಗುತ್ತದೆಂದು ನಿಮಗೆ ತಿಳಿಯದೆ? ಆದರೆ ಬಾಯಿಂದ ಹೊರಡುವಂತವುಗಳು ಮನಸ್ಸಿನೊಳಗಿಂದ ಬರುತ್ತವೆ. ಇವೇ ಮನುಷ್ಯನನ್ನು ಕೊಲೆ ಮಾಡುವವು. ಹೇಗೆಂದರೆ ಮನಸ್ಸಿನೊಳಗಿನಿಂದ ಕೆಟ್ಟ ಆಲೋಚನೆ, ಕೊಲೆ, ಹಾದರ, ಸೂಳೆಗಾರಿಕೆ, ಕಳ್ಳತನ, ಸುಳ್ಳು ಸಾಕ್ಷಿ, ಬೈಗಳು ಹೊರಟು ಬರುತ್ತವೆ. ಮನುಷ್ಯನನ್ನು ಕೆಡಿಸುವಂತವು" ಇವೆ.[೨೬]

ಒಬ್ಬ ಮನುಷ್ಯ ಆಳವಾದ ಗುಂಡಿಯಲ್ಲಿ ಸಂಪತ್ತನ್ನು ಹೂಳಿಟ್ಟಗೆ ಅವನಿಗೆ ಯಾವ ರೀತಿಯ ಉಪಯೋಗಕ್ಕೂ ಬರುವುದಿಲ್ಲ." ಎಂದು ಬುದ್ಧನ ಅಂಬೋಣವಾದರೆ, ಯೇಸುಕ್ರಿಸ್ತನ ಮಾತುಗಳು: "ನೀನು ಕೊಟ್ಟ ನಿಧಿಯನ್ನು ಭೂಮಿಯಲ್ಲಿ ಬಚ್ಚಿಟ್ಟೆನು......."[೨೭]

ಬುದ್ಧ: "ಈ ಆಕಾಶ ಮುರಿದು ಭೂಮಿಯ ಮೇಲೆ ಬೀಳಬಹುದು, ಇಡೀ ಭೂಮಂಡಲವನ್ನೇ ನುಂಗಿ ನಾಶಪಡಿಸಬಹುದು. ಆದರೂ, ಆನಂದ ಬುದ್ದನ ಮಾತುಗಳಾದರೋ ಸತ್ಯವಾಗಿರುತ್ತವೆ.

ಯೇಸುಕ್ರಿಸ್ತ: "ಆಕಾಶವೂ ಭೂಮಿಯು ಅಳಿದುಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದುಹೋಗಲಾರದು. ನಿಮಗೆ ಸತ್ಯವಾಗಿ ಹೇಳುತ್ತೇನೆ.[೨೮] ಮತ್ತೊಂದೆಡೆ ಬುದ್ದ, 'ನಾನು ಬುದ್ಧಿವಂತ ಕುರುಬ ದಾರಿ ತಪ್ಪಿದ ಕುರಿಗಳನ್ನು ಸರಿದಾರಿಗೆ ತರುವೆ;

ಕ್ರಿಸ್ತ: "ನಾನೇ ಒಳ್ಳೇ ಕುರುಬನು, ನನ್ನ ಕುರಿಗಳಿಗೋಸ್ಕರ ಪ್ರಾಣವನ್ನೇ ಕೊಡುತ್ತೇನೆ".[೭೯] ಈ ಎಲ್ಲಾ ಬುದ್ದನ ಹೇಳಿಕೆಗಳೂ, ಬಲವಾಗಿ ಕ್ರಿಸ್ತನ ಹೇಳಿಕೆಗಳಾಗಿವೆ. ಇವೆಲ್ಲವನ್ನು ಸುವಾರ್ತೆಗಳು ಚೆನ್ನಾಗಿ ದಾಖಲಿಸಿವೆ.

ಯೇಸುಕ್ರಿಸ್ತ ಸೈತಾನನಿಂದ ಶೋಧಿಸಲ್ಪಟ್ಟನು. ಮತ್ತಾಯ, ಮಾರ್ತ ಹಾಗೂ ಲೂಕ ಈ ಮೂವರು ಸುವಾರ್ತಿಕರು ತಮ್ಮ ಸುವಾರ್ತೆಗಳಲ್ಲಿ ಯೇಸುಕ್ರಿಸ್ತನಿಗೆ ಸೈತಾನನಿಂದಾದ ಶೋಧನೆಗಳನ್ನು ದಾಖಲಿಸುತ್ತಾರೆ.

"ಯೇಸು ಸ್ವಾಮಿ ನಾಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದ ತರುವಾಯ ಆತನಿಗೆ ಹಸಿವಾಯಿತು. ಆಗ ಸೈತಾನನು ಆತನ ಬಳಿಗೆ ಬಂದು- "ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆ ಕೊಡು....." ಎಂದು ಮೊದಲನೆಯ ಶೋಧನೆಯನ್ನು ತಂದೊಡ್ಡಿತು.

ಎರಡನೆಯದಾಗಿ ಸೈತಾನನು ಯೇಸುವನ್ನು ಬಹಳ ಎತ್ತರವಾದ ಬೆಟ್ಟಕ್ಕೆ ಕರೆಕೊಂಡು ಹೋಗಿ ಪ್ರಪಂಚದ ಎಲ್ಲಾ ರಾಜ್ಯಗಳನ್ನೂ ಅವುಗಳ ವೈಭವವನ್ನು ತೋರಿಸಿ- 'ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಇವೆಲ್ಲವನ್ನು ನಿನಗೆ ಕೊಡುವೆನು" ಎಂದು ಪ್ರಲೋಭನೆ ಒಡ್ಡಿತು. ಮೂರನೆಯದಾಗಿ ಸೈತಾನನು ಯೇಸುಕ್ರಿಸ್ತನನ್ನು ದೇವಾಲಯದ ಶಿಖರದ ಮೇಲೆ ನಿಲ್ಲಿಸಿ - 'ನೀನು ದೇವರ ಮಗನಾಗಿದ್ದರೆ ಕೆಳಕ್ಕೆ ಧುಮುಕು. ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು. ಅವರು ನಿನ್ನ ಕಾಲು ಕಲ್ಲಿಗೆ ತಗಲದಂತೆ ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು....."[೮೦] ಎಂಬುದಾಗಿ ಮೂರು ಪ್ರಲೋಭನೆಗಳನ್ನು ಸೈತಾನ ಯೇಸುಕ್ರಿಸ್ತನಿಗೆ ಒಡ್ಡುವುದನ್ನು ಕಾಣುತ್ತೇವೆ.

ಇಲ್ಲಿ ಹಣ, ಅಧಿಕಾರ, ಸಂಪತ್ತು ಹಾಗೂ ದುಷ್ಟಶಕ್ತಿಗೆ ಶರಣಾಗುವುದಕ್ಕೆ ನೇರ ಆಹ್ವಾನವಿದೆ. ಯೇಸುಕ್ರಿಸ್ತನಾದರೋ ಇವೆಲ್ಲವನ್ನು ದಿಕ್ಕರಿಸಿ ಶಿಷ್ಟಶಕ್ತಿಯ ಪ್ರತೀಕವಾಗಿ ನಿಲ್ಲುವುದನ್ನು ಕಾಣುತ್ತೇವೆ. ಇದು ಯೇಸುಕ್ರಿಸ್ತನ ಬಾಳಿನಲ್ಲಿ ಸೈತಾನನಿಂದ ಶೋಧಿಸಲ್ಪಟ್ಟ ಕತೆಯಾದರೆ ಐನೂರು ವರ್ಷಗಳ ಮುಂಚೆ ಬುದ್ದನು ಸಹ 'ವಿಷಯ ಸುಖಗಳ ಅಧಿಪತಿಯಾದ' ಮಾರನಿಂದ ಶೋಧನೆಗೆ ಒಳಗಾಗಿದ್ದನು, ಎಂಬುದಾಗಿ ಲಲಿತ ವಿಸ್ತರವು ದಾಖಲಿಸುತ್ತದೆ.

ಸಿದ್ಧಾರ್ಥನು ಉಪವಾಸ ಧ್ಯಾನ ಮಾಡುತ್ತಿರುವಾಗ ಅವನಿಗೆ ಮಾರನು ಬಗೆ ಬಗೆಯ ಭಕ್ಷ ಭೋಜನಾದಿಗಳನ್ನು ತೋರಿಸಿ ಪ್ರಲೋಭನೆಗೆ ಒಡ್ಡಿದನು. ಹಣ, ಸಂಪತ್ತು ಈ ಪ್ರಪಂಚದ ಎಲ್ಲಾ ಆಕರ್ಷಣೆಗಳನ್ನು ತೋರಿಸಿ ಸಿದ್ಧಾರ್ಥನನ್ನು ಪ್ರಲೋಭನೆಗೆ ಒಳಪಡಿಸಲು ಯತ್ನಿಸಿದನು. ಆದರೆ, ಸಿದ್ಧಾರ್ಥನು ಯಾವುದಕ್ಕೂ ಜಗ್ಗಲಿಲ್ಲ. ತನ್ನನ್ನು ತಾನು ಮರೆತು ಬೋಧಿಯೊಂದನ್ನು ಮಾತ್ರ ಧ್ಯಾನಿಸಿ ಯೇಸುಕ್ರಿಸ್ತನಂತೆ ಬುದ್ದನು ಮಾರನ ಪ್ರಲೋಭನೆಗಳನ್ನು ಗೆದ್ದನು. ಯೇಸುಕ್ರಿಸ್ತ ತನ್ನ ಶಿಷ್ಯರಿಗೆ 'ಹೋಗಿ ಪ್ರಪಂಚದಲ್ಲೆಲ್ಲಾ ನನ್ನ ಸುವಾರ್ತೆಯನ್ನು ಸಾರಿರಿ.' ಎಂದನು. ಜೊತೆಗೆ ಹಿಂದೂ ಸನ್ಯಾಸಿಗಳಂತೆ ಅವರು ಹೊನ್ನು, ಹಣ, ಬೆಳ್ಳಿ, ದುಡ್ಡುಗಳನ್ನು ದಾರಿಗೆ ಹಸಿಬೆಯನ್ನೂ ಎರಡು ಅಂಗಿ, ಕೆರ, ಕೋಲು ಮೊದಲಾದವುಗಳನ್ನು ಸೇರಿಸಿಕೊಳ್ಳದೆ, ಅಪರಿಗ್ರಹವನ್ನು ಪಾಲಿಸಿ ನನ್ನ ಬೋಧನೆಯನ್ನು ಜನರಿಗೆ ತಿಳಿಯಪಡಿಸಿರಿ ಎಂದು ಹೇಳಿ ಶಿಷ್ಯರನ್ನು ಆಶೀರ್ವದಿಸಿ ಕಳುಹಿಸಿಕೊಟ್ಟನು.

ಇದೇ ರೀತಿ ಐನೂರು ವರ್ಷಕ್ಕೆ ಮುಂಚೆ ಬುದ್ದನು ಸಹ ತನ್ನ ಬೋಧೆಯನ್ನು ಪ್ರಪಂಚಕ್ಕೆ ಸಾರಲು ೩೦ ಮಂದಿ ಶಿಷ್ಯವರ್ಗವನ್ನು ಸಿದ್ಧಪಡಿಸಿ ಸಂಘವನ್ನು ಸ್ಥಾಪಿಸಿದ.

ಯೇಸುಕ್ರಿಸ್ತನಂತೆ ಬುದ್ಧನು ಕತೆಗಳಲ್ಲಿ ಮಾತನಾಡಿದ. ಉದಾಹರಣೆಗೆ ಯೇಸುಕ್ರಿಸ್ತನು 'ಕುರುಡ ಇನ್ನೊಬ್ಬ ಕುರುಡನಿಗೆ ದಾರಿ ತೋರಿಸಲಾರ. ಹೀಗೆನಾದರೂ ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರು ಕುಣಿಯಲ್ಲಿ ಬೀಳುವರು.[೮೧]

ಅದೇ ದಾಟಿಯಲ್ಲಿ ಬುದ್ಧ ಹೇಳುತ್ತಾನೆ. ಕುರುಡರು ಒಬ್ಬರ ಹಿಂದೆ ಒಬ್ಬರು ಸಾಲಾಗಿ ಕೈಯಿಡುಕೊಂಡು ಹೋಗುವಾಗ ಮೊದಲು ಹೋಗುತ್ತಿರುವ ಕುರುಡನಿಗೂ ಏನೂ ಕಾಣುವುದಿಲ್ಲ. ಮದ್ಯದಲ್ಲಿ ಸಾಗುತ್ತಿರುವ ಕುರುಡನಿಗೂ ಏನೂ ಕಾಣುವುದಿಲ್ಲ ಮತ್ತು ಕಡೆಯಲ್ಲಿ ಹೋಗುವ ಕುರುಡನಿಗೂ ಏನು ಕಾಣುವುದಿಲ್ಲ. ದುಂದುಗಾರನ ಮಗನ ಕತೆಗೆ[೮೨] ಸಮಾನಾಂತರವಾದ ಕತೆ ಬೌದ್ಧರ ಧರ್ಮಗ್ರಂಥಗಳಲ್ಲಿದೆ.

ಬುದ್ಧನು ಮದುವೆಯ ಮನೆಯಲ್ಲಿ ಊಟದ ಕೊರತೆಯಾದಾಗ ಪುಷ್ಕಳವಾದ, ರುಚಿಕರವಾದ ಊಟವನ್ನು ಅದ್ಭುತವಾಗಿ ಹೆಚ್ಚು ಮಾಡಿ ಎಲ್ಲರಿಗೂ ಸಾಕಾಗುವಂತಾಗಿಸಿದ್ದುದು ಅದ್ಭುತ. ಅದೇ ರೀತಿ ಯೇಸುಕ್ರಿಸ್ತನು ಕಾನಾಲೂರಿನ ಮದುವೆಗೆ ಬಂದ ಅತಿಥಿಗಳಿಗೆ ದ್ರಾಕ್ಷಾರಸ ಸಾಲದೆ ಹೋದಾಗ ಅದ್ಭುತವಾದ ರೀತಿಯಲ್ಲಿ ಯಥೇಚ್ಛವಾಗಿ ನೀರನ್ನು ದ್ರಾಕ್ಷಾರಸವನ್ನಾಗಿ ಮಾಡುವುದನ್ನು ಕಾಣುತ್ತೇವೆ.[೮೩]

ಯೇಸುಕ್ರಿಸ್ತನ ಹುಟ್ಟು ಅತಿಶಯವಾದುದು. "ದೇವರು ಗಬ್ರಿಯೇಲ್ ದೂತನನ್ನು ಗಲಿಲಾಯ ಸೀಮೆಯ ನಜರೇತ ಎಂಬ ಊರಿಗೆ ಕಳುಯಿಸಿದನು. ಆ ಕನ್ಯೆಯ ಹೆಸರು ಮರಿಯ. ದೂತನು ಆಕೆಯ ಬಳಿಗೆ ಬಂದು "ನಿನಗೆ ಶುಭವಾಗಲಿ; ದೇವರು ನಿನ್ನ ಸಂಗಡ ಇದ್ದಾನೆ. ಹೆದರಬೇಡ ಮರಿಯಾ, ನಿನಗೆ ದೇವರ ದಯೆ ದೊರಕಿದೆ. ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ..... ಅದಕ್ಕೆ ಆ ಮರಿಯಳು ಇದು ಹೇಗಾದಿತು ನಾನು ಪುರುಷನನ್ನು ಅರಿತಿಲ್ಲವಲ್ಲಾ ಎಂದು ಕೇಳಲು; ನಿನ್ನ ಮೇಲೆ ಪವಿತ್ರಾತ್ಮ ಬರುವದು. ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು; ಆದ್ದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವುದು".[೮೪]

ಅದೇ ರೀತಿ ಬುದ್ಧನ ಜನನವನ್ನು ಧೂತನು ಮುಂಚಿತವಾಗಿ ಬುದ್ಧನ ತಾಯಿಯಾದ ಮಾಯಾದೇವಿಗೆ ತಿಳಿಸಿದನು. ಹುಟ್ಟಲಿರುವ ಮಗು ಲೋಕ ರಕ್ಷಕನಾಗುವನೆಂದು ಪ್ರವಾದಿಸಿದನು: "ಸರ್ವವು ಸುಖಕರವಾಗಿರಲಿ, ಮಹಾರಾಣಿ ಮಾಯಾದೇವಿ, ನಿನಗೆ ಎಲ್ಲವು ಮಂಗಳವಾಗಲಿ, ಹರ್ಷಿಸು, ಉಲ್ಲಾಸಿಸು ಏಕೆಂದರೆ ನೀನು ಜನ್ಮ ನೀಡಲಿರುವ ಮಗು ಪವಿತ್ರವಾದುದು.

ಬುದ್ಧನ ಜನನವನ್ನು ಸಂತನಾದ ಅಸಿತನು ಮುಂದಾಗಿ ತಿಳಿಸಿ ತನ್ನ ಸಾವಿಗೆ ಮುಂಚೆ ಕಂದ ಗೌತಮನನ್ನು ಕಂಡು ಈ ರೀತಿ ನುಡಿದ:

"ಈ ಮಗು ಭಯರಹಿತವಾದುದು, ಮಾನವರಲ್ಲೆ ಶ್ರೇಷ್ಠವಾದುದು. ಈತನು ಬೋಧಿಯನ್ನು ಪಡೆಯುವನು. ಪರಮಾತ್ಮನ ಜ್ಞಾನ ಈತನಿಗಿರುವುದು. ಈತನು ಧರ್ಮ ಚಕ್ರವು ಚಲಿಸುವಂತೆ ಮಾಡುವನು.

ಮನುಕುಲದ ಮೇಲೆ ಕಷ್ಟಗಳ ಮೇಲೆ ಅಪಾರ ಕರುಣೆ ಇರುವುದು. ತಾನು ಕಂಡುಕೊಂಡ ಮಾರ್ಗವು ಪ್ರಪಂಚದಲ್ಲೆಲ್ಲಾ ಹರಡುವುದು."[೮೫]

ಅದೇ ರೀತಿ ಯೇಸುಕ್ರಿಸ್ತನ ಜನನವನ್ನು ಯರುಸಲೇಮಿನಲ್ಲಿದ್ದ ಸಿಮೆಯೋನನೆಂಬ ನೀತಿವಂತನೂ, ದೈವ ಭಕ್ತನೂ ಆದ ಮನುಷ್ಯನು ಎದುರು ನೋಡುತ್ತಿದ್ದ. ಪವಿತ್ರಾತ್ಮರಿಂದ ಪ್ರೇರಿತನಾಗಿ ಯರುಸಲೇಮಿನ ಆಲಯದೊಳಕ್ಕೆ ಬಂದು ಬಾಲ ಯೇಸುವನ್ನು ತನ್ನ ಕರಗಳಲ್ಲಿ ತೆಗೆದುಕೊಂಡು ದೇವರನ್ನು ಸ್ತುತಿಸಿ ಹೀಗೆಂದನು:

"ಒಡನೆಯೇ, ನಿನ್ನ ಮಾತು ನೆರವೇರಿತು; ಈಗ ಸಮಾಧಾನದಿಂದ ಹೋಗುವುದಕ್ಕೆ ನಿನ್ನ ದಾಸನಿಗೆ ಅಪ್ಪಣೆಯಾಯಿತು. ನೀನು ನೇಮಿಸಿರುವ ರಕ್ಷಕನನ್ನು ನಾನು ಕಣ್ಣಾರೆ ಕಂಡೆನು. ಎಲ್ಲಾ ಜನಗಳಿಗೆ ಪ್ರತ್ಯಕ್ಷನಾಗಲಿ ಎಂದು ಆತನನ್ನು ಒದಗಿಸಿ ಕೊಟ್ಟಿದ್ದಿ. ಆತನು ಅನ್ಯ ದೇಶದವರಿಗೆ ಜ್ಞಾನೋದಯದ ಬೆಳಕು."[೮೬]

ಈ ಮೇಲಿನ ಇಬ್ಬರ ಬಾಲ್ಯದ ಘಟನೆಗಳನ್ನು ನೋಡಿದಾಗ ಎಂತಹ ವಿದ್ವಾಂಸನಿಗೂ ಆಶ್ಚರ್ಯಕರವಾದ ನಿಕಟ ಹೋಲಿಕೆಯುಳ್ಳ ಘಟನೆ ಇದಾಗಿದೆ ಎಂಬುದು ಅರಿವಾಗುತ್ತದೆ.

ಶಾಲೆಯಲ್ಲಿದ್ದಾಗಲೇ ಯುವಕ ಸಿದ್ಧಾರ್ಥನಿಗೆ ಎಲ್ಲಾ ಗ್ರಂಥಗಳ ಅರಿವಿದ್ದು ಒಂಟಿಯಾಗಿ ತಾನು ಧ್ಯಾನದಲ್ಲಿ ಕಳೆಯುತ್ತಿದ್ದ. ಒಮ್ಮೆ ಅವನು ತನ್ನ ಸಹಪಾಠಿಗಳಿಂದ ಪ್ರಯಾಣದಲ್ಲಿದ್ದಾಗ ಕಾಣೆಯಾಗಿ ದೀರ್ಘವಾದ ಧ್ಯಾನದಲ್ಲಿದ್ದುದು ತಿಳಿದುಬಂತು.

ಅದೇ ರೀತಿ ಯೇಸುಕ್ರಿಸ್ತನು ೧೨ನೇ ವಯಸ್ಸಿನಲ್ಲಿ ಕಾಣೆಯಾಗಿದ್ದು ದೇವಾಲಯದಲ್ಲಿ ಬೋಧಕರ ನಡುವೆ ಕುಳಿತುಕೊಂಡು ಅವರ ಉಪದೇಶವನ್ನು ಕೇಳುತ್ತಾ ಪ್ರಶ್ನೆ ಮಾಡುತ್ತಾ ಇದ್ದನು. ಆತನು ಆಡಿದ ಮಾತುಗಳನ್ನು ಕೇಳಿದವರೆಲ್ಲರು ಆತನ ಬುದ್ಧಿಗೂ ಉತ್ತರಗಳಿಗೂ ಆಶ್ಚರ್ಯಪಟ್ಟರು.[೮೭]

ಬುದ್ಧ ತನ್ನ ಸಾರ್ವಜನಿಕ ಬೋಧನಾ ಜೀವನವನ್ನು ೩೦ನೇ ವಯಸ್ಸಿನಲ್ಲಿ ಆರಂಭಿಸಿದ. ಅದೇ ರೀತಿ ಯೇಸುಕ್ರಿಸ್ತನು ತನ್ನ ಸಾರ್ವಜನಿಕ ಜೀವನವನ್ನು ೩೦ನೇ ವಯಸ್ಸಿನಲ್ಲಿ ಪ್ರಾರಂಭಿಸಿದ. ಯೇಸುಕ್ರಿಸ್ತನಂತೆ ಬುದ್ಧನು ವಿವಿಧ ಕತೆಗಳನ್ನು ರೂಪಕಗಳನ್ನು, ಸಾಮತಿಗಳನ್ನು ಹೇಳುವುದರ ಮೂಲಕ ತನ್ನ ಆಪ್ತ ಶಿಷ್ಯರೊಂದಿಗೆ ಇಡೀ ದೇಶವನ್ನೇ ಸುತ್ತಿ ತನ್ನ ಬೋಧೆಯನ್ನು ಸಾರಿದ. ಶಿಷ್ಯರೆಲ್ಲರು ಸ್ವಯಂ ಪ್ರೇರಿತರಾಗಿ ದಾರಿದ್ರ್ಯತನವನ್ನು ಕೈಗೊಂಡ ಆತನ ಬೋಧನೆಯನ್ನು ಆಲಿಸಿ ಪಾಲಿಸಿದರು.

ಬುದ್ದನಿಗೆ ೧೨ ಜನ ಪ್ರಮುಖ ಶಿಷ್ಯರಿದ್ದರು. ಕ್ರಿಸ್ತನಿಗೂ ೧೨ ಜನ ಪ್ರಮುಖ ಶಿಷ್ಯರಿದ್ದರು. ಬುದ್ಧನ ಮೊದಲ ಅನುಯಾಯಿಗಳು ಮೂರು ಜನ ಅಣ್ಣ ತಮ್ಮಂದಿರು. ಕ್ರಿಸ್ತನ ಮೊದಲ ಅನುಯಾಯಿಗಳು ಸಹ ಇಬ್ಬರು ಅಣ್ಣತಮ್ಮಂದಿರು.

ಬುದ್ದ ತನ್ನ ಮೊದಲ ಶಿಷ್ಯರನ್ನು ಕರೆದಾಗ ಅವರು ಅಂಜೂರದ ಮರದ ಕೆಳಗೆ ಕುಳಿತಿದ್ದರು. (ಭೊ ಅಥವಾ ಪೈತಿಲು ಇದು ಅಂಜೂರ ಮರದ ಇನ್ನೊಂದು ಪ್ರಬೇಧ) ಯೇಸುಕ್ರಿಸ್ತನು ತಾನು ನಾತನಿಯೇತನನ್ನು ಕರೆದು ಅವನು ಸಹ ಅಂಜೂರದ ಮರದ ಕೆಳಗೆ ಕುಳಿತಿದ್ದ. ಬುದ್ಧನಂತೆ ಕ್ರಿಸ್ತನಿಗೆ ಒಬ್ಬ ಅತಿ ಪ್ರಿಯಕರನಾದ ಶಿಷ್ಯ ಹಾಗೂ ಗುರುವನ್ನೇ ಕೊಟ್ಟ ಶಿಷ್ಯರಿದ್ದರು. ಕ್ರಿಸ್ತನಿಗೆ ಜುದಾಸನಾದರೆ. ಬುದ್ಧನಿಗೆ ದೇವದತ್ತನಿದ್ದ.

ಕೇವಲ ತೋರಿಕೆಯ ಕಾನೂನುಗಳನ್ನು ಅವುಗಳ ಮೇಲಣ ನೋಟಕ್ಕಾಗಿ ಅನುಸರಿಸುತ್ತಾ ಜನಸಾಮಾನ್ಯರ ಜೀವನವನ್ನು ಹೊರಲಾರದ ಹೊರೆಯನ್ನಾಗಿ ಮಾಡಿದ ಯಹೂದ್ಯ ಪುರೋಹಿತ ಶಾಹಿಯನ್ನು, ಕರ್ಮಟ ಯಹೂದಿಗಳನ್ನು ಯೇಸುಕ್ರಿಸ್ತ ಖಂಡಿಸಿದ. ಅದೇ ರೀತಿ ಬುದ್ಧನು ಸಹ ಪುರೋಹಿತ ಶಾಹಿಯನ್ನು ಖಂಡಿಸಿದ. ಅರ್ಥಹೀನ ಆಚರಣೆಗಳು, ಅರ್ಪಣೆಗಳು, ಯಜ್ಞಯಾಗಾದಿಗಳಿಂದಾಗಿ ನಿಜದೇವರ ಆರಾಧನೆ ಮಾಯವಾಗಿತ್ತು. ಪುರೋಹಿತಶಾಹಿಯೆ ಎಲ್ಲಾ ಕೆಡುಕಿನ ಮೂಲ ಎಂದು ಉಗ್ರವಾಗಿ ಅವರನ್ನು ಖಂಡಿಸಿದ.

ಬುದ್ಧ ಪುರೋಹಿತ ಶಾಹಿಗಳ ಬಗೆ- "ನೀವು ಒಳಗಡೆ ಕಠಿಣ ಮರ ಆದರೆ ಹೊರಗಡೆ ಬಹಳ ಮೃದುವಾಗಿ ತೋರುತ್ತಿರಿ" ಎಂದು ಜರಿದರೆ. ಕ್ರಿಸ್ತ ತನ್ನ ಕಾಲದ ಪುರೋಹಿತ ಶಾಹಿಗಳಿಗೆ ನೀವು ಸುಣ್ಣ ಬಳಿದ ಸಮಾಧಿಗಳು, ಹೊರಗೆ ಸುಂದರವಾಗಿ ಕಾಣಿಸುತ್ತದೆ ಒಳಗಾದರೋ ಕೊಳೆತು ದುರ್ಗಂಧ ಸೂಸುತ್ತದೆ ಎಂದು ಖಂಡಿಸಿದ.

ಬುದ್ಧ-ಕ್ರಿಸ್ತ ಇಬ್ಬರೂ ರಕ್ತ ಬಲಿಯರ್ಪಣೆಯನ್ನು ತಿರಸ್ಕರಿಸಿ ಅನಗತ್ಯವಾದ ಸಂಪ್ರದಾಯಗಳನ್ನು ಕೈಬಿಡುವುದರ ಜೊತೆಗೆ ಅಪ್ರಮಾಣಿಕತೆಯನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾರೆ. ಅನೇಕ ಘಟನೆಗಳು, ಅಂಶಗಳು, ಬುದ್ಧ ಹಾಗೂ ಕ್ರಿಸ್ತರ ಜೀವನದಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಒಂದೇ ರೀತಿ ಇವೆ.

ಶ್ರೀಯುತ ಏಡ್‌ಮಂಡ್‌ರವರು ತಮ್ಮ ಪುಸ್ತಕವಾದ "Buddhist & Christian Gospels" ನಲ್ಲಿ ಸುಮಾರು ೧೧೨ ಉದಾಹರಣೆಗಳನ್ನು ಕೊಡುತ್ತಾ ಇವೆಲ್ಲವು ಬೌದ್ಧ ಗ್ರಂಥಗಳಿಂದ ಪ್ರೇರಿತವಾಗಿವೆ ಎಂದು ತಿಳಿಸುತ್ತಾರೆ.

ಈ ಎಲ್ಲಾ ಅಂಶಗಳಿಗಿಂತ ಒಂದು ವಿಶಿಷ್ಟವಾದ ಕತೆ ಎರಡು ಗ್ರಂಥಗಳಲ್ಲಾದ ಹಳೆ ಬೌದ್ಧ ಗ್ರಂಥಗಳು ಹಾಗೂ ಹೊಸ ಒಡಂಬಡಿಕೆಯಲ್ಲಿ ಸಮಾನಾಂತರವಾಗಿ ಕಂಡುಬರುತ್ತವೆ. ಇದೊಂದು ಅತ್ಯಂತ ಸೋಜಿಗದ ಸಮಾನಾಂತರ ಕತೆಯಾಗಿ ಮೂಡಿಬಂದಿದೆ. ಹೊಸ ಒಡಂಬಡಿಕೆಯಲ್ಲಿ ಇದನ್ನು ಬಡ ವಿಧವೆಯ ಕಾಣಿಕೆ ಎಂಬ ಸಾಮತಿಯಲ್ಲಿ ನೋಡುತ್ತೇವೆ. ಬೌದ್ಧರ ಪ್ರಕಾರ, ಒಂದು ಧಾರ್ಮಿಕ ಸಮಾರಂಭದಲ್ಲಿ ಎಲ್ಲಾ ವಿಶ್ವಾಸಿಗಳು ತಮ್ಮ ಕೈಲಾದ ಧನಸಹಾಯವನ್ನು ಮಾಡಬೇಕಾಗಿ ಬರುತ್ತದೆ. ಶ್ರೀಮಂತ ವಿಶ್ವಾಸಿಗಳು ದೊಡ್ಡ ದೊಡ್ಡ ಮೌಲ್ಯಗಳುಳ್ಳ ನಾಣ್ಯಗಳನ್ನು ಧಾರಾಳವಾಗಿ ನೀಡುತ್ತಾರೆ. ಅಲ್ಲಿ ಒಬ್ಬ ವಿಧವೆಯಿದ್ದಳು. ಆಕೆ ಬಡವಿ. ಆಕೆಯ ಬಳಿ ಇದ್ದದ್ದು ಚಿಕ್ಕ ಮೌಲ್ಯದ ಎರಡೇ ಎರಡು ನಾಣ್ಯಗಳು. ಆದರೂ ಸಹ ತುಂಬ ಸಂತೋಷದಿಂದ ಆಕೆ ಆ ಎರಡು ನಾಣ್ಯಗಳನ್ನು ಕೊಟ್ಟುಬಿಡುತ್ತಾಳೆ. ಆಗ ಅಲ್ಲಿದ್ದ ಪುರೋಹಿತ ಆಕೆಯ ಉದಾರವಾದ ಶ್ರೇಷ್ಠವಾದ ವರ್ತನೆಯನ್ನು ಗಮನಿಸಿ ಮುಕ್ತ ಕಂಠದಿಂದ ಪ್ರಶಂಸಿಸುತ್ತಾನೆ. ಬೇರೆಯವರ ದಾನದ ಬಗ್ಗೆ ಏನೂ ಹೇಳುವುದಿಲ್ಲ. ಇದಕ್ಕೆ ಸಮಾನಾಂತರವಾಗಿ ಮಾರ್ಕನು ಬರೆದ ಸುವಾರ್ತೆಯಲ್ಲಿ ಯೇಸು ಕಾಣಿಕೆ ಪೆಟ್ಟಿಗೆಯ ಎದುರುಗಡೆ ಕುಳಿತುಕೊಂಡು ಜನರು ಕಾಣಿಕೆ ಪೆಟ್ಟಿಗೆಗೆ ಹಣ ಹಾಕುವುದನ್ನು ನೋಡುತ್ತಿದ್ದನು. ಅನೇಕ ಮಂದಿ ಐಶ್ವರ್ಯವಂತರು ಬಹಳ ಬಹಳ ಹಾಕುತ್ತಿರಲು ಒಬ್ಬ ಬಡ ವಿಧವೆಯು ಬಂದು ಎರಡು ನಾಣ್ಯಗಳನ್ನು ಅಂದರೆ ಒಂದು ದುಗ್ಗಾಣಿಯನ್ನು ಹಾಕಿದಳು.

ಆಗ ಆತನು ತನ್ನ ಶಿಷ್ಯರನ್ನು ಹತ್ತಿರ ಕರೆದು - ನಿಮಗೆ ನಿಜವಾಗಿ ಹೇಳುತ್ತೇನೆ, ಕಾಣಿಕೆ ಪೆಟ್ಟಿಗೆಯಲ್ಲಿ ಹಾಕಿದವರೆಲ್ಲರಿಗಿಂತ ಈ ಬಡ ವಿಧವೆ ಹೆಚ್ಚು ಹಾಕಿದ್ದಾಳೆ. ಹೇಗೆಂದರೆ: ಎಲ್ಲರೂ ತಮಗೆ ಸಾಕಾಗಿ

ಮಿಕ್ಕಿದ್ದರಲ್ಲಿ ಹಾಕಿದರು; ಈಕೆಯೋ ತನ್ನ ಬಡತನದಲ್ಲಿಯೂ ತನಗಿದ್ದದ್ದನ್ನೆಲ್ಲಾ ಹಾಕಿದಳು. ತನ್ನ ಜೀವನವನ್ನೇ ಕೊಟ್ಟುಬಿಟ್ಟಳು ಅಂದನು.

ಈ ಕತೆ ಎರಡು ಗ್ರಂಥಗಳಲ್ಲಿ ಸಮಾನಾದ ಅಂಶ ಹೊಂದಿದೆ ಅನ್ನುವುದರ ಜೊತೆಗೆ ಕೆಲವೊಂದು ವಿಶೇಷವಾದ ಕಾಕತಾಳಿಯ ವಿವರಗಳನ್ನು ಒಳಗೊಂಡಿದೆ. ಎರಡೂ ಗ್ರಂಥಗಳಲ್ಲಿನ ಕಥೆಯ ನಾಯಕಿ ಬಡ ವಿಧವೆ. ಎರಡೂ ಗ್ರಂಥಗಳಲ್ಲಿ ಬಡವಿಧವೆ ಧಾರ್ಮಿಕ ಸಮಾರಂಭದಲ್ಲಿ ಶ್ರೀಮಂತರ ಜೊತೆ ಕಾಣಿಕೆ ಪೆಟ್ಟಿಗೆಗೆ ನಾಣ್ಯ ಹಾಕುತ್ತಾಳೆ. ಎರಡೂ ಕಥೆಗಳಲ್ಲೂ ಬಡ ವಿಧವೆ ತನ್ನಲ್ಲಿದ್ದ ಎಲ್ಲವನ್ನು ಅಂದರೆ ತನ್ನಲ್ಲಿದ್ದ ಎರಡು ಚಿಕ್ಕ ನಾಣ್ಯಗಳನ್ನು ಕೊಟ್ಟುಬಿಡುತ್ತಾಳೆ.

ತದನಂತರ ಅಲ್ಲಿದ್ದ ಮುಖ್ಯಸ್ಥ ಎರಡೂ ಕಥೆಗಳಲ್ಲಿ ಆಕೆಯ ಕಾಣಿಕೆಯನ್ನು ಕೊಂಡಾಡಿ ಆಕೆಯ ತ್ಯಾಗವನ್ನು ಉದಾರ ಮನಸ್ಸನ್ನು ಎತ್ತಿ ಹಿಡಿಯುತ್ತಾನೆ. ಹೇರಳವಾಗಿ ದಾನ ಮಾಡಿದ ಶ್ರೀಮಂತರಿಗಿಂತ ಬಡತನದಲ್ಲಿಯೂ ತನಗಿದ್ದದ್ದನ್ನೆಲ್ಲಾ ಹಾಕಿದ ಆ ಬಡ ವಿಧವೆ ಎರಡು ಕತೆಗಳಲ್ಲೂ ಸ್ತುತ್ಯಾರ್ಹಳಾಗಿದ್ದಾಳೆ. ಈ ಸಾಮತಿ ಎಷ್ಟೊಂದು ಆಶ್ಚರ್ಯಕರವಾದ ರೀತಿಯಲ್ಲಿ ಬೌದ್ಧ ಹಾಗೂ ಕ್ರೈಸ್ತ ಗ್ರಂಥಗಳಲ್ಲಿ ಮೂಡಿಬಂದಿದೆ.

ಯೇಸುಕ್ರಿಸ್ತ ಹಾಗೂ ಗೌತಮ ಬುದ್ಧರ ನಡುವೆ ಅನೇಕ ಹೋಲಿಕೆಗಳು, ಸಮಾನಾ ಅಂಶಗಳು, ಎರಡು ಧರ್ಮಗಳಲ್ಲೂ ವಿಶಾಲವಾಗಿ ನೆಲಸಿರುವುದನ್ನು ಮೇಲಿನ ದೃಷ್ಟಾಂತಗಳಿಂದ ಗಮನಿಸಬಹುದು.

೩.೪.೩ ಬುದ್ಧ ಮತ್ತು ಕ್ರಿಸ್ತನ ಆಕೃತಿ - ಆಶಯಗಳು

ಬುದ್ಧ ಮತ್ತು ಕ್ರಿಸ್ತ ಇಬ್ಬರ ಬೋಧನೆಗಳಲ್ಲಿನ ನೈತಿಕ ಉಪದೇಶಗಳು ಎಲ್ಲರಿಗೂ ತಿಳಿದೆ ಇವೆ. ಕೊಲೆ ಮಾಡಬೇಡ, ಕಳ್ಳತನ ಮಾಡಬೇಡ, ಸುಳ್ಳು ಸಾಕ್ಷಿ ಹೇಳಬೇಡ ಹಾಗೂ ಅನೈತಿಕ ಅಕ್ರಮ ಲೈಂಗಿಕ ಸಂಪರ್ಕ ಇಟ್ಟುಕೊಳ್ಳಬೇಡ ಎಂಬುದಾಗಿ ಇಬ್ಬರು ಬೋಧಿಸಿದರು. ಇಬ್ಬರ ಗುರಿಯು ಕೆಡುಕನ್ನು ಒಳಿತಿನ ಮೂಲಕ ಗೆಲ್ಲುವುದು. ಇಬ್ಬರೂ ನಿಮ್ಮ ಶತ್ರುಗಳನ್ನು ಪ್ರೀತಿಸಿರೆಂದೇ ಬೋಧಿಸಿದರು. ಇಬ್ಬರೂ ಶಾಂತಿ ಹಾಗೂ ಸಮಾಧಾನವನ್ನು ಎತ್ತಿಹಿಡಿದರು. ಇಬ್ಬರು ಸಹ ಈ ಲೋಕದ ನಶ್ವರವಾದ ಆಸ್ತಿ ಪಾಸ್ತಿಗಳನ್ನು ಹಣ ಕಾಸು ವಡವೆ ವಸ್ತ್ರಗಳನ್ನು ವ್ಯರ್ಥವಾಗಿ ಶೇಖರಿಸುವುದನ್ನು ವಿರೋಧಿಸಿದರು.

ಇಬ್ಬರು ಯಜ್ಞ ಬಲಿಗೆ ಬದಲಾಗಿ ದಯೆಯನ್ನು ಪ್ರತಿಪಾದಿಸಿದರು. ಹೀಗೆ ಅನೇಕ ವಿಷಯಗಳಲ್ಲಿ ಇಬ್ಬರಿಗೂ ಸಾಮ್ಯವುಂಟು. ಕೆಲವೊಮ್ಮೆ ಪದ ಪದಗಳಲ್ಲೂ ಒಬ್ಬರ ಬೋಧನೆ ಇನ್ನೊಬ್ಬರ ಬೋಧನೆಯೊಂದಿಗೆ ಹೊಂದುವುದನ್ನು ಕಾಣುತ್ತೇವೆ.

ಬುದ್ಧನನ್ನು ವರಪುತ್ರನೆಂದು ಕರೆದರೆ, ಕ್ರಿಸ್ತನನ್ನು ನರಪುತ್ರನೆಂದು ಕರೆಯಲಾಯಿತು. ಕ್ರಿಸ್ತನನ್ನು ಜಗತ್ತಿನ ಜ್ಯೋತಿ ಎಂದು ಕರೆದರೆ ಬುದ್ಧನನ್ನು ಸಾಟಿಯಿಲ್ಲದ ಬೆಳಕು ಎಂದು ಅರ್ಥೈಸಿಕೊಳ್ಳಲಾಗಿದೆ. ಬುದ್ಧ ತನ್ನನ್ನು ತಾನು ಅರ್ಥಮಾಡಿಕೊಂಡ ಪರಿ ಹಾಗೂ ಆತನ ಪಾತ್ರಕ್ಕೂ ಕ್ರಿಸ್ತ ತನ್ನನ್ನು ತಾನು ಅರ್ಥಮಾಡಿಕೊಂಡು ಈ ಲೋಕದಲ್ಲಿ ಜೀವಿಸದ ರೀತಿಗೂ ಹೆಚ್ಚಿನ ವ್ಯತ್ಯಾಸವಿಲ್ಲ.

'ನನಗೆ ಬ್ರಹ್ಮಲೋಕ ಗೊತ್ತು ಅದನ್ನು ನಾನು ಪ್ರವೇಶಿಸಿರುವೆ. ದೇವರು, ಆತನ ಸಾಮ್ರಾಜ್ಯ ಅದಕ್ಕೆ ಹೋಗುವ ದಾರಿ ಎಲ್ಲವೂ ನನಗೆ ತಿಳಿದಿದೆ. ನನ್ನನ್ನು ನಂಬುವವನು ಹಾಗೂ ನನ್ನನ್ನು ಪ್ರೀತಿಸುವವನು ಖಂಡಿತವಾಗಿ ಸ್ವರ್ಗವನ್ನು ಪ್ರವೇಶಿಸುವನು. ನನ್ನನ್ನು ನಂಬುವವನಿಗೆ ಖಂಡಿತ ರಕ್ಷಣೆ ದೊರೆಯುತ್ತದೆ. ಇದೇ ರೀತಿಯ ವಾಗ್ದಾನವನ್ನು ಯೇಸುಸ್ವಾಮಿ ಮಾಡುತ್ತಾನೆ.[೮೮]

"ನಿಮಗೆ ನಿಜ ನಿಜವಾಗಿಯೂ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯ ಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವುದಿಲ್ಲ." "ನನ್ನನ್ನು ನನ್ನನ್ನು ನಂಬುವವ ಮೃತನಾಗಿದ್ದರೂ ಜೀವಿಸುವನು ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನೂ ಎಂದಿಗೂ ಸಾಯುವುದಿಲ್ಲ.[೮೯]

ಗೆನೆಸರೇತ್ ಸರೋವರದ ಮೇಲೆ ಯೇಸು ನಡೆದರೆ ಗಂಗಾನದಿಯ ಮೇಲೆ ಬುದ್ಧ ನೆಡೆಯುವುದನ್ನು ಕಾಣುತ್ತೇವೆ. ಹೀಗೆ ಅನೇಕ ವಿಷಯಗಳಲ್ಲಿ ಒಬ್ಬರನ್ನೊಬ್ಬರು ಒಂದೇ ಸಮಾನಾಂತರದಲ್ಲಿ ನಡೆಯುವುದನ್ನು ಕಾಣುತ್ತೇವೆ.

ಯೇಸುಸ್ವಾಮಿ ಪಾಲೆಸ್ಟಿನ್ ನಾಡಿನಲ್ಲಿ ಬೋಧಿಸುತ್ತಿದ್ದ ಕಾಲದಲ್ಲಿ ಬೌದ್ಧಧರ್ಮದ ಮಹಾಯಾನ ಪಂಥವು - ಸ್ವ ಕೇಂದ್ರೀಕೃತ ಹೀನಾಯಾನ ಪಂಥದ ಮೇಲೆ ಮೇಲುಗೈ ಸಾದಿಸಿತ್ತು. ಮಹಾಯಾನ ಪಂಥವು ಬೌದ್ಧ ಧರ್ಮವನ್ನು ವಿಶ್ವಧರ್ಮವನ್ನಾಗಿ ತಿರುಗಿಸಿತು. ಎಲ್ಲಾ ದೇಶಗಳನ್ನು ಎಲ್ಲಾ ಹಿನ್ನೆಲೆಯವರನ್ನು ಬೌದ್ಧಧರ್ಮ ಮುಕ್ತವಾಗಿ ಸ್ವಾಗತಿಸಿ ತನ್ನ ಬಾಗಿಲನ್ನು ತೆರೆಯಿತು.

ಮಹಾಯಾನ ತತ್ವವು ಕರುಣೆಯ ಮೇಲೆ ಕೇಂದ್ರೀಕೃತವಾಗಿದ್ದು, ಮಾದರಿ 'ಬೋಧಿಸತ್ವ'ನ ಸುತ್ತ ಸುತ್ತುವರೆದಿತ್ತು. ಈ ಬೋಧಿಸತ್ವ' ಅಂಶವು ಕ್ರಿ.ಪೂ. ೩ನೇ ಶತಮಾನದಲ್ಲಿ ರೂಪಗೊಂಡಿತು. ಈ ಲೋಕದ ಪ್ರತಿಯೊಬ್ಬರು ರಕ್ಷಣೆ ಹೊಂದುವತನಕ ತನ್ನನ್ನು ವಿಶ್ವಾತ್ಮನೊಂದಿಗೆ ಐಕ್ಯಗೊಳಿಸದೆ, ತನ್ನ ನಿರ್ವಾಣವನ್ನು ಮುಂದೂಡುವವನೇ ಬೋಧಿಸತ್ವನಾಗಿದ್ದಾನೆ.

ಈ ಭೂಲೋಕದ ಮೇಲೆ ಬೋಧಿಸತ್ವನಿರುವ ಉದ್ದೇಶ ಒಂದೇ ಒಂದು. ಎಲ್ಲಾ ಆತ್ಮಗಳಿಗೂ ಮೋಕ್ಷದ ಹಾದಿ ತೋರಿಸುವುದು. ಜನನ-ಮರಣಗಳ ಚಕ್ರದಿಂದ, ಪ್ರಪಂಚದ ವ್ಯಾಮೋಹ, ಆಕರ್ಷಣೆಗಳಿಂದ, ದೈಹಿಕ ಆಕರ್ಷಣೆಗಳಿಂದ ದೂರ ಮಾಡಿ ಸಕಲ ಆತ್ಮಗಳಿಗೂ ಮೋಕ್ಷವನ್ನು ಕರುಣಿಸುವುದು.

ಹೀಗೆ ಬೋಧಿಸತ್ವನಲ್ಲಿ ಪ್ರಕಟವಾಗಿರುವ ಎಲ್ಲಾ ಗುಣಗಳು ಯೇಸುಕ್ರಿಸ್ತನಲ್ಲಿದ್ದು ಯೇಸುಕ್ರಿಸ್ತನೇ ಬೋಧಿಸತ್ವನ ಮಾದರಿಯಾಗಿದ್ದಾನೆ.

೩.೫ ಭಗವಾನ್ ಮಹಾವೀರನ ಜೈನಧರ್ಮ

ಸೌರಮಂಡಲದ ಕೇಂದ್ರಬಿಂದುವಿನಲ್ಲಿ ಸೂರ್ಯನಿರುವಂತೆ, ಜೈನಧರ್ಮದ ಕೇಂದ್ರಬಿಂದುವಿನಲ್ಲಿ ಅಹಿಂಸೆಯಿದೆ. ಇದೇ ಆ ಧರ್ಮದ ವೈಶಿಷ್ಟ್ಯ. ಅಹಿಂಸೆ ಎಂದರೆ ಜೈನಧರ್ಮ, ಜೈನಧರ್ಮವೆಂದರೆ ಅಹಿಂಸೆ, ಈ ಅವಿನಾಭಾವವನ್ನೇ ಸರ್ವಜ್ಞ ಕವಿಯ ವಚನವೊಂದು ಹೀಗೆ ಸೊಗಸಾಗಿ ಅಭಿವ್ಯಕ್ತಿಸಿದೆ.

ಕೊಲುವ ಧರ್ಮವನೊಯ್ದು ಒಲೆಯೊಳಗಿಕ್ಕುವುದು
ಕೊಲಲಾಗದೆಂಬ ಜೈನರ ಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ[೯೦]

ಜಿನಧರ್ಮ ಒಂದು ಶಾಶ್ವತ ಧರ್ಮ. ಇದಕ್ಕೆ ಆದಿಯಿಲ್ಲ ಅಂತ್ಯವಿಲ್ಲ. ಆಗಾಗ ಸಂಭವಿಸುವ ಅಡ್ಡಿ ಆತಂಕಗಳಿಂದ ಇದು ನಾಶವಾಗುವುದಿಲ್ಲವೆಂಬುದು ಜೈನರ ಒಂದು ಪರಿಕಲ್ಪನೆ. ಧರ್ಮದ ಪ್ರಭಾವನೆ ಮಸುಕಾಗಿದ್ದಾಗ, ಜಗತ್ತಿಗೆ ವಿಶೇಷವಾಗಿ ಧರ್ಮೋಪದೇಶ ಮಾಡುವರು ಮೋಕ್ಷ ಮಾರ್ಗದ ನೇತಾರರು ಕಾಲಕಾಲಕ್ಕೆ ಕಾಣಿಸಿಕೊಳ್ಳುತ್ತಾರೆ. ಅವರೇ ತೀರ್ಥಂಕರರು. ನದಿಯ ಆಚೆಯ ದಡಕ್ಕೆ ಕ್ಷೇಮವಾಗಿ ದಾಟಿಹೋಗುವ ಸ್ಥಳವನ್ನು 'ತೀರ್ಥ' ಎನ್ನುತ್ತಾರೆ. ಹಾಗೆಯೇ ಆತ್ಮರು ಸಂಸಾರ ಸಾಗರವನ್ನು ದಾಟಲು ಆಶ್ರಯಿಸುವ ಸಮ್ಯಕ್ ದೃಷ್ಟಿ (ಸರಿಯಾದ ನಂಬಿಕೆ) ಅಥವಾ ದರ್ಶನವನ್ನು ಸಹ 'ತೀರ್ಥ'ವೆನ್ನುತ್ತಾರೆ. ಇಂಥ ತೀರ್ಥವನ್ನು ಮಾಡುವವರೇ ತೀರ್ಥಂಕರರು. ಇಂಥ ಇಪ್ಪತ್ನಾಲ್ಕು ಜನ ತೀರ್ಥಂಕರರನ್ನು ಜೈನಧರ್ಮ ಗುರುತಿಸಿದೆ. ಇವರಲ್ಲಿ ಬಹುಮಂದಿ ಇತಿಹಾಸ ಪೂರ್ವದ ಕಾಲಕ್ಕೆ ಸೇರಿದವರು.[೯೧]

ವರ್ಧಮಾನ ಮಹಾವೀರನು ಕ್ರಿಸ್ತಪೂರ್ವ ೬ನೇ ಶತಮಾನದಲ್ಲಿ ಜನಿಸಿದ. ಈತನು ಕ್ಷತ್ರಿಯ ಕುಂಡಪುರದ ಗಣರಾಜ ಸಿದ್ಧಾರ್ಥ ಹಾಗೂ ಈತನ ನಲ್ಮೆಯ ರಾಣಿ ಪ್ರಿಯಕಾರಿಣಿ ಇವರ ಮಗ. ಈತ ಮಾತೆ ಪ್ರಿಯಕಾರಿಣಿಯ ಗರ್ಭದಲ್ಲಿ ಅವತರಿಸಿದ ಸಮಯದಿಂದ ಚಿನ್ನ, ಬೆಳ್ಳಿ, ಧನ, ಧಾನ್ಯ, ಮಣಿ, ಮುತ್ತು, ಶಂಖ, ಶಿಲೆ, ಹವಳ ಮೊದಲಾದುವು ಅತಿಯಾಗಿ ವರ್ಧಿಸಿದವು. ಆದ್ದರಿಂದ ಶಿಶುವಿಗೆ ವರ್ಧಮಾನ ಎಂದು ನಾಮಕರಣ ಮಾಡಿದರು.

ಮಹಾವೀರನ ಉಪದೇಶ : ಆದರ್ಶಗುಣಗಳ ಆರಾಧನೆ

ಸರ್ವಶಕ್ತ, ಸರ್ವವ್ಯಾಪ್ತಿ, ಸರ್ವವನ್ನು ನಿರ್ದೇಶಿಸುವ ಭಗವಂತನೊಬ್ಬನಿದ್ದಾನೆ. ಅವನೇ ಈ ಲೋಕವನ್ನು ಸೃಷ್ಟಿಸಿದ್ದಾನೆ, ಇದನ್ನು ರಕ್ಷಿಸುತ್ತಾನೆ, ಇದನ್ನು ನಾಶ ಮಾಡುತ್ತಾನೆ ಎಂಬ ಸೃಷ್ಟಿ ಸಿದ್ಧಾಂತ ಜಗತ್ತಿನ ಅನೇಕ ಧರ್ಮಗಳಲ್ಲಿ ಕಂಡುಬರುವುದು. ಈ ಪರಿಕಲ್ಪನೆಯನ್ನು ಮಹಾವೀರರು ಮಾನ್ಯ ಮಾಡುವುದಿಲ್ಲ. ಅವರ ಪ್ರಕಾರ ಜಗತ್ತನ್ನು ಯಾರೂ ಸೃಷ್ಟಿಸಿಲ್ಲ, ಇದು ಸಹಜವಾಗಿ ಹಿಂದೆ ಇತ್ತು, ಈಗ ಇದೆ, ಮುಂದೆಯೂ ಇರುವುದು.

"ಮಹಾವೀರನು ಸೃಷ್ಟಿಕರ್ತನನ್ನು ನಿರಾಕರಿಸಿದರೂ ಚೈತನ್ಯಮಯನಾದ ಆತ್ಮನನ್ನು ನಿರಾಕರಿಸಲಿಲ್ಲ. ಈ ಆತ್ಮನು ಮನುಷ್ಯ, ಪಶು, ಪಕ್ಷಿ, ಕ್ರಿಮಿ-ಕೀಟ, ಸಸ್ಯವರ್ಗ, ಗಾಳಿ, ಬೆಂಕಿ, ನೀರು ಹಾಗೂ ನೆಲ-ಇವೆಲ್ಲವುಗಳಲ್ಲೂ ಇದ್ದಾನೆ. ಜಗತ್ತಿನಲ್ಲಿ ಅಸಂಖ್ಯಾ ಆತ್ಮಗಳಿವೆ. ಇವುಗಳ ವಾಸ್ತವ ಸ್ಥಿತಿ, ಅದುರಿನಲ್ಲಿ ಸಿಲುಕಿರುವ ಚಿನ್ನದಂತೆ. ಸೂಕ್ತ ಸಂಸ್ಕಾರದಿಂದ ಅದುರಿನ ಚಿನ್ನ ಹೇಗೆ ಶುದ್ಧವಾದ ಅಪರಂಜಿ ಆಗುವುದೋ ಹಾಗೆ ಪುಣ್ಯ ಪಾಪಗಳೆಂಬ ಕರ್ಮಗಳ ಹಿಡಿತದಲ್ಲಿ ಸಿಕ್ಕಿರುವ ಆತ್ಮನು, ಯೋಗ್ಯ ಸಾಧನೆಯಿಂದ ಸರ್ವಮುಕ್ತನಾಗಿ ಪರಿಶುದ್ಧನಾಗಬಲ್ಲ. ಹೀಗೆ ಪರಿಶುದ್ಧನಾದ ಆತ್ಮನೇ ಪರಮಾತ್ಮನು. ಇಂಥ ಪರಮಾತ್ಮ ಒಬ್ಬನಲ್ಲ, ಅಸಂಖ್ಯಾತರು. ಇವರೆಲ್ಲ ಲೋಕಾಗ್ರದಲ್ಲಿರುವ ಸಿದ್ಧಶಿಲೆಯಲ್ಲಿ ನೆಲೆಸಿರುತ್ತಾರೆ. ಜಿನ ಎಂಬಹುದು ಒಬ್ಬ ದೇವನ ಅಥವಾ ವ್ಯಕ್ತಿಯ ಹೆಸರಲ್ಲ, ಕರ್ಮಶತ್ರುಗಳನ್ನು ಜಯಿಸಿದವನು ಎಂದರ್ಥ. ಮಹಾವೀರನ ಪ್ರಕಾರ ಕರ್ಮಗಳನ್ನು ಜಯಿಸುವ ಜನರೆಲ್ಲ ಜಿನರಾಗಬಲ್ಲರು. ಇವರನ್ನೇ ಅರಹಂತರು ಎನ್ನುತ್ತಾರೆ. ಅರಹಂತ ಎಂದರೆ ಪೂಜಾರ್ಹನಾದ ಆತ್ಮ ಎಂದರ್ಥ. ಪ್ರತಿಯೊಂದು ಜೀವಿಯಲ್ಲೂ ಜಿನನಾಗುವ, ಅರ್ಹತನಾಗುವ ಶಕ್ತಿ ಅಡಗಿದೆ. ಅದನ್ನು ಸ್ವಶಕ್ತಿಯಿಂದ, ಸ್ವಪ್ರಯತ್ನದಿಂದ ಸಾಕ್ಷಾತ್ಕರಿಸಿಕೊಳ್ಳಬೇಕು ಎಂಬುದು ಮಹಾವೀರನ ಸಂದೇಶವಾಗಿದೆ".[೬೨]

ಮಹಾವೀರನ ಅನುಯಾಯಿಗಳು ದೇವರನ್ನು ಪೂಜಿಸುವ ದೃಷ್ಟಿ ವಿಶಿಷ್ಟವಾದುದು. ಆದಿ ತೀರ್ಥಂಕರ ವೃಷಭನಾಥರಿಂದ ಅಂತಿಮ ತೀರ್ಥಂಕರ ಮಹಾವೀರರವರೆಗಿನ ಎಲ್ಲ ತೀರ್ಥಂಕರರನ್ನು, ಜಿನರಾದ ಇನ್ನೂ ಅನೇಕರನ್ನು ಜೈನರು ಪೂಜಿಸುತ್ತಾರೆ. ಆದರೆ ವರ ಪಡೆಯುವ ಅಪೇಕ್ಷೆಯಿಂದಾಗಲಿ, ಶಾಪದ ಭಯದಿಂದಾಗಲಿ ಅವರನ್ನು ಪೂಜಿಸುವುದಿಲ್ಲ. ಜಿನರ ಆರಾಧನೆಯೆಂದರೆ ಅಮರ ಆದರ್ಶ ಗುಣಗಳ ಆರಾಧನೆಯೇ ಆಗಿದೆ. ಈ ಭಾವನೆಯನ್ನು ತತ್ತ್ವಾರ್ಥಸೂತ್ರ ಗ್ರಂಥದ ಮಂಗಲ ಶ್ಲೋಕ ಹೀಗೆ ವ್ಯಕ್ತಪಡಿಸಿದೆ-

ಮೋಕ್ಷ ಮಾರ್ಗಸ್ಯ ನೇತಾರಂ, ಭೇತ್ತಾರಂ ಕರ್ಮಭೂಯಂ
ಜ್ಞಾತಾರಂ ವಿಶ್ವತತ್ತ್ವಾನಾಂ, ವಂದೇ ತದ್ಗುಣಲಬ್ಧಯೇ

ಮೋಕ್ಷ ಮಾರ್ಗದ ನೇತಾರನೂ, ಕರ್ಮವೆಂಬ ಪರ್ವತವನ್ನು ಭೇದಿಸಿದವನೂ, ವಿಶ್ವತತ್ತ್ವವನ್ನು ತಿಳಿದವನೂ ಆದ ಆ ಪರಮಾತ್ಮನನ್ನು ಆತನ ಗುಣಗಳನ್ನು ಪಡೆಯಲು ವಂದಿಸುತ್ತೇನೆ. ಇದರಿಂದ ಮಹಾವೀರನ ಜೈನಧರ್ಮವು ವ್ಯಕ್ತಿಪೂಜೆಯನ್ನು ಬೆಂಬಲಿಸದೆ, ಆದರ್ಶ ಗುಣಗಳ ಆರಾಧನೆಯನ್ನು ಪ್ರೋತ್ಸಾಹಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಜಗತ್ತಿನಲ್ಲಿ ಅಹಿಂಸೆಯನ್ನು ಹೇಳದ ಧರ್ಮವೇ ಇಲ್ಲ. ಮಹಾವೀರನು ಹೇಳಿದ ಸ್ಥಾನಗಳಲ್ಲಿ ಅಹಿಂಸೆಯೇ ಮೊದಲನೆಯದು. ಎಲ್ಲ ಪ್ರಾಣಿಗಳಲ್ಲಿ ಸಂಯಮದಿಂದ ನಡೆದುಕೊಳ್ಳುವುದೇ ಅಹಿಂಸೆ. ಅಹಿಂಸೆ, ಸಂಯಮ, ತಪದಿಂದ ಕೂಡಿದ ಧರ್ಮವೇ ಉತ್ಕೃಷ್ಟ ಮಂಗಲ. ಯಾರನ್ನು ಯಾವ ಬಗೆಯಲ್ಲಿಯೂ ಹಿಂಸಿಸಬಾರದು. ಎಲ್ಲ ಜೀವಗಳೂ ವಿಚಾರದಲ್ಲಿಯೂ ಸಮಭಾವವಿರುವುದು ಅಹಿಂಸೆ.[೬೩]

ಜೀವಿಗಳ ರಕ್ಷಣೆಯೇ ಧರ್ಮ. ವಾಸ್ತವಿಕವಾಗಿ ಪ್ರಾಣಿಗಳ ವಧೆಯೆಂದರೆ ತನ್ನ ವಧೆಯೇ. ಪ್ರಾಣಿಗಳ ಮೇಲೆ ದಯೆ ತೋರಿದರೆ ನಿನ್ನ ಮೇಲೆ ದಯೆ ತೋರಿದಂತೆಯೇ ಸೈ. ಆದುದದರಿಂದ ಮುಳ್ಳಿನಂತೆ ಹಿಂಸೆಯನ್ನು ದೂರದಿಂದಲೇ ಬಿಟ್ಟುಬಿಡಬೇಕು. ಇದು ಮಹಾವೀರನ ಜೈನ ಸಿದ್ಧಾಂತವಾಗಿದೆ.

೩.೫.೧ ಮಹಾವೀರ - ಯೇಸುಕ್ರಿಸ್ತನ ಬೋಧನೆಯಲ್ಲಿನ ಸಾಮ್ಯತೆಗಳು

ಮಹಾವೀರ ಹಾಗೂ ಯೇಸುಕ್ರಿಸ್ತರು ಇಡೀ ಮಾನವ ಕುಲವೇ ಒಂದು ಎಂದು ಸಾರಿದ ಯುಗಪುರುಷರು. ಇವರ ಬೋಧನೆಗಳಲ್ಲಿ ಕೆಲವು ಸಾಮ್ಯತೆಗಳನ್ನು ನಾವು ಗಮನಿಸಬಹುದು.

ಮಹಾವೀರನು ತಾನು ದಿಗಂಬರನಾಗಿ ಸಂಚರಿಸುತ್ತಿದ್ದಾಗ ಜನ ಎಷ್ಟೇ ಹಿಂಸೆ ಮಾಡಿದರೂ ಪ್ರತಿಯಾಗಿ ಹಿಂಸೆ ಮಾಡದೆ ಶಾಂತಚಿತ್ತನಾಗಿರುತ್ತಿದ್ದನು. ಇದಕ್ಕೆ ಸಂವಾದಿಯಾಗಿ ತನ್ನನ್ನು ಒಡೆದು ಹಿಂಸಿಸಿ ಶಿಲುಬೆಗೆ ಏರಿಸಿದ ಜನರಿಗಾಗಿ ತಂದೆಯೆ ಅವರನ್ನು ಕ್ಷಮಿಸು ಎನ್ನುವುದರ ಮೂಲಕ ತಾವು ಎಂತಹ ಅಹಿಂಸಾವಾದಿ ಎಂಬುದನ್ನು ತೋರಿಸಿದ್ದಾರೆ. ಹಿಂಸೆಗೆ ಪ್ರತಿಯಾಗಿ ಹಿಂಸೆ ಮಾಡುವುದರ ಬದಲಾಗಿ ಅಹಿಂಸೆಯನ್ನು ಯೇಸುಕ್ರಿಸ್ತ ಸಹ ಎತ್ತಿ ಹಿಡಿಯುತ್ತಾನೆ.

ದಯೆಯೇ ಧರ್ಮದ ಮೂಲವಯ್ಯ. ಪ್ರಾಣಿಗಳಲ್ಲಿ ಕೃಪೆಯನ್ನಿಡುವುದು ದಯೆ. ದಯೆಯನ್ನು ಕಾಪಾಡಿಕೊಳ್ಳುವುದಕ್ಕೋಸ್ಕರವೇ ಬೇರೆ ಬೇರೆ ಗುಣಗಳು ಹೇಳಲ್ಪಟ್ಟಿವೆ. ಜೊತೆಗೆ ಸರ್ವ ಜೀವಿಗಳಲ್ಲೂ ದಯೆ ಇರಬೇಕೆಂದು ಮಹಾವೀರನು ಒತ್ತಿ ಹೇಳುತ್ತಾನೆ. ಇದಕ್ಕೆ ಸಂವಾದಿಯಾಗಿ ಯೇಸುಕ್ರಿಸ್ತನು ನನಗೆ ಬೇಕಾಗಿರುವುದು ದಯೆ. ನಿಮ್ಮ ಯಜ್ಞಬಲಿಯಲ್ಲ ಎನ್ನುವುದರ ಮೂಲಕ ತಾನು ದಯಾನಿಧಿ ಎಂಬುದನ್ನು ತನ್ನ ಬೋಧನೆಯಲ್ಲಿ ತೋರ್ಪಡಿಸುತ್ತಾನೆ. ಜೊತೆಗೆ ತನ್ನ ಸಾಮತಿಗಳಲ್ಲಿ ದಯೆ ತೋರಿದ ಸಮಾರ್ಯದವ, ದಯೆ ತೋರಿದ ದುಂದುಗಾರ ಮಗನ ತಂದೆ ಇತರೆ ಸಾಮತಿಗಳಲ್ಲಿ ದಯೆಯೆ ಎದ್ದು ಕಾಣುತ್ತಿದೆ. ಈ ಇಬ್ಬರು ಮಹಾಪುರುಷರು ತಮ್ಮ ಬೋಧನೆಗಳಲ್ಲಿ ದಯೆಗೆ ಆದ್ಯತೆಯನ್ನು ನೀಡಿದ್ದಾರೆ.

ಮಹಾವೀರನು ದಾನಕ್ಕೆ ಮಹತ್ವ ನೀಡಿದ್ದಾನೆ. ಶ್ರಾವಕರು ಆಚರಿಸಬೇಕಾದ ಷಟ್ಕರ್ಮಗಳಲ್ಲಿ ದಾನವನ್ನು ಒಂದಾಗಿಸಿದ್ದಾನೆ. ತನ್ನ ಮತ್ತು ಇತರರ ಉಪಕಾರಾರ್ಥವಾಗಿ ಯೋಗ್ಯವಾದ ಏನನ್ನಾದರೂ ಕೊಡುವುದೇ ದಾನ. ಇಲ್ಲಿಯೂ ಜೈನಾಚಾರ್ಯರು ಯಾವ ರೀತಿಯ ನಿರ್ಬಂಧವನ್ನೂ ಹೇರುವುದಿಲ್ಲ. ಪ್ರತಿಯೊಬ್ಬನು ತನ್ನ ಶಕ್ತ್ಯಾನುಸಾರ ದಾನ ಮಾಡಬಹುದಾಗಿದೆ. ಭಾರತೀಯ ಸಮಾಜದಲ್ಲಿ ಕನ್ಯಾದಾನ, ಗೋದಾನ, ಹಿರಣ್ಯದಾನ, ಭೂದಾನ- ಹೀಗೆ ಅನೇಕ ರೀತಿಯ ದಾನಗಳು ಪ್ರಚಲಿತವಾಗಿವೆ. ಇಂದಿನ ಸಮಾಜದಲ್ಲಿ ರಕ್ತದಾನ, ನೇತ್ರದಾನ ಮೊದಲಾದುವು ಕೇಳಿಬರುತ್ತಿವೆ. ಆದರೆ ಮಹಾವೀರನ ಧರ್ಮದಲ್ಲಿ ಅಭಯದಾನ, ಆಹಾರ ದಾನ, ಔಷಧ ದಾನ, ಶಾಸ್ತ್ರ (ವಿದ್ಯಾ)ದಾನ ಈ ನಾಲ್ಕು ಮುಖ್ಯವಾದುವು. ಯೇಸುಕ್ರಿಸ್ತನು ಸಹ ದಾನಕ್ಕೆ ಮಹತ್ವವನ್ನು ನೀಡುತ್ತಾನೆ. ದಾನ ಮಾಡುವುದರ ಮೂಲಕ ದೇವರ ಸ್ವರ್ಗ ಸಾಮ್ರಾಜ್ಯದಲ್ಲಿ ಪಾಲುದಾರರಾಗಲು ಸಾಧ್ಯ ಎಂಬುದನ್ನು ಬೋಧಿಸುತ್ತಾನೆ. ಯೇಸುಕ್ರಿಸ್ತನು ದಾನ ಮಾಡುವಾಗ ಗುಪ್ತವಾಗಿ ದಾನ ಮಾಡುವಂತೆ ತನ್ನ ಅನುಯಾಯಿಗೆ ಕರೆ ನೀಡುತಾನೆ. ದಾನ ಮಾಡುವಾಗ ತುತ್ತೂರಿ ಊದಿಸಿಕೊಳ್ಳುತ್ತ ದಾನ ಮಾಡುವುದು ದೇವರಿಗೆ ಅಪ್ರಿಯವಾದುದು ಎಂಬುದನ್ನು ತಿಳಿ ಹೇಳುತ್ತಾನೆ. ದಾನ ಮಾಡುವಾಗ

ಎಡಗೈ ಮಾಡುವ ದಾನ ಬಲಗೈಗೆ ತಿಳಿಯದಿರಲಿ ಎಂಬುದಾಗಿ ಹೇಳಿ ದಾನದ ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತಾನೆ.

ಈ ಇಬ್ಬರ ಬೋಧನೆಗಳಲ್ಲಿ ಸಮಾನ ಅಂಶಗಳಾಗಿ ಇಂದಿನ ಮಾನವನ ಉನ್ನತಿಗೆ ಸೌಹಾರ್ದಕ್ಕೆ ಶಾಂತಿಗೆ ಅಗತ್ಯವಾದ ಮೌಲ್ಯಗಳು ಹಾಗೂ ಸಮ್ಯಕ್ ಜೀವನ ದೃಷ್ಟಿ ಗೋಚರಿಸುತ್ತವೆ. ಯೇಸುಕ್ರಿಸ್ತ ಮತ್ತು ಮಹಾವೀರರು ಬೋಧಿಸಿದ ಅಹಿಂಸೆ, ಶುದ್ಧ ಮನಸ್ಸು, ಪರಿಶುದ್ಧ ಜೀವನ ಮತ್ತು ಸಂಯಮದ ಮಹಾನ್ ತತ್ವಗಳು ಮನುಕುಲಕ್ಕೆ ದಾರಿದೀಪವಾಗಿದೆ.

೩.೬ ದಾಸ ಪರಂಪರೆ ಮತ್ತು ಧಾರ್ಮಿಕ ಸಂವಾದಗಳು

'ಬದುಕು' ಅಂದರೆ ಏನು? ಇದರ ಆದಿ ಮತ್ತು ಅಂತ್ಯದ ಬಗ್ಗೆ ಪ್ರಾಚೀನ ಮಾನವನಿಂದ ಇಲ್ಲಿಯತನಕ ವ್ಯಾಖ್ಯಾನಗಳು, ವಾದ ವಿವಾದಗಳು ನಿರಂತರವಾಗಿ ನಡೆಯುತ್ತಲೇ ಇವೆ. ಬದುಕೆಂದರೆ ಬರಿಯ ಕಣ್ಣಿಗೆ ಕಾಣುವ ಈ ಮಣ್ಣಿನ ಮೈಯಷ್ಟೆ ಅಲ್ಲ. ಈ ದೇಹದ ಜೊತೆ ಆರಂಭವಾದದ್ದು ಅಲ್ಲ. ಈ ದೇಹದ ಜೊತೆ ಅಂತಿಮವಾಗುವುದು ಇಲ್ಲ; ಅದು ಹಿಂದೂ ಇತ್ತು; ಇಂದೂ ಇದೆ' ಮೂಂದೂ ಇರುತ್ತದೆ. ಹಿಂದೆ - ಇಂದು - ಮುಂದೂ ಕಾಣುವುದರ ಹಿಂದೆ ಹುದುಗಿರುವ ಈ ಕಾಣದ್ದರ ಹುಡುಕಾಟವೆ ಅಧ್ಯಾತ್ಮ.

ಹಾಗಾದರೆ ಏನದು? ಎಲ್ಲಿದೆ ಅದರ ಬೇರು? ಈ ಕೊರಡನ್ನು ಕೊನರಿಸಿದ, ಕೊನರಿಸಿ ಚೆಲುವನ್ನಿತ್ತ, ಚೆಲುವಿಗೆ ಚಲನೆಯನ್ನಿತ್ತ, ಜತೆಗೆ ಚಿಂತನಶೀಲತೆಯನ್ನಿತ್ತ ಆ ಪವಾಡ ಏನದು? ನಾಸ್ತಿಕರ ಹೆಡ್ಡತನಕ್ಕೆ ಸಡ್ಡು ಹೊಡೆದು ನಿಂತ ಆ ಗುಡ್ಡದಂಥ ಗುಟ್ಟು ಯಾವುದು? ಪ್ರಾಚೀನರು ತೀರ್ಮಾನಿಸಿದರು; ಇದು ಬರಿಯ ಜಗದ ಜಂಜಡವಲ್ಲ. ಇದರ ಒಳಗೊಂದು ತುದಿ ಮೊದಲಿಲ್ಲದ ಚೈತನ್ಯದ ಚಿಲುಮೆಯಿದೆ. ಆ ಕಾಣದ ಚೈತನ್ಯವೆ ಈ ಕಾಣುವ ಮಣ್ಣಿನ ಮೈಗೆ ಹೊಸ ಮಾಟವಿತ್ತಿತು. ಜಡಕ್ಕೊಂದು ಹೊಸ ನಡೆಯುತ್ತಿತ್ತು; ಚೆಲು ನುಡಿಯಿತ್ತಿತು. ಪ್ರಾಚೀನರು ಇದನ್ನು ಆತ್ಮ ಎಂದು ಕರೆದರು:

ಯಚ್ಚಾಪ್ನೋತಿ ಯದಾದತ್ತೆ ಯಚ್ಚಾಪ್ನೋತಿ ಪಿಷ್ಯಯಾನಿಹ
ಯಚ್ಚಾಸ್ಯ ಸಂತತೋ ಭಾವಸ್ತಸ್ಮಾದಾತ್ಮೇತಿ ಭಣ್ಯತೇ

ಆತ್ಮ ಎಂದರೆ ಈ ದೇಹದೊಳಗೆ ತುಂಬಿ ನಿಂತ ಶಕ್ತಿ. ಆತ್ಮ ಎಂದರೆ ಕೊಡುಕೊಳ್ಳುವ, ಪ್ರೀತಿ-ಪ್ರೇಮಗಳನ್ನು ಕುದುರಿಸುವ ರಾಗದ್ವೇಷಗಳನ್ನು ಎದಿರುಸುವ ಚೈತನ್ಯ (ಆದತ್ತೆ ಇತ್ಯಾತ್ಮ).

ಆತ್ಮ ಎಂದರೆ ಮನಸ್ಸಿನ ಮೂಲಕ ಚಿಂತಿಸುವ ಬಯಸುವ, ಇಂದ್ರಿಯಗಳ ಮೂಲಕ ಭೋಗಿಸುವ ಅಂತಃಶಕ್ತಿ (ಅತ್ತಿ ವಿಷಯಾನಿತಿ ಆತ್ಮಾ).

ಆತ್ಮ ಎಂದರೆ ಸಾವಿರ ದೇಹಗಳು ಬಂದು ಹೋದರೂ ಸಾಯದೆ ಉಳಿಯುವ ನಿತ್ಯ ಸತ್ಯ, ಅಳಿಯದ ಅನಂತ ಸತ್ಯ (ಆ ತನೋತಿ ಸದಾ ಭವತೀತಿ ಆತ್ಮಾ).

ಈ ಆತ್ಮವೆ ನಾನು. ಇದೇ ಸೋಹಮ್' ಆದರೆ ಏನು ಈ 'ನಾನು' ಎಂದರೆ? ಮತ್ತೆ ಚಿಂತನ-ಮಂಥನ ನಡೆಯಿತು. ಹೊರಗಣ್ಣಿನ ತಾರ್ಕಿಕರು ಹೇಳಿದರು. ಈ ಆತ್ಮ ಆಕಾಶದಂತೆ ಎಲ್ಲೆಡೆ ತುಂಬಿದೆ. ಆದರೂ ಆತ್ಮ ಏಕವಲ್ಲ; ಅನೇಕ. ಏಕೆಂದರೆ ಒಬ್ಬನ ಅನುಭವ ಇನ್ನೊಬ್ಬನದಲ್ಲ. ಆದ್ದರಿಂದ ಪ್ರತಿಯೊಂದು ದೇಹದೊಳಗಿರುವ ಆತ್ಮವೂ ಭಿನ್ನವಾಗಿದೆ. ಹೀಗೆ ಆತ್ಮ ಕಾಲದಿಂದ ಅವಿನಾಶಿ, ದೇಶದಿಂದ ಸರ್ವವ್ಯಾಪಿ; ಗಣನೆಯಿಂದ ಅಸಂಖ್ಯ ಅನುಭವದ ಗಟ್ಟಿ ನೆಲೆಯಿಲ್ಲದ ತರ್ಕದ ಕಸರತ್ತು ಮುಂದಿನವರಿಗೆ ಯಾರಿಗೂ ಇಷ್ಟವಾಗಲಿಲ್ಲ. ನಂತರ ಇನ್ನೊಂದು ಬಗೆಯ ಚಿಂತನೆ ಹುಟ್ಟಿತು.

ಆತ್ಮ ಎಲ್ಲೆಡೆಯು ಇರುವಂಥದು, ಆಕಾಶದಂತೆ ಎಂದ ಮೇಲೆ ಅಸಂಖ್ಯ ಆತ್ಮಗಳು ಏಕೆ ಬೇಕು? ಒಂದೇ ಆತ್ಮ ಎಲ್ಲಾ ಕಡೆಯೂ ತುಂಬಿದೆ. ದೇಹದ ಚೌಕಟ್ಟಿನೊಳಗೆ ಅದು ಜೀವಾತ್ಮ. ಕಟ್ಟು ಕಳಚಿದಾಗ ಅದು ಸರ್ವವ್ಯಾಪಿಯಾದ 'ಏಕ ಮೇವಾದ್ವಿತೀಯ'ವಾದ ಅನಂತ ಆತ್ಮ; ಪರಮಾತ್ಮ ಕಾಣುವುದು ಹಲವು ಇರುವುದು ಒಂದು ಅದೇ 'ಸೋಹಮ್'.

ಈ 'ಸೋಹಮ್'ನ ಸೊಕ್ಕೆ ಮುರಿಯಲು ಇನ್ನೊಂದುವಾದ ಮುಂದಾಯಿತು. ಎಲ್ಲ ದೇಹದೊಳಗೂ ಒಂದೇ ಚೈತನ್ಯ ತುಡಿಯುತ್ತಿದೆ. ಎನ್ನುವುದು ತರ್ಕಕ್ಕೆ ನಿಲ್ಲದ, ಅನುಭವಕ್ಕೆ ಸಲ್ಲದ ಮಾತು. ಒಂದೊಂದು ದೇಹದಲ್ಲು ಒಂದೊಂದು ಆತ್ಮ. ಅಸಂಖ್ಯ ದೇಹಗಳು - ಅಸಂಖ್ಯ ಆತ್ಮಗಳು. ಈ ಆತ್ಮ ಸರ್ವವ್ಯಾಪಿಯಲ್ಲ. ಅದರ ಇರವು ದೇಹದೊಳಗೆ ಸೀಮಿತ. ಎಲ್ಲ ಆತ್ಮಗಳೂ ದೇಹದೊಳಗೆ ಬಂದಿಯಾಗಿವೆ. ಅದೇ ನಮ್ಮನಿಮ್ಮ 'ಸೋಹಮ್'

ಚರ್ಚೆ ಏನೋ ಬೆಳೆಯಿತು. ಆದರೆ ಗೊಂದಲ ಮುಗಿಯಲಿಲ್ಲ. ಸಮಸ್ಯೆಗೆ ತೃಪ್ತಿಕರವಾದ ಪರಿಹಾರ ಸಿಗಲಿಲ್ಲ. ಹಾಗಾದರೆ ಆತ್ಮದ ಗಾತ್ರ ಏನು? ತಕ್ಷಣ ಬಂದ ಉತ್ತರ ದೇಹದ ಗಾತ್ರವೇ ಆತ್ಮದ ಗಾತ್ರ. ಇದು ಮತ್ತೆ ತರ್ಕಕ್ಕೆ ಬಗ್ಗದ, ಅನುಭವಕ್ಕೆ ಒಗ್ಗದ ಮಾತಾಯಿತು. ದೇಹದ ಪರಿಮಾಣವೆ ಆತ್ಮದ ಪರಿಮಾಣವಾದರೆ ದೇಹ ನಾಶವಾದಾಗ, ಆತ್ಮವೂ ನಾಶವಾಗಬೇಕಾಯಿತು. ಇನ್ನು ವಿಚಿತ್ರವಾದ ಮಾತೆಂದರೆ ಆನೆಯ ಆತ್ಮ ಇರುವೆಯಾದಾಗ ಹೇಗೆ ಚಿಕ್ಕದಾಯಿತು? ಇರುವೆಯ ಆತ್ಮ ಆನೆಯಾಗಿ ಹುಟ್ಟಿದಾಗ ಹೇಗೆ ದೊಡ್ಡದಾಯಿತು. ಹತ್ತಿಯಂತೆ ಹೆಗ್ಗುವ, ಕುಗ್ಗುವ ವಸ್ತುವೆಂದರೂ ದೇಹದಂತೆ ಅದೂ ನಶ್ವರವೇ ಆಗಬೇಕು. ಮಧ್ಯಮ ಪರಿಮಾಣದ ಆತ್ಮ ನಿತ್ಯವಾಗಿರೋದು ಸಾಧ್ಯವಿಲ್ಲ. ಹೀಗೆ ಅನುಭವದ ಚಿಂತೆಯ ಮೂಸೆಯಲ್ಲಿ ಈ ವಾದವೂ ಬಿದ್ದುಹೋಯಿತು. ಕೊನೆಯದಾಗಿ ಭಾರತೀಯ ತತ್ವಜ್ಞಾನದ ಚಿಂತಕರು ಒಂದು ನಿರ್ಧಾರಕ್ಕೆ ಬಂದರು. ಆತ್ಮ ಎರಡು ಬಗೆಯದಾಗಿದೆ. ಒಂದು ಸರ್ವಗತ, ಆಕಾಶದಂತೆ. ಅಂಥ ಆತ್ಮ ಒಂದೇ. ಅದೇ ಪರಮಾತ್ಮ, ಅವನು ಸರ್ವಗತ ಅಷ್ಟೇ ಅಲ್ಲ: ಸವಜ್ಞ, ಸರ್ವ ಸಮರ್ಥ ಕೂಡ.

ಇನ್ನೊಂದು ಆತ್ಮ ಅಸಂಖ್ಯ. ಆದರೆ ಅದು ಅಣುವಿಗಿಂತ ಅಣು. ಅದೇ ಜೀವಾತ್ಮ. ಹೀಗೆ ದೇವರು ಅನೇಕ. ಅಣುರೂಪರು, ಅಲ್ಪಜ್ಞರು ಮತ್ತು ಅಸಮರ್ಥರು

ಇಲ್ಲಿಂದ ಭಕ್ತಿಯ ಉಗಮವಾಯಿತು.
ಇಲ್ಲಿಂದ ತರ್ಕ ಅನುಭವವಾಯಿತು
ವಾದ ಸಂವಾದವಾಯಿತು
ಯುಕ್ತಿ ಭಕ್ತಿಯಾಯಿತು

ಇದರ ಫಲವಾಗಿ 'ಸೋಹಂ' ತಾಣದಲ್ಲಿ 'ದಾಸೋಹಂ' ಸ್ಥಾಪನೆಯಾಯಿತು. ಒಣ ತರ್ಕಗಳಿಂದ ಸೊರಗಿದ್ದ ವೇದಾಂತ ಭಕ್ತಿಯ ರಸಗಂಗೆ ಹರಿದು ಸರಸವಾಯಿತು. ಪಾಂಡಿತ್ಯ ಅನುಭವವಾಗಿ ಮಾಗಿ ಅನುಭಾವವಾಗಿ ವಿಜೃಂಭಿಸಿತು. ಜ್ಞಾನದ ಜೊತೆಗೆ ಭಕ್ತಿ ಮೇಳವಿಸಿತು. ಭಕ್ತಿಪೂರ್ವಕವಾದ ಅರಿವೇ ಸಾಧನ ಮಾರ್ಗವಾಯಿತು. ಭಕ್ತಿ ಮಾರ್ಗದ ದಾಸ ಪಂಥದ ಮೂಲಕ ಕರ್ನಾಟಕದ ಅಧ್ಯಾತ್ಮದ ಭಾಗ್ಯೋದಯವಾಯಿತು.[೪]

೩.೬.೧ ದಾಸ ಪರಂಪರೆಯಲ್ಲಿ ಪುರಂದರದಾಸರು

ದಾಸರ ಪಂಥಕ್ಕೆ ಕರ್ನಾಟಕದಲ್ಲಿ ಒಂದು ವಿಶಿಷ್ಟವಾದ ಇತಿಹಾಸವಿದೆ. ದಾಸರ ಪಂಥಕ್ಕೆ ಮೂಲ ಪುರುಷರು ಮಧ್ವಾಚಾರ್ಯರು ಅವರ ದ್ವಾದಶ ಸ್ತೋತ್ರ ಹರಿದಾಸ ಸಾಹಿತ್ಯಕ್ಕೆ ಮೂಲಗ್ರಂಥ. ಶ್ರೀಪಾದ ತೀರ್ಥರು, ನರಹರಿ ತೀರ್ಥರು, ಶ್ರೀ ವ್ಯಾಸರಾಯರು, ಪುರಂದರ ದಾಸರು, ಕನಕದಾಸರು ಮೊದಲಾದ ದಾಸರ ಸಮೂಹ ಸಂಗೀತಮಯವಾದ ಕೀರ್ತನೆಗಳನ್ನು ಕನ್ನಡದಲ್ಲಿ ರಚಿಸಿದರು.

ಮಾನವ ಜನ್ಮಕ್ಕೆ ಬಂದಮೇಲೆ ಹರಿಸೇವೆ ಮಾಡುತ್ತಾ ಬದುಕಬೇಕು. ಈ ಸಂಸಾರ ಸಾಗರದಲ್ಲಿದ್ದರೂ ಅದಕ್ಕೆ ಅಂಟಿಯೂ ಅಂಟಿಕೊಳ್ಳದಂತಿರಬೇಕು. ಆಷಾಢಭೂತಿತನ, ಆಡಂಬರ, ಕಪಟತನ, ಡಾಂಭಿಕತನ ಮೊದಲಾದ ಕರ್ಮಕಾಂಡಗಳನ್ನು ಕೈಬಿಟ್ಟು ಹೆಣ್ಣು-ಹೊನ್ನು-ಮಣ್ಣಿನ ಹಿಂದೆ ಅಲೆಯದೆ ಶ್ರೇಷ್ಠವಾದ ಪರಿಶುದ್ಧ ಭಕ್ತಿಯ ಜೀವನವನ್ನು ನಡೆಸಬೇಕೆಂದು ಜನರಿಗೆ ಕೀರ್ತನೆಗಳ ಮೂಲಕ ಬೋಧಿಸಿದರು.

ಪ್ರತಿಯೊಬ್ಬ ವ್ಯಕ್ತಿಯು ಹರಿಯಲ್ಲಿ ಶ್ರದ್ಧೆಯನ್ನಿಟ್ಟು ಶುದ್ಧವಾದ ಸಾತ್ವಿಕ ಜೀವನವನ್ನು ನಡೆಸಿ ಸದ್ಗತಿಯನ್ನು ಪಡೆದರೆ ಸಾಕು ಎಂಬುದು ಅವರ ಬೋಧನೆಯ ಸಾರ. ಜಾತಿ-ಮತ, ಉಚ್ಚ-ನೀಚ, ಸಿರಿವಂತ-ಬಡವ ಎನ್ನುವ ಸಮಾಜದ ತಾರತಮ್ಯಗಳನ್ನು ಅವರು ಖಂಡಿಸಿದರು.

"ಹಾಡಿದರೆ ಎನ್ನೊಡೆಯನ ಹಾಡುವೆ,
ಬೇಡಿದರೆ ಎನ್ನೊಡೆಯನ ಬೇಡುವೆ".

ಹರಿಯಲ್ಲಿ ಅಚಲ ಭಕ್ತಿಯನ್ನಿಟ್ಟುಲ್ಲದೆ ನಮ್ಮ ಮನೆ- ಇಲ್ಲಿ ಬಂದೆವು ಸುಮ್ಮನೆ ಎಂದು ಜನರನ್ನು ಎಚ್ಚರಿಸಿದರು.

ದಾಸರು ಹೇಳಿದ ಮಧುಕರ ವೃತ್ತಿ ಸಮಾಜದೊಂದಿಗೆ ಅವರನ್ನು ಬೆಸೆಯಲು ಸಾಧನವಾಯಿತು. ಅದನ್ನೇ ಅವರು ವೃತ್ತಿಯನ್ನಾಗಿ ಹಿಡಿದರು. ಹಾದಿ-ಬೀದಿಗಳಲ್ಲಿ ಗೆಜ್ಜೆ ಕಟ್ಟಿಕೊಂಡು ತಾಳ ತಂಬೂರಿ ಹಿಡಿದು, ಭಿಕ್ಷೆಗೆ ಹೋಗುವಾಗ ಸಮಾಜದ ಲೋಪದೋಷಗಳನ್ನು ಕಣ್ಣಾರೆ ಕಂಡು, ಲೋಕದ ಕಂದಾಚಾರಗಳನ್ನು, ಅರ್ಥವಿಲ್ಲದ ಆಚರಣೆಗಳನ್ನು ತಮ್ಮ ನಿರ್ಭೀತ ವಿಚಾರಧಾರೆಗಳಿಂದ ಖಂಡಿಸಿ-ಧರ್ಮದ ಅಂತಃಸತ್ವವನ್ನು- ತತ್ವವನ್ನು ಆಮೂಲಾಗ್ರವಾಗಿ ಅರಿತು ಸೋಗಲಾಡಿತನದ ಶುಷ್ಕ ಆಚರಣೆಗಳನ್ನು ಕೈ ಬಿಡುವಂತೆ ತಿಳಿಹೇಳಿ ಜನರನ್ನು ತಿದ್ದಲು ಯತ್ನಿಸಿದರು. ಶ್ರೀಪಾದ ತೀರ್ಥರು ಹಾಗೂ ವ್ಯಾಸರಾಯರು ಕೀರ್ತನ ಪದ್ಧತಿಯನ್ನು ಬೆಳೆಸಿ ಇದಕ್ಕೆ ಒಂದು ತಂಡವನ್ನು ಕಟ್ಟಿದರು. ಈ ಸಮೂಹ ದಾಸ ಕೂಟ ಎನಿಸಿತು. ಈ ಪರಂಪರೆಯೆ ಮುಂದುವರೆಯಿತು.

ಈ ಒಂದು ಹಿನ್ನೆಲೆಯಲ್ಲಿ ದಾಸ ಪರಂಪರೆ ಹಾಗೂ ಕ್ರೈಸ್ತ ಪರಂಪರೆಯ ನಡುವಿನ ಒಂದು ಸಮಾನಾಂತರ ಅಂಶಗಳ ಬಗ್ಗೆ ಕ್ಷ-ಕಿರಣವನ್ನು ಬೀರುವ ಒಂದು ಯತ್ನ ಇಲ್ಲಿ ನಡೆಸಿದ್ದೇನೆ.

ದಾಸ ಪರಂಪರೆಯ ಆಶ್ವಿನಿ ದೇವತೆಗಳೆಂದು ಕರೆಯುವ ಪುರಂದರ ದಾಸರ ಹಾಗೂ ಕನಕದಾಸರ ಕೀರ್ತನೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಕ್ರಿಸ್ತನ ಬೋಧನೆಗಳೊಂದಿಗೆ ಸಮಾನ ನೆಲೆಯಲ್ಲಿ ವಿಶ್ಲೇಷಿಸಿ ನೋಡಿದಾಗ ಅನೇಕ ಬೋಧನೆಗಳು ಮತ್ತು ಕೀರ್ತನೆಗಳು ಒಂದಕ್ಕೊಂದು ಬೆಸೆದುಕೊಂಡಂತೆ ಭಾಸವಾಗುತ್ತವೆ.

ಕ್ರೈಸ್ತ ಭಕ್ತಿಪಂಥದ ಪರಂಪರೆಯಲ್ಲಿ ಯೇಸುಕ್ರಿಸ್ತನ ತತ್ವಗಳನ್ನು ನಡೆ ನುಡಿಯಲ್ಲಿ ತಂದ ವ್ಯಕ್ತಿಯನ್ನು ಸಂತನೆಂದು ಕರೆತ್ತಾರೆ. ಭಗವಂತನಿಗಾಗಿ, ಕ್ರೈಸ್ತ ಧರ್ಮಕ್ಕಾಗಿ, ಸಮಾಜ ಕಲ್ಯಾಣಕ್ಕಾಗಿ ಹಿಂಸೆ ಸಾವನ್ನು ಎದುರಿಸಿದ ಅನುಭಾವಿಗಳನ್ನು ಸಂತರೆನಿಸಿದ್ದಾರೆ. ಕ್ರಿಸ್ತನ ಬೋಧನೆಗಳನ್ನು ವಿವಿಧೆತ್ತರದಲ್ಲಿ ವಿವಿಧ ರೂಪದಲ್ಲಿ ಪ್ರಚಾರ ಮಾಡುತ್ತಾ ಮಾನವ ಕಲ್ಯಾಣ ಮಾಡುತ್ತಾರೆ.

೩.೬.೨ ದಾಸಪರಂಪರೆ ಹಾಗೂ ಯೇಸುಕ್ರಿಸ್ತರ ಸಂವಾದ ಸಮೀಕ್ಷೆ

ದಾಸ ಪರಂಪರೆಯ ಪುರಂದರದಾಸ, ಕನಕದಾಸ ಹಾಗೂ ಯೇಸಕ್ರಿಸ್ತರ ನಡುವಿನ ಧಾರ್ಮಿಕ ಸಂವಾದವನ್ನು ಅವಲೋಕಿಸಿದಾಗ ಕಾಣುವ ಸಮಾನ ಅಂಶಗಳು ಈ ಮುಂದಿನಂತಿವೆ.

* ತಮ್ಮ ಇತಿ ಮಿತಿಯಲ್ಲಿ ದೇವರನ್ನು ದೇವಾಲಯದಿಂದ ಮನುಷ್ಯನ ಹತ್ತಿರಕ್ಕೆ ತರುವ ಯತ್ನ ಮಾಡಿದರು.
* ಜಾತಿ ಬೇಧ ಖಂಡಿಸಿ 'ತಂದೆಯ ಮುಂದೆ ನಾವೆಲ್ಲಾ ಒಂದೇ' ಎನ್ನುವ ಸಂದೇಶ ಸಾರಿದರು.
* ಯೇಸು ಸ್ವಾಮಿಯ ಯೇಶ್ವಾಂದೋಲನವಾಗಲಿ ಕನಕ-ಪುರಂದರ ದಾಸ ಪರಂಪರೆಯಾಗಲಿ ಮೂಲಭೂತವಾಗಿ ತಳ ಸಮುದಾಯದಲ್ಲಿ ಸ್ವಾಭಿಮಾನವನ್ನು ತುಂಬುವುದೇ ಆಗಿತ್ತು. ಸರ್ವರಿಗೂ ಸಮಪಾಲು- ಸರ್ವರಿಗೂ ಸಮಬಾಳು ಎಂಬ ಸಾಮಾಜಿಕ ನ್ಯಾಯದ ನಿಟ್ಟಿನಲ್ಲಿ ಇವರುಗಳ ಧಾರ್ಮಿಕ ಬೋಧನೆ ಕಾಣಬಹುದಾಗಿದೆ.
* ಯೇಸುಕ್ರಿಸ್ತ ಹಾಗೂ ದಾಸ ಪರಂಪರೆಯು ಜನಸಾಮಾನ್ಯರ ಹತ್ತಿರ ತಾವೇ ಹೋದರು.
* ತಮ್ಮ ಬೋಧನೆಗಳಲ್ಲಿ ಬೂಟಾಟಿಕೆ ಆಷಾಡಭೂತಿತನದ ಜೀವನವನ್ನು ಖಂಡಿಸಿ ವ್ಯಕ್ತಿಯ ಸರಳತೆ ಹಾಗೂ ಪ್ರಾಮಾಣಿಕತೆಗೆ ಮನ್ನಣೆ ನೀಡಿದ್ದು.
* ಯೇಸುಕ್ರಿಸ್ತ ಹಾಗೂ ದಾಸ ಪರಂಪರೆಯಲ್ಲಿ ಸ್ತ್ರೀಗೆ ಗೌರವ ಸ್ಥಾನವನ್ನು ನೀಡುವುದನ್ನು ಕಾಣುತ್ತೇವೆ.
* ಒಬ್ಬ ಮನುಷ್ಯ ಒಳ್ಳೆಯವನಾಗಲು ಒಳ್ಳೆಯ ಕಾಲದಲ್ಲಿ ಹುಟ್ಟಬೇಕಾಗಿಲ್ಲ, ಪಾಂಡಿತ್ಯಗಳ ಅಗತ್ಯವಿಲ್ಲ- ದೈವಭಕ್ತನಾಗಿ ಪ್ರಾಮಾಣಿಕತೆಯಿಂದ ಒಳ್ಳೆಯ ನಡೆನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಾಕು. ಅವನ ಜೀವನ ಪಾವನವೆಂದು ಸಾರಿದರು.
* ಏಕದೇವೋಪಾಸನೆಗೆ ಒತ್ತು ಕೊಟ್ಟು ಕಾಯಕಕ್ಕೆ ಮಹತ್ವ ನೀಡಿದರು.
* ಯೇಸುವಿನ ಯೇಶ್ವಾಂಧೋಲನವಾದಲ್ಲಿ, ಹರಿದಾಸರ ಭಕ್ತಿ ಚಳುವಳಿಯಲ್ಲಿ, ತುಳಿತಕ್ಕೆ ಒಳಗಾದವರ ದನಿಯೇ ಒಡಮೂಡಿದೆ.

ಈ ಹಿನ್ನೆಲೆಯಲ್ಲಿ ದಾಸ ಪರಂಪರೆಯೊಂದಿಗೆ ಯೇಸುಸ್ವಾಮಿಯ ಧಾರ್ಮಿಕ ಸಂವಾದ ಸಹಜವಾಗಿ ಮೂಡಿಬಂದು ಸಮಾನ ನೆಲೆಯ ಮತಾಸಕ್ತನಿಗೆ, ಸತ್ಯದ ಆರಾಧಕನಿಗೆ ಅಧ್ಯಯನ ಯೋಗ್ಯಶೀಲವಾಗಿ ರೂಪಗೊಂಡಿದೆ.

೩.೭ ಕನಕದಾಸರ ಪರಿಚಯ

ಹರಿದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರೆಂದು ಪ್ರಸಿದ್ಧರಾಗಿರುವರು ಕನಕದಾಸರು. ಕನಕದಾಸರ ಹೆಸರು ಕರ್ನಾಟಕದ ಮನೆಮಾತು.

"ಕನಕದಾಸರು ಪ್ರಸ್ತುತ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಬಾಡ ಗ್ರಾಮದ ಬೀರಪ್ಪ ಬಚ್ಚಮ್ಮ ಎಂಬ ದೈವ ಭಕ್ತಿಯುಳ್ಳ ದಂಪತಿಗಳಿಗೆ ಜನಿಸಿದರು.[೯೫]

"ಬುಧರಾಮ್ನಾಯ ಶಾಸ್ತ್ರವ ತಿಳಿದು ನಾನಿದ ಪೇಳ್ವೆ ಕೇಳಾಯತಾಕ್ಷಿ"[೯೬] ಎಂಬ ದಾಸರ ಕೃತಿಯನ್ನು ಗಮನಿಸಿದರೆ ಕನಕದಾಸರಿಗೆ ಕ್ರಮಬದ್ಧವಾದ ವಿದ್ಯಾಭ್ಯಾಸ ಲಭಿಸಿತೆಂದು ಗೊತ್ತಾಗುತ್ತದೆ. ಕನ್ನಡ ಮತ್ತು ಸಂಸ್ಕೃತ ಎರಡು ಭಾಷೆಗಳು ಇವರಿಗೆ ಕರತಲಮಲಕವಾಗಿದ್ದಂತೆ ಕಾಣುತ್ತದೆ. ಒಂದೇ ಕಡೆ ಸಂಪ್ರದಾಯಿಕ ವಿದ್ಯಾಭ್ಯಾಸದ ಜೊತೆಗೆ ಯುದ್ಧ ಕಲೆಯನ್ನು ಕನಕರು ಕಲಿತಿದ್ದರೆಂಬುವುದಕ್ಕೆ ಅವರ ಮಾತುಗಳೆ ಸಾಕ್ಷಿ. "ಕನಕ ದಳದಲಿ ಕಲೆತನೆಂದರೆ ಫೌಜು ಕನಕುಮನಕಾಗುವುದು ಹರಿಯೆ......"[೯೭]

ಮದುವೆಯ ನಂತರ ತಾಯಿಯು, ಮಡದಿಯು ಸಾವುಗಳು ಸಂಸಾರದ ಬಗೆಗಿದ್ದ ಆಸಕ್ತಿ ಕಡಿಮೆಯಾಗುವಂತೆ ಮಾಡಿ ಮನಸ್ಸು ವೈರಾಗ್ಯ ತಾಳಲಾರಂಭಿಸಿತು. ಇದೇ ಸಮಯದಲ್ಲಿ ನಡೆದ ಘನ-ಘೋರವಾದ ಯುದ್ಧದಲ್ಲಿ ಕನಕ ನಾಯಕನು ಪರಾಕ್ರಮದಿಂದ ಹೋರಾಡಲು ಯುದ್ಧ ಭೂಮಿಯಲ್ಲಿ ಮರಣಾಂತಿಕ ಗಾಯಗೊಂಡು ಬಸವಳಿದು ನೆಲಕ್ಕುರುಳುತ್ತಾನೆ. ದೈವ ಕೃಪೆಯಿಂದ ಗುಣಮುಖರಾಗುತ್ತಿದ್ದಂತೆ ಮನಸ್ಸು ಹರಿದಾಸನಾಗುವುದೇ ಒಳಿತೆಂದು ಬಾವಿಸುತ್ತದೆ. 'ಕಾಸಿನ ಆಸೆಗಾಗಿ ಘಾಸಿ ಪಟ್ಟೆ, ಶರೀರ ಧರ್ಮವೇ ಶ್ರೇಷ್ಠವೆಂದು ಭಾವಿಸಿ ಕಷ್ಟಪಟ್ಟೆ'[೯೮] ಎನ್ನುತ್ತ ರಾಜಪೋಷಾಕುಗಳನ್ನು ತೆಗೆದುಹಾಕಿ ಕಂಬಳಿ ಹೊದ್ದು ಏಕದಾರಿಯಾಗುತ್ತಾನೆ.

ವ್ಯಾಸರಾಯರಲ್ಲಿ ದೀಕ್ಷೆ ಪಡೆದು ದಾಸನಾಗುತ್ತಾನೆ. ದೇಶ ಸಂಚಾರಿಯಾಗಿ ವಿವಿಧ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಹರಿ ನಾಮ ಕೀರ್ತನೆಗಳನ್ನು ಸಂಕೀರ್ತಿಸುತ್ತಾನೆ. ಅಂತಿಮ ಕಾಲದಲ್ಲಿ ಕಾಗಿನೆಲೆಯಲ್ಲಿ ನೆಲಸಿ ಶ್ರೀ ಆದಿಕೇಶವನಲ್ಲಿ ಲೀನನಾಗುತ್ತಾನೆ.

ಶೈವ, ವೈಷ್ಣವ ಹಾಗೂ ದ್ವೈತ ಮತಗಳಲ್ಲಿ ಯಾವುದೊಂದನ್ನು ದ್ವೇಷಿಸದೆ, ಅವೆಲ್ಲವುಗಳಲ್ಲಿಯ ಆದರ್ಶ, ಭಕ್ತಿಯ ತತ್ವಗಳ ಸಾರವನ್ನು ಹೀರಿಕೊಂಡು ತಮ್ಮ ಜೀವನದಲ್ಲಿ ಆಚರಣೆಗೆ ತಂದ ಕನಕದಾಸ. ತನ್ನ ಜೀವನದುದ್ದಕ್ಕೂ ಅನುಭವಿಸಿದ ಕಷ್ಟ-ಕಾರ್ಪಣ್ಯಗಳಿಗೆ ಎಡರು-ತೊಡರುಗಳಿಗೆ, ನೋವುಗಳಿಗೆ ಅವರು ಹೆದರದೆ, ಬಂದುದೆಲ್ಲ ಬರಲಿ ಭಗವಂತನ ದಯೆ ಒಂದಿರಲಿ' ಎಂಬ ಧ್ಯೇಯವನ್ನಿಟ್ಟುಕೊಂಡು, ಇಹಲೋಕದ ಆಶೆಗಳನ್ನು ಮೆಟ್ಟಿನಿಂತು ಭಗವಂತನನ್ನು ಮುಟ್ಟಿದ ಮಹಾತ್ಮ ಕನಕದಾಸ.

“ಹರಿದಾಸ ಪರಂಪರೆಯಲ್ಲಿ ಕನಕದಾಸನ ವ್ಯಕ್ತಿತ್ವ ವೈಶಿಷ್ಟ್ಯಪೂರ್ಣವಾದುದು. ‘ಕನಕದಾಸ ದಾಸರಲ್ಲಿ ಕವಿಗಳು’ ಎನ್ನುವ ಮಾತು ಅವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ. ಸಮಾಜದ ತಳ ಸಮುದಾಯದಿಂದ ಬಂದು ಸಾಮಾಜಿಕ ಕಟ್ಟುಪಾಡುಗಳನ್ನು ಮುರಿದ, ಕಟ್ಟಿದ ಧೀಮಂತ. ಇದರಿಂದಾಗಿಯೇ ಅವನ ಕೃತಿಗಳಲ್ಲಿ ಹೆಚ್ಚಿನ ನೋವು, ತೀಕ್ಷ್ಣತೆ ವಾಸ್ತವ ಪ್ರಜ್ಞೆ ಎದ್ದು ಕಾಣುತ್ತದೆ. ದಾಸರ ರಚನೆಗಳಲ್ಲಿ ವೈದಿಕ ತತ್ವ ಚಿಂತನೆಗಳಿಗೆ ಪ್ರಾಧಾನ್ಯವಿಲ್ಲ. ಮತ ಪ್ರಕ್ರಿಯೆಗಳಿಗೆ ಸ್ಥಿರವಿಲ್ಲ. ಜನತೆಯ ಮೌಢ್ಯ, ಪುರೋಹಿತಶಾಹಿಯ ಅಂಥ ಕಂದಾಚಾರಗಳನ್ನು, ವರ್ಣ ವ್ಯವಸ್ಥೆಯ ಕ್ರೌರ್ಯವನ್ನು ಖಚಿತ ಶಬ್ದಗಳಲ್ಲಿ ಖಂಡಿಸಿದ್ದಾರೆ. ಮಾನವ ಜನಾಂಗಕ್ಕೆ ಕೊಟ್ಟ ಅವರ ಸಂದೇಶಗಳು ಇಂದಿಗೂ ಜೀವಂತವಾಗಿವೆ.”

೩.೭.೧ ಕನಕದಾಸರ ಕೀರ್ತನೆಗಳಲ್ಲಿನ ಹಾಗೂ ಯೇಸುಕ್ರಿಸ್ತನ ಬೋಧನೆಗಳಲ್ಲಿಯ ಹೋಲಿಕೆಗಳು

ದಾಸ ಪಂಥಕ್ಕೆ ಮೂಲ ಪುರುಷ ಮಧ್ವಾಚಾರ್ಯರು. ಅವರ ದ್ವಾದಶ ಸ್ತೋತ್ರ ಹರಿದಾಸ ಸಾಹಿತ್ಯಕ್ಕೆ ಮೂಲಗ್ರಂಥ. ಮಧ್ವಾಚಾರ್ಯರಿಗೆ ಕ್ರೈಸ್ತಧರ್ಮದ ಪ್ರಜ್ಞೆ ಸಾಕಷ್ಟು ಇತ್ತೆಂದು ಅವರ ಜೀವನ ಚರಿತ್ರೆಯನ್ನು ಓದಿದವರಿಗೆ ಮನದಟ್ಟಾಗುತ್ತದೆ.[೧೦೦] ಶ್ರೀಪಾದರಾಯರು, ಶ್ರೀ ವ್ಯಾಸರಾಯರು ದಾಸ ಸಾಹಿತ್ಯವನ್ನು ಪುನರುದ್ಧಾರ ಮಾಡಿದರು.

ಕನಕದಾಸರ ಕೀರ್ತನೆಗಳನ್ನು ಯೇಸುಸ್ವಾಮಿಯ ಬೋಧನೆಗಳನ್ನು ಹೋಲಿಸಿ ನೋಡಿದಾಗ ಅನೇಕ ಹೇಳಿಕೆಗಳು ಯೇಸುಸ್ವಾಮಿಯ ಬೋಧನೆಗಳಿಂದ ಆಯ್ದಂತೆ ತೋರುತ್ತವೆ. ಈ ಬಗ್ಗೆ ಫಾದರ್ ಡಾ. ಐ. ಅಂತಪ್ಪನವರು 'ಉತ್ತರ ಕರ್ನಾಟಕದಲ್ಲಿ ಕ್ರೈಸ್ತ ಧರ್ಮದ ಉಗಮ ಎಂಬ ಪುಸ್ತಕದಲ್ಲಿ ಹಲವಾರು ಕನಕನ ಕೀರ್ತನೆಗಳನ್ನು ಕ್ರಿಸ್ತನ ಬೋಧನೆಯೊಂದಿಗೆ ಹೋಲಿಸಿದ್ದಾರೆ. ಈ ಅಧ್ಯಯನದಲ್ಲಿ ನಾನು ಸುಮಾರು ೨೬ ಸಮಾನಾಂತರ ಹೇಳಿಕೆಗಳನ್ನು ಉಲ್ಲೇಖಿಸಿರುತ್ತೇವೆ.

೧. ಕನಕದಾಸ

"ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಕುರಿಯ ಹಿಂಡುಗಳ"[೧೦೧]

ಯೇಸುಕ್ರಿಸ್ತ

"ನಾನೇ ಒಳ್ಳೆ ಕುರುಬ[೧೦೨] (ಯೊವಾನ್ನ ೧೦:೧೧)

ಇಲ್ಲಿ ಭಕ್ತ-ಭಗವಂತ ಸಂಬಂಧವನ್ನು ವೈದಿಕ ಸಂಪ್ರದಾಯದಂತೆ 'ಗೋವು-ಗೋಪಾಲಕ' ರೂಪದಲ್ಲಿ ಹೇಳದೆ, 'ಕುರಿಮಂದೆ-ಕುರಿಗಾಹಿ ಎಂಬ ಬೈಬಲ್ ರೂಪಕದಲ್ಲಿ ಯೇಸುಕ್ರಿಸ್ತ ಹೇಳಿದಂತೆ ಕನಕದಾಸ ಹೇಳಿರುವುದು ತುಸು ಆಶ್ಚರ್ಯವಾಗಿ ಕಾಣುತ್ತದೆ. ಕುರುಬ ಎಂಬ ಪದ ಕೇವಲ ಒಂದು ಜಾತಿಯ ಅರ್ಥ ಮಾತ್ರವಲ್ಲ, ಇಡೀ ಮನುಕುಲದ ಅರ್ಥವನ್ನು ಕನಕದಾಸರು ತುಂಬಿದ್ದಾರೆ. 'ನರಕುರಿಗಳು' ಎಂಬುದಕ್ಕೆ ಈ ಉದಾಹರಣೆಯನ್ನು ಗಮನಿಸುವ. ಯೇಸು ಸತ್ತಾಗ ಭೂಕಂಪವಾಯಿತು.[೧೦೩] ಇದನ್ನು ವರ್ಣಿಸಲೋ ಎಂಬಂತೆ "ಏಕೆ ನಡುಗಿದೆ ತಾಯೇ" ಎಂಬ ಕೀರ್ತನೆಯಲ್ಲಿ ಕನಕದಾಸರು ಅದರಲ್ಲೂ "ನರಕುರಿಗಳೆಲ್ಲರೂ ನಡೆಗೆಟ್ಟರೆಂದು ನಡುಗಿದೆಯ"[೧೦೪] ಎಂಬ ರೂಪಕ ಬಳಸಿದ್ದಾರೆ.

ಯೇಸುಕ್ರಿಸ್ತನ ದಾಟಿಯಲ್ಲೆ ಕನಕದಾಸನು ಉತ್ತಮ ಮೇಷಪಾಲಕ. ಆತನ ಲಕ್ಷಣಗಳು ಆತನ ಸತ್ಕ್ರಿಯೆಗಳನ್ನು ವರ್ಣಿಸಿರುವುದನ್ನು ಕಂಡರೆ ಎಷ್ಟೊಂದು ಸೋಜಿಗವಾಗಿ ಕಾಣಿಸುತ್ತದೆ. ಕ್ರಿಸ್ತ ಇಡೀ ಮನುಕುಲವನ್ನೆ ಕುರಿಗಳ ಹಿಂಡಿಗೆ ಹೋಲಿಸಿ ತಾನು ಅದರ ಉತ್ತಮ ಕುರಿಗಾಹಿಯಾಗಿರುವುದಕ್ಕೆ ದೃಷ್ಟಾಂತಗಳ ಮೂಲಕ ವಿವರಿಸಿದ್ದಾರೆ.

೨. **ಕನಕದಾಸ** — **ಯೇಸುಕ್ರಿಸ್ತ**

ಮೋಕ್ಷಕ್ಕೆ "ನಾನು ಹೋದರೆ ಹೋದೇನು'[೧೦೫]

"Deny your self take up your cross follow me.
ನಿನ್ನನ್ನು ನೀನು ಪರಿತ್ಯಜಿಸಿ ನಿನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನನ್ನು ಹಿಂಬಾಲಿಸು.[೧೦೬]

ಕನಕದಾಸರು ಹೇಳುವ 'ನಾನು'-ಹೋದರೆ ಹೋದೆನು ಮತ್ತು ಕ್ರಿಸ್ತರು ಹೇಳುವ 'ನಿನ್ನನ್ನು'-'ನೀನು' ಪರಿತ್ಯಜಿಸಿದರೆ. ಇವು ಇಷ್ಟೊಂದು ಪರಸ್ಪರ ಹತ್ತಿರವಾಗಿದೆಯಲ್ಲಾ! 'ನಾನು' ಅನ್ನುವುದು ಏನೂ ಇಲ್ಲಾ - ಭಗವಂತನೇ ಎಲ್ಲಾ, ಎಂಬ ಮನೋಭಾವ ಬಂದಾಗ ಮಾತ್ರ ಮೋಕ್ಷ ಸಾದ್ಯ.

ಇದೇ ಅಹಂ ನಿರಸನದ ಮನೋಭಾವದಿಂದ ತಾನೇ ಕನಕದಾಸರು- "ನಾನು ಇಲ್ಲ, ನೀನು ಎಲ್ಲಾ" 'ದೀನ ನಾನು ದಾನಿ ನೀನು', 'ನಾನು ಕೇಳುದಾಸ, ಆಳುದಾಸ, ಮೂಳದಾಸ, ಮರಳುದಾಸ.... ಪರಮ ಪಾಪಿ.... ರಕ್ಷಿಸು ನಮ್ಮನನವರತ[೧೦೭] ಎಂದೆಲ್ಲಾ ಹೇಳಿರುವುದು!

ಎಂತಹ ಅದ್ಭುತವಾದ, ಒಂದನ್ನೊಂದು ಹೋಲುವ ಸಾಮರಸ್ಯದಿಂದ ಕೂಡಿರುವ ಮಾತುಗಳಿವು.

೩. **ಕನಕದಾಸ** — **ಯೇಸುಕ್ರಿಸ್ತ**

"ದಾಸದಾಸರ ಮನೆಯ ದಾಸಿಯರ ಮಗನಾನು[೧೦೮]

"ನಿಮ್ಮಲ್ಲಿ ಮೊದಲಿಗನಾಗಬಯಸುವವನು ಎಲ್ಲರಿಗೂ ಕಡೆಯವನಾಗಿರಲಿ ಎಲ್ಲರ ಸೇವೆ ಮಾಡುವನಾಗಲಿ"[೧೦೯]

ಕ್ರಿಸ್ತ ಮತ್ತು ಕನಕ ಇಬ್ಬರ ಮನೋಭಾವವು ಒಂದೇ ಆಗಿದೆ. 'ನನಗಿಂತ ಕಿರಿಯರಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ' ಎಂಬ ಬಸವಣ್ಣನವರ ಮಾತಿನ ಅಹಂಕಾರರಾಹಿತ್ಯ ವಿನಯ ಶೀಲತೆಯನ್ನು ಕನಕ ಕ್ರಿಸ್ತ ಇಬ್ಬರಲ್ಲೂ ಕಾಣುತ್ತೇವೆ. 'ತನ್ನನ್ನು ತಾನೆ ತಗ್ಗಿಸಿಕೊಳ್ಳುವವನನ್ನು ದೇವರು ಮೇಲಕ್ಕೇರಿಸುವುದು. ಅತ್ಯಲ್ಪನೇ ಅತ್ಯುತ್ತಮನು ಎನ್ನುವ ಯೇಸುವಿನ ಮಾತು ಕನಕನ ಕೀರ್ತನೆಯಲ್ಲಿ ಅಚ್ಚುಕಟ್ಟಾಗಿ ಬಿಂಬಿತವಾಗಿದೆ.

೪. **ಕನಕದಾಸ** — **ಯೇಸುಕ್ರಿಸ್ತ**

ನಮಗೆಲ್ಲಿ ಮನೆಗಳಯ್ಯ ನಾರಾಯಣ[೧೧೦]

ನರಿಗಳಿಗೆ ಗುಹೆಗಳುಂಟು, ಆಕಾಶದ ಪಕ್ಷಿಗಳಿಗೆ ಗೂಡುಗಳುಂಟು, ಆದರೆ ನರಪುತ್ರನಿಗೆ ತಲೆಯಿಡುವುದಕ್ಕೂ ಸ್ಥಳವಿಲ್ಲ[೧೧೧]

ಅಧ್ಯಾತ್ಮಿಕತೆಯನ್ನೆ ಮೈವೆತ್ತವನಿಗೆ ಎಲ್ಲಿಯ ಮನೆ? ಮರ ಆತನ ಮನೋವೃತ್ತಿ - ಅಲ್ಲಿರುವುದು ನಮ್ಮನೆ ಇಲ್ಲಿಗೆ ಬಂದೆವು ಸುಮ್ಮನೆ.....' ಎಂಬಂತೆ ಆಗಿರುತ್ತದೆ. ಮನುಷ್ಯ ತಾನು ಸಮಾಜವನ್ನು ಉದ್ದಾರ ಮಾಡಲು ಹೊರಟಾಗ ತಾನು ಕಂಡ ಸತ್ಯವನ್ನು ತಿಳಿಹೇಳಲು ಹೊರಟಾಗ ಆತನಿಗೆ ಒಂದು ನಿರ್ದಿತವಾದ ಮತ ಮಠಗಳಿಗೆ ಒಳಗಾಗುವುದಿಲ್ಲ. ಬದಲಾಗಿ ಬಯಲೆ ಆಲಯವಾಗಿ ತಾನು ಕಂಡ ಸತ್ಯವನ್ನು ಮಾಳಿಗೆಗಳ ಮೇಲೆ ನಿಂತು ಸಾರುವವನು. ಕ್ರಿಸ್ತ ಕನಕ ಇಬ್ಬರು ಅನುಭಾವಿಗಳು ಘಟದಲ್ಲಿನ ವಾಯು ಆಕಾಶದೊಂದಿಗೆ ಒಂದಾದಾಗ ಅದಕ್ಕೆಲ್ಲಿಯ ಗಡಿ. ಇಲ್ಲಿ ಇಬ್ಬರ ಮನೋಭೂಮಿಕೆಯು ಒಂದೇ ಆಗಿದೆ.

೫. "ಅರಿಗಾರಿಲ್ಲ ಆಪತ್ಕಾಲದೊಳಗೆ ವಾರಿಜಾಕ್ಷನ ನಾಮ ನೆನೆ ಕಂಡ್ಯ ಮನವೆ"[೧೧೨]

"ನಿಮ್ಮ ಹೃದಯದಲ್ಲಿ ಕಳವಳಗೊಳ್ಳದಿರಿ ದೇವರಲ್ಲಿ ವಿಶ್ವಾಸವಿಡಿ"[೧೧೩]

ಆಪತ್ಕಾಲದಲ್ಲಿ ಯಾರಿಗೆ ಯಾರು ಆಗುವುದಿಲ್ಲ- ಭಕ್ತವತ್ಸಲನಾದ ಪರಮಾತ್ಮನೊಬ್ಬನನ್ನು ಬಿಟ್ಟು ಎಂಬ ನಂಬಿಕೆ ಮೂಲದಿಂದ ಈ ಕೀರ್ತನೆ ಮೂಡಿದೆ. ಬದುಕಿನ ಬವಣೆಗಳಿಗೆ, ಜಂಜಾಟಗಳಿಗೆ ಹೆದರಿ ಕಂಗಲಾಗದಿರಿ ದೈವವನ್ನು ನಂಬಿ, ನಂಬಿದ ದೈವ ಯಾವತ್ತು ಕೈ ಬಿಡುವುದಿಲ್ಲ. ಈ ಬದುಕಿನ ಬಂಡಿ ಸುಸೂತ್ರವಾಗಿ ಸಾಗಲು ಅಗತ್ಯವಾಗಿರುವುದು ನಂಬಿಕೆ. ಕ್ರಿಸ್ತ ತನ್ನ ಶಿಷ್ಯರಿಗೆ ವಿಶ್ವಾಸದ ಜೀವನಕ್ಕೆ ಕರೆ ಇಟ್ಟರೆ ಕನಕನು ಸಹಿತ ನಂಬಿಕೆಯ ಮೇಲೆ ಜೀವಿಸಲು ಕರೆ ನೀಡುತ್ತಾನೆ.

೬. "ಮಾಣಿಕ್ಯವು ಕೋಡಗನ ಕೈಯಲ್ಲಿ ಇದ್ದಂತೆ"[೧೧೪]

"ಮುತ್ತುಗಳನ್ನು ಹಂದಿ ಮುಂದೆ ಚಲ್ಲಬೇಡಿ-ಅವು
ಆ ಮುತ್ತುಗಳನ್ನು ಕಾಲಿನಿಂದ ತುಳಿದು ಹಾಕಿಯಾವು"[೧೧೫]

ಶ್ರೇಷ್ಠತೆಯ ಗರ ಬಡಿದು ಕೆಲ ಕರ್ಮಠ ಶಿಷ್ಯರು ಕನಕನನ್ನು ಕೀಳಾಗಿ ಕಂಡಾಗ ಅವನ ಶ್ರೇಷ್ಠತೆಯನ್ನು ಅರಿತ ವ್ಯಾಸರಾಯರು ಕನಕನ ಮಹಿಮೆಯನ್ನು ತಿಳಿಹೇಳಲು ಒಂದು ಪರೀಕ್ಷಾ ಪ್ರಸಂಗ ಒಡ್ಡುತ್ತಾರೆ. ಅದರಲ್ಲಿ ವಿಜಯಶಾಲಿಯಾದ ಕನಕ ಕರ್ಮಠರನ್ನು ಹೀಗೆಳೆಯುತ್ತಾ ಮಾಣಿಕ್ಯದ ಬೆಲೆ ಕೊಡಗನಿಗೇನು ಗೊತ್ತು, ಅದರ ಕೈಯಲ್ಲಿ ಮಾಣಿಕ್ಯ ಇದ್ದರೆ ಹೇಗೊ ಹಾಗೆ ಈ ಅರೆ ಬರೆ ಜ್ಞಾನವಿದ್ದವರ ಬಳಿ. ಹಂದಿಗಳಿಗೇನು ಗೊತ್ತು ಮುತ್ತುಗಳ ಬೆಲೆ? ಅವುಗಳ ಮುಂದೆ ಮುತ್ತುಗಳನ್ನು ಇಟ್ಟರೆ ಅವು ಕಾಲಿನಿಂದ ತುಳಿದು ಹಾಕಿಯಾವು.

ಇಲ್ಲಿ ಕನಕ ಕ್ರಿಸ್ತ ಇಬ್ಬರು ಒಂದೇ ಅಂಶವನ್ನು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಅಧ್ಯಾತ್ಮಿಕತೆಯನ್ನು ಪ್ರಾಪಂಚಿಕ ಮನಸ್ಸಿನವನಿಗೆ ಕೊಟ್ಟರೆ ಏನಾಗುತ್ತದೆ? ಹೇಗಿರುತ್ತದೆ? ಎಂಬುದನ್ನು ಉಪಮೇಯದ ಮೂಲಕ ಸ್ಪಷ್ಟಪಡಿಸುತ್ತಾರೆ.

೭. "ನಂಬಬೇಡ ಸಿರಿಯು ತನ್ನದೆ?"[೧೧೬]

"ದಡ್ಡನಾದ ಸಿರಿವಂತ"[೧೧೭]

ಸಿರಿಯು ಸ್ಥಿರವಲ್ಲ ಎಂಬುದನ್ನು ಕನಕದಾಸರು ಹಲವು ದೃಷ್ಟಾಂತಗಳ ಮೂಲಕ ಕೀರ್ತನೆಯಲ್ಲಿ ಮನಗಾಣಿಸುತ್ತಾರೆ. ಈ ಕೀರ್ತನೆಗೆ ಸಮಾನಾಂತರವಾಗಿ ಸಿರಿವಂತನಾದ ಧನಿಕನ ಕತೆಯನ್ನು ಕ್ರಿಸ್ತನ ಬೋಧನೆಯಲ್ಲಿ ಕಾಣಬಹುದು. ಕತೆಯಲ್ಲಿ ಬರುವ ಧನಿಕ ಕೇವಲ ಸಿರಿಸಂಪತ್ತುಗಳನ್ನು ಸಂಗ್ರಹಿಸುವುದರಲ್ಲೆ ತನ್ನ ಆಯಸ್ಸನ್ನು ಕಳೆಯುತ್ತಿದ್ದ. ತನಗೆ ದೈವ ಈ ಜೀವ ಕೊಟ್ಟಿರುವುದು ಆತನ ಹಾಗೂ ಜನಸೇವೆಗೆ ಎಂಬುದನ್ನು ಮರೆತು, ಎಲೈ ಮನವೆ ಅನೇಕ ವರ್ಷಗಳಿಗೆ ಬೇಕಾದಷ್ಟು ಸರಕು ಬಿದ್ದಿದೆ; ಆರಾಮವಾಗಿರು ತಿನ್ನು, ಕುಡಿ, ಸುಖಪಡು.... ಎಂದುಕೊಳ್ಳುತ್ತಾನೆ. ಆಗ ದೇವರು ಎಲವೋ ಮೂರ್ಖ, ಇದೇ ರಾತ್ರಿ ನೀನು ಸಾಯಬೇಕಾಗಿದೆ. ನಿನಗಾಗಿ ಸಿದ್ಧಮಾಡಿಟ್ಟಿರುವುದೆಲ್ಲ ಯಾರ ಪಾಲಾಗುವುದು.

ಇಲ್ಲಿ ಒಂದು ಅಂಶ ಸ್ಪಷ್ಟವಾಗುತ್ತದೆ. ಮನುಷ್ಯ ಬರೀ ಹಣ, ಸಿರಿ, ಸಂಪತ್ತಿನ ಹಿಂದೆ ಓಡುತ್ತಿದ್ದರೆ ಅವನು ಜೀವನವನ್ನು ಅನುಭವಿಸುವುದು ಯಾವಾಗ. 'ತಾನು ಯಾರು' ಎಂದು ತನ್ನನ್ನೇ ತಾನು ಅರಿತು ತಿಳಿದುಕೊಳ್ಳುವುದೇ ಜೀವನದ ಗುರಿ. ಅದನ್ನು ಬಿಟ್ಟು ಈ ನಶ್ವರವಾದ ಸಿರಿಯ ಹಿಂದೆ ಹೋಗುವುದು

ಎಷ್ಟು ಮೂರ್ಖತನ ಎಂಬುದನ್ನು ಇಬ್ಬರೂ ಖಂಡಿಸುತ್ತಾರೆ. ಯೇಸುಕ್ರಿಸ್ತ ತನ್ನ ಅನುಯಾಯಿಗಳಿಗೆ ನಿಮ್ಮ ಆಸ್ತಿ ಪಾಸ್ತಿಗಳನ್ನು ಮಾರಿ, ದಾನಧರ್ಮ ಮಾಡಿರಿ. ನಶಿಸದ ಸಿರಿಯನ್ನು ಗಳಿಸಿಕೊಳ್ಳಿರಿ. ಲಯವಾಗದ ಸಂಪತ್ತನ್ನು ಸ್ವರ್ಗದಲ್ಲಿ ಶೇಖರಿಸಿಟ್ಟುಕೊಳ್ಳಿರಿ. ಅಲ್ಲಿ ಅದು ಕಳ್ಳನಿಗೆ ದಕ್ಕುವಂತಿಲ್ಲ. ನುಸಿ ಹಿಡಿದು ನಾಶವಾಗುವಂತಿಲ್ಲ. ನಿಮ್ಮ ನಿಧಿ ಎಲ್ಲಿದೆಯೊ ಅಲ್ಲೆ ಇರುವುದು ನಿಮ್ಮ ಹೃದಯ." ಇಲ್ಲಿ ಆಂಗ್ಲ ಭಾಷೆಯ ಹೇಳಿಕೆಯಂತೆ "Money is a good servant and bad Master" ಹೀಗೆ ಕೇವಲ ಸಿರಿಯ ಹಿಂದೆ ಹಣದ ಹಿಂದೆ ಹೊರಟ ಮನುಜನ ಜನ್ಮ ತೃಪ್ತಿಯ, ಅಶಾಂತಿಯ ಜೀವನವನ್ನು, ಬದುಕಿನ ಆನಂದವನ್ನು ಅನುಭವಿಸದೇ ವಿಲಿವಿಲಿ ಒದ್ದಾಡುತ್ತಾನೆ. ಬದಲಾಗಿ ಸಿರಿ ತೊರೆದು ಶ್ರೀ ನೆರೆ ಎಂಬುದು ಇರ್ವರ ಅಭಿಮತ.

೮. "ನಾನು ಕಾಲವ ಕಳೆದೆನಲ್ಲ- ಬಾಲತ್ವದಲ್ಲಿ ಬಲು ಲೀಲೆಯಾದಲಿ ಮೈ ಮರೆತೆನಲ್ಲ"[೧೧೮]

"ದುಂದುಗಾರನ ಮಗನ ಕತೆ[೧೧೯]

ಯೌವ್ವನದ ಮದದಲ್ಲಿ ಮನುಷ್ಯ ಬೀಗರಂತೆ ಉಂಡು ತಿಂದು ಸುತ್ತಮುತ್ತ ತಿರುಗುತ್ತಾ ಮಜಾದಲ್ಲೆ ಕಾಲ ಕಳೆದು ಆಮೇಲೆ ಅರಿವಾಗಿ ವ್ಯಥೆಪಡುತ್ತಾನೆ. ಯೌವ್ವನದ ಮದದಲ್ಲಿ ಮತಿಹೀನನಾಗಿ ಐಹಿಕ ಲೋಕದತ್ತ ಮುಖ ಮಾಡಿ ಪಾರಮಾರ್ಥಿಕ ಲೋಕದತ್ತ ಬೆನ್ನು ತಿರುಗಿಸಿದ ಬಗ್ಗೆ ಕನಕರಲ್ಲಿ ಪಶ್ಚಾತ್ತಾಪವಿದೆ. ಇದೇ ಇಂದಿನ ಲೋಕರೂಢಿಯಾಗಿದೆ. ಈ ಕೀರ್ತನೆಗೆ ಪೂರಕವಾಗಿ ಯೇಸುಸ್ವಾಮಿಯ ದುಂದುಗಾರ ಮಗನ ಕತೆ ಬೈಬಲ್‌ನಲ್ಲಿದೆ.

ದೇವರಿಗೂ ತಂದೆಗೂ ವಿರುದ್ಧವಾಗಿ ನಡೆದು ತನ್ನ ಯೌವ್ವನವನ್ನು ಸಿರಿಸಂಪತ್ತನ್ನೆಲ್ಲಾ ಹಾಳುಮಾಡಿ ಕೊನೆಗೆ ಪಶ್ಚಾತ್ತಾಪ ಹೊಂದಿ ಪುನಃ ತನ್ನ ತಂದೆ ಮನೆಗೆ ಹಿಂತಿರುಗುವ ಚಿತ್ರಣ ಎಲ್ಲರ ಮನಮುಟ್ಟುವಂತಿದೆ. ತಪ್ಪು ಮಾಡುವುದು ಮನುಷ್ಯನ ಸಹಜ ಗುಣ - ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟು ತಿದ್ದಿ ಬಾಳುವುದು ಮಾನವ ಜೀವನದ ಶ್ರೇಷ್ಠತೆ, ಇದನ್ನೇ ಇಬ್ಬರೂ ಹೇಳಿದ್ದಾರೆ.

೯. "ನೆಚ್ಚದಿರು ಸಂಸಾರ ನೆಲೆಯಲ್ಲವೀ ಕಾಯ ಅಚ್ಚುತನ ನಾಮವನು"[೧೨೦] **"ಸ್ನಾನಿಕ ಯೊವಾನ್ನನ ಬೋಧನೆ"[೧೨೧]**

ಬಾಳು ಅನಿತ್ಯವಾದುದರಿಂದ ಸನ್ಮಾರ್ಗದಲ್ಲಿ ನೆಡೆದು ಸರ್ವೋತ್ತಮನ ಕೃಪೆಗೆ ಪಾತ್ರವಾಗುವುದು ಒಳ್ಳೆಯದು. ರಾಜ್ಯದಾಹ, ದ್ರವ್ಯದಾಹ ಮುಂತಾದವುಗಳಲ್ಲಿ ಮುಳುಗಿ ಹೋಗುವ ವ್ಯಕ್ತಿ ದುರಂತದಲ್ಲಿ ಪರ್ಯಾವಸಾನ ಹೊಂದುತ್ತಾನೆ. ಯೇಸುಕ್ರಿಸ್ತನ ಮುಂದೂತನಾಗಿ ಬಂದ ಸ್ನಾನಿಕ ಯೊವಾನು ಜನರಿಗೆ ಬದುಕುವ ಪರಿಯನ್ನು ಹೇಳಿಕೊಟ್ಟನು. ಪಾಪ ಜೀವನಕ್ಕೆ ವಿಮುಖರಾಗಿ ದೇವರಿಗೆ ಅಭಿಮುಖರಾಗಿರಿ ಎಂದು ಕರೆಕೊಟ್ಟನು. ಸನ್ಮಾರ್ಗದಲ್ಲಿ ಬಾಳಿ ಸರ್ವೋತ್ತಮನ ಅನುಗ್ರಹಕ್ಕೆ ಪಾತ್ರರಾಗುವಿರಿ ಎಂಬ ಭರವಸೆ ನೀಡುತ್ತಾನೆ.

೧೦. "ತಾಯಿ ಯಾರೊ ತಂದೆ ಯಾರೊ ಮಡದಿ ಯಾರೊ ಮಕ್ಕಳ್ಯಾರೊ"[೧೨೨] **"ನನ್ನ ತಾಯಿ ಯಾರು? ಸಹೋದರರು ಯಾರು?"[೧೨೩]**

ಸನ್ಯಾಸ/ದಾಸ ದೀಕ್ಷೆ ಹೊಂದಿದವನು ಕೇವಲ ಶುಷ್ಕ ಆಚಾರ-ವಿಚಾರಗಳಲ್ಲಿ ಕಾಲ ಕಳೆಯದೆ

ಅಂತರಂಗದಲ್ಲಿರುವ ಚಿನ್ಮಯನನ್ನು ಕಾಣಲು ಯತ್ನಿಸಿ ಸತ್ಯ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಬೂಟಾಟಿಕೆಯ ದಾಸರೇ ಅಧಿಕವಾಗಿ ಕಣ್ಣಿಗೆ ಬೀಳುತ್ತಿದ್ದುದರಿಂದ ಅಂಥವರಿಗೆ ಕನಕದಾಸರು ಬೂಟಾಟಿಕೆಯ ಮತ ಬಿಟ್ಟು ನಾದ ಬ್ರಹ್ಮನ ಹಿಡಿದು ಮುಕ್ತಿಯನ್ನು ಸಾಧಿಸಿ, ಈ ಲೋಕದಲ್ಲಿ ಕೇವಲ ಭ್ರಮೆಗೆ ಒಳಗಾಗಿ ದೈಹಿಕ ರೂಪ ಕೊಟ್ಟು ತಂದೆ ತಾಯಿಗಳಿಗೆ, ಪತ್ನಿ ಪುತ್ರರಿಗೆ ಅಂಟಿಕೊಳ್ಳದೆ ಚಿನ್ಮಯಾನಂದನನ್ನು ಕಂಡು, ಭಗವತ್ ಸ್ವರೂಪಿಗಳಾಗಿ. ದೈಹಿಕ ಭ್ರಮೆಯನ್ನು ಬಿಟ್ಟು ಭಗವಂತನನ್ನು ಹಿಡಿಯಿರಿ. ಆತನೇ ತಂದೆ, ಆತನೇ ತಾಯಿ, ಆತನೇ ಬಂಧು, ಆತನೇ ಬಳಗ. ಆತನಿನಲ್ಲದೆ ಏನೂ ಇಲ್ಲ. ಆತನಿಲ್ಲದೆ ನಾವು ಏನೂ ಅಲ್ಲಾ ಎಂಬುದು ಇಬ್ಬರ ಅಭಿಮತ.

೧೧. "ಅರಿತು ಭಜಿಪರ್ಯ್ಯಾರಯ್ಯ"[೧೨೪] "ಸ್ವರ್ಗ ಸಾಮ್ರಾಜ್ಯವು ನಿಮ್ಮೊಳಗೆ ಇದೆ"[೧೨೫]

ಪ್ರತಿಯೊಬ್ಬರ ಅಂತರಾತ್ಮನಾಗಿ ಅಡಗಿರುವ ಭಗವಂತನನ್ನು ಜ್ಞಾನಿಗಳು ಮಾತ್ರ ಕಾಣುವರು ಅಜ್ಞಾನಿಗಳಲ್ಲ. ಕಸ್ತೂರಿ ಮೃಗಕ್ಕೆ ಕಸ್ತೂರಿಯ ವಾಸನೆಯ ಅರಿವು ಇರಲಾರದು. ಜಲದ ಸುಗಂಧವ ಜಲವರಿಯದು ಎಂಬ ಮಾತು ನಮ್ಮೊಳಗೆ ಇರುವ ದೇವರನ್ನು ನಾವು ಕಾಣಲಾರದ ಅಜ್ಞಾನದ ಅತಂತ್ರದ ಸ್ಥಿತಿಯಲ್ಲಿದ್ದೇವೆ. ಇಂದಿನ ಮಾನವ ಬಾಹ್ಯಕಾಶಕ್ಕೆ ಲಗ್ಗೆ ಹಾಕುತ್ತಾನೆ. ಸಾಗರದ ಆಳಕ್ಕೆ ದುಮುಕುತ್ತಾನೆ ಆದರೆ ತನ್ನ ಅಂತರಂಗವ ತಾನು ನೋಡಿಕೊಳ್ಳಲಾರ. ಅರಿತು ಭಗವಂತನ ಭಜಿಸಲಾರ. ಅದಕ್ಕೆ ಯೇಸುಸ್ವಾಮಿ ಸ್ವರ್ಗ ಸಾಮ್ರಾಜ್ಯ ನಿಮ್ಮೊಳಗೆ ಇದೆ. ಅದನ್ನು ನೀವೆ ಕಂಡುಕೊಳ್ಳಬೇಕು.

೧೨. "ಏನಿದೆತ್ತಣ ಬಯಕೆ ಎಲೋ ಮಂಕುಜೀವ"[೧೨೬] "ಲೋಕದಲ್ಲಿ ಬಹಳ ಕಷ್ಟಗಳು ದೈರ್ಯವಾಗಿರಿ"[೧೨೭]

ಮಾನವ ಜೀವಿಗೆ ಈ ಲೋಕದಲ್ಲಿ ಅದರಲ್ಲೂ ಆದ್ಯಾತ್ಮಿಕ ಸಾಧನೆಗೆ ಅಡಚಣೆಗಳು ಅಡ್ಡಿ ಆತಂಕಗಳು ಹಲವಾರು. ಸಾಗರದಲ್ಲಿ ಬೃಹತ್ ಅಲೆಗಳಿಗೆ ಹೇಗೆ ಹಡಗಿನ ನಾವಿಕ ಅಂಜದೆ ಹಡಗನ್ನು ನೆಡೆಸುತ್ತಾನೋ ಹಾಗೆಯೇ ಆಧ್ಯಾತ್ಮಿಕ ಲೋಕದಲ್ಲಿ ಸಾಧಕನಿಗೆ ಅರ್ಭಟಿಸುವ ಅಡೆ-ತಡೆಗಳು ಹಲವಾರು. ಎಲ್ಲವನ್ನು ದಾಟದ ಹೊರತು ಅವನಿಗೆ ಸಿದ್ದಿ ಎನ್ನುವುದು ದುರ್ಲಭ There is no easter sunday without good friday ಎಂಬ ಮಾತಿಗೆ ಅನುಗುಣವಾಗಿ ಜೀವನದ ಎಲ್ಲ ಕಷ್ಟ ಕಾರ್ಪಣ್ಯಗಳಿಗೆ ರಾಮಬಾಣವೆಂದರೆ ನಿರಂತರ ಭಗವಂತನ ನಾಮ ಸ್ಮರಣೆ. ಇದನ್ನೇ ಇಬ್ಬರು ರಸವತ್ತಾಗಿ ವರ್ಣಿಸಿದ್ದಾರೆ.

೧೩. "ಪಂಥ ನಡೆಯದಯ್ಯ ಪರಲೋಕ ಸಾಧನಕೆ ಮನ್ಮಥನೆಂಬ ಖಳನು ಮಾರ್ಗವ"[೧೨೮] "ಕಾಮುಕತನಕ್ಕೆ ಕೊಡಲಿ ಪೆಟ್ಟು"[೧೨೯]

ಕಾಮ ಬಾಧೆಯಿಂದ ತಪ್ಪಿಸಿಕೊಂಡು ರಾಮನ ಪಥದಲ್ಲಿ ಹೆಜ್ಜೆ ಹಾಕಿದರೆ ಮಾತ್ರ ಸಾಧನೆ. ಇಲ್ಲದಿದ್ದರೆ ಈ ಜೀವನವೆಲ್ಲಾ ವೇದನೆ. ಮನ್ಮಥನ ಉಪಟಳ ಸಾಧಕರನಲ್ಲಿ ಹೆಚ್ಚಾಗಿರುತ್ತದೆ. ಪಾರಮಾರ್ಥಿಕ ಪಥದಲ್ಲಿ ಹೆಜ್ಜೆ ಹಾಕಬೇಕಾದರೆ ಭಗವಂತನ ನೆರವು ಅಗತ್ಯ. ಜೊತೆಗೆ ಕಾಮುಕತನ ಮನುಷ್ಯನನ್ನು ಹೇಗೆಲ್ಲಾ ಆಡಿಸುತ್ತದೆ, ಏನೆಲ್ಲಾ ಮಾಡುತ್ತದೆ ಎಂಬುದನ್ನು ಕನಕದಾಸರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ ಅದನ್ನು ಗೆಲ್ಲಬೇಕಾದರೆ ಭಗವತ್ ನಾಮಸ್ಮರಣೆಯ ಮಾರ್ಗ ಎಂದಿದ್ದಾರೆ. ಯೇಸುಕ್ರಿಸ್ತ ಪರಸ್ತ್ರೀಯನ್ನು ಕಾಮದೃಷ್ಟಿಯಿಂದ ನೋಡುವ ಪ್ರತಿಯೊಬ್ಬನೂ ತನ್ನ ಹೃದಯದಲ್ಲಿ ಆಕೆಯೊಡನೆ ಆಗಲೇ ವ್ಯಭಿಚಾರ ಮಾಡಿದವನಾಗುತ್ತಾನೆ- ಅನ್ನುತ್ತಾನೆ. ನಿನ್ನ ಬಲಗಣ್ಣ ನಿನಗೆ ಪಾಪಕ್ಕೆ ಕಾರಣವಾದರೆ ಅದನ್ನು ಕಿತ್ತೆಸೆದು ಬಿಡು; ನಿನ್ನ ಇಡೀ ದೇಹ ನರಕಕ್ಕೆ ತುತ್ತಾಗುವುದಕ್ಕಿಂತ ನಿನ್ನ ಒಂದು ಅಂಗ ನಾಶವಾಗುವುದೇ ಲೇಸು. ಈ

ಮಾತುಗಳ ಮೂಲಕ ಯೇಸುಸ್ವಾಮಿ ಕಾಮುಕತನಕ್ಕೆ ಕೊಡಲಿ ಪೆಟ್ಟು ನೀಡಿ ಅದನ್ನು ನಿಗ್ರಹಿಸಿ ಭಗವಂತನನ್ನು ಮುಟ್ಟುವ ಬಗೆಯನ್ನು ತಿಳಿಸುತ್ತಾನೆ.

ಇಬ್ಬರು ಮಹನೀಯರೂ ಸಾಧಕನಿಗೆ ಮಾರ್ಗದಲ್ಲಿ ಬಂದೊದಗುವ ಕಷ್ಟವನ್ನು ಗುರುತಿಸಿ ಅದನ್ನು ಗೆದ್ದು ಪಾರಮಾರ್ಥಿಕ ಪಥದಲ್ಲಿ ಹೆಜ್ಜೆ ಇರಿಸುವ ಮಾರ್ಗವನ್ನು ತೋರಿಸುತ್ತಾರೆ.

೧೪. "ತಲ್ಲಣಿಸದಿರು ಕಂಡ್ಯ ತಾಳು ಮನವೆ"[೧೩೦] "ನಿಮ್ಮ ಹೃದಯಗಳು ಕಳವಳಗೊಳ್ಳದಿರಲಿ"[೧೩೧]

ಕನಕದಾಸರ ಸ್ವಾನುಭವದ ಹೃದಯಾಂತರಾಳದಿಂದ ಹೊರಹೊಮ್ಮಿದ ದರ್ಶನದ ಅಣಿಮುತ್ತು. ಹೇ ಮನುಜ ನೀನೇಕೆ ತಲ್ಲಣಿಸುವೆ, ಕಳವಳಗೊಳ್ಳುವೆ. ತಹತಹಿಸದಿರು, ಇಡೀ ಪ್ರಕೃತಿಯನ್ನು ಪ್ರಾಣಿ ಪಕ್ಷಿಗಳನ್ನು ದೈವವು ತನ್ನ ತಾಯಿತನದಿಂದ ಸಲಹುತ್ತಿದೆ. ಇದಕ್ಕೆ ಸಂಶಯ ಬೇಡ. ಜೀವನದ ವಿಧ ವಿಧ ಮಜಲುಗಳಲ್ಲಿ ಸಿಲುಕಿ ಸಂದೇಹ, ಅನುಮಾನ, ತಲ್ಲಣಕ್ಕೆ ಒಳಗಾಗುವ ಮನುಷ್ಯನಿಗೆ ಕ್ರಿಸ್ತನ ಮನದಾಳದ ಸಾಂತ್ವನದ ನುಡಿಗಳು 'ನಿಮ್ಮ ಹೃದಯ ಕಳವಳಗೊಳ್ಳದಿರಲಿ'. ಒಂದು ವಿಧದಲ್ಲಿ ಇಬ್ಬರೂ ಅಭಯದ ಸಂದೇಶವನ್ನು ನೀಡಿದರೆ, ಇನ್ನೊಂದು ಸ್ತರದಲ್ಲಿ ಇಬ್ಬರ ಸ್ಥಿತಪ್ರಜ್ಞೆಯನ್ನು ಕಾಣಬಹುದು. ಆಧುನಿಕ ಮಾನವನಿಗೆ ಹೇ ಮನುಜ ನೀನೇಕೆ ಕಳವಳಗೊಂಡಿರುವೆ? ನೀ ಏಕೆ ತಲ್ಲಣಿಸುತ್ತಿರುವೆ? ವಿಶ್ವಾಸಿಸು. ಪರವಸ್ತು' ಎಲ್ಲರನು ಸಲಹನು ಇದಕ್ಕೆ ಸಂಶಯ ಬೇಡ ಎಂಬ ಸಂದೇಶ ಇಬ್ಬರಿಂದಲೂ ಬರುತ್ತಿರುವಂತೆ ಕಾಣುತ್ತದೆ. ಅನುಭಾವಿಗಳು ಕಾಲ, ದೇಶ ಮೀರಿ ಸದಾಕಾಲ ಎಲ್ಲಾ ಸಮಾಜಕ್ಕೂ ಪ್ರಸ್ತುತರಾಗುತ್ತಾರೆ.

೧೫. "ನಾರಾಯಣ ಎಂಬ ನಾಮದ ಬೀಜವನು ನಾಲಗೆಯ ಕೂರಿಗೆಯ ಮಾಡಿ ಬಿತ್ತಿರಯ್ಯ"[೧೩೧] "ಬಿತ್ತುವವನ ಸುಮತಿ"[೧೩೩]

ಯೇಸುಸ್ವಾಮಿ ಬಿತ್ತುವವನ ಸಾಮತಿಯಾಗಲಿ, ಕನಕದಾಸರ ನಾರಾಯಣ ಎಂಬ ನಾಮದ ಬೀಜದ ಕೀರ್ತನೆಯಾಗಲಿ ಒಂದು ಅಂಶವನ್ನು ಮನದಟ್ಟು ಮಾಡಿಕೊಡುತ್ತದೆ. ಹೃದಯವೆಂಬ ಹೊಲದಲ್ಲಿ ಭಗವಂತ ಎಂಬ ಬೀಜ ಬಿತ್ತಿ ದೈವಭಕ್ತಿಯ ಫಸಲು ತೆಗೆದು ಸಂತೃಪ್ತ ಜೀವನ ಸಾಗಿಸಿ ಎನ್ನುವ ಅಂಶ ಮನದಟ್ಟಾಗುತ್ತದೆ.

ಕೇವಲ ಪಂಡಿತರಿಗೆ ವಿದ್ವತ್ ಜನರಿಗೆ ಸಾಹಿತ್ಯ ಮುಟ್ಟಿದರೆ ಸಾಲದು, ಸಮಾಜದ ಅತ್ಯಂತ ತಳಸಮುದಾಯದವರಿಗೂ ಮುಟ್ಟ ಬೇಕು. ಬೇರು ನೀರುಂಡಾಗ ಮಾತ್ರ ಮರವು ಚಿಗುರು ಹೂವು ಕಾಯಿ ಹಣ್ಣುಗಳಿಂದ ತುಂಬಿ ಸಮೃದ್ಧಗೊಳ್ಳುವುದು.

ಜನ ಸಾಮಾನ್ಯರನ್ನು ಮನದಲಿಟ್ಟುಕೊಂಡು ಸಾಮಾನ್ಯ ರೈತಾಪಿ ವರ್ಗದವರು ಸಹ ಪಾರಮಾರ್ಥಿಕ ಜ್ಞಾನವನ್ನು ಅರ್ಥ ಮಾಡಿಕೊಳ್ಳುವಂತೆ, ಅವರದೇ ಆದ ಪದಗಳನ್ನು ಉಪಯೋಗಿಸಿ ಸರಳವಾಗಿ ಜೋಡಿಸಿದ್ದಾರೆ.

ಇದು ಕೇವಲ ಆಧ್ಯಾತ್ಮಿಕ ಅನುಭಾವಿಗಳು ಮಾತ್ರ ಕ್ಲಿಷ್ಟವಾದ ಸಂಗತಿಗಳನ್ನು ಸರಳವಾಗಿ ಹೇಳಲು ಸಾಧ್ಯ. ತಾವು ಅನುಭವಿಸಿದ ಸತ್ಯವನ್ನು ಇತರರಿಗೆ ಸರಳವಾಗಿ ತಿಳಿ ಹೇಳುತ್ತಾರೆ. ಅನುಭಾವವಾಗಲಿ ಅನುಭವವಾಗಲಿ ಇಲ್ಲದೆ ಇರುವ ವ್ಯಕ್ತಿ ಕೇವಲ ಶುಷ್ಕ ಪಾಂಡಿತ್ಯದಲ್ಲಿ, ಶುಷ್ಕಾಚರಣೆಯಲ್ಲಿ ತಲ್ಲೀನನಾಗುತ್ತಾನೆ.

ಭಗವಂತನತ್ತ ಪಾಮರರನ್ನು ಪಾವನಗೊಳಿಸಲು ಆಯ್ದುಕೊಂಡ ಸಾಮನ್ಯ ರೈತಾಪಿ ವರ್ಗದ ಪದ ಪುಂಜಗಳೆ ಇಬ್ಬರ ಸರಳತೆ ಹಾಗೂ ಸ್ಪಷ್ಟತೆಗೆ ಸಾಕ್ಷಿಯಾಗಿವೆ.

೧೬. "ಏನು ಬರುದೋ ಸಂಗಡೇನು ಬರುವುದೋ"[೧೩೪] "ಅಳಿಯದ ಆಸ್ತಿ"[೧೩೫]

ಕನಕದಾಸರು ಹಾಗು ಯೇಸುಕ್ರಿಸ್ತ ಇಬ್ಬರೂ ಕಂಡು ಕೊಂಡ ಜೀವನ ಸತ್ಯ. ಮನುಷ್ಯ ಸಂಪಾದಿಸಿದ ಯಾವ ವಸ್ತುವೂ ತನ್ನೊಡನೆ ಬರುವುದಿಲ್ಲ - ಕೀರ್ತಿ ಅಪಕೀರ್ತಿಗಳವಿನಾ. ಆದ್ದರಿಂದ ಇರುವಷ್ಟು ಕಾಲ ಪರಹಿತದಲ್ಲಿ ಪರಸೇವೆಯಲ್ಲಿ ಪರಮಾತ್ಮನನ್ನು ಕಾಣುವ ಜ್ಞಾನಿಯಾಗೆಂದು ಕನಕದಾಸರು ಕೀರ್ತನೆಯಲ್ಲಿ ಉಪದೇಶಿಸಿದರೆ - ಇಹಲೋಕದಲ್ಲಿ ಆಸ್ತಿ ಪಾಸ್ತಿ ಶೇಖರಿಸಬೇಡಿ. ಇಲ್ಲಿ ತುಕ್ಕು ಹಿಡಿದೀತು, ನುಸಿಹೊಡೆದೀತು. ಕಳ್ಳರು ಕನ್ನ ಕೊರೆದು ಕದ್ದಾರು - ನಿಮ್ಮ ಆಸ್ತಿಯನ್ನು ಸ್ವರ್ಗದಲ್ಲಿ ಕೂಡಿಸಿಡಿ. ಅಲ್ಲಿ ತುಕ್ಕು ಹಿಡಿಯದು, ನುಸಿಹೊಡೆಯದು, ಕಳ್ಳರು ಕನ್ನ ಕೊರೆದು ಕದಿಯರು. ಪ್ರಾಣಾಧಾರಣೆಗೆ ಏನು ಉಣ್ಣುವುದು ಏನು ಕುಡಿಯುವುದು ಎಂದು ಚಿಂತೆ ಮಾಡಬೇಡಿ - ಊಟಕ್ಕಿಂತ ಪ್ರಾಣ, ಉಡುಪಿಗಿಂತ ದೇಹ ಮೇಲಾದುದಲ್ಲವೆ? ಮೊದಲು ದೇವರ ಸಾಮ್ರಾಜ್ಯಕ್ಕಾಗಿ, ಅದರ ಸತ್ಯ ಬಂಧಕ್ಕಾಗಿ ತವಕ ಪಡಿ ಎಂದು ಯೇಸು ತಮ್ಮ ಶಿಷ್ಯರಿಗೆ ಉಪದೇಶಿಸುತ್ತಾರೆ.

ಹೇ ಹುಲು ಮಾನವ ನಿನ್ನ ಸಂಗಡ ನೀ ಸತ್ತಾಗ ಏನು ಬರುವುದಿಲ್ಲ. ಕೇವಲ ಶರೀರವೇ ದೇವರೆಂದು ವರ್ತಿಸದೆ, ಶರೀರದಲ್ಲಿರುವ ಅಂತರಾತ್ಮನ ಕಾಣು. ಮೇಲ್ಮನೆಯಲ್ಲಿರುವ ಚಿನ್ಮಯನನ್ನು ಧ್ಯಾನಿಸಿ ನಿನ್ನ ಸಂಗಡ ಕೊಂಡೊಯ್ಯೊ ಎಂಬುದಾಗಿ ಸ್ವಾಮಿ ಯೇಸು ಕರೆ ನೀಡುತ್ತಾರೆ. ಈ ಇಬ್ಬರ ಗಮ್ಯ ಒಂದೇ ಆಗಿದೆ.

೧೭. "ಎಳ್ಳು ಕಾಳಿನಷ್ಟು ಭಕ್ತಿ ಎನ್ನೊಳಗಿಲ್ಲ"[೧೩೬] "ನಿಮಗೆ ಸಾಸಿವೆ ಕಾಳಿನಷ್ಟು ವಿಶ್ವಾಸವಾದರೂ ಇದ್ದಲ್ಲಿ"[೧೩೭]

ಕೇವಲ ಬಾಹ್ಯ ಆಚಾರ ವಿಚಾರಗಳನ್ನು, ಡಾಂಭಿಕ ಭಕ್ತಿಯನ್ನು ಯಾಂತ್ರಿಕವಾದ ಆಚರಣೆಯನ್ನು ಕಂಡ ಕನಕದಾಸರು ಬೇಸತ್ತು, ನಿಷ್ಫಲ ಸಮರ್ಪಣ ರೂಪದ ಭಕ್ತಿಯ ಮಾಂತ್ರಿಕ ಶಕ್ತಿಯನ್ನು ಈ ಕೀರ್ತನೆಯಲ್ಲಿ ತೋರಿಸಿದ್ದಾರೆ. ಗುಂಡು ಮುಳುಗನ ಹಕ್ಕಿ, ಗಾಣದೆತ್ತು, ಮಂಡೂಕಗಳ ರೂಪಕದಲ್ಲಿ ಶುಷ್ಕ ಆಚಾರಗಳು ಹೇಗೆ ನಿಷ್ಪ್ರಯೋಜಕ ಮುಷ್ಟಿ ಗ್ರಾಹ್ಯ ಮಾಡಿದ್ದಾರೆ. ಕೇವಲ ಬೋಧನೆಯಿಂದ ತಲೆ ಬೆಳೆಸಿದರೆ ಸಿಗುವುದೇನು. ಆತ್ಮ ಸಾಧನೆಯಿಂದ ತಲೆ ಬೆಳೆಸಿದರೆ ಮಾತ್ರ ನಮಗೆ ಅರಿವಾಗುತ್ತದೆ ಪರಮಾತ್ಮ. ಇದಕ್ಕೆ ಬೇಕಾಗುವುದು ನಿಷ್ಕಲ್ಮಷವಾದ ಭಕ್ತಿ. 'ಬುರು ಶಟಗನ ಭಕ್ತಿ ದಿಟವೆಂದು ನಂಬಬೇಡ. ಮರದೊಳಗಿನ ಬೆಕ್ಕು ಇಲಿ ಕಂಡು ಪುಟ ನೆಗೆದಂತಾಯಿತು' ಎಂಬುದಾಗಿ ವಚನಕಾರರು ಕಪಟ ಭಕ್ತಿಯನ್ನು ಹೀ ಗಳೆದಿದ್ದಾರೆ. ಇದೇ ನಿಟ್ಟಿನಲ್ಲಿ ಯೇಸುಸ್ವಾಮಿ ಸಹ ಭಕ್ತಿ ವಿಶ್ವಾಸ ಜ್ಞಾನ ಮೂರೂ ಒಂದಕೊಂದು ಹೊಂದಿಕೊಂಡಿರಬೇಕು. ಇಲ್ಲದಿದ್ದರೆ ಅದು ಮೂಡ ಭಕ್ತಿಯಾಗುವುದು. ನಾವು ಭಕ್ತಿ ಮಾಡುವ ವಸ್ತುವಿನ ತಿಳುವಳಿಕೆಯೆ ನಮಗಿಲ್ಲದಿದ್ದರೆ ಅದು ಮೂಡ ಭಕ್ತಿಯಾಗುವುದು. ಜ್ಞಾನ ಪೂರ್ವಕವಾದ ಸದೃಡ ಸ್ನೇಹವೆ ಭಕ್ತಿ. ಇಂತಹ ವಿಶ್ವಾಸದಿಂದ ಅಂದರೆ ಸಾಸಿವೆ ಕಾಳಿನಷ್ಟು ವಿಶ್ವಾಸವಾದರೂ ಇದ್ದಲ್ಲಿ ಈ ಬೆಟ್ಟಕ್ಕೆ ಇಲ್ಲಿಂದ ಆ ಸ್ಥಳಕ್ಕೆ ಹೋಗು ಎಂದು ಹೇಳಿದರೆ ಹೋಗುತ್ತದೆ. ಮುಖ್ಯವಾಗಿ ಬೇಕಾಗಿರುವುದು ಭಕ್ತಿ-ವಿಶ್ವಾಸ. ಇಬ್ಬರೂ ಮಹಾತ್ಮರು ಒಂದೇ ತೆರನಾಗಿ ಭಕ್ತಿ-ವಿಶ್ವಾಸದ ಅಗತ್ಯತೆಯನ್ನು ಸಾರುತ್ತಾರೆ.

೧೮. "ಈ ಸಿರಿಯ ನಂಬಿ ಹಿಗ್ಗಲು ಬೇಡ"[೧೩೮] "ಒಬ್ಬನಿಗೆ ಎಷ್ಟೇ ಸಿರಿಸಂಪತ್ತಿರಲಿ ಅವನ ನಿಜವಾದ ಜೀವನ ಅದನ್ನು ಅವಲಂಬಿಸಿಲ್ಲ"[೧೩೯]

ಸಂಪತ್ತು ಅತಿಯಾಗಿ ಒಬ್ಬ ವ್ಯಕ್ತಿಯ ಬಳಿ ಇದ್ದರೆ ಅದು ಅತಿ ಮಮಕಾರದ ಲಕ್ಷಣ. ಉಳ್ಳವರು ಇಲ್ಲದವರಿಗೆ ಹಂಚಿದಾಗ ಸಿಗುವ ಸುಖಕ್ಕೆ ಸಮನಾದ ಸುಖ ಸಿರಿಯ ಶೇಖರಣೆಯಿಂದ ಬರುವುದಿಲ್ಲ. ಎಂಬುದು ದಾಸರ ನಿಲುವು. ಸಂಪತ್ತನ್ನು ಬಡವರಿಗೆ ದಾನ ಮಾಡಿದರೆ ಅದರಿಂದ ಬರುವ ಪುಣ್ಯ ಫಲ ಅಪಾರ.

ಯೇಸು ಸ್ವಾಮಿಯು ಸಹ ಎಚ್ಚರಿಸುತ್ತಾರೆ - ಯಾವ ವಿಧವಾದ ಲೋಭಕ್ಕೂ ಒಳಗಾಗದಂತೆ ಜಾಗರೂಕರಾಗಿರಿ. ಏಕೆಂದರೆ ಒಬ್ಬನಿಗೆ ಎಷ್ಟೇ ಸಿರಿ ಸಂಪತ್ತಿರಲಿ, ಅವನ ನಿಜವಾದ ಜೀವನ ಅದನ್ನು ಅವಲಂಬಿಸಿಲ್ಲ. ನಿಮ್ಮ ಆಸ್ತಿ ಪಾಸ್ತಿಗಳನ್ನು ಮಾರಿ ದಾನ ಧರ್ಮ ಮಾಡಿರಿ. ಎಂಬುದಾಗಿ ಯೇಸು ಸ್ವಾಮಿ ದಾನ ಧರ್ಮದ ಬಗ್ಗೆ ಹೇಳುತ್ತಾರೆ.

ಒಮ್ಮೆ ಶ್ರೀಮಂತ ಯುವಕ 'ತಾನು ಸ್ವರ್ಗ ಸಾಮ್ರಾಜ್ಯ ಪ್ರವೇಸಿಸಲು ಏನು ಮಾಡಬೇಕು' ಎಂದು ಯೇಸುವನ್ನು ಕೇಳಿದಾಗ 'ದೈವಾಜ್ಞೆಗಳನ್ನು ಕೈಗೊಂಡು ನಡೆ ' ಜೊತೆಗೆ ನೀನು ಮಾಡಬೇಕಾದ ಕಾರ್ಯ ಇನ್ನು ಒಂದು ಉಳಿದಿದೆ, ನಿನ್ನ ಆಸ್ತಿ ಪಾಸ್ತಿಯನ್ನೆಲ್ಲಾ ಮಾರಿ ಬಡಬಗ್ಗರಿಗೆ ದಾನ ಮಾಡು, ಸ್ವರ್ಗದಲ್ಲಿ ನಿನಗೆ ಸಂಪತ್ತು ಇರುತ್ತದೆ. ಈ ಮಾತನ್ನು ಕೇಳಿ ಆ ಯುವಕನಿಗೆ ವ್ಯಥೆಯಾಯಿತು. ಏಕೆಂದರೆ, ಅವನು ಬಹಳ ಸಿರಿವಂತನಾಗಿದ್ದನು.

ಕೇವಲ ಸಿರಿವಂತಿಕೆಯ ನಂಬಿ ಹಿಗ್ಗದೆ ಭಗವಂತನನ್ನು ಭಜಿಸಿ ಬಾಳು. ಜೊತೆಗೆ ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು. ನನಗೆ ಸಿರಿ ಸಂಪತ್ತು ಬಂದರೆ ಅದನ್ನ ಇತರರ ಒಳಿತಿಗೆ ಬಡವರ ಉದ್ದಾರಕ್ಕೆ ಬಳಸು ಎಂಬ ಒಂದೆ ಅರ್ಥದಲ್ಲಿ ಮಾತನಾಡುತ್ತಾರೆ. ಸಾಮಾಜಿಕ ನ್ಯಾಯದ ಇನ್ನೊಂದು ಮುಖವನ್ನು ಇಬ್ಬರಲ್ಲೂ ಕಾಣಬಹುದು.

೧೯. "ಕಣ್ಣೇ ಕಾಮಬೀಜ ಈ ಕಣ್ಣಿಂದಲೆ ನೋಡು ಮೋಕ್ಷ"[೧೪೦] "ಕಣ್ಣೆ ದೇಹಕ್ಕೆ ದೀಪ"[೧೪೧]

ಈ ಕೀರ್ತನೆಯಲ್ಲಿ ಕನಕದಾಸರು ಸರ್ವಾಂತರ್ಯಾಮಿಯಾದ ದೇವರು ಮನುಷ್ಯ ದೇಹಾಂತರ್ಯಾಮಿ ಎಂಬ ಸತ್ಯ ಒಳಗಣ್ಣಿದ್ದವರಿಗೆ ವೇದ್ಯವಾಗುತ್ತದೆಂದು ಕಣ್ಣು, ಕಿವಿ, ಮೂಗುಗಳ ವ್ಯಾಪಾರದೊಂದಿಗೆ ಚಿತ್ರಿಸುವ ಯತ್ನವನ್ನು ಮಾಡಿದ್ದಾರೆ. ಕಣ್ಣೇ ಕಾಮನ ಬೀಜ ಎಂದು ಕನಕದಾಸರೆಂದರೆ ನಿನ್ನ ಕಣ್ಣು ಪರಸ್ತ್ರೀಯನ್ನು ಕಾಮದೃಷ್ಟಿಯಿಂದ ನೋಡಿದರೆ ನೀನು ಪಾಪ ಮಾಡುತ್ತಿಯ. ನಿನ್ನ ಬಲಗಣ್ಣು ನಿನಗೆ ಪಾಪಕ್ಕೆ ಶರಣಾದರೆ ಅದನ್ನು ಕಿತ್ತೆಸೆದು ಬಿಡು. ಯೇಸುಸ್ವಾಮಿ ಕಣ್ಣಿನ ವ್ಯಾಪಾರದ ಬಗ್ಗೆ ಎಷ್ಟೊಂದು ಉಗ್ರವಾಗಿರುವಂತೆ ಕಂಡರೂ ಅವರ ಇನ್ನೊಂದು ನುಡಿ ಕಣ್ಣೇ ದೇಹಕ್ಕೆ ದೀಪ. ನಿನ್ನ ಕಣ್ಣು ಸರಿ ಇದ್ದರೆ ದೇಹವೆಲ್ಲ ಕಾಂತಿಮಯವಾಗುವುದು. ಅದು ಕೆಟ್ಟಿದ್ದರೆ ನಿನ್ನ ದೇಹವೆಲ್ಲಾ ಕತ್ತಲೆಮಯವಾಗುವುದು. ನಿನ್ನೊಳಗಿನ ಬೆಳಕೇ ಕತ್ತಲೆಯಾದಲ್ಲಿ ಅದೆಂತಹ ಕರಾಳ ಕತ್ತಲೆಯಾಗಿರಬಹುದು ಎಂಬ ಯೇಸುಸ್ವಾಮಿಯ ಈ ಮಾತು ಹಾಗೂ ಕಣ್ಣಿನ ಮೂರುತಿ ಬಿಗಿದು ಒಳಗಣ್ಣಿಂದಲೆ ದೇವರ ನೋಡಣ್ಣ ಎಂಬ ಕನಕದಾಸರ ಮಾತು ಯೋಗ ಮಾರ್ಗದಿಂದ ದೈವಿಕ ನೆಲೆ ಕಾಣಬಹುದು ಎಂಬುದನ್ನು ತೋರಿಸುತ್ತವೆ.

೨೦. “ಮುತ್ತು ಬಂದಿದೆ ಕೇರಿಗೆ”[೧೪೨] “ಸ್ವರ್ಗ ಸಾಮ್ರಾಜ್ಯವನ್ನು ಉತ್ತಮವಾದ ಮುತ್ತುರತ್ನಗಳನ್ನು ಹುಡುಕಿಕೊಂಡು ಹೋಗುವ ವರ್ತಕನಿಕೆ ಹೋಲಿಸಲಾಗಿದೆ”[೧೪೩]

ಕನಕದಾಸರು ಮುತ್ತಿನ ರೂಪಕದಲ್ಲಿ ಶ್ರೀಕೃಷ್ಣನ ಮಹಿಮೆಯನ್ನು ಈ ಕೀರ್ತನೆಯಲ್ಲಿ ಕೊಂಡಾಡುತ್ತಾರೆ. ಯೇಸುಸ್ವಾಮಿ ಭಗವಂತನೆಂಬ ಮುತ್ತಿಗಾಗಿ ತನ್ನಲ್ಲಿರುವುದನ್ನೆಲ್ಲಾ ಮಾರಿ ಅನರ್ಘ್ಯವಾದ ಮುತ್ತನ್ನು ವ್ಯಾಪಾರಿ ಕೊಂಡುಕೊಳ್ಳುತ್ತಾನೆ. ಭಗವಂತನೆಂಬ ಮುತ್ತಿನ ಮುಂದೆ ಬೌತಿಕ ಮುತ್ತುಗಳು ನಿಸ್ಸಾರ ಎಂಬುದನ್ನು ಇಬ್ಬರೂ ಎತ್ತಿ ಹಿಡಿಯುತ್ತಾರೆ.

೨೧. “ಕೋಪ ಮಾಡದಿರು ಪಾಪಕೆ ಗುರಿಯಾಗದಿರು”[೧೪೪] “ತನ್ನ ಸಹೋದರನ ಮೇಲೆ ಕೋಪಗೊಳ್ಳುವ ಪ್ರತಿಯೊಬ್ಬನೂ ನ್ಯಾಯತೀರ್ಪಿಗೆ ಈಡಾಗುವನು”[೧೪೫]

ಕ್ರಿಸ್ತ, ಕನಕ ಇಬ್ಬರ ವಚನಗಳನ್ನು ಓದುವಾಗ ಅರಿವಾಗುವ ಸತ್ಯ ಒಂದೇ - ಕೋಪತಾಪ, ಪರನಿಂದೆ ಮೊದಲಾದ ದುಷ್ಕೃತ್ಯಗಳಿಗೆ ಅಂಟಿಕೊಳ್ಳದೆ, ಸುಕೃತದ ಭಗವದ್ ಭಕ್ತಿಯನ್ನು ಬೆಳಸಿಕೊಳ್ಳಿ ಎಂಬುದೇ ಆಗಿದೆ. ಕೋಪಿ ನರಕಕ್ಕೆ ತಾನೆಳೆವ ಎಂಬ ಸತ್ಯ ಮನದಟ್ಟಾಗುತ್ತದೆ.

೨೨. “ಎಲ್ಲಾ ಭಕ್ತರು ಸರಿಯೆ ಅಲ್ಲಿ ಬಂದೊದಗುವನು”[೧೪೬] “ಎಲ್ಲಿ ಇಬ್ಬರು, ಮೂವರು ನನ್ನ ನಾಮದಲ್ಲಿ ಸೇರಿರುತ್ತಾರೋ ಅಲ್ಲಿ ನಾನು ಅವರ ಮದ್ಯೇ ಇರುತ್ತೇನೆ.”[೧೪೭]

ಸರ್ವಾಂತರ್ಯಾಮಿಯಾದ ಪರಮಾತ್ಮ ಭಕ್ತವತ್ಸಲ. ತನ್ನ ಭಕ್ತರು ಕರೆದರೆ ಒಡನೆಯೆ ಅವರಿಗೆ ಅದೀನ. ತನ್ನ ಭಕ್ತರು ಸಂಕಷ್ಟದಲ್ಲಿ ಸಹಾಯಕ್ಕಾಗಿ ಮೊರೆಹಿಡುವಾಗ ಅವರಿಗೆ ನೆರವಾಗುತ್ತಾನೆ. ಇದು ಭಗವಂತನ ಬಗ್ಗೆ ಭಕ್ತನಿಗಿರುವ ನಂಬಿಕೆ. ನೆನೆದವರ ಮನದಲ್ಲಿ ಸದಾ ಭಗವಂತ ವಾಸಿಸುತ್ತಾನೆ. ಎಲ್ಲೆಲ್ಲಿ ಇಬ್ಬರು ಮೂವರು ಸ್ವಾಮಿ ಹೆಸರಿನಲ್ಲಿ ಸೇರುತ್ತಾರೋ ಅಲ್ಲೆಲ್ಲಾ ನಾ ಇದ್ದೇನೆ ಎಂದು ಹೇಳುವುದರ ಮೂಲಕ ಯೇಸು ಸ್ವಾಮಿ ಸಾಮೂಹಿಕ ಪ್ರಾರ್ಥನೆಗೆ ಕರೆ ಕೊಡುತ್ತಾರೆ.

೨೩. “ನೇಮವಿಲ್ಲದ ಹೋಮವೇತಕೆ”[೧೪೮] “ನನಗೆ ಬೇಕಾಗಿರುವುದು ದಯೆ ಹೊರತು ಯಜ್ಞವಲ್ಲ”[೧೪೯]

ಈ ಕೀರ್ತನೆಯಲ್ಲಿ ಅಂತರಂಗ ಶುದ್ದಿ ಇಲ್ಲದೆ, ಬೂಟಾಟಿಕೆಯಲ್ಲಿ ಕಾಲಹರಣ ಮಾಡುವವರ ಸ್ವರೂಪ ದರ್ಶನವಿದೆ. ಭಕ್ತಿಮಾರ್ಗ ಪ್ರತಿಪಾದನೆಗೂ ಪರಮಾತ್ಮನು ಕರುಣಿಸಬೇಕು. ನಿಷ್ಠೆ ನೇಮವಿಲ್ಲದ ಯಾಂತ್ರಿಕ ಆಚರಣೆಗಳು ಪ್ರಾಣಿ ಬಲಿ, ಮುಂತಾದ ತಾಮಸ ಆಚರಣೆಗಳು ಹೇಗೆ ತ್ಯಾಜ್ಯಾರ್ಹವೋ ಹಾಗೆಯೇ ಅರ್ಥರಹಿತ ಯಾಂತ್ರಿಕ ಸಾತ್ವಿಕಾಚರಣೆಗಳೂ ಸಹ ಜರಡಿಯಲ್ಲಿ ನೀರು ತಂದಂತೆ ನಿಷ್ಫಲ ಎಂಬುದು ಕನಕದಾಸರ ಭಾವ. ಅದರಂತೆಯೆ ನನಗೆ ಬೇಕಾಗಿರುವುದು ಹವನ ಹೋಮಗಳ, ಯಜ್ಞಯಾಗಾದಿಗಳಲ್ಲ ಬದಲಾಗಿ ದಯೆ ಮಾನವೀಯ ಅನುಕಂಪ ಕರುಣೆ ಎಂಬುದನ್ನು ಯೇಸುಸ್ವಾಮಿ ಬೋಧಿಸುತ್ತಾರೆ.

ಅಂತರಂಗ ಶುದ್ಧಿಯಿಲ್ಲದ ಹೋಮ, ಹವನ, ಬಲಿ ಇವೆಲ್ಲವೂ ನಿಷ್ಪ್ರಯೋಜಕ ಎಂಬುದು ಇರ್ವರ ಅಭಿಮತ.

೨೪. “ಅಹುದಾದರಹುದೆನ್ನಿ ಅಲ್ಲವಾದರಲ್ಲವೆನ್ನಿ”[೧೫೦] “ಹೌದಾದರೆ ಹೌದೆನ್ನಿ ಅಲ್ಲವಾದರೆ ಅಲ್ಲವೆನ್ನಿ”[೧೫೧]

ಇಬ್ಬರ ಹೇಳಿಕೆಗಳಲ್ಲಿ ಒಂದೇ ಅಭಿವ್ಯಕ್ತಿ ಹೊಮ್ಮಿದೆ. ಅನಗತ್ಯವಾಗಿ ತಂದೆ, ತಾಯಿ, ಗುರು

ಹಿರಿಯರ, ದೇವ, ದೇವತೆಗಳ ಮೇಲೆ ಆಣೆ ಪ್ರಮಾಣ ಮಾಡುವುದರ ಬದಲು ನೇರವಾಗಿ ಮಾತನಾಡಿ. ಸ್ಪಷ್ಟವಾಗಿ ಸರಳವಾಗಿ ಮಾತನಾಡಿ ಎಂಬುದು ಇಲ್ಲಿಯ ಇಬ್ಬರ ಧ್ಯೇಯ

೨೫. "ಗುಟ್ಟನಲ್ಲಿ ಜಪಿಸುವ ಗುರುತರಿಯದೆ"[೧೫೨]

**"ಜಪ ಮಾಡುವಾಗ ನಿನ್ನ ಕೊಠಡಿಗೆ ಹೋಗು,
ಬಾಗಿಲನ್ನು ಮುಚ್ಚು ಅಂತರಂಗದಲ್ಲಿರುವ
ನಿನ್ನ ತಂದೆಗೆ ಪ್ರಾರ್ಥನೆ ಮಾಡು"[೧೫೩]**

ಕನಕದಾಸರು ಈ ಕೀರ್ತನೆಯಲ್ಲಿ ಧಾರ್ಮಿಕ ಆಷಾಡಭೂತಿತನವನ್ನು ಸೋಗಲಾಡಿತನವನ್ನು, ಬೂಟಾಟಿಕೆಯನ್ನು ಜಾಲಾಡಿ ಮತಧರ್ಮದ ಅಂತಃಸತ್ವವನ್ನು-ತತ್ವವನ್ನು ಅಮೂಲಾಗ್ರವಾಗಿ ಅರಿತುಕೊಂಡು ಧಾರ್ಮಿಕ ಜೀವನವನ್ನು ನಡೆಸಲು ಕರೆ ನೀಡುತ್ತಾರೆ.

ನಾವು ಮಾಡುವ ಪ್ರಾರ್ಥನೆ, ಜಪ-ತಪಗಳು, ಇತರರನ್ನು ಮೆಚ್ಚಿಸುವುದಕ್ಕೆ ಅಲ್ಲಾ ಎಂಬುದನ್ನು ಅರಿತು ನಿರರ್ಥಕ ಪದಗಳನ್ನು ಉಪಯೋಗಿಸದೆ, ಕೆಟ್ಟದಾಗಿ ಅರಚದೆ ಮೌನದಲ್ಲಿ ಪ್ರಾರ್ಥಿಸು ಎಂದು ಕನಕನಂದರೆ, ಯೇಸುವಿನ ಪ್ರಾರ್ಥನ ವಿಧಿಯು ಅದೇ ತರ ಇದೆ: 'ಪ್ರಾರ್ಥನೆ ಮಾಡುವಾಗ ಕಪಟಿಗಳಂತೆ ಮಾಡಬೇಡ' ಜನರು ತಮ್ಮನ್ನು ನೋಡಲೆಂದು ಪ್ರಾರ್ಥನಾ ಮಂದಿರಗಳಲ್ಲೂ ಬೀದಿಯ ಚೌಕಗಳಲ್ಲೂ ನಿಂತು ಪ್ರಾರ್ಥಿಸುತ್ತಾರೆ. ಹೀಗೆ ನೀನು ಪ್ರಾರ್ಥಿಸಿದರೆ ನಿನಗೆ ಬರಬೇಕಾದ ಫಲ ಬಂದಾಯಿತೆಂದು ತಿಳಿ. ಪ್ರಾರ್ಥನೆ ಮಾಡುವಾಗ ನಿನ್ನ ಕೊಠಡಿಗೆ ಹೋಗು. ಬಾಗಿಲನ್ನು ಮುಚ್ಚು. ಅಂತರಂಗದಲ್ಲಿರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು. ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆ ನಿನಗೆ ಪ್ರತಿಫಲವನ್ನು ಕೊಡುವನು.' ಪ್ರಾರ್ಥನೆ ಮಾಡುವಾಗ ಪರಕೀಯರಂತೆ ನಿರರ್ಥಕ ಪದಗಳನ್ನು ಪಿಸುಗುಟ್ಟಬೇಡ. ಪ್ರಾರ್ಥನೆ ದೀರ್ಘವಾದಷ್ಟು ದೇವರು ಆಲಿಸುತ್ತಾರೆಂದು ಭಾವಿಸುತ್ತಾರೆ. ನೀವು ಅವರಂತೆ ಆಗಬೇಡಿ, ನಿಮ್ಮ ಅಗತ್ಯಗಳೇನೆಂದು ನೀವು ಕೇಳುವುದಕ್ಕೆ ಮೊದಲೆ ನಿಮ್ಮ ತಂದೆಗೆ ಗೊತ್ತಿದೆ. ಇಬ್ಬರ ನೋಟವು ಪ್ರಾರ್ಥನಾ ಜೀವಿತದ ಬಗ್ಗೆ ಒಂದೇ ಆಗಿದೆ.

೩.೭.೨ ಕ್ರಿಸ್ತ-ಕನಕರ ಸಂದೇಶ ಸಾರ

ಇಸ್ರೇಲಿನ ಕ್ರಿಸ್ತ, ಕರುನಾಡಿನ ಕನಕದಾಸರ ಬೋಧನೆಗಳ ಧಾರ್ಮಿಕ ಸಂವಾದದಲ್ಲಿ ಅನೇಕವು ಒಂದಕ್ಕೊಂದು ಮಿಳಿತವಾಗಿವೆ. ಇಬ್ಬರೂ ಕರ್ಮಠ ಪುರೋಹಿತಶಾಹಿಯ ವಿರುದ್ಧ ಬಂಡೆದ್ದು ದೈವಪಥ ಜನ ಸಾಮಾನ್ಯರಿಗೆ ಅವರ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದುವುದರ ಮೂಲಕ ತೋರಿಸಿದರು.

ಕನಕ-ಕ್ರಿಸ್ತರ ಆಲೋಚನೆಗಳು, ವಿಚಾರಗಳು ಆಧುನಿಕ ಸಂದರ್ಭದಲ್ಲಿ ಮರು ಓದಿಗೆ ಒಳಗಾಗಿ ಹೊಸ ಅರ್ಥವನ್ನು ಹೊಳೆಯಿಸುವುದರಲ್ಲಿ ಸಂಶಯವಿಲ್ಲ. ಕನಕ-ಕ್ರಿಸ್ತರ ಸ್ವಾರ್ಥಕ್ಕಿಂತ ಪರಹಿತಾರ್ಥಕ್ಕೆ ಒತ್ತು ಕೊಟ್ಟವರು 'ಸರ್ವರಿಗೂ ಸಮಪಾಲು - ಸರ್ವರಿಗೂ ಸಮಬಾಳು' ಎಂಬ ಸಾಮಾಜಿಕ ನ್ಯಾಯದ ನಿಟ್ಟಿನಲ್ಲಿ ಇಬ್ಬರ ಬೋಧನೆಗಳು ಜ್ವಲಂತವಾಗಿವೆ.

ಕನಕ-ಕ್ರಿಸ್ತ ಇಬ್ಬರೂ ಅವರವರ ಕಾಲದಲ್ಲಿದ್ದ ಕಂದಾಚಾರಗಳನ್ನು, ಅರ್ಥವಿಲ್ಲದ ಆಚರಣೆಗಳನ್ನು ತಮ್ಮ ನಿರ್ಭೀತ ವಿಚಾರ ಧಾರೆಯಿಂದ ಖಂಡಿಸಿ- ಧರ್ಮದ ಅಂತಃಸತ್ತ್ವವನ್ನು-ತತ್ವವನ್ನು ಅಮೂಲಾಗ್ರವಾಗಿ ಅರಿತು ಸೋಗಲಾಡಿತನದ ಆಚರಣೆಗಳನ್ನು ಕೈ ಬಿಡುವಂತೆ ಸಮುದಾಯಕ್ಕೆ ಕರೆ ನೀಡಿದರು.

ಹೀಗೆ 'ನತಜನಹಿತ'ವನ್ನೆ ಅವಿರತ ಹಂಬಲಿಸುತ್ತಾ ಬಂದವರು. ಬೆಂಬಲಿಸುತ್ತಾ ನಡೆದವರು. ವಿಶ್ವ ಮಾನವ ನಿಲುವಿನಿಂದ ವಿಶ್ವ ಕುಟುಂಬಿಯಾದವರು.

೩.೮ ‘ಅವಧೂತ’ ಪರಂಪರೆ ಧಾರ್ಮಿಕ ಸಂವಾದಗಳು

‘ಅವಧೂತ’ ಎಲ್ಲವನ್ನು ತೊಳೆದು ಕೊಂಡವನು, ಎಲ್ಲವನ್ನು ತೊರೆದವನು, ಎಲ್ಲ ಬಗೆಯ ಅಭಿಮಾನವನ್ನು ತಳ್ಳಿ ಹಾಕಿದವನು ಎಂದು ಅರ್ಥ.[೧೫೪] ಅವಧೂತ ಸರ್ವಸಂಗ ಪರಿತ್ಯಾಗಿ, ಸನ್ಯಾಸಿ, ದಿಗಂಬರ, ವರ್ಣಾಶ್ರಮಗಳನ್ನು ಮೀರಿ, ಮುಮುಕ್ಷ ಮಾರ್ಗದಲ್ಲಿ ನಡೆದು ಆತ್ಮಜ್ಞಾನಿಯಾಗಿ ಆತ್ಮನಲ್ಲಿಯೇ ವಿಹರಿಸುವವನಾಗಿರುತ್ತಾನೆ. ಅವಧೂತ ಎನ್ನುವುದು ಒಂದು ಧರ್ಮವಾಗಿರದೆ ಸಂಘಟಿತ ಧರ್ಮದ ಚೌಕಟ್ಟನ್ನು ಮೀರಿ ನಿಂತ ಒಂದು ಹಾದಿ ಅಥವಾ ಒಂದು ಪ್ರಭೆಯಾಗಿದೆ. ಲೋಕದ ದೃಷ್ಟಿಯಲ್ಲಿ ಹುಚ್ಚರಂತೆ, ಮರುಳರಂತೆ ಕಂಡುಬಂದರೂ ಆಧ್ಯಾತ್ಮ ಲೋಕದಲ್ಲಿ ಧ್ರುವತಾರೆಯಾಗಿ ಮಿನುಗುವ ಮಹಾ ಚೇತನಗಳು ಅವಧೂತರು. ಲೋಕ ಕಲ್ಯಾಣಕ್ಕಾಗಿ ಲೋಕ ಸಂಚಾರ ಮಾಡುತ್ತಾ, ಹೋದ ಹೋದಲೆಲ್ಲಾ ತಮ್ಮ ಮಹಿಮೆಯನ್ನು ಪ್ರಕಟಿಸಿ ಕೊನೆಗೊಂದು ಊರಿನಲ್ಲಿ ನೆಲೆನಿಂತು ಸಮಾಧಿ, ಸೇರಿದವರು. ಜಾತಿ, ಮತ, ಧರ್ಮಗಳ ಎಲ್ಲೆಯನ್ನು ಮೀರಿದ ಅವಧೂತರು ಆಸ್ತಿ, ಅಂತಸ್ತು, ಹಣ, ಅಧಿಕಾರ, ಅಹಂಕಾರ, ಹೆಂಡತಿ, ಮನೆ, ಮಕ್ಕಳು, ತಂದೆ-ತಾಯಿ, ಬಂಧು-ಬಳಗ ಮುಂತಾದ ಬಂಧನಗಳನ್ನೆಲ್ಲಾ ಗೆದ್ದು, ಅನುಭಾವಿಕ ಶಕ್ತಿ ಮುಂದೆ ಉಳಿದೆಲ್ಲವು ತೃಣ ಸಮಾನ ಎಂದು ತಿಳಿದರು.

‘ನಾನು ಏನೂ ಅಲ್ಲಾ, ಭಗವಂತನೇ ಎಲ್ಲಾ’ ಎಂಬ ಮನೋಭಾವ ಹೊತ್ತು ಲೋಕ ಕಲ್ಯಾಣಕ್ಕಾಗಿ ಮಿಡಿಯುವ ಹಿರಿಯ ಚೇತನಗಳು ಅವಧೂತರು. ಆಯಾ ಪ್ರಾಂತದ ಜನ ಇವರನ್ನು ಪ್ರೀತಿಯಿಂದ ತಾತ, ಅಜ್ಜ, ಸ್ವಾಮಿ, ಅಪ್ಪ ಎಂದು ಕರೆಯುತ್ತಾರೆ. ಜನ ಸಾಮಾನ್ಯರಿಗೆ ಅವರ ಇಷ್ಟಾರ್ಥಗಳನ್ನು ಕಲ್ಪಿಸುವ ದೈವವಾಗಿದ್ದಾರೆ.

‘ತಂದೆಯ ಮುಂದೆ ನಾವೆಲ್ಲಾ ಒಂದೇ’ ಮೇಲು, ಕೀಳು, ಸಣ್ಣವ, ದೊಡ್ಡವನೆನ್ನದೆ, ಸರ್ವರೂ ಸಮಾನರು ಎಂಬ ದೋರಣೆಯಿಂದ ಬದುಕಿ, ಸ್ವಾತಂತ್ರ್ಯ ಸಮಾನತೆಯನ್ನು ಜಾತ್ಯತೀತರಾಗಿ ಮತಾತೀತರಾಗಿ ಸಾರಿದ್ದಾರೆ. ಇಂಥ ಭೇದಗಳು ಇಲ್ಲದವನು ಯಾರೋ ಅವನು ಅವಧೂತ!

‘ಅವಧೂತ’ ಪದಕ್ಕೆ ವಿವಿಧ ಅರ್ಥಗಳಿದ್ದು ಅವುಗಳನ್ನು ಹೀಗೆ ಕ್ರೋಡೀಕರಿಸಬಹುದು.

೧. ಅವಧೂತ ಸನ್ಯಾಸಿ, ಬೈರಾಗಿ, ಜಗತ್ತಿನ ಸಂಬಂಧವನ್ನು ತ್ಯಜಿಸಿದ ವಿರಕ್ತ.[೧೫೫]

೨. ಅವಧೂತ - ಅಪಮಾನಿಸಲ್ಪಟ್ಟ, ಅಲ್ಲಾಡಿಸಲ್ಪಟ್ಟ, ಕುಲುಕಲ್ಪಟ್ಟ, ವಿರಕ್ತ.[೧೫೬]

೩. ಅವಧೂತ - Seperated from wordly feelings and obligions.[೧೫೭]

೪. ಅವಧೂತ - ಸರ್ವಸ್ವವನ್ನು ಬಿಟ್ಟವ[೧೫೮]

೫. ಅವಧೂತ - ಯಾವ ನಿಯಮಗಳೂ ಇಲ್ಲದ ಸನ್ಯಾಸಿಗಳು ಇವರು ನೈತಿಕ ಪಾಪಗಳನ್ನು ಮಾಡಿದವರನ್ನು

ಬಿಟ್ಟು ಉಳಿದೆಲ್ಲರಿಂದಲೂ ಆಹಾರ ಸ್ವೀಕರಿಸುತ್ತಾರೆ. ಸದಾ ಆತ್ಮನಲ್ಲಿಯೇ ಇರುತ್ತಾರೆ. ಅಜಗರದಂತೆ ಮುಹಿ ಆಹಾರ ಸ್ವೀಕರಿಸುತ್ತಾರೆ, ಸಮಸ್ತ ಬಂಧನಗಳನ್ನು ಕೊಡವಿ ಹಾಕಿರುತ್ತಾರೆ.[೧೫೯]

ಸಂಘಟಿತ ಧರ್ಮಗಳಿಗೆ ಪ್ರತಿಯಾಗಿ ಅನೇಕ ಪಥಗಳು ಸಮಾಜದಲ್ಲಿ ಕಾಲದಿಂದ ಕಾಲಕ್ಕೆ ಉಗಮಿಸುವುದನ್ನು ಕಾಣುತ್ತೇವೆ. ಇಂಥ ಪಂಥಗಳಲ್ಲಿ ಅವಧೂತ ಪಂಥವೂ ಒಂದು. ಸಾವಿರಾರು ವರ್ಷಗಳ ಇತಿಹಾಸವಿರುವ ಅವಧೂತ ಪರಂಪರೆ ಕರ್ನಾಟಕದಲ್ಲಿ ಬೆಳಕಿಗೆ ಬಂದದ್ದು ಸುಮಾರು ೧೨ನೇ ಶತಮಾನದ ಈಚೆಗೆ. ಅವಧೂತ ಮೊದಲಾದ ಪಂಥಗಳು ಮಧ್ಯಕಾಲೀನ ಕರ್ನಾಟಕದಲ್ಲಿ ಭಕ್ತಿಪಂಥ ಶಿಷ್ಟ ಧರ್ಮಗಳ ಭುಜಕ್ಕೆ ಭುಜಕೊಟ್ಟು ಸೆಣೆಸಿದ ಇತಿಹಾಸವಿದೆ."[೧೬೦]

೨೦ನೇ ಶತಮಾನದ ಶರಣರ ಇಷ್ಟಲಿಂಗ ಸಂಸ್ಕೃತಿಯನ್ನು ನಿರಾಕರಿಸುವ ಆತ್ಮಲಿಂಗವಾದಿಗಳಿಂದ ಬೆಳಕಿಗೆ ಬಂದ ಈ ಪಂಥ, ಮುಂದೆ ಕಲ್ಯಾಣದಲ್ಲಿ ಉದ್ಭವವಾದ ಸಾಂಸ್ಕೃತಿಕ ಬಿಕ್ಕಟ್ಟನ್ನು ಎದುರಿಸಲಾರದ ಪರಿಸ್ಥಿತಿ ನಿರ್ಮಾಣವಾದಾಗ, ಅಲ್ಲಿಂದ ಚದುರಿದ ಶರಣರು ವಿವಿಧ ಕಡೆ ನೆಲೆಸಿದರು. ಇವರೂ ಸಹ ಹಂಪಿ ಪರಿಸರದಲ್ಲೂ ನೆಲೆಸಿದ್ದರು. ಅವರುಗಳೇ ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರು. ಆ ವಿರಕ್ತರಲ್ಲಿ ಅವಧೂತ ಪರಂಪರೆಯೊಂದು ಬೆಳೆದು ಬಂದಿರುವ ಸಾಧ್ಯತೆಯಿದೆ.[೧೬೧]

೧೫ನೇ ಶತಮಾನದಲ್ಲಿ ಕಂಡು ಬರುವ ಅನುಭಾವಿಗಳು ಸೃಷ್ಟಿಸಿದ ಅನುಭಾವ ಸಾಹಿತ್ಯದಲ್ಲಿ ಅಂಗಾಂಗ ಸಾಮರಸ್ಯ, ಆತ್ಯಂತಿಕ ಆನಂದದ ಮಹತ್ವವನ್ನು ಹಲವಾರು ಯೋಗಿಗಳು ಹೇಳಿದ್ದಾರೆ. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಕಡಕೊಳ ಮುಡಿವಾಳಪ್ಪ ಮುಂತಾದವರು ರಚಿಸಿದ ಕೈವಲ್ಯ ಸಾಹಿತ್ಯದಲ್ಲಿ ಅವಧೂತ ಬೆಳೆದು ಬಂದಿರುವುದಕ್ಕೆ ಮಾಹಿತಿ ಇದೆ. ಸುಮಾರು ೧೭, ೧೮ನೇ ಶತಮಾನದಲ್ಲಿ ಬಂದವರು, ಅದ್ವೈತ ಉಪಾಸಕರಾದ ಅವಧೂತ ಪಂಥಿಯರು. ೧೯ ಮತ್ತು ೨೦ನೇ ಶತಮಾನದ ಆಜುಬಾಜಿನಲ್ಲಿ ಹೆಚ್ಚಿನ ಸಂಖ್ಯೆಯ ಅವಧೂತರನ್ನು ಕಾಣುತ್ತೇವೆ.

೩.೮.೧ ಅವಧೂತ ಮತ್ತು ಇತರೆ ಅನುಭಾವಿಗಳು

ಧ್ಯಾನ ಮತ್ತು ಆತ್ಮಾರ್ಪಣಾ ಪರಮಾತ್ಮನಲ್ಲಿ ಪಡೆಯುವಂತಹ ಮುಮುಕ್ಷವನ್ನು 'ಅನುಭಾವಿ' ಎಂದು ಕರೆಯುತ್ತೇವೆ. ಇವರು ಅನುಸರಿಸುವ ಪಥವೆ ಅನುಭಾವ ಮಾರ್ಗ. "ಅನುಭಾವ ಶಬ್ದಕ್ಕೆ ಅತೀಂದ್ರಿಯವಾದ ಅನುಭವ, ಆತ್ಮಾನುಭವ, ವಿಚಾರ ಮಥನ, ಜಿಜ್ಞಾಸೆ, ಶಿವ ಜೀವನ ಸಂಬಂಧ ಎಂಬ ಅರ್ಥಗಳನ್ನು ನೀಡಲಾಗಿದೆ. ಬಿದರಹಳ್ಳಿ ನರಸಿಂಹಮೂರ್ತಿಯವರ ಪ್ರಕಾರ "ಸಾಧಕ ತನ್ನ ಇಷ್ಟ ದೈವದ ಜೊತೆಗೆ ನಡೆಸುವ ಸುಖ ಸಂಭಾಷಣೆಯೂ ಅನುಭಾವ ಉಂಟಾಗುತ್ತದೆ. ಇತರಿಗೆ ತಮ್ಮ ಭಕ್ತಿ ಶಿಖರಗಳಲ್ಲಿ ಅನುಭಾವಿಕ ಸ್ಪರ್ಶ ಉಂಟಾಗಿ ಅವರು ಭಾಷ್ಪವಾರಿ 'ಪರಿಪೂರ್ಣ'ಲೋಚನರಾಗುತ್ತಾರೆ. ಆದರೆ ಸಂಪೂರ್ಣ ಅನುಭಾವಿಗಳು ಯಾವುದೇ ಒಂದು ಬಗೆಯ ಸಾಧನೆಗೆ ಅಂಟಿಕೊಳ್ಳುವಂತೆ ಕಾಣುವುದಿಲ್ಲ. ಇಷ್ಟ ದೈವದ ಸಾಕ್ಷಾತ್ಕಾರಕ್ಕಾಗಿ ತೆರೆದುಕೊಳ್ಳುವ ಎಲ್ಲಾ ಮಾರ್ಗಗಳನ್ನು ಕೈಬಿಟ್ಟು ಸ್ವಯಂಭು ಸ್ಥಿತಿಯಲ್ಲಿ ಇದ್ದುಬಿಡುತ್ತಾರೆ. ತಾವೇ ತಮ್ಮ ಇಷ್ಟ ದೈವವಾಗಿರುವ ಅದ್ವೈತ ಆನಂದ ಅವರನ್ನು ಆವರಿಸುತ್ತದೆ. ಅದು ಒಂದು ಬಗೆಯ ನಿರ್ಲಿಪ್ತ ಸ್ಥಿತಿ, ಅದೇ ಅನುಭಾವದ ಬಯಲು. ಅದೇ ಎಲ್ಲವೂ ಇದ್ದು ಯಾವುದೂ ಇಲ್ಲವಾಗುವ ಶೂನ್ಯಸ್ಥಿತಿ.

ಅನುಭಾವಿಗಳಿಗೆ ಆತ್ಯಂತಿಕ ನಿಜದ ಅನುಭವ ಅಥವಾ ಅನುಭೂತಿ ಉಂಟಾಗುತ್ತದೆ. ಆದ್ದರಿಂದ ಅವರು ಯಾವುದೇ ಒಂದು ಸಾಂಸ್ಥಿಕ ಧರ್ಮದ ಚೌಕಟ್ಟಿನಲ್ಲಿ ಇರುವಂಥವರಲ್ಲ.

ಅನುಭಾವಿಗಳಿಗೆ ಆತ್ಯಂತಿಕ ನಿಜದ ಅನುಭವ ಆಗಿರುತ್ತದೆ. ಆದುದರಿಂದ ಅವರು ಯಾವುದೇ ಒಂದು ಸಂಘಟಿತ ಧರ್ಮದ ಚೌಕಟ್ಟಿನಲ್ಲಿ ಇರುವವರಲ್ಲ. ಕ್ರೈಸ್ತಾನುಭಾವಿ, ಮುಸ್ಲಿಂ ಅನುಭಾವಿ, ಶೈವ ಅನುಭಾವಿ ಎಂದು ವಿಭಾಗಿಸಲು ಆಗುವುದಿಲ್ಲ. ಅನುಭಾವಿಗಳು ಎಂದರೆ ಅವರು ಎಲ್ಲಾ ಮತಗಳ, ಧರ್ಮಗಳ ಚೌಕಟ್ಟುಗಳನ್ನು ಮೀರಿ ನಿಂತಿದ್ದಾರೆ ಎಂದು ಅರ್ಥ. ಅನುಭಾವಿಗಳು ಒಂದು ಧರ್ಮ, ದೈವ, ಪಂಥ, ಹಿಡಿದು ಇನ್ನೊಂದು ಬಿಡುವ ಗೋಜಿಗೆ ಹೋಗುವುದಿಲ್ಲ. ತಮ್ಮ ಇಷ್ಟ ದೈವದ ಮೂಲಕವೇ ಎಲ್ಲಾ ದೈವದಲ್ಲಿ ಅಡಗಿರುವುದನ್ನು ಅರಿತುಕೊಳ್ಳುತ್ತಾರೆ. ಹಾಗಾಗಿ ಅವರು ಯಾವುದೇ ಹಂಗಿಲ್ಲದ ಜೀವಿಯಂತೆ ಬದುಕುತ್ತಾರೆ."[೧೬]

೩.೮.೨ ಅವಧೂತ ಮತ್ತು ಶರಣರಲ್ಲಿನ ಸಾಮ್ಯತೆಗಳು ಮತ್ತು ವ್ಯತ್ಯಾಸಗಳು

ಶರಣ ಎಂಬ ಪದವು ಲಿಂಗವಂತ, ಶಿವಭಕ್ತ ಎಂಬ ಸಾಮಾನ್ಯ ಅರ್ಥದಲ್ಲೂ, ಷಟ್‌ಸ್ಥಲದ ಐದನೆ ಹಂತದಲ್ಲಿ ಜ್ಞಾನದ ಶಿವಭಕ್ತನ ಸ್ಥಿತಿ ಶರಣಾಗುವುದು ಒಂದು ಸಾಧನೆ ಎಂಬರ್ಥದಲ್ಲಿ ಹೇಳಿದ್ದಾರೆ. ಪರರ ದುಃಖದಲ್ಲಿ ಭಾಗಿಯಾಗುವ ಅಧ್ಯಾತ್ಮ ಚಿಂತಕ. ಸಾಧನೆಯಲ್ಲಿ ನಿರತ ಸಾಧಕನಾಗಿದ್ದು ಶ್ರೇಷ್ಠ ಅನುಭಾವಿಗಳಾಗಿರುತ್ತಾರೆ. ನಿಷ್ಠೆಯುಳ್ಳ ಬದುಕನ್ನು ತನ್ನ ಜೀವನದ ವ್ರತವನ್ನಾಗಿ ಸ್ವೀಕರಿಸುತ್ತಾರೆ. ವೀರಶೈವ ತತ್ವಗಳನ್ನು ತಮ್ಮ ನಡೆ ನುಡಿಯಲ್ಲಿ ಸಾಧಿಸಿ ತೋರಿಸುತ್ತಾರೆ.

ಅಂಗಲಿಂಗೀ ಜ್ಞಾನರೂಪಃ ಶಿವಃ ಪತಿಃ ತತ್ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್ ಎಂದು "ಸಿದ್ಧಾಂತ ಶಿಖಾಮಣಿ"ಯಲ್ಲಿ ಶರಣರು ಯಾರು ಎನ್ನುವ ಪ್ರಶ್ನೆಗೆ ಉತ್ತರವಿದೆ. ಶಿವಜ್ಞಾನವನ್ನು ಪಡೆದ ಸಾಧಕನು ತಾನು ಸತಿ - ಪರಮಾತ್ಮ ಪತಿ ಎಂದು ತಿಳಿದು ಇಷ್ಟಲಿಂಗದ ಮೂಲಕ ಉಪಾಸನೆ ಮಾಡುವವನು ಶರಣ.

ಶರಣರ ಅನುಭಾವ ಮಾರ್ಗ ಭಕ್ತ ಸ್ಥಲದಿಂದ ಐಕ್ಯ ಸ್ಥಲದವರೆಗೆ ಆರು ಮೆಟ್ಟಿಲುಗಳಲ್ಲಿ ಪೂರ್ಣಗೊಂಡು ಮಾನವತೆಯು ಏರಬಹುದಾದ ಕೊನೆಯ ಉತ್ತರವನ್ನು ಅದು ತೋರಿಸುತ್ತದೆ. ಬಾಹ್ಯವಾಗಿ ಅಂದರೆ ಭೌತಿಕ ದೃಷ್ಟಿಗೆ ಅದು ಕಾಣದಿದ್ದರೂ ಆಧ್ಯಾತ್ಮಿಕ ದೃಷ್ಟಿಗೆ ಪೂರ್ಣರೂಪದಲ್ಲಿ ಕಾಣಿಸುತ್ತದೆ.

'ಮಾನವ ಧರ್ಮಕ್ಕೆ ಜಯವಾಗಲಿ; ಧರ್ಮದಿಂದಲೇ ಜಗಕ್ಕೆ ಶಾಂತಿ' ಎನ್ನುವ ಶರಣರ ಮನೋಧರ್ಮ ಹಾಗೂ ಅವಧೂತರ ಧರ್ಮ ಮಾನವ ಧರ್ಮವೇ ಆಗಿದ್ದು ಈ ಇಬ್ಬರು ಜಾತಿ, ಕುಲ, ಪಂಗಡಗಳನ್ನು ಸಾರಸಗಟಾಗಿ ನಿರಾಕರಿಸಿದರು. ಆದರೆ ಶರಣರು ಜಗತ್ತನ್ನು ಸಕಾರಾತ್ಮಕವಾಗಿ ಸ್ವೀಕಾರಾತ್ಮಕವಾಗಿ ಕಂಡರೆ, ಅವಧೂತರು ಜಗನ್ಮಿಥ್ಯ ಎಂದು ಭಾವಿಸಿದ್ದಾರೆ.

ಶರಣರಿಗೆ ಷಟ್‌ಸ್ಥಲಗಳು ಆಚಾರಗಳು, ಅದರಲ್ಲೂ ವಿಶೇಷವಾಗಿ ಪಂಚಾಚಾರಗಳು ಮುಖ್ಯ. ಮೋಕ್ಷವೆಂದರೆ ಷಟ್‌ಸ್ಥಲದ ಐಕ್ಯವೆಂದು ತಿಳಿದವರು.

"ಶರಣರ ದೃಷ್ಟಿಯಲ್ಲಿ ಐಕ್ಯವೆಂದರೆ ಬಯಲಾಗುವುದು. ಶಿವಾಂಗನಾದ ಸಾಧಕನು ಷಟ್‌ಸ್ಥಲವನ್ನು ಅನುಸರಿಸಿ ತನ್ನ ಸಾಧನೆಯಲ್ಲಿ ಸಿದ್ಧಿ ಪಡೆದು ಕೊನೆಗೆ ಐಕ್ಯನಾಗುತ್ತಾನೆ. ಪುನಃ ಶಿವನೇ ತಾನಾಗುತ್ತಾನೆ. ಪ್ರವೃತಿ ಮಾರ್ಗದಿಂದ ದೇವನಾಗುವ ಪಥವೇ ಷಟ್‌ಸ್ಥಲ ಮಾರ್ಗ, ಇದೇ ಐಕ್ಯ ಹಾಗೂ ಜೀವನ್ಮುಕ್ತಿ ಸ್ಥಿತಿ. ತನ್ನದೆಲ್ಲವ ಕಳೆದುಕೊಂಡು ಬಟ್ಟ ಬಯಲಾಗುವ ನಿರ್ಮಾಣ ಸ್ಥಾನ.'[೧೬೩] ಅವಧೂತರಿಗೆ ಜೀವನ್ಮುಕ್ತಿ

ಸ್ಥಿತಿ ಪಡೆಯಲು ಯಾವ ಅವಸ್ಥೆಗಳು ಇಲ್ಲ. ಮುಖ್ಯವಾಗಿ ಬದುಕಿರುವವರು ಮುಕ್ತಿಯನ್ನು ಪಡೆದು ಜೀವನ್ಮುಕ್ತರಾಗುತ್ತಾರೆ. ಅವಧೂತರು ಮತ್ತು ಶರಣರು ದೈವ ಸಾಕ್ಷಾತ್ಕಾರ ಅಥವಾ ಇಷ್ಟದೈವದೊಡನೆ ಲೀನವಾಗುವ ಅನುಭವಕ್ಕಾಗಿ ಹಾತೊರೆಯುತ್ತಾರೆ. ಇಬ್ಬರ ಗಮ್ಯ ಒಂದೇ ಆದರೂ ಗಮನ ಬೇರೆ ಬೇರೆ ಮಾರ್ಗ ಭಿನ್ನ. ಶರಣರಲ್ಲಿ ಸ್ವಚ್ಛತೆ ಶುದ್ಧತೆಗೆ ಮೊದಲ ಆದ್ಯತೆ. ಅವಧೂತರಲ್ಲಿ ಮಲಿನತೆಯೆ ಎದ್ದು ತೋರುತ್ತದೆ. ಅವಧೂತರು ಮತ್ತು ಶರಣರ ಮಾರ್ಗದಲ್ಲಿ ಗುರುವಿಗೆ ಅಗ್ರಸ್ಥಾನ. ಪರಮಾತ್ಮನು ಗುರುವಿನ ರೂಪದಲ್ಲಿ ಬಂದಿರುವನೆಂದು ನಂಬಿರುತ್ತಾರೆ. ಗುರುವೆ ಸರ್ವಸ್ವ. ಶರಣರು ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿ 'ಕಾಯಕವೇ ಕೈಲಾಸ' ಎಂದು ಹೊಗಳಿ ಹಾಡಿದ್ದಾರೆ. ಅವಧೂತರು ಅಜಗರದಂತೆ ಕೆಲವೊಮ್ಮೆ ಇರುತ್ತಾರೆ. ಉಪನಿಷತ್ತಿನಲ್ಲಿ ಬರುವ ಹಕ್ಕಿಯಂತೆ ಎಲ್ಲವನ್ನು ನೋಡುತ್ತಾ ಸಾಕ್ಷಿ ಭಾವದಲ್ಲಿ ಜೀವಿಸುತ್ತಾರೆ. ಶರಣರಿಗೆ ಸಾಹಿತ್ಯ ರಚನೆಯ ಉದ್ದೇಶ ಇಲ್ಲದಿದ್ದರೂ ವಚನಗಳನ್ನು ಲೋಕ ಕಲ್ಯಾಣಕ್ಕಾಗಿ ರಚಿಸಿದ್ದಾರೆ. ಅವಧೂತರುಗಳು ಹೆಚ್ಚಾಗಿ ಮೌನಿಗಳು ಮತ್ತು ಕವಿಗಳಲ್ಲದವರು, ಅವರಲ್ಲಿ ಕೆಲವರು ಮಾತ್ರ ಸಾಹಿತ್ಯ ರಚಿಸಿದ್ದಾರೆ.

೩.೮.೩ ಕ್ರೈಸ್ತ ಧರ್ಮದಲ್ಲಿನ ಅವಧೂತ ಪರಂಪರೆ

ಯೇಸುಕ್ರಿಸ್ತನಿಂದಾಗ ಆರಂಭವಾದ ಯೇಶ್ವಾಂದೋಲನ ಸುಮಾರು ನಾಲ್ಕನೇ ಶತಮಾನದ ಹೊತ್ತಿಗೆ ರಾಜಧರ್ಮವಾಗಿ ಮಾರ್ಪಾಟಾಯಿತು. ರಾಜನ ಧರ್ಮವೇ ಪ್ರಜೆಗಳ ಧರ್ಮವೆಂಬಂತೆ ಕಾನ್‌ಸ್ಟೆಂಟಿನೋಪಲ್‌ನ ಆಡಳಿತದಲ್ಲಿ ಈ ಧರ್ಮಕ್ಕೆ ಅಧಿಕೃತ ಮನ್ನಣೆ ದೊರಕಿ, ರಾಜಾಶ್ರಮದಲ್ಲಿ ಈ ಧರ್ಮ ಬೆಳೆಯತೊಡಗಿದೆ.

ಆದರೂ ಕಾಲಾನುಕ್ರಮದಲ್ಲಿ ಅವಧೂತ ಪರಂಪರೆಗೆ ಸನಿಹವಾದ ಹೆರ್‌ಮಿಟಿಸಂ ಸೂಫಿಯಿಸಂನಂತೆಯಾಗಲಿ ಅಥವಾ ಹಿಂದು ಧರ್ಮದ ಅವಧೂತ ಪರಂಪರೆಯಂತೆ ಕ್ರೈಸ್ತ ಧರ್ಮದಲ್ಲಿ ಅವಧೂತ ಪರಂಪರೆ ಹಿಂದೂ ದೃಷ್ಟಿಯ ಪರಂಪರೆಯಂತೆ ಮೂಡಿ ಬರಲಿಲ್ಲ. ಕಾರಣ ಸಂಪ್ರದಾಯದಂತೆ ದೇವರನ್ನು ಆರಾಧಿಸಲು ಒಪ್ಪದವರನ್ನು ಶಿಕ್ಷಿಸಬೇಕೆಂಬ ಅಭಿಪ್ರಾಯವು ಕ್ರೈಸ್ತ ಧರ್ಮಸಭೆಯಲ್ಲಿ ಕಾಲದಿಂದ ಕಾಲಕ್ಕೆ ಬೆಳೆಯತೊಡಗಿತು. ಇದನ್ನು 'ಆಸೆಬೆಯಿಯಾ' (Asebeia) ಎನ್ನುತ್ತಾರೆ.[೧೬೪] ಇದರ ಪ್ರಕಾರ ಬಹಳ ಗಂಭೀರವಾದ ಅಪರಾಧವಾಗಿತ್ತು. ಒಂದು ಸಾಮಾಜಿಕವಾದ, ಶಿಸ್ತು ಬದ್ಧವಾದ, ಸಾಮೂಹಿಕವಾದ ಏಕರೂಪ ಆರಾಧನ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಹೆಚ್ಚಿನ ಒತ್ತನ್ನು ನೀಡಲಾಯಿತು. ಹಾಗಾಗಿ ಅವಧೂತ ಪರಂಪರೆಯನ್ನು ಕಾಣದಿದ್ದರೂ ವನದ ಚಿನ್ನಪ್ಪ, ಬೆನೆಡಿಕ್ಟ್ ಇತ್ಯಾದಿ ಪ್ರಮುಖರನ್ನು ಹೆಸರಿಸಬಹುದು.

೩.೮.೪ ಯೇಸು ಕ್ರಿಸ್ತ ಒಬ್ಬ ಅವಧೂತನೆ?

ಈ ಪ್ರಶ್ನೆಗೆ ಒಂದು ದೃಷ್ಟಿಕೋನದಿಂದ ನೋಡಿದಾಗ ಹೌದೆಂದು ಮತ್ತೊಂದು ದೃಷ್ಟಿಯಿಂದ ನೋಡಿದಾಗ ಇಲ್ಲವೆಂದು ಭಾಸವಾಗುತ್ತದೆ.

“ಆಕಾಶದ ಹಕ್ಕಿಗಳಿಗೆ ಗೂಡುಂಟು; ನರಿಗಳಿಗೆ ಬಿಲಗಳುಂಟು ಆದರೆ ದೇವ ಪುತ್ರನಿಗೆ ತಲೆ ಇಡಲು ಸ್ಥಳವಿಲ್ಲ.”[೧೬೫] ಎಂದು ಹೇಳುವುದರ ಮೂಲಕ ತಾನು ಯಾವುದಕ್ಕೂ ಅಂಟಿಕೊಂಡಿಲ್ಲ ಎಂಬುದನ್ನು ಸೂಚಿಸುತ್ತದೆ.

ಆದರೆ ಮತ್ತಾಯ ಹೇಳುವಂತೆ, “ಮೋಶೆಯ ಧರ್ಮಶಾಸ್ತ್ರವನ್ನಾಗಲಿ, ಪ್ರವಾದಿಗಳ ಪ್ರವಚನಗಳನ್ನಾಗಲಿ ರದ್ದು ಮಾಡಲು ನಾನು ಬಂದನೆಂದು ತಿಳಿಯಬೇಡಿ. ರದ್ದು ಮಾಡಲು ಅಲ್ಲ, ಅವುಗಳನ್ನು ಸಿದ್ಧಿಗೆ ತರಲು ಬಂದಿದ್ದೇನೆ.”[೧೬೬]

ಎನ್ನುವುದರ ಮೂಲಕ ತಾನು ಸಂಘಟಿತ ಧರ್ಮದ ಚೌಕಟ್ಟಿನೊಳಗಿದ್ದು, ಅದನ್ನು ಘೋಷಿಸಿ ಇತರರು ಪಾಲಿಸುವಂತೆ ಈ ಹೇಳಿಕೆ ಸೂಚಿಸುತ್ತದೆ. ಕರ್ನಾಟಕದ ಅವಧೂತ ಪರಂಪರೆಯಲ್ಲಿನ ಪ್ರಮುಖರಾದ ಕಡಕೋಳ ಸ್ವಾಮಿಯು ಸಹ ಜನಸಾಮಾನ್ಯರ ಕಷ್ಟಗಳನ್ನು ತೊಡೆದು ಹಾಕಲು ಯತ್ನಿಸಿದರು. ಪವಾಡಗಳನ್ನು ಮಾಡಿ ವಿಭೂತಿ ಪುರುಷ ಅಥವಾ ಸಿದ್ಧ ಪುರುಷನೆನಿಸಿಕೊಳ್ಳುವುದರ ಬದಲಾಗಿ ಜನಸಾಮಾನ್ಯರ ಗುಲಾಮಗಿರಿಗೆ ಮೂಲ ಕಾರಣ ಏನು ಎಂದು ಅರಿತು ಶೋಷಣೆ ರಹಿತ ಹೊಸ ಸಮಾಜವನ್ನು ರೂಪಿಸಲು ಅಹಿಂಸಾತ್ಮಕ ಆಂದೋಲನವನ್ನು ಆರಂಭಿಸಿದ. ಏಸು ಗುಡಿ ಪೂಜೆ ನಿರಾಕರಿಸಿ ಭಾವ ಪೂಜೆಗೆ ಅಗ್ರ ಸ್ಥಾನವನ್ನು ಕೊಟ್ಟು, ದೇವರನ್ನು ಗುಡಿಯಲ್ಲಿ ಹುಡುಕುವುದಕ್ಕಿಂತ ದೀನ ದಲಿತರಲ್ಲಿ ಹುಡುಕಬೇಕೆಂದು ಜನರಿಗೆ ಕರೆಯಿತ್ತ.

ಸಮಾಜದಲ್ಲಿ ಶೋಷಣೆಗೆ ಒಳಗಾದ ಅಂತ್ಯಜರಲ್ಲಿ, ದಲಿತರಲ್ಲಿ, ಬಡಬಗ್ಗರಲ್ಲಿ ಧೈರ್ಯತುಂಬಿ ಅವರ ಹಳೆಯ ಗೊಡ್ಡು ಸಂಪ್ರದಾಯಗಳನ್ನು ತ್ಯಜಿಸಿ ಮುಕ್ತ ವಾತಾವರಣದಲ್ಲಿ ಪರಸ್ಪರ ಪ್ರೀತಿಯಿಂದ ಬಾಳಲು ಪ್ರೇರೇಪಿಸಿದನು. ಸಾಮಾಜಿಕ ಬದಲಾವಣೆಗೆ ಮೂಲ ಕಾರಣನಾದ ಯೇಸುವನ್ನು ಅವರು ತಮ್ಮ ತಾರಕ, ವಿಮೋಚಕ, ನಾಕನೆಂದು ಉದ್ಘೋಷಿಸಿದರು.[೧೬೭]

ಅಂತಿಮವಾಗಿ ವಿಶಾಲವಾದ ದೃಷ್ಟಿಕೋನದಿಂದ ವಿಶ್ಲೇಷಿಸಿದಾಗ ಯೇಸು ಅವಧೂತರಂತೆ ಗೋಚರಿಸುತ್ತಾರೆ.

ಟಿಪ್ಪಣಿಗಳು

೧. ಹೆಚ್.ಜೆ. ರಾಮಯ್ಯಂಗಾರ್, '**ರಾಮಾನುಜರ ವಿಶಿಷ್ಟಾದ್ವೈತ ದರ್ಶನ**' ಪು. ೯

೨. ಡಾ. ಎಂ.ಎಂ. ಕಲಬುರ್ಗಿ, **ಮಾರ್ಗ II,** ಪುಟ ೩೨೯.

೩. ಡಾ. ಜಿ.ಎಂ. ಹೆಗಡೆ (ಸಂ) '**ಶ್ರೀ ಶಂಕರಾಚಾರ್ಯರ ಅದ್ವೈತ ದರ್ಶನ**' ಪುಟ ii

೪. ವೇದಾಂತ ಭಾರತಿ, '**ಶಂಕರ ಸಂದೇಶ**', ಪುಟ V

೫. ಸಿ. ಲಕ್ಷ್ಮೀನಾರಾಯಣನ್, '**ತರುಣ ಸಂನ್ಯಾಸಿ**', ಪುಟ ೧೪೧

೬. ಅದೇ ಪುಟ ೧೩೪

೭. ಅದೇ ಪುಟ ೧೩೫

೮. ಅದೇ ಪುಟ ೧೪೧

೯. ಮತ್ತಾಯ ೨೨:೨೧

೧೦. ಸಿ. ಲಕ್ಷ್ಮೀನಾರಾಯಣನ್, '**ತರುಣ ಸಂನ್ಯಾಸಿ**', ಪುಟ ೧೩೯

೧೧. ಯೊವಾನ್ನ ೧೪:೧೦

೧೨. ವಿಲ್ಯಾಂ ಮಾಡ್ತಾ, "**ಸರ್ವ ಧರ್ಮ ದರ್ಶನ**", ಪುಟ ೨೦೩

೧೩. ಬೆ. ಗೋ. ರಮೇಶ್, "**ಮಧ್ವಾಚಾರ್ಯರು**", ಪುಟ ೨೧

೧೪. ಅದೇ ಪುಟ ೩೧

೧೫. ಅದೇ ಪುಟ ೪೧

೧೬. 'ಮಧ್ವ ಮತದರ್ಶನ: **ಪ್ರಸನ್ನ ವೆಂಕಟದಾಸರು,** ಪುಟ ೪೭.

೧೭. Rev. Fr. H. Hosten, SJ, **"Antiquitics rom SanThonse"** p. 407

೧೮. ಲೂಕ ೧ : ೨೬-೩೪

೧೯. ನಾರಾಯಣ ಪಂಡಿತಾಚಾರ್ಯ, '**ಸುಮಧ್ವ ವಿಜಯ**' II-೧೮

೨೦. ಯೊವಾನ್ನ ೧.೧೪

೨೧. ಲೂಕ ೧:೩೫

೨೨. ನಾರಾಯಣ ಪಂಡಿತಾಚಾರ್ಯ, '**ಸುಮಧ್ವ ವಿಜಯ**', I-೫

೨೩. ಲೂಕ ೨:೪

೨೪. 'ಗೋವಿಂದ ಪೈ ಸಂಶೋಧನಾ ಸಂಪುಟ', ಪುಟ ೬೪೮

೨೫. Mundadan AM (ed.) **History of Christianity in India,** Vol. 1 p.100

೨೬. ಲೂಕ ೨:೨೨-೩೬

೨೭. ನಾರಾಯಣ ಪಂಡಿತಾಚಾರ್ಯ, '**ಸುಮಧ್ವವಿಜಯ**' III 2-14

೨೮. ಮತ್ತಾಯ ೨:೧-೧೯

೨೯. ನಾರಾಯಣ ಪಂಡಿತಾಚಾರ್ಯ, '**ಸುಮಧ್ವ ವಿಜಯ**', II ೬

೩೦. ಲೂಕ ೨: ೪೧-೪೫

೩೧. ನಾರಾಯಣ ಪಂಡಿತಾಚಾರ್ಯ, ೧ 'ಸುಮಧ್ವ ವಿಜಯ', II ೩೧-೩೪

೩೨. ಲೂಕ ೨:೪೬-೪೭

೩೩. ನಾರಾಯಣ ಪಂಡಿತಾಚಾರ್ಯ, '**ಸುಮಧ್ವ ವಿಜಯ**', III ೨೧-೩೦

೩೪. ಮತ್ತಾಯ ೩:೧೩

೩೫. ನಾರಾಯಣ ಪಂಡಿತಾಚಾರ್ಯ, '**ಸುಮಧ್ವ ವಿಜಯ**', VI-೩೩

೩೬. ಮತ್ತಾಯ ೩:೨

೩೭. ನಾರಾಯಣ ಪಂಡಿತಾಚಾರ್ಯ, **'ಸುಮಧ್ವ ವಿಜಯ'**, V 11

೩೮. ಮತ್ತಾಯ ೧೦:೨

೩೯. ನಾರಾಯಣ ಪಂಡಿತಾಚಾರ್ಯ, **'ಸುಮಧ್ವ ವಿಜಯ'**, XV-೧೨೮-೧೨೯

೪೦. ಲೂಕ ೨೪:೫೦-೫೧

೪೧. ಪ್ರೊ. ವ್ಯಾಸನ ಕೆರೆ ಪ್ರಭಂಜನಾಚಾರ್ಯರು, **'ಸುಮಧ್ವ ವಿಜಯ'**, ಪುಟ ೫೪೦

೪೨. C.N. Krishna Swamy Iyer, **Sri Madhwa and Mawism'**, p. 70

೪೩. ವಿಲ್ಯಾಂ ಮಾಡ್ತಾ, **'ಸರ್ವಧರ್ಮ ದರ್ಶನ'**, ಪುಟ. ೨೦೩

೪೪. ಮತ್ತಾಯ ೨೬:೨೬

೪೫. ಡಾ. ಐ. ಅಂತಪ್ಪ, **'ಉತ್ತರ ಕರ್ನಾಟಕದಲ್ಲಿ ಕ್ರೈಸ್ತ ಧರ್ಮದ ಉಗಮ'**, ಪುಟ ೪೪

೪೬. C. M. Padmanabhallur, 'Life & teathings of Sri Madwacharian' P. 80

೪೭. ಎಚ್ಚೆಸ್ಕೆ, **'ರಾಮಾನುಜ'**, ಪುಟ ೬೦

೪೮. ಅದೇ ಪು. ೧೦೫

೪೯. ಅದೇ ಪು. ೧೧೫

೫೦. ಅದೇ ಪು. ೨೦೨, 'ಸಾಪರಾನುರಕ್ತಿರೀಶ್ವರೇ ನಾರಾದ ಭಕ್ತಿಸೂತ್ರ'

೫೧. ಅದೇ ಪುಟ. ೨೦೪

೫೨. ಹೆಚ್.ಜೆ. ರಾಮಯ್ಯಂಗಾರ್, **'ರಾಮಾನುಜರ ವಿಶಿಷ್ಟಾದ್ವೈತ ದರ್ಶನ'** ಪು. ೧೭೮

೫೩. ವಿಲ್ಲಾಂ ಮಾಡ್ತಾ, **'ಸರ್ವಧರ್ಮ ದರ್ಶನ'** ಪುಟ. ೨೦೪

೫೪. ಮತ್ತಾಯ ೬:೩೩

೫೫. ಯೊವಾನ್ನ ೧೦:೩೦

೫೬. ಹೆಚ್.ಜೆ. ರಾಮಯ್ಯಂಗಾರ್, **'ರಾಮಾನುಜರ ವಿಶಿಷ್ಟಾದ್ವೈತ ದರ್ಶನ'** ಪು. ೧೭೯

೫೭. ಮತ್ತಾಯ ೧೧:೨೮

೫೮. ಹೆಚ್.ಜೆ. ರಾಮಯ್ಯಂಗಾರ್, **'ರಾಮಾನುಜರ ವಿಶಿಷ್ಟಾದ್ವೈತ ದರ್ಶನ'**, ಪುಟ ೧೭೯

೫೯. ಮತ್ತಾಯ ೨೫:೩೦

೬೦. Reynolds R. Exstorom, **'The New Concine Catholic Directory'** P. 224

೬೧. ರಹಮತ್ ತರಿಕೆರೆ (ಸಂ), **'ಕ.ವಿ.ವಿ. ವಿಶ್ವಕೋಶ ೩, ಧರ್ಮ'** ಪುಟ. ೧೪೮

೬೨. ಅದೇ ಪುಟ ೧೪೯.

೬೩. ಜೆ.ವಿ. ಆನಂದ ಮೂರ್ತಿ, **ಬುದ್ಧ ತೋರಿದ ಮಾರ್ಗ**, ಪುಟ. ೩

೬೪. ಅದೇ ಪುಟ ೪

೬೫. ಅದೇ ಪುಟ ೪

೬೬. ಅದೇ ಪುಟ ೫

೬೭. ಅದೇ ಪುಟ

೬೮. 'ಕೀರ್ತನೆಗಳು' ೧೮:೪೦

೬೯. ಮತ್ತಾಯ ೫-೭

೭೦. Holgar Kerstein, **'Jesus lived in India'** P. 68

೭೧. ಮತ್ತಾಯ ೭:೧೨

೭೨. Holgar Kerstein, **'Jesus Lived in India'** P. 70

೭೩. ಮತ್ತಾಯ ೫:೨೨

೭೪. ಮತ್ತಾಯ ೫:೩೯-೪೪

೭೫. ಯೊವಾನ್ನ ೧೪:೧೬

೭೬. ಮತ್ತಾಯ ೧೫:೧೬-೨೦

೭೭. ಮತ್ತಾಯ ೨೫:೨೫

೭೮. ಮತ್ತಾಯ ೫:೧೮

೭೯. ಯೊವಾನ್ನ ೧೦:೧೧

೮೦. ಮತ್ತಾಯ ೪ನೇ ಅಧ್ಯಾಯ

೮೧. ಮತ್ತಾಯ ೧೫:೧೪

೮೨. ಲೂಕ ೧೫:೧೧-೩೨

೮೩. ಯೊವಾನ್ನ ೨:೧-೧೧

೮೪. ಲೂಕ ೧:೨೮-೩೫

೮೫. Holgar Kerstein, **'Jesus lived in India'** P. 114.

೮೬. ಲೂಕ ೨: ೨೮೩೨.

೮೭. ಲೂಕ ೨:೪೬-೪೭

೮೮. ಯೊವಾನ್ನ ೫:೨೪

೮೯. ಯೊವಾನ್ನ ೧೧:೨೫.

೯೦. ರೆವರೆಂಡ್ ಉತ್ತಂಗಿ ಚೆನ್ನಪ್ಪ, **'ಸರ್ವಜ್ಞನ ವಚನಗಳು'**, ಪುಟ ೪೮

೯೧. ಡಾ. ಎಂ. ವಿ. ಜಯಚಂದ್ರ, **ಭಗವಾನ್ ಮಹಾವೀರ**, ಪುಟ. ೫

೯೨. ಅದೇ ಪುಟ ೧೨

೯೩. ಅದೇ ಪುಟ ೧೬

೯೪. ಶ್ರೀ ಬನ್ನಂಜೆ ಗೋವಿಂದಾಚಾರ್ಯ, ಸಮ್ಮೇಳನಾಧ್ಯಕ್ಷರ ಭಾಷಣ, ದಾಜಸಾಹಿತ್ಯ ಸಮ್ಮೇಳನ

೯೫. ಡಾ. ಎಸ್.ಎಫ್. ಜಕಬಾಳ, **ಕನಕದಾಸರು**, ಪುಟ ೧

೯೬. ಅದೇ ಪುಟ ೨

೯೭. ಅದೇ ಪುಟ ೨

೯೮. ಅದೇ ಪುಟ ೪

೯೯. ಡಾ. ಎಚ್.ಜೆ. ಲಕ್ಕಪ್ಪ ಗೌಡ, **'ಕನಕದಾಸರು'**, ರಕ್ಷಾಪುಟ

೧೦೦. ಡಾ. ಐ. ಅಂತಪ್ಪ, **'ಬೆಂಗಳೂರು ಉಗಮ'**... ಪುಟ ೪೦

೧೦೧. 'ಕನಕ ಸಾಹಿತ್ಯ ದರ್ಶನ' ಸಂಪುಟ ೪, ಕೀರ್ತನ ೨೩, ಪುಟ ೯೧

೧೦೨. ಯೊವಾನ್ನ ೧೦:೧೧

೧೦೩. ಮತ್ತಾಯ ೨೭:೫೧

೧೦೪. 'ಕನಕ ಸಾಹಿತ್ಯ ದರ್ಶನ' ಸಂಪುಟ ೪, ಕೀರ್ತನೇ ೧೯೭, ಪುಟ ೩೮೦

೧೦೫. ಸ್ವಾಮಿ ಡಾ. ಐ. ಅಂತಪ್ಪ, **'ಬೆಂಗಳೂರು ಉಗಮ'**, ಪುಟ ೪೧

೧೦೬. ಮತ್ತಾಯ ೧೬:೨೪

೧೦೭. 'ಕನಕ ಸಾಹಿತ್ಯ ದರ್ಶನ' ಸಂಪುಟ ೪, ಕರ್ತನೆ ೨೪, ಪುಟ ೯೩

೧೦೮. 'ಕನಕ ಸಾಹಿತ್ಯ ದರ್ಶನ' ಸಂಪುಟ ೪, ಕೀರ್ತನೆ ೨೪, ಪುಟ ೯೩

೧೦೯. ಮಾರ್ಕ ೯:೩೫

೧೧೦. 'ಕನಕ ಸಾಹಿತ್ಯ ದರ್ಶನ' ಸಂಪುಟ ೪, ಕೀರ್ತನೆ ೨೮ ಪುಟ ೯೯
೧೧೧. ಲೂಕ ೯:೫೮
೧೧೨. 'ಕನಕ ಸಾಹಿತ್ಯ ದರ್ಶನ' ಸಂಪುಟ ೪, ಕೀರ್ತನೆ ೨೮, ಪುಟ. ೧೦೧
೧೧೩. ಯೊವಾನ್ನ ೧೪:೧
೧೧೪. 'ಕನಕ ಸಾಹಿತ್ಯ ದರ್ಶನ', ಸಂಪುಟ ೪, ಕೀರ್ತನೆ ೩೯, ಪುಟ ೧೦೯
೧೧೫. ಮುತ್ತಾಯ ೭:೬
೧೧೬. 'ಕನಕ ಸಾಹಿತ್ಯ ದರ್ಶನ': ಸಂಪುಟ ೪, ಕೀರ್ತನೆ ೫೧, ಪುಟ ೧೪೨
೧೧೭. ಲೂಕ ೧೨:೧೬-೨೧
೧೧೮. 'ಕನಕ ಸಾಹಿತ್ಯ ದರ್ಶನ' ಸಂಪುಟ ೪, ಕೀರ್ತನೆ ೫೯, ಪುಟ ೧೫೨
೧೧೯. ಲೂಕ ೧೫: ೧೧-೩೨
೧೨೦. 'ಕನಕ ಸಾಹಿತ್ಯ ದರ್ಶನ' ಸಂಪುಟ ೪, ಕೀರ್ತನೆ ೬೮, ಪುಟ. ೧೬೭
೧೨೧. ಲೂಕ ೩: ೧೧-೧೪
೧೨೨. 'ಕನಕ ಸಾಹಿತ್ಯ ದರ್ಶನ' ಸಂಪುಟ ೪, ಕೀರ್ತನೆ ೭೦, ಪುಟ ೧೭೧
೧೨೩. ಮಾರ್ಕ ೩:೩೩
೧೨೪. 'ಕ.ಸಾ.ದ.' ಸಂ-೪, ಕೀರ್ತನೆ ೭೩, ಪುಟ ೧೭೭
೧೨೫. ಮತ್ತಾಯ ೧೦:೭
೧೨೬. 'ಕ.ಸಾ.ದ.' ಸಂ-೪, ಕೀರ್ತನೆ ೭೬, ಪುಟ ೧೮೨
೧೨೭. ಯೊವಾನ್ನ ೧೬:೩೩
೧೨೮. 'ಕ.ಸಾ.ದ.' ಸಂ-೪, ಕೀರ್ತನೆ ೭೯, ಪುಟ ೧೮೬
೧೨೯. ಮತ್ತಾಯ ೫-೨೭
೧೩೦. 'ಕ.ಸಾ.ದ.' ಸ-೪, ಕೀರ್ತನೆ ೯೨, ಪುಟ ೨೦೪
೧೩೧. ಯೊವಾನ್ನ ೧೪:೧-೨
೧೩೨. 'ಕ.ಸಾ.ದ.' ಸ-೪, ಕೀರ್ತನೆ ೯೩, ಪುಟ ೨೦೫
೧೩೩. ಲೂಕ ೮:೧೧-೧೫
೧೩೪. 'ಕ.ಸಾ.ದ.' ಸ-೪, ಕೀರ್ತನೆ ೯೫, ಪುಟ ೨೧೧
೧೩೫. ಮತ್ತಾಯ ೬:೧೯
೧೩೬. ಮತ್ತಾಯ ೧೭:೭೦
೧೩೭. 'ಕ.ಸಾ.ದ.' ಸ-೪, ಕೀರ್ತನೆ ೧೦೩, ಪುಟ. ೨೨೦
೧೩೮. ಲೂಕ ೧೨:೧೫
೧೩೯. 'ಕ.ಸಾ.ದ.' ಸ-೪, ಕೀರ್ತನೆ ೧೨೬, ಪುಟ ೨೫೭
೧೪೦. ಮುತ್ತಾಯ ೬:೨೨
೧೪೧. 'ಕ.ಸಾ.ದ.' ಸ-೪, ಕೀರ್ತನೆ ೧೨೭, ಪುಟ. ೨೫೯
೧೪೨. ಮತ್ತಾಯ ೧೩:೪೫
೧೪೩. 'ಕ.ಸಾ.ದ.' ಸ-೪, ಕೀರ್ತನೆ ೧೭೮, ಪುಟ ೩೪೨
೧೪೪. ಮತ್ತಾಯ ೫:೨೨
೧೪೫. 'ಕ.ಸಾ.ದ.' ಸ-೪ ಕೀರ್ತನೆ ೧೫೭, ಪುಟ ೩೦೭
೧೪೬. ಮತ್ತಾಯ ೧೮:೭೦

೧೪೮. 'ಕ.ಸಾ.ದ.' ೪, ಕೀರ್ತನೆ ೧೭೭, ಪುಟ ೩೪೧

೧೪೯. ಮತ್ತಾಯ ೯:೧೩

೧೫೦. 'ಕ.ಸಾ.ದ.' ೪, ಕೀರ್ತನೆ ೧೮೦, ಪುಟ ೩೪೫

೧೫೧. ಮತ್ತಾಯ ೫:೩೭

೧೫೨. 'ಕ.ಸಾ.ದ.' ೪, ಕೀರ್ತನೆ ೨೦೧, ಪುಟ ೩೮೯

೧೫೩. ಮತ್ತಾಯ ೬:೬

೧೫೪. 'ಸಂಸ್ಕೃತ-ಕನ್ನಡ ಶಬ್ದಕೋಶ', ಸಂಪಾದಕ ಚಕ್ರವರ್ತಿ ಶ್ರೀನಿವಾಸ ಗೋಪಾಲಾ ಚಾರ್ಯ

೧೫೫. 'ನಿಘಂಟು', ಕನ್ನಡ ಸಾಹಿತ್ಯ ಪರಿಷತ್ ಭಾಗ ೧-ಪುಟ ೪೪೫

೧೫೬. 'ಸಂಸ್ಕೃತ-ಕನ್ನಡ ಸುವರ್ಣ ಕೋಶ'

೧೫೭. 'ಕನ್ನಡ-ಇಂಗ್ಲಿಷ್ ಡಿಕ್ಷನರಿ', ರೆವರೆಂಡ್ ಕಿಟ್ಟೆಲ್

೧೫೮. 'ಕನ್ನಡ-ಕನ್ನಡ ಶಬ್ದಕೋಶ', ಅಶ್ವತ್ಥ ನಾರಾಯಣರಾವ್

೧೫೯. ಅ.ರಾ.ಸೆ (ಸ) 'ಪರಮಾರ್ಥ ಪದಕೋಶ'

೧೬೦. ಡಾ. ಬಸವಲಿಂಗ ಸೊಪ್ಪಿನ ಮಠ, ಕೊಡೆಕಲ್ಲು ವಚನ ವಾಕ್ಯ, ಪ್ರಸ್ತಾವನೆ ಪುಟ ೫

೧೬೧. ಡಾ. ಶಿವಾನಂದ ವಿರಕ್ತ ಮಠ, 'ಪ್ರೌಢದೇವರಾಯನ ಕಾಲದ ಸಾಹಿತ್ಯ' ಪುಟ ೩೧

೧೬೨. ರಹಮತ್ ತರೀಕೆರೆ (ಸಂ) **ಕವಿವಿ ವಿಶ್ವಕೋಶ ಧರ್ಮ**, ಪುಟ ೧

೧೬೩. ಎಚ್. ತಿಪ್ಪೇಸ್ವಾಮಿ, **ಶರಣರು ಮತ್ತು ಸಂತರು**, ಪುಟ. ೪೫

೧೬೪. ರಹಮತ್ ತರೀಕೆರೆ (ಸಂ) **ಕವಿವಿ, ವಿಶ್ವಕೋಶ 'ಧರ್ಮ'**, ಪುಟ ೪

೧೬೫. ಮತ್ತಾಯ ೮:೨೦

೧೬೬. ಮತ್ತಾಯ ೫:೧೭

೧೬೭ ವಿಲ್ಯಾಂ ಮಾಡ್ತಾ, **'ಸರ್ವಧರ್ಮ ದರ್ಶನ'**, ಪುಟ. ೨೦೪.

ಅಧ್ಯಾಯ - ೪

೪.೧ ಧಾರ್ಮಿಕ ಸಂವಾದದ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಯೇಸುಕ್ರಿಸ್ತ ಮತ್ತು ಬಸವಣ್ಣ

ಯೇಸುಕ್ರಿಸ್ತ ಹಾಗೂ ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಖಿಕ ಸಂವಾದದಲ್ಲಿನ ಸಮಾನ ಚಿಂತನೆಗಳ ಸ್ವರೂಪಗಳನ್ನು ಗಮನಿಸಿದಾಗ, ಕೆಲವು ಧಾರ್ಮಿಕ ಸಂವಾದದ ಪರಿಭಾಷೆಗಳ ವ್ಯಾಖ್ಯಾನವನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ.

"ಧರ್ಮ' ಎಂಬ ಪದ ಭಾರತೀಯ ದರ್ಶನ, ನೀತಿ ಮತ್ತು ಸಾಮಾಜಿಕ ವ್ಯವಸ್ಥೆಗೆ ನೇರವಾಗಿ ಸಂಬಂಧಿಸಿದ್ದೇನೋ ಹೌದು, ಇಂಗ್ಲಿಷಿನ "ರಿಲಿಜನ್" ಪದವು "ಧರ್ಮ" ಪದಕ್ಕೆ ವ್ಯಾಪ್ತಿಯಲ್ಲಿ ಮತ್ತು ಒಳಾರ್ಥಗಳಲ್ಲಿ ಸರಿಸಮಾನ ಪದವಲ್ಲ. 'ಧರ್ಮ' ಎಂಬ ಪದಕ್ಕೆ ಸಂವಾದಿಯಾಗಿರುವ 'ರಿಲಿಜನ್' ಎಂಬ ಪದವು, ಲ್ಯಾಟಿನ್ ಭಾಷೆಯ 'ರಿಲಿಗೋ' ಪದದಿಂದ ಬಂದಿದೆ. ಇಂಗ್ಲಿಷಿನ "Religion" ಪದಕ್ಕಿರುವ ಅರ್ಥವ್ಯಾಪ್ತಿಯು ಸಂಸ್ಕೃತ ಭಾಷೆಯ "ಧರ್ಮ" ಪದಕ್ಕಿಂತ ಸಂಕುಚಿತವಾಗಿದ್ದು, ಧಾರ್ಮಿಕತೆಗೆ (Religion) ಸಂಬಂಧಿಸಿದಂತೆ ಹೆಚ್ಚು ನಿರ್ದಿಷ್ಟವಾಗಿದೆ ಎನ್ನಬಹುದು. 'ಧರ್ಮ' ಎಂಬ ಪದವು ಸಂಸ್ಕೃತದ ಮೂಲಧಾತು, ಧೃ ಎಂಬುದರಿಂದ ಬಂದಿದೆ. 'ಧೃ' ಎಂದರೆ ಸಂಸ್ಕೃತದಲ್ಲಿ 'ಧರಿಸು' (Hold), ಎತ್ತಿ ಹಿಡಿ (ophold) ಅಥವಾ ಬೆಂಬಲಿಸು (Support) ಎಂದಾಗುತ್ತದೆ. ಯಾವುದು ಇನ್ನೊಂದನ್ನು ಎತ್ತಿ ಹಿಡಿಯುತ್ತದೆಯೋ ಅಥವಾ ಇನ್ನೊಂದಕ್ಕೆ ಆಧಾರವಾಗಿ ಅದನ್ನು ರಕ್ಷಿಸುವುದೋ ಅದು ಧರ್ಮ ಎನ್ನಿಸಿಕೊಳ್ಳುತ್ತದೆ. ಧರ್ಮವು ವಿಶ್ವದ ಆಧಾರವಾಗಿದೆ. "ಧರ್ಮೋ ರಕ್ಷತಿ ರಕ್ಷಿತಃ" (ಧರ್ಮವನ್ನು ರಕ್ಷಿಸುವವರನ್ನು, ಧರ್ಮವು ರಕ್ಷಿಸುತ್ತದೆ) ಎಂದು ಮಹಾಭಾರತದಲ್ಲಿ ವ್ಯಾಸರು ಹೇಳುತ್ತಾರೆ.

ಸಂಸ್ಕೃತದಲ್ಲಿ "ಧರ್ಮ" ಶಬ್ದಕ್ಕೆ ಅನೇಕ ಅರ್ಥಗಳಿವೆ. ಮತಧರ್ಮ, ಸಾಂಪ್ರದಾಯಿಕ ಆಚರಣೆಗಳು, ಕಾನೂನು, ರೂಢಿ, ಪದ್ಧತಿ, ನಿಬಂಧನೆ, ಧಾರ್ಮಿಕ ಅಥವಾ ನೈತಿಕ ಪುಣ್ಯ, ಒಳ್ಳೆಯ ಕಾರ್ಯಗಳು, ಕರ್ತವ್ಯ, ನಿಯಮಿತವಾದ ಕಾರ್ಯಶೀಲತೆ, ಋಜುತ್ವ, ನ್ಯಾಯ, ಧರ್ಮಶ್ರದ್ಧೆ, ಯುಕ್ತತೆ, ಸರ್ವಸಮತೆ, ಸಮದೃಷ್ಟಿ, ಶಿಷ್ಟಾಚಾರ, ನೈತಿಕತೆ, ಸ್ವರೂಪ, ಪ್ರವೃತಿ, ಚಾರಿತ್ರ್ಯ, ಮೂಲಭೂತ ಲಕ್ಷಣ, ಯಜ್ಞ, ವರ್ತನೆ, ಪುರುಷಾರ್ಥ ಹೀಗೆ ಅನೇಕ ಅರ್ಥಗಳನ್ನು ಧರ್ಮ ಎಂಬ ಪರಿಕಲ್ಪನಾತ್ಮಕ ಶಬ್ದಕ್ಕಿದೆ.[೧]

ಧರ್ಮವು ಮಾನವನ ಅಂತರಂಗದ ಶಾಶ್ವತ ಆವಶ್ಯಕತೆಯಾಗಿದೆ. ಬೆಂಕಿಯ ಧರ್ಮ ಉಷತೆ; ನೀರಿನ ಧರ್ಮ ಆರ್ದ್ರತೆ, ಹಾಗೆಯೇ ಮನುಷ್ಯನ ಧರ್ಮವು ಅಂತರ್ಮುಖತೆ. ಮೊಟ್ಟಮೊದಲು ಮಾನವ

ಜೀವನದಲ್ಲಿ ದೇವತೆಗಳ ಆರಾಧನೆಯ ಭಾವನೆ ಅಂಕುರಿಸಿತು. ನಿಸರ್ಗದ ವಿರಾಟ್ ಶಕ್ತಿಗಳು ವಿಧ್ವಂಸಕಾರಿಯಾಗದೆ.' ರಕ್ಷಕರಾಗಲೆಂದು ಅವುಗಳಿಗೆ ಹೆಸರಿಟ್ಟು, ದೇವತೆಗಳೆಂದು ಕರೆದು ಮನುಷ್ಯ ಪೂಜಿಸತೊಡಗಿದ. ದೇವರ ಕಲ್ಪನೆ, ರಕ್ಷಕನ ಅರಿವು ಮೂಡಿದ್ದು ಈ ಹಿನ್ನೆಲೆಯಲ್ಲಿ. ದೇವರು-ಪೂಜೆ-ಮಂದಿರಗಳು ಇಂಥ ಹಿನ್ನೆಲೆಯಲ್ಲೆ ನಾಗರೀಕತೆಯ ಬೇರೆಬೇರೆ ಹಂತಗಳಲ್ಲಿ ವಿಕಾಸಗೊಂಡವು.

“ಮನುಷ್ಯ ನೇರವಾಗಿ ದೈವದ, ದೇವತೆಗಳ ಪದತಲದಲ್ಲಿ ಸಮರ್ಪಿಸಿಕೊಂಡ; ರಕ್ಷಣೆಗಾಗಿ, ವಿಶ್ವಾಸದ ಅಭಯಕ್ಕಾಗಿ ಯಾಚಿಸಿಕೊಂಡ. ಇಂತಹ ಮುಗ್ಧತೆಯು ಮುಂದಿನ ಮಧ್ಯಕಾಲದ ನಾಗರಿಕ ಯುಗದಲ್ಲಿ ಮಾಯವಾಗಿ ಧರ್ಮದ ಸ್ವರೂಪವು, ಜಟಿಲವೂ, ಸಂದಿಗ್ಧವೂ ಆದ ಸತ್ಯವನ್ನು ಅಲ್ಲಗಳೆಯಲಾಗುವುದಿಲ್ಲ. ಆಗ ಕ್ರಮೇಣ ವಿವಿಧ ದರ್ಶನಗಳು, ವಿವಿಧ ಧರ್ಮಗಳು ಸಮಾಜದಲ್ಲಿ ಹಬ್ಬತೊಡಗಿದವು.

ಅಂತೆಯೆ, ಧರ್ಮದ ಹೆಸರಿನಲ್ಲಿ ಹೊರಬಂದ ಜಾತಿಗಳು ಮತಗಳು ಮನುಷ್ಯನ ಹೃದಯದಲ್ಲಿ ದ್ವೇಷದ, ವೈಷಮ್ಯದ ಬೀಜಗಳನ್ನು ಬಿತ್ತಿದವು. ಮತೀಯ ಸಮರಗಳು, ಜಾತೀಯ ಜಗಳಗಳು ಭೂಮಿಯಲ್ಲಿ ನಿತ್ಯ ಅಸುಖವನ್ನು ತಂದೊಡ್ಡಿದವು. ಮಾನವ ಸಂಕುಚಿತಬುದ್ಧಿಯುಳ್ಳವನಾಗಿ ತನ್ನ ಜನಾಂಗ, ಕುಲ, ದೇಶ, ಭಾಷೆ, ಮುಂತಾದವುಗಳ ಬಗೆಗಿನ ದುರಭಿಮಾನದಿಂದ ಉನ್ಮತ್ತನಾಗಿ ಕದನದಲ್ಲಿ ನಿರತನಾದ”.[೨]

ಇಂತಹ ಸಂದರ್ಭದಲ್ಲೆಲ್ಲ ಆಯಾಯಾ ಸಮಾಜದಲ್ಲಿ, ಆಯಾಯಾ ಕಾಲದಲ್ಲಿ ಸಮಾಜ ಸುಧಾರಕರು, ಶಾಂತಿ ಸಾಧಕರು ತಲೆಯೆತ್ತಿ ಧಾರ್ಮಿಕ ಬದುಕು ಸಹನೀಯವಾಗುವಂತೆ ಮಾಡುತ್ತಲೇ ಇದ್ದಾರೆ. ಅಂತಹ ಮಹಾತ್ಮರು ಬದುಕಿನ ಎಲ್ಲಾ ಸ್ತರಗಳಲ್ಲಿ ಅಂಟಿರುವ ಕಲ್ಮಶವನ್ನು ನೀಗಿ ಹಸನು ಮಾಡಿ ಮನುಷ್ಯನ ಮನಸ್ಸನ್ನು ಹೆಚ್ಚು ಹೆಚ್ಚು ಅಂತರ್ಮುಖಿಯಾಗಿ ಮಾಡಿ ಆಚರಣೆಗಳಿಂದ ಪರಿಶುದ್ಧರಾಗುವಂತೆ ದಿವ್ಯ ಚಿಂತನೆಗಳನ್ನು ತುಂಬುತ್ತಾರೆ. ಧರ್ಮವು ಜೀವನದ ಬಗೆಗೆ ಗೌರವ ಮತ್ತು ಆದರಗಳನ್ನು ಹುಟ್ಟಿಸುತ್ತದೆ. ಆದ್ದರಿಂದ ಬದುಕಿಗೆ ಬೆಲೆ ತರುವ ಹೋರಾಟಕ್ಕೊಂದು ಅರ್ಥ ಕೊಡುವ, ಜೀವನವನ್ನು ವ್ಯವಸ್ಥಿತಗೊಳಿಸಿ ಭೂಮಿಯನ್ನು ಜೀವಿಸಲಿಕ್ಕೆ ಅರ್ಹಗೊಳಿಸುವ ದಿವ್ಯಶಕ್ತಿ ಧರ್ಮಕ್ಕಿದೆ”.[೩]

ಈ ಹಿನ್ನೆಲೆಯಲ್ಲಿ ೫೦ ಶತಮಾನಗಳ ಹಿಂದೆ ಪ್ಯಾಲೆಸ್ತೈನ್ ದೇಶದಲ್ಲಿ ಯೇಶ್ವಾಂದೋಲನವನ್ನು ಆರಂಭಿಸಿದ ಯೇಸುಕ್ರಿಸ್ತ ಹಾಗೂ ೧೨ನೇ ಶತಮಾನದ ಕರುನಾಡಿನಲ್ಲಿ ನೂರಾರು ಶರಣರ ನಡುವೆ ನಾಯಕತ್ವ ವಹಿಸಿ, ಸಮಾಜೋ-ಧಾರ್ಮಿಕ ಕ್ರಾಂತಿಯ ಆರಂಭಿಸಿದ ಬಸವಣ್ಣರ ನಡುವಿನ ಸಮಾನ ಚಿಂತನೆಗಳ ಬಗೆಗಿನ ನೋಟವನ್ನು ಪ್ರಸ್ತುತ ಅಧ್ಯಾಯದರಲ್ಲಿ ಕಾಣಬಹುದಾಗಿದೆ.

ನಾವಿಂದು ಜೀವಿಸುವ ಸಮಾಜ ಒಂದು ಬಗೆಯ ಸಮಾಜವಾಗಿದೆ. ದೇಹವೆ ದೇಗುಲ, ‘ಕಾಯಕವೇ ಕೈಲಾಸ’ ಎಂದು ಉದ್ಘೋಷಿಸುತ್ತೇವೆ; ಆದರೆ ಪರಸ್ತ್ರೀ ಪುರುಷರೊಡನೆ, ಕ್ಷಣಿಕ ಸುಖಕ್ಕಾಗಿ ಅಥವಾ

ಲೌಕಿಕ ಲಾಭಕ್ಕಾಗಿ ವ್ಯಭಿಚಾರ ಸಂಗದಲ್ಲಿ ಬಾಳುತ್ತೇವೆ. ಪ್ರಜಾಪ್ರಭುತ್ವದಲ್ಲಿ ನಾವೆಲ್ಲರು ಜಾತ್ಯತೀತರು ಎಂದು ಸಾರುತ್ತೇವೆ. ಆದರೆ ದೈನಂದಿನ ಜೀವನದಲ್ಲಿ ಎಲ್ಲವೂ ನಡೆಯುವುದು ಜಾತೀಯತೆಯ ಆಧಾರದ ಮೇಲೆಯೆ. ಇದು ನಮ್ಮ ಹಾಗೂ ನಮ್ಮ ಸಮಾಜದ ಒಂದು ಮುಖ."[೪]

ನಮ್ಮ ಅಕ್ಕ ಪಕ್ಕದಲ್ಲಿರುವ ಧರ್ಮಗಳ, ದರ್ಶನಗಳಕುರಿತು ನಮ್ಮ ತಿಳಿವು, ಓದು ಅಧ್ಯಯನಗಳು, ಬಹುಮಟ್ಟಿಗೆ ಶೂನ್ಯ. ಇದೇ ನಮ್ಮ ಅರಿವಾಗಿದೆ ಅರ್ಥಾತ್ ನಮ್ಮ ಸಾಮಾಜಿಕ- ಸಾಂಸ್ಕೃತಿಕ ಸಂದರ್ಭಕ್ಕೂ ನಮ್ಮ ವೈಯಕ್ತಿಕ ಬದುಕಿಗೂ ಸಂಬಂಧಗಳೇ ಇಲ್ಲದೆ ನಾವಿಂದು ಕೂಪ ಮಂಡೂಕರಂತೆ ಬಾಳುತ್ತಿದ್ದೇವೆ. ಇದು ನಮ್ಮ ಹಾಗೂ ನಮ್ಮ ಸಮಾಜದ ಇನ್ನೊಂದು ಕರಾಳ ಮುಖವೇ ಸರಿ."

ಈ ರೀತಿಯ ವೈಯಕ್ತಿಕ ಹಾಗೂ ಸಾಮಾಜಿಕ ಕಂದರಗಳಿಂದಾಗಿ ಜಾತೀಯತೆ, ಮೂಲಭೂತವಾದ, ಅನ್ಯಧರ್ಮ-ಅಸಹಿಷ್ಣುತೆಗಳು ದಿನೇ ದಿನೇ ದೈತ್ಯಾಕಾರವಾಗಿ ಬೆಳೆಯಲಾರಂಭಿಸಿವೆ."[೫] ನಮ್ಮ ಇಂದಿನ ಪರಿಸ್ಥಿತಿ ಯೇಸು-ಬಸವರ ಕಾಲದ ಪರಿಸ್ಥಿತಿಗಳಿಗಿಂತ ಭಿನ್ನವಾಗೇನಿಲ್ಲ. ಈ ಅಧ್ಯಾಯದಲ್ಲಿ ಈ ಇಬ್ಬರು ಮಹಾತ್ಮರು ಜಗದ್ ಜ್ಯೋತಿ ಸಮಾನ ಚಿಂತನೆಗಳನ್ನು ಸೂಕ್ಷ್ಮವಾಗಿ ನೋಡಲಾಗಿದೆ.

ಹೀಗೆ ಅಧ್ಯಾಯದ ಪುಟ ಪುಟಗಳಲ್ಲಿ ಯೇಸುಕ್ರಿಸ್ತ ಹಾಗೂ ಬಸವಣ್ಣನವರ ಬೋಧನೆಗಳಲ್ಲಿ ಧಾರ್ಮಿಕ ಸಂವಾದದಲ್ಲಿನ ಸಮಾಜದ ಚಿಂತನೆಗಳ ಸ್ವರೂಪವನ್ನು ವಿವರಿಸಿ ಯೇಸುವಿನ ಪರ್ವತ ಮೇಲಿನ ಪ್ರಸಂಗ ಹಾಗೂ ಬಸವಣ್ಣನ ಅನುಭವ ಮಂಟಪದತ್ತ ಒಳನೋಟವನ್ನು ಹರಿಸುವುದರ ಕಡೆ ನಿಮ್ಮನ್ನು ಕರೆದೊಯ್ಯಲು ಇಚ್ಛಿಸುತ್ತೇನೆ.

೪.೨ ಯೇಸುಕ್ರಿಸ್ತರ ಜೀವನಾಶಯ

ಯೇಸುಕ್ರಿಸ್ತ ಇಂದು ಜಗತ್ತಿನ ಕೋಟ್ಯಂತರ ಜನರ ಆರಾಧ್ಯ ದೈವ. ಪರಂಪರೆಯಿಂದ ಬಂದ ಆತನ ದೇವತ್ವದ ಕಲ್ಪನೆ ಕ್ರೈಸ್ತರೊಳಗೆ ಆಳವಾಗಿ ಬೇರೂರಿದೆ. ಯೇಸುಕ್ರಿಸ್ತ ಒಬ್ಬ ಶಕಪುರುಷ. ತನ್ನ ಜನನದಿಂದಾಗಿ ಇಡೀ ಮನುಕುಲದ ಚರಿತೆಯನ್ನೆ ಇಬ್ಭಾಗಿಸಿ ಕ್ರಿಸ್ತಶಕ ಮತ್ತು ಕ್ರಿಸ್ತಪೂರ್ವ ಎಂದೂ ರೂಪಿಸಿದ ದೇವ ಮಾನವನೇ ಹೌದು!

ಇಂತಹ ದೇವ-ಮಾನವ ಯೇಸುಕ್ರಿಸ್ತನ ಜೀವನಾಶಯ ಆಕ್ಷತೆಗಳು, ಪರಂಪರೆ ಕಲ್ಪನೆಯೊಂದಿಗೆ ಇಂದಿನ ಜನಪ್ರಿಯ ಆರಾಧನೆಗಳು ಸೇರಿಕೊಂಡು ಯೇಸುಕ್ರಿಸ್ತನ ನಿಜವಾದ ಬದುಕು ಮತ್ತು ವ್ಯಕ್ತಿತ್ವ ಆತನ ಜೀವನಾಶಯ ಮರೆಯಾಗಿ ಯೇಸುಕ್ರಿಸ್ತನನ್ನು ನಮ್ಮಿಂದ ಎಲ್ಲೊ ದೂರಕ್ಕೆ ಕೊಂಡೊಯ್ದುಬಿಡುವಂತೆ ಭಾಸವಾಗುತ್ತದೆ.

"ಕೆಲವೊಮ್ಮೆ ಆರಾಧನೆಯ ಯೇಸುಕ್ರಿಸ್ತ, ಐತಿಹಾಸಿಕ ಯೇಸುಕ್ರಿಸ್ತನನ್ನು ಮರೆ ಮಾಡುವುದಲ್ಲದೆ ಆತನ ಮೌಲ್ಯಗಳಿಗೆ ನಾವು ಬದ್ಧರಾಗಿ ಬದುಕಬೇಕೆನ್ನುವ ಒತ್ತಡ ಕೂಡ ತರುವುದಿಲ್ಲ. ಹೀಗಾಗಿ ಹಲವು ಬಾರಿ ಯೇಸುಕ್ರಿಸ್ತನ ದೈವತ್ವ ಕೇವಲ ಆರಾಧನೆಯ ವಸ್ತುವಾಗುತ್ತಿರುವಂತೆ ಭಾಸವಾಗುತ್ತಿದೆಯೇ ವಿನಾ ಬದುಕನ್ನು ಪ್ರೇರೇಪಿಸುವ ಶಕ್ತಿಯಾಗುತ್ತಿಲ್ಲ. ಇದೊಂದು ಐತಿಹಾಸಿಕ ದುರಂತವಾಗಿ ಗೋಚರಿಸುತ್ತದೆ.

ಯೇಸುಕ್ರಿಸ್ತನ ಮಾನವೀಯತೆಯನ್ನು ಆತನ ಜೀವನಾಶಯಗಳನ್ನು ಅರ್ಥಮಾಡಿಕೊಂಡಾಗ ಮಾತ್ರ ಆತನ ನಿಜವಾದ ದೇವ-ಮಾನವ ಸ್ವಭಾವವನ್ನು ಅರಿಯಲು ಸಾಧ್ಯವಾಗುತ್ತದೆ. ಎಲ್ಲಾ ಪೂರ್ವಾಗ್ರಹಗಳಿಂದ ಹೊರಬಂದಾಗ ಮಾತ್ರ ಆತನ ನಮ್ಮ ನಿಜವಾದ ದೇವನಾಗಲು ಸಾಧ್ಯ. ಆತ ಯಾತಕ್ಕಾಗಿ ಬದುಕಿದನೋ ಅದನ್ನೇ ನಮ್ಮ ಬದುಕಾಗಿಸಿಕೊಳ್ಳಲು ಸಾಧ್ಯ."[೬]

ಯೇಸುಕ್ರಿಸ್ತನ ಜೀವನಾಶಯವನ್ನು ತಿಳಿದುಕೊಳ್ಳುವ ಮುಂಚೆ ಒಂದು ಅಂಶ ಸ್ಪಷ್ಟವಾಗಿರಬೇಕು. ಯೇಸುಕ್ರಿಸ್ತನನ್ನು ಸಂಕುಚಿತ ಅರ್ಥದಲ್ಲಿ ಕ್ರೈಸ್ತ ಧರ್ಮದ ಸಂಸ್ಥಾಪಕನಷ್ಟೆ ಎಂದು ಗುರುತಿಸುವುದು ಸೂಕ್ತವಲ್ಲ. ಯೇಸುಕ್ರಿಸ್ತ ಧರ್ಮಾತೀತ. ಮಾನವೀಯ ಕಾಳಜಿಯಿರುವ ಪ್ರತಿಯೊಬ್ಬ ವ್ಯಕ್ತಿಗೂ ಕ್ರಿಸ್ತ ಸೇರಿದವನೇ ಹೌದು.

ಯೇಸುಕ್ರಿಸ್ತನ ಜೀವನಾಶಯವನ್ನು ಸರಿಯಾಗಿ ಅರಿಯಬೇಕಾದರೆ, ಮೊದಲನೆ ಶತಮಾನಕ್ಕೆ

ಹೋಗಬೇಕು. ತನ್ನ ಕಾಲದಲ್ಲಿ ಪ್ರಬಲವಾಗಿದ್ದ ಜಲಟರು, ಪರಕೀಯರು, ಎಸ್ಸೀನಿಯರು, ಸದ್ದುಕಾಯರು, ಶಾಸ್ತ್ರಿಗಳ ಮುಂತಾದವರ ಗುಂಪನ್ನು ಅವರ ನಂಬಿಕೆಗಳನ್ನು ತೊರೆದು ಸ್ನಾನಿಕ ಯೊವಾನ್ನನ ಸಂದೇಶಕ್ಕೆ ತಲೆಬಾಗಿ ದೀಕ್ಷಾಸ್ನಾನ ಪಡೆಯುವುದರ ಮೂಲಕ ಅವನ ವೈಶಿಷ್ಟತೆಯನ್ನು ಎತ್ತಿ ಹಿಡಿದ ಸ್ನಾನಿಕ ಯೊವಾನ್ನ. ವ್ಯಕ್ತಿ ಪರಿವರ್ತನೆಗೆ ಮಾತ್ರವಲ್ಲ ಸಮಾಜದ ಪರಿವರ್ತನೆಗೂ ಕರೆಯಿತ್ತ.

> "ಎರಡು ಅಂಗಿಗಳಿದ್ದವನು, ಒಂದನ್ನು ಇಲ್ಲದವನಿಗೆ ಕೊಡಲಿ ಆಹಾರ ಇದ್ದವನು ಇಲ್ಲದವನೊಂದಿಗೆ ಹಂಚಿಕೊಳ್ಳಲಿ, ಸುಂಕದವರು ಗೊತ್ತು ಮಾಡಿದಕ್ಕಿಂತ ಹೆಚ್ಚಾಗಿ ಕಿತ್ತುಕೊಳ್ಳುವುದು ಬೇಡ. ಸಿಪಾಯಿಗಳು ಬಲಾತ್ಕಾರ, ಸುಳ್ಳು ಬೆದರಿಕೆ, ಸುಲಿಗೆಯನ್ನು ತೊರೆದು, ಬರುವ ಸಂಬಳದಲ್ಲಿಯೇ ತೃಪ್ತರಾಗಬೇಕು"[೭]

ಹೀಗೆನ್ನುವುದರ ಮೂಲಕ ಪಾಪಿಗಳಿಗೆ, ವೇಶ್ಯೆಯರಿಗೆ, ಸುಂಕದವರಿಗೆ, ಸಿಪಾಯಿಗಳಿಗೆ, ಫರಿಸಾಯರಿಗೆ ಮತ್ತು ಸರ್ವರಿಗೂ ಮನಪರಿವರ್ತನೆ ಹೊಂದಿ ಪಾಪಕ್ಕೆ ವಿಮುಖರಾಗಿ ದೇವರಿಗೆ ಅಭಿಮುಖರಾಗಲು ಕರೆಯಿತ್ತ. ಅಪ್ರಾಮಾಣಿಕನಾದ ಹೆರೋದ ರಾಜನಿಗೆ ಸವಾಲೆಸೆದ. ಇದರಿಂದ ಕುಪಿತನಾದ ರಾಜ ಸ್ನಾನಿಕ ಯೊವಾನ್ನನ ಶಿರಚ್ಛೇದನ ಮಾಡಿಸಿದ.

ಯೇಸುಕ್ರಿಸ್ತನ ಜೀವನಾಶಯ ಶೋಷಿತರನ್ನು ಅವರ ಬದುಕನ್ನು ಹಸನು ಮಾಡುವುದೇ ಆಗಿತ್ತು. ಯೇಸುಕ್ರಿಸ್ತನ ಗಮನ ದೀಕ್ಷಾಸ್ನಾನದಿಂದ ಬಡವರ ಬವಣೆಯತ್ತ ಹರಿದಿತ್ತು. ಇಸ್ರೇಯೇಲ್ ಜನಾಂಗದ ಬಹುಸಂಖ್ಯಾಕ ಜನ ಬಡವರು ಶೋಷಿತರಾಗಿದ್ದರು. ಶುಭ ಸಂದೇಶಗಳು ಈ ಜನರನ್ನು ಬಡವರು, ಕುರುಡರು, ಕುಂಟರು, ಅಂಗವಿಕಲರು, ಅನಾಥರು, ವಿಧವೆಯರು, ಕುಷ್ಠರೋಗಿಗಳು, ಅತ್ತು ಪ್ರಲಾಪಿಸುವವರು, ಪಾಪಿಗಳು ನೀತಿ-ನಿಯಮ ಅರಿಯದ ಅಜ್ಞಾನಿಗಳು, ಕಳೆದುಹೋದ ಕುರಿಗಳು ಎಂದೆಲ್ಲಾ ಗುರುತಿಸುತ್ತವೆ.

ಈ ಜನರ ಬದುಕು ದುರ್ಬಲವಾಗಿತ್ತು. ಹಸಿವು, ನೋವಿಗಿಂತ, ಹೆಚ್ಚಾಗಿ ನಾಚಿಕೆ ಅವಮಾನಗಳಿಂದ ಇವರ ಜೀವನ ಕೂಡಿತ್ತು. ಸ್ವಾಭಿಮಾನದ ಬದುಕೆ ಇಲ್ಲದೆ, ಇವರ ಬದುಕು ನಾಯಿಗಿಂತ ಕಡೆಯಾಗಿ ಈ ಜನರಿಗೆ ಬದುಕೇ ಅರ್ಥಹೀನವಾಗಿತ್ತು. ಇಸ್ರೇಲ್‌ನ ಶಿಷ್ಟ ಸಮಾಜ ಇವರನ್ನು ಪಾಪಿಗಳು, ಧರ್ಮ ತಿಳಿಯದವರು ಎಂದು ತುಚ್ಛೀಕರಿಸಿ ದೂರವಿಟ್ಟಾಗಿತ್ತು. ಇಂತಹ ಶೋಷಿತರ ಪಾಪಿಗಳ ಕಂಡು ಯೇಸುವಿನ ಮನ ಕರಗಿತು. ಅವರಿಗೆ ಚಿಂತಿಸಬೇಡ, ಹೆದರ ಬೇಡ, ಅಳಬೇಡ ಎಂಬ ಮಾತುಗಳಿಂದ ಸಾಂತ್ವನ ನೀಡಿದ. ಶೋಷಿತ ಜನರೊಂದಿಗೆ ಬೆರೆತು, ಬವಣೆಗಳಿಂದ ಬಿಡಿಸಿ ಅವರನ್ನು ಮೇಲೆತ್ತಲು ಪ್ರಯತ್ನಿಸುವುದೇ ಯೇಸುಕ್ರಿಸ್ತನ ಜೀವನಾಶಯಗಳಲ್ಲಿ ಒಂದಾಗಿತ್ತು.

ದೀನದಲಿತರಿಗೆ, ರೋಗಿಗಳಿಗೆ, ತಳ ಸಮುದಾಯದ ಶೋಷಿತ ವರ್ಗಕ್ಕೆ ಆತ್ಮವಿಶ್ವಾಸವನ್ನು

ತುಂಬುವುದರ ಜೊತೆಗೆ, ರೋಗ ನಿವಾರಣೆ ಮಾಡುವುದರ ಮೂಲಕ ಅವರ ಬದುಕಿಗೆ ಪ್ರೇರಕ ಶಕ್ತಿಯಾಗತೊಡಗಿದ. ಪ್ರತಿಯೊಬ್ಬರು ತಮ್ಮ ಕಾಯಿಲೆಗಳಿಂದ ಗುಣಹೊಂದುವುದು ಅವರವರ ವಿಶ್ವಾಸದ ಪರಿಣಾಮದಿಂದಲೇ ಎಂದು ಯೇಸುಕ್ರಿಸ್ತ ಪದೇ ಪದೇ ಹೇಳುತ್ತಿದ್ದ. ಸಂಶಯ ಪಟ್ಟಲ್ಲಿ ಯಾವುದೂ ಸಾಧ್ಯವಿಲ್ಲ. ವಿಶ್ವಾಸ ಅತಿಮುಖ್ಯ. ಸಮಕಾಲೀನ ಜನರ ವಿಶ್ವಾಸವನ್ನು ವೃದ್ಧಿಸುವುದು ಸಹ ಕ್ರಿಸ್ತನ ಜೀವನಾಶಯವಾಗಿತ್ತು. ಈ ವಿಶ್ವಾಸ ಕೇವಲ ನಂಬಿಕೆಯಲ್ಲ. ಮಾನಸಿಕವಾಗಿ ಮಾಡುವ ಗಟ್ಟಿ ನಿರ್ಧಾರವೂ ಅಲ್ಲ. ಇದೊಂದು ಆತ್ಮವಿಶ್ವಾಸ ಈ ಆತ್ಮ ವಿಶ್ವಾಸ ತಾನು ವಿಶ್ವಾಸಿಸುವ ವಿಷಯದಿಂದಲೇ ದೃಢವಾಗುತ್ತಾ ಹೋಗಿ ವಿಶ್ವಾಸವಾಗುತ್ತದೆ. ಈ ಜಗತ್ತಿನಲ್ಲಿ ಇರಬಹುದಾದ ಒಳ್ಳೆಯದರ ಬಗ್ಗೆ ಸತ್ಯದ ಬಗ್ಗೆ ನಂಬಿಕೆ ತಾಳಿ, ಆ ಒಳ್ಳೆಯದು ತನ್ನೊಳಗೆ ಇದೆ ಎಂದು ಅರಿತವನಲ್ಲಿ ಈ ವಿಶ್ವಾಸ ಮೂಡುತ್ತದೆ.

ದೇವರ ಕ್ಷಮೆ ಎಲ್ಲರಿಗೂ ಇದೆ. ಎಲ್ಲರೂ ದೇವರ ಕೃಪೆಗೆ ಅರ್ಹರು ಎಂದು ಯೇಸುಕ್ರಿಸ್ತ ತನ್ನ ಬೋಧನೆಗಳಲ್ಲಿ ಸಾರಿ ಸಾರಿ ಹೇಳುತ್ತಿದ್ದ. ಜಕ್ಕಾಯನ ವರ್ತನೆ ಮತ್ತು ಅವನಿಗೆ ಲಬಿಸಿದ ಪಾಪಕ್ಷಮೆ, (ಲೂಕ ೧೯:೧-೧೦) ಪಾರ್ಶ್ವವಾಯು ರೋಗಿಯ ಪಾಪಕ್ಷಮೆ (ಮಾರ್ಕ ೨:೧-೨) ಯೇಸುಕ್ರಿಸ್ತನ ಪಾದ ತೊಳೆದ ಹೆಂಗಸಿನ ಪಾಪಕ್ಷಮೆ ಹೀಗೆ ಯೇಸುಕ್ರಿಸ್ತ ಅವರೆಲ್ಲರಿಗೂ ದೇವರ ಕ್ಷಮೆ ತಮಗಿದೆ ಎಂದು ಅರಿಯುವಂತೆ ಮಾಡಿದ. ಈ ಪಾಪಿಗಳನ್ನು ಕ್ರಿಸ್ತ ಕೇವಲ ಗುಣಪಡಿಸಲಿಲ್ಲ, ಪಾಪ ಪ್ರಜ್ಞೆಯಿಂದ ಬಿಡಿಸಿದ, ಚಿಂತೆಗಳಿಂದ ದೂರ ಮಾಡಿ, ದೇವರ ಕೃಪೆ ಲಭಿಸುವಂತೆ ಮಾಡಿ ಅವರಿಗೆ ಮುಕ್ತಿಯ ಪಥ ತೋರಿಸಿದ. ವೈದ್ಯನ ಆವಶ್ಯಕತೆ ಇರುವುದು ರೋಗಿಗಳಿಗೆ ಎಂಬುದನ್ನು ತೋರಿಸಿದ.” ತಾನು ಬಂದಿರುವುದು ಪತಿತರನ್ನು ಉದ್ಧರಿಸಲು, ಪುಣ್ಯಾತ್ಮರನ್ನು ಕರೆಯಲು ಅಲ್ಲ ಎಂಬುದನ್ನು ಮೇಲಿಂದ ಮೇಲೆ ಸವಾಲುಗಳಲ್ಲಿ ನಿರೂಪಿಸಿದ.

ಯೇಸುಕ್ರಿಸ್ತನ ಜಗತ್ತು ಬಡವರ ಮತ್ತು ಶೋಷಿತರ ಜಗತ್ತಾಗಿತ್ತು. ಇದನ್ನು ಉದ್ಧಾರ ಮಾಡುವುದೇ ಆತನ ಜೀವನಾಶಯವಾಗಿತ್ತು. ಯೇಶಾಯ ಪ್ರವಾದಿಯ ಮಾತುಗಳ ಯೇಸುಕ್ರಿಸ್ತನಲ್ಲಿ ನೇರವೇರಿದವು.

“ಆ ದಿನದಿಂದ ಕಿವುಡರು ವಾಕ್ಯಗಳನ್ನು ಕೇಳುವರು
ಕುರುಡರಿಗೆ ಮಬ್ಬಿನಲ್ಲೂ ಕಣ್ಣು ಕಾಣಿಸುವುದು
ದೀನದಲಿತರು ಸರ್ವೇಶ್ವರನಲ್ಲಿ ಅತಿಯಾಗಿ ಆನಂದಿಸುವರು”[೯]
“ನನ್ನ ಮೇಲಿದೆ ಸರ್ವೇಶ್ವರನ ಆತ್ಮ
ನನಗೆ ಅಭಿಷೇಕ ಮಾಡಿ ಕಳುಹಿಸಿರುವನು ಆತ
ದೀನದಲಿತರಿಗೆ ಶುಭ ಸಂದೇಶವನ್ನು ಬೋಧಿಸಲೆಂದು
ಸೆರೆಯಾಳುಗಳಿಗೆ ಬಂಧ ವಿಮುಕ್ತಿ ಘೋಷಿಸಲೆಂದು.”[೧೦]

ಯೇಶಾಯ ಪ್ರವಾದಿಯ ಮಾತುಗಳು ಯೇಸುಕ್ರಿಸ್ತನಲ್ಲಿ ನೆರವೇರಿದವು. “ಶುಭಸಂದೇಶ” ಎಂಬ ಪದವನ್ನು ಮೊಟ್ಟ ಮೊದಲು ಬಳಸಿದ್ದು ಪ್ರಥಮ ಕ್ರೈಸ್ತರು. ಯೇಸುಕ್ರಿಸ್ತನಲ್ಲ. ಸಹಸ್ರಾರು ವರ್ಷಗಳ ಹಿಂದೆ ಯೆಶಾಯ ಪ್ರವಾದಿ ಪ್ರಕಟಿಸಿದ್ದ ಭವಿಷ್ಯದ ದಿನಗಳು ಬೇಗನೆ ಬರಲಿವೆ ಎಂದು ಹೇಳಿದ ರಿಸ್ತ, ಇದು

ಬಡವರಿಗೆ ನಿಜ 'ಶುಭ ಸಮಾಚಾರ' ಎಂದಿದ್ದ. ಸಮಾಚಾರವೆಂದರೆ ಒಂದು ಸುದ್ದಿ. ಈಗಷ್ಟೆ ನಡೆದಿರುವುದು ಅಥವಾ ಇಷ್ಟರಲ್ಲೇ ನಡೆಯುವಂತಿದ್ದು. ಒಳ್ಳೆಯ ಸಮಾಚಾರ ಎಂದರೆ ಮನಸ್ಸಿಗೆ ನೆಮದಿ ತರುವ, ಬದುಕಿಗೆ ಭರವಸೆ ತರುವ ಶುಭ ಸಂಗತಿ. ಯೇಸುಕ್ರಿಸ್ತ ಸಾರಿದ್ದು ಇಂಥಾ ಬಿಡುಗಡೆ ಮತ್ತು ಭರವಸೆಯ ಸಮಾಚಾರವಾದ್ದರಿಂದ ಬಡವರಿಗೆ ಶೋಷಿತರಿಗೆ ಅದು ನಿಜವಾಗಿಯೂ 'ಶುಭ ಸಂದೇಶ'ವೇ ಆಗಿತ್ತು".[೧೧] ಇಂತಹ ಶುಭ ಸಂದೇಶವನ್ನು ಜಗತ್ತಿನ ಮೂಲೆ ಮೂಲೆಗಳಿಗೂ ಹರಡುವುದೇ ಯೇಸುಕ್ರಿಸ್ತನ ಜೀವನಾಶಯವಾಗಿತ್ತು.

"ಹೋಗಿ, ಲೋಕದ ಕಟ್ಟಕಡೆಯವರಿಗೂ ನನ್ನ ಸುವಾರ್ತೆಯನ್ನು ಸಾರಿರಿ"[೧೨] ಯೇಸುಕ್ರಿಸ್ತನಿಗೆ ಒಳ್ಳೆಯತನ ದುಷ್ಟತನಕ್ಕಿಂತ ಹೆಚ್ಚು ಪರಾಕ್ರಮವುಳ್ಳದಾಗಿದ್ದರಿಂದ ಒಂದಲ್ಲಾ ಒಂದು ದಿನ ದೇವರ ಸಾಮ್ರಾಜ್ಯ ಈ ಸೈತಾನನ ಸಾಮ್ರಾಜ್ಯವನ್ನು ಕೆಡವಿ ರಾಜ್ಯವಾಳುತ್ತದೆ ಎಂಬ ಆಳವಾದ ನಂಬಿಕೆ ಇತ್ತು. ಆದುದರಿಂದಲೇ ಪ್ರತಿಯೊಬ್ಬರೂ ಈ ದೇವರ ಸಾಮ್ರಾಜ್ಯಕ್ಕಾಗಿ ಹಾತೊರೆದು ಅದಕ್ಕಾಗಿ ಯತ್ನಿಸಬೇಕೆಂಬುದು ಯೇಸುಕ್ರಿಸ್ತನ ಆಶಯವಾಗಿತ್ತು.

ಯೇಸುಕ್ರಿಸ್ತನ ಬೋಧನೆಗಳು ನಿಖರವಾಗಿಯೂ, ಸ್ಪಷ್ಟವಾಗಿಯೂ ಇದ್ದವು. ಹಣದ ಹಿಂದೆ ಅಲೆಯುವಾತ ಎಂದೂ ದೇವರ ಬೆನ್ನತ್ತಲಾರ ಎಂಬ ನಂಬಿಕೆಯಿಂದಲೇ ಹಣ ಮತ್ತು ದೇವರನ್ನು ಬೇರೆ ಬೇರೆ ಯಾಜಮಾನರು ಎಂದು ಕರೆದು, ದೇವರಿಗೂ ದ್ರವ್ಯಕ್ಕೂ ಒಟ್ಟಿಗೆ ಸೇವೆ ಮಾಡಲಾಗದು ಎಂದು ಹೇಳಿದ.

ಹಣ ಪ್ರತಿಯೊಬ್ಬರ ಬದುಕಿನಲ್ಲಿ ಅವಶ್ಯ. ಆದರೆ ಗಳಿಸಿದ ಹಣ ದೇವರ ಮಹಿಮೆಗಾಗಿ ದಾಸೋಹಕ್ಕಾಗಿ ಉಪಯೋಗಿಸಿದಾಗ ಮಾತ್ರ ಅದು ಉಪಯುಕ್ತವಾಗುತ್ತದೆ. 'ಹಂಚಿ ತಿನ್ನಿರಿ, ಕೂಡಿ ಬಾಳಿರಿ' ಇದು ಯೇಸುಕ್ರಿಸ್ತನ ಮತ್ತೊಂದು ಪ್ರಮುಖ ಜೀವನಾಶಯವಾಗಿತ್ತು.

"ತನ್ನನ್ನೆ ತಾನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು"[೧೩] ಎಂಬ ಧೋರಣೆ ಯೇಸುಕ್ರಿಸ್ತನದಾಗಿತ್ತು. ಗುರುವು ತಾನಾಗಿದ್ದರು ಶಿಷ್ಯರ ಪಾದ ತೊಳೆದು ತನ್ನನ್ನು ತಾನೇ ತಗ್ಗಿಸಿಕೊಂಡ. ತಾನು ಬಂದಿರುವುದು ಪರರ ಸೇವೆ ಮಾಡುವುದಕ್ಕೆ ಹೊರತು, ಮಾಡಿಸಿಕೊಳ್ಳುವುದಕ್ಕಲ್ಲ. ಆದ್ದರಿಂದ ತನ್ನ ಶಿಷ್ಯರು ತಗ್ಗಿ, ಬಗ್ಗಿ, ವಿನಮ್ರಶೀಲರಾಗಿ ನಡೆಯಬೇಕೆಂದು ಆತನು ಆಶಿಸುತ್ತಿದ್ದ.

ದೇವರ ಸಾಮ್ರಾಜ್ಯ ಅಂದರೆ ಅದು ಬರಿ ಮಾತಲ್ಲ ಶಕ್ತಿಯ ಸಾಧನ. ಶಾಂತಿ, ಪ್ರೀತಿ, ನೆಮ್ಮದಿಯ ತಾಣ. ಅದನ್ನು ಪ್ರವೇಶಿಸಬೇಕಾದರೆ ಇರಬೇಕಾದ ಮೊದಲ ಅರ್ಹತೆ ಎಂದರೆ ಮಾನವೀಯತೆ. ಶೋಷಣೆ ಮತ್ತು ಹಿಂಸೆಗೆ ಪ್ರೀತಿಸುವುದೆ ನಿಜವಾದ ಪ್ರೀತಿ. ಈ ಭ್ರಾತೃತ್ವ ಐಕ್ಯತೆ, ಒಗ್ಗಟ್ಟು, ದೇವರ ಸಾಮ್ರಾಜ್ಯಕ್ಕೆ ಅರ್ಹತೆ. ಆದುದರಿಂದ ಐಕ್ಯಮತ್ಯದಿಂದ, ಒಟ್ಟಾಗಿ ಬಾಳಿ ಎಂಬುದಾಗಿ ಕರೆ ನೀಡುತ್ತಾರೆ.

ಯೇಸುಕ್ರಿಸ್ತ ಎಂದೂ ಧರ್ಮಶಾಸ್ತ್ರದ ವಿರುದ್ಧವಾಗಿರಲಿಲ್ಲ. ಬದಲಾಗಿ ಧರ್ಮಶಾಸ್ತ್ರಕ್ಕೆ ಹೊಸ ಹೊಳಹನ್ನು ನೀಡಿದ."[೧೪] ದೇವರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಎಲ್ಲಾ ರೀತಿಯ ಶೋಷಣೆ, ದಬ್ಬಾಳಿಕೆ, ಗುಲಾಮಗಿರಿಯನ್ನು ರದ್ದು ಮಾಡಿದ ಮೇಲೆ ಪ್ರೀತಿ, ದಯೆ, ದಾಕ್ಷಿಣ್ಯದಿಂದ ಒಬ್ಬರಿಗೊಬ್ಬರು ಸೇವೆ ಮಾಡುವ ನೆಲೆ ಸೃಷ್ಟಿಯಾಗುತ್ತದೆ. ಇದೇ ಧರ್ಮಶಾಸ್ತ್ರದ ನಿಜವಾದ ಉದ್ದೇಶ, ಇದೆ ನಿಜವಾದ ಧರ್ಮನಿಷ್ಠೆ. ಅದಕ್ಕಾಗಿಯೇ ಯೇಸುಕ್ರಿಸ್ತ ತನ್ನ ಶಿಷ್ಯರಿಗೆ ಹೀಗೆಂದು ಬೋಧಿಸಿದ.

'ಧರ್ಮ ಶಾಸ್ತ್ರಿಗಳ ಹಾಗೂ ಪರಿಸಾಯರ ಧರ್ಮನಿಷ್ಠೆಗಿಂತ ನಿಮ್ಮ ಧರ್ಮನಿಷ್ಠೆ ಉತ್ತಮವಾಗದ ಹೊರತು ನೀವು ಸ್ವರ್ಗ ಸಾಮ್ರಾಜ್ಯವನ್ನು ಸೇರಲಾರಿರಿ. ಇದು ನಿಶ್ಚಯ."[೧೫]

ಇಲ್ಲಿ ಒಂದು ಅಂಶ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತದೆ. "ಯೇಸುಕ್ರಿಸ್ತ ಹೋರಾಡುತ್ತಿದ್ದುದು ಧರ್ಮಶಾಸ್ತ್ರದ ಅನುಷ್ಠಾನಕ್ಕಲ್ಲ. ಒಂದು ಧರ್ಮದ ಪುನಶ್ಚೇತನಕ್ಕೂ ಅಲ್ಲ - ಒಂದು ಪ್ರಗತಿಪರ ಕ್ರಾಂತಿಗಾಗಿ, ಒಂದು ಬಂಡಾಯಕ್ಕಾಗಿ! ಧರ್ಮ, ರಾಜಕೀಯ ಮತ್ತು ಜೀವನದ ಪ್ರತಿ ಕ್ಷೇತ್ರದಲ್ಲಿ ಆಗಲೇಬೇಕಿದ್ದ ಒಂದು ಹೊಸ ಕ್ರಾಂತಿಗಾಗಿ."[೧೬]

ಒಟ್ಟಿನಲ್ಲಿ ಯೇಸುಕ್ರಿಸ್ತನ ಜೀವನಾಶಯ ತುಂಬಾ ಸರಳವೂ, ಅನುಸರಿಸಲು ಯೋಗ್ಯವು ಮತ್ತು ಸರ್ವಕಾಲಿಕ ಆದರ್ಶಪ್ರಾಯವೂ ಆಗಿದೆ. ಶೋಷಿತ ವರ್ಗದ ಉದ್ಧಾರ, ಸೋದರ ಪ್ರೀತಿ, ಕ್ಷಮೆ ಹಾಗೂ ದೇವರನ್ನು ಮಹಿಮೆ ಪಡಿಸುತ್ತಾ ಸಾತ್ವಿಕ ಬಾಳನ್ನು ಬಾಳುವುದೇ ಯೇಸುಕ್ರಿಸ್ತನ ಜೀವನಾಶಯವಾಗಿತ್ತು.

೪.೩ ಬಸವಣ್ಣನವರ ಜೀವನಾಶಯ

ಹನ್ನೆರಡನೆ ಶತಮಾನದಲ್ಲಿ ಕರುನಾಡಿನ ನೆಲದಲ್ಲಿ ಗೋಚರಿಸಿದ ಸಮಾಜೋ-ಧಾರ್ಮಿಕ ಚಳುವಳಿಯ ಹರಿಕಾರನಾಗಿ ಮೂಡಿಬಂದ ಬಸವಣ್ಣ ಕರುನಾಡಿನ ಧ್ರುವತಾರೆ. ಮನುಷ್ಯ ಮನುಷ್ಯನಲ್ಲಿ ಯಾವುದೇ ಬೇಧ ತೋರದೆ ಬೇಧ-ಭಾವ ರಹಿತ ಸಮಾಜ ಕಟ್ಟುವ ಕನಸು ಕಂಡ ನೇತಾರ. ಅಸ್ಪೃಶ್ಯತೆಯ ವಿರುದ್ಧ ಭಾರತದಲ್ಲಿಯೇ ಮೊತ್ತಮೊದಲು ಧ್ವನಿ ಎತ್ತಿದವನು ಬಸವಾದಿ ಪ್ರಮಥರು.

ಬಸವಣ್ಣನವರ ಜೀವನಾಶಯ-ಪಟ್ಟಭದ್ರ ಹಿತಾಸಕ್ತಿಗಳ ಬ್ರಾಹ್ಮಣ್ಯದ ನಿರಾಕರಣೆ, ಮೇಲ್ಜಾತಿ ಕೇಂದ್ರಿಕೃತ ದೇವಸ್ಥಾನ ಸಂಸ್ಥೆಯ ನಿರಾಕರಣೆ, ಪುರೋಹಿತಶಾಹಿಯ ನಿರಾಕರಣೆ, ಸಾಮಾಜಿಕ ಅಸಮಾನತೆಯ ನಿರಾಕರಣೆ ಹೀಗೆ ಅಂದಿನ ತನ್ನ ಸಮಾಜದಲ್ಲಿ ನಡೆಯುತ್ತಿದ್ದ ಹೀನಾಚರಣೆಗಳನ್ನು, ಗೊಡ್ಡ ಸಂಪ್ರದಾಯಗಳನ್ನು; ಜಡತೆಯಿಂದ ನಿಶ್ಚೇಷ್ಟಿತವಾಗಿದ್ದ ಸಮಾಜವನ್ನು ನಿರಾಕರಿಸಿ ಆ ಜಾಗದಲ್ಲಿ ಪ್ರತಿಷ್ಠೆಗೊಳ್ಳಬೇಕಾದ ಮೌಲ್ಯಗಳ ಅನ್ವೇಷಣೆಯನ್ನು ಕಾಣುತ್ತೇವೆ.[೧೭] ಬಸವಣ್ಣನವರ ಜೀವನಾಶಯ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಆಗಿತ್ತು.

ಬಸವಣ್ಣನವರನ್ನು ಸಮಗ್ರವಾಗಿ ಚಿತ್ರಿಸುವುದು ತ್ರಾಸದಾಯಕ ಕೆಲಸ. ಏಕೆಂದರೆ ಆತನ ಹತ್ತು ಹಲವು ಮುಖಗಳನ್ನು ಒಟ್ಟಾಗಿ ಹಿಡಿದು ಆತನ ಜೀವನಾಶಯವನ್ನು ವ್ಯಕ್ತಪಡಿಸುವುದು ತಿಳಿದಷ್ಟು ಸರಳವಲ್ಲ. ಅಲ್ಲಮಪ್ರಭು ಬಸವಣ್ಣನನ್ನು ಕುರಿತು ತನ್ನ ಒಂದು ವಚನದಲ್ಲಿ ಈ ರೀತಿ ಹೇಳುತ್ತಾನೆ.

> **"ಯುಗದ ಉತ್ಸಾಹವ ನೋಡಿರೆ,**
> **ಪಂಚ ಶಕ್ತಿಗಳಿಗೆ ಪಂಚ ಪ್ರಧಾನರು**
> **ಅವರಾಗು ಹೋಗನಾ ಶರಣನೇ ಬಲ್ಲ**
> **ಆ ಶರಣನು ತಾನು ತಾನಾಗಿ,**
> **ಆರು ದರುಶನಕ್ಕೆ ಯಾಚಕನಲ್ಲ,**
> **ಮೂರು ದರುಶನಕ್ಕೆ ಮುಯ್ಯಾಗುವನಲ್ಲ**
> **ವೇದ ಶಾಸ್ತ್ರಾಗಮ ಪುರಾಣ ಛಂದಸ್ಸು**
> **ನಿಘಂಟುಗಳೆಂಬುವಕ್ಕೆ ಬೇಧಕನಲ್ಲ**
> **ಅದೇಕೆಂದಡೆ, ಅವರಂಗದ ಮೇಲೆ**
> **ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ,**
> **ಪ್ರಸಾದವಿಲ್ಲ, ಪಾದೋದಕವಿಲ್ಲದ ಭಾಷೆ.**

ಆ ಗುರು ಲಿಂಗ ಜಂಗಮ ಪ್ರಸಾದ ಪಾದೋದಕವೇಕಾರ್ಥವಾದ ಕಾರಣ
ಪ್ರಾಣಿಗಳೆಲ್ಲವೂ ಪ್ರಣಯಮಂಗೈಯ್ಯುತ್ತಿದ್ದವು.
ಜೀವಿಗಳೆಲ್ಲವೂ ಜಯ ಜೀಯ ಎನ್ನುತ್ತಿದ್ದವು.
ಆತ್ಮಂಗಳೆಲ್ಲವೂ ಅನುವ ಬೇಡುತ್ತಿದ್ದವು.
ಗೋಗೇಶ್ವರ, ಸಂಗನ ಬಸವಣ್ಣನ ಪಾದಕ್ಕೆ
ಈರೇಳು ಭುವನವೆಲ್ಲವೂ ಜಯ ಜಯ ಎನ್ನುತ್ತಿದ್ದವು.[೧೮]

ಇಂದು ೨೧ನೇ ಶತಮಾನದಲ್ಲಿದ್ದೇವೆ. 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬುವ ತತ್ವವನ್ನು ರಾಜಕೀಯ ಪಕ್ಷಗಳು, ನಮ್ಮ ದೇಶದಲ್ಲಿ, ಸದಾ ಉರಿಯುತ್ತಿವೆ. ಇಂದಿನ ಸಮತಾವಾದದ ಕಲ್ಪನೆಯನ್ನು ಸುಮಾರು ಎಂಟು ನೂರು ವರ್ಷಗಳ ಹಿಂದೆಯೇ ಮನಗಂಡು ಅದನ್ನು ಸಾಧಿಸುವತ್ತ ಹೆಜ್ಜೆ ಇಡಿಸಿದರು. ಸಮತಾಭಾವನೆ, ಜಾತ್ಯತೀತ ಧೋರಣೆ, ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ-ಪುರುಷರಲ್ಲಿ ಸಮತೆ ಇವು ಬಸವಣ್ಣನವರು ಕಂಡ ಕನಸು. ವ್ಯಕ್ತಿ-ಸಮಾಜಗಳ ಕಲ್ಯಾಣವೇ ಬಸವಣ್ಣನವರು ಕಟ್ಟಿದ ಕಲ್ಯಾಣ.

'Work is Wroship' 'ಕಾಯಕವೇ ಕೈಲಾಸ' ಎನ್ನುವ ಶರಣರ ಧೋರಣೆಗೆ ಅನುಗುಣವಾಗಿ ಬಸವಣ್ಣನವರ ಸಾಮಾಜಿಕ ಆಂದೋಲನ ಚಾಲ್ತಿಯಲ್ಲಿತ್ತು. ಇಲ್ಲಿ ಯಾವುದೇ ಕಾಯಕ ಮೇಲಲ್ಲ ಯಾವುದೇ ಕಾಯಕ ಕೀಳಲ್ಲ. ಬದಲಿಗೆ ಪ್ರತಿಯೊಂದು ಕಾಯಕವು ಸಮಾಜದ ಒಳಿತಿಗಾಗಿ, ಸಮಾಜದ ಕಲ್ಯಾಣಕ್ಕಾಗಿ ಮಾಡುವಂತಿರಬೇಕು. ಕಾಯಕದಲ್ಲಿ ಮೇಲು-ಕೀಳೆಂಬ ಬೇಧ-ಭಾವ ಇರಬಾರದು. ವ್ಯವಸಾಯ ಮಾಡಲಿ, ವ್ಯವಹಾರ ಮಾಡಲಿ, ಇಲ್ಲಿ ಎಲ್ಲ ಕಾಯಕವು ಸಮಾಜಮುಖಿ ಕಾಯಕವಾಗಿರಬೇಕು. ಕಾಯಕದಲ್ಲಿ ಮಾನಾಪಮಾನದ ಪ್ರಶ್ನೆಯೇ ಬಸವಣ್ಣನವರಿಗೆ ಕಾಣಿಸಲಿಲ್ಲ.

"ನಾನಾವ ಕರ್ಮಂಗಳ ಮಾಡಿದರೆಯೂ ಆ ಕರ್ಮಿ ಫಲಭೋಗವ ನೀ ಕೊಡುವೆಯೆಂಬುದ ನಾ ಬಲ್ಲೆನು"[೧೯] ಎಂದು ಬಸವಣ್ಣನವರು ವಚನಿಸಿದ್ದಾರೆ. ಸಮಾಜದ ಹಿತಕ್ಕಾಗಿ ದುಡಿಯುವ ಸೆಟ್ಟಿ, ಮಡಿವಾಳ, ಡೋಹಾರ, ಮಾದಾರ ಎಲ್ಲರೂ ಗೌರವದ ವ್ಯಕ್ತಿಗಳೇ ಶರಣರು ಸಮಾಜದಲ್ಲಿ ತಮ್ಮ ಕಾಯಕದಿಂದ ಸಮತಾವಾದವನ್ನು ತರಲು ಯತ್ನಿಸಿದರು. ವೃತ್ತಿಯೂ ಕಾಯಕವು ಶರಣನಿಗೆ ಸಮಾಜಮುಖಿಯ ಮನೋಭೂಮಿಕೆಯನ್ನು ನೀಡಿ ಸಮತಾವಾದದ ಭಾವ ಬೆಳೆಯುವಂತೆ ಮಾಡಿತು. ಅಂದಿನ ಕಾಲದ ಬಸವಾದಿ ಶರಣರಿಗೆ ತಮ್ಮ ತಮ್ಮ ಕಾಯಕದ ಮೂಲಕ ನಾಳೆಗೆ ಸಂಗ್ರಹಿಸಿಡುವ ಬುದ್ಧಿ ಇರಲಿಲ್ಲ. ಬದಲಾಗಿ ತಮ್ಮೆಲ್ಲದನ್ನು ಇತರರಿಗೆ ಹಂಚುವ ಬುದ್ದಿಯನ್ನು ಮನೋಭಾವವನ್ನು ಕಾಣಬಹುದು.

ತಾನು ಮಾಡುವ ಕಾಯಕದಿಂದ ಹೊಟ್ಟೆಗೆ ರೊಟ್ಟಿ, ಮೈಗೆ ಬಟ್ಟೆ, ವಾಸಿಸುವುದಕ್ಕೆ ಮನೆ ಇಷ್ಟಿದ್ದರೆ ಸಾಕು ಎಂಬ ಸಂತೃಪ್ತ ಮನೋಭಾವ ಬಸವಾದಿ ಶರಣರದಾಗಿತ್ತು. ಇಂದಿನ ಕೊಳ್ಳು ಬಾಕ ಸಂಸ್ಕೃತಿಗೆ ವಿರುದ್ಧವಾದ ಮನೋಧರ್ಮ ಶರಣರದಾಗಿತ್ತು ಅದು ಬಸವಣ್ಣನವರ ಜೀವನಾಡಿ ಆಗಿತ್ತು.

ಬಸವಾದಿ ಪ್ರಥಮರು ಆವಶ್ಯಕತೆಗಿಂತ ಹೆಚ್ಚಾಗಿ ಗಳಿಸುವುದು ಸಾಮಾಜಿಕ ದ್ರೋಹ ಎಂದು ಬಗೆದು ಸಿರಿಯನ್ನು ತಿರಸ್ಕರಿಸಿ, ಹರನನ್ನು ಅರಿಯುವತ್ತ ಮುಖ ಮಾಡಿದ್ದರು. ಸಮತಾಭಾವದ ಬೀಜಬಿತ್ತಿದ ಬಸವಣ್ಣನ ಸಮಾಜದಲ್ಲಿ ಸಾಮಾಜಿಕ ಆಂದೋಲನವನ್ನು ಮಾಡಿದ. ಬಡವ-ಬಲ್ಲಿದನೆಂಬ ಬೇಧಬಾವವನ್ನು ತೊಡೆದು ಹಾಕುವತ್ತ ಗಮನ ಹರಿಸಿ ಸ್ತ್ರೀ ಪುರುಷರಲ್ಲಿಯೂ ಸಮಾತಾಭಾವ, ಸಮಾನಾವಕಾಶಗಳ ಮನೋಭಾವನ್ನು ಬಿತ್ತಿದ. ಶತ ಶತಮಾನಗಳಿಂದ ಪುರುಷನ ದಬ್ಬಾಳಿಕೆಗೆ ಒಳಗಾಗಿದ್ದ ಸ್ತ್ರೀಗೆ ಸ್ವಾತಂತ್ರ್ಯ ನೀಡಿ ಪುರುಷನಷ್ಟೇ ಸ್ತ್ರೀಯೂ ಸಾಧನ ಪಟ್ಟಕ್ಕೆ ಅರ್ಹಳು ಎಂದು ಘೋಷಿಸಿದ. ಸ್ತ್ರೀಯರ ಬಾಳಿನ ಕತ್ತಲೆಯ ಕಳೆದು ಬೆಳಕಾದ ಬಸವ ಸಮಾಜದಲ್ಲಿ ಜಾತಿ ಭಾವನೆ ದೂರವಾಗಲು ಮೊಟ್ಟಮೊದಲು ಜಾತ್ಯತೀತ ಮನೋಭಾವನೆ ಬೆಳೆಸಿಕೊಳ್ಳಬೇಕು, ಆಗ ಮಾತ್ರ ಸಮಾಜದಲ್ಲಿ ಸಮತಾಭಾವ ನೆಲೆಯಾಗಲು ಸಾದ್ಯ ಎಂಬುದನ್ನು ಅರಿತ ಬಸವಣ್ಣನವರು ಅಚಾರ, ವಿಚಾರಗಳಲ್ಲಿ ಈ ಕಲ್ಪನೆಯನ್ನು ಜನಮನದ ಆಳಕ್ಕೆ ಇಳಿಯುವಂತೆ ಪ್ರಚುರಪಡಿಸಿದರು.

'ಅರಿತರೆ ಶರಣ ಮರೆತರೆ ಮಾನವ' ಎಂಬ ಸೂಕ್ತಿಗೆ ಅನುಗುಣವಾಗಿ ಲಿಂಗಸ್ಥಲವನರಿಯಲು ಅಂದಿನ ಸಮಾಜವನ್ನು ಪ್ರಚೋದಿಸಿದ. ವ್ಯಕ್ತಿಯ ಕಾಯಕಕ್ಕೆ ಆತನ ಜಾತಿಯನ್ನು ಜೋಡಿಸುವುದು ಹೀನತನ ಎಂಬುದನ್ನು ಬಸವಣ್ಣನವರು ಸಾರಿದರೂ "ಕಾಸಿ ಕಮ್ಮಾರನಾದ, ಬೀಸಿ ಮಡಿವಳನಾದ ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರವನಾದ, ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಇದು ಕಾರಣ ಕೂಡಲ ಸಂಗಮದೇವ, ಲಿಂಗಸ್ಥಲವನರಿದವನೇ ಕುಲಜನು."[೨೦] ವ್ಯಕ್ತಿಯಿಂದ ಜಾತಿ, ವರ್ಣ ನಿರ್ಮಾಣವಾದರೆ ಆತನಲ್ಲಿರುವ ಶುದ್ಧಾತ್ಮರ ಬಗೆಯೇನು? ಆದುದರಿಂದ ಲಿಂಗಸ್ಥಲವನರಿದವನೇ ಕುಲಜ, ಅರಿಯದವನೆ ಅಂತ್ಯಜ. "ಶಿವನಿಗಿಂತ ಶಿವಭಕ್ತನೇ ಮೇಲು, ಶಿವಭಕ್ತನೆ ಕುಲಜ[೨೧] ಎಂದು ತಮ್ಮ ವಚನದಲ್ಲಿ ಹಾಡಿ ಸಮಾಜದ ತಳ ಸಮುದಾಯದವರನ್ನು ಶಿವಭಕ್ತರನ್ನಾಗಿ ಮಾಡಿ ಉದ್ಧರಿಸಿದರು.

"ವ್ಯಾಸ ಜೋಯಿತಿಯ ಮಗ
ಮಾರ್ಕಾಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿ ಭೋ
ಕುಲದಿಂದ ಮುಂದೇನಾದಿರಿ ಭೋ
ಸಾಕ್ಷದಗಸ್ಯ ಕಬ್ಬಲ, ದುರ್ವಾಸ ಮಜ್ಜಿಗ
ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ರುಷಿ
ಮೂರುಲೋಕವರಿಯೆ ನಾವಿಂದ ಕಾಣೆ ಭೋ
ನಮ್ಮ ಕೂಡಲ ಸಂಗನ ವಚನವಿಂತೆಂದುದು
ಶ್ವಪಚೋಪಿಯಾದರೇನು ಶಿವಭಕ್ತನೆ ಕುಲಜಂ ಭೋ[೨೨]

ಸಮಾಜದಲ್ಲಿ ಮಾನವ ಕುಲ ಒಂದೇ ಎಂದು ಸಾಧಿಸಲು ವಿಶ್ವ ಬಂಧುತ್ವವನ್ನು ಬೋಧಿಸಿದ.

ಕದಿಯಲು ಮನೆಗೆ ಬಂದ ಕಳ್ಳನಲ್ಲೂ ಶಿವ ಅವತಾರವನ್ನರಿತು ಅವನ ಮನಃಪರಿವರ್ತಿಸಿದ. ಉತ್ತಮವಾದ ಬಾಂಧವ್ಯ ಸಮಾಜದಲ್ಲಿರಬೇಕಾದರೆ ಪರಸ್ಪರ ಸಜ್ಜನಿಕೆ ಅತಿ ಮುಖ್ಯ ಅಗತ್ಯ. ಸಜ್ಜನಿಕೆ, ಸರಳತೆಗಳಿಂದ ಒಬ್ಬರಿಗೊಬ್ಬರು ಮರ್ಯಾದೆ ಗೌರವ ತೋರಿಸಿ ಸಮಾಜದಲ್ಲಿ ಮಧುರ ಬಾಂಧವ್ಯ ನೆಲಸಬೇಕೆಂದು ಕರೆ ನೀಡಿದ. ಪ್ರತಿಯೊಬ್ಬರನ್ನು ಇವರು ನಮ್ಮವರು, ನಮ್ಮ ಮನೆಯವರು ಎಂಬ ಕಕ್ಕುಲತೆಯಿಂದ ಕಾಣಬೇಕೆಂಬುದು ಬಸವಣ್ಣನ ಆಶಯವಾಗಿತ್ತು.

"ಇವನಾರವ ಇವನಾರವ ಇವನಾರವ ಎಂದೆಣಿಸದಿರಯ್ಯ
ಇವ ನಮ್ಮವ, ಇವ ನಮ್ಮವ, ಇವ ನಮ್ಮವ ಎಂದೆಣಿಸಯ್ಯ
ಕೂಡಲ ಸಂಗಮದೇವ ನಿನ್ನ ಮನೆಯ ಮಗನೆಂದೆಣಿಸಯ್ಯ[೨೩]

ಜೀವನದಲ್ಲಿ ನೈಜ ಏಕ ದೈವವನ್ನು ನಂಬಬೇಕು - ಈ ಜಗತ್ತು ಒಂದು ಸವಾಲು ಹಾಗೂ ಪ್ರೇರಣೆ. ಜೀವನದ ಗುರಿ ಲಿಂಗಾಂಗ ಸಾಮರಸ್ಯ. ಇದನ್ನು ಅರಿತು ಪ್ರತಿಯೊಬ್ಬ ಜೀವಿಯು ಜೀವಿಸಿ ತನ್ನ ಬಾಳನ್ನು ಬೆಳಗಿಸಿಕೊಳ್ಳಬೇಕೆಂಬುದು ಬಸವಣ್ಣನವರ ಆಶಯವಾಗಿತ್ತು.

ಬಸವಣ್ಣನ ಜೀವನಾಶಯ ಪಲಾಯನವಾದವಲ್ಲ, ಬದಲಾಗಿ ಪ್ರವೃತಿ ಮತ್ತು ನಿವೃತ್ತಿ ಮಾರ್ಗಗಳ ಸಮತೋಲನ. ಬಸವಣ್ಣ ಬಹಿರಂಗದಲ್ಲಿ ಸಮಾಜ ಸುಧಾರಕನಾದರೂ ಅಂತರಂಗದಲ್ಲಿ ಭಕ್ತಿ ಭಂಡಾರಿ.

ಭಕ್ತಿಯ ಭಂಡಾರವೇ ಆಗಿದ್ದ ಬಸವಣ್ಣ ಭಗವಂತನಿಗಾಗಿ ತಹತಹಿಸುವ ಹೃದಯ. ಭಗವಂತನಿಗಾಗಿ ಹಾತೊರೆಯುವ ಮನಸ್ಸು, ನಿತ್ಯವೂ ತೀವ್ರವಾಗಿ ಭಗವಂತನನ್ನು ಕಾಣುವ, ಕೂಡುವ ಕೇಳುವ, ಬಯಕೆ ಅವನಲ್ಲಿ ನಿರಂತರವಾಗಿತ್ತು. ಇದನ್ನೇ ತನ್ನ ವಚನದಲ್ಲಿ ಈ ರೀತಿ ಹೇಳಿದ್ದಾನೆ.

"ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ
ಎನಗೆ ನಮ್ಮ ಕೂಡಲ ಸಂಗಮದೇವರ ನೆನೆವುದೆ ಚಿಂತೆ"[೨೪]

'ಇಲ್ಲಿ ಇರುವುದು ಸುಮ್ಮನೆ ಅಲ್ಲಿ ಇದೆ ನಮ್ಮನೆ' ಎಂಬ ಕವಿವಾಣಿಗೆ ಅನುಗುಣವಾಗಿ ಮನುಷ್ಯ ಭೂಲೋಕದಲ್ಲಿ ಏನೆಲ್ಲಾ ಮಾಡುತ್ತಿದ್ದರೂ ಆತನ ಅಂತಿಮ ಗುರು ದೈವ. ಈ ಲೋಕದ ರಾಡಿಯಿಂದ ಈ ಜೀವನದ ಗೊಂದಲ ಗೋಜುಗಳಿಂದ ಮೇಲೆತ್ತಿ ತನ್ನನ್ನು ನಿತ್ಯ ಸಲಹಿ, ರಕ್ಷಿಸಿ ಕಾಪಾಡಬೇಕಾದವನು ದೈವ ಎಂಬುದನ್ನು ವರ್ಣರಂಜಿತವಾಗಿ ಚಿತ್ರಿಸಿ ಮಾನವ ಪಶುವಾದರೆ ಈ ಜೀವನ ಪಾಶವಾಗಿ ಇವುಗಳ ಒಡೆಯ ದೈವ ಪಶುಪತಿ ಎಂಬುದನ್ನು ಧ್ವನಿಸಿದ್ದಾರೆ.

"ಬಡ ಪಶು ಪಂಕದಲ್ಲಿ ಬಿದ್ದಡೆ ಕಾಲ ಬಡಿವುದಲ್ಲದೆ,
ಬೇರೆ ಗತಿಯುಂಟೆ? ಶಿವ ಶಿವ ಹೋದೆಹೆ ಹೋದೆಹೆನಯ್ಯಾ

ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ, ಪಶು ನಾನು
ಪಶುಪತಿ ನೀನು ತುಡುಗಣಿಯೆಂದು ಎನ್ನ ಹಿಡಿದಂ
ಬಡಿಯದ ಮುನ್ನ ಒಡೆಯಾ ನಿಮ್ಮ ಬಯ್ಯದಂತೆ ಮಾಡು
ಕೂಡಲಸಂಗಮ ದೇವಾ.''[೨೫]

ಮಾನವ ಸತತವಾಗಿ ದೈವ ಚಿಂತನೆಯಲ್ಲಿರಬೇಕು. 'ವಯಸ್ಸಾದ ನಂತರ ದೈವವ ನೆನೆದರೆ ಸಾಕು' ಎಂಬ ಮನೋಭಾವನೆಯನ್ನು ಕಿತ್ತೆಸೆದು ಈಗಲೇ ದೈವವ ನೆನೆದು ಪೂಜಿಸಿ ಸಾಕ್ಷಾತ್ಕಾರ ಪಡೆ ಎಂಬುದು ಇದಕ್ಕಾಗಿ ಇಡೀ ಮಾನವ ಜನಾಂಗಕ್ಕೆ ಯೌವ್ವನದಲ್ಲೇ ದೈವದತ್ತ ಮುಖ ಮಾಡಲು ಕರೆ ನೀಡಿದ.

''ತೆರೆ ಗಲ್ಲಕೆ, ನೆರೆ ಕೆನ್ನೆಗೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯ ನೂರಿ ಕೋಲು ಹಿಡಿಯದ ಮುನ್ನ, ಮುಪ್ಪಿರಿದೊಪ್ಪಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ ಪೂಜಿಸು ನಮ್ಮ ಕೂಡಲ ಸಂಗಮದೇವನ''[೨೬]

ಸತ್ಯದ ಗಣಿಯೇ ಆಗಿದ್ದ ಬಸವಣ್ಣ ಮನುಜರು ಸತ್ಯವಂತರಾಗಿ ಬಾಳಬೇಕೆಂದು ಆಶಿಸುತ್ತಿದ್ದ. ಸ್ವರ್ಗಲೋಕದ ಭ್ರಮೆಯಲ್ಲಿದ್ದ ಮನುಜರಿಗೆ ತನ್ನ ಈ ವಚನದ ಮೂಲಕ ಭ್ರಮೆ ನಿವಾರಿಸುತ್ತಾನೆ.

''ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲಾ ಕಾಣಿರೋ
ಸತ್ಯ ನುಡಿಯುವುದೇ ದೇವಲೋಕ
ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ ಅನಾಚಾರವೇ ನರಕ
ಕೂಡಲ ಸಂಗಮ ದೇವಾ ನೀವೇ ಪ್ರಮಾಣ''[೨೭]

ಬಸವ ತನ್ನ ಜೀವನಪೂರ್ತಿ ಡಂಬಾಚಾರವನ್ನು ಕಪಟ ಭಕ್ತಿಯನ್ನು ಖಂಡಿಸಿ ಲಿಂಗಪೂಜೆಗೆ ದೇವಾಲಯಕ್ಕೆ ಹೋಗುವುದರ ಬದಲಾಗಿ ದೇಹವನ್ನೇ ದೇಗುಲ ಮಾಡಿಕೊಳ್ಳುವಂತೆ ಕರೆ ನೀಡುತ್ತಾನೆ. ಶ್ರೀಮಂತರು, ಉಳ್ಳವರು ಆಲಯ ಕಟ್ಟಿ ತಮ್ಮ ಭಕ್ತಿ ಮೆರೆದರೆ ತಾನು ತನ್ನ ದೇಹವನ್ನೇ ದೇಗುಲವಾಗಿ ದೈವಕ್ಕೆ ಸಮರ್ಪಿಸುತ್ತೇನೆ ಎನ್ನುತ್ತಾರೆ.

''ಉಳ್ಳವರು ಶಿವಾಲಯ ಮಾಡುವರು
ನಾನೇನ ಮಾಡುವೆ? ಬಡವನಯ್ಯ
ಎನ್ನ ಕಾಲೆ ಕಂಬ, ದೇಹವೇ ದೇಗುಲ
ಸಿರ ಹೊನ್ನ ಕಳಸವಯ್ಯಾ
ಕೂಡಲ ಸಂಗಮದೇವಾ ಕೇಳಯ್ಯ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ''[೨೮]

ಪ್ರತಿಯೊಬ್ಬರು ತಮ್ಮನ್ನು ತಾವು ಸುಧಾರಿಸಿಕೊಳ್ಳಬೇಕೆಂಬುದು ಬಸವಣ್ಣ ಆಶಯವಾಗಿತ್ತು. ತನ್ನ ತಪ್ಪನ್ನು ತಾನು ತಿದ್ದಿಕೊಂಡು ಉತ್ತಮ ಜೀವನ ನಡೆಸಬೇಕು. ಬದಲಾಗಿ ಮತ್ತೊಬ್ಬರ, ಈ ಜಗದ

ತಪ್ಪನ್ನಲ್ಲ. 'ನಿನ್ನ ನೀ ಸರಿಪಡಿಸಿಕೋ' ಈ ಮಂತ್ರ ಬಸವಣ್ಣನ ಆಶಯವಾಗಿತ್ತು. ಇದನ್ನೇ ವಚನದಲ್ಲಿ ಈ ರೀತಿ ಹೇಳುತ್ತಾರೆ:

"ಲೋಕದ ಡೊಂಕನ್ನು ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿ ಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆ ಮನೆಯ ದುಃಖಕ್ಕೆ ಅಳುವವರ
ಮೆಚ್ಚ ಕೂಡಲಸಂಗಮ ದೇವ"[೨೯]

ಬಸವಣ್ಣ ಯಾವಾಗಲೂ ಹೃದಯ ಶುದ್ಧಿಗೆ ಮಹತ್ವವನ್ನಿತ್ತು ಶರಣರೆಲ್ಲರೂ ಈ ಪಥದಲ್ಲೇ ನಡೆಯಬೇಕೆಂದು ಆಶಿಸುತ್ತಿದ್ದ. ಕೇವಲ ತಪಸ್ಸು, ತ್ಯಾಗ, ದೇಹದಂಡನೆ ಇವೆಲ್ಲಕ್ಕಿಂತ ಮಿಗಿಲಾದದ್ದು ಹೃದಯ ಶುದ್ಧಿ. ಇದಕ್ಕೆ ಪೂರಕವಾಗಿ:

"ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ?
ಅಘೋರ ತಪವ ಮಾಡಿದೊಡೇನು?
ಅಂತರಂಗ-ಆತ್ಮಶುದ್ಧಿಯಿಲ್ಲದವರನೆಂತು
ನಂಬುವನಯ್ಯ ಕೂಡಲ ಸಂಗಮ ದೇವಾ[೩೦]

ದಯೆ ಕರುಣೆಯ ಸಾಕಾರ ಮೂರ್ತಿ ಬಸವಣ್ಣ. "ದಯೆಯೇ ಧರ್ಮದ ಮೂಲವಯ್ಯ" ದಯೆ ಇಲ್ಲದ ಧರ್ಮ ಯಾವುದಯ್ಯ? ಎಂದು ಪ್ರಶ್ನಿಸುವುದರ ಮೂಲಕ ದಯೆ ಪ್ರತಿಯೊಂದು ಧರ್ಮದ ಮೂಲ. ಯಾವ ಧರ್ಮದಲ್ಲಿ ದಯೆ, ಕರುಣೆಗೆ ಎಡೆಯಿಲ್ಲವೋ ಅಂತಹ ಧರ್ಮವನ್ನು ಬಸವಣ್ಣ ಒಪ್ಪುವುದಿಲ್ಲ. 'ದಯೆ' ಇಲ್ಲದ ಧರ್ಮ ಧರ್ಮವೆನಿಸಿಕೊಳ್ಳಲು ಅಸಮರ್ಥವಾದುದೆಂಬ ಪ್ರತಿಪಾದನೆ ಬಸವಣ್ಣನದಾಗಿತ್ತು.

"ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವರೆ ನಮ್ಮ ಶರಣರು"[೩೧] ಸರ್ವೋ ಜನೋ ಸುಖಿನೋ ಭವಂತು' ಎಂಬ ಆಶಯ ಬಸವಣ್ಣನವರದು. ಪ್ರಪಂಚದ ಎಲ್ಲಾ ಪ್ರಮುಖ ಧರ್ಮಗಳಾದ ಹಿಂದೂ, ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ ಇತ್ಯಾದಿ ಧರ್ಮಗಳು ಬೋಧಿಸುವ ನೈತಿಕ ಜೀವನ ಮೌಲ್ಯಗಳನ್ನೇ ಬಸವಣ್ಣ ಸುಂದರವಾಗಿ ತನ್ನ ವಚನಗಳಲ್ಲಿ ಚಿತ್ರಿಸಿದ್ದಾನೆ.

"ಕಳಬೇಡ, ಕೊಲಬೇಡ, ಹುಸಿಯ ನುಡಿಯ ಬೇಡ
ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ
ಇದಿರ ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ
ಇದೇ ಬಹಿರಂಗ ಶುದ್ಧಿ ಇದೇ ನಮ್ಮ
ಕೂಡಲ ಸಂಗನ ಒಲಿಸುವ ಪರಿ"[೩೨]

ಈ ಬೋಧನೆಯು ಜಗತ್ತಿನ ವಿವಿಧ ಪ್ರಮುಖ ಧರ್ಮಗಳ ಧಾರ್ಮಿಕ ನಾಯಕರುಗಳಾದ ಬುದ್ಧ, ಮಹಾವೀರ, ಕ್ರಿಸ್ತ, ಮಹಮದ್ ಇತ್ಯಾದಿ ಪ್ರಮುಖರ ಮೂಲಭೂತ ನೈತಿಕ ಬೋಧನೆಗಳೊಂದಿಗೆ ಪರಿಪೂರ್ಣವಾಗಿ ಮಾರ್ ಧ್ವನಿಸುತ್ತದೆ.[೩೩]

ಬಸವಣ್ಣನ ಜೀವನಾಶಯ 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬುದಾಗಿತ್ತು. ಭಕ್ತಿ ಭಂಡಾರಿಯಾಗಿ, ಸಮಾಜ ಸುಧಾರಕನಾಗಿ, ರಾಜ್ಯದ ಕೋಶಾಧಿಕಾರಿಯಾಗಿ, ಸಮಾಜೋ ಧಾರ್ಮಿಕ ಆಂದೋಲನದ ನಾಯಕನಾಗಿ ಬಸವಣ್ಣ ಈ ವಿನಮ್ರಶೀಲ ವ್ಯಕ್ತಿತ್ವ ಇತರರಿಗಿಂತ ವಿಶಿಷ್ಠವಾದದ್ದು, ಅನನ್ಯವಾದುದು ತನ್ನನ್ನು ತಿದ್ದುವವರನ್ನು ಮೆಚ್ಚಿ ತನ್ನನ್ನು ಹೊಗಳುವವರನ್ನು ಹೊನ್ನ ಶೂಲಕ್ಕೇರಿಸುವವರೆಂದು ಜರಿಯುತ್ತಿದ್ದ. ಬಸವಣ್ಣನವರ ಜೀವನಾಶಯವನ್ನು ಎತ್ತಿ ಹಿಡಿಯುವಾಗ ಅವರ ಮುಖ್ಯ ಆಶಯಗಳನ್ನು ಈ ರೀತಿ ಪಟ್ಟಿ ಮಾಡಬಹುದು.

ಅ. ಸರ್ವರೂ ಕಾಯಕ ಧರ್ಮವನ್ನು ಆಚರಿಸಿ ಸಮಾಜ ಮುಖಿಯಾಗಿ ಯಾವ ಕೆಲಸವೂ ಕೀಳಲ್ಲ ಅಥವಾ ಮೇಲಲ್ಲಾ ಎಂದು ಅರಿತು ಲೋಕ ಕಲ್ಯಾಣಕ್ಕಾಗಿ ಕಾರ್ಯಪ್ರವೃತ್ತನಾಗಬೇಕು. 'ಕಾಯಕವೇ ಕೈಲಾಸ' ಎಂಬುದು ಬಸವಣ್ಣನವರ ಆಶಯವಾಗಿತ್ತು.

ಆ. ಭಕ್ತಿಯ ಮೂಲಕವೇ ದೈವವನ್ನು ಒಲಿಸಿಕೊಳ್ಳಲು ಸಾಧ್ಯ. ಇದಕ್ಕೆ ಪೂರಕವಾಗಿ ಹೃದಯ ಶುದ್ಧಿ, ಚಿತ್ತ ಶುದ್ಧಿ, ಮನ ಶುದ್ಧಿ ಅಗತ್ಯ ಎಂಬುದು ಆತನ ನಂಬಿಕೆಯಾಗಿತ್ತು.

ಇ. ಮನುಜರೆಲ್ಲರು ಸತ್ಯವಂತರಾಗಬೇಕೆಂಬುದು ಬಸವಣ್ಣನ ಆಶಯವಾಗಿತ್ತು. ಅದಕ್ಕಾಗಿ ಪ್ರತಿಯೊಬ್ಬನು ತನ್ನನ್ನು ತಾನು ತಿದ್ದಿಕೊಂಡು ಬೆಳೆದು ಕಲ್ಯಾಣ ಸಮಾಜವನ್ನು ನಿರ್ಮಿಸಬೇಕೆಂದು ಆತನ ಆಶಯ. ವರ್ಣರಹಿತ, ವರ್ಗ ರಹಿತ, ಜಾತ್ಯತೀತ, ಸಮಾಜ ನಿರ್ಮಾಣದ ಆಶಯ ಬಸವಣ್ಣನದಾಗಿತ್ತು. ಇದಕ್ಕಾಗಿ ಮನುಷ್ಯ-ಮನುಷ್ಯರಲ್ಲಿನ ಅಸಮಾನತೆ, ಸ್ತ್ರೀ-ಪುರುಷರಲ್ಲಿನ ಅಸಮಾನತೆ ತೆಗೆದು ಸರ್ವರಿಗೂ 'ಸಮಪಾಲು ಸರ್ವರಿಗೂ ಸಮಬಾಳು' ಎಂಬ ತತ್ವ ಬಸವಣ್ಣನದಾಗಿತ್ತು.

ಈ. ಭಕ್ತರೆಲ್ಲರೂ ಲಿಂಗಾಂಗ ಸಾಮರಸ್ಯದಿಂದ ಬದುಕಿ ದೈವ ಸಾಕ್ಷಾತ್ಕರಿಸಿ ಸಮಾಜ ಕಲ್ಯಾಣ ಹಾಗೂ ಸ್ವ ಕಲ್ಯಾಣ ಎರಡನ್ನು ಸಮತೋಲನದಲ್ಲಿಟ್ಟು ಜೀವನ ನಡೆಸುವುದೇ ಬದುಕಿನ ಗುರಿಯಾಗಬೇಕೆಂಬುದು ಅವರ ಆಶಯವಾಗಿತ್ತು.

ಉ. 'ಸಮಾಜ ಸಮತಾ ಭಾವನೆ' ಎಂದರೆ ಅದು ಕೇವಲ ಒಂದು ರಾಜಕೀಯ ನೀತಿ, ಧೋರಣೆ ಎನ್ನುವುದಕ್ಕಿಂತ ಅದು ಒಂದು ಆದರ್ಶ ಧರ್ಮ, ಜೀವನದ ಉಸಿರು ಎನ್ನಬೇಕೆಂಬ ಒಂದು ಆದರ್ಶ ಸಮಾಜವನ್ನು ರಚಿಸಿ ಮಾದರಿಯನ್ನು ಹಾಕಿಕೊಟ್ಟ ಬಸವಣ್ಣ.

೪.೪ ಯೇಸು ಮತ್ತು ಬಸವಣ್ಣನವರ ಬೋಧನೆಯಲ್ಲಿನ ಧಾರ್ಮಿಕ ಸಂವಾದದ ಸಮಾನ ಚಿಂತನೆಗಳು

ಬಸವ ಮತ್ತು ಯೇಸುಕ್ರಿಸ್ತ ಇಬ್ಬರು ತಮ್ಮ ಯೌವ್ವನಾವಧಿಯಲ್ಲೆ ಮಡಿದರು. ಇಬ್ಬರ ಕಾರ್ಯಕ್ಷೇತ್ರ ಹಾಗೂ ಕಾಲ ಬಹಳ ಕಿರಿಯದಾಗಿತ್ತು. ತಮ್ಮ ತಮ್ಮ ಜೀವಿತಾವದಿಯಲ್ಲಿಯೇ ಅನುಯಾಯಿಗಳನ್ನು ತಯಾರಿಸಿದ್ದರು. ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಇಬ್ಬರೂ ಸಹ ತಮ್ಮ ಕಾಲದ ಸಮಾಜದ ತಳ ಸಮುದಾಯದವರನ್ನೇ ಆರಿಸಿಕೊಂಡು ಅನುಯಾಯಿಗಳನ್ನಾಗಿ ಮಾಡಿಕೊಂಡಿದ್ದರು.

ಯೇಸುಕ್ರಿಸ್ತ ತನ್ನ ಆಂದೋಲನವನ್ನು ತನ್ನ ಧರ್ಮ ಸಭೆಯನ್ನು ಮೀನುಗಾರರ ಮೂಲಕ ಕಟ್ಟಿದರೆ; ಬಸವಣ್ಣ ತನ್ನ ಅಂದೋಲನಕ್ಕೆ ಸಮಾಜದ ಅತ್ಯಂತ ತಳಸಮುದಾಯದ ವರ್ಗದವರಾದ ಚಮ್ಮಾರರು, ಬುಟ್ಟಿ ಎಣೆಯುವವರು, ಮೇದಾರರು, ಮರ ಕಡಿಯುವವರು ಇಂತಹ ಅನುಯಾಯಿಗಳನ್ನು ತನಗಿಂತ ಮೇಲ್ಮಟ್ಟದಲ್ಲಿ ಎತ್ತಿ ಹಿಡಿದ.

ಬಸವ-ಯೇಸು ಅನೇಕ ಪವಾಡಗಳನ್ನು ಮಾಡಿದರು. ಸತ್ತವರನ್ನು ಎಬ್ಬಿಸಿದರು. ಬಸವ ಕಾಳುಗಳನ್ನು ಮುತ್ತುಗಳನ್ನಾಗಿ ಮಾಡಿದ, ಅದಕ್ಕಿಂತಲೂ ಮಿಗಿಲಾಗಿ ಕಳ್ಳರನ್ನು, ಸಮಾಜಘಾತುಕ ಶಕ್ತಿಗಳನ್ನು ದುಷ್ಟರನ್ನು ಶರಣರನ್ನಾಗಿಸಿದ. ಬಸವಣ್ಣನಾಗಲಿ, ಕ್ರಿಸ್ತನಾಗಲಿ ತನ್ನ ಅನುಯಾಯಿಗಳ ಭೌತಿಕ ಸೌಲಭ್ಯಗಳ ಬಗ್ಗೆ ಯಾವುದೇ ತಿರಸ್ಕಾರ ಹಾಗೂ ಪುರಸ್ಕಾರ ತೋರದೆ ಸುಮ್ಮನಿದ್ದರು.

ಯೇಸುಕ್ರಿಸ್ತ ತನ್ನ ಅನುಯಾಯಿಗಳಿಗೆ ರೊಟ್ಟಿ ಹಾಗೂ ಮೀನನ್ನು ಅದ್ಭುತವಾಗಿ ಹಂಚಿದರೆ, ಬಸವಣ್ಣ ತನಗಿಂತ ರಾಜ ಪ್ರಭಾವವನ್ನು ಬಳಸಿ ಕಲ್ಯಾಣದಲ್ಲಿ ಸಾವಿರಾರು ಜನರಿಗೆ ದಾಸೋಹಕ್ಕೆ ಕಾರಣನಾದ.

"ತನ್ನ ಬೆವರನ್ನು ಸುರಿಸಿ ಪ್ರತಿಯೊಬ್ಬನು ದುಡಿದು ಸಂಪಾದಿಸಿ ದೈವಕ್ಕೆ ಸಮರ್ಪಿತ ಮನೋಭಾವದಿಂದ ಜೀವನ ಮಾಡಬೇಕೆಂಬ 'ಕಾಯಕ' ನೀತಿಯನ್ನು ಬಸವಣ್ಣ ಪ್ರತಿಪಾದಿಸಿದರೆ; ಯೇಸುಕ್ರಿಸ್ತ ತನ್ನ ಅನುಯಾಯಿಗಳು ಅನಗತ್ಯವಾಗಿ ನಾಳೆ ಬಗ್ಗೆ ಹಾಳು ಹೊಟ್ಟೆ, ಬಟ್ಟೆ ಬಗ್ಗೆ ಚಿಂತಿಸುವವರನ್ನು ಗದರಿಸಿದ. ಆಕಾಶದ ಹಕ್ಕಿಗಳ, ಭೂಮೇಲಿನ ಹೂವುಗಳ ಉದಾಹರಣೆ ನೀಡುತ್ತ ಕಾಯಕ ಗೌರವವನ್ನು ಎತ್ತಿ ಹಿಡಿದ.

ಯಾವುದೇ ಎರಡೂ ಧರ್ಮಗಳು ಪರಸ್ಪರ ಪುನರಾವರ್ತನೆಗೊಳ್ಳುವುದಿಲ್ಲ. ಯಾವುದೇ ಎರಡೂ ಧರ್ಮಗಳ ಅತ್ಯುನ್ನತ ಸಮಾನ ಅಂಶಗಳನ್ನಾಗಲಿ, ಅಥವಾ ಅತಿ ಕನಿಷ್ಠ ಸಾಮಾನ್ಯ ಭಾಗಗಳನ್ನಾಗಲಿ ಸಮೀಕರಿಸುವುದು ಕಾರ್ಯಸಾಧುವಲ್ಲ; ಧರ್ಮ ಎನ್ನುವುದು ಕೇವಲ ಬೌದ್ಧಿಕ ಒಪ್ಪಿಗೆ ಮಾತ್ರವಲ್ಲ ಅದೊಂದು ಜೀವನ ಮಾರ್ಗ. ಅನೇಕ ಬಾರಿ ಅದು ಮಾನವ ಸಂಸ್ಕೃತಿಯಲ್ಲೇ ಸಮ್ಮಿಳಿತವಾಗಿರುತ್ತದೆ."[೩೪]

ಈ ಹಿನ್ನೆಲೆಯಲ್ಲಿ ಈ ಇಬ್ಬರೂ ಮಹಾತ್ಮರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದದ ಸಮಾನ ಚಿಂತೆಗಳತ್ತ ಒಂದು ನೋಟ ಹರಿಸುವ ಯತ್ನ ಇಲ್ಲಿದೆ.

೪.೪.೧ ಬಸವಣ್ಣ ಅಸ್ಪೃಶ್ಯೋದ್ಧಾರ

ಸಮಾಜದಲ್ಲಿ ಸಮಾನತೆ ತರಬೇಕಾದರೆ ಮೊಟ್ಟಮೊದಲು ಜಾತಿ ನಿರ್ಮೂಲನೆ ಆಗಬೇಕೆಂದು ಬಸವಣ್ಣ ಬಲವಾಗಿ ನಂಬಿದ್ದ. ಲಿಂಗಧಾರಿಗಳಾದ ಎಲ್ಲಾ ಶಿವಭಕ್ತರನ್ನು ಸಮಾನ ಭಾವನೆಯಿಂದ ಕಾಣುತ್ತಿದ್ದ. ಎಂಟುನೂರು ವರ್ಷಗಳ ಹಿಂದೆ ಸಮಾಜವು ಜಾತಿ-ವಿಜಾತಿಗಳ ಬಲವಾದ ಸಂಕೋಲೆಗಳಿಗೆ ಸಿಕ್ಕಿ ತೊಳಲಾಡುತ್ತಿತ್ತು. ಅಂತ್ಯಜರ ಬಾಳು ದಿನ ದಿನವೂ ಗೋಳಾಗಿತ್ತು.

ಯಾವ ಜನಾಂಗವು ವೇದವೋದುವದೊತ್ತೊಟ್ಟಾಗಿರಲಿ, ವೇದಘೋಷಣಗಳನ್ನು ಕೇಳಿದರೆ ಸೀಸವನು ಕುದಿಯುವಂತೆ ಕಾಯಿಸಿ, ಅವರ ಕಿವಿಯಲ್ಲಿ ಸುರಿಯಬೇಕೆಂದು ಹೇಳುವಂತಹ ಕಾಲದಲ್ಲಿ, ಜಾತಿ ನಿರ್ಮೂಲನೆಗೆ ಪಣತೊಟ್ಟು ಕೃತಿಗಿಳಿದರು. ತಮ್ಮನ್ನು ಅಸ್ಪೃಶ್ಯರೊಂದಿಗೆ ಒಂದಾಗಿಸಿಕೊಂಡು ಅವರ ಏಳಿಗೆಗೆ ಹೆಗಲೊಡ್ಡಿದರು.[೩೫]

> **"ಕೊಲ್ಲುವವನೇ ಮಾದಿಗ, ಹೊಲಸ ತಿಂಬುವವನೆ ಹೊಲೆಯ,**
> **ಕುಲವೇನೋ ಅವಂದಿರ ಕುಲವೇನೊ? ಸಕಲ**
> **ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ**
> **ಕೂಡಲ ಸಂಗನ ಶರಣರೇ ಕುಲಜರು."[೩೬]**

ಎಂದು ಹೇಳುವ ಮೂಲಕ ತಳ ಸಮುದಾಯದ ಜನಗಳ ಆತ್ಮ ವಿಶ್ವಾಸವನ್ನು ಎತ್ತಿ ಹಿಡಿದು ಅವರು ಆತ್ಮಿಕತೆಯತ್ತ ಮುಖ ಮಾಡುವಂತೆ ಮಾಡಿದರು. "ವ್ಯಾಸ ಬೋಯಿತಿಯ ಮಗ.........." ಎಂಬ ವಚನದ ಮೂಲಕ ಜಾತಿಗಳೆಂಬುವು ಜ್ಞಾನಿಗಳಿಗೆಲ್ಲ ಶಿವಭಕ್ತನೆ ಉತ್ತಮ ಕುಲದವನೆಂದು ಹೇಳುವುದರ ಮೂಲಕ ಜಾತ್ಯತೀಯ ನಿಲುವನ್ನು ಬಸವಣ್ಣನವರು ವ್ಯಕ್ತಪಡಿಸುತ್ತಾರೆ.

"ಮಹಾನ್ ರಾಜ್ಯದ ದಂಡಾಧಿಪತಿಯೂ ಉತ್ತಮ ವಂಶ ಸಂಜಾತನೂ ಆದ ಬಸವಣ್ಣನು ಅಸ್ಪೃಶ್ಯರ ಉದ್ಧಾರಕ್ಕೆ ಹೊರಟಾಗ ಎದುರಿಸಿದ ಸಮಸ್ಯೆ 'ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತಯ್ಯ ನನ್ನಯ್ಯನಾದರೆ ಆನು ಬದುಕೆನೆ? ಮತ್ತಾಶ್ವಪಚಯ್ಯನೆ ಸನ್ನಿಧಿಯಿಂದ ಭಕ್ತಿಯ ಸದ್‌ಗುಣವ ನಾನರಿವೆನಯ್ಯಾ, ಕಷ್ಟ ಜಾತಿಯ ಜನ್ಮದಲ್ಲಿ ಜನಿಸಿದೆ, ಎನಗಿದು ವಿಧಿಯೆ! ಕೂಡಲಸಂಗಮದೇವಾ' ಎಂದು ಹೇಳುವುದರ ಮೂಲಕ ತನ್ನ ಮನಸ್ಸಿನ ದುಗುಡವನ್ನು ಹೇಳಿರುವನು. ಅದೇ ಸಮಯದಲ್ಲಿ ಕೆಳವರ್ಗದವರ ಸಾಮೀಪ್ಯ ತನಗೆಷ್ಟಿದೆ ತಾನು ಅವರಿಗೆಷ್ಟು ಹತ್ತಿರದವನೆಂದು ಈ ವಚನದಲ್ಲಿ ತಿಳಿಸಿದ್ದಾರೆ. "ಚೆನ್ನಯ್ಯನ ಮನೆಯ ದಾಸಿಯ ಮಗನು ಕಕ್ಕಯ್ಯನ ಮನೆಯ ದಾಸಿಯ ಮಗಳು ಇವರಿಬ್ಬರು ಹೊಲದಲಿ ಬೆರಣೆಗೆ ಹೋಗಿ

ಸಂಗಮ ಮಾಡಿದರು; ಇವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲ ಸಂಗಮ ದೇವ ಸಾಕ್ಷಿಯಾಗಿ"[೩೯] ಇಷ್ಟು ಹೀನಾಯಾವಾಗಿ ತನ್ನನ್ನು ಕರೆದುಕೊಳ್ಳುವುದರಲ್ಲಿ ಬಸವಣ್ಣನಿಗೆ ಒಂದು ಬಗೆಯ ಆನಂದವಿದೆ. 'ಆವನಾದರೇನು, ಶ್ರೀ ಮಹಾದೇವನ ನೆನೆವವನ ಬಾಯ ತುಂಬಲು ಮೆಲುವೆ, ಬೀಳುಡಿಗೆಯ ಹೊದೆವೆ. ಪಾದರಕ್ಷೆಯ ಕಾಯ್ದು ಬದುಕುವೆ, ಹೊಲೆಯ ಮಾದಿಗ ಭಕ್ತನಾದರೆ ಆತನ ಮನೆಯ ಸೊಣಗಂಗೆ ಪಂಚಾಮಹಾ ವಾದ್ಯದಲ್ಲಿ ಸನ್ಮಾನೆಯ ಮಾಡೆನೆ? ನೆಲವನು ಗ್ಘಡಿದೆ ಉಷೆ ಥಾಂಗು ಭಲಿರೆ ಎಂದು![೪೦] ಹೀಗೆ ಮನತುಂಬಿ ಹೇಳುವ ಪ್ರಾಮಾಣಿಕತೆ ಬಸವಣ್ಣನ ಭವ್ಯ ವ್ಯಕ್ತಿತ್ವನ್ನು ಇನ್ನಷ್ಟು ಉಜ್ವಲವಾಗಿಸುತ್ತದೆ. "ಬಸವಣ್ಣ ಅಸ್ಪೃಶ್ಯರ ಮನದಲ್ಲಿ ಹಚ್ಚಿದ ಆತ್ಮವಿಶ್ವಾಸದ ಕಿಚ್ಚು ಭಗ್ಗನೆ ಇಡೀ ಜನಾಂಗವನ್ನು ಆವರಿಸಿದುದು ಪವಾಡವಾಗಿ, ಆದರೂ ನಂಬಲೇ ಬೇಕಾದ ಸತ್ಯ ಸಂಗತಿಯಾಗಿ ಇತಿಹಾಸದಲ್ಲಿ ಕಾಣಬರುತ್ತದೆ."

ಬಸವಣ್ಣನರ ಅಸ್ಪೃಶ್ಯೋದ್ಧಾರವನ್ನು ಎತ್ತಿ ಹಿಡಿದ ಹಿರಿಯ ಸಂಶೋಧಕ ಡಾ. ಎಂ. ಚಿದಾನಂದ ಮೂರ್ತಿಯವರು ಹೀಗೆನ್ನುತ್ತಾರೆ: "ಸಮಾಜದ ತೀರ ಕೆಳವರ್ಗದವರೆಂದು ಭಾವಿಸಲಾಗಿದ್ದ ಅಸ್ಪೃಶ್ಯರ ಬಗ್ಗೆ ಅವನು ತಾಳದ ನಿಲುವು ಭಾರತದ ಇತಿಹಾಸದಲ್ಲೆ ಅನನ್ಯವಾದುದು. ಅವರ ಬಗ್ಗೆ ಅವನು ಅಹಂಕಾರ ಮೂಲವಾದ ಪೋಷಕ ಮನೋಭಾವವನ್ನಾಗಲಿ ಅಥವಾ ಬರಿಯ ತೋರಿಕೆಯ ಸಹಾನುಭೂತಿಯ ಮನೋಭಾವವನ್ನಾಗಲೀ ತಾಳಲಿಲ್ಲ. ಅವನು ನಿಜವಾದ ಅರ್ಥದಲ್ಲಿ ಅವರನ್ನು ಪ್ರೀತಿಸಿದ; ಅವರೊಡನೆ ಕೂಡಿ ಬದುಕಿದ."[೪೧]

೪.೪.೨ ಯೇಸು ಸ್ವಾಮಿ 'ದಲಿತೇಶ್ವರ'

"ಕಡೆಗಣಿಸಲ್ಪಟ್ಟ ಜನಸ್ತೋಮದ ಬಗ್ಗೆ ಸರಿಗಟ್ಟಲಾರದ ಪ್ರೀತಿಯನ್ನು ತೋರಿದರು ಯೇಸು. ಅವರು ಹುಟ್ಟಿದ್ದು, ಬೆಳೆದದ್ದು, ಧರ್ಮ ಬೋಧನೆಯನ್ನು ನೀಡಿದ್ದು ತಮ್ಮ ಕಾಲದ ದಲಿತ ಸಮುದಾಯದ ನಡುವೆ ಎಂಬುದು ಜಗತ್ತಿನ ದಲಿತರಿಗೆ ಹೆಮ್ಮೆಯ ಸಂಗತಿ.

ಯೇಸುಸ್ವಾಮಿ ಪಟ್ಟಭದ್ರರ ವಿರೋಧ ಮತ್ತು ಸಂಚಿನ ಎದುರು ಸೋಲಲಿಲ್ಲ. ದಲಿತರು ಮತ್ತು ಶೋಷಿತರೆ ದೇವರಾಜ್ಯದ ವಾರಸುದಾರರು ಎಂದು ಲೋಕಕ್ಕೆ ಸಾರಿದರು. ಆ ಕಾಲದಲ್ಲಿ ನಿಷ್ಕೃಷ್ಟರೆಂದು ಉಪೇಕ್ಷೆಗೆ ಒಳಗಾಗಿದ್ದ ಬಹಿಷ್ಕೃತರು ಮತ್ತು ಪಾಪಿಗಳ ಮನೆಗೆ ಭೇಟಿಕೊಟ್ಟು ಅವರೊಂದಿಗೆ ಭೋಜನ ಮಾಡಿದರು. ಕ್ರೂರವಾದ ಕಟ್ಟಳೆಗಳನ್ನು ಉಲ್ಲಂಘಿಸಿ ಶ್ರೀಸಾಮಾನ್ಯನೊಂದಿಗೆ ಬೆರೆತು ಬೋಧಿಸಿದರು. ಪಾಪಿಗಳೆನಿಸಿಕೊಂಡ ಮುಗ್ಧರಿಗೆ ಮುಕ್ತಿ ಪಥವನ್ನು ತೋರಿದರು. ಪುರೋಹಿತಶಾಹಿವರ್ಗ ಯೇಸುವಿನ ಜನಪ್ರಿಯತೆಯನ್ನು ಕಂಡು ಕರುಬಿ, ತಮ್ಮ ಸ್ಥಾನಚ್ಯುತಿಯ ಭಯದಿಂದ ಅವರನ್ನು ಅಪರಾಧಿಯೆಂದು ಘೋಷಿಸಿ ಹಿಂಸೆಗೊಳಪಡಿಸಿತು. ಶೋಷಕ ವ್ಯವಸ್ಥೆ ಯೇಸುವನ್ನು ಶಿಲುಬೆಗೇರಿಸಿತು. ಆದರೆ, ದೈವ ಯೇಸುವನ್ನು ದಲಿತೇಶ್ವರನೆಂದು ಪುರಸ್ಕರಿಸಿತು."[೪೩]

ಡಾ. ಸಿದ್ದಲಿಂಗಯ್ಯನವರು ಮೇಲ್ಕಂಡ ಪುಸ್ತಕದ ಬೆನ್ನುಡಿಯಲ್ಲಿ ಯೇಸು ಸ್ವಾಮಿಯನ್ನು 'ದಲಿತೇಶ್ವರ' ಪಟ್ಟಕ್ಕೆ ಏರಿಸಿದ್ದಾರೆ. ಯೇಸುಸ್ವಾಮಿ ದಲಿತರ ಧ್ವನಿಯಾಗಿದ್ದರು. ಶೋಷಿತ ವರ್ಗಕ್ಕೆ ಆಸರೆಯಾಗಿದ್ದು ಅಸ್ಪೃಶ್ಯರಲ್ಲಿ ಆತ್ಮಜಾಗೃತಿಯನ್ನು ಉಂಟುಮಾಡಿದರು.

ದೀಕ್ಷಾಸ್ನಾನದ ನಂತರ ಯೇಸುಸ್ವಾಮಿ ತನ್ನ ಗಮನವನ್ನು ಬಡವರ ನೋವಿನತ್ತ ಹರಿಸುವುದನ್ನು ಕಾಣುತ್ತೇವೆ. ಬಹು ಸಂಖ್ಯಾಕ ಜನ ಬಡವರು, ದಲಿತರು, ಅಸ್ಪೃಶ್ಯರು, ಶೋಷಿತರಾಗಿದ್ದರು. ಸುವಾರ್ತೆಗಳಲ್ಲಿ ಈ ಜನರನ್ನು ಬಡವರು, ಕುರುಡರು, ಕುಂಟರು, ಅಂಗವಿಕಲರು, ಕುಷ್ಟರೋಗಿಗಳು, ಅತ್ತು ಪ್ರಲಾಪಿಸುವವರು, ಪಾಪಿಗಳು, ನೀತಿ-ನಿಯಮ ಅರಿಯದ ಅಜ್ಞಾನಿಗಳು, ಕಳೆದುಹೊದ ಕುರಿಗಳು ಎಂಬುವುದಾಗಿ ಗುರುತಿಸುವುದನ್ನು ನಾವು ಕಾಣುತ್ತೇವೆ. ಯೇಸುಸ್ವಾಮಿ ಈ ಜನರನ್ನು ಕಂಡು ಬಡವರೆ ಭಾಗ್ಯವಂತರು ಏಕೆಂದರೆ ದೇವರ ರಾಜ್ಯ ನಿಮ್ಮದು ಎಂದರು. ಈ ಜನರನ್ನು 'ಪುಟ್ಟಮಕ್ಕಳೇ' ಎಂಬುದಾಗಿ ಪ್ರೀತಿಯಿಂದ ಕರೆದರು. ತೋರಿಕೆಯಲ್ಲಿ, ಆಡಂಬರದಲ್ಲಿ, ಪ್ರದರ್ಶನಪ್ರಿಯರಾಗಿದ್ದ ಫರಿಸಾಯರ ಮತ್ತು ಧಾರ್ಮಿಕ ಮುಖಂಡರ ದೃಷ್ಟಿಯಲ್ಲಿ ಪಾಪಿಗಳು, ಧರ್ಮಶಾಸ್ತ್ರ ಅನುಸರಿಸದ ಕೀಳುಜನ, ಅಸ್ಪೃಶ್ಯರು ಎನಿಸಿಕೊಂಡಿದ್ದ ಈ ಜನರಿಗೆ ಯೇಸುಸ್ವಾಮಿ ಆಶಾಕಿರಣವಾಗಿ ಬಾಳಿನ ಹೊಸ ಭರವಸೆಯಾಗಿ ಕಂಡರು.

ಶುಭಸಂದೇಶದಲ್ಲಿ ಉಲ್ಲೇಖವಾಗಿರುವ 'ಬಡವರು' ಎಂದಾಕ್ಷಣ ಅವರು ಕೇವಲ ಆರ್ಥಿಕವಾಗಿ ಮಾತ್ರ ಬಡವರಾಗಿದ್ದರು ಎಂದು ತಿಳಿಯಬೇಕಿಲ್ಲ ಈ 'ಬಡವರ' ಪಟ್ಟಿಯಲ್ಲಿ ಎಲ್ಲಾ ಶೋಷಿತರು, ವಿಧವೆಯರು, ಅನಾಥರೂ, ಸಮಾಜದಲ್ಲಿ ಅಸ್ಪೃಶ್ಯರು, ಭೀಕರ ಕಾಯಿಲೆಗೆ ತುತ್ತಾದವರು, ಭಿಕ್ಷುಕರು, ಭೂಮಿಯಿಲ್ಲದ ರೈತರು, ಕೂಲಿಯಾಳುಗಳು ಸೇರಿದ್ದರು.

ಇವರ ಬದುಕು ಅವಮಾನದ ಬದುಕಾಗಿತ್ತು. ಈ ಜನರಿಗೆ ಸ್ವಾಭಿಮಾನವಿಲ್ಲದೆ ಧರ್ಮಶಾಸ್ತ್ರಜ್ಞರ ದೃಷ್ಟಿಯಲ್ಲಿ ಕೇವಲ ಪಾಪಿಗಳಾಗಿದ್ದು ಇವರು ಅವರ ದೃಷ್ಟಿಯಲ್ಲಿ ಮಾನವಜೀವಿಗಳೇ ಆಗಿರಲಿಲ್ಲ. ಹಣ, ವಿದ್ಯೆ, ಗೌರವವಿಲ್ಲದೆ ಬದುಕುವುದು 'ಮನುಷ್ಯನ ಪಾಡು ನಾಯಿಗಿಂತ ಕಡೆ' ಎಂಬ ಸತ್ಯ ಈ ಜನರ ನೋವಿಗೆ ದೊಡ್ಡ ಗಾಯವಾಗಿದ್ದು ಈ ಜನರಿಗೆ ಬದುಕೇ ಅರ್ಥಹೀನವಾಗಿದ್ದು ಯೇಸುಕ್ರಿಸ್ತ ತಾನು ಗೌರವಾನ್ವಿತ ಗುಂಪಿಗೆ ಸೇರಿಕೊಂಡಿದ್ದರು. ಅವರು ಸಂಪೂರ್ಣವಾಗಿ ಧ್ವನಿಯಾಗಿದ್ದು ಅಸ್ಪೃಶ್ಯರಿಗೆ ನಾಯಕನಾಗಿದ್ದು ಶೋಷಿತವರ್ಗಕ್ಕೆ, ಬೀದಿ ವೇಶ್ಯರೊಂದಿಗೆ, ಭಿಕ್ಷುಕರೊಂದಿಗೆ, ಸಮಾಜದ ಅಂತ್ಯಜರೊಂದಿಗೆ ಒಬ್ಬ ಗೌರವಾನ್ವಿತ ಮಧ್ಯಮ ವರ್ಗದ ಯುವಕನಾದ ಯೇಸುಕ್ರಿಸ್ತ ಅಸ್ಪ್ರುಶ್ಯರೊಂದಿಗೆ ಬೆರೆತು ಅಸ್ಪ್ರುಶ್ಯನೆನಿಸಿಕೊಂಡದ್ದೇಕೆ ಎಂಬ ಪ್ರಶ್ನೆಗೆ ಉತ್ತರ ಒಂದೇ ಅಸ್ಪೃಶ್ಯರ ಪರವಾಗಿ ಅವರಿಗಿದ್ದ ಪ್ರೀತಿ ಮತ್ತು ಅನುಕಂಪ. ಶುಭ ಸಂದೇಶಗಳು ಪುಟ ಪುಟದಲ್ಲಿಯೂ ಕ್ರಿಸ್ತನ ಈ ಕರುಣೆ, ಅನುಕಂಪ ಕಾಣಿಸುತ್ತದೆ. 'ಜನಸಮೂಹವನ್ನು ಕಂಡಾಗ ಇವರ ಮನ ಕರಗಿತು." "ಆ ಜನರು ಕುರುಬನಿಲ್ಲದ ಕುರಿಗಳಂತ್ತಿರುವುದನ್ನು ಕಂಡು ಯೇಸುವಿನ ಮನ ಕರಗಿತು." ಹಸು, ನಾಯಿ, ದನ, ವಿಧವೆಯನ್ನು ಕಂಡಾಗ, ಕುಷ್ಠರೋಗಿ ಮತ್ತು ಕುರುಡರನ್ನು ಕಂಡಾಗ, ಊಟಕ್ಕೆ ಏನೂ ಇಲ್ಲದವರನ್ನು ಕಂಡಾಗ, ಅವರ ಹೃದಯ ಕರಗುತ್ತಿತ್ತು. ಈ ಜನರ ಬವಣೆ ನೋಡಿ ಯೇಸು ಅವರನ್ನು ಸಂತೈಸಲು ಪ್ರಯತ್ನಿಸುತ್ತಿದ್ದರು. 'ಅಳಬೇಡ' 'ಹೆದರಬೇಡ' ಎಂದು ಪದೇಪದೇ ಹೇಳುವುದನ್ನು ನಾವು ಕೇಳಬಹುದು. ಅವರ ಒಲವು ಸದಾ ಈ ಜನಸಮೂಹದೊಂದಿಗೆ ಇತ್ತು. ಜೈರೂಸನ ಮಗಳು ಜೀವದಿಂದೆದ್ದುದ್ದನ್ನು ಕಂಡು ಎಲ್ಲರೂ ಸಂಭ್ರಮಿಸುತ್ತಿದ್ದರೆ, ಕ್ರಿಸ್ತಮಾತ್ರ 'ತಿನ್ನಲು ಅವಳಿಗೆ ಏನಾದರು ಕೊಡಿ' ಎಂದಿದ್ದರು.ಕ್ರಿಸ್ತ ಹೇಳಿದ ಅನೇಕ ಕಥೆಗಳಲ್ಲಿ (ಉದಾ-ಒಳ್ಳೆಯ ಸಮಾಂತ, ದುಂದುಗಾರ ಮಗ) ಈ ಅನುಕಂಪದ ಅಂಶವೇ ಪ್ರಧಾನವಾಗಿತ್ತು. ಕ್ರಿಸ್ತನ ಈ ಸಂವೇದನೆಗೆ ಕನ್ನಡದಲ್ಲಿ 'ಅನುಕಂಪ' ಎಂಬ ಪದ ಬಾಲಿಶವಾಗುತ್ತದೆ. ಗ್ರೀಕ್‌ನ 'ಸ್ಪ್ಲಾಗ್ ಕ್ನೋನ್' ಎಂಬ ಪದವನ್ನು ಸರಿಯಾಗಿ ಭಾಷಾಂತರ ಮಾಡಿದರೆ 'ಅವರ ಕರುಳು ಕಿತ್ತು ಬಂತು' ಎಂಬ ಅರ್ಥ ಬರುತ್ತದೆ. ಅನೇಕ ಸಂದರ್ಭಗಳಲ್ಲಿ ಉದ್ವೇಗ ಕಡಿಮೆ ಮಾಡಿಕೊಳ್ಳಲು ಅವರು ಅತ್ತಿದ್ದು ಉಂಟು. ಕ್ರಿಸ್ತನ ಬೋಧನಗೆ, ಜನ ದುಂಬಾಲು ಬಿದ್ದದ್ದು ಕಂಡಾಗ ಕ್ರಿಸ್ತನ ಕರುಣೆ, ಅನುಕಂಪ ಸಾಧಾರಣವಾದುದಾಗಿರಲಿಲ್ಲ ಎಂಬುದು ಖಾತ್ರಿಯಾಗುತ್ತದೆ.[೪೪]

ಇಲ್ಲಿ ಇಬ್ಬರ ಬಸವ ಹಾಗು ಕ್ರಿಸ್ತರ ಗುರಿ ಒಂದೇ ಆಗಿದೆ. ದಲಿತರ, ಶೋಷಿತರ, ಅಸ್ಪೃಶ್ಯರ ಉದ್ದಾರ. ಪಾಮರರಿಗೆ ಒಂದು ಸರಳವಾದ ಪಾವನ ಪಥವನ್ನು ತೋರಿಸುವುದೇ ಅವರ ಧ್ಯೇಯವಾಗಿತ್ತು. ಅವರವರ ಕಾಲದಲ್ಲಿನ ಎಲ್ಲಾ ಶಿಷ್ಟಾಚಾರಗಳನ್ನು ಬದಿಗೊತ್ತಿ ದಲಿತರ ಉದ್ಧಾರವೇ ಜೀವನದ ಬಹುಮುಖ್ಯ ಕಾರ್ಯ ಎಂಬಂತೆ ಇಬ್ಬರೂ ದುಡಿದರೆಂಬುದು ಐತಿಹಾಸಿಕ ಸತ್ಯಸ್ವ ಸತ್ವ

೪.೪.೩. ಯೇಸು ಕ್ರಿಸ್ತನ ದೇವರು-ನಂಬಿಕೆ

ಯೇಸುಕ್ರಿಸ್ತನ ಹಾಗೂ ಅವನ ಹಿಂದಿನ ಕಾಲದಲ್ಲಿ ಇಸ್ರಾಯೇಲ್ ಜನಾಂಗದವರೂ ದೇವರು ನ್ಯಾಯಾಧೀಶ ಅವನು ದಂಡನೆ ಕೊಟ್ಟು ಶಿಕ್ಷಿಸುವವನು. ಆತನ ದಂಡನೆಯಿಂದ ತಪ್ಪಿಸಿಕೊಳ್ಳಲು, ಆತನ ಕೋಪವನ್ನು ಶಮನಗೊಳಿಸಲು ಯಜ್ಞ ಯಾಗಾದಿಗಳನ್ನು ಬಲಿಗಳನ್ನು ಕೊಡ ಬೇಕೆಂದು ನಂಬಿದ್ದರು. ಅದನ್ನೇ ಧರ್ಮಶಾಸ್ತ್ರಗಳು ಬಡಪಾಯಿ ಜನರಿಗೆ ಬೋಧಿಸುತ್ತಿದ್ದರು. ದೇವರನ್ನು ತಮ್ಮ ಜೀವನದ ಅಂತ್ಯದಲ್ಲಿ ನೋಡಲು ಮಾತ್ರ ಸಾಧ್ಯ ಎಂಬ ನಂಬಿಕೆ ಹಲವರಲಿತ್ತು.

ಯೇಸುಕ್ರಿಸ್ತ ತಾನು ನಾಲವತ್ತುದಿನಗಳು ಉಪವಾಸ ಪ್ರಾರ್ಥನೆ ಜಪತಪಗಳ ನಂತರ ಅಧ್ಯಾತ್ಮಿಕ ಅನುಭಾವಿಯಾಗಿ ಹೊರ ಹೊಮ್ಮಿದ. ಆತನಿಗೆ ದೇವರಬಗ್ಗೆ ಹೊಸ ಅರಿವು ಪ್ರಜ್ಞೆ ಮೂಡಿಬಂತು. ಕ್ರಿಸ್ತನ ಈ ಅನುಭವದ ಕಲ್ಪನೆ ನಿಜಕ್ಕೂ ಒಂದು ನೂತನ, ವಿಶಿಷ್ಟವಾದ, ಕ್ರಾಂತಿಕಾರಕ ಪ್ರಗತಿಪರ ಕಲ್ಪನೆಯಾಗಿತ್ತು.

ಯೇಸುಸ್ವಾಮಿ ದೇವರನ್ನು ನ್ಯಾಯತೀರ್ಪಿಡುವ ನ್ಯಾಯಾಧೀಶರಾಗಲಿ, ದಂಡಿಸುವ ದೇವರಾಗಲಿ ನೋಡಲಿಲ್ಲ. ಯೇಸುಕ್ರಿಸ್ತನ ದೇವರು ಕರುಣಾಮಯಿಯಾಗಿದ್ದರು. ಕಳೆದುಹೋದ ಮಗುವನ್ನು ಹುಡುಕುವ ತಾಯಿಯಂತೆ, ಕಾತರದಿಂದಿರುವ ದೇವರಾಗಿದ್ದರು. ಈ ಅಂಶಗಳನ್ನು ಯೇಸುಸ್ವಾಮಿ ಹೇಳಿದ ಕಳೆದುಹೋದನಾಣ್ಯ, ಕಳೆದುಹೋದಕುರಿ, ದುಂದುಗಾರ ಮಗನ ಸಾಮತಿಗಳಲ್ಲಿ ಇದು ಸ್ಪಷ್ಟವಾಗಿದೆ. ತಮಗೇನಾದರೂ ಒಂದು ಅದ್ಭುತವನ್ನು ಮಾಡಿತೋರಿಸು ಎಂದು ಕೇಳುತ್ತಿದ್ದ ಧರ್ಮಶಾಸ್ತ್ರಜ್ಞರಿಗೆ ಫರಿಸಾಯರಿಗೆ ಯೇಸು ಹೇಳುತ್ತಿದ್ದುದ್ದು ಯಾವಾಗಲೂ ಒಂದೆ-ದೇವರು ಕರುಣಾಮಯಿ, ದೇವರು ಪ್ರೀತಿಸ್ವರೂಪಿ, ದೇವರು ಕ್ಷಮಿಸುವ ದೇವರು, ದೇವರು ಮರುಕತೋರುವ ದೇವರು.

"ಕ್ರಿಸ್ತನ ದೇವರು ಯಾವಾಗಲೂ ಪಾಪಿಗಳನ್ನು ಅಂತ್ಯಜರನ್ನು ಪ್ರೀತಿಸುವ ದೇವರಾಗಿದ್ದರು. ತಮ್ಮನ್ನು ದ್ವೇಷಿಸುವವರಿಗೆ ಒಳಿತನ್ನು, ತಮ್ಮನ್ನು ಶಪಿಸುವವರಿಗೆ ಆಶೀರ್ವಾದವ ನೀಡುವ, ದುರ್ಜನರಿಗೂ, ಕೃತಜ್ಞರಿಗೂ, ಒಳ್ಳೆಯವರಾಗಿದ್ದರು. ಒಬ್ಬ ಎಷ್ಟೇದೊಡ್ಡ ಪಾಪಿಯಾಗಿರಲಿ ಯಾವುದೇ ನಿಬಂಧನೆ, ದಂಡನೆಯಿಲ್ಲದೆ ಕ್ಷಮಿಸಲು ದೇವರ ಹಸ್ತ ಅವರಿಗಾಗಿ ಕಾದಿತ್ತು.

ಕ್ರಿಸ್ತ ಬೋಧಿಸಿದ್ದು ಇಷ್ಟೇ! 'ದೇವರು ತಮ್ಮ ಗಮನವನ್ನೆಲ್ಲಾ ಮನುಷ್ಯ ಮತ್ತು ಅವನ ಅಗತ್ಯಗಳ ಮೇಲೆ ಹರಿಸಿದ್ದಾರೆ. ಪ್ರಪಂಚದ ಅತ್ಯಂತ ಶ್ರೇಷ್ಠ, ಎತ್ತರದ ಪೀಟವೆಂದು ಭಾವಿಸಲಾದ ಸಿಂಹಾಸನದಿಂದ

ಇಳಿದಿರುವ ದೇವರು ಮನುಷ್ಯನ ಮಧ್ಯೆ, ತಾನು ಪ್ರೀತಿಸುವ ಜನತೆಯ ಮಧ್ಯೆ ನೆಲಸಿದ್ದಾರೆ. ಈ ಕಾರಣದಿಂದ ದೇವರು ಇನ್ನು ಮುಂದೆ ರಾಜಾಧಿರಾಜರಲ್ಲ, ಅರಸರೂ ಅಲ್ಲ, ಅವರೊಬ್ಬ ತಂದೆ. ಪ್ರೀತಿಯ 'ಅಪ್ಪಾ'.

ಬೈಬಲಿನ ಅನೇಕ ವ್ಯಾಖ್ಯಾನಕಾರರ ಪ್ರಕಾರ ಕ್ರಿಸ್ತದೇವರನ್ನು 'ಅಪ್ಪಾ' (ಪಪ್ಪಾ) ಎಂದೇ ಸಂಬೋಧಿಸುತ್ತಿದ್ದರು. ನಮ್ಮಲ್ಲಿನ ಪುಟ್ಟ ಮಕ್ಕಳು ತಂದೆಯನ್ನು ಕರೆಯುವ ಹಾಗೆ! ಇಲ್ಲಿಯ ತನಕ ದೇವರನ್ನು ಯಾರೂ ಹೀಗೆ ಕರೆದಿರಲಿಲ್ಲ. ಇಲ್ಲಿ 'ಅಪ್ಪಾ' ಎಂದಾಕ್ಷಣ ಕೇವಲ ತಂದೆ ಎಂಬ ಅರ್ಥವಲ್ಲ, ಅದಕ್ಕಿಂತಲೂ ಹೆಚ್ಚಿನ ಆತ್ಮೀಯ ಸಂಬೋಧನೆ. ಇಲ್ಲಿಯ ತನಕ ದೇವರ ಕಲ್ಪನೆಯೇ ಬೇರೆಯಾಗಿತ್ತು. ದೇವರೆಂದರೆ ಸರ್ವಶಕ್ತರು, ಪರಾಕ್ರಮಿ, ಅಂತರ್ಯಾಮಿ, ಮಹೋನ್ನತ, ಎಂಬ ಕಾರಣದಿಂದ ಜನತೆಗೆ ಅವರ ಬಗ್ಗೆ ಭಯವೇ ಹೆಚ್ಚಾಗಿತ್ತು. ಆದ್ದರಿಂದ ಪಾಪಿಗಳಾದ ಮನುಷ್ಯರು ಅವರ ಹತ್ತಿರ ಹೋಗಲು ಸಾಧ್ಯವಿರಲಿಲ್ಲ. ದೂರದಿಂದಲೇ ನಡುಗುತ್ತಾ ಆರಾಧಿಸ ಬೇಕಿತ್ತು."[೪೫]

ಹೀಗೆ ಯೇಸುಕ್ರಿಸ್ತನ ದೇವರು ಸರ್ವರನ್ನು ಪ್ರೀತಿಸುವ, ಸರ್ವರನ್ನು ಕ್ಷಮಿಸುವ, ಸರ್ವರಿಗೆ ಹಿತವನ್ನುಂಟು ಮಾಡುವ ತಂದೆಯಾಗಿದ್ದಾರೆ. ಹೀಗೆ ಸತ್ಯ ಸ್ವರೂಪಿಯಾಗಿರುವ, ಆತ್ಮ ಸ್ವರೂಪಿಯಾಗಿರುವ, ಪ್ರೀತಿ ಸ್ವರೂಪಿಯಾದ ತಂದೆಯನ್ನು "...ಆತ್ಮದಿಂದಲೂ, ಸತ್ಯದಿಂದಲೂ ಆರಾಧಿಸತಕ್ಕದ್ದು" ಯೇಸುಸ್ವಾಮಿ ಕರೆನೀಡುತ್ತಾರೆ.[೪೬]

ದೇವರನ್ನು ಉಪಾಸಿಸುವ ಭಕ್ತ ಕೇವಲ ಬಾಹ್ಯ ಆಡಂಬರವನ್ನು ತೋರುವುದರ ಬದಲು ಅಂತರಂಗದಲ್ಲಿರುವ ದೈವಕ್ಕೆ ಮೌನವಾಗಿ ಪ್ರಾರ್ಥಿಸಬೇಕೆಂದು ತನ್ನ ಶಿಷ್ಯರಿಗೆ ಹೇಳುತ್ತಾರೆ.

"ಪ್ರಾರ್ಥನೆ ಮಾಡುವಾಗ ಕಪಟಿಗಳಂತೆ ಮಾಡಬೇಡಿ. ಜನರು ತಮ್ಮನ್ನು ನೋಡಲೆಂದು ಪ್ರಾರ್ಥನಾ ಮಂದಿರಗಳಲ್ಲೂ, ಬೀದಿಯ ಚೌಕಗಳಲ್ಲೂ ನಿಂತು ಪ್ರಾರ್ಥನೆ ಮಾಡಲು ಇಚ್ಛಿಸುತ್ತಾರೆ. ಅವರಿಗೆ ಬರಬೇಕಾದ ಪ್ರಾರ್ತಿಫಲ ಆಗಲೇ ಬಂದಾಯಿತೆಂಬುದು ನಿಮಗೆ ಚೆನ್ನಾಗಿ ತಿಳಿದಿರಲಿ. ನೀನು ಪ್ರಾರ್ಥನೆ ಮಾಡುವಾಗ ನಿನ್ನ ಕೊಠಡಿಗೆ ಹೋಗು, ಬಾಗಿಲನ್ನು ಮುಚ್ಚು, ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆ ನಿನಗೆ ಪ್ರತಿಫಲವನ್ನು ಕೊಡುವರು."[೪೭]

ದೇವರ ಪ್ರಾರ್ಥನೆ ಮಾಡುವಾಗ ನಿರರ್ಥಕ ಪದಗಳನ್ನು ಪಿಸುಗುಟ್ಟುವುದನ್ನಾಗಲಿ, ದೀರ್ಘವಾಗಿ ಪ್ರಾರ್ಥಿಸುವುದನ್ನಾಗಲಿ ಯೇಸುಸ್ವಾಮಿ ಅನುಬೋಧಿಸುವುದಿಲ್ಲ. ಬದಲಾಗಿ ನಮ್ಮ ಪ್ರಾರ್ಥನೆ ಹೀಗಿರಲಿ ಎಂಬುದಾಗಿ ಬೋಧಿಸುತ್ತಾರೆ.

"ಸ್ವರ್ಗದಲ್ಲಿರುವ ಓ ನಮ್ಮ ತಂದೆಯೇ
ನಿಮ್ಮಪವಿತ್ರ ನಾಮ ಪೂಜಿತವಾಗಲಿ;

ನಿಮ್ಮ ಸಾಮ್ರಾಜ್ಯ ಬರಲಿ
ನಿಮ್ಮ ಚಿತ್ತ ಸ್ವರ್ಗದಲ್ಲಿ ನೆರವೇರುವ ಪ್ರಕಾರ
ಜಗತ್ತಿನಲ್ಲಿಯೂ ನೆರವೇರಲಿ.
ನಮ್ಮ ಅನುದಿನದ ಆಹಾರವನ್ನು
ನಮಗಿಂದು ಕೊಡಿ.
ನಮಗೆ ತಪ್ಪು ಮಾಡಿದವರನ್ನು ನಾವು
ಕ್ಷಮಿಸುವಪ್ರಕಾರ ನಾವು ಮಾಡಿದ
ತಪ್ಪುಗಳನ್ನು ಕ್ಷಮಿಸಿ.
ನಮ್ಮನ್ನು ಶೋಧನೆಗೆ ಒಳಪಡಿಸಬೇಡಿ
ಕೇಡಿನಿಂದ ನಮ್ಮನ್ನು ರಕ್ಷಿಸಿರಿ"[೪೮]

ಯೇಸುಕ್ರಿಸ್ತ ದೇವರನ್ನು ಪ್ರಾರ್ಥಿಸುವ ಬಗೆ ಹೇಗೆ, ಉಪವಾಸಿಸುವ ಬಗೆ, ದಾನಧರ್ಮಗಳನ್ನು ಮಾಡುವ ಪರಿ ಇತ್ಯಾದಿಗಳ ಬಗ್ಗೆ ತನ್ನ ಅನುಯಾಯಿಗಳ ಬಗ್ಗೆ ಸ್ಪಷ್ಟವಾದ ಮಾತುಗಳಲ್ಲಿ ಬೋಧಿಸಿದ್ದಾನೆ.[೪೯] ಯೇಸುಕ್ರಿಸ್ತ ದೇವರ ಉಪಾಸನೆಯ ಬಗ್ಗೆ ತನ್ನದೇ ಆದ ನೂತನ ಹಾದಿಯನ್ನು ತನ್ನ ಕಾಲದ ಜನರಿಗೆ ತಿಳಿಯಪಡಿಸುತ್ತಾನೆ.ದೇವರಿಗೆ ಬೇಕಾದುದು 'ದಯೆ' ಯಜ್ಞ ಬರಿಯಲ್ಲ.[೫೦]

ಯಜ್ಞ, ಯಾಗಾದಿ, ಅನಗತ್ಯ ಬಾಹ್ಯ ಆಚರಣೆಗಳು, ಧಾರ್ಮಿಕ ಶುಷ್ಕ ಕ್ರಿಯೆಗಳಲ್ಲೇ ಮುಳುಗಿ ಹೋಗಿದ್ದ ಜನತೆಗೆ ದಯೆ ತೋರಿ ದಯೆ ಹೊಂದಿರಿ ಎಂಬ ನೂತನ ಮಂತ್ರವನ್ನು ಯೇಸು ನೀಡುತ್ತಾರೆ. ಬಸವಣ್ಣನವರ ದಯೆಯೆ ಧರ್ಮದ ಮೂಲವಯ್ಯ ಎಂಬ ಹೇಳಿಕೆಗೆ ಯೇಸುಕ್ರಿಸ್ತನ ನನಗೆ ಬೇಕಾದುದು ದಯೆ ಎಂಬ ಮಾತಿಗೂ ಎಷ್ಟೊಂದು ನಿಕಟ ಸಂಬಂಧವಿದ್ದು ಪರಸ್ಪರ ಅವರವರ ಮಾತುಗಳು ಪೂರಕವಾಗಿವೆ.

ಯೇಸುಕ್ರಿಸ್ತನ ದೇವರು ಮತ್ತು ದೈವದ ಉಪಾಸನೆಯನ್ನು ಗಮನಿಸುವಾಗ ಯೇಸುಸ್ವಾಮಿ ತನ್ನ ಜೀವಿತಾವಧಿಯಲ್ಲಿ ತನ್ನ ಶಿಷ್ಯರಿಗೆ ಯಾವಾಗಲೂ ನಂಬಿಕೆಯ ವಿಶ್ವಾಸಭರಿತ ಜೀವನವನ್ನು ಜೀವಿಸಲು ಕರೆ ನೀಡುತ್ತಾರೆ. ಮನಸಿನಂತೆ ಮಹಾದೇವ ಎಂಬ ಮಾತಿಗೆ ಅನುಗುಣವಾಗಿ ಮನಸ್ಸಿನಲ್ಲಿ ಸದಾ ವಿಶ್ವಾಸ ನಂಬಿಕೆ ಮನೆ ಮಾಡಿರಲಿ ಎಂದು ಬೋಧಿಸುತ್ತಾರೆ.

ಈ ಭೂಲೋಕ ಆಗು-ಹೋಗುಗಳಿಗೆ ಲೌಕಿಕ ವ್ಯವಹಾರಗಳಿಂದ ಕೆಂಗೆಡದೆ ದೈವವನ್ನು ತಮ್ಮನ್ನು ವಿಶ್ವಾಸಿಸಿ ಎನ್ನುತ್ತಾರೆ. "ನಿಮ್ಮ ಹೃದಯಗಳು ಕಳವಳಗೊಳ್ಳದಿರಲಿ ದೇವರಲ್ಲಿ ವಿಶ್ವಾಸವಿಡಿ; ನನ್ನಲ್ಲಿಯೂ ವಿಶ್ವಾಸವಿಡಿ"[೫೧] ಯೇಸುಸ್ವಾಮಿಯ ದೃಷ್ಟಿಯಲ್ಲಿ ದೇವರು ಎಲ್ಲರ ತಂದೆ. ಆತನ ಉಪಾಸನೆ ಪ್ರಾರ್ಥನೆ, ಕ್ಷಮೆ, ದಯೆ ಹಾಗೂ ದಯೆಯಿಂದ ಆತನಲ್ಲಿ ನಂಬಿಕೆ ಇಡುವುದರ ಮೂಲಕವೆ ಮನುಜನ ರಕ್ಷಣೆ ಎಂಬುದು ಅವರ ಅಭಿಮತವಾಗಿತ್ತು.

೪.೪.೪ ಬಸವಣ್ಣನವರ ದೇವರು-ನಂಬಿಕೆ

ಬಸವಣ್ಣನವರು ದೇವರು ಲೋಕಕ್ಕೆಲ್ಲಾ ಒಬ್ಬನೇ. ಅವನಿಂದಲೇ ಜಗತ್ತಿನ ಉತ್ಪತ್ತಿ ರಕ್ಷಣೆ ಮತ್ತು ಲಯ. ಆತನೇ ಶಿವನು. ಶಿವನೊಬ್ಬನೇ ಪರಬ್ರಹ್ಮ. ಅವನೇ ಲಿಂಗ. ಲಿಂಗದೇವನ ಹೊರತು ಬೇರೆ ದೇವರಿಲ್ಲ ಎಂಬುದು ಸಿದ್ಧಾಂತವನ್ನು ಎತ್ತಿಹಿಡಿದು ಏಕೇಶ್ವರವಾದದ ಪ್ರತಿಪಾದಕರಾಗಿದ್ದಾರೆ. ಅನೇಕ ದೇವತೋಪಾಸನೆಯನ್ನು ಖಂಡಿಸಿ ವೀರಶೈವನಾದವನು ಲಿಂಗದೇವನ ಹೊರತು ಬೇರೆ ದೇವರುಗಳಿಗೆ ತಲೆಬಾಗುವುದೂ ಬಲವಾಗಿ ಖಂಡಿಸುತ್ತಾರೆ. ಏಕದೇವತೋಪಾಸನೆಯನ್ನು ತಮ್ಮ ವಚನಗಳಲ್ಲಿ ಬಲವಾಗಿ ಪ್ರತಿಪಾದಿಸುತ್ತಾರೆ.

"ಇಬ್ಬರು ಮೂವರು ದೇವರೆಂದುಬ್ಬುಬ್ಬಿ ಮಾತನಾಡಬೇಡ ದೇವನೊಬ್ಬನೇ ಕಾಣಿರೋ ಇಬ್ಬರೆಂಬುದು ಹುಸಿ ನೋಡಾ ಕೂಡಲ ಸಂಗಮ ದೇವನೊಬ್ಬನೇ ಅಲ್ಲದೆ ಇಬ್ಬರಿಲ್ಲವೆಂದಿತ್ತುದಾ ವೇದವು"[೫೨] ಎಂದರೆ ಇನ್ನೊಂದು ವಚನದಲ್ಲಿ ಹೀಗೆನ್ನುತ್ತಾರೆ-

"ದೇವನೊಬ್ಬ ನಾಮ ಹಲವು
ಪರಮ ಪತಿವ್ರತೆಗೆ ಗಂಡನೊಬ್ಬ
ಮತ್ತೊಂದಕ್ಕೆರಗಿದರೆ ಕಿವಿ ಮೂಗ ಕೊಯ್ಯುವನು
ಹಲವು ದೈವದ ಎಂಜಲ ತಿಂಬುವರನೇನೆಂಬೆನಯ್ಯ"[೫೩]

ಎನ್ನುವುದರ ಮೂಲಕ ಅನ್ಯದೈವದ ಸ್ತುತಿಯನ್ನು ಧಿಕ್ಕರಿಸುತ್ತಾರೆ. ವೀರಶೈವನಾದವನಿಗೆ ಗುರು ಕೊಟ್ಟ ಇಷ್ಟಲಿಂಗದ ಹೊರತು ಅನ್ಯದೈವರಿಲ್ಲವೆಂದು ತಿಳಿಸಿ ಅದರಂತೆ ನೆಡೆಯುತ್ತಾರೆ. ಮುಂದಿನ ಮೂರು ವಚನಗಳಲ್ಲಿ ಹಲವು ದೇವರಿಗೆ ಕೈ ಮುಗಿಯುವ, ಹರಕೆ ಹೊರತಕ್ಕವರನ್ನು ಅಳಿದು ಅವರನ್ನು ಜರಿಯುತ್ತಾರೆ-

ಅರಗು ತಿಂದು ಕರಗುವ ದೈವವ, ಉರಿಯ ಕಂಡರೆ ಮುರುಟದ ದೈವವನೆಂತು ಸರಿ ಎಂಬೆನಯ್ಯಾ? ಅವಸರ ಬಂದರೆ ಮಾಡುವ ದೈವವನೆಂತು ಸರಿ ಎಂಬೆನಯ್ಯಾ? ಅಂಜಿಕೆಯಾದರೆ ಹೂಳುವ ದೈವವನೆಂತು ಸರಿ ಎಂಬೆನಯ್ಯಾ? ಸಹಜ ಭಾವ ನಿಜೈಕ್ಯ ಕೂಡಲಸಂಗಮ ದೇವನೊಬ್ಬನೇ ಜೀವ."[೫೪]

"ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೋ ಕೊಳಗ ದೈವ, ಗಿಣ್ಣಿಲು ದೈವ ಕಾಣಿರೋ ದೈವ ದೈವವೆಂದು ಕಾಲಿಡಲಿಂಬಿಲ್ಲಾ ದೇವನೊಬ್ಬ ಕೂಡಲ ಸಂಗಮದೇವ"[೫೫]

"ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ ಬಾವಿ ಹೂ ಗಿಡ ಮರಂಗಳಲ್ಲಿ, ಗ್ರಾಮದ ಮಧ್ಯದಲ್ಲಿ, ಔಷಧ ಪಟ್ಟಣ ಪ್ರದೇಶಗಳಲ್ಲಿ ಹಿರಿಯಾಲದ ಮರದಲ್ಲಿ ಮನೆಯ ಮಾಡಿ ಕರೆವೆಮ್ಮೆಯ ಹಸುಗೂಸು ಬಸುರಿ, ಬಾಣಂತಿ, ಕುಮಾರಿ ಕೊಡಗೂಪೆಂ ಬರ ಹಿಡಿದು ತಿಂಬ ತಿರಿದುಂಬ ಮಾರಯ್ಯ, ಬೀರಯ್ಯ, ಕೇಚರ ಗಾವಿಲ ಅಂತರ, ಬೆಂತರ, ಕಾಳಯ್ಯ, ಧೂಳಯ್ಯ, ಕೇತಯ್ಯಗಳೆಂಬ ನೂರು ಮಡಕೆಗೆ ನಮ್ಮ ಕೂಡಲ ಸಂಗಮ ದೇವ ಶರಣೆಂಬುದೊಂದುದಡಿ ಸಾಲದೇ?[೫೬]

ಹಾಲು ಇದ್ದಾಗ್ಗೆ ಬೆಣ್ಣೆಯ ಸಲುವಾಗಿ ಬಳಲುವದೇಕೆ?
ಲಿಂಗವಿದ್ದಾಗ ಪುಣ್ಯ ತೀರ್ಥಕ್ಕೆ ಹೋಗಾವುದೇಕೆ?
ಲಿಂಗ ಸಂಗಿಯಾದವನಿಗೆ ಅನ್ಯದೈವದ ಸಂಗವೇತಕ್ಕೆ ಬೇಕು

ಕಂಡಕಂಡವರ ಹಿಂದೆ ಬೆನ್ನು ಹತ್ತಿ ಹೋಗುವ ವ್ಯಭಿಚಾರಿಯಂತೆ ಎಂಬುದಾಗಿ ತಿಳಿ ಹೇಳಿ ಬಹುದೇವತೋಪಾಸನೆಯನ್ನು ಖಂಡಿಸಿದ್ದಾರೆ.[೫೭] ಬಸವಣ್ಣನ ದೇವರು ಏಕೇಶ್ವರ. ಶಿವ ಶಿವನಲ್ಲದೇ ಅನ್ಯದೈವಗಳ ಪೂಜೆಯನ್ನು ಖಂಡಿಸಿ ಶಿವನೊಬ್ಬನೆ ಜಗತ್ಕರ್ತನೆಂದು ಸಾರುತ್ತಾರೆ.

"ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೊ,
ನಂಬಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೊ,
ಬೇಡ ಬೇಡ ಅನ್ಯದೈವದ ಸಂಗ ಹೊಲ್ಲ
ಅನ್ಯ ದೈವವೆಂಬುದು ಹಾದರ ಕಾಣಿರೊ
ಕೂಡಲ ಸಂಗಮ ದೇವರು ಕಂಡರೆ
ಮೂಗಕೊಯ್ಯುವ ಕಾಣಿರೊ"[೫೮]

ಬಸವಣ್ಣನ ಈ ಏಕೇಶ್ವರವಾದ ತಿಳುವಳಿಕೆ ಅನ್ಯದೇವತಾ ಪೂಜಾ ನಿಷೇಧ ವೀರಶೈವ ಧರ್ಮದ ಮುಖ್ಯ ತಳಹದಿಯಾಗಿತ್ತು. ತಾನು ನಂಬಿದ ದೈವವನ್ನು ಉಪಾಸಿಸುವ ಬಗೆಯನ್ನು ಪರಿಪರಿಯಾಗಿ ತಮ್ಮ ವಚನಗಳಲ್ಲಿ ಬಸವಣ್ಣನವರು ಚಿತ್ರಿಸಿದ್ದಾರೆ.

ದೈವವನ್ನು ಏಕನಿಷ್ಠೆಯಿಂದ ಉಪಾಸಿಸಬೇಕು. ಭಕ್ತಿ ಪ್ರಧಾನವಾದುದು. ದೈವ ಭಕ್ತಿ 'ಜೀವ'ನಿಗೆ ದೇವನ ಸಂಸ್ಕಾರವನ್ನುಂಟುಮಾಡುವ ಸಾಧನೆ ಎಂಬುದಾಗಿ ಬಸವಣ್ಣನವರು ತಿಳಿಸಿದ್ದಾರೆ. ದೇವರನ್ನು ಉಪಾಸಿಸುವವನಿಗೆ ಅವನ ಮನಸ್ಸಿನ ನೆಮ್ಮದಿ, ಶುದ್ಧತನ, ಪರಿಪಕ್ವತೆ ಮುಖ್ಯ. ಆಡಂಬರ, ಕೃತಕತೆ, ಮನಸ್ಸಿನ ವಿರುದ್ಧ ನಡೆಯುವ ಪ್ರವೃತ್ತಿ, ಡಂಭಾಚಾರ, ನಟನೆ, ಬಡವರ ಸುಲಿಗೆ, ಪ್ರಾಣಿವಧೆ, ಪ್ರಚಾರ ಇತ್ಯಾದಿಗಳ ಉಪಾಸಕನ ಲಕ್ಷಣಗಳಲ್ಲ. ಶಿವ ಭಕ್ತಿ ಪ್ರಿಯನಲ್ಲದೆ ವೇದಪ್ರಿಯನೂ ಅಲ್ಲ; ನಾದಪ್ರಿಯನೂ ಅಲ್ಲ ಎಂದಿದ್ದಾರೆ.[೫೯] "ಒಂದು ಮಾತಿನಲ್ಲಿ ಹೇಳುವುದಾದರೆ, ಬಸವಣ್ಣನವರು ಧರ್ಮದ ಪರಿಕಲ್ಪನೆಯನ್ನು ಸರಳೀಕರಿಸಿದರು, ಸ್ಪಷ್ಟೀಕರಿಸಿದರು. ಧರ್ಮವೆಂಬುದು ಏನೋ ಗಾಢವಾದುದ್ದು, ಗಹನವಾದದ್ದು, ಅದೊಂದು ಸಿದ್ಧಾಂತ ರಾದ್ಧಾಂತಗಳ ಜಟಿಲ ಜಾಲ, ಸಾಮಾನ್ಯರಿಗೆ ನಿಲುಕದ್ದು ಎಂಬ ತಪ್ಪು ಕಲ್ಪನೆಯನ್ನು ಅವರು

ನಿವಾರಿಸಿದರು, ಧರ್ಮವನ್ನು ಸಾಮಾನ್ಯ ಜನತೆಗೆ ಸುಲಭ ಗಮ್ಯವಾಗಿಸಿದ್ದರು. ಅದು ಕೆಲವರ ಸೊತ್ತಲ್ಲ, ಎಲ್ಲರ ಆಸ್ತಿ ಎಂಬುದು ಇದರಿಂದ ಸಿದ್ಧವಾಯಿತು.

ಧರ್ಮಕ್ಕೆ ಆಸ್ತಿಕತೆ-ದೇವರಲ್ಲಿನ ನಂಬಿಕೆ ಅನಿವಾರ್ಯವೆ ಎಂಬುದೊಂದು ಪ್ರಶ್ನೆ. ದೇವರಲ್ಲಿ ನಂಬಿಕೆಯಿಲ್ಲದೆಯೂ ಮಾನವ ಧರ್ಮ ಎಂಬುದೊಂದಿರುವುದು ಸಾಧ್ಯ. ಆದರೆ ಅಂಥ ಧರ್ಮಕ್ಕೆ ಬೆನ್ನೆಲುಬಿರುವುದಿಲ್ಲ. ಅದು ಗಟ್ಟಿಯಾದುದ್ದಲ್ಲ. ಎಂತಲೆ ಬಸವಣ್ಣನವರ ಧರ್ಮ ಕಲ್ಪನೆಯಲ್ಲಿ ಭಕ್ತಿ, ಅಧ್ಯಾತ್ಮಗಳಿಗೆ ಬಹಳ ಮಹತ್ವವುಂಟು. ಅವರು ದೈವಭಕ್ತರಲ್ಲವಾದರೆ ಮತ್ತೇನೂ ಅಲ್ಲ. ಆದರೆ ದೇವರ ಹೆಸರಿನಲ್ಲಿ ಏನೇನು ಅನಿಷ್ಟಗಳು, ಅನೌಚಿತ್ಯಗಳು, ಭ್ರಮೆಗಳು ಹುಟ್ಟಿಕೊಳ್ಳಬಹುದೋ ಅವನ್ನೆಲ್ಲ ನಿರಸನಗೊಳಿಸಿ, ಧರ್ಮವನ್ನು ಅದರ ಶುದ್ಧ ರೂಪದಲ್ಲಿ ಸಂರಕ್ಷಿಸುವ ದಿಶೆಯಲ್ಲಿ ನಡೆಸಿದ ಹೋರಾಟವೇ ಬಸವಣ್ಣನವರ ಬದುಕಿನ ಕತೆ ಎನ್ನಬಹುದು.

ದೇವರನ್ನು ಒಪ್ಪಿಯೂ ಬಸವಣ್ಣನವರ ಧರ್ಮ ಮಾನವ ಕೇಂದ್ರಿತವಾದ ಧರ್ಮ ಎಂಬುದೇ ಬಹು ಮುಖ್ಯವಾದ ಸಂಗತಿ. ದೈವಕೇಂದ್ರಿತ ಧರ್ಮದಿಂದ ಸಾಮಾನ್ಯ ಮಾನವರಿಗೆ ಹೆಚ್ಚು ಪ್ರಯೋಜನವಿಲ್ಲ. ಮಾನವನ ಘನತೆಗೆ ಬಸವಣ್ಣನವರ ಧರ್ಮ ಒತ್ತು ಕೊಡುತ್ತದೆ. ಮಾನವೀಯತೆಯನ್ನು ಎತ್ತಿ ಹಿಡಿಯುತ್ತದೆ. ಬಸವಣ್ಣನವರು ಧರ್ಮವನ್ನು ಸದಾಚಾರ, ಸೌಶೀಲ್ಯಗಳ ಅಡಿಗಲ್ಲಿನ ಮೇಲೆ ನಿಲ್ಲಿಸುತ್ತಾರೆ; ದಯೆಗೆ ಅತೀವ ಪ್ರಾಶಸ್ತ್ಯ ಕೊಡುತ್ತಾರೆ.[೬೦]

ಮನುಷ್ಯ ಭಯ ಭೀತನಾಗಿದ್ದರೆ ಅಂತಹ ಭಯವೇ ಧರ್ಮದ ಮೂಲವೆಂಬುದು, ಸಾಮಾನ್ಯ ತಿಳಿವಳಿಕೆ. ಬಸವಣ್ಣನವರು ಅಂತಹ ತಪ್ಪು ತಿಳಿವಳಿಕೆಯನ್ನು ತಿದ್ದಿದ್ದಾರೆ. ಬಸವಣ್ಣನ ಕಾಲದ ಸಮಾಜದಲ್ಲಿ ಎಲ್ಲಿ ನೋಡಿದರಲ್ಲಿ ನಿರರ್ಥಕವಾದ ಪ್ರಾಣಿಬಲಿಗಳು, ಕ್ಷುದ್ರ ದೇವ-ದೇವತೆಗಳ ಉಪಾಸನೆ, ಯಜ್ಞ ಯಾಗಾದಿಗಳು ತಾಂಡವವಾಡುತ್ತಿದ್ದವು.

ಇದನ್ನೆಲ್ಲ ತೊಡೆದು ಹಾಕಲು ಬಸವಣ್ಣನವರು ಅಹಿಂಸೆ, ದಯೆ, ಸಕಲ ಜೀವಾತ್ಮರಿಗೆ ಲೇಸು, ಜೀವ ಕಾರುಣ್ಯಗಳನ್ನು ಧರ್ಮದ ಅಂತಃಸತ್ವವಾಗಿ ರೂಪಿಸಲೆತ್ನಿಸಿದರು. ತನ್ನನ್ನು ತಾನೆ ಸಕಲ ಸೌಲಭ್ಯಗಳಿಂದ ರೂಪಿಸಿಕೊಂಡು ಜನಸಾಮಾನ್ಯರನ್ನು ಮೂಢನಂಬಿಕೆಗಳಲ್ಲಿ ತೆರಳುತ್ತಿದ್ದ ಪುರೋಹಿತಶಾಹಿಯನ್ನು ಉಗ್ರವಾಗಿ ಪ್ರತಿಭಟಿಸಿ ವೈಚಾರಿಕತೆಯನ್ನು ಬಸವಣ್ಣನವರು ಪ್ರೋತ್ಸಾಹಿಸಿ ಸಮಾಜವನ್ನು ಉದ್ಧರಿಸಲೆತ್ನಿಸಿದರು.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಸುದ್ಧಿ ಇದೇ ಬಹಿರಂಗ ಶುದ್ಧಿ;
ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ[೬೧]

ಈ ಮೇಲ್ಕಂಡ ವಚನಕ್ಕೆ ಈ ಸಂಹಿತೆಗೆ ಸೇರಿಸಬೇಕಾದದ್ದು ಹೆಚ್ಚೇನೂ ಇಲ್ಲ. ಬಸವಣ್ಣ ಈ ಸಂಹಿತೆ ಕೊಡುವುದರ ಮೂಲಕ ಭಗವಂತನನ್ನು ಉಪಾಸಿಸುವ ಪರಿಯನ್ನು ವಿವರಿಸಿದ್ದಾರೆ. ಮನುಷ್ಯರಲ್ಲಿ ಬಸವಣ್ಣನವರು ಯಾವಾಗರಲೂ ಸದಾಚಾರಕ್ಕೆ ಬೆಲೆ ಕೊಡುತ್ತಿದ್ದರು. "ಸದಾಚಾರ ಸದ್ಭಕ್ತಿಯಿಲ್ಲದವರ ನೊಲ್ಲನಯ್ಯ" ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂಬುದರ ಮೂಲಕ ಬಸವಣ್ಣನವರು ಸದಾಚಾರಕ್ಕೆ ಎಷ್ಟು ಪ್ರಧಾನ್ಯ ಕೊಡುತಿದ್ದರೆಂಬುದು ವ್ಯಕ್ತವಾಗುತ್ತದೆ.

ಶಾಸ್ತ್ರಾದಿ ಅಧ್ಯಯನದ ನಿರರ್ಥಕತೆಯನ್ನು ಪಾಂಡಿತ್ಯದ ಪರಿಮಿತಿಯನ್ನು ಅರಿತ ಬಸವಣ್ಣನವರು ಧರ್ಮಾಧ ಹುರುಳು ಜಪತಪಗಳಲ್ಲೆಲ್ಲ, ಸಾಮಾನ್ಯನಿಗೆ ಅದು ಸಾಧ್ಯವೂ ಅಲ್ಲ, ಬದಲಾಗಿ ಕೂಡಲ ಸಂಗನ ನೆನೆವುದೇ ಮಂತ್ರ ಎಂದು ವಚನದಲ್ಲಿ ರೂಪಿಸಿದ್ದಾರೆ.

> **"ವೇದವನೋದಿದರೇನು, ಶಾಸ್ತ್ರವ ಕೇಳಿದರೇನಯ್ಯ?**
> **ಜಪವ ಮಾಡಿದರೇನು? ತಪವ ಮಾಡಿತರೇನಯ್ಯಾ?**
> **ಏನ ಮಾಡಿದರೇನು; ನಮ್ಮ ಕೂಡಲ ಸಂಗಯ್ಯನ ಮನಮುಟ್ಟುವದನ್ನಕ್ಕ?**
> **ಜಪವೆಂಬುದೇಕೆ ಮನವೆ? ಕೂಡಲ ಸಂಗನ ಶರಣರ ಕಂಡು,**
> **ಆಡಿ ಹಾಡಿ ಬದುಕು ಮನವೇ"**[೬೨]

ಮೃದು ವಚನವೇ ಸಕಲ ಜಪಂಗಳಯ್ಯ[೬೩] ಅಯ್ಯ ಎಂದಡೆ ಸ್ವರ್ಗ ಎಲವೋ ಎಂದಡೆ ನರಕ[೬೪] ಎನ್ನುವುದರ ಮೂಲಕ ಬಸವಣ್ಣನವರು ಧರ್ಮ ಮತ್ತು ಸಂಸ್ಕೃತಿಯನ್ನು ಹತ್ತಿರಕ್ಕೆ ತರುವ ಕೆಲಸ ಮಾಡಿದರು.

ದೇಹ ದಂಡನೆಗೆ ಹೆಚ್ಚು ಪ್ರಾಶಸ್ತ್ಯ ಕೊಡದ ಬಸವಣ್ಣನವರು ದೇವರಿಗಿಂತ ಮನುಷ್ಯ ಮುಖ್ಯ ಎಂಬ ಧೋರಣೆಯನ್ನು ಕಲ್ಲು ನಾಗರ ಕಂಡರೆ ಹಾಲನೆರೆಯೆಂಬರು......[೬೫] ಎಂಬ ವಚನದಲ್ಲಿ ರೂಪಿಸಿದ್ದಾರೆ.

"ಎನ್ನ ಕಾಲೆ ಕಂಬ, ದೇಹವೆ ದೇಗುಲ, ಶಿರವೇ ಹೊನ್ನ ಕಳಸವಯ್ಯ.......[೬೬] ಎನ್ನುವುದರ ಮೂಲಕ ಮಾನವನ ಸ್ವಾತಂತ್ರ್ಯ, ಸ್ವಾಭಿಮಾನ, ಆತ್ಮಗೌರವಗಳನ್ನು ಬಸವಣ್ಣನವರು ಅಸ್ಖಲಿತ ರೀತಿಯಲ್ಲಿ ಪ್ರಕಟಿಸಿದ್ದಾರೆ.

ಒಟ್ಟಿನಲ್ಲಿ ಬಸವಣ್ಣನವರ ದೇವರು ಶಿವನಾಗಿದ್ದು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದೇ ಉಪಾಸನೆಯಾಗಿದ್ದು, ಅಲ್ಲಿ ಮಾನವೀಯ ದೃಷ್ಟಿಯಿದೆ, ವೈಚಾರಿಕ ಮನೋಧರ್ಮವಿದೆ, ಇಹ-ಪರಗಳನ್ನು ಬೆಸೆಯುವ ಸಮನ್ವಯ ಧೋರಣೆಯಿದೆ.

೪.೪.೫ ಬಸವಣ್ಣನ ದೃಷ್ಟಿಯಲ್ಲಿ ಸ್ತ್ರೀ

ಬಸವಣ್ಣನ ಕಾಲದ ಸಾಮಾಜಿಕ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟು 'ಬಸವಣ್ಣನವರ ದೃಷ್ಟಿಯಲ್ಲಿ ಸ್ತ್ರೀ' ಎಂಬ ಅಂಶವನ್ನು ಗಮನಿಸುವಾಗ, ಅವರು ಸ್ತ್ರೀಯರಿಗೆ ಸಾಕಷ್ಟು ಮನ್ನಣೆ ನೀಡಿದ್ದಾರೆ ಎಂಬುದು ವೇದ್ಯವಾಗುತ್ತದೆ.

ಕೆಲವು ಧರ್ಮಗಳಲ್ಲಿ ಸ್ತ್ರೀಗೆ ಮೋಕ್ಷವಿಲ್ಲ; ಸ್ತ್ರೀಗೆ ಮಂತ್ರ ಸಂಸ್ಕಾರವಿಲ್ಲ, ಸ್ತ್ರೀ ವೇದಗಳನ್ನು ಓದಬಾರದು' ಎಂಬ ಧಾರ್ಮಿಕ ಮನೋಭಾವನೆಯಿರುವವರ ದೃಷ್ಟಿಯಿಂದ ನೋಡಿದಾಗ ಮಾತ್ರ ಬಸವಣ್ಣನವರು ಸ್ತ್ರೀಯರಿಗೆ ಎಷ್ಟರಮಟ್ಟಿನ ಮನ್ನಣೆ, ಗೌರವ ನೀಡಿದ್ದಾರೆಂಬುದು ಅರಿವಾಗುತ್ತದೆ. ಸ್ತ್ರೀಯೆಂದರೆ ಕೀಳುತನದ ಜನಾಂಗ, ಆಕೆ ಕೇವಲ ಪುರುಷನಿಗೆ ಉಪಭೋಗ್ಯ ವಸ್ತು ಎಂದು ತಿಳಿದಿದ್ದ ಸಮಾಜದಲ್ಲಿ ಸ್ತ್ರೀಯರಿಗೆ ಅನುಭವಮಂಟಪದಲ್ಲಿ ಸ್ಥಾನ ನೀಡುವುದರ ಮೂಲಕ ತಾವು ಸ್ತ್ರೀಸ್ವಾತಂತ್ರ್ಯದ ಪರ ಎಂಬುದನ್ನು ನಿರೂಪಿಸಿದ್ದಾರೆ.

ಅನುಭವ ಮಂಟಪದಲ್ಲಿ ಅಕ್ಕ ಮಹಾದೇವಿ, ಮುಕ್ತಾಯಕ್ಕ, ನೀಲಕ್ಕ, ನಿಂಬಕ್ಕ, ಗಂಗಾದೇವಿ, ಲಿಂಗಮ್ಮ ಮೊದಲಾದ ೩೦ಕ್ಕೂ ಹೆಚ್ಚು ಸ್ತ್ರೀಯರು ಧಾರ್ಮಿಕ ಚರ್ಚೆಗಳಲ್ಲಿ ಪಾಲ್ಗೊಂಡು ಪುರುಷರಿಗೆ ಸಮಾನವಾಗಿ ವಚನಗಳನ್ನು ರಚಿಸಿರುವುದು ಅವರಿಗೆ ನೀಡಿದ ಸ್ವಾತಂತ್ರ್ಯದ ಕುರುಹು ಆಗಿದೆ. ಅದರಲ್ಲೂ ಶೂನ್ಯ ಸಂಪಾದನೆಯಲ್ಲಿ ಮುಕ್ತಾಯಕ್ಕ ಹಾಗೂ ಅಲ್ಲಮ ಪ್ರಭುವಿನ ನಡುವೆ ನಡೆಯುವ ಸಂಭಾಷಣೆಗಳು ವಾದಸರಣಿಗಳು ಯಾವ ಉಪನಿಷತ್‌ಕಾರರಿಗೇನೂ ಕಡಿಮೆಯಿಲ್ಲ. ಸ್ತ್ರೀಯನ್ನು ಪುರುಷರು ಯಾವ ದೃಷ್ಟಿಯಲ್ಲಿ ನೋಡಬೇಕು ಎಂಬುದನ್ನು ಏಳು ವಚನಗಳ ಮೂಲಕ ಬಸವಣ್ಣನವರು ತಮ್ಮ ಹಿಂಬಾಲಕರಿಗೆ ತಿಳಿಯಪಡಿಸಿದ್ದಾರೆ. ಈ ಎಲ್ಲಾ ವಚನಗಳು ಹೇಳುವುದು ಒಂದೇ. ಪರಸತಿಗೆ ಆಸೆ ಪಡುವುದು ಪಾಪ. ಪರಸ್ತ್ರೀಯನ್ನು ತಾಯಿಯಂತೆ ಸಹೋದರಿಯಂತೆ ಕಾಣದಿದ್ದರೆ ಇನ್ನೂ ಘೋರವಾದ ಪಾಪ. ಈ ರೀತಿ ಹೇಳುವುದರ ಮೂಲಕ ತಮ್ಮ ಅನುಯಾಯಿಗಳಿಗೆ ಉತ್ತಮ ನಡತೆಯ ಮಾರ್ಗಸೂಚಿಯನ್ನು ಬಸವಣ್ಣನವರು ನೀಡಿದ್ದಾರೆ.[೬೭]

> **"ಭಕರ್ತನೆಂತೆಂಬೆನಯ್ಯಾ ಭವಿಸಂಗ ಬಿಡದನ್ನಕ್ಕ?**
> **ಮಾಹೇಶ್ವರನೆಂತೆಂಬೆನಯ್ಯಾ ಪರಸ್ತ್ರೀಯ ಪರರರ್ಥ ಬಿಡದನ್ನಕ್ಕ?**
> **ಪ್ರಸಾದಿಯೆಂತೆಂಬೆನಯ್ಯ ಆಧಿವ್ಯಾಧಿ ನಷ್ಟವಾಗದನ್ನಕ್ಕ?**

ಪ್ರಾಣಲಿಂಗಿ ಎಂತೆಂಬೆನಯ್ಯ ಪ್ರಾಣ ಸ್ವಸ್ಥಿರವಾಗದನ್ನಕ್ಕ?
ಶರಣನೆಂತೆಂಬೆನಯ್ಯಾ ಜನನ ಮರಣ ವಿರಹಿತವಾಗದನ್ನಕ್ಕ
ಇಂತಪ್ಪ ಭಾಷೆ ವ್ರತ ನೇಮಂಗಳ ನಾನರಿಯನಯ್ಯಾ
ಅಘಟಿತಘಟಿತ ವರ್ತಮಾನವ ನಾನರಿಯೆನಯ್ಯ?
ನಿಮ್ಮ ಶರಣರ ತೊತ್ತು ಭೃತ್ಯಾಚಾರವ ಮಾಡುವೆ
ಕೂಡಲಸಂಗಮ ದೇವಾ?"[೬೮]

ಈ ವಚನದಲ್ಲಿ ಪರಸ್ತ್ರೀ ಪರರರ್ಥ ಬಿಡದೆ ನಾನು ಅವರಿಗೆ ಹೇಗೆ ಮಹೇಶ್ವರನೆಂಬೆನೆಂದು ಹೇಳಿದ್ದಾರೆ.

ತೊರೆಯ ಮೀವಣ್ಣಗಳಿರಾ, ತೊರೆಯಮಿವಾ ಸ್ವಾಮಿಗಳಿರಾ,
ತೊರೆಯಿಂಭೋ, ತೊರೆಯಿಂಭೋ, ಪರನಾರಿಯ ಸಂಗವ ತೊರೆಯಿಂಭೊ
ಪರಧನದಾಮಿಷವ ತೊರೆಯಿಂಭೋ, ಇವ
ತೊರೆಯದೆ ಹೋಗಿ ತೊರೆಯ ಮಿಂದರೆ
ಬರುದೊರೆ ಹೋದುದು ಕೂಡಲ ಸಂಗಮದೇವಾ[೬೯]

ನೋಡಲಾಗದು, ನುಡಿಸಲಾಗದು ಪರಸ್ತ್ರೀಯ
ಬೇಡ ಕಾಣಿರೊ ತಗರ ಬೆನ್ನಲಿ ಹರಿವ
ಸೊಣಗನಂತೆ ಬೇಡ ಕಾಣಿರೋ,
ಒಂದಾಶೆಗೆ ಸಾಸಿರ ವರುಷ ನರಕದೊಳದ್ದುವ
ಕೂಡಲ ಸಂಗಮದೇವಾ[೭೦]

ಲಿಂಗ ಜಂಗಮ ಒಂದೇ ಎಂದು ನಂಬಿದ
ಬಳಿಕ ಅವರಂಗನೆಯರು ಲಿಂಗದ ರಾಣಿವಾಸ
ಅಲ್ಲಿಯೂ ಮೇಳ, ಇಲ್ಲಿಯೂ ಮೇಳ
ಮಾತೆಯೆಂಬುವ ಭಾವತಪ್ಪಿ ಅಪ್ಪಿದವರ
ತಲೆಯ ಕೊಂಬ ಕೂಡಲ ಸಂಗಮದೇವಾ.[೭೧]

ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದರೆ
ತುಡುಗಣಿತನದಲ್ಲಿ ಪರವಧುವ ನೋಡುವ
ಸರಸ ಬೇಡಾ ಕಾಣಿರಯ್ಯಾ, ಒಡೆಯನರಸಿಯ ಸರಸ ಬೇಡ,
ಕೊಳಸೊಕ್ಕು ತಲೆಗೇರಿ ರಾಣಿವಾಸದೊಡನೆ ಸರಸ ಬೇಡ
ಕೂಡಲ ಸಂಗಮದೇವಾ ಕರಸಿತಗನಯ್ಯಾ.[೭೨]

ಇಂದ್ರಿಯ ನಿಗ್ರಹ ಮಾಡಿದಡೆ ಹೊಂದುವುವು ದೋಷಂಗಳು,
ಮುಂದೆ ಬಂದು ಕಾಡುವುವು ಪಂಚೇಂದ್ರಿಯಗಳು
ಸತಿಪತಿ ರತಿ ಸುಖವ ಬಿಟ್ಟರೆ ಶಿರಿಯಾಳ ಚಂಗಳೆಯರು?

ಸತಿಪತಿ ರತಿಸುಖ ಭೋಗೋಪಭೋಗ ವಿಳಾಸವ ಬಿಟ್ಟರೆ ಸಿಂಧೂಬಲ್ಲಾಳರು?
ನಿಮ್ಮ ಮುಟ್ಟಿ ಪರಧನ ಪರಸತಿಯರಿಗೆಳಸಿದರೆ ನಿಮ್ಮ ಚರಣಕ್ಕೆ
ದೂರ ಕೂಡಲಸಂಗಮ ದೇವಾ[೨೩]

ಹರಿವ ಹಾವಿಗೆ ಅಂಜೆ, ಉರಿವ ನಾಲಿಗೆಗಂಜೆ
ಸುರಗಿಯ ಮೊನೆಗಂಜೆ, ಒಂದಕ್ಕಂಜುವೆ, ಒಂದಕ್ಕಳುಕುವೆ
ಪರಸ್ತ್ರೀ ಪರಧನವೆಂಬೀ ಜೂಜಿಂಗಂಜುವೆ ಮುನ್ನಂಜದ
ರಾವಣನೇ ವಿಧಿಯಾದ ಅಂಜವೆನಯ್ಯ ಕೂಡಲಸಂಗಮ ದೇವಾ[೨೪]

ಇತ್ತೀಚಿನ ವರ್ಷಗಳಲ್ಲಿ ಮಹಿಳಾ ಲೇಖಕರು ಸ್ತ್ರೀವಾದಿ ಅಥವಾ ಸ್ತ್ರೀ ಸಮಾನತೆಯ ಹಿನ್ನೆಲೆಯಲ್ಲಿ ಮಹಿಳೆಯ ಬಗ್ಗೆ ಬಸವಣ್ಣನ ನಿಲುವುಗಳನ್ನು ವಿಶ್ಲೇಷಿಸುವಾಗ ಕೆಲವು ನಿಲುವುಗಳನ್ನು ತಳೆದಿದ್ದಾರೆ. ಇದು ಸರಿಯಲ್ಲ. ಇಂದಿನ ಕಾಲಕ್ಕೆ ತಕ್ಕಂತೆ ಅಂದಿನ ಕಾಲದ ಸಮಾಜದ ಬಸವಣ್ಣನ ಸ್ತ್ರೀ ನಿಲುವುಗಳನ್ನು ಅರ್ಥೈಸಿಕೊಳ್ಳುವುದು ಅಷ್ಟೊಂದು ಸಮಂಜಸವಲ್ಲ. ಎಂ.ಎಸ್. ಆಶಾದೇವಿಯವರು ಮಹಿಳೆ ಬಸವಣ್ಣನ ನಿಲುವುಗಳು ಎಂಬ ಲೇಖನದಲ್ಲಿ (ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ) ಸ್ತ್ರೀಯರ ಬಗ್ಗೆ ಬಸವಣ್ಣನವರ ದೃಷ್ಟಿಯನ್ನು ಬೇರೊಂದು ಕೋನದಿಂದ ಚಿತ್ರಿಸುತ್ತಾರೆ. ಉದಾಹರಣೆಗೆ "ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ....." ಈ ವಚನದಲ್ಲಿ ಬಸವಣ್ಣನಿಗೆ ಹೆಣ್ಣು ಮಾಯೆಯಾಗಿಯೇ ಕಂಡಳು. ಜೊತೆಗೆ ಮಾಯೆಯನ್ನು ಕಳೆದುಕೊಳ್ಳಬೇಕೆನ್ನುವ ಹಂಬಲ. ಅದು ಸಾಧ್ಯವಾಗದೆನ್ನುವ ಶಂಕೆಯಿಂದಾಗಿ ಹೆಣ್ಣನ್ನು ಕುರಿತು ಅವಳೊಡ್ಡುವ ಮೋಹಪಾಶವನ್ನು ಕುರಿತ ಅಸಹನೆಯೊಂದು ಇಲ್ಲಿ ಸೂಚಿಸಲಾಗಿದೆ.

ಇದು ಭಕ್ತಿಸ್ಥಲದ ವಚನವೇ ಇರಬಹುದು. "ಮನದ ಮುಂದಣ ಆಸೆಯನ್ನು ಮಾಯೆಯೆಂದು ಆತ್ಮವಂಚನೆ ಮಾಡಿಕೊಳ್ಳುವಲ್ಲಿ, ಹೆಣ್ಣನ್ನು ಭಕ್ತನಾಗುವ ಹಾದಿಯಲ್ಲಿನ ಮುಳ್ಳು ಎಂದು ಪರಿಭಾವಿಸುವಲ್ಲಿ ಬಸವಣ್ಣ ಪುರುಷ ಪ್ರಧಾನ ಸಮಾಜದ ಪ್ರತಿನಿಧಿಯಾಗಿ ಮಾತ್ರವಲ್ಲ, ಅದರ ಸಂಪೂರ್ಣ ಬೆಂಬಲಿಗನಾಗಿಯೇ ಕಾಣಿಸುತ್ತಾನೆ. ಹೆಣ್ಣು ಮಾಯೆ ಎಂಬುದು ಬಸವಣ್ಣನ ವಚನದಲ್ಲಿ ಮೂರ್ನಾಲ್ಕು ಬಾರಿ ಬಂದಿದೆ.[೨೫]

ಇತ್ತೀಚಿನ ಸ್ತ್ರೀವಾದಿ ಲೇಖಕಿಯರು ಬಸವಣ್ಣನ ವಚನಗಳಲ್ಲಿ 'ಸ್ತ್ರೀ ಸಮಾನತೆಗಾಗಿ ಬಸವಣ್ಣ ಹಂಬಲಿಸಿದ ಎಂಬುದಕ್ಕೆ ಪೂರಕವಾದ ವಚನಗಳಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಬಸವಣ್ಣನಿಗೆ ಸ್ತ್ರೀ ಸಮಾನತೆಗಿಂತಲೂ ಮಿಗಿಲಾದ ಬಹುದೊಡ್ಡ ಸಮಸ್ಯೆ ಆಕಾಲದಲ್ಲಿ ಜಾತಿ ಪದ್ಧತಿ. ಇದರ ಸುಧಾರಣೆಯತ್ತಲೆ ಬಸವಣ್ಣ ಹೆಚ್ಚು ಗಮನವನ್ನು ಹರಿಸಿದ. ಸ್ತ್ರೀಯರಲ್ಲಿನ ವೇಶ್ಯಾವಾಟಿಕೆಯ ಬಗೆಗೂ ಬಸವಣ್ಣ ಖಂಡಿಸುತ್ತಾ ಇದ್ದರು ಎಂಬುದಕ್ಕೆ ಕೆಳಗಿನ ವಚನಗಳೇ ಸಾಕ್ಷಿ.

ಕೂಸುಳ್ಳ ಸೂಳೆಯನ್ನು ಗಮನಿಸಿದ್ದಾರೆ. ಬಸವಣ್ಣ ಅವಳದು ದ್ವಂದ್ವ ಪರಿಸ್ಥಿತಿ. ಒಂದು ಕಡೆ ಕೂಸನ್ನು ಸಂತೈಸಬೇಕು. ಇನ್ನೊಂದು ಕಡೆ ವಿಟನನ್ನು ತೃಪ್ತಿಗೊಳಿಸಬೇಕು.

“ಕೂಸನ್ನು ಸೂಳೆ ಧನದಾಸೆಗೆ ಒತ್ತೆಯ ಕೊಂಡರೆ
ಕೂಸಿಂಗಲ್ಲ ಬೊಜಗಂಗಲ್ಲ,
ಕೂಸನೊಮ್ಮೆ ಸಂತೈಸುವಳು,
ಬೊಜಗನೊಮ್ಮೆ ನೆರೆವಳು
ಧನದಾಸೆ ಬಿಡದು ಕೂಡಲ ಸಂಗಮದೇವಾ.”[೨೬]

ಸಂದಿಗ್ಧ ಮನಸ್ಸಿನ ಭಕ್ತರ ಪರಿಸ್ಥಿತಿ ಇಂತಹದು. ಈ ವಚನದ ಸಂಕೀರ್ಣತೆ ಗಮನಾರ್ಹ. ಸೂಳೆ ಎಲ್ಲಿಯು ಪಲ್ಲಾಳು ಎಂಬುದಕ್ಕೆ ಈ ವಚನ ಪೂರಕವಾಗಿದೆ.

ಇನ್ನು ವ್ಯಭಿಚಾರಿಣಿಯ ಚಿತ್ರಗಳು ಸೂಳೆ ಹೊಟ್ಟೆಯ ಪಾಡಿಗಾಗಿ ಅನಿವಾರ್ಯವಾಗಿ ಒಳಗೊಂದು, ಹೊರಗೊಂದು ಎಂಬಂತೆ ನಡೆದುಕೊಳ್ಳುತ್ತಾಳೆ. ಅವಳ ನಟನೆ ಕ್ಷಮ್ಯವಾಗಬಹುದು. ಆದರ ಗಂಡನಿದ್ದೂ ಅನ್ಯ ಪುರುಷರಿಗೆ ಮನಲೊಪ್ಪಿಸುವ ಜಾರಿಣಿ ಅತ್ಯಂತ ತಿರಸ್ಕಾರಯೋಗ್ಯಳಾಗುತ್ತಾಳೆ. ಏಕದೇವತಾ ನಿಷ್ಠೆಯಿಲ್ಲದವರು ಹಾದರಗಿತ್ತಿಗೆ ಸಮಾನರು ಎನ್ನುತ್ತಾರೆ ಬಸವಣ್ಣ. ಈ ವಚನದಲ್ಲಿ ಕೇವಲ ವಿಸ್ಮಯಭಾವದ ಅಭಿವ್ಯಕ್ತಿಯಿದೆ:

ಊಡುವ ಉಡಿಸುವ ಗಂಡನಿದ್ದಂತೆ
ಜೋಡೆ ಮಿಂಡಂಗೆ ಕಣ್ಣು ಚಿಲ್ಲುವಳ
ಕೇಡಿಂಗೆ ಬೆರಗಾದೆ ನಾನು
ನಮ್ಮ ಕೂಡಲ ಸಂಗಮದೇವರು
ಸಿಂಗಾರದ ಮೂಗ ಬಣ್ಣಿಸಿ ಹಲುನೋರಕೊಯ್ವ![೨೭]

ಜಾರಿಣಿಯ ಸೋಗಲಾಡಿತನವನ್ನು ಇದಕ್ಕಿಂತ ಚೆನ್ನಾಗಿ ಚಿತ್ರಿಸುವುದು ಯಾರಿಗೂ ಸಾಧ್ಯವಿಲ್ಲ.

ಅವಳ ವಚನ ಬೆಲ್ಲದಂತೆ,
ಹೃದಯಲ್ಲಿರ್ಪುದು ನಂಜು ಕಂಡಯ್ಯಾ
ಕಂಗಳಲೊಬ್ಬನ ಕರೆವಳು, ಮನದಲೊಬ್ಬನ ನೆರೆವಳು!
ಕೂಡಲಸಂಗಮದೇವ ಕೇಳಯ್ಯಾ,
ಮಾನಿಸಕಳ್ಳಿಯ ನಂಬದಿರಯ್ಯಾ![೨೮]

ವೇಶ್ಯಗಿಂತಲೂ ಅಪಾಯಕಾರಿ ಈ ಜಾರೆ. ಇಂಥವರ ಬಗ್ಗೆ ಮನುಷ್ಯರಿರಲಿ, ದೇವರೂ ಎಚ್ಚರಿಕೆಯಿಂದಿರಬೇಕು! ಬಸವಣ್ಣ ಹೊಸದಾಗಿ ಸೃಜಿಸಿರುವ ‘ಮಾನಸಗಳ್ಳಿ’ ಎಂಬ ಶಬ್ದದ ಸೊಗಸು, ಅರ್ಥವಂತಿಕೆಗಳು ಲಕ್ಷ್ಯಯೋಗ್ಯವಾಗಿದೆ.

ವ್ಯಭಿಚಾರಿಣಿಯೊಬ್ಬಳ ದುರವಸ್ಥೆಯ ಈ ಚಿತ್ರ ಬಸವಣ್ಣನವರ ಸಮಕಾಲೀನ ಸಮಾಜದಿಂದೆದ್ದು ಬಂದ ಒಂದು ಅಪರೂಪದ ದೃಶ್ಯವೇ ಸರಿ.

ಹಾದರಕ್ಕೆ ಹೋದರೆ ಕಳ್ಳಿದಮ್ಮವಾಯಿತ್ತು
ಹಾಳುಗೋಡೆಗೆ ಹೋದರೆ ಬೇಲೂರಿತ್ತು

ಅಬ್ಬರವ ಕೇಳಿ ತಳವಾರ ಉಬ್ಬಿ ಸೀರೆಯ ಸುಲಿದ
ನಾತಚಿ ಹೋದರೆ ಮನೆಯ ಗಂಡ ಬೆನ್ನ ಬಾರನೆತ್ತಿದ
ಅರಸು ಕೂಡಲ ಸಂಗಮದೇವ ದಂಡವಕೊಂಡ."[೨೯]

ನಿಷ್ಠಾರಾಹಿತ್ಯಕ್ಕೆ ಉಗ್ರಶಿಕ್ಷೆ ಕಟ್ಟಿಟ್ಟದ್ದು ಎಂಬುದು ಬಸವಣ್ಣನವರ ಅಭಿಪ್ರಾಯ. ಮೇಲಿನ ನಾಲ್ಕು ವಚನಗಳು ಉಪಮೇಯಲವೆ ಇಲ್ಲದ ಸ್ವಯಂ ಪೂರ್ಣ ಚಿತ್ರಗಳಾಗಿರುವುದನ್ನು ಗಮನಿಸಬೇಕು. ಬಸವಣ್ಣನವರ ಪ್ರತಿಮಾ ನಿರ್ಮಾಣ ಶಕ್ತಿ ಸಾಮಾನ್ಯವಲ್ಲ. ಬಸವಣ್ಣನವರು ಸರ್ವ ಸಾಮಾಜಿಕ ಅನಿಷ್ಟಗಳ ಮೇಲೆ ಗದೆಯೆತ್ತಿದವರು. ವೇಶ್ಯಾವೃತ್ತಿ ಅಂಥ ಅನಿಷ್ಟಗಳಲ್ಲೊಂದು. ಅದು ನಿರ್ಮೂಲವಾಗಬೇಕೆಂದು ಅವರು ಎಲ್ಲಿಯೂ ವಾಚ್ಯವಾಗಿ ಹೇಳದಿದ್ದರೂ, ಅದು ಅವರ ಇಂಗಿತವಾಗಿರಬಹುದೆ? (ರಾಜ ಪ್ರಭುತ್ವದ ವಿಷಯದಲ್ಲೂ ಇಂತಹ ಊಹೆಗೆ ಅವಕಾಶವಿದೆ.)

ವೇಶ್ಯಾವೃತ್ತಿಯಂತೆ ವೇಶ್ಯಾಪ್ರವೃತ್ತಿಯೂ ಎಲ್ಲ ಕಾಲ, ದೇಶಗಳಲ್ಲಿ ಕಂಡುಬರುವಂಥದು. ಬಸವಣ್ಣನವರು ಭಕ್ತಿ ಪ್ರಪಂಚವನ್ನಷ್ಟೆ ದೃಷ್ಟಿಯಲ್ಲಿರಿಸಿಕೊಂಡು ಆ ಪ್ರವೃತ್ತಿಯನ್ನು ಖಂಡಿಸಿದರು. ಆದರೆ ಎಲ್ಲ ರಂಗಗಳಲ್ಲೂ ಅದು ತಾನೇ ತಾನಾಗಿದೆ. ರಾಜಕೀಯದಲ್ಲಂತೂ ಕೇಳುವುದೇ ಬೇಡ. ("ವೇಶ್ಯಾಂಗನೇವ ನೃಪನೀತಿರನೇಕ ರೂಪಾ") ಈ ವೇಶ್ಯಾ ಮನೋಭಾವ, ವ್ಯಭಿಚಾರ ಬುದ್ಧಿ ತೊಲಗದೆ ಸಮಾಜಕ್ಕೆ ಹಿತವಿಲ್ಲ. ನಮ್ಮ ನಿಲುವು ಸಂಚಾರಿಯಾಗದೆ, ಸ್ಥಾಯಿಯಾಗಬೇಕು. ಬಸವಣ್ಣನವರ ವೇಶ್ಯಾ ವಿಡಂಬನ ಈ ದಿಕ್ಕಿನಲ್ಲಿ ಉದ್ಬೋಧಕವಾಗಿದೆ.[೩೦]

ಜೇಡರ ದಾಸಿಮಯ್ಯನ ವಚನವನ್ನು ಗಮನಿಸಿದರೆ ಅಲ್ಲಿ ಅಂದೆಂತಹ ವೈಜ್ಞಾನಿಕ ಹಾಗೂ ವಿಚಾರಪೂರ್ಣ ನಿಲುವಿದೆ ಎಂಬುದು ಸ್ಪಷ್ಟವಾಗುತ್ತದೆ.

ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ
ಹೆಣ್ಣೂ ಅಲ್ಲ ಕಾಣಾ ರಾಮನಾಥ[೩೧]

ಆತ್ಮಕ್ಕೆ ಲಿಂಗಭೇದವಿಲ್ಲ. ಹೆಣ್ಣೇ ಇರಲಿ ಗಂಡೇ ಇರಲಿ ಅವರಲ್ಲಡಗಿರುವ ಆತ್ಮ ಒಂದೇ. ಅಧ್ಯಾತ್ಮ ಸಾಧನೆಗೆ ಗಂಡಿನಂತೆ ಹೆಣ್ಣಿಗೂ ಅವಕಾಶ ಸಿಕ್ಕರೆ ಆಕೆಯು ಅದರಲ್ಲಿ ಅತ್ಯುನ್ನತ ಶಿಖರವನ್ನು ಮುಟ್ಟಿ ತನ್ನ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬಲ್ಲಳು.

ಬಸವಣ್ಣನವರ ಈ ಧೋರಣೆಯಿಂದ ಅನೇಕ ಸ್ತ್ರೀಯರು, ಅಧ್ಯಾತ್ಮ ಹಾಗೂ ಧಾರ್ಮಿಕ ರಂಗದಲ್ಲಿ ಉಚ್ಚಮಟ್ಟದ ಸಾಧನೆಯನ್ನು ಗೈದು ಇತಿಹಾಸ ನಿರ್ಮಿಸಿದ್ದಾರೆ. ಬಸವಣ್ಣನವರು ತಾವು ಕೂಡಲ ಸಂಗಮದಲ್ಲಿ ಲಿಂಗೈಕ್ಯವಾಗುವಾಗ ಕಲ್ಯಾಣದಲ್ಲಿ ಬಿಟ್ಟು ಬಂದಿದ್ದ ತಮ್ಮ ಪತ್ನಿ ನೀಲಾಂಬಿಕೆಯನ್ನು ಸಂಗಮಕ್ಕೆ ಬರಲು

ಹೇಳಿಕಳುಹಿಸಿದಾಗ 'ಅಲ್ಲಿಗೆ ನನ್ನನ್ನು ಬರಹೇಳಿದರಂತೆ. ಇಲ್ಲಿ ತಾನಿಲ್ಲವೇ ಸಂಗಯ್ಯನು? ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು ಬಲ್ಲ ಮಹಾತ್ಮರಿಗಿದು ಗುಣವೆ?' ಎಂದು ಆಕೆ ಬಸವಣ್ಣನವರಿಗೆ ಪ್ರಶ್ನೆ ಮಾಡುತ್ತಾಳೆ. ಮೋಳಿಗೆ ಮಾರಯ್ಯನವರು ತಾವು ಲಿಂಗದಲ್ಲಿ ಐಕ್ಯರಾಗುವೆವೆಂದು ತನ್ನ ಸತಿ ಮಹಾದೇವಿಯಮ್ಮನಿಗೆ ತಿಳಿಸಿದಾಗ ಆಕೆ ತನ್ನ ಗಂಡನ ವಿಚಾರಕ್ಕೆ ಮರುಗಿ ಶಿವಯೋಗ ಸಾಧನೆಯಲ್ಲಿ ತಾನೇ ಲಿಂಗವಾಗುವ ಸ್ಥಿತಿ ಮುಟ್ಟಿದಾಗ, ಲಿಂಗದಲ್ಲಿ ಐಕ್ಯನಾಗುವೆನೆಂಬ ಪದಕ್ಕೆ ಅರ್ಥವೇ ಇಲ್ಲ. ಅಂಥ ಸ್ಥಿತಿಯನ್ನು ಮುಟ್ಟಬೇಕೆಂದು ಹೇಳಿ ಗಂಡನ ಕಣ್ಣು ತೆರೆಸುತ್ತಾಳೆ. ಅಕ್ಕಿಯನ್ನು ಆರಿಸುವ ಕಾಯಕದಿಂದ ಜೀವಿಸುವ ಆಯ್ದಕ್ಕಿ ಮಾರಯ್ಯನವರು ಒಂದು ದಿನ ತಮ್ಮ ದಾಸೋಹಕ್ಕೆ ಬೇಕಾದುದಕ್ಕಿಂತಲೂ ಹೆಚ್ಚು ಅಕ್ಕಿಯನ್ನು ಆಯ್ದು ತಂದಾಗ ಆತನ ಪತ್ನಿ ಲಕ್ಷಮ್ಮನು 'ಆಸೆ' ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ? ಈ ಹಕ್ಕಿಯ ಆಸೆ ನಿಮಗೇಕೇ' ಎಂದು ಮಾರಯ್ಯನವರನ್ನು ಪ್ರಶ್ನಿಸಿ ಕಾಯಕ ದಾಸೋಹ ಧರ್ಮದ ತಿರುಳನ್ನು ತಿಳಿಸಿಕೊಡುತ್ತಾಳೆ.

ಅಕ್ಕಮಹಾದೇವಿಯಂತೂ ಅಧ್ಯಾತ್ಮ ಸಾಗರದ ಒಂದು ಅನರ್ಘ್ಯ ರತ್ನ. ಅನುಭವ ಮಂಟಪದಲ್ಲಿ ಮಾಯಾಕೋಲಾಹಲ ಪರಮ ವೈರಾಗ್ಯ ಮೂರ್ತಿ ಹಾಗೂ ಜ್ಞಾನನಿಧಿಯಾದ ಪ್ರಭು ದೇವರೊಂದಿಗೆ ಆಕೆ ನಡೆಸಿದ ಸಂಭಾಷಣೆ ಜಗತ್ತಿನ ಇತಿಹಾಸದಲ್ಲಿಯೇ ಅದ್ವಿತೀಯವಾಗಿದೆ. ಕೇವಲ ಹದಿ ಹರೆಯದಲ್ಲೇ ಇಂಥ ಸಿದ್ಧಿಯನ್ನು ಪಡೆದಿದ್ದಕ್ಕಾಗಿಯೇ ಆಕೆಯ ವಚನಗಳು ಎಲ್ಲ ಶರಣರ ವಚನಗಳಿಗಿಂತಲೂ ಶ್ರೇಷ್ಠವೆಂದು ಚೆನ್ನಬಸವಣ್ಣನವರು ಮುಕ್ತನಾಗಿ ಸಾರಿದ್ದಾರೆ.

ಶರಣರ ಈ ಕ್ರಾಂತಿಯ ಫಲವಾಗಿ ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ ೩೦೦ಕ್ಕಿಂತಲೂ ಹೆಚ್ಚು ವಚನಕಾರರಲ್ಲಿ ೩೦ಕ್ಕಿಂತ ಮಿಗಿಲಾಗಿ ಸ್ತ್ರೀ ವಚನಕಾರರೇ ಆಗಿದ್ದಾರೆ; ಅದರಲ್ಲಿಯೂ ಹೆಚ್ಚು ಜನ ಹಿಂದುಳಿದ ಹಾಗೂ ದಲಿತ ವರ್ಗಕ್ಕೆ ಸೇರಿದವರೇ ಆಗಿದ್ದಾರೆ. ನಿರಕ್ಷರ ಕುಕ್ಷಿಗಳಾದ ಹಿಂದುಳಿದ ಹಾಗೂ ದಲಿತ ವರ್ಗದ ಮಹಿಳೆಯರು ಉನ್ನತ ಮಟ್ಟದ ಅಧ್ಯಾತ್ಮ ಸಿದ್ಧಿಯನ್ನು ಪಡೆದದ್ದಲ್ಲದೆ, ಅಕ್ಷರಸ್ಥರಾಗಿ ವಚನ ರಚನೆಯನ್ನು ಮಾಡುವ ಸಾಮರ್ಥ್ಯವನ್ನು ಪಡೆದುದು ಅದ್ಭುತ ಸಾಹಸವೇ ಸರಿ!"[೮೨]

ಇವರ ಹಿಂದೆ ಬಸವಾದಿ ಪ್ರಥಮರ ಪ್ರೋತ್ಸಾಹ ಪ್ರಭಾವ ಇದೆ ಎಂದರೆ ತಪ್ಪಾಗಲಾರದು. ಬಸವಾದಿ ಪ್ರಥಮರು ಸ್ತ್ರೀಯರಿಗೆ ಪುರುಷರ ಜೊತೆಗೆ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಹಕ್ಕುಗಳನ್ನು ಒದಗಿಸಿಕೊಟ್ಟರು.ಅಕ್ಕಮಹಾದೇವಿಯನ್ನು ಅನುಭವ ಮಂಟಪದಲ್ಲಿ ಹೊಗಳುವುದರ ಮೂಲಕ ಬಸವಣ್ಣ ಇಡೀ ಸ್ತ್ರೀ ಕುಲಕ್ಕೆ ದೊಡ್ಡ ಗೌರವವನ್ನು ನೀಡುತ್ತಾರೆ. ಸ್ತ್ರೀಯರ ಆರ್ಥಿಕ, ರಾಜಕೀಯ, ಸಾಮಾಜಿಕ ಹಕ್ಕುಗಳಿಗಾಗಿ ಹೋರಾಡಿದ ಅನೇಕ ಸಮಾಜ ಸುಧಾರಕರನ್ನು ಕಾಣಬಹುದು. ಆದರೆ ಧಾರ್ಮಿಕವಾಗಿ ಸ್ತ್ರೀಯರಿಗೆ ಪುರುಷರಷ್ಟೆ ಹಕ್ಕುಗಳು ಸಿಗುವಂತೆ ಹೋರಾಡಿದ ಪ್ರಥಮರಲ್ಲಿ ಬಸವಣ್ಣನವರು ಅದ್ವಿತೀಯರು. ಬುದ್ಧ ಹಾಗೂ ಮಹಾವೀರನ ಧರ್ಮಗಳು ತುಂಬಾ ತಡವಾಗಿ ಸ್ತ್ರೀಯರಿಗೆ ಧಾರ್ಮಿಕ ರಂಗದಲ್ಲಿ ಬಾಗಿಲನ್ನು

ತೆರೆದರೆ; ಬಸವಣ್ಣನವರು ಆ ಕಾಲದಲ್ಲೇ ಸ್ತ್ರೀ ಸ್ವಾತಂತ್ರ್ಯಕ್ಕೆ ಹಾಗೂ ಆಧ್ಯಾತ್ಮಿಕ ಅನುಭವಕ್ಕೆ ಅರ್ಹಳು ಎಂದು ಘೋಷಿಸಿದರು. ಸ್ತ್ರೀ ಸುಧಾರಣೆಯ ಚಳುವಳಿಯ ನೇತಾರರಾದ ರಾಜರಾಂ ಮೋಹನರಾಯ್ ಅವರಿಂದ ಗುರುತಿಸುತ್ತಾರೆ. ರಾಜರಾಂ ಮೋಹನರಾಯರು ಸ್ತ್ರೀಯರ ಸುಧಾರಣೆಯಾಗಿ ಅನೇಕ ಹೋರಾಟ ಮಾಡಿದರು ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಬಸವಣ್ಣ ತನ್ನ ಕಾಲದಲ್ಲೇ ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಹಾಗೂ ಸ್ತ್ರೀ ಆಧ್ಯಾತ್ಮಿಕ ರಂಗದಲ್ಲಿ ಸಮಾನತೆಗಾಗಿ ರಹದಾರಿಯನ್ನೇ ತೆರೆದ ಎಂಬುದು ಸತ್ಯವಾದ ಘಟನೆಯಾಗಿದೆ.[೮೩] ಹೀಗೆ ಬಸವಣ್ಣನವರು ಸ್ತ್ರೀಯರ ಬಗ್ಗೆ ಉದಾತ್ತವಾದ ನಿಲುವನ್ನು ಧಾರ್ಮಿಕ ಕ್ಷೇತ್ರದಲ್ಲಿ ಪುರುಷನಿಗೆ ಸರಿಸಮಾನ ಸ್ಥಾನವನ್ನು ನೀಡಿದ್ದಾರೆ.

೪.೪.೬. ಯೇಸುಕ್ರಿಸ್ತನ ದೃಷ್ಟಿಯಲ್ಲಿ ಸ್ತ್ರೀಯರು

ಸೃಷ್ಟಿಕಾರ್ಯದ ಆರಂಭದಿಂದಲೂ 'ಸ್ತ್ರೀ' ಎಂದರೇನೇ ಚರ್ಚೆಗೆ ಒಂದು ವಸ್ತುವಾಗಿತ್ತು ಎಂಬುದು ಸತ್ಯ. ದೌರ್ಬಲ್ಯ, ವಿವೇಕ, ಧೈರ್ಯ, ಸಾಹಸ, ಬುದ್ಧಿವಂತಿಕೆ, ಶೌರ್ಯ ಇವೆಲ್ಲ ಮನುಷ್ಯನಿಗೆ ದೇವರಿಂದ ಸಹಜವಾಗಿ ಬಂದ ವರಗಳಾದರೂ ಈ ಗುಣಗಳು ಮಹಿಳೆಯಲ್ಲಿ ಕಾಣಿಸಿಕೊಂಡರೆ ಮಾತ್ರ ಅದೇನೋ ವಿಶೇಷ ಸಂಗತಿ ಎಂಬಂತೆ ನೋಡಲಾಗುತ್ತಿತ್ತು. ಹೆಣ್ಣಿನ ವ್ಯಕ್ತಿತ್ವವೇ ಇದು. ಗುರುತಿಸದೆ ಹೋದರೂ ಅವಳದು ಕಣ್ಸೆಳೆಯುವ ವ್ಯಕ್ತಿತ್ವ.

ಹೆಣ್ಣು ಸಮಾಜದ ಅವಿಭಾಜ್ಯ ಅಂಗ. ವಿಶ್ವದಲ್ಲಿರುವ ಜನರಲ್ಲಿ ಅರ್ಧಭಾಗ ಮಹಿಳೆಯರಿದ್ದಾರೆ. ಕುಟುಂಬದಲ್ಲಿ ಹೊಲಗದ್ದೆಗಳಲ್ಲಿ, ತೋಟಗಳಲ್ಲಿ ಪುರುಷರಿಗಿಂತಲೂ ಹೆಚ್ಚಾಗಿ ಕೆಲಸ ಮಾಡುವವರು ಹೆಂಗಸರೇ. ಹೀಗಾಗಿ ಸ್ತ್ರೀ ಅಂದಿನಿಂದ ಇಂದಿನ ವರೆಗೂ ಕುಟುಂಬ ಮತ್ತು ಸಮಾಜಕ್ಕೆ ಒಂದು ಚೈತನ್ಯದ ಚಿಲುಮೆ, ಸೇವೆಯ ಸಾಕಾರ ಮೂರ್ತಿ.

ಒಂದು ಸಮಾಜದಲ್ಲಿ ಹೆಣ್ಣು ವಹಿಸಿರುವ, ವಹಿಸಬಹುದಾದ ಎಲ್ಲಾ ಪಾತ್ರಗಳು ಪರಿಚಯ ಯೇಸುಸ್ವಾಮಿಗಿತ್ತು. ಹೆಣ್ಣು ತಾಯಿಯಾಗಿ ಸೋದರಿಯಾಗಿ, ಪತ್ನಿ-ಉಪಪತ್ನಿಯಾಗಿ, ವೇಶ್ಯೆ-ಜಾರಿಣಿಯಾಗಿ, ದೈವಭಕ್ತಳು-ಶಾಪಗ್ರಸ್ಥಳಾಗಿ, ಮೋಹಿತೆ-ದೇವತೆಯಾಗಿ, ಯೋಧಳಾಗಿ, ನಾಯಕಿಯಾಗಿ, ವಂಚಕಿಯಾಗಿ ಸತ್ಯವಂತಳಾಗಿ ಹೀಗೆ ಪ್ರತಿಯೊಂದು ಪಾತ್ರವನ್ನು ಆಕೆ ನಿರ್ವಹಿಸುವುದನ್ನು ತನ್ನ ಸಮಾಜ ಹಾಗೂ ಅದರ ಸುತ್ತ-ಮುತ್ತ ಯೇಸುಸ್ವಾಮಿ ಕಂಡಿದ್ದನು.

ಹಳೆಯ ಒಡಂಬಡಿಕೆಯ ಕಾಲ 'ಸ್ತ್ರೀ' ಪಾಲಿಗೆ ಕತ್ತಲಮಯವಾಗಿತ್ತು. ರಾತ್ರಿ ಕಳೆದು ಹೊತ್ತು ಮೂಡುವಂತೆ ಕ್ರಿಸ್ತನ ಆಗಮನದಿಂದ ಮಹಿಳೆಗೆ ಸ್ವಾತಂತ್ರ್ಯ ಹಾಗೂ ಸ್ವಾಭಿಮಾನದ ಸೂರ್ಯ ಉದಯಿಸಿತೆಂದು ಹೇಳಬಹುದು."[೪೪] ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದಾಗಿದ್ದೀರಿ. ಎಂದೇ, ಇನ್ನು ಮೇಲೆ ಯೆಹೂದ್ಯ-ಯೆಹೂದ್ಯನಲ್ಲದವ, ದಾಸ-ಧಣಿ, ಗಂಡು-ಹೆಣ್ಣು ಎಂಬ ಭೇದವಿಲ್ಲ ಸಂತ ಪಾಲಿನ ಪ್ರಕಾರ ಗಂಡು ಹೆಣ್ಣಿನ ನಡುವೆ ಸಮಾನತೆ ಹಾಗೂ ಪರಸ್ಪ ಗೌರವ, ಘನತೆ ಸಹಜವಾದುದು. ಗಯ-ಹೆಣ್ಣು ಇಬ್ಬರು ಒಂದೇ ಸ್ವಭಾವದವರು. ಏಕ ದೇವಗೆ ಹೋಲಿಕೆಯಲ್ಲಿ ಸೃಷ್ಟಿಸಲಾದವರು. ಈ ಸಮಾನತೆ ಮತ್ತು ಘನತೆಯ ಅಸ್ತಿವಾರ ಅಧ್ಯಾತ್ಮಿಕತೆಯೇ ಹೊರತು ಸಾಮಾಜಿಕ ಸಂಪ್ರದಾಯವಾಗಲಿ ರಾಜಕೀಯ ನಿಯಮವಾಗಲೀ ಅಲ್ಲ.

ಯೇಸುಕ್ರಿಸ್ತ ಮತ್ತು ಪೌಲನಂಥ ಶಿಷ್ಯರು ಮೇಲ್ಕಂಡ ಸಿದ್ಧಾಂತವನ್ನು ಅನೇಕ ವಿಧದಲ್ಲಿ ಘೋಷಿಸಿದರೂ ಮಹಿಳೆ ಹಳೆಯ ಸಂಪ್ರದಾಯದ ಬಂಧಗಳಿಂದ ಬಿಡಿಸಿಕೊಳ್ಳಲು ಎಷ್ಟೋ ಶತಮಾನಗಳು ಬೇಕಾದವು. ಶೋಷಣೆ ಹಾಗೂ ಗುಲಾಮತನದಿಂದ ಮಹಿಳೆಯನ್ನು ಬಿಡುಗಡೆ ಮಾಡಲು ಯೇಸುಕ್ರಿಸ್ತ ಪ್ರಾರಂಭಿಸಿದ. ಈ ಅಂಶವನ್ನು ಹೊಸ ಒಡಂಬಡಿಕೆಯ ಕೆಲವು ಮಹಿಳೆಯರ ಜೀವನದಲ್ಲಿ ನಾವು ಕಾಣಬಹುದು.

ಯೇಸುಸ್ವಾಮಿ ತನ್ನ ತಾಯಿಗೆ ವಿಶೇಷ ಗೌರವ ಕೊಡುತ್ತಿದ್ದ ಎನ್ನುವುದಕ್ಕೆ ವಿಶ್ವದಲ್ಲಿ ಯೇಸುವಿನ ತಾಯಿ ಮೇರಿಯನ್ನು ಕುರಿತು ಬರೆದ ಗ್ರಂಥಗಳಷ್ಟು ಬೇರೆ ಯಾವ ಮಹಿಳೆಯ ಬಗ್ಗೆ ಬೆಳಕಿಗೆ ಬಂದಿಲ್ಲ. ಇದಕ್ಕೆ ಎರಡು ಮುಖ್ಯ ಕಾರಣಗಳನ್ನು ಕೊಡಬಹುದು. ಒಂದು, ಮೇರಿ ಲೋಕೋದ್ಧಾರಕನ ತಾಯಿ; ದೇವಪುತ್ರ ಯೇಸುವಿನೊಂದಿಗೆ ಆಕೆಗಿದ್ದ ಸಂಬಂಧ ಬೇರಾವ ಮಾನವನಿಗೂ ಲಭ್ಯವಿರಲಿಲ್ಲ. ಎರಡು, ಆಧ್ಯಾತ್ಮಿಕವಾಗಿ ಮಾನವನಿಗಿರಬೇಕಾದ ಒಬ್ಬ ತಾಯಿಯ ಆವಶ್ಯಕತೆ; ಮಾನವ ದೇವರನ್ನು ತಂದೆ ಎಂದು ಕರೆದು ಅವರ ಪ್ರೀತಿಯನ್ನು ಸವಿದರೂ ಒಬ್ಬ ತಾಯಿಯ ಮಮತೆ ಹಾಗೂ ಕರುಣೆಯನ್ನು ಸವಿಯುವ ಅವಕಾಶ ಬೇರಾವ ವ್ಯಕ್ತಿಯಿಂದ ಸಿಗಲು ಸಾಧ್ಯವಿಲ್ಲ.

ತನ್ನ ತಾಯಿಯ ಮಾತಿಗೆ ಬೆಲೆ ಕೊಟ್ಟು ಕಾನಾಊರಿನಲ್ಲಿ ಯೇಸುಸ್ವಾಮಿ ಮದುವಣಿಗನ ಮರ್ಯಾದೆಯನ್ನು ಕಾಪಾಡುವುದನ್ನು ಕಾಣುತ್ತೇವೆ.[೮೬] ಯೇಸುಕ್ರಿಸ್ತನಿಗೆ ತಾನು ಬಂದಿರುವುದು ಪಾಪಿಗಳನ್ನು ಪಾವನರನ್ನಾಗಿ ಮಾಡಲು ಎಂಬ ಧ್ಯೇಯ ಆತನಲ್ಲಿ ಸದಾ ತುಂಬಿತ್ತು. ಅದರಲ್ಲೂ ತುಳಿತಕ್ಕೆ ಒಳಗಾದ ಮಹಿಳೆಗೆ ಶೋಷಣೆಗೆ ಒಳಗಾದ ಸ್ತ್ರೀಯರನ್ನು, ವೇಶ್ಯೆಯರನ್ನು, ಪತಿತರನ್ನು ದೇವರ ಕೃಪೆಗೆ ಪಾತ್ರರಾಗುವಂತೆ ಮಾಡುವುದೇ ಅವರ ಕಾರ್ಯವಾಗಿತ್ತು. ಇದಕ್ಕೆ ಪೂರಕವಾಗಿ ಶುಭ ಸಂದೇಶಕಾರನಾದ ಯೋವಾನನು ತನ್ನ ಶುಭ ಸಂದೇಶದ ನಾಲ್ಕನೇ ಅಧ್ಯಾಯದಲ್ಲಿ ಯೇಸು ಮತ್ತು ಸಮಾರಿಯಿಂದ ಸ್ತ್ರೀ ನಡುವಿನ ಸ್ವಾರಸ್ಯಕರ ಸಂಭಾಷಣೆಗಳನ್ನು ದಾಖಲಿಸುತ್ತಾನೆ. ಸಮಾರಿಯದವರಿಗೂ ಯೆಹೂದ್ಯರಿಗೆ ಮೊದಲಿನಿಂದಲೂ ಬಳಕೆಯಲ್ಲಿರಲಿಲ್ಲ ಸಮಾರಿಯದವರನ್ನು 'ಬೆರಕೆಜನ' ತಾವು 'ಮಡಿವಂತರು' ಎಂಬ ಭಾವನೆ ಯೆಹೂದ್ಯರಲ್ಲಿತ್ತು.

ಇಂತಹ ಸಂದರ್ಭದಲ್ಲಿ ಯೇಸುಸ್ವಾಮಿ ಸಮಾರಿಯಾದ ಆ ಹಳ್ಳಿಯಲ್ಲಿ ಹೋಗಿ ಬಾವಿಯ ಬಳಿ ಸಮಾರಿಯಾದ ಸ್ತ್ರೀ ಬಳಿ ಕುಡಿಯಲು ನೀರನ್ನು ಕೇಳಿದ್ದು ಶಿಷ್ಟ ಸಮುದಾಯಕ್ಕೆ ಅರಗಿಸಿಕೊಳ್ಳಲು ತುಸು ಕಷ್ಟವಾದ ಘಟನೆಯಾಗಿತ್ತು. ಕಡೆಗೆ ಆ ಸ್ತ್ರೀಯೆ ಹೀಗೆನ್ನುತ್ತಾಳೆ. "ನೀನು ಯೆಹೂದ್ಯನು, ನಾನು ಸಮಾರಿಯದವಳು ಹೀಗಿರುವಲ್ಲಿ ನೀನು ನನ್ನಿಂದ ನೀರು ಕೇಳಬಹುದೆ?" ಯೇಸು ಈ ಸಂದರ್ಭದಲ್ಲಿ ಮೂರು ಮುಖ್ಯ ರಹಸ್ಯಗಳನ್ನು ಬಯಲು ಮಾಡುತ್ತಾನೆ:

೧. ಮಹಿಳೆಯ ಜೀವನದ ರಹಸ್ಯ

೨. ಜೀವಜಲದ ರಹಸ್ಯ

೩. ಲೋಕೋದ್ಧಾರಕನ ರಹಸ್ಯ

ಮಹಿಳೆಯ ಹಿನ್ನೆಲೆ ಏನು? ಆಕೆಯ ಜೀವನ ವೃತ್ತಾಂತವನ್ನು ಕೇಳಿದ ಮೇಲೆ ಆಕೆ ತಬ್ಬಿಬ್ಬಾಗಿ ಯೇಸುವನ್ನು ಈತ ಸಾಧಾರಣ ಮನುಷ್ಯನಲ್ಲಿ ಒಬ್ಬ ಪ್ರವಾದಿ ಇರಬೇಕೆಂದು ಬಣ್ಣಿಸುತ್ತಾಳೆ. ಯೇಸು ಆಕೆಗೆ ಆಕೆಯ ಪಾಪ ಜೀವನದ ಪರಿಚಯವನ್ನು ಮಾಡಿಕೊಡುತ್ತಾರೆ.

೨. ಜೀವ ಜಲದ ರಹಸ್ಯ

"ದೇವರು ಕೊಡುವ ವರದಾನವನ್ನು ಮತ್ತು ಕುಡಿಯಲು ನಿನ್ನಿಂದ ನೀರು ಕೇಳುತ್ತಿರುವ ವ್ಯಕ್ತಿಯನ್ನು ನೀನು ಅರಿತಿದ್ದರೆ, ಆಗ ನೀನೆ ಆತನಲ್ಲಿ ಬೇಡುತ್ತಿದ್ದೆ. ಆತನು ಜೀವ ಜಲವನ್ನು ಕೊಡುತ್ತಿದ್ದನು..... ಈ ನೀರನ್ನು ಕುಡಿಯುವವನಿಗೆ ಮತ್ತೆ ದಾಹವಾಗುತ್ತದೆ. ನಾನು ಕೊಡುವ ನೀರನ್ನು ಕುಡಿಯುವವನಿಗೆ ಎಂದಿಗೂ ದಾಹವಾಗದು. ಆ ನೀರು ಅವನಲ್ಲಿ ಉಕ್ಕಿ ಹರಿಯುವ ಬುಗ್ಗೆಯಾಗಿ, ನಿತ್ಯ ಜೀವವನ್ನು ತರುತ್ತದೆ." (ಯೋವಾ ೪:೧೦, ೧೩)

ಮಾನವನಿಗೆ ದೈಹಿಕವಾಗಿ ಮಾತ್ರವಲ್ಲ ಆಧ್ಯಾತ್ಮಿಕ ದಾಹವೆಂಬುದಿದೆ. ಈ ಆಧ್ಯಾತ್ಮಿಕ ದಾಹವನ್ನು ದೇವರೇ ತಣಿಸಬೇಕು. ದೈವಿಕ ಕೃಪೆ ಆತ್ಮವನ್ನು ಶುದ್ಧೀಕರಿಸುವುದರೊಂದಿಗೆ ದಜೀವಜಲದ ಬುಗ್ಗೆಯಾಗಿ ಮಾರ್ಪಡುತ್ತದೆ. ನೆರೆಯವರೊಂದಿಗೆ ಅದನ್ನು ಹಂಚಿಕೊಳ್ಳುವುದಕ್ಕೂ ಸಾಧ್ಯವಾಗುತ್ತದೆ. ಆಗ ಮನಸ್ಸಿಗೆ ಸಮಾಧಾನ, ಸಂತೃಪ್ತಿ ಲಭಿಸುತ್ತದೆ.

೩. ಲೋಕೋದ್ಧಾರಕನ ರಹಸ್ಯ

ಯೇಸುಸ್ವಾಮಿಗೂ ಆ ಸಮಾರಿಯಾದ ಸ್ತ್ರೀಗೂ ಮಾತಿಗೆ ಮಾತು ಬೆಳೆದು ದೈವಾರಾಧನೆಯತ್ತ ತಿರುಗುತ್ತದೆ. ಆಗ ಯೇಸು ಒಂದು ಮುಖ್ಯ ಅಂಶವನ್ನು ಪ್ರಕಟಿಸುತ್ತಾನೆ. ದೇವರು ಪುಣ್ಯಕ್ಷೇತ್ರಕ್ಕೆ ಸೀಮಿತವಾಗಿಲ್ಲ. ದೇವರು ಆತ್ಮಸ್ವರೂಪಿ, ಅವರನ್ನು ಸತ್ಯದಿಂದಲೂ ಆತ್ಮದಿಂದಲೂ ಆರಾಧಿಸತಕ್ಕದು. ಆತ್ಮಸ್ವರೂಪಿ ದೇವರ ಆರಾಧನೆಗೆ ಒಂದು ನಿರ್ದಿಷ್ಟ ಕ್ಷೇತ್ರ ಅವಶ್ಯವಲ್ಲ ಎನ್ನುತ್ತಾರೆ. ಆಗ ಸಂಭಾಷಣೆ ಲೋಕೋದ್ಧಾರಕನ ಕಡೆ ತಿರುಗುತ್ತದೆ. ಲೋಕೋದ್ಧಾರಕ ಒಂದಾಗಿ ಎಲ್ಲವೂ ಗೊತ್ತಾಗುವುದು ಎಂದು ಆ ಮಹಿಳೆ ಹೇಳಿದಾಗ, ಆ ಲೋಕೋದ್ಧಾರಕ ತಾನೇ ಎಂದು ಯೇಸು ಬಹಿರಂಗಪಡಿಸುತ್ತಾರೆ (ಯೊವಾ ೪:೧೯)

ಮೊದಮೊದಲು ಯೇಸು ಒಬ್ಬ ದಾರಿಹೋಕ ಯೆಹೂದ್ಯ ಎಂದೆಣಿಸಿ, ಆಮೇಲೆ ಆತನೊಬ್ಬ ಪ್ರವಾದಿಯೆಂದು ಗೊತ್ತಾಗಿ ಅಂತ್ಯದಲ್ಲಿ ಅವರೇ ಅಭಿಷಿಕ್ತ ಲೋಕೋದ್ಧಾರಕ ಎಂಬುದು ಸ್ಪಷ್ಟವಾಗುತ್ತದೆ. ಈ ರಹಸ್ಯ ಬಯಲಾದ ಮೇಲೆ ಆ ಸಮಾರಿತ ಸ್ತ್ರೀ ಬೇರಕೆ ಜನಾಂಗದವಳು, ಜನರ ಅಭಿಪ್ರಾಯದಲ್ಲಿ

ಒಬ್ಬ ಕೀಳ್ಮಟ್ಟದವಳಾಗಿದ್ದರೂ ದೇವರ ಸಮ್ಮುಖದಲ್ಲಿ ಕೀಳ್ಮಟ್ಟದವಳಲ್ಲ ಎಂದು ಅರಿವಾಗುತ್ತದೆ. ಯೇಸುಕ್ರಿಸ್ತನ ಸಂಪರ್ಕದಿಂದ ಅವಳು ಹೊಸಬಳಾಗುತ್ತಾಳೆ. ಊರಿನ ಜನರನ್ನೆಲ್ಲ ಯೇಸುವಿನ ಬಳಿಗೆ ಕರೆತರುವುದರ ಮೂಲಕ ಧರ್ಮಪ್ರಚಾರಕಳಾಗುತ್ತಾಳೆ. ಸಮಾರಿಯದವರು ಯೇಸುವನ್ನು ಸ್ವೀಕರಿಸಿ ಅವರಲ್ಲಿ ವಿಶ್ವಾಸವಿಡುವಂತೆ ಮಾಡಿದ ಪುಣ್ಯ ಈ ಸಮಾರಿತ ಹೆಂಗಸಿನದು.[೮೮]

ಈ ಘಟನೆಯ ಮೂಲಕ ಯೇಸುಸ್ವಾಮಿ ತಾನು ಪತಿತೆಯರ ಪರ ಎಂಬುದನ್ನು ನಿಶ್ಚಯವಾಗಿ ತೋರಿಸುತ್ತಾರೆ. ಯೇಸುಕ್ರಿಸ್ತ ಒಬ್ಬ ಪಾಪಿಷ್ಠೆಯನ್ನು ತಮ್ಮ ವಾಕ್ಯದ ಸಾಧನವಾಗಿ ಆರಿಸಿಕೊಳ್ಳಲು ಹಿಂಜರಿಯುವುದಿಲ್ಲ.

ಯೇಸುಕ್ರಿಸ್ತ ತೋರಿಕೆಯ ಬೂಟಾಟಿಕೆಯ ಶಿಷ್ಟ ಸಮಾಜವನ್ನು ತನ್ನ ಮಾತಿನ ಚಾಟಿಯೇಟಿನ ಮೂಲಕ ಎಚ್ಚರಿಸುತ್ತಿದ್ದನು. "ಸುಂಕದವರು ವೇಶ್ಯೆಯರು ನಿಮಗಿಂತ ಮೊದಲೇ ದೇವರ ಸಾಮ್ರಾಜ್ಯವನ್ನು ಪ್ರವೇಶಿಸುವರು."[೮೯]

ವೇಶ್ಯೆಯರು ತಾವು ಪಾಪಿಗಳು, ತಪ್ಪಿತಸ್ಥರು ಎಂಬ ದೀನ ಮನೋಭಾವನೆಯಿಂದ ದೇವರನ್ನು ತಲುಪುತಿದ್ದರೆ ಫರಿಸಾಯರು ಹಾಗೂ ಶಿಷ್ಟ ಸಮಾಜದವರು ಕೇವಲ ತೋರಿಕೆಗೆ ನೀತಿವಂತರೆಂದು ಕಾಣಿಸಿಕೊಳ್ಳುತ್ತಿದ್ದರೆ ಹೊರತು ಅಂತರಂಗದಲ್ಲಲ್ಲಾ. ಫರಿಸಾಯರು ತಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ವೇಶ್ಯೆಯರಾದರೂ ದೇವರಿಗೆ ದೀನರಾಗಿ ತಲೆಬಾಗಿ ಕ್ಷಮೆ ಯಾಚಿಸುತ್ತಿದ್ದರು ಅದಕ್ಕೆ ಯೇಸುಸ್ವಾಮಿ ವೇಶ್ಯೆಯರಿಗೆ ಮೊದಲು ದೇವರ ಸಾಮ್ರಾಜ್ಯ ಎಂದು ಹೇಳುತ್ತಿದ್ದರು. ತಪ್ಪು ಮಾಡುವುದು ಮಾನವನ ಸಹಜ ಗುಣ ಆದರೆ ಆ ತಪ್ಪನ್ನು ಪುನಃ ಮಾಡದಂತೆ ತಿದ್ದಿಕೊಂಡು ಜೀವನ ಸಾಗಿಸುವುದು ದೈವೀಗುಣ ಎಂಬುದನ್ನು ಹೇಳುತ್ತಿದ್ದ. ಮತ್ತಾಮ ತನ್ನ ಶುಭ ಸಂದೇಶದಲ್ಲಿ ಯೇಸುವಿಗೆ ಬೆಥಾನಿಯದಲ್ಲಿ ನಡೆದ ಅಭ್ಯಂಜನವನ್ನು ದಾಖಲಿಸುತ್ತ ಪತಿತೆ ತಾನು ಮನಪರಿವರ್ತನೆ ಹೊಂದಿದಾಗ ಹೇಗೆ ಕ್ಷಮೆ ಬೇಡಿ ಸುಗಂಧ ತೈಲದಿಂದ ಲೇಪಿಸಿ ಆತನ ಪಾದಕ್ಕೆ ಮುತ್ತಿಟ್ಟು ತನ್ನ ಹೊಸ ಜೀವನದ ಪ್ರವೇಶವನ್ನು ಕೊಡುತ್ತಾಳೆಂಬುದನ್ನು ಚಿತ್ರಿಸಿದ್ದಾನೆ.

ಯೇಸುಸ್ವಾಮಿ ತಾನು ಸ್ತ್ರೀವಾದಿ, ಸ್ತ್ರೀಯರಿಗೆ ಸಮಾನತೆ, ಸ್ವಾತಂತ್ರ್ಯ ಹಾಗೂ ರಕ್ಷಣೆ ನೀಡಬೇಕೆಂಬುದನ್ನು ವ್ಯಬಿಚಾರದಲ್ಲಿ ಸಿಕ್ಕಿ ಬಿದ್ದ ಸ್ತ್ರೀ ಪ್ರಸಂಗದಲ್ಲಿ ತೋರಿಸುತ್ತಾನೆ.[೯೦] ಒಬ್ಬ ಸ್ತ್ರೀ ವ್ಯಭಿಚಾರದಲ್ಲಿ ಸಿಲುಕಿ ಪರಿಸಾಯರ ಕೈಗೆ ಸಿಕ್ಕಿಬಿದ್ದಳು. ಪರಿಸಾಯರು ಆಕೆಯನ್ನು ಯೇಸುವಿನ ಮುಂದೆ ತಂದು ನಿಲ್ಲಿಸಿ ಆಕೆಗೆ ಯಾವ ಶಿಕ್ಷೆ ಕೊಡಬೇಕು ಎಂದು ಕೇಳುತ್ತಾರೆ. ಮೋಶೆ ಧರ್ಮಶಾಸ್ತ್ರದ ಪ್ರಕಾರ ಆಕೆಗೆ ಕಲ್ಲು ಹೊಡೆದು ಸಾಯಿಸಿರೆಂದು ಹೇಳಿದರೆ; ಯೇಸು ಒಬ್ಬ ನಿರ್ದಯಿ ನ್ಯಾಯಾಧೀಶನೆಂದು ಖಚಿತವಾಗುತ್ತದೆ. ಶಿಕ್ಷಿಸದೆ

ಬಿಟ್ಟರೆ ಯೇಸುಕ್ರಿಸ್ತ ಧರ್ಮಶಾಸ್ತ್ರದ ನಿಯಮವನ್ನು ಉಲ್ಲಂಘಿಸಿದಂತಾಗುತ್ತದೆ. ಇಲ್ಲಿ ಫರಿಸಾಯರ ಉದ್ದೇಶ ಯೇಸುವನ್ನು ದ್ವಂದ್ವಕ್ಕೆ ಸಿಲುಕಿಸುವುದಾಗಿತ್ತು. ಯೇಸು ನುಡಿಯುತ್ತಾನೆ: "ನಿಮ್ಮಲ್ಲಿ ಪಾಪ ಮಾಡದವನು ಮೊದಲು ಕಲ್ಲನ್ನು ಬೀರಲಿ" ಇದನ್ನು ಕೇಳಿಸಿಕೊಂಡ ಅವರಿಗೆಲ್ಲಾ ತಮ್ಮ ತಮ್ಮ ಪಾಪದ ಅರಿವಾಗಿ ಒಬ್ಬೊಬ್ಬರಾಗಿ ಜಾಗ ಖಾಲಿ ಮಾಡುತ್ತಾರೆ. ಯೇಸು ಆ ವ್ಯಭಿಚಾರಿಣಿಯನ್ನು ಕ್ಷಮಿಸಿ "ಇನ್ನು ಪಾಪ ಮಾಡಬೇಡ, ಸಮಾಧಾನದಿಂದ ಹೋಗು" ಎಂದು ಹೇಳಿಕಳಿಸಿಬಿಡುತ್ತಾರೆ. ಸ್ತ್ರೀಯರ ಬಗ್ಗೆ ಯೇಸುಕ್ರಿಸ್ತನ, ಪರಮ ಔದಾರ್ಯ ಈ ಘಟನೆಯಿಂದ ಪ್ರಕಟವಾಗುತ್ತದೆ.

"ನಾನು ಬಂದಿರುವುದು ಧರ್ಮತ್ತ್ವವನ್ನು ಕರೆಯುವುದಕ್ಕಲ್ಲ.... ಪಾಪಿಷ್ಟರನ್ನು ಕರೆಯುವುದಕ್ಕೆ"೯೧ (ಲೂಕ ೫:೩೨) ಎಂದು ಹೇಳುವುದರ ಮೂಲಕ ಯೇಸುಸ್ವಾಮಿ ಮಾನವರ ಪಾಪ ಬಲಹೀನತೆಯನ್ನೆಲ್ಲ ಅವರು ಚೆನ್ನಾಗಿ ಅರಿತಿದ್ದರು. ತಪ್ಪನ್ನು ಒಪ್ಪಿಕೊಳ್ಳುವ ಎಲ್ಲರಿಗೂ ಅವರು ಎಷ್ಟೆ ಕಡು ಪಾಪಿಗಳಾಗಿದ್ದ ಅವರಿಗೆ ಕ್ಷಮಾದಾನ ನೀಡುತ್ತಿದ್ದರು. ವೇಶ್ಯೆಯರು ವ್ಯಭಿಚಾರಿಣಿಗಳು ತಮ್ಮ ಪಾಪಕ್ಕೆ ಸಂಪೂರ್ಣವಾಗಿ ಅವರೇ ಜವಾಬ್ದಾರರಲ್ಲಿ ಬದಲಾಗಿ ಪುರುಷಪ್ರಧಾನ ಸಮಾಜ ಹೇಗೆ ಮಹಿಳೆಯನ್ನು ಶೋಷಣೆಯ ಸರಕನ್ನಾಗಿ ಉಪಯೋಗಿಸಿಕೊಳ್ಳುತ್ತಿತ್ತು ಎಂಬುದನ್ನು ಯೇಸು ಅರಿತಿದ್ದರು. ಇಲ್ಲಿ ಕೆಲವು ಅಂಶಗಳನ್ನು ಗಮನಿಸಿದಾಗ ಪುರುಷ ಪ್ರಧಾನ ಸಮಾಜದ ಶೋಷಣೆ ಮುಖಕ್ಕೆ ರಾಚುತ್ತದೆ. ವೇಶ್ಯೆಯನ್ನಾಗಲೀ, ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀಯನ್ನಾಗಲಿ ಶಿಕ್ಷೆಗೆಂದು ಕರೆತಂದವರು ಗಂಡಸರೆ. ವೇಶ್ಯಾವಾಟಿಕೆಗೆ ಸ್ತ್ರೀಯಷ್ಟು ಪುರುಷನು ಕಾರಣ. ಆದರೆ, ಇಲ್ಲಿ ಆ ಗಂಡಸನ್ನೇಕೆ ಹಿಡಿದು ತರಲಿಲ್ಲ? ಗಂಡಸರು ಏಕೆ ಶಿಕ್ಷೆಗೆ ಗುರಿಯಾಗುವುದಿಲ್ಲ ಅವರೇಕೆ ನ್ಯಾಯಾಧೀಶರ ಸ್ಥಾನದಲ್ಲಿ ನಿಲ್ಲಬೇಕು?

ಭಾರತೀಯ ಸಂಸ್ಕೃತಿಯಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿರುವ ದೇವದಾಸಿ ಪದ್ಧತಿಯಂತೆ ದೇವಾಲಯಗಳಲ್ಲಿ ಕನ್ಯೆಯರನ್ನು ದೇವರಿಗೆ ಒಪ್ಪಿಸಿ "ಗೆಜ್ಜೆಪೂಜೆ" ಮಾಡಿಸುವಂಥ ಪದ್ಧತಿ ಇಸ್ರೇಲಿನ ಸುತ್ತಮುತ್ತ ಪ್ರಚಲಿತವಾಗಿತ್ತು. ಇಲ್ಲೂ ಸ್ತ್ರೀ ಶೋಷಣೆಗೆ ಒಳಗಾಗಿ ಸ್ವಾತಂತ್ರ್ಯವಿಲ್ಲದೆ ಬಂಧನದಲ್ಲಿ ಬದುಕಬೇಕಿತ್ತು.

ತಾನು ಗಂಡಸು ಅನೇಕ ಪತ್ನಿಯರನ್ನು ಹೊಂದಬಹುದೆಂಬ ಅಹಂನಲ್ಲಿ ಅನೇಕ ಗಂಡಸರು ತೇಲಾಡುತ್ತಿದ್ದರು. ವಿವಾಹೇತರ ಲೈಂಗಿಕ ಸಂಬಂಧಗಳಿಗೂ ಹಂಬಲಿಸುತ್ತಿದ್ದರು. ಇಂಥ ಸಂದರ್ಭಗಳಲ್ಲಿ ಹೆಂಗಸಿಗೆ ಬೇರೆ ದಾರಿಯನ್ನು ಗಂಡಸರೆ ತೋರಿಸಿದಂತಾಗುತ್ತದೆ. ಬಲಿಷ್ಠರಾದ ಗಂಡಸರು ಅಬಲೆಯರಾದ ಹೆಂಗಸರನ್ನು ಅತ್ಯಾಚಾರಕ್ಕೆ ಎಳೆಯುವುದು ಕೆಲವರನ್ನು ಮಾರಿ ಅದರಿಂದ ಹಣ ಗಳಿಸುವುದು ಅಪರೂಪದ ಘಟನೆಗಳೇನಲ್ಲ.

ಯೇಸುಕ್ರಿಸ್ತನಿಗೆ ಇದೆಲ್ಲಾ ಚೆನ್ನಾಗಿ ಗೊತ್ತಿತ್ತು. ಇಂಥಾ ಸ್ತ್ರೀಯರ ಬಗ್ಗೆ ಅನುಕಂಪವಿತ್ತು. ಅವರನ್ನು ಪಾಪ ಬಂಧನದಿಂದ ಬಿಡಿಸಿ ಪುಣ್ಯಮಾರ್ಗಕ್ಕೆ ತರುವುದೇ ಅವರ ಉದ್ದೇಶವಾಗಿತ್ತು. ಇಂದಿನ ಸ್ತ್ರೀವಾದಿ ನೆಲೆಗಳಿಂದಲೂ ಯೇಸುಕ್ರಿಸ್ತನನ್ನು ಅಭ್ಯಾಸಿಸಿದಾಗಲೂ ನಮಗೆ ಕಾಣಿಸುವುದು ಯೇಸುಕ್ರಿಸ್ತ ಸ್ತ್ರೀಯರ ಬಗ್ಗೆ ಅನುಕಂಪ ಹೊಂದಿದ್ದು ಅವರ ಶೋಷಣೆಯನ್ನು ತಪ್ಪಿಸಿ ಯತ್ನಿಸಿ ಕೆಲಮಟ್ಟಿಗೆ ಯಶಸ್ಸನ್ನು ಗಳಿಸಿದ. ಯೇಸುಕ್ರಿಸ್ತನಿಂದ ಪಾಪಕ್ಷಮೆ ಸವಿದ ವೇಶ್ಯೆಯರು ಹಾಗೂ ವ್ಯಭಿಚಾರಿಣಿಯರು ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಲು ಸಾಧ್ಯವಾಯಿತು. ಜೊತೆಗೆ ಅವರು ಯೇಸುವಿನ ಭಕ್ತೆಯರಾದರು.

ತಾನು ಶಿಲುಬೆ ಹೊತ್ತುಕೊಂಡು ಕಲ್ವಾರಿ ಬೆಟ್ಟಕ್ಕೆ ಹೋಗುತ್ತಿದ್ದಾಗ ಸ್ತ್ರೀಯರು ತನಗಾಗಿ ಅಳದೆ ತಮ್ಮ ಮಕ್ಕಳಿಗಾಗಿ ಅಳಬೇಕೆಂದು ಹೇಳುವರು. ಇದರ ಮೂಲಕ ಮುಂದಿನ ಜನಾಂಗವನ್ನು ತಾಯಿಯಾದವಳು ಸರಿಯಾಗಿ ರೂಪಿಸದಿದ್ದರೆ ಆಗುವ ಆಘಾತ ಅಪಾರವಾಗುವುದು ಎಂದು ತಿಳಿಸಿದ್ದಾರೆ.

ಬಡ ವಿಧವೆಯಲ್ಪದಾನವನ್ನು ಎತ್ತಿ ಹಿಡಿಯುವುದರ ಮೂಲಕ ಬಡ ಸ್ತ್ರೀಯರ ಆತ್ಮಾಭಿಮಾನಕ್ಕೆ ಯೇಸು ಶೋಭೆ ನೀಡುತ್ತಾನೆ. ಫರಿಸಾಯರ ಧರ್ಮಶಾಸ್ತ್ರಿಗಳ ಡೊಂಗಿತನವನ್ನು ವಿಚಾರಹೀನ ಸಂಪ್ರದಾಯವನ್ನು ವರ್ತುಲದಿಂದ ಸ್ತ್ರೀಯರನ್ನು ಹೊರತಂದು ಆತ್ಮ ವಿಶ್ವಾಸದಿಂದ ಹೊಸ ಬಾಳನ್ನು ಬಾಳುವಂತೆ ಪ್ರೇರೇಪಿಸುತ್ತಾನೆ.

- ☆ ಯೇಸು ತಾನು ಲೋಕೋದ್ಧಾರಕ ಎಂದು ತಿಳಿಯಪಡಿಸಿದ್ದು, 'ಬೆರೆಕೆ ಜನ' ಎನಿಸಿಕೊಂಡ ಅನಾಮಿಕ ಸಮಾರಿತಸ್ತ್ರೀಗೆ[೨]
- ☆ ಯೇಸು ತನ್ನ ಮೆಲಿಟ್ಟ ವಿಶ್ವಾಸ ಅತಿ ದೊಡ್ಡದು ಎಂದು ಹೇಳಿದ್ದು ಕಾನೂನಿನ ಸ್ತ್ರೀಗೆ[೩]
- ☆ ಯೇಸು ತಾನು ಪುನರುತ್ಥಾನರಾದಾಗ ಮೊದಲು ಕಾಣಿಸಿಕೊಂಡಿದ್ದು ಪಾಪಿಷ್ಟಳಾದ ಮುಗ್ದಲದ ಮರಿಯಳಿಗೆ[೪]
- ☆ ಕಲ್ಲು ಹೊಡೆದು ಸಾಯಿಸಲಿದ್ದ ವ್ಯಭಿಚಾರಿಣಿ ಸ್ತ್ರೀಯನ್ನು ಕಾಪಾಡಿದ ಯೇಸು ಸ್ತ್ರೀಯ ಬಗ್ಗೆ ಪರಮ ಔದಾರ್ಯವನ್ನು ಮೆರೆದ[೫]
- ☆ 'ಬಂಜೆಯರೇ ಭಾಗ್ಯವಂತರು! ಹೆರದವಳೇ, ಹಾಲುಡಿಸಿದವಳೇ ಧನ್ಯಳು'[೬] ಎಂದು ಹೇಳುವುದರ ಮೂಲಕ ಯೇಸುಸ್ವಾಮಿ ಬಂಜೆ ಸ್ತ್ರೀಯರ ಬಾಳಿನಲ್ಲಿ ಆತ್ಮಾಭಿಮಾನವನ್ನು ತುಂಬಿದ.
- ☆ ವೇಶ್ಯೆಯರು ನಿಮಗಿಂತ ಮೊದಲೇ ದೇವರ ಸಾಮ್ರಾಜ್ಯವನ್ನು ಪ್ರವೇಶಿಸುವವರು[೭] ಎನ್ನುವುದರ ಮೂಲಕ ಅವರ ಬದುಕಿನಲ್ಲಿ ಹೊಸ ಆಶಾಕಿರಣವನ್ನು ಮೂಡಿಸಿದ.

ಯೇಸುಕ್ರಿಸ್ತ ಸ್ತ್ರೀಯರನ್ನು ಅದರಲ್ಲೂ ವೇಶ್ಯೆಯರನ್ನು, ರೋಗಿಷ್ಟೆಯರನ್ನು ಪತಿತೆಯರನ್ನು ಕೇವಲ ಗುಣಪಡಿಸಲಿಲ್ಲ. ಪಾಪಪ್ರಜ್ಞೆಯಿಂದ ಬಿಡಿಸಿದರು, ಚಿಂತೆಗಳಿಂದ ದೂರ ಮಾಡಿದರು, ದೇವರಕ್ಷಮೆ ಅವರಿಗೆ ಇದೆ ಎಂದು ಹೇಳಿ ಅವರನ್ನು ಮುಕ್ತಿಮಾರ್ಗಕ್ಕೆ ಕರೆದೊಯ್ದರು.

ಯೇಸುವಿನ ಬಾಳಿನಲ್ಲಿ ನಡೆದ ಎಲ್ಲಾ ಘಟನೆಗಳು ಯೇಸು ಸ್ತ್ರೀಯರ ಬಗ್ಗೆ ವಿಶಾಲವಾದ ಔದಾರ್ಯವಾದ ದೃಷ್ಟಿಯನ್ನು ಹೊಂದಿದ್ದ ಎಂಬುದು ಗೋಚರವಾಗುತ್ತದೆ. ತನ್ನ ಕಾಲದಲ್ಲಿ ಸ್ತ್ರೀಯರಿಗೆ ಪುರುಷನಷ್ಟೆ ಸಮಾನತೆಯನ್ನು ಕೊಟ್ಟು ಆಕೆಯನ್ನು ಪುರುಷನ ದಬ್ಬಾಳಿಕೆಯಿಂದ ಶೋಷಣೆಯಿಂದ ತಪ್ಪಿಸಿ ಅವರ ಬಾಳಿಗೆ ಹೊಸ ಆಶಾಕಿರಣವಾದ.

ಗಂಡ-ಹೆಂಡತಿ ಎಂಬ ವಿವಾಹ ಸಂಸ್ಕಾರ ಪವಿತ್ರವಾದದ್ದು. ಇಲ್ಲಿ ಹೆಂಡತಿ ಕೇವಲ ಭೋಗದ ವಸ್ತುವಲ್ಲ; ಬದಲಿಗೆ ಗಂಡನ ಅರ್ಧಾಂಗಿ, ಸಹಧರ್ಮಿಣಿ. ಆದುದರಿಂದ ಬಾಳಿನಲ್ಲಿ ಸಿಹಿ ಇರಲಿ ಕಹಿ ಇರಲಿ ಒಂದಾಗಿ ಬಾಳ ಸಂಸಾರ ನೌಕೆಯಲ್ಲಿ ಪಯಣಿಸಬೇಕೆಂಬುದು ಯೇಸುವಿನ ಕರೆ. ಯೇಸುಸ್ವಾಮಿ ವಿವಾಹ ವಿಚ್ಛೇದನೆಯನ್ನು ಬಲವಾಗಿ ಖಂಡಿಸುತ್ತಾನೆ. ಗಂಡನಾದವನು ತನ್ನ ಇಷ್ಟಾನಿಷ್ಟದ ಮೇರೆಗೆ ಬೇಕೆಂದಾಗ ಹೆಂಡತಿಯನ್ನು ಬಿಟ್ಟುಬಿಡುವುದಲ್ಲ ಹಾಗೇನಾದರೂ ಬಿಟ್ಟುಬಿಟ್ಟು ಮತ್ತೊಬ್ಬಳನ್ನು ಮದುವೆಯಾಗುವವನು ವ್ಯಭಿಚಾರಿಯಾಗುತ್ತಾನೆ ಎನ್ನುವುದರ ಮೂಲಕ ವಿವಾಹ ಸಂಸ್ಕಾರದಲ್ಲಿ ಸ್ತ್ರೀ ರಕ್ಷಣೆಗೆ ಮುಂದಾಗುತ್ತಾರೆ. ಜೊತೆಗೆ ಪುರುಷ ದಬ್ಬಾಳಿಕೆಯ ಪ್ರಪಂಚದಲ್ಲಿ ಆತನ ಕಾಮುಕತನಕ್ಕೆ ಕೊಡಲಿ ಪೆಟ್ಟನ್ನು ನೀಡುತ್ತಾರೆ.[೯೮]

೪.೪.೨ ಬಸವಣ್ಣನವರ 'ಕಾಯಕವೇ ಕೈಲಾಸ'

'ಕಾಯಕ' ಎಂದರೆ 'ಕೆಲಸ'ದತ್ತ ಒಂದು ಹೊಸ ನೋಟ. ನಮಗೆಲ್ಲ ತಿಳಿದ ಮೇರೆಗೆ ಬಸವಣ್ಣ ಹನ್ನೆರಡನೆಯ ಶತಮಾನದ ಮಹಾನ್ ಸಮಾಜೋ-ಧಾರ್ಮಿಕ ಸುಧಾರಕ. ಜಾತಿಪದ್ಧತಿಯಿಂದ ಕೊಳೆತು ಹೋಗುತ್ತಿದ್ದ ಸಮಾಜದಲ್ಲಿ ಬುದ್ದಿವಂತ ಒಂದು ಸಮೂಹ ಆಂದೋಲನವನ್ನೇ ಆರಂಭಿಸಿದ. ಪುರೋಹಿತಶಾಹಿ ಹಾಗೂ ಅರಸೊತ್ತಿಗೆಯವರು ತಾವು ಈ ಭೂಲೋಕದ ಮೇಲಿನ ದೇವರುಗಳೆಂದು ಒಬ್ಬರನ್ನೊಬ್ಬರು ಹೊಗಳುತ್ತಾ ಜನಸಾಮಾನ್ಯರನ್ನು ಭಯ ಮತ್ತು ಮೂಢನಂಬಿಕೆಗಳಿಂದ ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿದ್ದರು. ಅಸಮಾನತೆ, ಭಿನ್ನಭೇದ ಮತ್ತು ಅಸ್ಪೃಶ್ಯತೆಯಂತಹ ನೀಚ ಆಚರಣೆಗಳು ಕರ್ಮಠ ಜಾತಿಯ ಸಮಾಜದಲ್ಲಿತ್ತು. ಇಂತಹ ಸಂದರ್ಭದಲ್ಲಿ ಬಸವಣ್ಣ ಜೀವನ ಹಾಗೂ ದುಡಿಮೆಯ ಬಗ್ಗೆ ಒಂದು ಹೊಸ ನೋಟವನ್ನು ಹರಿಸಿದ.

ಅನೇಕ ಜನ ದಾರ್ಶನಿಕರು, ಗುರುಗಳು ಈ ಪ್ರಪಂಚವನ್ನು ತ್ಯಜಿಸಿ ಕೇವಲ ಬೋಧನೆಗೆ ತಮ್ಮನ್ನು ಸೀಮಿತಗೊಳಿಸಿಕೊಂಡರು. ಆದರೆ, ಬಸವಣ್ಣನು ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯ ಕಾಯಕ ಮಾಡಿಕೊಂಡು ಗೃಹಸ್ಥನಾಗಿದ್ದನು. ಆತ ಸಂಚಾರಿ ಬಹೂದಕನಾಗಿರಲಿಲ್ಲ. ಕಾಯಕ ಎಂದರೆ 'ದುಡಿಮೆ' ಎಂದರ್ಥ. ಕಾಯ ಎಂದರೆ ದೇಹ ಕಾಯಕ ಎಂದರೆ ದೇಹದಿಂದ ಮಾಡಿದ ದುಡಿಮೆ. ಬಸವಣ್ಣನ ದೃಷ್ಟಿಯಲ್ಲಿ ಕಾಯಕವೆಂದರೆ ದುಡಿಮೆ-ಗಳಿಕೆ-ಸದ್ವಿನಿಯೋಗವಾಗಿದೆ. ಸಮಾಜದ ಏಳಿಗೆಯಲ್ಲಿ ಎಲ್ಲರೂ ಭಾಗಿಗಳಾಗಿ ಆತ್ಮಕಲ್ಯಾಣದ ಮುಖ ಮಾಡುವುದೇ ಕಾಯಕವಾಗಿದೆ. ಇಲ್ಲಿ ಎಲ್ಲರೂ ದುಡಿಮೆಯನ್ನು ಮಾಡಬೇಕಾಗಿದೆ.

ಕಾಯಕದ ಅಂತಸತ್ವವೆಂದರೆ ಮನುಷ್ಯ ಸೋಮಾರಿಯಾಗಿ ಇನ್ನೊಬ್ಬರಿಗೆ ಹೊರೆಯಾಗಿ ಜೀವಿಸದೆ ಸಮಾಜಕ್ಕೆ ತನ್ನ ಕಾಯಕದ ಮೂಲಕ ಸೇವೆ ಸಲ್ಲಿಸುವುದೇ ಆಗಿದೆ.

ಬಸವಣ್ಣನ ಕಾಯಕ ತತ್ವವು ಪಲಾಯನವಾದವಲ್ಲ. ಸನ್ಯಾಸ ಅಥವಾ ನಿವೃತ್ತಿಗೆ ವಿರೋಧವಾದುದು. ಪರಾವಲಂಬನೆ ಹಾಗೂ ಭಿಕ್ಷಾಟನೆ ಜೀವನವನ್ನು ತಿರಸ್ಕರಿಸುತ್ತದೆ. ಬಸವಣ್ಣನ ಕಾಲದಲ್ಲಿ ವೃತ್ತಿಗೂ ಜಾತಿಗೂ ನಿಕಟ ಸಂಬಂಧ ಬಹುಕಾಲದಿಂದಲೂ ಬೆಳೆದುಬಂದಿತ್ತು. ಆದರೆ ಕಾಯಕ ಸಿದ್ಧಾಂತ ಈ ಸಂಬಂಧವನ್ನು ತಪ್ಪಿಸಿ, ಅಂತಿಮವಾಗಿ ಜಾತಿ ವಿನಾಶದತ್ತ ಸಮಾಜವನ್ನು ಕರೆದೊಯ್ಯುತ್ತದೆ ಎಂಬುದು ಬಸವಣ್ಣನ ಕಲ್ಪನೆಯಾಗಿತ್ತು. ಕಾಯಕ ಸಿದ್ಧಾಂತವು ವರ್ಣಾಶ್ರಮಗಳನ್ನು ಅಳಿಸಿ, ಸಾಮಾಜಿಕ ಸಮಾನತೆಯನ್ನು ಸ್ಥಾಪಿಸುತ್ತದೆಂಬುದನ್ನು ಬಸವಣ್ಣನ ಆಶಯವಾಗಿತ್ತು.[೬೬]

ಬಸವಣ್ಣ ನಿರ್ಮಿಸಲೆತ್ನಿಸಿದ್ದು ಶುದ್ಧ ಲೌಕಿಕ ಸಮಾಜವನ್ನಲ್ಲ. ಬಸವಣ್ಣನ ಸಮಾಜಕ್ಕೆ ಧರ್ಮದ ತಳಹದಿಯುಂಟು. ಬಸವಣ್ಣ ಎಲ್ಲವನ್ನು ಆಧ್ಯಾತ್ಮಿಕರಿಸಿದ್ದ. ಆದರೆ ಅಮಾನವೀಯಗೊಳಿಸಲಿಲ್ಲ ಎಂಬುದು ಮುಖ್ಯ ವಿಚಾರ. ಬಸವಣ್ಣನಿಗೆ ಯಾವಾಗಲೂ 'ಸಾಮಾನ್ಯ ಮನುಜ'ನೇ ಕೇಂದ್ರ ಬಿಂದು. ಅವನ ಘನತೆ, ಗೌರವಗಳೇ ಮೊದಲ ಆದ್ಯತೆ. ಪಲಾಯನವಾದ, ಸಂನ್ಯಾಸ,. ವೈರಾಗ್ಯಗಳನ್ನು ಬಸವಣ್ಣ ವೈಭವೀಕರಿಸಲಿಲ್ಲ. ಬಸವಣ್ಣನದು ಸಮತೋಲನದೃಷ್ಟಿ ಸಮನ್ವಯ ದೃಷ್ಟಿ. ಇಹ-ಪರ, ಲೌಕಿಕ-ಪಾರಮಾರ್ಥಿಕಗಳ ಸಾಮರಸ್ಯವನ್ನು ಅವರು ಒತ್ತಿ ಹೇಳಿದರು.

'ಕಾಯಕ ತತ್ವ' ಬಸವಣ್ಣನ ಕನಸಿನ ಸಮಾಜದ ಆಧಾರ ಸ್ತಂಭ. ಇದಕ್ಕೆ ದಾಸೋಹ ಪೂರಕ ಹಾಗೂ ಪ್ರೇರಕ. ಗುರು ದಾಸೋಹ, ಲಿಂಗ ದಾಸೋಹ, ಜಂಗಮ ದಾಸೋಹ ಹೇಗೆ ತ್ರಿವಿಧ ದಾಸೋಹಗಳಲ್ಲಿ ಬಸವಣ್ಣ ಯಾವಾಗಲೂ ಜಂಗಮ ದಾಸೋಹಕ್ಕೆ ಒತ್ತು ಕೊಡುತ್ತಿದ್ದ. ಇಲ್ಲಿ ಕಾಯಕತತ್ವ ಉಗಮವಾದರೆ ದಾಸೋಹ ಗಮ್ಯ. ಇದರಿಂದ ಒಂದು ಅಂಶ ಸ್ಪಷ್ಟವಾಗುತ್ತದೆ ಕಾಯಕವೆಂದರೆ ಕೇವಲ ಬರಿಯ ದುಡಿಮೆಯಲ್ಲ, ವೃತ್ತಿಯಲ್ಲ; ಅದೊಂದು ಸಂಕೀರ್ಣ ವ್ಯಾಪಕತತ್ವ.

ಉಪನಿಷತ್ ಹಾಗೂ ಭಗವದ್ ಗೀತೆಗಳಲ್ಲಿ ಕರ್ಮಯೋಗದ ಪ್ರಸ್ತಾಪವಿದೆ ಶ್ರೀ ಕೃಷ್ಣನ ನಿಷ್ಕಾಮ ಕರ್ಮಯೋಗವು ಪ್ರಸಿದ್ಧಿಯಾಗಿದೆ. ಹೀಗಾಗಿ ಬಸವಣ್ಣನಿಗಿಂತ ಹಿಂದಿನಿಂದಲೂ ಕರ್ಮಸಿದ್ಧಾಂತವಿದ್ದರೂ ಕಾಯಕತತ್ವ ಕರ್ಮ ಸಿದ್ಧಾಂತಕ್ಕಿಂತ ಭಿನ್ನವಾಗಿದೆ. ಯಾರು ಯಾವ ಕಾಯಕವನ್ನಾದರೂ ಮಾಡುವ ಸ್ವಾತಂತ್ರ ಕಾಯಕ ತತ್ವದಲ್ಲಿದ್ದರೆ ಇಂತಹ ಜಾತಿಯವರು ಇಂತಿಂಥ ಕಾಯಕವನ್ನೇ ಮಾಡಬೇಕೆಂದು ಕರ್ಮಸಿದ್ಧಾಂತ. ಜಾತಿ ಪದ್ಧತಿಯನ್ನು ಬೆಳೆಸಿತು. ಕರ್ಮಸಿದ್ಧಾಂತ ಸಮಾಜವನ್ನು ವಿಗತಿಯತ್ತ ಕೊಂಡೊಯ್ದರೆ 'ಕಾಯಕ ತತ್ವ' ಸಮಾಜವನ್ನು ಪ್ರಗತಿಯತ್ತ ಕೊಂಡೊಯ್ಯಲು ಯತ್ನಿಸಿತು. ಕಾಯಕ ತತ್ವದಲ್ಲಿ ಶರಣ ಪ್ರಣೀತವಾದ ಅಪೂರ್ವ ಆಯಾಮವಿದೆ. ಅದು ವ್ಯಷ್ಠಿ-ಸಮಷ್ಠಿಗಳ ಕೀಲಿಕೈ. ವ್ಯಕ್ತಿಯ ಸರ್ವತೋಮುಖ ವಿಕಾಸದ ರಹಸ್ಯವನ್ನು ಅದು ಗರ್ಭೀಕರಿಸಿಕೊಂಡಿದೆ. "ಕಾಯಕವೇ ಕೈಲಾಸ" ಎಂಬುದು ಬಸವಣ್ಣನವರ ಹೆಸರಿನಲ್ಲಿರುವ ಪ್ರಸಿದ್ಧವಾದ ಹೇಳಿಕೆ. ಕಾಯಕ ವ್ಯಕ್ತಿಯ ಆತ್ಮಸಾಕ್ಷಾತ್ಕಾರಕ್ಕೆ ಸಾಧನ. ಭಗವಂತನನ್ನು ಮೆಚ್ಚಿಸುವ ವಿಧಾನ ಎಂಬದು ಕೈಲಾಸ ಶಬ್ದದಿಂದ ಸೂಚಿತವಾಗುವ ಸತ್ಯ.

ಕಾಯಕದಲ್ಲಿ ಸ್ವಾವಲಂಬನೆಯ ತತ್ವ ಅಡಗಿದೆ. ಕಷ್ಟಪಟ್ಟು ದುಡಿದು ಗಳಿಸಬೇಕು. ಈ ಸಂಗತಿಯನ್ನು, ಸತ್ಯವನ್ನು ಬಸವಣ್ಣನು ಬಲ್ಲ. 'ಛಲಬೇಕು ಶರಣಂಗೆ ಪಧನವನೊಲ್ಲೆನೆಂಬ! ವಚನದಲ್ಲಿ ಬಸವಣ್ಣ ಪರಧನಕ್ಕೆ ಎಳ್ಳಷ್ಟು ಇಷ್ಟ ಪಡುತ್ತಿರಲಿಲ್ಲವೆಂಬುದು ಅರಿವಾಗುತ್ತದೆ. ಕಾಯಕ ಯಾವುದಾದರೇನು ದುಡಿಯದೇ ಗಳಿಸಿದ್ದು ಕಳ್ಳತನವಾಗುತ್ತದೆ. ಕಾಯಕ ಕೂಲಿಯಾಗಬಹುದು, ಕೃಷಿಯಾಗಬಹುದು, ಮಂತ್ರಿಯಾಗಬಹುದು, ಮಡಿವಾಳನಾಗಬಹುದು. ಕಾಯಕ ಏನೇ ಆಗಿರಬಹುದು, ದುಡಿದೆ ಜೂಜು ಮಾರ್ಗದಲ್ಲಿ ಹಣ ಗಳಿಸಬೇಕು. ದಾಸೋಹ ಮಾಡಬೇಕೆಂದು ಬಸವಣ್ಣ ಈ ವಚನದಲ್ಲಿ ಹೀಗೆ ಹೇಳಿದ್ದಾನೆ.

ಹೊಲೆ ಹೊಲೆಯರ ಮನೆ ಹೊಕ್ಕು
ಸಲೆ ಕೈಕೂಲಿಯ ಮಾಡಿಯಾದರೂ
ನಿಮ್ಮ ನಿಲವಿಂಗೆ ಕುದಿವೆನಲ್ಲದೆ
ಎನ್ನೊಡಲವಸರಕ್ಕೆ ಕುದಿದೆನಾದರೆ
ತಲೆದಂಡ ಕೂಡಲ ಸಂಗಮ ದೇವ
ಕೃಷಿ ಕಾಯಕದಿಂದಾದಡೇನು?
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮ ಸದ್ಭಕ್ತನ ಪಾದವ ತೋರಯ್ಯಾ ತಂದೆ......"

ಎಲ್ಲಿ ಕಾಯಕಗಳೂ ಶ್ರೇಷ್ಠ. ಕಾಯಕಗಳಲ್ಲಿ ತಾರತಮ್ಯವಿಲ್ಲ; ಮೇಲು ಕೀಳಿಲ್ಲ. ತಮ್ಮ ತಮ್ಮ ಅಭಿರುಚಿ ಅನುಕೂಲತೆಗಳಿಗೆ ತಕ್ಕಂತೆ ಯಾರು ಯಾವ ಕಾಯಕವನ್ನಾದರೂ ಆಶ್ರಯಿಸಬಹುದು. ಬಸವಣ್ಣ ಬಿಜ್ಜಳನ ಮಂತ್ರಿಯಾಗಿದ್ದರು, ನಿಜ. ಆದರೆ ಎಲ್ಲರೂ ಮಂತ್ರಿಗಳಾಗಬೇಕೆಂದಿಲ್ಲ. ಮಂತ್ರಿ ಪದವಿಯಷ್ಟೆ ಗೌರವಾಸ್ಪದವಾದದ್ದು ಹರಳಯ್ಯನ ಪಾದರಕ್ಷೆ ತಯಾರಿಕೆಯ ಕಾಯಕ.

ಕಾಯಕಕ್ಕೆ ಎಲ್ಲರೂ ಬದ್ಧರಾದ್ದರಿಂದ, "ಕಾಯಕ ಮಾಡುತ್ತಿರುವಿರಾ" ಎಂದು ಯಾರನ್ನು ಬೇರಾದರೂ ಕೇಳಬಹುದು. ಆದರೆ, ಎಲ್ಲ ಕಾಯಕಗಳೂ ಸಮಾನವಾದ್ದರಿಂದ, "ನಿಮ್ಮ ಕಾಯಕ ಯಾವುದು?" ಎಂದು ಕೇಳುವುದು ತಪ್ಪು. ಆದ್ದರಿಂದಲೇ ಬಸವಣ್ಣ "ನಿಮ್ಮ ಕಾಯಕವಾವುದೆಂದು ಬೆಸಗೊಂಡೊಡೆ ತಲೆದಂಡ! ಎನ್ನುತ್ತಾರೆ.[೧೦೦]

ಕಾಯಕತತ್ವ ಆತ್ಮಸಾಕ್ಷಾತ್ಕಾರಕ್ಕೆ ಸಾಧನವಾಗಿದ್ದರೂ ಆರ್ಥಿಕ ಸಮಾನತೆಯನ್ನು ನೆಲೆಗೊಳಿಸುವಲ್ಲಿಯೂ ಸಹಕಾರಿಯಾಗಿದೆ. ಅದು ಅಸಂಗ್ರಹದ ಮೇಲೆ ಅಂದರೆ ಅನಗತ್ಯವಾಗಿ ಸೇಕರಿಸಿಟ್ಟುಕೊಳ್ಳುವುದರ ಮೇಲೆ ನಿರ್ಬಂಧವನ್ನು ಹೇರುತ್ತದೆ. ವ್ಯಕ್ತಿ ತನಗೆ ಅಗತ್ಯವಾದಷ್ಟನ್ನು ಮಾತ್ರ ಸಂಪಾದಿಸಬೇಕು. ಅಗತ್ಯ ಮೀರಿ ಉಳಿದುದನ್ನು ದಾಸೋಹಕ್ಕೆ ವಿನಿಯೋಗಿಸಬೇಕು. ಇಲ್ಲಿ ದಾಸೋಹವೇ ಕಾಯಕದ ಗುರಿಯಾಗಿದೆ 'Work is worship' ಎನ್ನುವ ಕಾರ್ಲೈಲನ ಸೂಕ್ತಿ ಕಾಯಕವೇ ಕೈಲಾಸ ಎಂಬ ಕಲ್ಪನೆಗೆ ಸಂವಾದಿಯಾಗಿರುವಂತೆ ತೋರುತ್ತದೆ. ದಾಸರು ಹಾಡಿದಂತೆ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆವ ವಿಧಾನ' ದಾಸೋಹವೇ ಆಗಿದೆ. ವಿಶಾಲವಾದ ಅರ್ಥದಲ್ಲಿ ದಾಸೋಹವೆಂದರೆ ಸಮಾಜದಿಂದ ಪಡೆದುದ್ದನ್ನು ಮತ್ತೆ ಸಮಾಜಕ್ಕೆ ಅರ್ಪಿಸುವುದೇ ಆಗಿದೆ.

ಯಾವುದೇ ವ್ಯಕ್ತಿ ಸಾತ್ವಿಕ ಮಾರ್ಗದಿಂದ ತನ್ನ ಕಾಯಕದ ಮೂಲಕ ಗಳಿಸಿದ ಧನ ನ್ಯಾಯಾರ್ಜಿತ ಧನವಾಗಿರಬೇಕು. "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ" ಎಂದು ಬಸವಣ್ಣ ಅಕ್ರಮ ಸಂಪಾದನೆಯನ್ನು ತಿರಸ್ಕರಿಸುತ್ತಾನೆ. ಕಾಯಕ ತತ್ವವನ್ನು ಪ್ರಸ್ತುತ ಯುಗಕ್ಕೆ ಅನ್ವಯಿಸಿದರೆ ಇದೊಂದು ದೊಡ್ಡ ಕೊಡುಗೆಯಾಗಿದೆ. ಸಮಾಜದ ಪ್ರಗತಿಗೆ ಇದು ಪೂರಕವಾಗಿದೆ. ಬಸವಣ್ಣನ 'ಸಮ್ಯಕ್ ಕಾಯಕ

ದರ್ಶನ'ವನ್ನು ಸರಿಯಾಗಿ ಸಮಾಜದಲ್ಲಿ ಎಲ್ಲರೂ ಅಳವಡಿಸಿಕೊಂಡರೆ ದಾರಿದ್ರ್ಯ, ಆರ್ಥಿಕ ಅಸಮತೆ, ನಿರುದ್ಯೋಗ ಸಮಸ್ಯೆಗಳು ಖಂಡಿತ ನಿರ್ಮೂಲವಾಗುತ್ತವೆ.

ಕಾಯಕ ಸಿದ್ಧಾಂತಕ್ಕೆ ಕರ್ಲ್‌ಮಾರ್ಕ್ಸ್‌ನ ಸಿದ್ಧಾಂತ ಬಲು ಹತ್ತಿರ ಬಂದು ನಿಲ್ಲುತ್ತದೆ. ಕಾರ್ಲ್‌ಮಾರ್ಕ್ಸ್ ಆಸ್ತಿಯ ಸಮಾನ ಹಂಚಿಕೆ, ಆರ್ಥಿಕ ಸಮಾನತೆ, ಬಂಡವಾಳಶಾಹಿಗಳ ವಿರೋಧಗಳ ಮೇಲೆ ಅವಧಾರಣ ಹಾಕುತ್ತಾನೆ. ಕಾಯಕ ತತ್ವ ಮಾರ್ಕ್ಸ್‌ತತ್ವವನ್ನು ಮೀರಿ ನಿಲ್ಲುತ್ತದೆ. ಮಾರ್ಕ್ಸ್ ವಾದ ಹಿಂಸೆಯನ್ನು ಒಪ್ಪುತ್ತದೆ; ಆದರೆ ಕಾಯಕ ತತ್ವಕ್ಕೆ ಅಹಿಂಸೆ, ಸತ್ಯದ ಹಿನ್ನೆಲೆಯಿದೆ. ದಾರಿದ್ರ್ಯ, ನಿರುದ್ಯೋಗ ಬಲಬಗೆಯ ಭ್ರಷ್ಟಾಚಾರಕ್ಕೆ ಕಾರಣ ಕಾಯಕರಾಹಿತ್ಯ, ಆಲಸ್ಯ. ಇಂತಹ ರೋಗಗಳಿಗೆಲ್ಲಾ ಕಾಯಕ ದಾಸೋಹಗಳೇ ಚಿಕಿತ್ಸೆ. ನಿಜವಾದ ಸುಖ-ಶಾಂತಿಗಳ ಪ್ರಾಪ್ತಿಗೆ ಆಧ್ಯಾತ್ಮಿಕ ದೃಷ್ಟಿಯ ಕಾಯಕ ತತ್ವ ಆವಶ್ಯಕ. ಬಸವಣ್ಣನವರ ಈ ನುಡಿ ತುಂಬಾ ಗಮನಾರ್ಹವಾಗಿದೆ; "ಕಾಯಕ ಕಳವಳ ದಾಸೋಹದ ಮುಖದಿಂದಲ್ಲದೆ ಕಳೆಯದು" ದೈಹಿಕ, ಮಾನಸಿಕ ಆರೋಗ್ಯ ಮತ್ತು ನೆಮ್ಮದಿಯನ್ನು ದೊರಕಿಸುವ ದಿವ್ಯೌಷಧ ಕಾಯಕ.

ಬಸವಣ್ಣನ ಕಾಯಕ ಮೌಲ್ಯ ಇಂದಿನ ಜನತೆಯನ್ನು ಮುಂದೊಯ್ಯುಬಲ್ಲುದು. ಸಮಾಜಕ್ಕೆ ತಾರಕವಾಗಬಲ್ಲದು. ಕೆಲಸ, ಉದ್ಯೋಗವೆಂಬ ಸರಳವಾದ ನೆಲೆಯಲ್ಲಿ ಅದು ಪ್ರಾರಂಭಗೊಂಡು, ಸರ್ವೋದಯ ಭಾವನೆಯಲ್ಲಿ ಪರ್ಯವಸಾನಗೊಂಡು; ಆತ್ಮಕಲ್ಯಾಣದ ಸ್ತರಕ್ಕು ವಿಸ್ತರಣಗೊಳ್ಳುತ್ತದೆ.[೧೦೧]

೪.೪.೮. 'ಯೇಸುಕ್ರಿಸ್ತನ ಕಾಯಕ ಕಲೆ'

ಬಸವಣ್ಣನಂತೆ ಯೇಸುಕ್ರಿಸ್ತ ಕಾಯಕದ ಬಗ್ಗೆ ನಿರ್ದುಷ್ಟವಾಗಿ ಪ್ರಬೋದಿಸಿದ್ದು ಎಲ್ಲು ದಾಖಲಾಗಿಲ್ಲ. ಅದೇ ವೇಳೆ ಕಾಯಕವನ್ನು ದೈವಚಿತ್ತವನ್ನು ನೆರವೇರಿಸುವ ಮಾಧ್ಯಮ ಎಂದು ಪರಿಗಣಿಸಿದ್ದು ನಮ್ಮೆಲ್ಲರಿಗೂ ಕರ್ತವ್ಯವನ್ನು ನೀಡಿರುವುದು ನಮ್ಮನ್ನು ಸೃಷ್ಟಿಸಿದ ಸೃಷ್ಟಿಕರ್ತ. ಆತ ನಮಗೆ ನಿಗದಿಪಡಿಸಿದ ಕಾವ್ಯವನ್ನೇ ಈಲೋಕದಲ್ಲಿ ಮಾಡುತ್ತಿರುವುದು.

ಯೇಸುಕ್ರಿಸ್ತನ 'ಕಾಯಕ' ದೃಷ್ಟಿಯನ್ನು ಅರ್ಥಮಾಡಿಕೊಳ್ಳಲು ಯೆಹೂದಿ ಹಿನ್ನೆಲೆ ಅಗತ್ಯವಾದುದು. ಯೆಹೂದ್ಯರ ಮೊದಲ ಗ್ರಂಥ ಆದಿಕಾಂಡದ ಮೊದಲ ಎರಡು ಅಧ್ಯಾಯಗಳಲ್ಲಿ ದೇವರ ಸೃಷ್ಟಿಕಾರ್ಯ ದಾಖಲಾಗಿದೆ.[೧೦೨] ಇಡೀ ಸೃಷ್ಟಿಯೇ ಭಗವಂತನ ಕೈಕೆಲಸ ಎಂಬ ಅರ್ಥವನ್ನು ಧಾರ್ಮಿಕ ಸತ್ಯವನ್ನು ಈ ಎರಡು ಅಧ್ಯಾಯಗಳು ನಮಗೆ ತಿಳಿಸುತ್ತವೆ. ಇದರಿಂದಾಗಿ ಯೆಹೂದಿ ಮನಸ್ಸಿನಲ್ಲಿ ದುಡಿಮೆ, ಕಾಯಕವೆಂದರೆ ಪವಿತ್ರವಾದುದು ಎಂದೇ ಭಾವನೆ. ದೇವರೇ ಕಾಯಕದಲ್ಲಿ ನಿರತನಾದ ಮೇಲೆ ಮಾನವನ ಕಾಯಕವೂ ಸಹ ದೇವನ ಕಾಯಕದ ದೃಷ್ಟಿಯನ್ನೇ ಹೋಲುತ್ತದೆ.

ಎರಡನೆಯದಾಗಿ ದೇವರು ಆದಿ ತಂದೆ-ತಾಯಿಗಳಿಗೆ ಕೊಟ್ಟ ಮೊದಲ ಆಜ್ಞೆಯೇ ಹೊರ ಹೋಗಿ ಕಾಯಕದಲ್ಲಿ ನಿರತರಾಗಿ.[೧೦೩] ದೇವರ ಮಾತಿಗೆ ಅವಿಧೇಯರಾಗಿ ನಡೆದುಕೊಂಡ ಆದಾಮ ಮತ್ತು ಅವ್ವಳಿಗೆ ಶಿಕ್ಷೆ ರೂಪವಾಗಿ ಕಾಯಕ ದುಡಿಮೆ ನೀಡಿದರೂ ಈ ಭೂಮಿಯ ಸಂರಕ್ಷಣೆ ಮತ್ತು ಹೊಣೆಗಾರಿಕೆ ಕಾಯಕದಲ್ಲಿ ಅಡಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಯೆಹೂದಿಯೂ ತಾನು ಮಾಡುವ ಕಾಯಕದ ಬಗ್ಗೆ ಹೆಮ್ಮೆ ಹೊಂದಿದ್ದು ತನ್ನ ಹೆಸರಿನ ಮುಂದೆ ತನ್ನ 'ಕಾಯಕ'ದ ಹೆಸರನ್ನು ಸೇರಿಸಿಕೊಳ್ಳುತ್ತಿದ್ದ. ನಾವು ಹೇಗೆ ನಮ್ಮ ಅಧ್ಯಯನದ ಮುಂದೆ ನಮ್ಮ ಪದವಿ, ಬಿರುದುಗಳನ್ನು ಸೇರಿಸಿಕೊಳ್ಳುತ್ತೇವೆ ಹಾಗೆ ಅವರ 'ಕಾಯಕ'ದ ಹೆಸರನ್ನು ತಮ್ಮ ನಾಮಾಂಕಿತದ ಮುಂದೆ ಸೇರಿಸಿಕೊಳ್ಳುವುದು ಒಂದು ಸಂಶೋಧದ ಹೆಮ್ಮೆಯ ವಿಷಯವಾಗಿತ್ತು. "ಸಬ್ಬತ್ ದಿನ' ಅಂದರೆ 'ವಿಶ್ರಾಂತಿಯ ದಿನ' ವಾರದಲ್ಲಿನ ಆರು ದಿನಗಳು ಕಾಯಕಕ್ಕೆ ದೇವರು ನೀಡಿದ ದಿನ ವಿಶ್ರಾಂತಿ ದಿನ ಎಂದೇ ಯೆಹೂದಿಗಳು ಭಾವಿಸಿದ್ದರು. ದೇವರ ಚಿತ್ತದಂತೆ ಆರು ದಿನಗಳ ಕಾಯಕ ಮಾಡಿದ ಎಲ್ಲರೂ ಅಂದರೆ ಗುಲಾಮರನ್ನು ಒಳಗೊಂಡಂತೆ ಎಲ್ಲರೂ ವಿಶ್ರಾಂತಿ ದಿನಕ್ಕೆ ಅರ್ಹರು.

ಕಾರ್ಲ್ ಹರ್‌ಮನ್ ಶೈಲ್‌ಕೆಯು "Theology of the New Testment" ಪುಸ್ತಕದಲ್ಲಿ ಈ ರೀತಿ ಹೇಳುತ್ತಾನೆ. "ಬೈಬಲ್ ಹೊರತುಪಡಿಸಿ ಬೇರೆ ಯಾವುದೇ ಸಮಾಜದಲ್ಲಿ ಈ ರೀತಿಯ ಸಾಮಾಜಿಕ

ಕ್ರಮವನ್ನು ಕಾಣುವುದಿಲ್ಲ. ಗುಲಾಮ ದಿನೇದಿನೇ ತನ್ನ ಜೀವಮಾನವಿಡೀ ಕಾಯಕದಲ್ಲಿ ತೊಡಗಿದರೆ ಸ್ವಾತಂತ್ರ್ಯ ವ್ಯಕ್ತಿಯು ತನ್ನ ಇಚ್ಛೆಯಂತೆ ವಿರಮಿಸಬಹುದು. ಸಮಾಜ ನಿಗದಿ ಪಡಿಸಿದ ಅತ್ಯಂತ ಮಹತ್ವ ಎನಿಸಿದ ವಾರದ ದಿನ ವಿಶ್ರಾಂತಿ ದಿನವಾಗಿದೆ"[೧೦೪]

ಕಾಯಕವು ವಿಶ್ವ ವ್ಯಾಪಕವಾದುದು ಹಾಗೂ 'ಕಾಯಕ' ಮಾಡುವ ಆಜ್ಞೆ ದೇವರಿಂದಲೇ ಬಂದುದರಿಂದ ಗುಲಾಮಗಿರಿ ಅಥವಾ ಸ್ವಾತಂತ್ರ್ಯ ವ್ಯಕ್ತಿಯಾಗಲಿ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ದೇವರ ಈ ಆಜ್ಞೆಯನ್ನು ಎಲ್ಲರೂ ತಪ್ಪಿಸಿಕೊಳ್ಳದೇ ಪರಿಪಾಲಿಸಬೇಕು. ಪ್ರತಿಯೊಬ್ಬ ಸಾತ್ವಿಕನು ಭಕ್ತನು ಒಂದಲ್ಲಾ ಒಂದು ಕಾರ್ಯವನ್ನು ಮಾಡಲೇಬೇಕು. 'ಸೂರ್ಯೋದಯವಾಗಲು ಹೊರಡುತ್ತಾ ಮಾನವ ಕೆಲಸಕ್ಕೆ ದುಡಿಯುತ್ತಾನೆ. ಸಾಯಂಕಾಲದ ವರೆಗೆ ಸ್ವಾಮಿ ದೇವರ ಆಶೀರ್ವಾದ ನಮ್ಮ ಮೇಲಿರಲಿ. ನಾವು ಕೈಗೊಳ್ಳುವ ಕಾರ್ಯಗಳು ಸಫಲವಾಗಲಿ. ಅಹುದು. ನಮ್ಮ ಕಾರ್ಯಗಳೆಲ್ಲಾ ಸಫಲವಾಗಲಿ.' ಹಳೆ ಒಡಂಬಡಿಕೆಯ ಜ್ಞಾನೋಕ್ತಿಗಳು ಕಾಯಕ ಮಾಡದ ಸೋಮಾರಿಯನ್ನು ಗದರಿ ಕಾಯಕ ಯೋಗಿಯನ್ನು ಹೊಗಳುತ್ತವೆ." ಎಲೈ ಸೋಮಾರಿಯೇ, ಇರುವೆಯ ಬಳಿಗೆ ಹೋಗು ಅದರ ನಡವಳಿಕೆಯನ್ನು ನೋಡಿ ಜ್ಞಾನಿಯಾಗು. ಸೋಮಾರಿಯೆ ಎಷ್ಟು ಹೊತ್ತು ನಿದ್ರಿಸುವೆ? ನಿದ್ರೆಯಿಂದ ಯಾವಾಗ ಎಚ್ಚರಗೊಳ್ಳುವೆ? "ಇನ್ನು ಸ್ವಲ್ಪ ನಿದ್ರೆ, ತುಸು ತೂಕಡಿಕೆ" ಎನ್ನುವೆಯಾ? 'ಕೊಂಚವೇ ನಿದ್ರೆಗಾಗಿ ಕೈ ಮಡಿಚಿಕೊಳ್ಳುವೆ" ಎನ್ನುವೆಯಾ? ಬಡತನ ನಿನ್ನ ಮೇಲೆರಗುವುದು ದಾರಿಗಳ್ಳನಂತೆ ಅಭಾವ ನನ್ನ ಮೇಲೆ ಬೀಳುವುದು ಪಂಜುಗಳಂತೆ ದುಡಿದು ಹೊಲ ಗೇಯುವವನಿಗೆ ಹೊಟ್ಟೆ ತುಂಬ ಅನ್ನ ವ್ಯರ್ಥಕಾರ್ಯಗಳಲ್ಲಿ ಆಸಕ್ತನಾದವನಿಗೆ ಬೇಕಾದಷ್ಟು ಬಡತನ.[೧೦೭] ಹೊಟ್ಟೆಗಿಲ್ಲದ ಹಾಗೆ ಯೆಹೂದಿ ಗ್ರಂಥಗಳು ಕಾಯಕ ಯೋಗಿಯನ್ನು ಪ್ರೋತ್ಸಾಹಿಸಿ ಸೋಮಾರಿಯನ್ನು ಗದರಿಸಿ ಅವನಿಗೆ ಮುಂದೆ ಒದಗುವ ಸ್ಥಿತಿಯನ್ನು ಬಿಂಬಿಸುವವು.

ಯೇಸುಕ್ರಿಸ್ತನ ಕಾಯಕೃಷಿಯನ್ನು ಈ ಹಿನ್ನೆಲೆಯಲ್ಲಿ ಅಂದರೆ ಯೆಹೂದಿ ಹಿನ್ನೆಲೆಯಲ್ಲಿ ಕಂಡಾಗ ಮಾತ್ರ ಚೆನ್ನಾಗಿ ಅರ್ಥೈಸಿಕೊಳ್ಳಬಹುದು. ಕಾಯಕದ ಬಗ್ಗೆ ಯೇಸುಕ್ರಿಸ್ತನ ಅಭಿಪ್ರಾಯ ಯೆಹೂದಿ ಅಭಿಪ್ರಾಯಕ್ಕಿಂತ ಭಿನ್ನವೇನಿಲ್ಲ. ಸ್ವತಃ ಯೇಸುಕ್ರಿಸ್ತನೇ ಒಬ್ಬ ಕಾಯಕ ಯೋಗಿಯಾಗಿದ್ದ. ಯೇಸುಕ್ರಿಸ್ತ ವೃತ್ತಿಯಲ್ಲಿ ಬಡಗಿಯಾಗಿದ್ದ.[೧೦೯] ಕೆಲವು ವಿದ್ವಾಂಸರು ಯೇಸುಕ್ರಿಸ್ತ ಕೃಷಿಕ ಕಾಯಕವನ್ನು ಮಾಡುತ್ತಿದ್ದ ಎಂದು ಅಭಿಪ್ರಾಯ ಪಡುತ್ತಾರೆ. ಜಾನ್ ಪಿ ಮೆಯರ್ ಎಂಬಾತ ಯೇಸುಕ್ರಿಸ್ತನ ಕತೆಗಳನ್ನು, ದೃಷ್ಟಾಂತಗಳನ್ನು ಸಾಮತಿಗಳನ್ನು ಆಧರಿಸಿ ಯೇಸುಕ್ರಿಸ್ತ ಕೃಷಿಕ ಕಾಯಕ ಮಾಡುತ್ತಿದ್ದ ಎನ್ನುವುದಕ್ಕೆ ಅನೇಕ ಉದಾಹರಣೆಗಳನ್ನು ಸಾಕ್ಷಿಗಳನ್ನು ನೀಡಿ ಸಮರ್ಥಿಸಿಕೊಳ್ಳುತ್ತಾನೆ.[೧೧೦]

ಯೇಸುಕ್ರಿಸ್ತ ಬಡಗಿಯಾಗಿದ್ದನೋ ಕೃಷಿಕಾಯಕದಲ್ಲಿ ನಿರತನಾಗಿದ್ದನೋ. ಅದು ಮುಖ್ಯವಲ್ಲ. ಇಲ್ಲಿ ಮುಖ್ಯವಾದ ಅಂಶವೆಂದರೆ: ಯೇಸುಕ್ರಿಸ್ತ ತನ್ನ ಜೀವಿತದಲ್ಲಿ ಕಾಯಕಯೋಗಿಯಾಗಿದ್ದ. ತನ್ನ ಜೀವನ ನಿರ್ವಹಣೆಗಾಗಿ ಆತ ಯಾರನ್ನು ಅವಲಂಬಿಸಿರಲಿಲ್ಲ. ಸೋಮಾರಿಯಾಗಿ ಆತ ಸುಮ್ಮನೆ ಕಾಲ ಕಳೆಯಲಿಲ್ಲ. ಆತನ ಸಾಕು ತಂದೆ ಜೋಸೆಫರನ್ನು ಕ್ರೈಸ್ತ ಜಗತ್ತು ಕಾರ್ಮಿಕರ ಪಾಲಕನೆಂದು ಗೌರವಿಸುತ್ತದೆ. ಇವೆಲ್ಲವೂ

ಯೇಸುಕ್ರಿಸ್ತ ಕಾಯಕದ ಬಗ್ಗೆ ಅನಾಯಾಸವಾದ ಆಸಕ್ತಿ ಗೌರವ ಇಟ್ಟಿದನೆಂದು ತೋರಿಸುತ್ತದೆ. ಪ್ರಾರ್ಥನಾ ಜೀವಿ ತಾನು ಮಾಡುವ ಎಲ್ಲಾ ಕಾಯಕದಲ್ಲಿ ಭಗವಂತನನ್ನು ಕಾಣುತ್ತಾನೆ. ಪ್ರಾರ್ಥನೆ ಭಕ್ತನಿಗೆ ದೇವರ ಆವಶ್ಯಕತೆಯನ್ನು ಕಾಣಲು ಹಾಗೂ ಅದರಂತೆ ಕಾಯಕವನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ. ಪ್ರಾರ್ಥನ ರಹಿತ ಜೀವಿಗೆ ಅತ್ಯಂತ ಸಣ್ಣ ಕಾಯಕವೂ ದೊಡ್ಡ ಹೊರೆ ಅಥವಾ ದೇವರ ಶಾಪವಾಗಿ ಕಾಣಿಸುತ್ತದೆ.[೧೧೧]

ಯೇಸುಕ್ರಿಸ್ತನ ಶಿಷ್ಯರೆಲ್ಲರೂ ಒಂದಲ್ಲಾ ಒಂದು ಕಾಯಕದಲ್ಲಿ ನಿರತರಾಗಿದ್ದವರೆ ಆಗಿದ್ದರು.[೧೧೨] ಯೇಸುಕ್ರಿಸ್ತನನ್ನು ಅನುಸರಿಸಲು ನಿರ್ಧರಿಸಿದ ಮೇಲೂ ಅವರು ತಮ್ಮ ಕಾಯಕಗಳನ್ನು ನಿಲ್ಲಿಸುವಂತೆ ಯೇಸುಕ್ರಿಸ್ತ ಅವರಿಗೆ ತಿಳಿಸಲಿಲ್ಲ. ಬದಲಾಗಿ ಅವರು ಮಾಡುವ ಕಾಯಕದೊಂದಿಗೆ ಸೇರಿ ನಿರ್ದೇಶನ ನೀಡುತ್ತಾ ಸಹಕರಿಸುತ್ತಾನೆ. ಕಾಯಕದ ಗುರಿ ದೇವರ ಮಹಿಮೆಯನ್ನು ಪಡಿಸುವುದು, ದೇವರ ಚಿತ್ತವನ್ನು ಶಿರಸಾವಹಿಸಿ ಪಾಲಿಸುವುದು ಮತ್ತು ನಾಗರೀಕ ಆವಶ್ಯಕತೆಗಳನ್ನು ಪೂರೈಸುವುದೇ ಆಗಿದೆ. ಕಾಯಕ ಜೀವಿಯಾಗಿ ಕ್ರಿಸ್ತ ಕಾಯಕದ ಗೌರವವನ್ನು ಎತ್ತಿ ಹಿಡಿಯುತ್ತಾನೆ. ಕಾಯಕ ಯೋಗಿ ತನ್ನ ಕಾಯಕದಿಂದ ಈ ಪ್ರಪಂಚವನ್ನು ಇನ್ನು ಉತ್ತಮ ಪಡಿಸಬೇಕು ಹಾಗೂ ದೇವರನ್ನು ಮಹಿಮೆ ಪಡಿಸಬೇಕು. ಸಮಾಜವನ್ನು ಹೇಗೆ ಉತ್ತಮಪಡಿಸಬೇಕು ಹಾಗೂ ಮುನ್ನಡೆಸಬೇಕೆಂಬುದನ್ನು ಪ್ರಾರ್ಥನೆಯ ಮೂಲಕ ತೋರಿಸಿಕೊಡಲು ಸಹಾಯ ಮಾಡುತ್ತದೆ. ಈ ಕಾಯಕದಿಂದಲೇ ಕ್ರಿಸ್ತನ ಅನುಯಾಯಿಗಳು ತಾವು ಮಾಡುವ ಕಾಯಕವನ್ನು ನಿಷ್ಠೆಯಿಂದ ಮಾಡಬೇಕು, ಪಲಾಯನ ವಾದಿಗಳಾಗಬಾರದು, ತಮ್ಮ ಕಾಯಕದಿಂದ ತಾವು ವಾಸಿಸುವ ಸುತ್ತಲ ಜಗತ್ತನ್ನು ಉತ್ತಮಪಡಿಸಿ ದೇವರ ಮಹಿಮೆಯನ್ನು ಎತ್ತಿಹಿಡಿಯಬೇಕು.

ಯೇಸುಕ್ರಿಸ್ತ ಕೇವಲ ವ್ಯವಹಾರ ಹಣಕಾಸಿನಲ್ಲೇ ಮಗ್ನರಾಗದಂತೆ ಎಚ್ಚರಿಕೆ ನೀಡುತ್ತಾನೆ; "ಎಚ್ಚರಿಕೆ, ಯಾವ ವಿಧವಾದ ಲೋಭಕ್ಕೂ ಒಳಗಾಗದಂತೆ ಜಾಕರೂಕರಾಗಿರಿ. ಏಕೆಂದರೆ ಒಬ್ಬನಿಗೆ, ಎಷ್ಟು ಸಿರಿಸಂಪತ್ತಿರಲಿ, ಅವನ ನಿಜವಾದ ಜೀವನ ಅದನ್ನು ಅವಲಂಬಿಸಿಲ್ಲ."[೧೧೩] ಆದ್ದರಿಂದ ಮನುಷ್ಯ ಕೇವಲ ಹಾಳುಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಚಿಂತೆ ಮಾಡುವುದನ್ನು ಬಿಟ್ಟು ಆಧ್ಯಾತ್ಮಿಕ ಜೀವನಕ್ಕೆ ಅದಕ್ಕೆ ಸಂಬಂಧಪಟ್ಟು ವಿಷಯಗಳ ಬಗ್ಗೆ ಗಮನ ಹರಿಸಬೇಕು ಕಾಯಕ ಮನುಷ್ಯನನ್ನು ದೈವಮುಖಿಯಾಗಿ ಮಾಡಬೇಕೇ ಹೊರತು ದೈವವಿಮುಖಿಯನ್ನಾಗಿಸಬಾರದು. ಮನುಷ್ಯ ಸದಾ ಕ್ರಿಯಾಶೀಲನಾಗಿರಬೇಕು. ಕಾಯಕ ಧರ್ಮ, ಅವನ ಉಸಿರಾಗಿರಬೇಕು. ಅದೇ ವೇಳೆಗೆ ಆತನ ಮನಸ್ಸು, ಅಂತಃಚಕ್ಷುಗಳು ದೈವದಲ್ಲಿ ನಾಟಿರಬೇಕು. ಯೇಸುಕ್ರಿಸ್ತ ಬಡಗಿಯಾಗಿ ಮತ್ತು ಬೋಧಕನಾಗಿ ಕಾಯಕವೆಸಗಿದ. ತನ್ನ ದೈವ ತಂದೆಯೊಂದಿಗಿನ ನಿರಂತರ ಸಂಬಂಧದಿಂದಾಗಿ ತನ್ನ ಕಾಯಕದಲ್ಲಿ ಶಕ್ತಿ ಹಾಗೂ ಉದ್ದೇಶವನ್ನು ತುಂಬಲು ಸಾಧ್ಯವಾಯಿತು.[೧೧೪]

ಒಟ್ಟಿನಲ್ಲಿ ಯಹೂದಿಯಾಗಿದ್ದ ಯೇಸುಕ್ರಿಸ್ತ ತನ್ನ ಸಂಸ್ಕೃತಿಗೆ ಅನುಗುಣವಾಗಿ ಕಾಯಕ ಧರ್ಮವನ್ನು ಎತ್ತಿ ಹಿಡಿದು ಸ್ವತಃ ತಾನೇ ಕಾಯಕಯೋಗಿಯಾಗಿ ತನ್ನ ಅನುಯಾಯಿಗಳು ಸಹ ಕಾಯಕಜೀವಿಗಳಾಗಿ ಜೀವಿಸಿ ದೇವರ ಮಹಿಮೆಯನ್ನು ಪಡಿಸುತ್ತಾ ತಾವು ವಾಸಿಸುವ ಜಗತ್ತನ್ನು ಇನ್ನು ಉತ್ತಮ ಪಡಿಸಬೇಕೆನ್ನುವುದನ್ನು ಬೋಧಿಸಿ ಸಾಧಿಸಿ ತೋರಿಸಿದ.

೪.೪.೯ ಬಸವಣ್ಣನ ಸಾಮಾಜಿಕ ಸಮತೆ

ಬಸವಣ್ಣ ಹಾಗೂ ಆತನ ಪೂರ್ವಯುಗದಲ್ಲಿ ವರ್ಣಗಳ ಅಬ್ಬರದಿಂದ ವೃತ್ತಿಗಳ ನಿಮಿತ್ತದಿಂದ ಸಮಾಜತ್ವವು ಅಂದರೆ ಸಾಮಾಜಿಕ ಸಮತಾವಾದವು ಮಣ್ಣು ಮುಕ್ಕಿತು. ಸಮಾಜತ್ವವು ಸಣ್ಣದಾಯಿತು, ಭಿನ್ನ ಛಿನ್ನವಾಯಿತು. ಮಾನವ-ಮಾನವರಲ್ಲಿ ಸಮಾನತೆ ಏಕರೂಪತೆ ಮಾಯವಾಗುತ್ತ ಬಂತು. ಜೀವನ ನಿರ್ವಹಣೆಗಾಗಿ ಕೈಗೊಂಡ ಉದ್ಯಮಗಳಿಂದಲೇ ಜಾತಿ-ವಿಜಾತಿಗಳು ಹುಟ್ಟಿ ಹಬ್ಬಿದವು. ಮಾನವತ್ವವನ್ನು ಮೆಟ್ಟಿ ಮೆರೆದವು. ಮೇಲು-ಕೀಳು ಎಂಬ ಬೆಳೆ ಹುಲುಸಾಗಿ ಬೆಳೆಯಿತು. ಸಂಘಟನೆ, ಸಹಕಾರ, ಸಮತೆಗಳು ಹುಲುಸಾದ ಆ ಹುಲ್ಲು ಬೆಳೆಯ ಮುಂದೆ ಸಲ್ಲದಾದವು. ಬಹುಭಾಗದಲ್ಲಿ ಮಾನವತ್ವಕ್ಕೆ ಮಾನವೇ ಇಲ್ಲದಾಗಿತ್ತು. ಮೈಮುರಿದು ದುಡಿಯುವವನಿಗೆ ಮನ್ನಣೆ ಸಲ್ಲದಾಗಿತ್ತು. ಸಮಾಜತ್ವದ ಜೊತೆಗೆ ವ್ಯಕ್ತಿತ್ವವೂ ಹಾಳಾಗಿ ಹೋಗಿತ್ತು. ಉದ್ಯಮಗಳಲ್ಲಿ ಉತ್ತಮಾಧಮ ಭಾವವು ಬೇರೂರಿ ಸ್ಪೃಶ್ಯಾಸ್ಪೃಶ್ಯ ಕರ್ಮವು ಕೈಸ್ರಿ ಮಾನವ-ಮಾನವರಲ್ಲಿ ವೈಷಮ್ಯ ಭಾವವು ನೆಲೆಯೂರಿ ಸಾಮಾಜಿಕ ಸಮತಾವಾದಕ್ಕೆ ಕೊಡಲಿ ಪೆಟ್ಟು ಬಿದ್ದಿತು. ಮೇಲು ವರ್ಗ, ಮಧ್ಯಮವರ್ಗ ಕೆಳವರ್ಗಗಳು ಏರ್ಪಟ್ಟವು. ಕೀಳುವರ್ಗದ ಮೇಲೆ ಮೇಲು ವರ್ಗದ ದಬ್ಬಾಳಿಕೆಗಳು ಮಿತಿ ಮೀರಿದವು. ದುರ್ಬಲರ ಮೇಲೆ, ದರಿದ್ರರ ಮೇಲೆ ಕೀಳ್ಕೆಲಸಗಾರರ ಮೇಲೆ ದುರ್ಲಕ್ಷ್ಯ ಅತಿಯಾಯಿತು. ನೆಲ ಜಲಗಳ ಅನ್ನ ವಸ್ತ್ರಗಳ ಸೌಕರ್ಯವಿಲ್ಲದಾಯಿತು. ವಿದ್ಯೆ ಬುದ್ಧಿಗಳನ್ನು ಕಲಿಯಲು ಅವಕಾಶ ದೊರೆಯದಾಯಿತು. ಕುಲಚಲಕ್ಕೆ ಕೊನೆಯಿಲ್ಲದಾಯಿತು. ಸಮಾಜದ ಶಾಸ್ತ್ರವು ಸ್ವಾರ್ಥಿಗಳ ಕೈಸೇರಿ ಸಾಮಾಜಿಕ ಸಮತ್ವವೆಂಬ ಕಲ್ಪವೃಕ್ಷವನ್ನು ಭೇದಿಸಲು ಶಸ್ತ್ರವಾಯಿತು.[೧೧೫]

ಇಂತಹ ಸಂದರ್ಭದಲ್ಲಿ ಸಾಮಾಜಿಕ ದೂರದೃಷ್ಟಿಯುಳ್ಳ ಬಸವಣ್ಣ ಸಮಾಜದ ಎಲ್ಲ ಹಂತಗಳಲ್ಲೂ ಸಮಾನತೆಯನ್ನು ತರುವ ನಿಟ್ಟಿನಲ್ಲಿ ಬಹುವಾಗಿ ಶ್ರಮಿಸಿದ. ವರ್ಣ ವ್ಯವಸ್ಥೆಯನ್ನು ಉಗ್ರವಾಗಿ ವಿರೋಧಿಸಿ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ತತ್ವಕ್ಕೆ ಅಂಟಿಕೊಂಡರು. ಹಳೆಯ ಜಾತಿ ಪದ್ಧತಿಗೆ ಬಸವಣ್ಣ ತೀವ್ರ ವಿರೋಧ ವ್ಯಕ್ತಪಡಿಸಿದ. ಕಾಯಕತತ್ವ ಹಾಗೂ ವಿವಿಧ ವೃತ್ತಿಯಲ್ಲಿನ ಸಮಾನತೆಯಲ್ಲಿ ಬಸವಣ್ಣನಿಗೆ ನಂಬಿಕೆಯಿತ್ತು. ವಿವಿಧ ವೃತ್ತಿಗಳಲ್ಲಿನ ಸಮಾನತೆಗಳಿಂದಾಗಿ ಸಮಾಜದಲ್ಲಿ ಜಾತಿ ಪದ್ಧತಿಯ ನಿರ್ಮೂಲನೆ ಸಾಧ್ಯ ಎಂದು ಬಲವಾಗಿ ನಂಬಿದ್ದರು. ಸಮಾಜದ ಸಮಾನತೆಗೆ, ಅಭ್ಯುದಯಕ್ಕೆ ಕಂಟಕ ಪ್ರಾಯವಾಗಿದ್ದ ಜಾತಿಪದ್ಧತಿಯನ್ನು ತೆಗೆದು ಹಾಕದ ಹೊರತು ದೇವರ ಮುಂದೆ ನಾವೆಲ್ಲರು ಒಂದೇ ಎಂಬ ಸಾರ್ವತ್ರಿಕ ಸಹೋದರತ್ವವನ್ನು ಸ್ಥಾಪಿಸಲು ಸಾಧ್ಯವಿಲ್ಲ ಎಂಬ ಅಂಶವನ್ನು ಚೆನ್ನಾಗಿ ಮನಗಂಡಿದ್ದ. ಜಾತಿಪದ್ಧತಿಯನ್ನು, ವರ್ಣ ವ್ಯವಸ್ಥೆಯನ್ನು ತೆಗೆದುಹಾಕುವ ನಿಟ್ಟಿನಲ್ಲಿ ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹಿಸಿ ಪ್ರೇರೇಪಿಸಿದ. ಇದಕ್ಕೆ ಉದಾಹರಣೆಯಾಗಿ ಮದುವಯ್ಯನ ಮಗಳು ಹರಳಯ್ಯನ ಮಗನೊಂದಿಗೆ ಆದ

ಮದುವೆಗೆ ಬಸವಣ್ಣನೆ ಪೌರೋಹಿತ್ಯ ನಡೆಸಿದ್ದ. ಅಂತರ್ ಜಾತೀಯರೊಂದಿಗೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ಭೋಜನ ಕೂಟಗಳಲ್ಲಿ ಇರುವುದಕ್ಕೆ ಹಿಂಜರಿಯದೆ ಸ್ವಂತ ಇಚ್ಛೆಯಿಂದ ಪ್ರೀತಿಯಿಂದ ಭಾಗವಹಿಸಿದ.

ಬಸವಣ್ಣ ತನ್ನ ಸಾಮಾಜಿಕ ಸಮತೆಯ ನಿಲುವನ್ನು ಬರಿ ವಿಚಾರದಲ್ಲಿ ಪ್ರತಿಪಾದಿಸದೆ ಆಚಾರದಲ್ಲಿ ರೂಢಿಗೆ ತಂದ. ತನ್ನ ಬದುಕಿನಾದ್ಯಂತ ಸಾಮಾಜಿಕ ಸಮತೆಯ ನಿಲುವಿನಿಂದ ಆಚೆ ಈಚೆ ಸರಿಯಲೆ ಇಲ್ಲ. ಇದಕ್ಕೆ ಉದಾಹರಣೆಯಾಗಿ ಬಸವಣ್ಣನ ಮಹಾಮನೆಯಾದ ಶಯನ ಗೃಹಕ್ಕೆ ಕಳ್ಳನೊಬ್ಬ ಬಂದ ಬಸವಣ್ಣನ ಪತ್ನಿ ನೀಲಾಂಬಿಕೆಯ ಕಿವಿಯಲ್ಲಿ ಥಳಥಳಿಸುತ್ತಿದ್ದ ಓಲೆಗಳಿಗೆ ಕೈ ಹಾಕಿದ. ಪರಸ್ಪರ್ಶದಿಂದ ಎಚ್ಚರವಾಗಿ ಆಕೆ ಕಳ್ಳ ಕಳ್ಳ ಎಂದು ಅರಚಿಕೊಳ್ಳಲು, ಓಡಿಹೋಗುತ್ತಿದ್ದಾಗ ಕಳ್ಳನನ್ನು ಭಟರು ಹಿಡಿದು ಬಸವಣ್ಣನ ಮುಂದೆ ತಂದು ನಿಲ್ಲಿಸಿದರು. ಕಳ್ಳನನ್ನು ಕಂಡು ಬಸವಣ್ಣ 'ನೀಲಾ ಸದ್ಭಕ್ತನಿವನು, ಭಕ್ತ ಲಾಂಛನನಾಗಿ ಬಂದಿರುವನು. ಭಕ್ತರ ಮನೆಗೆ ಭಕ್ತರು ಬರುವರಲ್ಲದೆ ಕಳ್ಳರು ಹೇಗೆ ಬಂದಾರು? ಎಂದು ಪ್ರಶ್ನಿಸುತ್ತಾ ಕಳ್ಳನ ಮನೆಗೆ ಬುಲುಗಳ್ಳ ಬಂದರೆ ಕೂಡಲ ಸಂಗಮ ದೇವನಲ್ಲದೆ ಮತ್ತಾರು ಅಲ್ಲ. ಈ ಘಟನೆಯನ್ನು ಬಸವಣ್ಣನ 'ಸಾಮಾಜಿಕ ಸಮತೆ' ದೃಷ್ಟಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಬಸವಣ್ಣ ತನ್ನನ್ನು ತಾನು ಒಬ್ಬ ಕಳ್ಳನೆಂದು ಕರೆದುಕೊಳ್ಳುತ್ತಾನೆ. ಏಕೆಂದರೆ ಸಂಗ್ರಹ ಬುಧಾಯಿಂದಾಗಿ ಮನುಷ್ಯ ಇನ್ನೊಬ್ಬರ ಆವಶ್ಯಕತೆಗಳನ್ನು ಲೆಕ್ಕಿಸದೆ ಇನ್ನೊಬ್ಬರ ಪಾಲಿನ ಅನ್ನವನ್ನು, ವಸ್ತ್ರ, ವಡವೆಯನ್ನು, ಆಸ್ತಿ-ಪಾಸ್ತಿಯನ್ನು ತಾನು ಶೇಖರಿಸಿಟ್ಟುಕೊಳ್ಳುತ್ತಾನೆ. ಭಗವಂತ ಈ ಜಗತ್ತನ್ನು ಮಾನವನಿಗೆ ಕೊಟ್ಟಿದ್ದು ಸರ್ವರೂ ಸಮವಾಗಿ ಅನುಭವಿಸಲೆಂದು. "ತನಗೆ ಅವಶ್ಯವಿರದ ಒಂದು ತುತ್ತು ಅನ್ನವುಂಡರೆ, ಒಂದು ವಸ್ತ್ರ ಹೆಚ್ಚು ಇಕ್ಕಿಕೊಂಡರೆ, ಧನಾಭರಣ ಸಂಗ್ರಹಿಸಿದರೆ ಅದೂ ಮಹಾಪಾಪ. ಅದಿಲ್ಲದೇ ಕೊರಗುವವರನ್ನು ವಂಚಿಸಿ, ತಾನು ಭೋಗಿಸುವುದು ಕಳ್ಳತನವಲ್ಲವೇನು? ಹೀಗೆ ಕಳವು ಮಾಡಲಿಕ್ಕೆ ಬಂದವನು ಕಳ್ಳನಲ್ಲ; ಮಾಡಿಸಿಕೊಳ್ಳುವ ಸ್ವಾರ್ಥ ಸಂಗ್ರಹಿ ಕಳ್ಳ!

ಹೆಚ್ಚು ಬಟ್ಟಿಕ್ಕಿ ಕೊಂಬುವವ ಘನ ಕಳ್ಳ!! ಹೆರರಿಗೀಯದೆ
ತಾನೋರ್ವ ಭೋಗಿಸುವವ ಮಹಾಕಳ್ಳ!!!"[೧೧೬]

ಬಸವಣ್ಣನೆದುರು ಆತನ ವ್ಯಕ್ತಿತ್ವದ ಮುಂದೆ ಕಳ್ಳ ಕರಗಿ ಶರಣನಾದ. ಇಲ್ಲಿ ಬಸವಣ್ಣನಿಗೆ ಒಂದು ಅಂಶ ಸ್ಪಷ್ಟವಾಯಿತು. ಬಡವನ ಅತೃಪ್ತಿಗೆ ಕಳ್ಳತನಕ್ಕೆ ಶ್ರೀಮಂತನ ಮಿತಿಮೀರಿದ ಸುಖವೇ ಕಾರಣ. ಎಲ್ಲರಿಗೂ ಶಿವ ಪಂಚಾಯತಗಳು ಜೀವನಾವಶ್ಯಕತೆಗಳು ಸಮವಾಗಿ ತೃಪ್ತಿಯಾಗುವಷ್ಟು ಸಿಕ್ಕರೆ ಅವರು ಕದಿಯಲಿಕ್ಕಾಗಲೀ, ವೇಶ್ಯಾವೃತ್ತಿಗಾಗಲೀ ಯಾಕೆ ಎಳಸುವರು? ಸರ್ವರಿಗೂ ಶಿವ ಪಂಚಾಯತಗಳು ಸಮನಾಗಿ ಸಿಕ್ಕುವುದೇ ಕಲ್ಯಾಣ ರಾಜ್ಯದ ಗುರಿ.

ಬಸವಣ್ಣ ತಾನಷ್ಟೇ ಸುಖ ಪಡಬೇಕು; ಬುವಿಯೊಳಗಣ ಭೋಗವನ್ನು ಭೋಗಿಸಬೇಕು ಎಂಬ ಭಾವನೆಗೆ ವಿರುದ್ಧವಾಗಿದ್ದ. ಇದಕ್ಕೆ ಪೂರಕವಾಗಿ ಕಳ್ಳತನದ ಘಟನೆ ತೋರಿಸುತ್ತದೆ. ಹಸುಗಳನ್ನು ಕಳ್ಳತನ

ಮಾಡಿದ ಕಳ್ಳರಿಗೆ ಮನೆಯಲ್ಲಿದ್ದ ಕರುಗಳನ್ನು ಕೊಟ್ಟು ಬನ್ನಿ ಏಕೆಂದರೆ ಅಲ್ಲಿ ಉಂಬರೆ ಸಂಗರಲ್ಲಿ ಉಂಬರೆ ಸಂಗ! ವಚನದಲ್ಲಿ ನಾವು ಎರಡು ಅಂಶಗಳನ್ನು ಕಾಣಬಹುದು. ಒಂದು ಕರುಗಳ ಬಗೆಗಿದ್ದ ದಯಾಭಾವ ಮರುಕ ಮಾತ್ರವಲ್ಲ; ಎರಡನೇಯದು ಸರ್ವಮಾನವರು ಸುಖಾಭಿಲಾಷಿಗಳು. ಮಹಾತ್ಮಾ ಗಾಂಧೀಜಿ ತತ್ವ ಇಲ್ಲಿ ಆಚರಣೆಗೆ ಬಂದಿರುವುದನ್ನು ಕಾಣುತ್ತೇವೆ. National health must not be distributed according to the grees of the people but according to the needs of the people.

ಬಸವಣ್ಣನ ಆಧ್ಯಾತ್ಮಿಕ ಸಾಮ್ಯವಾದದ ಕಲ್ಯಾಣ ರಾಜ್ಯದಲ್ಲಿ ವ್ಯಕ್ತಿಗತ ಅಭಿವೃದ್ಧಿ, ಸಾರ್ವತ್ರಿಕ ಸಮತೆ, ಸಮಾಜ ಕಲ್ಯಾಣ, ಆತ್ಮನ ಶ್ರೇಯಸ್ಸು, ಐಹಿಕ-ಆಮುಷ್ಮಿಕ ಬಾಳಿಗೆ ಸಾಧನವಾಗುವ ಸುಲಭ ಅಧ್ಯಾತ್ಮ ಸಾಧನೆ, ಆಚಾರ-ವಿಚಾರ ಸ್ವಾತಂತ್ರ್ಯ, ಆರ್ಥಿಕ ಸಮತೆ ಇವೆಲ್ಲವನ್ನು ಒಳಗೊಂಡಿದೆ. ಬಸವಣ್ಣನಿಗೆ ವಿತ್ತವಾದ (Caputalism), ವರ್ಗವಾದ (Communism) ವರ್ಣವಾದ (Communalism) ಇವುಗಳ ಹಾನಿ ಎಷ್ಟೆಂಬುವುದರ ಅರಿವಿತ್ತು. ಈ ಎಲ್ಲಾ ವಾದಗಳಿಗಿಂತ ಭಿನ್ನವಾದ Spiritual Socialism ಎಂಬ ಅಧ್ಯಾತ್ಮ ಸಾಮ್ಯವಾದವನ್ನು ಎತ್ತಿ ಹಿಡಿದು ಸಮಾಜವನ್ನು ಧಾರ್ಮಿಕ, ಆರ್ಥಿಕ ರೀತಿಯಿಂದ ಪುಷ್ಟಿ ಮಾಡಲು ಯತ್ನಿಸಿದರು.

ಡಾ. ಬಸವರಾಜ ಕಲ್ಗುಡಿಯವರು ತಮ್ಮ 'ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ' ಎಂಬ ಪುಸ್ತಕದಲ್ಲಿ ಬಸವಣ್ಣನವರ ಸಾಮಾಜಿಕ ಸಮತೆಯ ಬಗ್ಗೆ ಒಂದು ಹೊಸ ಹೊಳವುನ್ನು ನೀಡಿದ್ದಾರೆ. "ಬಸವಣ್ಣ ೧೨ನೇ ಶತಮಾನದ ಅತ್ಯಂತ ಪ್ರಮುಖ ವ್ಯಕ್ತಿ. ಈ ವಚನಕಾರರನ್ನು ಇನ್ನಾವ ಕಾರಣಕ್ಕಲ್ಲದಿದ್ದರೂ, ಒಂದೇ ಒಂದು ಮುಖ್ಯ ಕಾರಣಕ್ಕಾಗಿ ಮಹತ್ವದ ವ್ಯಕ್ತಿಯೆಂದು ಗುರುತಿಸಬಹುದು. ಅದು ತನ್ನ ಬಾಳಿನುದ್ದಕ್ಕೂ ಬಸವಣ್ಣ ಸಂಘರ್ಷ ಪೂರ್ವವಾದ ಬಾಳನ್ನು ಬದುಕಿದರೆನ್ನುವ ಕಾರಣವೇ ಹೌದು. ಶ್ರೇಷ್ಠನಾದ ಧಾರ್ಮಿಕನೆಂದು ಕರೆಯುವುದಾದರೆ- ಬಸವಣ್ಣನನ್ನು ಮೇಲಿನ ಕಾರಣಕ್ಕಾಗಿಯೇ ಎಂದು ಹೇಳಬೇಕಾಗುತ್ತದೆ. ತನ್ನ ಬದುಕನ್ನು ಉನ್ನತ ಧಾರ್ಮಿಕ ಸ್ತರಗಳಿಗೆ ಒಯ್ಯಬೇಕೆನ್ನುವ ಹಂಬಲದ ಈ ಮನುಷ್ಯ ಆ ಕಾರಣಕ್ಕಾಗಿಯೇ ತನ್ನ ಜೀವನದಲ್ಲಿ ಹಲವಾರು ಸಂಘರ್ಷಗಳಿಗೆ ಕಾರಣನಾದ. ಪ್ರಭುತ್ವವನ್ನು ಹೇರುವ ಜಾತಿಯಿಂದ ತನ್ನನ್ನು ಅಪವರ್ಗೀಕರಣ ಮಾಡಿಕೊಂಡ ಬಸವಣ್ಣ ಮನುಷ್ಯರ ನಡುವೆ ಸಾಮರಸ್ಯವನ್ನು ತರಲು ಪ್ರಯತ್ನಿಸಿದ."[೧೧೭]

ಬಸವಣ್ಣ ತನ್ನ ಸಾಮಾಜಿಕ ಸಮತೆಯತ್ತ ನೋಟ ಹರಿಸುವ ಮುನ್ನ ವ್ಯಕ್ತಿಯ ಶುದ್ಧತೆಯ ನೆಲೆಗಳ ಬಗ್ಗೆ ಗಮನ ಹರಿಸುತ್ತಾನೆ. ಬಸವಣ್ಣ ವ್ಯಕ್ತಿಯ ಪರಿಶುದ್ಧತೆಗೆ ಕೊಟ್ಟ ಪ್ರಾಮುಖ್ಯತೆ ಆಳದಲ್ಲಿ ಅವನ ವಚನಗಳೆಲ್ಲವುಗಳ ಒಳಮಿಡಿತವೂ ಹೌದು. ಆದರೆ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಬಸವಣ್ಣನು ಎಲ್ಲ ಮನುಷ್ಯನ ಅಂತರಂಗ, ಬಹಿರಂಗ ಶುದ್ಧಿ ಸ್ವವಿಮರ್ಶೆ ಪ್ರಾಮಾಣಿಕತೆಗಳ ಬಗ್ಗೆ ಮಾತನಾಡುತ್ತಾನೊ ಅಲ್ಲೆಲ್ಲ ಅವನ ವಚನಗಳು ಅವುಗಳನ್ನು ಮನುಷ್ಯನಲ್ಲಿ ಇರಬೇಕಾದ ಮೂಲಭೂತ ಗುಣವೆಂಬಂತೆ ಪ್ರಸ್ತಾಪಿಸುತ್ತದೆ.

ಮನುಷ್ಯ ಸಾಮಾಜಿಕ ಸಮತೆಯನ್ನು ಕಾಯ್ದುಕೊಳ್ಳುವ ಮುಂಚೆ ವೈಯಕ್ತಿಕ ನೆಲೆಯಲ್ಲಿ ಅಂದರೆ ವ್ಯಕ್ತಿಯ ಅಂತರಂಗ ಮತ್ತು ಬಹಿರಂಗ ಸಮನ್ವಯತೆಯನ್ನು ಕುರಿತು ಹೆಚ್ಚಿನ ಕಾಳಜಿ ತೋರಿಸಬೇಕೆಂಬುದು ಬಸವಣ್ಣನ ಕಳಕಳಿಯಾಗಿದೆ.

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯ ನಿದ್ದಾನೋ ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲಾ-
ಕೂಡಲ ಸಂಗಮ ದೇವಾ[೧೧೮]

ಇಲ್ಲಿ ಬಸವಣ್ಣ ವ್ಯಕ್ತಿಯ ಅಂತರಂಗದ ಶೋಧನೆಯನ್ನು ಗಮನದಲ್ಲಿಟ್ಟಿದ್ದಾನೆ. ದೇಹ ಮತ್ತು ವ್ಯಕ್ತಿತ್ವವನ್ನು ರೂಪಿಸಿಕೊಳ್ಳದ ಮನುಷ್ಯನನ್ನು ಹಾಳುಬಿದ್ದ ಮನೆಗೆ, ಹೋಲಿಸಲಾಗಿದೆ. ದೇಹ ಮತ್ತು ಮನಸ್ಸನ್ನು ಆವರಿಸಿರುವ 'ಹುಸಿ' ಹಾಗೂ 'ವಿಷಯಗಳು' ವ್ಯಕ್ತಿತ್ವದ ಹುಳುಬಿದ್ದ ಸ್ಥಿತಿಯನ್ನು ವಿವರಿಸುತ್ತದೆ. ಮನುಷ್ಯ ತಾನು ಅಂತರಂಗ ಮತ್ತು ಬಹಿರಂಗವಾಗಿ ಶುದ್ಧನಾಗಿದ್ದರೆ ಮಾತ್ರ ಆತ ಸಮಾಜಮುಖಿಯಾಗಿ ಸಾಮಾಜಿಕ ಸಮಾನತೆಯತ್ತ ಮುಖಮಾಡಬಹುದೆನ್ನುವ ಬಸವಣ್ಣನವರ ಹೊಸ ಹೊಳವುಗಳನ್ನು ಕಲ್ಲುಡಿಯವರು ಇಲ್ಲಿ ಪರಿಚಯಿಸುತ್ತಾರೆ.

ಮೂಲಭೂತವಾಗಿ ಸಾಮಾಜಿಕ ಸಮಾನತೆ ಜಾತಿಪದ್ಧತಿ ನಿರ್ಮೂಲನ ಮತ್ತು ಆರ್ಥಿಕವಾಗಿ ಸಮಾನ ಹಂಚಿಕೆಯಿಂದ, ಕಾಯಕ ತತ್ವದಿಂದ ಹೊಂದುವುದು ಸಾಧ್ಯ ಎಂಬುದು ಬಸವಣ್ಣನ ಆಶಯವಾಗಿತ್ತು. ಆ ನಿಟ್ಟಿನತ್ತ ಬಸವಾದಿ ಪ್ರಥಮರು ಹೆಜ್ಜೆ ಕೂಡ ಹಾಕಿದರು.

ಬಸವಣ್ಣ ಹಾಗೂ ವಚನಕಾರರೆಲ್ಲರು ಈ ಬದುಕನ್ನು ಅಗಾಧವಾಗಿ ಪ್ರೀತಿಸಿದರು. ಚೆನ್ನಾಗಿ ಬದುಕಿ ಬಾಳಿನ ಎಲ್ಲ ಸಂಪನ್ಮೂಲಗಳನ್ನು ಗುರುತಿಸಿ, ಬದುಕಿನ ಸಂಪನ್ಮೂಲಕ ಪೂರ್ಣ ಪ್ರಯೋಜನ ಪಡೆಯುವ ಮನಸ್ಸುಳ್ಳ ಅವರು ಇಹಪರಗಳ ಸಮನ್ವಯವನ್ನು ಸಾಧಿಸಿದ ರೀತಿ ಅನನ್ಯವಾದುದು. ಬಸವಾದಿ ಪ್ರಥಮರು ಪ್ರಗತಿಪರರು, ಸುಧಾರಕರು ಅವರ ೮೦೦ ವರ್ಷಗಳ ಹಿಂದಿನ ಅವರ ಆಲೋಚನೆಗಳು ಇಂದಿಗೂ ಪ್ರಗತಿಪರವಾಗಿವೆ. ಬಸವಣ್ಣನು ಪ್ರತಿಪಾದಿಸಿದ ಸಾಮಾಜಿಕ ಆರ್ಥಿಕ ಸಮಾನತೆ ಇಂದಿಗೂ ಪ್ರಸ್ತುತವಾಗಿದೆ.

"ಶರಣರ ಚಿಂತನೆಯ ಪ್ರಕಾರ ಆರ್ಥಿಕ ಪ್ರಗತಿ ಕೇವಲ ಹಣದ ಶ್ರೀಮಂತಿಕೆಯಲ್ಲ. ಅಷ್ಟೇ ಅಲ್ಲ ಅಂಥ ಸಿರಿವಂತಿಕೆಯನ್ನು ಅವರು ತಿರಸ್ಕರಿಸುತ್ತಾರೆ ಕೂಡ. ಸ್ವಾಭಿಮಾನ, ಸ್ವಾವಲಂಬನೆ, ಸ್ವಯಂಪರಿಪೂರ್ಣತೆ, ಸಮೃದ್ಧತೆಗಳಿಂದ ಕೂಡಿ ಸಮಾಜದ ಸರ್ವಾಂಗೀಣ ಪ್ರಗತಿಯಾದರೆ ಮಾತ್ರ ಅದರ ದೃಷ್ಟಿಯಲ್ಲಿ ಆರ್ಥಿಕ ಪ್ರಗತಿಯಾಗುತ್ತದೆ. ಈ ಅಂಶವನ್ನು ಅವರು ರಚಿಸಿದ ವಚನಗಳ ಅಣು

ಅಣುವಿನಲ್ಲೂ ತೂಗಿ ನೋಡಬಹುದು. ಕಾಯಕ, ದಾಸೋಹ, ಅಸಂಗ್ರಹ, ದುಂದುವೆಚ್ಚ, ನಿಗ್ರಹ ಅವರ ಆರ್ಥಿಕ ಚಿಂತನೆಯ ಹಲವು ತತ್ವಗಳು; ಪ್ರಾಮಾಣಿಕ ದುಡಿಮೆ, ಸತ್ಯಶುದ್ಧ ಕಾಯಕ ಅಂಥ ಕಾಯಕದಿಂದ ಬಂದ ಹಣವನ್ನು ಕೂಡಿಡದೆ, ದುಂದುವೆಚ್ಚ ಮಾಡದೆ, ಹಸಿದ ಹೊಟ್ಟೆ ತಣಿಸುವ ದಾಸೋಹಕ್ಕೆ ವಿನಿಯೋಗಿಸುವ ಸದಾಚಾರಗಳ ಅವರ ಪರಿಕಲ್ಪನೆ ಸರ್ವಕಾಲಿಕ ದರ್ಶನವಾಗಿದೆ. ಅವರು ಪ್ರತಿಪಾದಿಸಿದ ಪಂಚಾತಾರಗಳು ಒಂದು ರೀತಿಯಲ್ಲಿ ಸಾಮಾಜಿಕ ಸಮಾದಜವಾದದ ಕಲ್ಪನೆ ಅನನ್ಯವಾದುದು."[೧೧೯]

ಬಸವಣ್ಣನವರ ವಚನಗಳಲ್ಲಿ ಅವರ ಸಾಮಾಜಿಕ ಸಮತೆಯ ತುಡಿತ ಕೆಳಗಿನ ಪ್ರತಿ ವಚನಗಳಲ್ಲೂ ಪ್ರಜ್ವಲಿಸುತ್ತಿದೆ.

ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರುಶನ ಮುಕ್ತಿಗೆ
ನಿಲವೊಂದೆ ಕೂಡಲಸಂಗಮ ದೇವಾ ನಿಮ್ಮನರಿದವಂಗೆ.[೧೨೦]

ಇದು ನಿಜವಾದ ಸಾಮಾಜಿಕ ಶಾಸ್ತ್ರ; ಸಾಮಾಜಿಕ ಸಮತಾವಾದದ ಸತ್ಯ ಸಂದೇಶವಾಗಿದೆ.

ದೇವ ಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡರೆ ನಿಮ್ಮಾಣೆ
ನಿಮ್ಮ ಪುರಾತರಾಣೆ; ತಲೆದಂಡ ತಲೆದಂಡ,
ಕೂಡಲಸಂಗಮ ದೇವ ಭಕ್ತರಲ್ಲಿ ಕುಲವನರಿಸಿದರೆ ನಿಮ್ಮ ರಾಣೆ ವಾಸದಾಣೆ.[೧೨೧]

ಕೊಲುವನೇ ಮಾದಿಗ, ಹೊಲಸು ತಿಂಬುವನೆ ಹೊಲೆಯ;
ಕುಲವನೋ ಆವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ
ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು೧೨೨
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ.........೧೨೩

ಈ ಎಲ್ಲಾ ವಚನಗಳು ಸರ್ವರೂ ಸಮಾನರು ಎಂಬ ಸಮತವಾದವನ್ನೇ ಎತ್ತಿ ಹಿಡಿಯುತ್ತವೆ. ಮಾನವ ಸಮತಾವಾದವನ್ನು ಸಮರ್ಥಿಸುವ ಈ ವಚನಗಳು ಮಹತ್ವಪೂರ್ಣವಾದವುಗಳು. ಸರ್ವರೂ ಸಮಾನರೆಂದು ಸಾರುವ ಸಂಸ್ಕೃತಿಗಿಂತ ಶ್ರೇಷ್ಠ ಸಂಸ್ಕೃತಿ ಬೇರೊಂದಿಲ್ಲ. ಸಮದರ್ಶಿತ್ವವೇ ಸರ್ವೋನ್ನತ ದರ್ಶನ; ಸರ್ವೋನ್ನತ ಸಾಧನ. ಸದುದ್ಯೋಗದಲ್ಲಿ ಸದಾ ನಿರತನಾಗಿ ಆಹಾರ ವಿಹಾರಗಳನ್ನು ನಿಯಂತ್ರಣಗೊಳಿಸಿ ಸಂಯಮ ಜೀವನವನ್ನು ಸಾಗಿಸಿ ಸಾಮಾಜಿಕ ಸುಖ-ದುಃಖಗಳಲ್ಲಿ ಸಮಭಾಗಿಯಾಗಿ ವರ್ತಿಸಲಿ ಎಂದು ಹೇಳುವುದೇ ನಿಜವಾದ ಕಾಯಕತತ್ವದ ನಿಜ ಧ್ಯೇಯ. ಪರಸ್ಪರ ರಾಗ-ದ್ವೇಷಗಳಿಲ್ಲದೆ ಮಾಯ-ಮೋಸಗಳಿಲ್ಲದೆ ಬಾಳ ಹೇಳುವುದೇ ಕಾಯಕ ಹೃದಯ.[೧೨೪] ಬಸವಣ್ಣನ ಸಾಮಾಜಿಕ ಸಮತೆಯ ದೃಷ್ಟಿಕೋನ ಇಂದಿಗೂ ಪ್ರಸ್ತುತವಾಗಿದೆ.

೪.೪.೧೦ ಯೇಸುಕ್ರಿಸ್ತನ ಸಮತಾವಾದ

ಯೇಸುಕ್ರಿಸ್ತ ಮೂಲಭೂತವಾಗಿ ಶೋಷಿತರ ಧ್ವನಿಯಾಗಿ ಸಾಮಾಜಿಕ ಅಸಮಾನತೆಯ ವಿರುದ್ಧ ಸಮರ ಸಾರಿ ದೇವರು ನಮ್ಮ ತಂದೆ; ನಾವೆಲ್ಲಾ ದೇವರ ಮಕ್ಕಳು. 'ತಂದೆಯ ಮುಂದೆ ನಾವೆಲ್ಲಾ ಒಂದೇ' ಎಂಬ ತನ್ನ ನಿಲುವನ್ನು ಶುಭ ಸಂದೇಶಗಳಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದು. ಶುಭ ಸಂದೇಶದಲ್ಲಿ ಉಲ್ಲೇಖವಾಗಿರುವ 'ಬಡವರು' ಎಂದಾಕ್ಷಣ ಅವರು ಆರ್ಥಿಕವಾಗಿ ಮಾತ್ರ ಬಡವರಾಗಿದ್ದರು ಎಂದು ತಿಳಿಯಬೇಕಿಲ್ಲ. ಈ 'ಬಡವರ' ಪಟ್ಟಿಯಲ್ಲಿ ಎಲ್ಲಾ ಶೋಷಿತರು, ವಿಧವೆಯರು, ಅನಾಥರು, ಸಮಾಜದಲ್ಲಿ ಅಸ್ಪೃಶ್ಯರು, ಭೀಕರ ಕಾಯಿಲೆಗಳಿಗೆ ತುತ್ತಾಗಿದ್ದವರು. ನೊಂದವರು, ಕುರುಡರು, ಕುಂಟರು, ಅಂಗವಿಕಲರು, ಕುಷ್ಠರೋಗಿಗಳು ಇತ್ಯಾದಿ ವರ್ಗದವರನ್ನು ಶುಭ ಸಂದೇಶಗಳು 'ಬಡವರು' ಎಂದು ಪಟ್ಟಿ ಮಾಡುತ್ತದೆ.

ಈ 'ಬಡವರ' 'ಶೋಷಿತರ' ಪ್ರಪಂಚದ ಮೇಲೆ ಎರಡು ವರ್ಗದವರು ಆಡಳಿತ ನಡೆಸುತ್ತಿದ್ದರು. ಒಂದು ಮಧ್ಯಮ ವರ್ಗದವರು ಮತ್ತೊಂದು ಶ್ರೀಮಂತ ವರ್ಗದವರು-ರಾಜಮನೆತನ ಹಾಗೂ ಯಾಜಕ ವರ್ಗದವರದ್ದು. ಆಶ್ಚರ್ಯವೆಂದರೆ, ಈ ಮಧ್ಯಮ ವರ್ಗದವರು ಅಲ್ಪಸಂಖ್ಯಾತರಾಗಿದ್ದರೆ, ಶ್ರೀಮಂತ ವರ್ಗ ಬಹು ವಿರಳರಾಗಿದ್ದರು.

ಪರಿಸಾಯರು, ವಿವಿಧ ಕಸುಬುದಾರರು, ವಾಣಿಜ್ಯ ವ್ಯಾಪಾರಿಗಳು, ಬಡಗಿಯರು, ಮೀನುಗಾರರು ಮಧ್ಯಮ ವರ್ಗದವರೆನಿಸಿಕೊಂಡು ಗೌರವಾನ್ವಿತ ಜೀವನ ನಡೆಸುತ್ತಿದ್ದರೆ, ಹೆರೋದನ ರಾಜ ಮನೆತನದವರು, ಯಾಜಕ ಕುಲದವರು ಶ್ರೀಮಂತ ವರ್ಗದವರೆನಿಸಿಕೊಂಡು ಭೋಗಜೀವನ ನಡೆಸುತ್ತಿದ್ದರು. ಇವರ ಪ್ರಮುಖ ಆದಾಯ ಸುಂಕ, ತೆರಿಗೆ ಮತ್ತು ದೇವಾಲಯಕ್ಕೆ ಬರುತ್ತಿದ್ದ ವಂತಿಗೆಯಾಗಿತ್ತು. ಇದರ ಜೊತೆಗೆ ಹೆಚ್ಚು ಕಡಿಮೆ ನಾಡಿನ ಎಲ್ಲಾ ಭೂಮಿಯೂ ಇವರ ಆಸ್ತಿಯೇ ಆಗಿತ್ತು. ಯೇಸುಕ್ರಿಸ್ತ ಮಧ್ಯಮ ವರ್ಗದಿಂದ ಬಂದವನಾದುದ್ದರಿಂದ ಈ 'ಬಡವರ, ಪಾಪಿಗಳ' ಗುಂಪಿಗೆ ಸೇರಿರಲಿಲ್ಲ. ವರ್ಗಬೇಧ ಸಮಾಜದಲ್ಲಿ ಹುಟ್ಟಿದ ಕ್ರಿಸ್ತ ಮಧ್ಯಮ ವರ್ಗದ ಗೌರವಾನ್ವಿತ ಗುಂಪಿನವ ಎನಿಸಿಕೊಂಡಿದ್ದರೂ, ಆತ ಸಂಪೂರ್ಣ ಬೆರೆತು ಹೋದದ್ದು ಅಸ್ಪೃಶ್ಯರ ಮತ್ತು ಶೋಷಿತರ ನಡುವೆ. ಕಾರಣ ಆತ ಸಾಮಾಜಿಕ ಸಮತೆಯನ್ನು ಕೇವಲ ಬೋಧಿಸದೆ ಸಾಧಿಸಿ ತೋರಿಸಲು ಯತ್ನಿಸಿದ.[೧೨೬]

ಅಜ್ಞಾನ, ಮೂಢನಂಬಿಕೆಗಳನ್ನು, ಗೊಡ್ಡು ಕಂದಾಚಾರಗಳನ್ನು ಹೊರಲಾರದ ಯೆಹೂದಿ ಕಾನೂನುಗಳನ್ನು ಬಂಡವಾಳವಾಗಿಟ್ಟುಕೊಂಡು ಜನ ಸಾಮಾನ್ಯರ ಬದುಕು ದುಸ್ತರಗೊಂಡು ಮಾನವರು ಮಾನವರನ್ನು ಪ್ರೀತಿ ಗೌರವಗಳಿಂದ ಕಾಣದ, ವರ್ಣ ಮತ್ತು ವರ್ಗಗಳ ವ್ಯವಸ್ಥೆಯಲ್ಲಿ ಪರರನ್ನು ಶೋಷಿಸುವ ಜನಗಳ ವಿರುದ್ಧ ಸಿಡಿದೆದ್ದ ಯೇಸುಕ್ರಿಸ್ತ ಮತಾಚಾರಗಳ ಕಟ್ಟು ಹರಿದು ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ತತ್ವವನ್ನು ಪ್ರಚುರಪಡಿಸುವುದರ ಮೂಲಕ ತನ್ನ ಸಾಮಾಜಿಕ ಸಮಾನತೆಯ ಬದ್ಧತೆಯನ್ನು ಪ್ರಕಟಪಡಿಸಿದ. ವರ್ಗ, ವರ್ಣ ವ್ಯವಸ್ಥೆ, ಆರ್ಥಿಕ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯಲ್ಲಿ ಮುಗ್ಧ ಮಾನವ ಹೃದಯಗಳಿಗೇ ಸಮಾನತೆ, ಮಾನವೀಯ ಅನುಕಂಪ ಮತ್ತು ಮಾನವೀಯ ಅನುಕಂಪ ತೋರಿ ಜಗತ್ತಿನಲ್ಲಿ ಸರ್ವರೂ ಸಮಾನರೆಂಬ ಸೂತ್ರವನ್ನು ಸಾರಿಹೇಳಿದ ಯೇಸುಕ್ರಿಸ್ತ. ಯೇಸುವಿನ ಸಾಮಾಜಿಕ ಸಮತೆಯನ್ನು ಆತನ ವ್ಯಕ್ತಿತ್ವನ್ನು ಮನಸಾರೆ ಮೆಚ್ಚಿದ ಸ್ವಾಮಿ ವಿವೇಕಾನಂದರು ಒಂದೆಡೆಯಲ್ಲಿ ಈ ಮಾತನ್ನು ಹೇಳಿದ್ದಾರೆ. "ಯೇಸುವಿನ ಕಾಲದಲ್ಲಿ ನಾನು ಇದ್ದಿದ್ದರೆ ಅವನ ಪಾಪಗಳನ್ನು ನನ್ನ ಕಣ್ಣೀರಿನಿಂದಲ್ಲ, ನನ್ನ ರಕ್ತದಿಂದ ತೊಳೆಯುತ್ತಿದ್ದೆ."[೧೨] ಯೇಸುವಿನ ಮಹಾನ್ ವ್ಯಕ್ತಿತ್ವಕ್ಕೆ ಇದ್ದಕ್ಕಿಂತ ಮಿಗಿಲಾದ ಶ್ರದ್ಧಾಂಜಲಿ ಬೇರೆ ಇರಲಿಕ್ಕಿಲ್ಲ ಅಲ್ಲವೆ?

೪.೪.೧೧ ಬಸವಣ್ಣ ಮತ್ತು ಪವಾಡಗಳು

ಜನಸಾಮಾನ್ಯರು ಪವಾಡಗಳಿಗೆ ಬೇಗನೆ ಆಕರ್ಷಿತರಾಗುತ್ತಾರೆ. ವಿಭೂತಿ ಪುರುಷರ ಬಗ್ಗೆ ಅವರ ಜೀವಿತ ಕಾಲಕ್ಕಿಂತ ನಂತರದ ಅವಧಿಯಲ್ಲೇ ಅವರ ಅನುಯಾಯಿಗಳು ಪವಾಡಗಳಿಗೆ ಅತಿ ರಂಜತೆ ಹಾಗೂ ಅತಿ ಹೆಚ್ಚಿನ ಪ್ರಚಾರವನ್ನು ಕೊಡುವುದನ್ನು ನಾವು ಕಾಣುತ್ತೇವೆ.

ಬಸವಣ್ಣನವರು ತಮ್ಮ ಜೀವಿತಾವಧಿಯಲ್ಲಿ ಸುಮಾರು ೮೮ ಪವಾಡಗಳನ್ನು ಮಾಡಿರುವುದಾಗಿ ಅನೇಕ ವೀರಶೈವ ಗ್ರಂಥಗಳಲ್ಲಿ ಪ್ರಮಾಣಗಳು ಸಿಗುತ್ತವೆ. ಸಿಂಗಿರಾಜ ಕವಿಯು ತನ್ನ ಒಂಗಿರಾಜ ಪುರಾಣದಲ್ಲಿ ಬಸವಣ್ಣನವರ ೮೮ ಪವಾಡಗಳಲ್ಲಿ ೬೪ ಪವಾಡಗಳನ್ನು ಆಕರ್ಷಕವಾಗಿಯೂ ಹೃದಯಂಗಮವಾಗಿಯೂ ವರ್ಣಿಸಿದ್ದಾನೆ. ಈ ೮೮ ಪವಾಡಗಳಲ್ಲಿ ಯಾವುದು ಮೊದಲು ಯಾವುದು ಹಿಂದಿನದು ಎಂಬುವ ಕ್ರಮವೇನಿಲ್ಲ. ಯೇಸುಕ್ರಿಸ್ತನ ಪವಾಡಗಳನ್ನು ದಾಖಲಿಸಿದ ಸುವಾರ್ತೆಕಾರರು ಕ್ರಮಬದ್ಧವಾಗಿ ಕ್ರಿಸ್ತನ ಪವಾಡಗಳನ್ನು ದಾಖಲಿಸಿದ್ದರೆ; ಹರಿಹರನ ಬಸವರಾಜ ದೇವರ ರಗಳೆಯಲ್ಲಾಗಲಿ, ಪಾಲ್ಕುರಿಕೆ ಸೋಮನಾಥನ ಬಸವ ಪುರಾಣದಲ್ಲಾಗಲಿ, ಸಿಂಗಿರಾಜನ ಪುರಾಣದಲ್ಲಾಗಲಿ ಬಸವಣ್ಣನ ಪವಾಡಗಳ ಬಗ್ಗೆ ಯಾವುದೇ ಕ್ರಮ ಅನುಸರಿಸಿಲ್ಲ.

ಜನಸಾಮಾನ್ಯರು ತಮ್ಮಿಂದಾಗದ ದೊಡ್ಡ ಕೆಲಸಗಳನ್ನು ಯಾರಾದರೂ ಮಾಡಿದರೆ ಅದಕ್ಕೆ 'ಪವಾಡ'ವೆಂದು ಕರೆಯುತ್ತಾರೆ. ಸಿಂಗಿರಾಜನು ವೈಷ್ಣವ ಮತದವನೂ, ಕವಿಯೂ, ಬಿಜ್ಜಳ ಚಕ್ರವರ್ತಿಯ ಮಾಂಡಳಿಕ ರಾಜನಾಗಿದ್ದು ಬಸವಣ್ಣನವರ ಕೃಪೆಯಿಂದ ವೀರಶೈವ ಮತ ದೀಕ್ಷೆಯನ್ನು ತೆಗೆದುಕೊಂಡಿದ್ದ ಬಸವಣ್ಣನವರು ತಾನು ಮಾಡಿದ ಎಲ್ಲಾ ಪವಾಡಗಳನ್ನು ಅಲ್ಲಮ ಪ್ರಭುವಿನ ದಯೆಯಿಂದ ಆದುವೆಂದು ಅತ್ಯಂತ ವಿನಮ್ರದಿಂದ ಹೇಳುತ್ತಾನೆ.

ತಮ್ಮ ವಚನದಲ್ಲಿ-

ಎಂಭತ್ತೆಂಟು ಪವಾಡವ ಮೆರೆದು ಹಗರಣದ
ಚೋಹದಂ ತಾಯಿ ತನ್ನ ಭಕ್ತಿ
ತನುವಿನೊಳಗೆ ಮನ ಸಿಲುಕದೆ
ತನು ಅಲ್ಲಮನಲ್ಲಿ ಸಿಲುಕಿತ್ತು
ಮನ ಚೆನ್ನಬಸವಣ್ಣನಲ್ಲಿ ಸಿಲುಕಿತ್ತು
ನಾನೇತರಲ್ಲಿ ನೆನೆವೆನಯ್ಯಾ ಕೂಡಲಸಂಗಮದೇವಾ[೧೨೮]

ಮತ್ತು ಶೂನ್ಯ ಸಂಪಾದನೆಯಲ್ಲಿ ಬಸವಣ್ಣನು ತಮ್ಮ ಅಂಗಾಂಗ ಸಮರ ಐಕ್ಯವೆಂತೆಂದು ಬೆಸಗೊಂಬ ಪ್ರಸ್ತಾವನದ ವಚನ ಹೀಗಿದೆ:

> **ದೇವದೇವ ಮಹಾಪ್ರಸಾದ ಅವಧರಿಸು ದೇವ,**
> **ಎನ್ನ ಬಿನ್ನಪವ ಕಾಯದ ಮಾಯದ ಸಡಗರದಲ್ಲಿ ಹುಟ್ಟಿಸಿದಿರಿ,**
> **ಎನ್ನ ಆಗು ನಿಮ್ಮ ಲೀಲಾ ವಿನೋದ.**
> **ಆ ಕಾಯದ ಮಾಯೆಯ ತಲೆಯ ಚಿವುಟ ಶ್ರೀ ಗುರು**
> **ಕಾರುಣ್ಯವ ಮಾಡಿ ಗುರುಲಿಂಗಜಂಗಮದ ತ್ರಿವಿಧ ಭಕ್ತಿಯ**
> **ಘನವ ತೋರಿಸಿ ನಿಮ್ಮ ಪಾದೋದಕ ಪ್ರಸಾದವನ್ನಿತ್ತು ರಕ್ಷಿಸಿದಿರಿ.**
> **ಅದು ನಿಮ್ಮ ಲೀಲಾ ವಿನೋದಿ ಪರವಾದಿ ಬಿಜ್ಜಳ ಒರೆನಲ್ಲಾದಲ್ಲಿ**
> **ಮುನ್ನೂರಾ ಅರವತ್ತು ಸತ್ತ ಪ್ರಾಣವನೆತ್ತಿ ಮೂವತ್ತಾರು ಕೊಂಡೆಯರ**
> **ಪರಿಹರಿಸಿ ಎಂಭತ್ತೆಂಟು ಪವಾಡವ ಮೆರೆದಿರಿ ಅದು ನಿಮ್ಮ**
> **ಲೀಲಾ ವಿನೋದ. ಎನ್ನ ಮನದ ಮಲನವ ತೊಳೆಯಲೆಂದು**
> **ಒಂದು ಶೂನ್ಯ ಸಂಪಾದನದ ಮೇಲೆ ಮೂರ್ತಿಗೊಂಡು ನಿಮ್ಮ**
> **ನಿಜ ಮಹಿಮೆಯನ್ನೆಲ್ಲ ಪ್ರಮಥರ ಮುಂದೆ ತೋರಿ ಎನ್ನ**
> **ಪಾವನ ಮಾಡಿ ಷಟ್‌ಥಳಮಂ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ ಎನ್ನ**
> **ನಿಮ್ಮಂತೆ ಮಾಡಿದಿರಿ ಅದು ನಿಮ್ಮ ಲೀಲಾ ವಿನೋದ. ಕೂಡಲ ಸಂಗಮ**
> **ದೇವ ಎನ್ನ ಮರ್ಮದ ಸಕೀಲ ನೀವೇ ಬಲ್ಲರಾಗಿ ಎನಗೊಮ್ಮೆ**
> **ತಿಳುಹಿ ಕೊಟ್ಟು ಎನ್ನನುಳುಹಿಕೊಳ್ಳ ಪ್ರಭುವೆ?**

ಬಸವಣ್ಣ ತಾನು ಮತ್ತು ಅಲ್ಲಮ ಪ್ರಭುವು ಅಗಲುವ ಸಮಯ ಬಂದಾಗ ಹಿಂದೆ ನಡೆದ ವೃತ್ತಾಂತವನ್ನು ಹೇಳಿ ಅದರಲ್ಲಿ ಅವರು ೩೬೦ ಸತ್ತ ಪ್ರಾಣಿಗಳನ್ನು ಉದ್ಧಾರ ಮಾಡಿ ೩೬ ಜನ ಕೊಡೆಯವರು ಅಂದರೆ ಚಾಡಿ ಹೇಳುವವರನ್ನೆಲ್ಲ ಪರಿಹರಿಸಿ, ಈ ಪವಾಡಗಳೆಲ್ಲ ನಿಮ್ಮ ದಯೆಯಿಂದ ಆದವೆಂದು ಅಲ್ಲಮ ಪ್ರಭುವಿಗೆ ಹೇಳುತ್ತಾನೆ. "ಬಸವಣ್ಣನು ೮೮ ಪವಾಡಗಳನ್ನು ಮಾಡಿದ್ದು ನಿಜವಾದುದಾಗಿದೆ ಸಂಖ್ಯೆಯ ಪರಿಮಿತಿಯು ಬಸವಣ್ಣನ ವಾಣಿಯಿಂದಲೇ ಉದ್ಭವಿಸಿದುದಾಗಿರುತ್ತದೆ. ಸಿಂಗಿರಾಜನಾದರೂ ತನ್ನ ಪುರಾಣದಲ್ಲಿ ಬರೆಯಲಿಕ್ಕೆ ಬಸವಣ್ಣನವರ ಎಲ್ಲಾ ಪವಾಡಗಳು ಸಿಗಲಿಲ್ಲವಲ್ಲಾ, ಕೇವಲ ೬೪ ಮಾತ್ರ ಸಿಕ್ಕವಲ್ಲಾ ಎಂದು ವ್ಯಸನ ಪಡುತ್ತಾ ಕ್ರಿಯಾಪ್ರಕೃತಿ ಚೇಷ್ಟಾನಿಮಿತ್ತವಾಗಿ ೬೪ ಪವಾಡಗಳನ್ನು, ಭಾವ ಪ್ರಕೃತಿ ಚೇಷ್ಟಾ ನಿಮಿತ್ತನಾಗಿ ೨೪ ಪವಾಡಗಳನ್ನು ಮಾಡಿರುವನು. ಆದ್ದರಿಂದ ಬಸವಣ್ಣನ ಚರಿತ್ರೆಯು ೮೮ ಪವಾಡಗಳಿಂದ ಕೂಡಿದ್ದೆಂದು ಸ್ಪಷ್ಟವಾಗಿ ಹೇಳಿರುತ್ತಾನೆ. ಬಸವಣ್ಣನವರ ಎರಡು ವಚನಗಳಿಗೆ ಸರಿಯಾಗಿ ಸಿಂಗಿರಾಜನ ಹೇಳಿಕೆ ಇರುತ್ತದೆ. ಬಸವಣ್ಣ ಮಾಡಿದ ಪವಾಡಗಳ ವರ್ಣನೆ ಒಂದಿಲ್ಲೊಂದು ರೀತಿಯಿಂದ ವೀರಶೈವ ಪುರಾಣಾದಿಗಳಲ್ಲಿ ವಿಶೇಷವಾಗಿ ಬರುತ್ತದೆ.[೧೨೯]

ಪವಾಡಗಳು ಮಹಾವ್ಯಕ್ತಿಗಳ ಜೀವನದಲ್ಲಿ ಮಹತ್ವದ ಪಾತ್ರವನ್ನಾಡುತ್ತವೆ. ಪವಾಡಗಳನ್ನು ಮೆರೆಯುವ ಮಹಾಮಹಿಮರೆ ಇಲ್ಲಿ ಯಶೋಕಾರ್ಯ ಸಾಧನೆಯನ್ನು ಅತ್ಯಲ್ಪ ಶಕ್ತಿಯಿಂದ ಸಾಧಿಸುವುದೇ

ಪವಾಡವೆನ್ನಬಹುದು. ಕಾಲ್ಪನಿಕ ವ್ಯಕ್ತಿಗಳ ವಿಷಯವೇನೇ ಇರಲಿ ಐತಿಹಾಸಿಕ ವ್ಯಕ್ತಿಗಳನ್ನೂ ಆ ಮಹಾಘನತೆಗೆ ಏರಿಸಿ, ಜನರಲ್ಲಿ ಆ ವ್ಯಕ್ತಿಯ ಬಗೆಗೆ ಭಕ್ತಿ ಆದರಗಳನ್ನು ಹುಟ್ಟಿಸಲು ಅವು ಸಾಧನವೇ. ನಾವು ಮಹಾತ್ಮರ ವಿಷಯದಲ್ಲಿ ಪವಾಡಗಳಿಗಿಂತ ಅವರ ವ್ಯಕ್ತಿತ್ವದ ಕಡೆ ಹೆಚ್ಚು ಗಮನವನ್ನು ಹರಿಸಬೇಕಾಗುತ್ತದೆ.

ಯಾವುದೇ ವ್ಯಕ್ತಿಯು ಜನರ ಮೇಲೆ ಪರಿಣಾಮಕರವಾದ ಚಿರಂತನ ಪ್ರಭಾವ ಬೀರಿರುತ್ತಾನೆ. ಬೇಕಾದರೆ ಅಂಗ ಸೌಂದರ್ಯ, ಬಣ್ಣಗಾರಿಕೆ ಇಲ್ಲದ ಜೀವನದ ವ್ಯಕ್ತಿತ್ವ, ಸಾಹಿತ್ಯ ಸೌಂದರ್ಯ ಪ್ರತಿಭಾನ್ವಿತ ಬುದ್ಧಿ ಶಕ್ತಿ, ಮಾನವ ಕುಲಕ್ಕೆ ಸಲ್ಲಿಸಿದ ನಿಃಸ್ವಾರ್ಥಮಯಸೇವೆ, ರಚನಾತ್ಮಕ ಕಾರ್ಯದ ಯೋಜನೆ, ಇತರರನ್ನು ಮೆಚ್ಚಿಸಿ, ಮನ ಸೆರೆಹಿಡಿಯುವ ತತ್ವಬೋಧೆ, ಹಿಂದಿನ ಸಮಾಜ ಪದ್ಧತಿ, ರಾಜಕೀಯ ವ್ಯವಸ್ಥೆ, ಧಾರ್ಮಿಕ ಕಟ್ಟಳೆಗಳ ವಿರುದ್ಧ ಬಂಡೆಬ್ಬಿಸಿದ ಕ್ರಾಂತಿಕಾರಕ ವಿಚಾರಗಳು, ಹಿಂದುಳಿದವರು ಹಾಗೂ ಅಸಹಾಯಕರಿಗಾಗಿ ತೋರಿಸಿದ ಸಹಾನುಭೂತಿ, ದೈವೀಪ್ರೇರಣೆ, ವಾಗ್ಝರಿ, ಮಹಾತ್ಯಾಗ, ಮಾನವ ಮರುಕ, ಉತ್ತಮಶೀಲ, ನೀತಿ, ಸಂಘಟನೆ, ಸ್ವಾತಂತ್ರ್ಯ ಪ್ರೇಮ, ನ್ಯಾಯಶೀಲತೆ, ತೀಕ್ಷ್ಣ ವಿಮರ್ಶಕ ಶಕ್ತಿಯಿಂದ ತಪ್ಪನ್ನು ಖಂಡಿಸುವಲ್ಲಿ ನಿರ್ಭೀತಿ ಮೊದಲಾದ ಗುಣಗಳೇ ಕಾರಣವೆಂದು ಹೇಳಬಹುದು.[೧೩೦] ಈ ಹಿನ್ನೆಲೆಯಲ್ಲಿ ಬಸವಣ್ಣನ ಕೆಲವು ಪವಾಡಗಳನ್ನು ಅವಲೋಕಿಸುವ.

೧. ಏಕಲಿಂಗನಿಷ್ಠಾ ಪವಾಡ: ಬಸವಣ್ಣನ ಲಿಂಗನಿಷ್ಠೆ ಅತ್ಯಗಾಧವಾದುದು. ಒಮ್ಮೆ ಬಸವಣ್ಣನವರ ಆಕಳುಗಳನ್ನು ೧೦೧ ಕಳ್ಳರು ಕದ್ದೊಯ್ದಾಗ ಗೋಪಾಲಕರು ಬಂದು ಬಸವಣ್ಣನ ಬಳಿ ಬಂದು ನಡೆದ ಘಟನೆಯನ್ನು ವಿವರಿಸಿದರು. ಅದಕ್ಕೆ ಬಸವಣ್ಣ "ಸಂಗನೇ ಕೊಟ್ಟಿದ್ದ, ಸಂಗನೇ ಒಯ್ದಿರುತ್ತಾನೆ. ಕರುಗಳನ್ನು ಕೂಡ ಸಂಗನಿಗೆ ಅರ್ಪಿಸಿರಿ" ಎನ್ನುತ್ತಾನೆ.

ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂಭೋ ನಿಮ್ಮ ಧರ್ಮವ
ಬೊಬ್ಬಿಡಿವರಿಂಭೋ ನಿಮ್ಮ ಧರ್ಮವ ಆಡದಿರಿಂಭೋ ನಿಮ್ಮ ಧರ್ಮ
ಅಲ್ಲಿ ಉಬರಂ ಸಂಗ, ಇಲ್ಲಿ ಉಂಬರೆ ಸಂಗ,
ಕೂಡಲಸಂಗಮನೇಕೊ ಭಾವ ಕಾಣಿರೊ

ಪರಶಿವ ವಿಶ್ವತೋಮುಖಿ ಶಿವನೇ ಜಗತ್ಸ್ವರೂಪನಾಗಿರುವದರಿಂದ ಅವರನ್ನೆಲ್ಲ ಸಂಗಮದೇವರೆಂದು ಹೇಳಬೇಕಲ್ಲದೆ ಅನ್ಯಥಾ ಭಾವಿಸಬಾರದು. ನೀವೆಲ್ಲರು ಕರುಗಳನ್ನು ಅಟ್ಟಿಕೊಂಡು ಆಕಳುಗಳು ಹೋದ ಮಾರ್ಗದಲ್ಲಿ ಬಿಟ್ಟು ಬರಬೇಕು ಅನ್ನುತ್ತಾನೆ. ಕಳ್ಳರು ಕದ್ದೊಯ್ದ ಹಸುಗಳು ಹುಲ್ಲು ತಿನ್ನದೆ ನೀರು ಕುಡಿಯದೆ ನಿಶ್ಚಲವಾಗಿ ನಿಲ್ಲುತ್ತವೆ. ಕಳ್ಳರು ಭಯಭ್ರಾಂತರಾಗಿ ಅವುಗಳನ್ನು ಪುನಃ ಅಟ್ಟಿಕೊಂಡು ಬರುತ್ತಾರೆ. ಕರುಗಳು ತಮ್ಮ ತಾಯಂದಿರನ್ನು ನೋಡಿ ಅಂಬಾ ಎಂದು ಕೂಗುತ್ತವೆ. ಕಳ್ಳರಿಗೆ ಗೋಪಾಲಕರು ಬಸವಣ್ಣನವರು ಹೇಳಿದ ಸಮಾಚಾರವನ್ನೆಲ್ಲಾ ಹೇಳಿದ ಮೇಲೆ ತಮ್ಮ ನೀಚತನದ ಕಳ್ಳತನವನ್ನು ಹಳಿಯುತ್ತಾ ಬಸವಣ್ಣನ ಬಳಿಗೆ ಪಶ್ಚಾತ್ತಾಪದಿಂದ ಬಂದು ಕ್ಷಮೆ ಬೇಡುತ್ತಾರೆ. ಬಸವಣ್ಣ ಅವರನ್ನು ಅಂಗಾಂಗಿಗಳನ್ನಾಗಿ ಮಾಡಿ

ಅವರ ದುರ್ಗುಣಗಳನ್ನು ಬಿಡಿಸಿ ಸದ್ಗುಣಗಳನ್ನಾಗಿ ಮಾಡುತ್ತಾನೆ.

೨. ಬರಿ ಪೆಟ್ಟಿಗೆಗಳಲ್ಲಿ ಭಂಡಾರ ತುಂಬಿದ ಪವಾಡ : ಬಿಜ್ಜಳನ ಬೊಕ್ಕಸದ ಮಂತ್ರಿಯಾಗಿದ್ದ ಬಸವಣ್ಣ ಬೇಡಿದವರಿಗೆಲ್ಲಾ ಬೇಡಿದ ಪದಾರ್ಥಗಳ ಕೊಡುತ್ತಿದ್ದ. ಒಮ್ಮೆ ಜಂಗಮನೊರ್ವ ಬಂದು ನನಗೆ ಹೊರುವಷ್ಟು ಹಣವನ್ನು ಕೊಡಬೇಕು ಎಂದಾಗ ಬಸವಣ್ಣ ಅವನ ಇಷ್ಟಪ್ರಕಾರ ನೀಡಿದ. ತದನಂತರ ಅನೇಕ ಜಂಗಮರು ಬಂದು ಭಂಡಾರದಿಂದ ಬಸವಣ್ಣನ ಮೂಲಕ ಹಣವನ್ನು ಪಡೆದರು. ಬಿಜ್ಜಳನಿಗೆ ಚಾಡಿಕೋರರು ಬಸವಣ್ಣ ಹಣದ ಪೆಟ್ಟಿಗೆಯಲ್ಲಾ ಮಾಡಿ ಖಾಲಿ ಮಾಡಿದ್ದಾನೆಂದು ದೂರಿದರು. ಬಸವಣ್ಣನನ್ನು ಕರಸಿ ಲೆಖ್ಖ ಕೇಳಿ ಹಣದ ಪೆಟ್ಟಿಗೆಯನ್ನು ಬಿಜ್ಜಳನು ನೋಡಿ ಹಣವೆಲ್ಲಾ ಸರಿಯಾಗಿ ಇದ್ದಿತು. ಎಂತಹ ಅದ್ಭುತ!

೩. **ಎಡವಿ ಬೀಳುವಾಗ ಗೌಳಿಗಿತ್ತಿಯ ಕೊಡವನ್ನು ತಡೆಹಿಡಿದಿದ್ದು-** ಒಮ್ಮೆ ಬಸವಣ್ಣನು ಬಿಜ್ಜಳನೊಂದಿಗೆ ೧೮ ಮಂತ್ರಿಗಳ ಸಹಿತ ಆಸ್ಥಾನದಲ್ಲಿದ್ದಾಗ ಒಡನೆಯೇ ಎರಡು ಕೈಗಳನ್ನು ಮೇಲಕ್ಕೆತ್ತಿ 'ಎಲ್ಲ ಸ್ತ್ರೀಯೇ ಬೀಳಬೇಡ ನಿಲ್ಲು ನಿಲ್ಲು' ಎನ್ನಲು ಎಲ್ಲರೂ ಆಶ್ಚರ್ಯ ಚಕಿತರಾದರು. ಬಿಜ್ಜಳನು ಇದನ್ನು ಕಂಡು ವಿಸ್ಮಯದಿಂದ ಇದೇನು ಎಂದು ಕೇಳಲು ಬಸವಣ್ಣನು ನಿಜಸ್ಥಿತಿಯನ್ನು ವಿವರಿಸಿದ. ಕಪಿಲೇಶ್ವರ ಲಿಂಗಕ್ಕೆ ಯತಿಯೊರ್ವನು ಒಂದು ಸಾವಿರ ಕೊಡ ಹಾಲಿನ ಅಭಿಷೇಕ ಮಾಡುವನೆಂದು ಭಕ್ತಿಯಿಂದ ನಿಶ್ಚಯಿಸಿದ್ದಾಗ ಅಲ್ಲಿ ಹಾಲು ಒಯ್ಯುವ ಹಾದಿ ಕೆಸರಾಗಿದ್ದಿತು. ಗೌವಳಗಿತ್ತಿಯು ಕೊಡದೊಂದಿಗೆ ಜಾರಿ ಬಾಳುವಾಗ್ಗೆ ಬಸವ ಬಸವ ಎಂದು ಹೇಳಿದ ಕಾರಣ ನಾನು ಆ ಹೆಣ್ಣು ಮಗಳು ಬೀಳುವುದಕ್ಕೆ ಮುಂಚೆ ಎತ್ತಿ ಹಿಡಿದೆನು ಎಂದು ಹೇಳಿದನು. ರಾಜನು ಇದನ್ನು ಪರೀಕ್ಷಿಸಲು ಎಲ್ಲವೂ ನಿಜವಾಗಿತ್ತು.

೪. **ಚರರೂಪನಿಂದ ಬಂದ ಶಿವನನ್ನು ಪ್ರತ್ಯಕ್ಷ ಮಾಡಿಕೊಂಡ ಪವಾಡ** : ಬಸವಣ್ಣನ ದಾಸೋಹ ಭಕ್ತಿಯನ್ನು ಶಿವನು ಪರೀಕ್ಷಿಸಲು ಜಂಗಮರೂಪ ಪಡೆದು ಬಂದಾಗ ಬಸವಣ್ಣನು ಅದನ್ನು ಕಂಡುಹಿಡಿದು ಶಿವನನ್ನು ಪ್ರತ್ಯಕ್ಷ ಮಾಡಿಕೊಳ್ಳುವ ಪವಾಡ ರೋಚಕವಾದುದು.

೫. ಪಂಡಿತಾರಾಧ್ಯರು ಬಸವಣ್ಣನವರ ಕೃಪಾದೃಷ್ಟಿ ಯಾತ್ರದಿಂದ ಕನ್ನಡ ಭಾಷಾಪಾಂಡಿತ್ಯ ಪಡೆದು ಪಂಡಿತಾರಾಧ್ಯರಾದ ಪವಾಡ.

೬. **ಸರ್ಪವನ್ನು ಪದಕ ಮಾಡಿದ ಪವಾಡ** : ಬಿಜ್ಜಳನು ಚಾಡಿಕೋರರ ಮಾತು ಕೇಳಿ ಬಸವಣ್ಣನಿಗೆ ಜಂಗಮ ಸಂಗವ ಬಿಟ್ಟು ರಾಜ್ಯದ ಕಾರುಭಾರವನ್ನು ಸರಿಯಾಗಿ ನಿರ್ವಹಿಸಿದರೆಂದು ಹೇಳಿದಾಗ,

ಕಾಯದ ಕಳವಳಕ್ಕಂಜಿ ಕಾಯಯ್ಯಾ ಎನ್ನನು
ಜೀವನೋಪಾಯಕ್ಕಂಜಿ ಈಯಯ್ಯಾ ಎನ್ನೇನು
'ಯದ್ಭಾವಂ ತದ್ಭವತಿ' ಉರಿ ಬರಲಿ, ಸಿರಿಬರಲಿ,

ಬೇಕು ಬೇಡೆನ್ನನಯ್ಯಾ! ಆ ನಿಮ್ಮ ಹಾರೆನು,
ಮಾನವರ ಬೇಡೆನು ಆಣೆ ನಿಮ್ಮಾಣೆ ಕೂಡಲಸಂಗಮದೇವಾ.

ಎನ್ನುತ್ತಾ ನಾನು ಜಂಗಮ ದಾಸೋಹವನ್ನು ಮಾಡುವೆನಲ್ಲದೆ ಎಂದಿಗೂ ಬಿಡೆನು ಎಂದು ಹೇಳಿ ಹೊರಟನು. ಕಾಳಿಯನೆಂಬ ಮಂತ್ರಿಯು ಜಂಗಮರ ಸಹವಾಸ ಬಿಟ್ಟು ಮೊದಲಿನಂತೆ ಇದ್ದುಬಿಡು; ರಾಜನ ಆಸ್ಥಾನ ಬಿಟ್ಟು ಹೋದರೆ ನಿನ್ನ ಭಕ್ತಿಗೆ ಕೇಡು ಉಂಟಾಗುವುದು ಎಂದು ಹೇಳಿದಾಗ: ಬಸವಣ್ಣನು-

"ಆರು ಮುನಿದು ಎಮ್ಮನೇನು ಮಾಡುವರಯ್ಯಾ?
ಊರು ಮುನಿದು ನಮ್ಮನೆಂತು ಮಾಡುವುದಯ್ಯಾ?
ಕೊಡಬೇಡ ನಮ್ಮ ಕುನ್ನಿಗೆ ತುಸ,
ಇಡಬೇಡ ನಮ್ಮ ಶುನಕಗೆ ತಳಿಗೆಯ
ಆನೆಯನೇರಿ ಹೋಹಾತನ ಶ್ವಾನ ಕಚ್ಚಬಲ್ಲುದೆ?
ನಮಗೆ ನಮ್ಮ ಕೂಡಲಸಂಗಮನುಳ್ಳನ್ನಕ್ಕ"

ಎಂದು ಹೇಳಿ ಸಂಗಮನಿಷ್ಠೆಯನ್ನು ಮೆರೆಯುತ್ತಾನೆ. ತನ್ನ ಜಂಗಮರಿಗೆ ದಾಸೋಹ ಮಾಡಲು ಸರ್ಪವನ್ನು ಪದಕ ಮಾಡಿ ಲಕ್ಷ ಚಿನ್ನದ ನಾಣ್ಯಗಳನ್ನು ತರುವುದನ್ನು ಕಾಣುತ್ತೇವೆ. ಸರ್ಪವನ್ನು ಪದಕ ಮಾಡಿ ತನ್ಮೂಲಕ ದಾಸೋಹಕ್ಕೆ ನೆರವಾದುದು ಬಸವಣ್ಣನ ಅಮೋಘವಾದ ಪವಾಡಗಳಲ್ಲಿ ಒಂದಾಗಿದೆ.[೧೩೧] ಬಸವಣ್ಣನವರ ಪವಾಡಗಳೂ ಅನೇಕವುಗಳಾಗಿವೆ. ಸಿಂಗಿರಾಜ ಪುರಾಣ, ಬಸವೇಶ್ವರ ಪುರಾಣ, ಇನ್ನುಳಿದ ಅನೇಕ ಶಿವಶರಣರ ಪುರಾಣ ಮತ್ತು ಕಾವ್ಯಾದಿಗಳಲ್ಲಿ ಬಸವಣ್ಣನ ಪವಾಡಗಳ ಬಗ್ಗೆ ಹೇರಳವಾಗಿ ಬರೆಯಲಾಗಿದೆ.

೪.೪.೧೨ ಯೇಸುಕ್ರಿಸ್ತ ಮತ್ತು ಪವಾಡಗಳು

ಯೇಸು ಪವಾಡ ಪುರುಷನೂ ಹೌದು, ಅವನ ಜೀವನದಿಂದ ಬೇರ್ಪಡಿಸಲಾಗದ ರೀತಿಯಲ್ಲಿ ಪವಾಡಗಳು ಸೇರಿಕೊಂಡಿವೆ. ಒಂದು ವಿಶೇಷವೆಂದರೆ: ಈ ಪವಾಡಗಳನ್ನು ಯೇಸು ಮಾಡಿದ್ದು ಜನ ಸಾಮಾನ್ಯರಿಗಾಗಿ, ನೊಂದವರಿಗಾಗಿ, ಅನಾರೋಗ್ಯದಿಂದ ಪೀಡಿತರಾದವರಿಗಾಗಿ ಇಲ್ಲಿ ಹೇಳಬೇಕಾಗಿರುವ ಇನ್ನೂ ಒಂದು ವಿಷಯವೆಂದರೆ: ಯೇಸು ಜನರ ಗಾಢವಾದ ನಂಬಿಕೆಯನ್ನು, ತನ್ನ ಮೇಲಿದ್ದ ಭಕ್ತಿಯನ್ನು ಈ ಪವಾಡ ನೆರವೇರಿಸಲು ಬಳಸಿಕೊಂಡದ್ದು, "ನನ್ನಿಂದ ಈ ಕೆಲಸ ಸಾಧ್ಯವೆಂಬ ನಂಬಿಕೆ ನಿನ್ನಲ್ಲಿದೆಯೆ? ಹೌದಾದರೆ ನೀನು ನಂಬಿದಂತೆ ಆಗಲಿ" ಎಂದು ಹೇಳಿಯೆ ಯೇಸು ಹಲವು ಪವಾಡಗಳನ್ನು ನಡೆಸಿದರು.[೧೩೨] ಸುವಾರ್ತೆಕಾರನಾದ ಯೆವಾನ್ನನು ಯೇಸುಮಾಡಿದ ಮೊದಲ ಪವಾಡ ಕಾರ್ಯ ಕಾನಾ ಊರಿನ ಮದುವೆ ಮನೆಯಲ್ಲಿ ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸಿದ್ದು, ಯೆವಾನ್ನನು ಸುಮಾರು ಏಳು ಪವಾಡಗಳನ್ನು ದಾಖಲಿಸಿದ್ದಾನೆ. ರಾಜಸೇವೆಯಲ್ಲಿದ್ದ ಅಧಿಕಾರಿಯ ಮಗನಿಗೆ ಆರೋಗ್ಯದಾನ ಮಾಡಿದ್ದು, ಬೆತ್ಸಥ ಕೊಳದ ಬಳಿಯಿದ್ದ ರೋಗಿಯನ್ನು ಸ್ವಸ್ಥ ಮಾಡಿದ್ದು ಐದುಸಾವಿರ ಮಂದಿಗೆ ಐದು ರೊಟ್ಟಿ, ಎರಡು ಮೀನುಗಳನ್ನು ಹಂಚಿದ್ದು, ನೀರಿನ ಮೇಲೆ ನಡೆದದ್ದು, ಹುಟ್ಟು ಕುರುಡನಿಗೆ ದೃಷ್ಟಿದಾನ ಮಾಡಿದ್ದು, ಲಾಸರನಿಗೆ ಮತ್ತೆ ಜೀವ ಕೊಟ್ಟಿದು. ಹೀಗೆ ಆಯ್ದ ಏಳು ಮಹತ್ವದ ಪವಾಡಗಳನ್ನು ತನ್ನ ಶುಭ ಸಂದೇಶದಲ್ಲಿ ದಾಖಲಿಸಿದ್ದಾನೆ.

ಆದರೆ ಸುವಾರ್ತಿಕರಾದ ಮತ್ತಾಯ, ಮಾರ್ಕ ಮತ್ತು ಲೂಕರವರು ಇನ್ನು ಅನೇಕ ಯೇಸುವಿನ ಪವಾಡಗಳನ್ನು ದಾಖಲಿಸಿದ್ದಾರೆ. ಯೇಸು ಸಮುದ್ರವನ್ನು ಗದರಿಸಿ ಶಾಂತಪಡಿಸಿದ್ದು, ದೆವ್ವಗಳ ಉಚ್ಚಾಟನೆ, ರೋಗಿಗಳಿಗೆ ಆರೋಗ್ಯದಾನ, ಕುಷ್ಠರೋಗಿಯ ಮೇಲೆ ಕನಿಕರಗೊಂಡು ವಾಸಿ ಮಾಡಿದ್ದು, ಪಾರ್ಶ್ವವಾಯು ರೋಗಿಯನ್ನು ಸ್ವಸ್ಥ ಮಾಡಿದ್ದು, ಸಬ್ಬತ್ ದಿನದಲ್ಲಿ ಬತ್ತಿದ್ದ ಕೈಯುಳ್ಳವನನ್ನು ಗುಣಪಡಿಸಿದ್ದು, ದೆವ್ವ ಪೀಡಿತನಿಗೆ ಬಿಡುಗಡೆ ಮಾಡಿದ್ದು, ಯೇಸು ತಾನು ಪ್ರಕೃತಿಗೂ ಒಡೆಯ ಎಂದು ತೋರಿಸಿದ್ದು, ಯಾಯಿರನ ಮಗಳನ್ನು ಬದುಕಿಸಿದ್ದು, ಐದು ಸಾವಿರ ಮಂದಿಗೆ ಭೋಜನ ಹಂಚಿದ್ದು, ಕಡಲಿನ ಮೇಲೆ ನಡೆದದ್ದು, ಗೆನಸರೇತಿನ ರೋಗಿಗಳಿಗೆ ಆರೋಗ್ಯದಾನ ಗ್ರೀಕ್ ಮಹಿಳೆಯ ಮಗಳ ದೈವ ಬಿಡಿಸಿದ್ದು, ಹೀಗೆ ಅನೇಕ ಅದ್ಭುತಗಳನ್ನು ಪವಾಡಗಳನ್ನು ಯೇಸುಸ್ವಾಮಿ ಮಾಡಿದರು.

ಇದು ನನ್ನ ಹಣೆ ಬರಹ, ನನ್ನ ವಿಧಿಯನ್ನು ನಾವು ಹೇಗೆ ಬದಲಾಯಿಸಲಿಕ್ಕೆ ಸಾಧ್ಯ? ಎಂಬ ಮಾತು, ಜಗತ್ತನ್ನು ಬದಲಾಯಿಸಲು ನನ್ನಿಂದ ಸಾಧ್ಯವೆ? ಬ್ರಹ್ಮ ಬರೆದಂಗೆ ನಡೆಯುತ್ತೆ ಬಿಡು ಎನ್ನುವುದು,

‘ದೇವನ ಚಿತ್ತ ಹೀಗೇ ಇದ್ದ ಮೇಲೆ ನಾವೇನು ಮಾಡಲು ಸಾಧ್ಯಾ?’ ಎಂದು ಹಣೆಬರಹದ ಪ್ರಶ್ನೆ, ಇದೆಲ್ಲಾ ದಿನನಿತ್ಯ ನಮ್ಮ ಕಿವಿಗೆ ಬೀಳುತ್ತಿರುತ್ತವೆ. ಇದನ್ನೇ ನಾವು ‘ವಿಧಿವಾದ’ ಎನ್ನುತ್ತೇವೆ. ಈ ವಿಧಿವಾದ ಆತ್ಮವಿಶ್ವಾಸಕ್ಕೆ ವಿರುದ್ಧವಾದದ್ದು. ಇದು ಯಾವುದೋ ಕಾಲದಲ್ಲಿದ್ದ ಒಂದು ಸಿದ್ಧಾಂತ ಎಂದು ಸುಲಭವಾಗಿ ತಳ್ಳಿ ಬಿಡಲು ಸಾಧ್ಯವಿಲ್ಲ. ಈಗಲೂ ನಮ್ಮ ಬದುಕನ್ನಾಳುತ್ತಿರುವ ಅಗೋಚರ ಪ್ರಭು ಇದು. ವೈಚಾರಿಕತೆಯ ಮಧ್ಯೆಯೂ ನಮ್ಮನ್ನು ಬಿಟ್ಟಿರದ ನಂಟು. ೨೦ನೇ ಶತಮಾನದ ಕಂಪ್ಯೂಟರ್ ಸ್ಯಾಟಲೈಟ್ ಯುಗದಲ್ಲೂ ಈ ಹಣೆಬರಹದ ನಂಬಿಕೆಗಳಿಗೆ ನಮ್ಮಲ್ಲಿ ಕೊರತೆಯೇನಿಲ್ಲ.

ಇದೆಲ್ಲಾ ಹೇಳುವುದಿಷ್ಟೇ ಆತ್ಮವಿಶ್ವಾಸದ ಕೊರತೆ ನಮ್ಮಲ್ಲಿ ಇನ್ನೂ ಬಹಳ ಇದೆ. ನಮ್ಮ ನಂಬಿಕೆ ಮತ್ತು ನಿಲುವುಗಳು ಭದ್ರವಾದ ಸಿದ್ಧಾಂತದ ಮೇಲೆ ನಿಂತಿಲ್ಲ. ನಮ್ಮ ಮನಸ್ಸಿನ ಈ ನಂಬಿಕೆ, ಭರವಸೆ ಮತ್ತು ಆತ್ಮವಿಶ್ವಾಸ ಒಂದಕ್ಕೊಂದು ಹತ್ತದ ಸಂಬಂಧವಿರುವಂತಹ ವಿಷಯಗಳು. ಆತ್ಮವಿಶ್ವಾಸ ಇಲ್ಲಿನ ಮನುಷ್ಯನಿಗೆ ಬದುಕಿನಲ್ಲಿ ಭರವಸೆ ಇರುವುದಿಲ್ಲ. ಹಾಗಾಗಿ, ಅವನ ಬಯಕಿನಲ್ಲಿ ಯಾವುದೇ ಉತ್ಸಾಹ, ಹುಮ್ಮಸ್ಸು, ಬೆಳೆಯಬೇಕೆಂಬ ಛಲ ಇರುವುದಿಲ್ಲ. ಕಾರಣ, ಈ ವಿಧಿವಾದ ಅವನನ್ನು ಅಷ್ಟೊಂದು ಆಕ್ರಮಿಸಿಕೊಂಡು ಬಿಟ್ಟಿದೆ.

ಕ್ರಿಸ್ತನ ಕಾಲದ ಗಲಿಲೇಯ ಜನರಿಗೆ ಇದ್ದ ಸಮಸ್ಯೆಯೂ ಇದೇ. ತಮ್ಮ ಬದುಕು ನೆಲೆಕೆಟ್ಟಿದ್ದು, ಈ ಬದುಕಲ್ಲಿ ಬೇರೆ ಭರವಸೆಗಳೇ ಇಲ್ಲ ಎಂಬ ನಂಬಿಕೆ ಅವರಲ್ಲಿ ಆಳವಾಗಿ ಬೇರೂರಿ ಹೋಗಿತ್ತು. ಈ ಹಿನ್ನೆಲೆಯಲ್ಲಿ ಕ್ರಿಸ್ತನ ಬೋಧನೆ ಮತ್ತು ಆತ ಮಾಡಿದ ಕಾರ್ಯಗಳು ಹೆಚ್ಚೂ ಸಮಯೋಚಿತ ಮತ್ತು ಅರ್ಥಪೂರ್ಣವಾಗಿ ಕಾಣುತ್ತವೆ. ವಿಧವಾದ ಮಾನಸಿಕ, ದೈಹಿಕ ಕಾಯಿಲೆಗಳಿಗೆ ತುತ್ತಾಗಿದ್ದವರು, ಇನ್ನು ನಮಗೆ ಬಿಡುಗಡೆಯೇ ಇಲ್ಲ ಇದು ನಮ್ಮ ಹಣೆಬರಹ ಎಂಬ ಜುಗುಪ್ಸೆಯಲ್ಲಿದ್ದಾಗ ಕ್ರಿಸ್ತನ ಮಾತು, ಪ್ರೋತ್ಸಾಹ ಅವರ ಬದುಕಿಗೆ ಹೊಸ ಅರ್ಥ ನೀಡಿತು. ತಮ್ಮ ಕಾಯಿಲೆಗಳಿಂದ ಗುಣವಾಗಬಹುದು. ಈ ಬದುಕು ಬದಲಾಗಬಹುದು ಎಂಬ ನಂಬಿಕೆ ಮೂಡಲಾರಂಭಿಸಿತು. ತಮ್ಮಲ್ಲಿ ಆತ್ಮವಿಶ್ವಾಸವಿದ್ದರೆ, ಈ ಬದುಕನ್ನು ಹೊಸದಾಗಿ ರೂಪಿಸಿಕೊಳ್ಳಬಹುದು ಎಂಬ ಮನೋಭಾವ ಕೂಡ ಚಿಗುರಲಾರಂಭಿಸಿತು.

ಕ್ರಿಸ್ತ ಇವರಿಗೊಂದು ಹೊಸ ಭರವಸೆ ಮುಂದಿಟ್ಟ. ಅವರೊಂದಿಗೆ ಬೆರೆತು ಅವರ ಬಯಕೆಗೆ ಹೊಸ ತಿರುವುಗಳನ್ನು ತೋರಿಸಿದ. ಕ್ರಿಸ್ತನೊಳಗಿದ್ದ ಆ ಆಳವಾದ ಆತ್ಮವಿಶ್ವಾಸ ಪಡೆಯಲು ಜನ ತಂಡೋಪತಂಡವಾಗಿ ಬರಲಾರಂಭಿಸಿದರು. “ಸ್ವಾಮಿ ನಮ್ಮ ವಿಶ್ವಾಸವನ್ನು ಹೆಚ್ಚಿಸಿರಿ” ಎಂದು ಬೇಡಿದರು. “ಸ್ವಾಮಿ, ನಾನು ವಿಶ್ವಾಸಿಸುತ್ತೇನೆ. ನನ್ನ ವಿಶ್ವಾಸದಲ್ಲಿ ಕೊರತೆ ಇದ್ದರೆ ನೆರವು ನೀಡಿ” ಎಂದು ಮೊರೆಯಿಟ್ಟರು. ಅವರ ಮೊರೆ ಆಲಿಸಿದ ಕ್ರಿಸ್ತವರ ಬಯಕೆಗೆ ಆಶಾಕಿರಣ, ಹೊಸ ಭರವಸೆ ತಂದರು. ಕ್ರಿಸ್ತ ಮಾಡಿದ ಈ ಎಲ್ಲಾ ಕಾರ್ಯಗಳನ್ನು ಪವಾಡ ಎನ್ನುವುದಾದರೆ ಅವರಲ್ಲಿ ತಪ್ಪೇನು ಇಲ್ಲ.

ವಿಧಿವಶಕ್ಕೆ ತಮ್ಮನ್ನೆ ಸಂಪೂರ್ಣವಾಗಿ ಒಪ್ಪಿಸಿಕೊಂಡಂತಿದ್ದ ಜನರು ಕ್ರಿಸ್ತನಿಂ ಹೊಸ ಭವಿಷ್ಯ ರೂಪಿಸಿಕೊಂಡು ಹೊಸ ಆತ್ಮವಿಶ್ವಾಸದೊಂದಿಗೆ ಬದುಕಲಾರಂಭಿಸಿದರು. ಅಸಾಧ್ಯವೆನಿಸಿದ್ದೆಲ್ಲಾ ಸಾಧ್ಯವಾಯಿತು. ಶಲಿತೀಯದ ಜನ ಹೊಸ ಹುರುಪಿನಿಂದ ಬೆಳೆಯಲಾರಂಭಿಸಿದರು. ಅನೇಕರು ತಮ್ಮ ಕಾಯಿಲೆಗಳಿಂದ ಗುಣಹೊಂದಿದರು. ಗಾಳಿ, ಪಿಶಾಚಿ ಎನ್ನುತ್ತಿದ್ದವರೆಲ್ಲಾ ಅವುಗಳಿಂದ ಬಿಡುಗಡೆ ಪಡೆದರು. ಕುಷ್ಠರೋಗ ಕೂಡ ಮಾಯವಾಗಿ ಅಸ್ಪೃಶ್ಯರು ಎನಿಸಿಕೊಂಡಿದ್ದವರೆಲ್ಲಾ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆತು ಹೊಸಬದುಕು ಕಂಡುಕೊಳ್ಳಲಾರಂಭಿಸಿದರು.

ಇಲ್ಲೊಂದು ಪ್ರಶ್ನೆ! ಇವೆಲ್ಲಾ ನಿಜವಾಗಿಯೂ ಪವಾಡಗಳೇ?

ಈ ಪವಾಡ ಕಾರ್ಯಗಳನ್ನು ನಂಬುವವರು, ನಂಬದಿರುವವರು ಒಂದು ವಿಷಯವನ್ನಂತೂ ನಂಬುತ್ತಾರೆ. ಈ ಪವಾಡಗಳು ಪ್ರಕೃತಿಯ ಸಹಜ ನಿಯಮಗಳನ್ನು ಮೀರಿದ್ದವು. ಈ ಪವಾಡಗಳನ್ನು ತರ್ಕವಾಗಲಿ, ವಿಜ್ಞಾನವಾಗಲಿ ವಿವರಿಸಲಾರವು ಎಂಬುದು ಕೂಡ ಅಷ್ಟೇ ಸಾರ್ವತ್ರಿಕ ನಂಬಿಕೆ.

ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ವಿಷಯವಿದೆ. ಈ ಪ್ರಕೃತಿ ನಿಯಮ ಸ್ವಾಭಾವಿಕ ನಿಯಮ ಇವೆಲ್ಲಾ ಇಂದಿನ ಪೀಳಿಗೆಯ ನಂಬಿಕೆಗಳು. ಸ್ವಾಭಾವಿಕ, ವೈಜ್ಞಾನಿಕ, ಪವಾಡ, ಇವೆಲ್ಲಾ ಆಧುನಿಕ ವಿಭಜನೆಗಳು. ಆದರೆ ಬೈಬಲ್ ಕಾಲದ ಜನಕ್ಕೆ ಈ 'ಪ್ರಕೃತಿ ನಿಯಮ' ಎಂಬುದೇ ಗೊತ್ತಿರಲಿಲ್ಲ. ಅವರೆಲ್ಲಾ ನಂಬಿದ್ದ ಒಂದು ವಿಷಯವೆಂದರೆ ಈ ಜಗತ್ತು ದೇವರ ಅನುಗ್ರಹದಿಂದ ನಡೆಯುತ್ತದೆ ಎಂಬುದು. ಈ ನಂಬಿಕೆ ಎಷ್ಟು ಬಲವಾಗಿ ಬೇರೂರಿತ್ತೆಂದರೆ ತಮ್ಮ ರೀತಿನೀತಿ, ಕಾನೂನು, ವ್ಯವಸ್ಥೆ ಎಲ್ಲವೂ ದೇವರ ನೇರ ಆಜ್ಞೆಯಿಂದಲೇ ನಡೆಯುತ್ತಿದೆ ಎಂದು ಭಾವಿಸಿದ್ದರು. ಇದರ ಪರಿಣಾಮವಾಗಿ ಬಂದುದಕ್ಕೆಲ್ಲಾ ತಲೆಬಾಗಬೇಕು, ದೇವರು ಕೊಟ್ಟಿದ್ದೇ ಅಂತಿಮ ಎಂದು ಒಪ್ಪಿಕೊಳ್ಳಬೇಕು ಎಂಬ ನಂಬಿಕೆಯಲ್ಲಿ ಅವರ ಬದುಕು ಸಾಗುತ್ತಿತ್ತು.

ಇನ್ನೊಂದು ದೃಷ್ಟಿಯಿಂದ ನೋಡಿದರೂ ಅನೇಕರಿಗೆ ಈ ಜಗತ್ತೇ ಒಂದು ಅದ್ಭುತ ಎಂಬಂತೆ ಕಾಣಿಸಿದರೆ ಆಶ್ಚರ್ಯವೇನಲ್ಲ. ಪ್ರತಿನಿತ್ಯ ನಮ್ಮ ಕಣ್ಣಮುಂದೆ ಸುಳಿದು ಹಾದುಹೋಗುವ ನೂರಾರು ವಿಷಯಗಳು ಪವಾಡ ಸದೃಶ್ಯಗಳಂತೆಯೇ ಕಾಣಿಸುತ್ತವೆ. ಒಬ್ಬ ಕಲಾವಿದ, ಒಬ್ಬ ಸೃಜನಶೀಲ ಈ ಜಗತ್ತಿನ ನೂರಾರು ಆಗುಹೋಗುಗಳಿಂತ ಚಕಿತಗೊಳ್ಳುತ್ತಾನೆ. ದೇವರ ಮೇಲೆ ನಂಬಿಕೆ ಇರುವ ಆಸ್ತಿಗನಿಗಂತೂ ಈ ಜಗತ್ತಿನ ಪ್ರತಿಘಟನೆಯೂ ಒಂದು ಪವಾಡದಂತೆಯೇ ಕಾಣಿಸುತ್ತದೆ. ಈ ಸೃಷ್ಟಿ, ಪ್ರತಿನಿತ್ಯದ ವೈಚಿತ್ರ್ಯಗಳು, ಊಹಿಸಲಾಗದಂತೆ ನಡೆದುಹೋಗುವ ಘಟನೆಗಳು, ಇವೆಲ್ಲವೂ ಒಂದು ಪವಾಡದಂತೆ ಕಾಣಿಸಿದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ.

ಹಾಗೆ ನೋಡಿದರೆ, ವಿಜ್ಞಾನದ ಇಂದಿನ ಬೆಳವಣಿಗೆ ಕೂಡ ಒಂದು ಪವಾಡವೇ ಇಂದಿಗೂ

ಯಾವುದೇ ವಿಜ್ಞಾನಿ ತನ್ನ ಸಂಶೋಧನೆಯೇ ಅಂತಿಮ ಸತ್ಯ ಎಂದು ನಿಖರವಾಗಿ ಹೇಳಲಾರ. ಎಷ್ಟೋ ವಿಜ್ಞಾನಿಗಳು ತಾವು ಕಂಡು ಹಿಡಿದ ಸತ್ಯಗಳಲ್ಲಿ ಊಹಿಸಲಾಗಿದ್ದು, ವಿವರಿಸಲಾಗಿದ್ದು, ಎಷ್ಟೋ ಇವೆ ಎಂದೂ ಒಪ್ಪಿಕೊಂಡಿದ್ದಾರೆ. ಒಂದಂತೂ ಸತ್ಯ ಈ ಜಗತ್ತಿನಲ್ಲಿ ನಮ್ಮ ಊಹೆಗಿಂತ ನಿಗೂಢತೆಯೇ ಆಳವಾಗಿದೆ.

ಹಾಗಾಗಿ, ಒಂದು ವಿಷಯದ ಅಂತಿಮ ಸತ್ಯವನ್ನು ನಿರ್ಧರಿಸಲು ಈ ಪ್ರಕೃತಿ ನಿಯಮಗಳ ಅಂತಿಮ ಅಳತೆಗೋಲಿನಲ್ಲಿ ನಮ್ಮ ಕಣ್ಣಮುಂದೆಯೇ ನಡೆಯುವ ನೂರಾರು, ಘಟನೆಗಳನ್ನು ಈ ಪ್ರಕೃತಿ ನಿಯಮಗಳಿಂದ ವಿವರಿಸಲು ಇಲ್ಲಿಯ ವರೆಗೂ ಸಾಧ್ಯವಾಗಿಲ್ಲ. ಯೋಗ ಸಾಮರ್ಥ್ಯದಿಂದ ನೀರಿನ ಮೇಲೆ ನಡೆದಾಡುವುದು, ಮಲಗಿರುವವರನ್ನು ಹಾಗೆಯೇ ಗಾಳಿಯಲ್ಲಿ ತೇಲಿಸುವುದು, ಕಣ್ಣಿನ ದೃಷ್ಟಿಯಿಂದಲೇ ಸೌಮ್ಯ, ಚಮಚಗಳನ್ನು ಬಗ್ಗಿಸುವುದು. ವಸ್ತುಗಳನ್ನು ಮಾಯಮಾಡುವುದು. ಡಾಕ್ಟರ್ ಸಂಪೂರ್ಣ ಕೈಬಿಟ್ಟ ಮೇಲೂ ಗುಣವಾಗುವುದು. ಇವೆಲ್ಲವನ್ನು ಪ್ರಕೃತಿ ನಿಯಮ ಅಥವಾ ವಿಜ್ಞಾನದ ಮೂಲಕ ಹೇಗೆ ವಿವರಿಸುವುದು ?

ಈ ದೃಷ್ಟಿಯಿಂದ ನೋಡಿದಾಗ ಮಾತ್ರ ಇಡೀ ಬೈಬಲ್‌ನಲ್ಲಿ ಉಲ್ಲೇಖವಾಗಿರುವ ಪವಾಡಗಳ ನಿಜ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಒಂದು ನೋಡಲೂ, ಯೆಹೂದ್ಯರಿಗೆ ಅತಿ ದೊಡ್ಡ ಪವಾಡವೆಂದರೆ ಇಸ್ರಾಯೇಲರು ಕೆಂಪು ಕಡಲನ್ನು ದಾಟಿದ ಘಟನೆ. ಆದರೆ ಇತಿಹಾಸದ ಆಧಾರಗಳ ಪ್ರಕಾರ ಅವರು ಮಾಡಿದ್ದು ಕೆಂಪು ಸಮುದ್ರವನ್ನಲ್ಲ, ಅಂದರೆ ರೆಡ್ ಸೀ ಅಲ್ಲ, ಅದು ರೀಡ್ ಸೀ. ಕೆಂಪು ಸಮುದ್ರಕ್ಕೆ ಉತ್ತರಕ್ಕಿರುವ, ಚಳಿಗಾಲದಲ್ಲಿ ನೀರು ತುಂಬಿಕೊಳ್ಳುವ ಜವುಗು ಪ್ರದೇಶ. ಈ ರೀಡ್ ಸೀ ಎನ್ನಲಾಗಿದೆ. ಸಮುದ್ರದ ಅಲೆಗಳ ಉಬ್ಬರ ಮತ್ತು ಇಳಿತದ ಆಧಾರದ ಮೇಲೆ ಇಲ್ಲಿ ನೀರು ಹೆಚ್ಚಾಗುತ್ತಲೂ ಕಡಿಮೆಯಾಗುತ್ತಲೂ ಇರುತ್ತದೆ. ಇಂಥಾ ಒಂದು ಸಂದರ್ಭದಲ್ಲಿ ಇಸ್ರಾಯೇಲರು ಇದನ್ನು ದಾಟಿರಬಹುದು ಆದರೂ ಇಸ್ರಾಯೇಲರ ನಂಬಿಕೆಯಲ್ಲಿ ಇದೊಂದು ದೊಡ್ಡ ಪವಾಡ ಇಲ್ಲಿ ವಸ್ತುನಿಷ್ಠ ಘಟನೆ ಅಥವಾ ಪವಾಡಕ್ಕಿಂತ ನಂಬಿಕೆಯೇ ಪ್ರಧಾನವಾಗಿರುವುದನ್ನು ಗಮನಿಸಬೇಕು.

“ಕ್ರಿಸ್ತನ ಜೀವನದಲ್ಲೂ ಇದು ಸತ್ಯ. ಕ್ರಿಸ್ತನ ಇಡೀ ಜೀವನ ತೆಗೆದುಕೊಂಡರೆ, ಅಲ್ಲಿ ನಮಗೆ ಪ್ರಮುಖವಾಗಿ ಕಂಡುಬರುವ ಅಂಶಗಳು ಎರಡು. ಕ್ರಿಸ್ತ ಮಾಡದ ಬೋಧನೆ ಮತ್ತು ಪವಾಡಗಳು. ಶುಭ ಸಂದೇಶಗಳನ್ನು ಬರೆದವರು ಕೂಡ ತಮ್ಮ ಬರವಣಿಗೆಯಲ್ಲಿ ಇದೇ ಅನುಸರಿಸುತ್ತಾರೆ. ಇಲ್ಲಿ ಉಲ್ಲೇಖವಾಗಿರುವ ಬೋಧನೆ ಮತ್ತು ಪವಾಡಗಳು ಕೂಡ ಅಧಿಕೃತವಾಗಿ ದಾಖಲಾಗಿದ್ದಲ್ಲ. ಕ್ರಿಸ್ತನ ಮಾತು ಮತ್ತು ಕಾರ್ಯಗಳು ಬಾಯಿಯಿಂದ ಬಾಯಿಗೆ ಹಬ್ಬಿ, ವರ್ಷಗಳು ಕಳೆದಂತೆ ಹಲವು ಬದಲಾವಣೆ ಕಂಡು ಉತ್ಪ್ರೇಕ್ಷೆ, ವೈಯಕ್ತಿಕ ದೃಷ್ಟಿಕೋನಗಳನ್ನು ಮೈಗೂಡಿಸಿಕೊಂಡು ಮೂಲಕ್ಕಿಂತ ಭಿನ್ನವಾಗಿರುವ ಸಾಧ್ಯತೆಗಳು ಇಲ್ಲದಿಲ್ಲ.

ಬೋಧನೆಗಿಂತ ಪವಾಡಗಲೇ ಹೆಚ್ಚು ಆಕರ್ಷಕ ಮತ್ತು ರಂಜನೀಯ. ಅವು ಬಾಯಿಂದ ಬಾಯಿಗೆ ಹಬ್ಬುವಾಗಲೇ ಹೆಚ್ಚು ಆಲಂಕಾರಿಕ, ಅತಿಶಯೋಕ್ತಿಗಳಿಗೆ ಒಲಿಯಾಗಿರುವ ಸಾಧ್ಯತೆಗಳೇ ಹೆಚ್ಚು. ಹೀಗೆ, ಪವಾಡಗಳಲ್ಲದೆ ಎಷ್ಟೋ ವಿಷಯಗಳು ಪವಾಡಗಳೆಂಬಂತೆ ಬಣ್ಣಿಸಲ್ಪಟ್ಟಿರುವ ಸಾಧ್ಯವಿದೆ. (ಉದಾ: ನೀರಿನ ಮೇಲೆ ನಡಿಗೆ, ಸಾವಿರಾರು ಜನರಿಗೆ ಭೋಜನ ನೀಡಿದ್ದು, ಅಂಜೂರ ಮರ ಶಪಿಸಿದ್ದು, ಇತ್ಯಾದಿ). ಇವು ಪವಾಡಗಳೇ ಅಲ್ಲವೇ ಎಂಬ ಪ್ರಶ್ನೆ ಇಲ್ಲಿ ಮುಖ್ಯವಲ್ಲ. ಕ್ರಿಸ್ತನ ಮಾನವೀಯತೆ ಕಾಳಜಿ, ಆತನ ವ್ಯಕ್ತಿತ್ವ, ಆತನಲ್ಲಿದ್ದ ಶ್ರದ್ಧೆ ಮತ್ತು ಆತ್ಮವಿಶ್ವಾಸದಿಂದ ಇವು ಸಾಮಾನ್ಯ ವಿಷಯಗಳಂತೆ ನಡೆದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಈ ಅಂಶಗಳನ್ನೆಲ್ಲಾ ಗಮನಿಸಿದ ಮೇಲೂ ಕ್ರಿಸ್ತನ ಪವಾಡಗಳನ್ನು ನಾವು ನಿರಾಕರಿಸಲು ಸಾಧ್ಯವಿಲ್ಲ. ಕ್ರಿಸ್ತ ರೋಗಿಗಳನ್ನು ಗುಣಪಡಿಸಿದ್ದು, ದೆವ್ವಗಳನ್ನು ಉಚ್ಚಾಟಿಸಿದ್ದು ನಿಜ. ಆದರೆ ಕ್ರಿಸ್ತ ಈ ಪವಾಡಗಳ ಬಗ್ಗೆ ಅಷ್ಟು ಒಲವು ತೋರದೆ ಇದ್ದುದನ್ನು ಇಲ್ಲಿ ಗಮನಿಸಬೇಕು. ಹಲವೊಮ್ಮೆ ಈ ಪವಾಡಗಳನ್ನು ನೇರವಾಗಿಯೇ ಖಂಡಿಸುತ್ತಿದ್ದರು. ಈ ಪೀಳಿಗೆ ಕೆಟ್ಟ ಪೀಳಿಗೆ. ಇದು ಅದ್ಭುತ ಕಾರ್ಯವನ್ನು ಸಂಕೇತವಾಗಿ ತೋರುತ್ತದೆ." ಹಲವೊಮ್ಮೆ ಇಂಥ ಅದ್ಭುತಗಳನ್ನು ಭಾವಿಸಿದ್ದರು. ಬಹುಶಃ ಇದರಿಂದಲೇ ಇರಬೇಕು ಸೈತಾನನು ತಮ್ಮನ್ನು ಶೋಧಿಸಿದ ಸಂದರ್ಭದಲ್ಲಿ ಕ್ರಿಸ್ತ ಯಾವುದೇ ಪವಾಡ ಮಾಡುವ ಒತ್ತಡಕ್ಕೆ ಮಣೆಯಲಿಲ್ಲ. ಯಾವುದೇ ಮಹತ್ಕಾರ್ಯ ಮಾಡಿ ತನ್ನ ವ್ಯಕ್ತಿತ್ವವನ್ನು ಬಹಿರಂಗ ಪಡಿಸುವ ಆಸೆಯನ್ನು ಪ್ರಕಟಿಸಿರಲಿಲ್ಲ.

ಕ್ರಿಸ್ತನ ಪವಾಡಗಳನ್ನು ಚರ್ಚಿಸುವ ಪ್ರತಿಯೊಬ್ಬರೂ ಗಮನಿಸಬೇಕಾದ ಇನ್ನೊಂದು ವಿಷಯವಿದೆ. ಕ್ರಿಸ್ತ ಎಲ್ಲೂ ಕೂಡ ತನಗೆ ವಿಶೇಷ ಶಕ್ತಿಯಿದೆ ಎಂದು ತೋರಿಸಲು ಪವಾಡಗಳನ್ನು ಮಾಡಲಿಲ್ಲ. ತಾನು ದೇವರ ಮಗ ಎಂದು ಸಾಬೀತು ಪಡಿಸಲೋ, ಸಾಕ್ಷ್ಯಾಧಾರಗಳಿಗಾಗಿಯೋ ಪವಾಡಗಳನ್ನು ಮಾಡಲಿಲ್ಲ. ಅವರು ಮಾಡಿದ ಪ್ರತಿಯೊಂದು ಪವಾಡಕ್ಕೂ ಇದ್ದ ಕಾರಣ ಒಂದೇ! ಅದು ಮಾನವರ ಮೇಲಿನ ಅನುಕಂಪ. ಆ ಜನರನ್ನು ಅವರ ಮೂಢನಂಬಿಕೆ, ಅಂಧತ್ವ, ನಿರಂತರ ಶೋಷಣೆಯಿಂದ ಬಿಡಿಸಿ ಹೊಸ ಬದುಕನ್ನು ನೀಡುವುದೇ ಕ್ರಿಸ್ತನ ಬದುಕು ಮತ್ತು ಆ ಬದುಕಿನ ಗುರಿ ಆಗಿತ್ತು.

ಕ್ರಿಸ್ತನ ಪವಾಡಗಳಿಗೆ ಸಂಬಂಧಿಸಿದಂತೆ ಇನ್ನೊಂದು ವಿಷಯವನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈ ಪವಾಡಗಳು ನಡೆದದ್ದೇ ಆದರೆ, ಅದು ಪ್ರತಿಯೊಬ್ಬನ ಒಳಗಿನ ದೃಢವಾದ ವಿಶ್ವಾಸದಿಂದ ಎಂದು ಕ್ರಿಸ್ತ ನಂಬಿದ್ದರು. ಅದು ಅವನವನ ಶ್ರದ್ಧೆ ಆತ್ಮವಿಶ್ವಾಸ ಎನ್ನಲೂಬಹುದು. ಒಬ್ಬನಲ್ಲಿ ಆತ್ಮವಿಶ್ವಾಸ ತೋರಿಸಿದರು, ಹೀಗೆ ಪ್ರತಿಯೊಬ್ಬರಲ್ಲಿಯೂ ಇಂಥಾ ಆತ್ಮವಿಶ್ವಾಸ ಮೂಡಿಸಿ ಆ ಜನರ ಬದುಕಿಗೆ ಹೊಸ ಆಶಾಕಿರಣ ನೀಡುವುದೇ ಒಂದು ದೊಡ್ಡ ಪವಾಡವಲ್ಲವೇ?[೧೨೨]

೪.೪.೧೩ ಯೇಸುಕ್ರಿಸ್ತನ ಯೇಶ್ವಾಂದೋಲನ

ಯೇಶ್ವಾಂದೋಲನದ ಮೂಲ ಮಾತೃಕೆ ಯೇಸುವಿನ ಜೀವನ ಶೈಲಿ. ಯೇಸುಕ್ರಿಸ್ತ ಹುಟ್ಟಿದ್ದು ಅಷ್ಟೊಂದು ಖ್ಯಾತಿಯಲ್ಲದ ಒಂದು ಪುಟ್ಟ ಗ್ರಾಮ ಬೆತ್ಲೆಹೆಮ್ ಎಂಬಲ್ಲಿ. ಮರಿಯ ಆತನ ತಾಯಿ ಜೋಸೆಫ್ ಆತನ ಸಾಕು ತಂದೆ. ದೇವರ ವರಪ್ರಸಾದದಿಂದಾಗಿ ಮರಿಯಳು ಯೇಸುಕ್ರಿಸ್ತನಿಗೆ ಜನ್ಮ ನೀಡಿದಳು. ಆ ಕಾಲದಲ್ಲಿ ಚಕ್ರವರ್ತಿ ಔಗುಪ್ತನು ತನ್ನ ಸಾಮ್ರಾಜ್ಯದಲ್ಲೆಲ್ಲಾ ಜನಗಣತಿಯಾಗಬೇಕೆಂದು ಆಜ್ಞೆ ಹೊರಡಿಸಿದನು. ಆಗ ಎಲ್ಲರೂ ತಮ್ಮ ಹೆಸರನ್ನು ದಾಖಲೆ ಮಾಡಿಸಿಕೊಳ್ಳಲು ತಮ್ಮ ತಮ್ಮ ಊರುಗಳಿಗೆ ಹೊರಟರು. ಜೋಸೆಫನು ದಾವೀದ ಮನೆತನದವನು ಹಾಗೂ ಗೋತ್ರದವನು. ಆದುದರಿಂದ ಅವನು ಗರಿಕೇಯ ಪ್ರಾಂತ್ಯದ ನಜರೇತ್ ಎಂಬ ಊರಿನಿಂದ ಹೊರಟು ಜುದೇಯ ನಾಡಿನ ಬೆತ್ಲೆಹೇಮೆಂಬ ದಾವೀದನ ಊರಿಗೆ ಹೋದನು. ಆತನ ಸಂಗಡ ಆತನಿಗೆ ನಿಶ್ಚಿತಾರ್ಥಳಾಗಿದ್ದ ಹಾಗೂ ಪೂರ್ಣ ಗರ್ಭವತಿಯಾಗಿದ್ದ ಮರಿಯಳು ಸಹ ಹೋದಳು. ಹೀಗೆ ಅವರು ಬೇತ್ಲೆ ಹೇಮಿನಲ್ಲಿದ್ದಾಗ, ಮರಿಯಳಿಗೆ ಪ್ರಸವ ಕಾಲ ಸಮೀಪಿಸಿತು. ಆಕೆ ಚೊಚ್ಚಲು ಮಗನಿಗೆ ಜನ್ಮವಿತ್ತು, ಇದ್ದ ಬಟ್ಟೆಯಲ್ಲೇ ಸುತ್ತಿ, ಅದನ್ನು ಗೋದಲಿಯಲ್ಲಿ ಮಲಗಿಸಿದಳು. ಕಾರಣ ಛತ್ರದಲ್ಲಿ ಅವರಿಗೆ ಸ್ಥಳ ಸಿಗಲಿಲ್ಲ. ಇದು ಯೇಸುಕ್ರಿಸ್ತನ ಜನನದ ರೀತಿ ಎಂಬುದನ್ನು ಲೂಕನು ತನ್ನ ಶುಭ ಸಂದೇಶದ ಎರಡನೇ ಅಧ್ಯಾಯದಲ್ಲಿ ದಾಖಲಿಸುತ್ತಾನೆ. ಯೇಸುಕ್ರಿಸ್ತನು ಕುಲದಿಂದ ಇಸ್ರೇಲ್ ಜನಾಂಗದ ಯಾಜಕರಲ್ಲದ (Non-Priestly) ಕುಲಕ್ಕೆ ಸೇರಿದವನು. ಆತನ ಸಾಕು ತಂದೆ ಜೋಸೆಫನು ವೃತ್ತಿಯಿಂದ ಬಡಗಿ. ಅದೇ ರೀತಿ ಯೇಸುಕ್ರಿಸ್ತನು ಬಡಗಿ ವೃತ್ತಿಯನ್ನು ಕಲಿತದ್ದು ಸಹಜವಾಗಿತ್ತು. ಯೇಸುಕ್ರಿಸ್ತನ ಕಾಲದಲ್ಲಿ ಈತನ ಮಾತೃಭೂಮಿ ಪಾರೆಸ್ತೇನ್ ದೇಶ ರೋಮ್ ಚಕ್ರಾಧಿಪತ್ಯದ ದಾಸ್ಯತನದಲ್ಲಿತ್ತು.

"ಯೇಸುವಿಗೆ ಅಂದಿನ ಪಂಡಿತರ ಭಾಷೆಗಳಾದ ಗ್ರೀಕ್, ಲ್ಯಾಟಿನ್, ಯೆಹೂದಿಗಳ ಸಂಸ್ಕೃತವೆನಿಸಿದ್ದ ಹಿಬ್ರೂ ಇವುಗಳನ್ನು ಆತ ಮಾತನಾಡುತ್ತಿರಲಿಲ್ಲ. ಒಂದು ಸಣ್ಣ ಜನ ಸಮುದಾಯದ ಭಾಷೆಯಾಗಿದ್ದ ಆರಾಮಾಯಿಕ ಅವನ ಮಾತೃಭಾಷೆಯಾಗಿತ್ತು. ಹೀಗೆ ಎಲ್ಲ ದೃಷ್ಟಿಯಿಂದಲೂ ಯೇಸು, ಒಂದು ಸಣ್ಣ ಸಮಾಜದಲ್ಲಿ / ಸಂಪ್ರದಾಯದಲ್ಲಿ (Little tradition) ಹುಟ್ಟಿ ಆರಂಭದಲ್ಲಿ ಯಾರ ಗಮನವನ್ನೂ ಸೆಳೆಯದೆ, ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆಳೆದ ಒಬ್ಬ ಐತಿಹಾಸಿಕ ವ್ಯಕ್ತಿ ಆಗಿದ್ದನು.

ಯೇಸು ದೈಹಿಕವಾಗಿ ಬೆಳೆದಂತೆ, ತನ್ನ ಮನೋಪಾತಳಿಯಲ್ಲಿ ಪ್ರಜ್ಞಾವಂತನಾಗಿ ಬೆಳೆದನು. ಆತ

ತೆರೆದ ಕಣ್ಣುಗಳಿಂದ, ಕಿವಿಗಳಿಂದ ಮತ್ತು ಮನಸ್ಸಿನಿಂದ ತನ್ನ ಸುತ್ತಮುತ್ತಲಿನ ಸಮಾಜವನ್ನು ಗಮನಿಸಿದ. ಅಲ್ಲಿ ತಾಂಡವವಾಡುತ್ತಿದ್ದ ಮೋಸ, ಅನ್ಯಾಯ, ಕಪಟತನ, ಧಾರ್ಮಿಕ ಡಾಂಭಿಕತನ ಇವುಗಳನ್ನೆಲ್ಲವನ್ನೂ ಗಮನಿಸಿ ನೊಂದುಕೊಂಡನು. ದಾರಿದ್ರ್ಯತನದಲ್ಲಿ ಸಿಕ್ಕು ಬೆಂಡಾಗಿ ಹೋಗಿದ್ದ ಜನರನ್ನು ಶೋಷಣೆಗೆ ಒಳಗಾಗಿದ್ದ ದಲಿತರನ್ನು ಕಂಡು ಮರುಗಿದನು. ಇಷ್ಟಕ್ಕೆಯೇ ಸುಮ್ಮನಾಗದೆ ಅಂತ್ಯಜರ ಈ ಚಿಂತಾಜನಕ ಪರಿಸ್ಥಿತಿಯ ಕಾರಣಗಳ ಅನ್ವೇಷಣೆ ಮಾಡತೊಡಗಿದನು."[೧೩೪]

ದಿನ ಬೆಳಗಾದರೆ ಯೇಸುಕ್ರಿಸ್ತ ತನ್ನ ಸಮಾಜದಲ್ಲಿ ನಡೆಯುತ್ತಿದ್ದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಅನ್ಯಾಯಗಳನ್ನು ಕಂಡು ಚಿಂತಿತನಾದ. ಸಾಮಾಜಿಕ ಕಳಕಳಿ ಮತ್ತು ಚಿಂತನೆಯಲ್ಲಿ ತೊಡಗಿದ್ದ ಯೇಸು. ಆ ಕಾಲದಲ್ಲಿ ಸ್ನಾನಿಕ ಅರುಳಪ್ಪ ಧಾರ್ಮಿಕ ಕಪಟಿಗಳ ಬೂಟಾಟಿಕೆಯನ್ನು ಖಂಡಿಸುತ್ತಾ ಪಾಪಕ್ಕೆ ವಿಮುಖರಾಗಿ ದೇವರಿಗೆ ಅಭಿಮುಖರಾಗಿ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು - ಸಾತ್ವಿಕ ಜೀವನ ನಡೆಸಿ ಋಜುಮಾರ್ಗದಿಂದ ಗಳಿಸಿ ಎಯೋ ಎಂಬುದಾಗಿ ಹೃದಯ ಪರಿವರ್ತನೆಯನ್ನು ಮಾಡುತ್ತಾ ಜನರಿಗೆ ದೀಕ್ಷಾಸ್ನಾನ ಕೊಡುತ್ತಿದ್ದ. ಈತನ ಬೋಧನೆಗೆ ಮಾರುಹೋಗಿ ಅನೇಕರು ಈತನ ಶಿಷ್ಯರಾದರು. ಸ್ನಾನಿಕ ಯೆವಾನ್ನ ಯೇಸುಕ್ರಿಸ್ತನನ್ನು ಯೆಹೂದಿ ಜನಾಂಗ ಎದುರು ನೋಡುತ್ತಿದ್ದ ರಕ್ಷಕ ಈತನೇ ಎಂಬುದನ್ನು ತೋರಿಸಿಕೊಟ್ಟನು. ವಾಡಿಕೆಯಂತೆ ಯೇಸುಕ್ರಿಸ್ತನು ಸಹ ಸ್ನಾನಿಕ ಅರುಪ್ಪನಿಂದ ಸ್ನಾನದೀಕ್ಷೆ ಪಡೆದನು.[೧೩೫]

ಆನಂತರ ಯೇಸುಕ್ರಿಸ್ತ ಪವಿತ್ರಾತ್ಮಭರಿತನಾಗಿ ಬೆಂಗಾಡು ಪ್ರದೇಶಕ್ಕೆ ಬಂದು ೪೦ ದಿನ ಅಲ್ಲಿ ಉಪವಾಸ ಪ್ರಾರ್ಥನೆ ಜಪ ತಪಗಳಲ್ಲಿ ಕಳೆದು ಸೈತಾನನಿಂದ ಶೋಧಿಸಲ್ಪಟ್ಟನು. ನಂತರವೇ ಯೇಸುಕ್ರಿಸ್ತ ಪವಿತ್ರಾತ್ಮ ಶಕ್ತಿಯಿಂದ ಕೂಡಿ ಗಲಿಲೇಯಕ್ಕೆ ಮರಳಿ ಬಂದು ಅಲ್ಲಿಯ ಪ್ರಾರ್ಥನಾ ಮಂದಿರಗಳಲ್ಲಿ ಹಳ್ಳಿ ಪಳ್ಳಿಗಳಲ್ಲಿ ತನ್ನ ಬೋಧನಾ ಕಾರ್ಯವನ್ನು ಆರಂಭಿಸಿದನು.[೧೩೬]

ಯೇಸುಕ್ರಿಸ್ತ ತನ್ನ ಸುತ್ತಮುತ್ತಲಿನ ಸಾಮಾಜಿಕ ಹಾಗೂ ರಾಜಕೀಯ ಧಾರ್ಮಿಕ ರಂಗಗಳ ಒಳಹೊಕ್ಕು ಆಳವಾಗಿ ಚಿಂತಿಸತೊಡಗಿದನು. ಇದೇಕೆ ಈ ಬಡವರು, ನಿರ್ಗತಿಕರು, ಸಮಾಜದಲ್ಲಿ ತುಳಿತಕ್ಕೆ ಒಳಗಾದವರು ಈ ರೀತಿ ಹೀನಾಯವಾದ ಜೀವನವನ್ನು ನಡೆಸುತ್ತಿದ್ದಾರೆ. ಇವರ ಗುಲಾಮ ಗಿರಿಗೆ ಈ ಇಸ್ರೇಲ್ ಜನಾಂಗದ ಶೋಷಣೆಗೆ ಕಾರಣವೇನು ಎಂದು ಆಲೋಚಿಸತೊಡಗಿದನು. ಆಗ ಅವನಿಗೆ ಕಣ್ಣಿಗೆ ರಾಚಿದ ಸತ್ಯ ಇದಕ್ಕೆಲ್ಲಾ ಕಾರಣ ದುಷ್ಟ, ಧನದಾಹಿ ಮಠಾಧಿಪತ್ಯ ಸಂಸ್ಥಾನ ಎಂಬುದು ಅರಿವಾಯಿತು. ಹೀಗೆ ಈ ಹೊಸ ಹೊಳಹನ್ನು ಅರಿತ ಯೇಸುಕ್ರಿಸ್ತ ಇದಕ್ಕೆ ಪರಿಹಾರವೆಂಬಂತೆ ಮಠಾಧಿಪತ್ಯದ ಮೌಲ್ಯಗಳನ್ನು ಬೇರುಸಹಿತ ಕಿತ್ತೊಗೆದು ಶೋಷಣೆ ರಹಿತ ಹೊಸ ಸಮಾಜವನ್ನು ರೂಪಿಸಲು ಅಹಿಂಸಾತ್ಮಕ ಆಂದೋಲನವನ್ನು ಆರಂಭಿಸಿದ.

ಪುರೋಹಿತಶಾಹಿಯು ದೇವರ ಆಲಯವನ್ನು ವ್ಯಾಪಾರಿಗಳ ಸಂತೆಯನ್ನಾಗಿ ಮಾಡಿತ್ತು. ಅದಕ್ಕೆ

ಯೇಸುಕ್ರಿಸ್ತ ದೇವಾಲಯ ಪೂಜೆಯನ್ನು ಖಡಾಖಂಡಿತವಾಗಿ ನಿರಾಕರಿಸಿ ದೇವಾಲಯದಲ್ಲಿ ದೇವರನ್ನು ಒಲಿಸಿಕೊಳ್ಳಲು ನಡೆಸುತ್ತಿದ್ದ ಯಜ್ಞ-ಯಾಗಾದಿ-ಬಲಿಗಳನ್ನೆಲ್ಲಾ ತಿರಸ್ಕರಿಸಿ 'ನನಗೆ ಬೇಕಾಗಿರುವುದು ದಯೆ ಯಜ್ಞ ಬರಿಯಲ್ಲ' (ಮತ್ತಾಯ ೯:೧೩) ಎಂದು ಹೇಳುವುದರ ಮೂಲಕ ಯಜ್ಞ-ಯಾಗಾದಿಗಳನ್ನು ಮಾಡಿ ಒಂದಕ್ಕೆ ಎರಡರಷ್ಟು ಹಣ ಮಾಡುತ್ತಿದ್ದ ದೇವಾಲಯ ಪೂಜೆಗಳನ್ನು ಅದರ ಹಿಂದಿದ್ದ ಧನದಾಹಿ ಪುರೋಹಿತಶಾಹಿಯನ್ನು ಒಂದೇ ಏಟಿಗೆ ನಿರಾಕರಿಸಿದನು.

ಯೇಸುಕ್ರಿಸ್ತನಿಗೆ ಇದರ ಪರಿಣಾಮ ಎಂತಹದೆಂಬುದರ ಅರಿವಾಯಿತು. ಈ ಮೂಲಕ ಮಠಾಧಿಪತ್ಯ ಸಂಸ್ಥಾನಕ್ಕೆ ಗದಾಪ್ರಹಾರ ಮಾಡಲು ಮುಂದಾಗಿದ್ದ. ಗುಡಿಪೂಜೆಯನ್ನು ನಿರಾಕರಿಸಿದ. ಯೇಸು ಅಲ್ಲಿಗೆ ಸುಮ್ಮನಾಗಲಿಲ್ಲ. ಬದಲಾಗಿ ಭಾವಪೂಜೆಗೆ ಅಗ್ರಸ್ಥಾನ ನೀಡಿದ. ಇದನ್ನು ಯೆವಾನ್ನ ತನ್ನ ಶುಭಸಂದೇಶದ ನಾಲ್ಕನೇ ಅಧ್ಯಾಯದ ಯೇಸುಕ್ರಿಸ್ತ ಮತ್ತು ಸಮಾರಿಯದ ಮಹಿಳೆಯ ನಡುವಿನ ಸಂಭಾಷಣೆಯಲ್ಲಿ ದಾಖಲಿಸಿದ್ದಾನೆ. ಆ ಸಮಾರಿಯದ ಮಹಿಳೆ ಜ್ಞಾನ ಆರಾಧನೆಯ ಬಗ್ಗೆ ನಾನಾ ಪ್ರಶ್ನೆ ಕೇಳುತ್ತಾ ದೇವರನ್ನು ಆರಾಧಿಸಲು ಆ ಬೆಟ್ಟಕ್ಕೆ, ಈ ಬೆಟ್ಟಕ್ಕೆ, ಆ ಕಾಡಿಗೆ, ಈ ಗುಡಿಗೆ ಹೋಗಬೇಕಾಗಲ್ಲ? ಎಂದು ಕೇಳುವಾಗ ಯೇಸುಕ್ರಿಸ್ತನ ಹೇಳಿದ ಉತ್ತರ ಎಲ್ಲರನ್ನು ತಬ್ಬಿಬ್ಬಾಗುವಂತೆ ಮಾಡಿತು. ತಾನೆಷ್ಟು ಭಾವಪೂಜೆ ಒತ್ತು ನೀಡುತ್ತೇನೆಂಬುದನ್ನು ತೋರಿಸಿದ. ತಾಯಿ ನಾನು ಹೇಳುವುದನ್ನು ಕೇಳು. ದೇವರು ಆತ್ಮ ಸ್ವರೂಪಿ. ಅಂತಹ ದೇವರ ಆರಾಧನೆಗೆ ನೀನು ಈ ಬೆಟ್ಟಕ್ಕೂ ಬರಬೇಕಿಲ್ಲ ಜೆರೂಸಲೇಮಿಗೂ ಹೋಗಬೇಕಾಗಿಲ್ಲ. ದೇವರನ್ನು ಆರಾಧಿಸಬೇಕಾದವರು ಆತನನ್ನು ತಮ್ಮನ್ನು ಆರಾಧಿಸಬೇಕೆಂದು ದೇವರು ಆಶಿಸುತ್ತಾರೆ." ಈ ರೀತಿ ಹೇಳುವುದರ ಮೂಲಕ ಯೇಸು ಗುಡಿಪೂಜೆಯನ್ನು ನಿರಾಕರಿಸಿ ಭಾವಪೂಜೆಗೆ ಅಗ್ರಸ್ಥಾನ ಕೊಟ್ಟದ್ದನ್ನು ನಾವು ಕಾಣುತ್ತೇವೆ. 'ಪರರ ಸೇವೆಯೆ ಪರಮಾತ್ಮನ ಸೇವೆ' ಎಂಬ ನಾಣ್ಣುಡಿಯನ್ನು ಯೇಸುಕ್ರಿಸ್ತ ಬಲವಾಗಿ ನಂಬಿದ್ದ ಎನ್ನುವುದನ್ನು ಆತನ ಬೋಧನೆಗಳಿಂದಲೇ ತಿಳಿಯಬಹುದು. ಮನುಷ್ಯ ಎಷ್ಟು ಕನಿಷ್ಠನಿರಲಿ ಅವನಿಗೆ ನೀವು ಹಸಿದಿದ್ದಾಗ ಆಹಾರ, ಬಾಯಾರಿದ್ದಾಗ-ನೀರು, ಬಟ್ಟೆ ಬರೆ ಇಲ್ಲದಿದ್ದಾಗ ಉಡುಪು, ಅಪರಿಚಿತನಾಗಿದ್ದಾಗ ಆಶ್ರಯ; ರೋಗಿಯಾಗಿದ್ದಾಗ-ಆರೈಕೆ, ಬಂಧಿಯಾಗಿದ್ದಾಗ-ಭೇಟಿ ಮಾಡಿದ್ದರೆ ಅದನ್ನು ನನಗೇ ಮಾಡಿದಂತೆ. ದೇವರನ್ನು ಗುಡಿ-ಗುಡಾರಗಳಲ್ಲಿ ಹುಡುಕುವುದಕ್ಕಿಂತ ದೀನದಲಿತರಲ್ಲಿಯೇ ಅವನನ್ನು ಕಾಣಬೇಕೆಂಬುದು ಯೇಸುವಿನ ವಾಣಿಯಾಗಿತ್ತು.[೧೩೭]

ಯೇಸುಕ್ರಿಸ್ತ ತನ್ನ ಬಳಿ ಬಂದ ಸರ್ವಜನರನ್ನು ಶಿಷ್ಯರನ್ನು, ಸ್ತ್ರೀ-ಮಕ್ಕಳನ್ನು ಸಮಭಾವದಿಂದ ನೋಡಿದ. ತೋರಿಕೆಯ ಶಿಷ್ಟ ಸಮಾಜದಿಂದ ಬಹಿಷ್ಕೃತರಾದವರು ಯೇಸುವಿನಿಂದ ಸ್ವೀಕೃತರಾದರು. ಜೀವನದ ಜಂಜಾಟದಲ್ಲಿ ಸಿಲುಕಿ ಬಳಲಿ ಬೆಂಡಾದ ಜನರನ್ನು ಯೇಸುಕ್ರಿಸ್ತ ಪ್ರೀತಿಯಿಂದ ತನ್ನೆಡೆಗೆ ಆಹ್ವಾನಿಸಿದ. ದುಡಿದು, ಬಾರಹೊತ್ತು, ಬಳಲಿ ಬೆಂಡಾಗಿರುವ ಸರ್ವಜನರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುತ್ತೇನೆ. ನಾನು ವಿನಯಶೀಲನು, ದೀನಹೃದಯನು; ನನ್ನ ನೊಗಕ್ಕೆ

ಹೆಗಲು ಕೊಟ್ಟು ನನ್ನಿಂದ ಕಲಿತುಕೊಳ್ಳಿ. ಆಗ ನಿಮಗೆ ವಿಶ್ರಾಂತಿ ಸಿಗುವುದು. ನನ್ನ ನೊಗಹಗುರ ನನ್ನ ಹೊರೆ ಸುಗಮ."[೧೩೮]

ಈ ಬೋಧನೆಗೆ ಮಾರುಹೋದ ತಳ ಸಮುದಾಯದವರು, ಜೀವನದಲ್ಲಿ ಬೆಂದು ಬಸವಳಿದವರು ಎಲ್ಲರು ಯೇಸುವಿನ ಬಳಿ ಬಂದರು. ಯೇಸುವಿನ ಅಂತಿಮ ಭೋಜನ ಹೊಸಪೂಜೆಗೆ ನಾಂದಿ ಹಾಡಿತು. ಈ ಭೋಜನದ ಮೂಲಕ ತನ್ನನ್ನೇ ಪರರ ಸೇವೆಗೋಸ್ಕರ ಅರ್ಪಿಸುವ ಹೊಸಪೂಜಾ ವಿಧಾನವೊಂದನ್ನು ಯೇಸು ಸ್ಥಾಪಿಸಿದ. ಜೀವಾತ್ಮ ಹಾಗೂ ಪರಮಾತ್ಮನ ನಡುವಿನ ಅಂತರವನ್ನು ನಾಶಮಾಡಿ ಜನ ಸೇವೆಯೇ ಜನಾರ್ಧನನ ಸೇವೆ. ಮಾನವ ಸಮಾಜವೇ ದೇವಸ್ಥಾನ ಎಂಬ ಅರಿವನ್ನು ಯೇಸು ತನ್ನ ಬೋಧನೆಯ ಮೂಲಕ ಮೂಡಿಸಿದ. ನಿನ್ನನ್ನು ನೀನು ಪ್ರೀತಿಸುವಂತೆ ನಿನ್ನ ನೆರೆಯವನನ್ನು ಪ್ರೀತಿಸು[೧೩೯] "ಜನರು ನಿಮಗೆ ಏನೇನು ಮಾಡಬೇಕೆಂದು ನೀವು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಧರ್ಮಶಾಸ್ತ್ರದ ಹಾಗೂ ಪ್ರವಾದನೆಗಳ ಸಾರ ಇದೇ"[೧೪೦] ಎಂದು ಹೇಳುವುದರ ಮೂಲಕ ಮಾನವನನ್ನು ಪ್ರೀತಿಸುವುದರಲ್ಲಿ ದೇವರ ಪ್ರೀತಿ ಅಡಗಿದೆ ಎಂಬ ಸತ್ಯವನ್ನು ತನ್ನ ಚಾಲದ ಜನತೆಗೆ ಮನಗಾಣಿಸಿದ.

ಯೇಸುಕ್ರಿಸ್ತ ಬೋಧಿಸಿದ ಬೋಧನೆ ಅದ್ಭುತವಾಗಿತ್ತು. ಪಂಡಿತರ, ಶಾಸ್ತ್ರಿಗಳ, ಪುರೋಹಿತರ ಬೋಧನೆಗಿಂತ ಯೇಸುಕ್ರಿಸ್ತನ ಬೋಧನೆ ಚೇತೋಹಾರಿಯಾಗಿತ್ತು ಮನಸ್ಸಿಗೆ ಸಾಂತ್ವನ, ಧೈರ್ಯ ತುಂಬುವಂತಿತ್ತು. ಶೋಷಿತ ಸಮಾಜದ ಅಂತ್ಯಜರಲ್ಲಿ ದಲಿತರಲ್ಲಿ, ಬಡಬಗ್ಗರಲ್ಲಿ, ತಪ್ಪಾದ ವ್ಯಕ್ತಿತ್ವದ ಅಂತರ್ಯದಿಂದ ಧೈರ್ಯ ಚಿಮ್ಮಿ ಬಂತು. ಕ್ರಿಸ್ತ ಸಾರಿದ ಸಂದೇಶ, ಮಾಡಿದ ಬೋಧನೆ ಮತ್ತು ಅದ್ಭುತ ಕಾರ್ಯಗಳು ಈ ಜನರ ಉದ್ಧಾರಕ್ಕಾಗಿದ್ದವು. ಕ್ರಿಸ್ತಜನರೊಂದಿಗೆ ಬೆರೆಯುತ್ತಿದ್ದ ರೀತಿ-ನೀತಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರ ಮಾತುಗಳು ಆ ಜನರ ಮೇಲೆ ಹೆಚ್ಚು ಪ್ರಭಾವ ಬೀರಿ, ಒಂದು ಹೊಸ ಭರವಸೆಯನ್ನು ಮೂಡಿಸಿದವು. ಈ ಭರವಸೆ ಕೂಡ ಬದುಕಿನ ನಂತರ ಸಿಗುವ 'ಸ್ವರ್ಗ'ದ ಮುಕ್ತಿಯಲ್ಲ. ಈ ಬದುಕಿನಲ್ಲೆ ಹೊಸತನದ ಭರವಸೆ ಆಗಿತ್ತು.

"ಜನ ಹಳೆಯ ಗೊಡ್ಡು ಸಂಪ್ರದಾಯಗಳನ್ನು ಕಂದಾಚಾರಗಳನ್ನು ತ್ಯಜಿಸಿ ಮುಕ್ತ ವಾತಾವರಣದಲ್ಲಿ, ಪರಸ್ಪರ ಪ್ರೀತಿಯಿಂದ ಬಾಳಲು ಕಲಿತುಕೊಂಡರು. ತಾವು ಕಂಡುಕೊಂಡ ಹೊಸ ಬೆಳಕಿನಲ್ಲಿ ನಡೆಯಲು ಯಾವುದೇ ಪುರೋಹಿತಶಾಹಿಯ ಅಗತ್ಯ ಅವರಿಗೆ ಕಂಡುಬರಲಿಲ್ಲ. ಈ ಸಾಮಾಜಿಕ ಬದಲಾವಣೆಗೆ ಮೂಲ ಕಾರಣನಾದ ಯೇಸುವನ್ನು ಅವರು ತಮ್ಮ ತಾರಕ, ನಾಯಕ, ಪ್ರೇರಕ, ಪೋಷಕ, ವಿಮೋಚಕನೆಂದು ಉದ್ಘೋಷಿಸಿದರು. ಯೇಸುಕ್ರಿಸ್ತ ಆರಂಭಿಸಿದ ಈ ಯೇಶ್ವಾಂದೋಲನಕ್ಕೆ ಶೋಷಿತ ಜನರು ಗುಂಪುಗುಂಪಾಗಿ ಬಂದು ಸೇರತೊಡಗಿದರು. ಕ್ರಿಸ್ತ ತನ್ನ ಆಂದೋಲನದ ಬಗ್ಗೆ ಖಚಿತ ಮನಸ್ಸುಳ್ಳವನಾಗಿದ್ದನು. ಯೇಶ್ವಾಂದೋಲನದ ಪ್ರಕಾರ ಪರಮಾತ್ಮನೇ ಸಕಲ ವಸ್ತು ಹಾಗೂ ಜೀವರಾಶಿಗಳ ಆಧಾರವಾಗಿತ್ತು.

ಆತನಿಂದಲೇ ವಿಶ್ವದ ಹಾಗು ಹೋಗುಗಳು ನಡೆಯುತ್ತವೆ. ಪ್ರಜ್ಞಾವಂತನಾದ ಮಾನವ ತನ್ನ ಅಹಂಮಿಕೆಯನ್ನು ಕಳೆದಾಗ ಆತನ ಅಂತಸ್ತವಾಗಿರುವ ದಿವ್ಯಶಕ್ತಿ ಜಾಗೃತಗೊಂಡು ಪೂರ್ಣತ್ವದೆಡೆಗೆ ಆತನನ್ನು ಸಾಗಿಸುತ್ತದೆ.

ಯೇಶ್ವಾಂದೋಲನದಲ್ಲಿ ಪರಮಾತ್ಮನ್ನು ಯೇಸುಕ್ರಿಸ್ತ ನಮ್ಮ ತಪ್ಪು-ಒಪ್ಪುಗಳನ್ನು ತಿಳಿದುಕೊಂಡಿರುವ ಕರುಣಾಳು ತಾಯ್ತಂದೆ ಎಂಬಂತೆ ಜನರಿಗೆ ತಿಳಿಹೇಳಿದ. ಮಾನವ, ಪರಮಾತ್ಮನ ಬಾಹ್ಯಾಭಿವ್ಯಕ್ತಿಯಾದರೂ ಕರ್ತಾರನಂತೆ ಪರಿಪೂರ್ಣನಲ್ಲ. ತನ್ನ ವಿಕಾಸ ಪಥದಲ್ಲಿ ಮುನ್ನಡೆಯುತ್ತಿರುವಾಗ ಆತ ಎಡವಿ ಬೀಳುವುದು ಸಹಜ. ಆದರೆ ಆತನಿಗೆ ಸದಾ ದೈವೀಕೃಪೆಯ ಬೆಂಬಲವಿದೆ. ಅಪರಾಧಿ ಭಾವನೆಗೆ (Guilt) ಇಲ್ಲಿ ಎಡೆಯಿಲ್ಲ. ಬಿದ್ದವನು ಎದ್ದು ಮುನ್ನಡೆಯುವುದು ಮುಖ್ಯ. ಇದು ಯೇಶ್ವಾಂದೋಲನದ ಪ್ರಮುಖ ಲಕ್ಷಣಗಳೊಂದು. ಇನ್ನು ಮುಖ್ಯವಾಗಿ ಜನಪರವಾಗಿ ಬಾಳುವುದೆ ಅಧ್ಯಾತ್ಮದ ಒರೆಗಲ್ಲು. ಚೇತನಾಚೇತನ ಸೃಷ್ಟಿ ಪರಸ್ಪರ ಪೂರಕವಾಗಿದೆ. ಅದೇ ರೀತಿಯಲ್ಲಿ ಮಾನವ ಪ್ರಪಂಚದಲ್ಲಿಯೂ ಸಾಮರಸ್ಯವೇ ಜೀವನ. ಮಾನವ ಬಾಳ್ವೆ ಎಂದರೆ ಸಹಬಾಳ್ವೆ, ಭ್ರಾತೃತ್ವ ಭಾವದಿಂದ ಬಾಳುವುದೇ ಜನಪರ ಬಾಳ್ವೆ."[೧೪೧] ಇವು ಯೇಶ್ವಾಂದೋಲನದ ಪ್ರಮುಖ ಲಕ್ಷಣಗಳಾಗಿವೆ.

ಅತಿ ಸಣ್ಣದಾಗಿ ಆರಂಭಗೊಂಡ ಯೇಶ್ವಾಂದಲನ ಇಡೀ ಮನುಕುಲದ ಚರಿತ್ರೆಯನ್ನೇ ಬದಲಾಯಿಸಿತು. ಯೇಶ್ವಾಂದೋಲನವು ದಿನೇ ದಿನೇ ಜನಪ್ರಿಯವಾಗತೊಡಗಿತು. ಈ ಸಾಮಾಜಿಕ-ಧಾರ್ಮಿಕ ಬದಲಾವಣೆಗೆ ಸಹಿಸದ ಪುರೋಹಿತಶಾಹಿ ರೋಮನ್ ಅಧಿಕಾರಿಗಳೊಂದಿಗೆ ಶಾಮೀಲಾಗಿ ಕ್ರಿಸ್ತನನ್ನು ಅವಮಾನಕರ ರೀತಿಯಲ್ಲಿ ಕೊಲೆ ಮಾಡಿಸಿದರು. ಕ್ರಿಸ್ತ ಪುನರುತ್ಥಾನನಾಗಿ ತನ್ನ ಭಕ್ತ ಸಮುದಾಯದ ಅದೃಶ್ಯ ಶಕ್ತಿಯಾಗಿದ್ದುಕೊಂಡು ತನ್ನ ಶಿಷ್ಯವರ್ಗವನ್ನು ಮುನ್ನಡೆಸಿ ಕ್ರೈಸ್ತ ಸಮಾಜದ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿದ. ಹೀಗಾಗಿ ಯೇಸುಕ್ರಿಸ್ತ ಒಬ್ಬ ಶಕ ಪುರುಷನಾಗಿ ಗೋಚರಿಸಿದ. ಇಡೀ ಮನುಕುಲದ ಇತಿಹಾಸವೇ ಕ್ರಿಸ್ತಪೂರ್ವ ಹಾಗೂ ಕ್ರಿಸ್ತ ಶತವಾಗಿ ಇಬ್ಭಾಗಗೊಂಡಿತು. ಅಂದು ಕ್ರಿಸ್ತ ಆರಂಭಿಸಿದ ಯೇಶ್ವಾಂದೋಲನ ಇಂದು ಬೃಹತ್ ಪ್ರಮಾಣದಲ್ಲಿ ಕ್ರೈಸ್ತಧರ್ಮವಾಗಿ ಜಗತ್ತಿನಾದ್ಯಂತ ರಾಜಾಜಿಸುತ್ತಿದೆ.

೪.೪.೧೪ ಬಸವಣ್ಣನ ಸಮಾಜೋ-ಧಾರ್ಮಿಕಾಂದೋಲನ

ಬಸವಣ್ಣ ಕರ್ನಾಟಕದ ಬಿಜಾಪುರ ಜಿಲ್ಲೆಯ ಬಾಗೇವಾಡಿ ಗ್ರಾಮದ ಮಾದರಸ ಮತ್ತು ಮಾದಾಂಬೆಯ ಮಗನಾಗಿ ಜನಿಸಿದ. ಬಸವನು ತುಂಬ ಸಂವೇದನ ಶೀಲನೂ ಬದ್ಧಿಶಾಲಿಯೂ ಆಗಿದ್ದ. ಬಾಲ್ಯದಲ್ಲೇ ತನ್ನ ಅಗ್ರಹಾರದಲ್ಲಿ ನಡೆಯುತ್ತಿದ್ದ ಜಾತಿ ತಾರತಮ್ಯ ಕಂಡು ಚಿಂತಿತನಾದ. ಬಾಲ್ಯದಲ್ಲೇ ಪ್ರೌಢ ಮನಸ್ಸು ಬಸವಣ್ಣನದು. ಉಪನಯನವನ್ನು ತಿರಸ್ಕರಿಸಿ ಕೂಡಲಸಂಗಮಕ್ಕೆ ಆಗಮಿಸಿ ಈಶಾನ್ಯ ಗುರುಗಳ ಕೆಳಗೆ ಅಭ್ಯಾಸಿಸತೊಡಗಿದ. ಕೂಡಲಸಂಗಮವು ಬಸವನ ಆಧ್ಯಾತ್ಮಿಕ ಸಾಧನೆಯ ಸ್ಥಳವಾಗಿ ಪರಿಣಮಿಸಿತು. ಕರಣಿಕನ ಉದ್ಯೋಗ ಅರಸಿಕೊಂಡು ಕೂಡಲ ಸಂಗಮ ತೊರೆದು ಮಂಗಳವೇಢಕ್ಕೆ ಬಸವಣ್ಣ ಬಂದು ಕಾಲಕ್ರಮೇಣ ಬಿಜ್ಜಳನ ಬಂಡಾರಕ್ಕೆ ಬಂಡಾರಿಯೂ ಆದನು. ತನ್ನ ಆಶ್ರಯದಾತ ಸಿದ್ಧ ದಂಡನಾಥನ ಮರಣಾನಂತರ ಆತನ ಇಬ್ಬರು ಮಕ್ಕಳಾದ ಗಂಗಾದೇವಿ ಮತ್ತು ಮಾಯಾದೇವಿಯರನ್ನು ವಿವಾಹವಾದನು. ಆಗ ಬಸವಣ್ಣ ತನ್ನ ಬದುಕಿನ ಉಚ್ಛ್ರಾಯ ಸ್ಥಿತಿಯಲ್ಲಿದ್ದ. ಸ್ಥಾನ, ಅಧಿಕಾರ, ಖ್ಯಾತಿ ಎಲ್ಲವೂ ಅವನಿಗೆ ಲಭ್ಯವಾಗಿತ್ತು.[೧೪೨]

ಶತಮಾನದ ಅಂದರೆ ೧೨ನೇ ಶತಮಾನದಲ್ಲಿ ಬಸವಣ್ಣ ಆಚರಿಸಿ ಪ್ರಚಾರ ಮಾಡಿದ ಧರ್ಮವೇ ವೀರಶೈವ ಧರ್ಮ. ೧೨ನೇ ಶತಮಾನದಲ್ಲಿ ಕರ್ನಾಟಕ ರಾಜಕೀಯ ಅಶಾಂತಿ, ಮತಘರ್ಷಣೆಯಿಂದ ಕೂಡಿತ್ತು. ಜೈನಧರ್ಮ ಅವನತಿಯತ್ತ ಮುಖಮಾಡಿತ್ತು. ಸೋಗಿನ ಧಾರ್ಮಿಕ ಆಚರಣೆಗಳು ಜನಸಾಮಾನ್ಯರಿಗೆ ಅರ್ಥವೆ ಆಗುತ್ತಿರಲಿಲ್ಲ. ಆಗ ಯಜ್ಞ-ಯಾಗಾದಿಗಳು ಜನರಿಗೆ ಬೇಸರವನ್ನುಂಟು ಮಾಡುತ್ತಿದ್ದವು. ನಿಂತ ನೀರಾಗಿ ನಾರುತ್ತಿದ್ದ ಧಾರ್ಮಿಕ ರಂಗದಲ್ಲಿ ಹರಿವ ನೀರಾಗಿ ಮಾಡುವ ಶಕಪುರುಷನಿಗಾಗಿ ಜನತೆ ಎದುರು ನೋಡುತ್ತಿತ್ತು. ಆಗ ಬಸವಣ್ಣ ತನ್ನ ನಾಯಕತ್ವದಲ್ಲಿ ಇತರ ಶರಣರೊಡಗೂಡಿ ಸಮಾಜೋ-ಧಾರ್ಮಿಕ ಚಳುವಳಿಯನ್ನು ಆರಂಭಿಸಿದನು. ತಳ ಸಮುದಾಯದ ಉದ್ದಾರಕ್ಕಾಗಿ, ಕರುನಾಡಿಗರ ನೈತಿಕ ಪುನರುತ್ಥಾನಕ್ಕಾಗಿ, ಸಾಹಿತ್ಯದ ನೂತನ ಪ್ರಕಾರವಾಗಿ ಈ ಚಳುವಳಿ ನಡೆಯಿತೆನ್ನಬಹುದು.

ಧಾರ್ಮಿಕವಾಗಿ, ಸಾಹಿತ್ಯಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಎಲ್ಲಾ ಆಯಾಮಗಳಿಗೂ ಈ ಚಳುವಳಿ ವಿಸ್ತರಿಸಿತು. ಈ ಚಳುವಳಿ ಎಲ್ಲಾ ಜಾತಿ, ಭಾಷೆ, ಪ್ರದೇಶ ಮೀರಿ ಬೆಳೆಯಿತು. ಏಕ ಕಾಲದಲ್ಲಿ ೩೬೦ ಜನ ಶರಣರು ಭಾಗವಹಿಸಿ ತಮ್ಮ ವಿಚಾರವನ್ನು ವ್ಯಕ್ತಪಡಿಸಿದರು. ಇಂತಹ ಸಂದರ್ಭವನ್ನು

ಸ್ತ್ರೀವಾದಿ ಹಿನ್ನೆಲೆಯಿಂದ ನೋಡಿದಾಗ ಅಲ್ಲಿ ೬೦ಕ್ಕೂ ಹೆಚ್ಚು ಸ್ತ್ರೀಯರು ವಚನಕಾರ್ತಿಯಾಗಿದ್ದುದು ಅಂದಿನ ಕಾಲದ ಸ್ತ್ರೀಕುಲಕ್ಕೆ ಒಂದು ಹಿರಿಮೆಯ ಸಂಗತಿ. "ಈ ಚಳುವಳಿಯಲ್ಲಿ ಬೇರೆ ಬೇರೆ ಜಾತಿಗಳಿಂದ ಬಂದವರೆಲ್ಲ ಇದ್ದರು. ಸಮಾಜವನ್ನು ಬದಲಾವಣೆ ಮಾಡಬೇಕು, ಹೊಸ ಹೊಸ ವಿಚಾರಗಳನ್ನು ಜನರಿಗೆ ತಿಳಿಸಿಕೊಡಬೇಕು, ಜನಪರ ಆದರ್ಶಗಳನ್ನು ಜನರ ಭಾಷೆಯಲ್ಲಿಯೇ ತಿಳಿಸಬೇಕು ಎನ್ನುವ ಉದಾತ್ತ ಉದ್ದೇಶವನ್ನಿಟ್ಟುಕೊಂಡು ಹೊರಟ ಕರ್ನಾಟಕದ ಮೊದಲನೆಯ ಚಳುವಳಿ ಇದು. ಬ್ರಾಹ್ಮಣ, ಅಂಬಿಗ, ಬೇಟೆಗಾರ, ಮಡಿವಾಳ, ಅಗಸ, ಬೆಸ್ತ, ಬಡಗಿ, ರೈತ, ಅಕ್ಕಸಾಲಿಗ ಹೀಗೆ ಹಲವು ಹದಿನೆಂಟು ವೃತ್ತಿ ಜಾತಿಯರು ಅದರಲ್ಲಿ ಭಾಗವಹಿಸಿದ್ದರು. ಶಿವಾನುಭವ ಮಂಟಪದಲ್ಲಿ ಎಲ್ಲಾ ಜಾತಿಯವರು ಸಮಾನ ವೇದಿಕೆಯಲ್ಲಿ ಕುಳಿತು ಧಾರ್ಮಿಕ, ಸಾಮಾಜಿಕ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಈ ಚಳುವಳಿ ಬ್ರಾಹ್ಮಣ ಮಧುವರಸನ ಮಗಳಿಗೂ ಹೊಲೆಯರ ಹರಳಯ್ಯನ ಮಗನಿಗೂ ಶಿವದೀಕ್ಷೆ ನೀಡಿ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿತು. ಇದು ಚರಿತಾರ್ಹ ಘಟನೆ. ಈ ಘಟನೆಯಿಂದ ಕಲ್ಯಾಣ ಕ್ರಾಂತಿಯೂ ಆಯಿತು. ಸಮಾಜೋ-ಧಾರ್ಮಿಕ ಚಳುವಳಿ ಸ್ತ್ರೀಯರಿಗೆ ಧರ್ಮದಲ್ಲಿ ಸಮಾನತೆ ನೀಡಿತು. ಅಲ್ಲಿ ಸಿಕ್ಕ ವಾತಾವರಣದಿಂದಾಗಿ ಸ್ತ್ರೀಯರು ಚಿಂತಕರಾದರು- ಶಿವಾನುಭವಿಗಳಾದರು. ವಚನಕಾರರಾದುದು ಈ ಚಳುವಳಿಯ ವೈಶಿಷ್ಟ್ಯ. ಮುಕ್ತಾಯಕ್ಕ, ಅಕ್ಕಮಹಾದೇವಿ, ಸತ್ಯಕ್ಕನ ರಾಮಮ್ಮ, ಲಕ್ಷ್ಮಮ್ಮನಂತಹ ಶರಣೆಯರು ಕಾಣಿಸಿಕೊಂಡರು. ವೇಶ್ಯೆಯಾಗಿದ್ದ ಸೂಳೆ ಸಂಕವ್ವ, ಅಸ್ಪೃಶ್ಯ ಜಾತಿಗೆ ಸೇರಿದ ಕಾಳವ್ವೆ ವಚನ ಕಾರ್ತಿಯರಾದುದು ಚಳುವಳಿಯ ಸಾಧನೆ. ಶರಣ ಚಳುವಳಿ ಮೇಲುವರ್ಗದ ಶ್ರೇಷ್ಠತೆಯನ್ನು, ರಾಜನ ದೈವತ್ವವನ್ನು ಪ್ರಶ್ನಿಸಿತು. ಮೇಲು-ಕೀಳುಗಳ ತಾರತಮ್ಯದಲ್ಲಿ ಬೇಸರಗೊಂಡು ಬಹಳ ಜನರು ಈ ಚಳುವಳಿಯ ಅನುಯಾಯಿಗಳಾದರು. ಗುಜರಾತ್, ತಮಿಳುನಾಡಿ, ಆಂಧ್ರ, ಒರಿಸ್ಸಾ-ಹೀಗೆ ಭರತ ಖಂಡದ ಶಿವಭಕ್ತರು ಬಂದು ಸಂಘಟನೆ ಶಕ್ತಿಯಾಗಿ ಈ ಚಳುವಳಿಯಲ್ಲಿ ಭಾಗವಹಿಸಿದರು."[೧೪೩]

ಈ ಸಮಾಜೋ ಧಾರ್ಮಿಕ ಚಳುವಳಿಗೆ ಹೆಚ್ಚಿನ ಜನರು ಅನುಯಾಯಿಗಳಾಗಲು ಕಾರಣ ಬಸವಣ್ಣನ ವ್ಯಕ್ತಿತ್ವ ಹಾಗೂ ಆಕರ್ಷಣ ಶಕ್ತಿಯೇ ಕಾರಣ. ಸಮಾಜೋ-ಧಾರ್ಮಿಕ ಚಳುವಳಿಗೆ ಬೆನ್ನೆಲುಬಾಗಿ, ಜಾತಿ ಪದ್ಧತಿ, ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಬಸವಾದಿ ಪ್ರಥಮರು 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಬೋಧಿಸಿ ಎಲ್ಲಾ ಕಾರ್ಯಗಳು ಸಮಾನ ಎಂಬುದನ್ನು ಮನಗಾಣಿಸಿದರು. ಸಂಸ್ಕೃತದ ಜಾಗದಲ್ಲಿ ಬಸವಾದಿ ಶರಣರು ಕನ್ನಡವನ್ನು ದೇವಭಾಷೆಯನ್ನಾಗಿಸಿದರು. ವಿಪ್ರ, ಅಂತ್ಯಜ ಎಲ್ಲರೂ ಶಿವಭಕ್ತರಾದರು. ದೇವಾಲಯ ಸಂಸ್ಕೃತಿಯಲ್ಲಿ ರೂಢಿಯಲ್ಲಿದ್ದ ಅರ್ಚಕಶಾಹಿಯನ್ನು ತಪ್ಪಿಸಿ ಜನರಿಗೆ ಸುಲಭವಾಗಿ ಸಾಧ್ಯವಾಗುವ ಇಷ್ಟಲಿಂಗಾರ್ಚನೆಯನ್ನು ಜಾರಿಗೆ ತಂದು ಅದರ ಮಹತ್ವವನ್ನು ತಿಳಿ ಹೇಳಿದರು. ಶಿವ ಶರಣರೆಲ್ಲರು ಚಲಿಸುವ ದೇವಾಲಯಗಳಾಗಿ ಸ್ಥಾವರಕ್ಕಳಿವುಂಟು-ಜಂಗಮಕ್ಕಳಿವಿಲ್ಲ' ಎಂಬ ತತ್ವವನ್ನು ಪ್ರತಿಪಾದಿಸಿದರು. ಸಮಾಜೋ-ಧಾರ್ಮಿಕ ಚಳುವಳಿಯ ಹರಿಕಾರ ಬಸವಣ್ಣ ಸಂಸ್ಕೃತ ಭಾಷೆ, ಯಜ್ಞ-ಯಾಗ, ಚಾತುರ್ವರ್ಣ್ಯ ಪದ್ಧತಿ, ಪುರೋಹಿತ ಶಾಹಿ, ವೇದ ಸ್ಮೃತಿಗಳನ್ನು ನಿರಾಕರಿಸಿದ. ಮರ್ತ್ಯಲೋಕವೆಂಬುದು

ಕರ್ತಾರನ ಕಮ್ಮಟ- ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು; ಆಚಾರವೇ ಸ್ವರ್ಗ-ಅನಾಚಾರವೇ ನರಕ. ಎನ್ನುವುದರ ಮೂಲಕ ಇಹಲೋಕದ ಬದುಕಿಗೆ ರೀತಿ ರಿವಾಜುಗಳಿಗೆ ಮಹತ್ವವನ್ನು ನೀಡದ. ಇಲ್ಲಿಯ ಬದುಕಿನ ಬಗೆಗೆ ಈ ಲೋಕದ ಅಸಮಾನತೆ ಬಗೆಗೆ ಅದಕ್ಕೆ ಹೊಸ ರೂಪ, ಹೊಳಹು ಕೊಡುವುದರತ್ತ ಬಸವಣ್ಣ ಗಮನ ಹರಿಸಿದ.

ಬಸವಣ್ಣನ ಪುರೋಹಿತಶಾಹಿಯ ನಿರಾಕರಣ, ಸುಮಾರು ಮೂರು ಶತಮಾನಗಳ ನಂತರ ಮಧ್ಯಯುಗದ ಯೂರೋಪಿಯನ್ ಧಾರ್ಮಿಕ ಚಿಂತನೆಯನ್ನು ಹೋಲುತ್ತದೆ. ಇದಕ್ಕಾಗಿ ಬಸವಣ್ಣನನ್ನು ಕರ್ನಾಟಕದ ಮಾರ್ಟಿನ್ ಲೂಥರ್ ಎಂದರೆ ತಪ್ಪಾಗಲಾರದೆಂದು ನನ್ನ ಅನಿಸಿಕೆ. ತನ್ನ ಕಾಲದಲ್ಲಿ ಬಹು ದೇವತೋಪಾಸನೆಯಲ್ಲಿ ತೊಡಗಿ ಧಾರ್ಮಿಕ ಡಾಂಭಿಕತೆಯನ್ನು ಪ್ರದರ್ಶಿಸುತ್ತಿದ್ದ ಜನತೆಗೆ ದೇವನೊಬ್ಬ ನಾಮ ಹಲವು ಎಂಬ ಏಕೇಶ್ವರವಾದವನ್ನು ಬಸವಣ್ಣ ಸಾರಿ ಹೇಳಿದ. ಇದೆಲ್ಲಕ್ಕಿಂತ ಮಿಗಿಲಾಗಿ ನಮ್ಮ ನಡೆ-ನುಡಿ ಒಂದಾಗಬೇಕು ಎಂದು ತಿಳಿಸಿ ಆಚಾರವನ್ನು ಆಚರಣೆಯಲ್ಲಿ ತಂದುತೋರಿಸಿದ.

ಬಸವಣ್ಣ ಸಮಾಜ ಸುಧಾರಕನಾಗಿ, ಸಮಾಜೋ-ಧಾರ್ಮಿಕ ಆಂದೋಲನದ ನೇತಾರನಾಗಿ ಒಂದು ಹೊಸ ಸಾಮಾಜಿಕ ಧಾರ್ಮಿಕ ವ್ಯವಸ್ಥೆಯನ್ನು ತರಲು ನಡೆಸಿದ. ಈ ಆಂದೋಲನವು ಇಡೀ ಕರ್ನಾಟಕದ ಇತಿಹಾಸದಲ್ಲಿ ಉಜ್ವಲ ಘಟನೆ ಆಯಿತು. ಬಸವಣ್ಣನ ಆದಿಯಾಗಿ ಶರಣರು ರಚಿಸಿದ 'ವಚನಗಳು' ಕನ್ನಡದ 'ಉಪನಿಷತ್ತುಗಳು' ಎನ್ನುವ ಗೌರವಕ್ಕೆ ಪಾತ್ರವಾದವು. ಬಸವಣ್ಣನ ನೇತೃತ್ವದಲ್ಲಿ ನಡೆದ ಈ ಚಳುವಳಿಯಲ್ಲಿನ ಒಂದು ವಿಶೇಷತೆ ಎಂದರೆ ಈ ಚಳುವಳಿ ಕೇವಲ ಬೋಧನೆಗೆ ಸೀಮಿತವಾಗಲಿಲ್ಲ. ಜೊತೆಗೆ ಸಾಧನೆಯತ್ತ ಗಮನ ಹರಿಸಿ 'ಅರಿತರೆ ಶರಣ ಮರೆತರೆ ಮಾನವ' ಎಂಬ ಅಂಶವನ್ನು ತೋರಿಸಿತು. ಮನುಷ್ಯರೆಲ್ಲರೂ ಆಧ್ಯಾತ್ಮಿಕವಾಗಿ ಸಮಾನರು ಎಂದು ಸಾರಿದ ಈ ಆಂದೋಲನದ ಆಧ್ಯಾತ್ಮಿಕ ಸಮಾನತೆಗೆ ಬೆಲೆ ಬರುವುದು ಸಾಮಾಜಿಕ ಸಮಾನತೆಯಿಂದ ಎಂಬುದನ್ನು ಸ್ಪಷ್ಟವಾಗಿ ಅರಿತುಕೊಂಡಿತು. ಈ ವಿಚಾರವನ್ನು ಪ್ರತಿಪಾದಿಸಿ ಆಚರಣೆಗೆ ತಂದ ಕೀರ್ತಿ ಬಸವಾದಿ ಪ್ರಥಮರಿಗೆ ಸಲ್ಲತಕ್ಕದ್ದು.

ಬಸವಣ್ಣ ತನ್ನ ಇತಿಮಿತಿಯಲ್ಲಿ ದೇವರನ್ನು ದೇವಾಲಯದಿಂದ ಮನುಜನ ಹತ್ತಿರಕ್ಕೆ ತಂದ. ಜಾತಿಭೇದ ಖಂಡಿಸಿ ಸಮಾಜದಲ್ಲಿ ಮೇಲ್ಜಾತಿಯವರ ಶ್ರೀಮಂತರ ರಾಜ ಮಹಾರಾಜರ ಹಿರಿಮೆಯನ್ನು ನಿರಾಕರಿಸಿ ತಳ ಸಮುದಾಯದವರಲ್ಲಿ ಸ್ವಾಭಿಮಾನ ತುಂಬಿದ. ಬಸವಣ್ಣ ತನ್ನ ವಿನಮ್ರ ವಿನೀತ ಭಾವದಿಂದ ಜನ ಸಾಮಾನ್ಯರಲ್ಲಿ ಒಂದಾಗಿ ಸಿರಿವಂತಿಕೆಯ ಭೋಗಜೀವನವನ್ನು 'ಬಿಜ್ಜಳನ ಭಂಡಾರ ಎಮಗೇಕಯ್ಯಾ?' ಎನ್ನುವುದರ ಮೂಲಕ ರಾಜ ಬಂಡಾರವನ್ನು ಆತನ ಅಧಿಕಾರ ಕೇಂದ್ರವನ್ನು ಖಂಡಿಸಲು ಹಿಂದೆ ಮುಂದೆ ನೋಡಲಿಲ್ಲ. ಬಸವಣ್ಣ ವ್ಯಕ್ತಿಯ ಸರಳತೆ, ಭಕ್ತಿಗೆ, ಪ್ರಾಮಾಣಿಕತೆಗೆ ಮನ್ನಣೆ ನೀಡಿದ.

'ಮನುಜರೆಲ್ಲರೂ ಸಮಾನರು' ಎಂದು ಹೇಳುವುದರ ಮೂಲಕ ಮನುಷ್ಯರ ಆರ್ಥಿಕ, ಸಾಮಾಜಿಕ,

ಧಾರ್ಮಿಕ, ಆಧ್ಯಾತ್ಮಿಕ ಸಮಾನತೆಯನ್ನು ಎತ್ತಿ ಹಿಡಿದ. ಬಸವಣ್ಣ ಇಹದಿಂದ ಪಲಾಯನವಾದಿಯಾಗದೆ ಗೃಹಸ್ಥಜೀವನವನ್ನು ಪುರಸ್ಕರಿಸಿದ. ತನ್ನ ಸಮಾಜದಲ್ಲಿನ ಹೆಣ್ಣಿಗೆ ಆ ಕಾಲಕ್ಕೆ ತಕ್ಕಂತೆ ಗೌರವ ಸ್ಥಾನವನ್ನು ನೀಡಿದ. ಇದಕ್ಕೆ ಸಾಕ್ಷಿ ಅನುಭವ ಮಂಟಪ ಮತ್ತು ಅಂದಿನ ಕಾಲದ ವಚನಕಾರ್ತಿಯರು. ಒಬ್ಬ ಮನುಷ್ಯ ಒಳ್ಳೆಯವನಾಗಲು, ಇಹಲೋಕದಿಂದ ಮುಕ್ತನಾಗಲು, ಒಳ್ಳೆಯ ಕುಲದಲ್ಲಿ ಹುಟ್ಟಬೇಕಿಲ್ಲ, ಪಾಂಡಿತ್ಯ, ಪರತತ್ವಗಳ ಅಗತ್ಯವಿಲ್ಲ, ದೈವಭಕ್ತನಾಗಿ, ಪ್ರಾಮಾಣಿಕತೆಯಿಂದ, ಸಾತ್ವಿಕ ಮಾರ್ಗದಿಂದ, ಒಳ್ಳೆಯ ನಡೆ ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಾಕು. ದೈವವು ಅಂತಹ ವ್ಯಕ್ತಿಯನ್ನು ಮೆಚ್ಚುತ್ತದೆ ಎನ್ನುವುದನ್ನು "ಕಳಬೇಡ ಕೊಲಬೇಡ....." ಎಂಬ ಪ್ರಸಿದ್ಧ ವಚನದಲ್ಲಿ ತೋರಿಸಿದ. ಏಕದೇವೋಪಾಸನೆಗೆ ಒತ್ತು ನೀಡಿದ ಬಸವಣ್ಣ 'ಕಾಯಕವೇ ಕೈಲಾಸ' ಎನ್ನುವುದರ ಮೂಲಕ ಕಾಯಕತತ್ವಕ್ಕೆ ಮಹತ್ವ ನೀಡಿ, ಭಕ್ತಿ ಭಂಡಾರಿ ಎನಿಸಿಕೊಳ್ಳುವುದರ ಮೂಲಕ ತುಳಿತಕ್ಕೆ ಒಳಗಾದವರ ದನಿಯಾಗಿ ಹನ್ನೆರಡನೆ ಶತಮಾನದಲ್ಲಿ ನಡೆದ ಸಮಾಜೋ-ಧಾರ್ಮಿಕ ಚಳುವಳಿಯ ಧ್ರುವತಾರೆಯಾದ ಭಕ್ತಿ ಭಂಡಾರಿಯಾದ ಬಸವಣ್ಣ, ಈ ಸಮಾಜೋ-ಧಾರ್ಮಿಕ ಚಳುವಳಿಯಲ್ಲಿ ಗುರುವಿನಿಂದ ದೀಕ್ಷೆ ಪಡೆದ ಚಾಂಡಾಲ ತಾನು ಗುರುವಾಗಿ ಬ್ರಾಹ್ಮಣನಿಗೆ ದೀಕ್ಷೆ ಕೊಡಲು ಸಾಧ್ಯ ಎಂಬುದನ್ನು ನಿರೂಪಿಸಲೆತ್ನಿಸಿದ. ಸಾಧನೆಯಿಂದ ಸಿದ್ಧಿಯೇ ಹೊರತು ಹುಟ್ಟಿನಿಂದ ಅಲ್ಲ ಎಂಬುದನ್ನು ಅನುಭವ ಮಂಟಪದಲ್ಲಿ ಅವನು ರೂಪಿಸಿದ. ಅನಕ್ಷರಸ್ಥರು ವಚನ ರಚನೆಯಲ್ಲಿ ತೊಡಗುವಂತೆ ಪ್ರೇರೇಪಿಸಿದ.

ಬಸವಣ್ಣ ನಾಯಕತ್ವದಲ್ಲಿ ಸಮಾಜೋ-ಧಾರ್ಮಿಕ ಚಳುವಳಿಯ ನೆರವಿನಿಂದ ಜನವಾಣಿಯನ್ನೇ ದೇವವಾಣಿಯಾಗಿಸಿದ. ಭಾಷೆಯು ಭಕ್ತಿ ಚಳುವಳಿಯಲ್ಲಿ ಪ್ರತಿಭಟನೆಯ ಸಾಧನವಾಯಿತು. ಇಂತಹ ಸಮಾಜೋ-ಧಾರ್ಮಿಕ ಚಳುವಳಿಯ ಹರಿಕಾರನಾದ ಬಸವಣ್ಣನವರ ಬಗ್ಗೆ ವಿ.ಸೀ: ಯವರು ಹೀಗೆನ್ನುತ್ತಾರೆ "ಬಸವಣ್ಣನವರು ಆ ಮತ ಪಂಥದವರಿಗೆ ಮಾತ್ರವಲ್ಲ ಕನ್ನಡಿಗರಿಗೆಲ್ಲಾ ಮಹಾಪುರುಷರು. ಆ ಒಂದು ಕಾಲಕ್ಕೆ ಹಿರಿಯರಲ್ಲ; ಈ ಒಂದು ನಾಡಿಗೆ ಗಣ್ಯರಲ್ಲ. ಎಲ್ಲ ಕಾಲಕ್ಕು, ಎಲ್ಲ ದೇಶಕ್ಕು ಜ್ಯೋತಿಯಂತೆ ಬೆಳಗುವ ಒಂದು ಮಹಾವ್ಯಕ್ತಿ. ಸಂತರು, ಸಮಾಜ ಧರ್ಮದ ಸುಧಾರಕರು, ಧರ್ಮದ ಜ್ಯೋತಿ."[೧೪೪]

೪.೪.೧೫ ಯೇಸುಸ್ವಾಮಿ ಮತ್ತು ಪ್ರಾರ್ಥನೆ

ಬೈಬಲ್ ಗ್ರಂಥವನ್ನು ಧ್ಯಾನಿಸುವಾಗ, ದೇವವಾಕ್ಯವು ಮತ್ತು ದೇವರ ಸ್ವರೂಪಿಯೂ ಆಗ್ಗಿದ ಯೇಸು ಸ್ವಾಮಿ ಮನುಷ್ಯನ ಅವತಾರ ತಾಳಿದ. ಆತ ಮಾನವನು ಯಾವ ರೀತಿ ದೇವರ ಸಾನ್ನಿಧ್ಯಕ್ಕೆ ಸೇರಬೇಕೆಂಬುದನ್ನು, ತನ್ನ "ಒಬ್ಬ ಅದ್ವಿತೀಯ ಆದರ್ಶ ವ್ಯಕ್ತಿ ಎಂಬುದನ್ನು ಸ್ನಾನದೀಕ್ಷೆ ಸಮಯದಲ್ಲೂ ಮತ್ತು ದೈವದರ್ಶನ ತಾಳಿದ ತಾಸಿನಲ್ಲೂ ತೋರಿಸಿದ. "ಇವನೇ ನನ್ನ ಪುತ್ರನು, ನನಗೆ ಪರಮ ಪ್ರಿಯನು ನನ್ನ ಅಪಾರ ಮೆಚ್ಚುಗೆಗೆ ಪಾತ್ರನು" (ಮತ್ತಾಯ ೧೭:೫) ಯೇಸುಸ್ವಾಮಿಯ ಆದರ್ಶಗಳನ್ನು ಅನುಕರಣೆ ಮಾಡಬೇಕೆಂಬುದೇ ದೈವಸಂಕಲ್ಪ. ಯೇಸುಸ್ವಾಮಿಯ ನುಡಿಯಂತೆ ಮಾರ್ಗವೂ, ಸತ್ಯವೂ ಮತ್ತು ಜೀವವೂ ಅವರಾಗಿದ್ದಾರೆ. (ಯೊವಾನ ೧೪-೬)

ಇಡೀ ಮಾನವ ಕಲ್ಯಾಣವು ಕೇವಲ ಪರಿಶ್ರಮ ಮತ್ತು ಯಾತನೆಯ ಮಾತ್ರದಿಂದಲ್ಲದೆ, ಪ್ರಾರ್ಥನೆಯ ಬಲದಿಂದಲೂ ಈಡೇರಿಸಬೇಕೆಂಬುದೇ ದೇವನ ಪರಮ ಸಂಕಲ್ಪವಾಗಿತ್ತು. ಆದ್ದರಿಂದಲೇ ಯೇಸುಸ್ವಾಮಿಗೂ ಮತ್ತು ಪ್ರಾರ್ಥನೆಗೂ ನಡುವೆ ಬಿಡಿಸಲಾಗದಂತ ಅನುಭವವನ್ನು ನಾವು ಬೈಬಲ್ ಗ್ರಂಥದಲ್ಲಿ ಅದರಲ್ಲೂ ಮುಖ್ಯವಾಗಿ ಸುವಾರ್ತೆಗಳಲ್ಲಿ ಕಾಣಬಹುದು. ಯೇಸುಸ್ವಾಮಿಯ ಹುಟ್ಟು ಪ್ರಾರ್ಥನೆಯಿಂದಲೇ ಪ್ರಾರಂಭವಾಗಿ, ಅದು ಮೃತ್ಯುವಿನಲ್ಲಿ ಮುಕ್ತಾಯಗೊಳ್ಳುತ್ತದೆ. ಸುವಾರ್ತೆಗಳಲ್ಲಿ ಯೇಸುಸ್ವಾಮಿಯು "ಒಬ್ಬ ಪ್ರಾರ್ಥನಾ ಜೀವಿ" ಎಂದು ಮನದಟ್ಟಾಗುತ್ತದೆ. ಏಕೆಂದರೆ ಯೇಸುವಿಗೆ ತಮ್ಮ ಮಾನವ ಬಾಳಿನ ಪ್ರತಿಯೊಂದು ವಿಶೇಷ ಗಳಿಗೆಯಲ್ಲೂ ಪ್ರಾರ್ಥನೆ ಪ್ರಾಮುಖ್ಯವಾಗಿತ್ತು. ಆದ್ದರಿಂದಲೇ ದೇವರ ಪರಮ ಶಕ್ತಿಯ ಚೈತನ್ಯವನ್ನು ಪಡೆದುಕೊಳ್ಳುತ್ತಿದ್ದ.

ಯೇಸುಸ್ವಾಮಿಯು ತಮ್ಮ ಮಾನವ ಜೀವಿತವನ್ನು ಪ್ರಾರ್ಥನೆಯೊಂದಿಗೆ ಮೊದಲು ಮಾಡುತ್ತಾರೆ, "ಇದೋ ನಾ ಬಂದೆ ನಿಮ್ಮ ಚಿತ್ತವನ್ನು ನೆರವೇರಿಸಲೆಂದೇ" (ಇಬ್ರಿಯ ೧೦:೯) ಅವರು ತಮ್ಮ ಗುಪ್ತ ಜೀವನದಲ್ಲಿ ಬಹುವೇಳೆ ತಮ್ಮ ಪಿತನಾದ ದೇವರ ಸನ್ನಿಧಿಯಲ್ಲಿ ಕುಳಿತಿರುತ್ತಾರೆ. ಮಹಾದೇವಾಲಯದಲ್ಲಿ ಯೇಸು ಬೋಧಕರ ಮಧ್ಯೆ ಕುಳಿತುಕೊಂಡು ಅವರ ಉಪದೇಶವನ್ನು ಆಲಿಸುತ್ತಾ ಅವರಿಗೆ ಪ್ರಶ್ನೆಯನ್ನು ಹಾಕುತ್ತಿದ್ದರು. (ಲೂಕ ೨:೪) ತಾಯಿ ಮರಿಗಳ ಕೆಲಸ ಕಾರ್ಯಗಳಲ್ಲಿ ನೆರವಾಗುತ್ತಾ, ತಂದೆ ಜೋಸೆಫರ ಜತೆ ಬಡಗಿಯ ಕಾರ್ಯದಲ್ಲಿ ಕೈ ಪಳಗಿಸಿಕೊಳ್ಳುತ್ತಾ, ಅವರಿಬ್ಬರಿಗೂ ಯೇಸು ವಿಧೇಯರಾಗಿ ನಡೆದುಕೊಳ್ಳುತ್ತಿದ್ದ. ಆದರೆ ಅವೆಲ್ಲಕ್ಕಿಂತಲೂ ಮಿಗಿಲಾಗಿ ದೇವರ ರಕ್ಷಣಾ ಕಾರ್ಯಕ್ಕಾಗಿ ತಮ್ಮನ್ನೆ ದೈವಿಕ

ಜ್ಞಾನದಲ್ಲಿ ಪ್ರವರ್ಧಿಸುತ್ತಾ, ದೇವರಿಗೂ ಮಾನವರಿಗೂ ಅಚ್ಚುಮೆಚ್ಚಾಗುತ್ತಾ ಬಂದರು" (ಲೂಕ ೨:೫೨). ಹೀಗೆ ಯೇಸು ತಮ್ಮ ಕೆಲಸ ಕಾರ್ಯಗಳ ಮಧ್ಯೆಯೂ ಪ್ರಾರ್ಥನಾ ಜೀವಿಯಾಗಿಯೇ ಬೆಳಗಿದರು, ಸಾಮಾನ್ಯ ಮಾನವನಿಗೂ ತಮ್ಮ ತಮ್ಮ ಕೆಲಸಕಾರ್ಯಗಳ ನಡುವೆ ಪ್ರಾರ್ಥಿಸುತ್ತಾ ಬಾಳನ್ನು ಪಾವನಗೊಳಿಸಬೇಕೆನ್ನುತ್ತಾ ಒಂದು ಉನ್ನತ ಪ್ರಾರ್ಥನಾ ಜೀವನದ ಆದರ್ಶವನ್ನೇ ಯೇಸು ಮಾನವನ ಬಾಳಿಗೆ ತೋರಿದರು.

ಯೇಸುಸ್ವಾಮಿಯ ಸಾಮಾಜಿಕ ಸೇವಾ ಜೀವನದ ಚಿತ್ರಣವನ್ನು ಸುವಾರ್ತ-ಸುವಾರ್ತಿಕರು ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ. ಸೇವಾಕಾರ್ಯದಲ್ಲಿ ತೊಡಗಿದ್ದ ಯೇಸು ಅನೇಕ ಪ್ರಮುಖ ಸನ್ನಿವೇಶಗಳಲ್ಲಿ ತೊಂದರೆಗೀಡಾಗುತ್ತಾರೆ. ಆದರೆ, ಪ್ರಾರ್ಥನಾ ಪ್ರಭಾವದಿಂದ ಪುಳಕಿತಗೊಂಡು ಎಲ್ಲಾ ಅಡೆತಡೆಗಳನ್ನು ಸ್ಥೈರ್ಯದಿಂದ ಎದುರಿಸಿದರು. ಯೇಸು ಬಹಿರಂಗ ಜೀವನಕ್ಕೆ ಕಾಲಿಡುವ ಮುನ್ನ ಜೋರ್ದಾನ್ ನದಿಯಲ್ಲಿ ಸ್ನಾನದೀಕ್ಷೆ ಸ್ವೀಕರಿಸಿ ಅನಂತರ ನಾಲವತ್ತು ದಿನಗಳ ಕಾಲ ಪ್ರಾರ್ಥನೆಯಲ್ಲಿ ಕಳೆದರು. ಅವರು ಅಂತರಂಗದ ಪ್ರಾರ್ಥನೆಗೆ ಹೆಚ್ಚು ಮಹತ್ವ ನೀಡುತ್ತಿದ್ದರು. ಯಾವಾಗಲೂ ಅವರು ಯಾವಾಗಲೂ ತನ್ನ ದೇವರೊಂದಿಗೆ ಸಂಭಾಷಣೆಯಲ್ಲಿ ನಿರತರಾಗುತ್ತಿದ್ದರು. ಆದರೆ ಯೇಸು ಬಹಿರಂಗವಾಗಿಯೂ ಪ್ರಾರ್ಥಿಸುತ್ತಿದ್ದರು, ಅವರು ತಮ್ಮ ಕರ್ಮಯೋಗಿಯಾಗಿದ್ದರೂ ತಮ್ಮ ಅಲ್ಪಕಾಲಿಕ ಆಗಾಗ್ಗೆ ಪ್ರಾರ್ಥನೆಗೆ ಸಮಯವನ್ನು ಕಂಡುಕೊಳ್ಳುತ್ತಿದ್ದರು. ಅವರು ಬೆಳಗಿನ ಜಾವ ಬಹುಬೇಗನೆ ಮೇಲೆದ್ದು ಪ್ರಾರ್ಥಿಸುತ್ತಿದ್ದರು. ಅನಂತರ ಜನಸೇವಾ ವೃತ್ತಿಯಲ್ಲಿ ಮುಂದುವರಿಯುತ್ತಿದ್ದರು. ಸಂಜೆ ಸಮೀಪವಾದಂತೆ ಜನರ ಗುಂಪನ್ನು ಬಿಟ್ಟು ಮತ್ತೆ ಏಕಾಂತ ಪ್ರದೇಶಗಳಿಗೆ ಹೋಗಿ ದೇವರೊಡನೆ ಸಂಭಾಷಣೆಯಲ್ಲಿ ತೊಡಗುತ್ತಿದ್ದರು. "ಯೇಸುಸ್ವಾಮಿ ಪ್ರಾರ್ಥನೆ ಮಾಡಲು ಬೆಟ್ಟವನ್ನೇರಿದರು ರಾತ್ರಿಯೆಲ್ಲಾ ದೇವರ ಪ್ರಾರ್ಥನೆಯಲ್ಲಿ ಕಳೆದರು." (ಲೂಕ ೬:೧೨)

ಯೇಸುಸ್ವಾಮಿ ದೇವರ ಪುತ್ರರಾಗಿಯೂ ಮತ್ತು ಒಳ್ಳೆಯ ಯೆಹೂದ್ಯರಾಗಿಯೂ ಪ್ರಾರ್ಥನೆ ಮಾಡುತ್ತಿದ್ದರು. ಯೆಹೂದ್ಯ ಕುಲಕ್ಕೆ ಸೇರದವರಾದ್ದರಿಂದ ಅವರಿಗೆ ಸಾಂಪ್ರದಾಯಕ ಜಪಗಳಾದ "ಹದಿನೆಂಟು ಆಶೀರ್ವಚನಗಳು ಮತ್ತು ಪ್ರಾರ್ಥನಾ ಸಂಗ್ರಹಗಳು" ಚೆನ್ನಾಗಿ ತಿಳಿದಿತ್ತು. ಅವರು ದೇವಾಲಯಕ್ಕೆ ಬೇಟಿ ನೀಡುತ್ತಿದ್ದರು. ಏಕೆಂದರೆ: ಯೇಸುವಿನ ದೃಷ್ಟಿಯಲ್ಲಿ ದೇವಾಲಯವೊಂದು ದೇವರು ನೆಲೆಸುವ ಮಂದಿರವಾಗಿತ್ತು. (ಮಾರ್ಕ ೧೧:೧೭) ಸಂತ ಲೂಕಾಸರು ನುಡಿವಂತೆ, ಯೇಸುಸ್ವಾಮಿಯನ್ನು ಯೆಹೂದ್ಯರು ಕೊಂಡಾಡುತ್ತಿದ್ದ ಬಹುಮುಖ್ಯ ಹಬ್ಬಗಳಲ್ಲಿ ಸ್ವತಃ ಪಾಲ್ಗೊಳ್ಳುತ್ತಿದ್ದರು. ಅವರು ಯೆಹೂದ್ಯ ಸಾಂಪ್ರದಾಯದಂತೆ ಬೆಳಗಿನ ಜಾವ ನಡುಮಧ್ಯಾನ ಮತ್ತು ಮುಸ್ಸಂಜೆಯ ವೇಳೆಯಲ್ಲಿ ಪ್ರಾರ್ಥನೆಯಲ್ಲಿ ಮಗ್ನರಾಗುತ್ತಿದ್ದರು. ಯೇಸುಸ್ವಾಮಿ ದೇವರಿಗೆ ಸ್ತುತಿಸಿ, ವಂದನೆಯನ್ನು ಅರ್ಪಿಸುತ್ತಾ, ತನ್ನ ಕೋರಿಕೆಗಳನ್ನು ಅವರ ಮುಂದಿಡುತ್ತಾ ಸಾಮಾನ್ಯ ಜನಕ್ಕೆ ಹೇಗೆ ದೇವರ ಬಳಿ ಸಾಗುವುದೆಂದು ತೋರಿಸಿಕೊಟ್ಟರು. ಒಮ್ಮೆ ಯೇಸುಸ್ವಾಮಿ,

ಜನಜಂಗುಳಿಯ ಎದುರಲ್ಲಿ ಪಿತದೇವರಿಗೆ ವಂದನೆಯನ್ನು ಸಲ್ಲಿಸುತ್ತಾರೆ. ಏಕೆಂದರೆ "ಪಿತನೇ, ಭೂಸ್ವರ್ಗಗಳ ಒಡೆಯ ಈ ವಿಷಯಗಳನ್ನು ಜ್ಞಾನಿಗಳಿಗೂ ಮೇಧಾವಿಗಳಿಗೂ ಮರೆಮಾಡಿ, ಮಕ್ಕಳಂಥವರಿಗೆ ನೀವು ಶ್ರುತಪಡಿಸಿದ್ದೀರಿ. ಇದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ಹೌದು ಪಿತನೇ, ಇದೇ ನಿಮ್ಮ ಸುಪ್ರೀತಿ ಸಂಕಲ್ಪ" (ಲೂಕ ೧೦:೨೧) ಎಂದರು.

ಯೇಸುಸ್ವಾಮಿ ಏನಾದರೂ ಯೋಜನೆಯನ್ನು ಹಮ್ಮಿಕೊಳ್ಳುವ ಮುನ್ನ ದೇವರಲ್ಲಿ ಪ್ರಾರ್ಥಿಸುತ್ತಿದ್ದರು. ಅವರು ಹನ್ನೆರಡು ಮಂದಿ ಅಪೋಸ್ತಲರನ್ನು ಆರಿಸಿಕೊಳ್ಳುವ ಹಿಂದಿನ ದಿನ "ರಾತ್ರಿವಿಡೀ ಪ್ರಾರ್ಥನೆಯಲ್ಲಿ ಕಳೆದರು." ಏಕೆಂದರೆ ಯೇಸುಸ್ವಾಮಿಯ ಮರಣದ ನಂತರ ಅವರ ಸೇವಾಕಾರ್ಯವನ್ನು ಮುಂದುವರಿಸಿ ಕೊಂಡು ಹೋಗುವಲ್ಲಿ ಅಪೋಸ್ತಲರು ಪ್ರಮುಖ ಪಾತ್ರ ವಹಿಸಬೇಕಾಗಿತ್ತು. (ಲೂಕ ೬:೧೨)

ಯೇಸುಸ್ವಾಮಿ ಸತ್ತುಹೋಗಿದ್ದ ಲಾಜರ್‌ನನ್ನು ಮೃತ್ಯುವಿನಿಂದ ಜೀವಕ್ಕೆ ಎಬ್ಬಿಸುವ ಮೊದಲು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿದರು. "ಪಿತನೇ ನನ್ನ ಬೇಡಿಕೆಗೆ ನೀವು ಕಿವಿಗೊಡುತ್ತೀರಿ. ಆದುದರಿಂದ ನಾನು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನನ್ನ ಬೇಡಿಕೆಗೆ ನೀವು ಯಾವಾಗಲೂ ಕಿವಿಗೊಡುತ್ತೀರಿ ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ಆದರೆ ನನ್ನನ್ನು ಕಳಿಹಿಸಿದಾತ ನೀವೆ ಎಂದು ಸುತ್ತಲೂ ನೆರೆದಿರುವವರು ನಂಬುವಂತೆ ಹೀಗೆ ಹೇಳಿದೆನು." (ಯೊವಾನ್ನ ೧೧:೪೨) ನಾವು ದೇವರಲ್ಲಿ ನಮ್ಮ ಕೋರಿಕೆಗಳನ್ನು ಸಲ್ಲಿಸುವಂತೆ, ಯೇಸುಸ್ವಾಮಿಯು ಕೂಡ ತಮ್ಮ ಕೋರಿಕೆಗಳನ್ನು ದೇವರಿಗೆ ತಿಳಿಯಪಡಿಸಿದರು, ರಾಯಪ್ಪರು (ಇಡೀ ಜನಾಂಗ) ಕಟ್ಟೆ ಶೋಧನೆಗೆ ಒಳಗಾಗದಂತೆ ಯೇಸು ಪಿತನಲ್ಲಿ ಪ್ರಾರ್ಥಿಸಿದರು ಮತ್ತು ತಮ್ಮ ಮಹಾ ಯಾಜಕರ ಭಿನ್ನಹದ ಪ್ರಾರ್ಥನೆಯಲ್ಲಿ ಯಾರೆಲ್ಲರೂ ಅವರ ರಕ್ಷಣಾ ಕಾರ್ಯದಲ್ಲಿ ಪಾಲುಗಾರರಾಗುವರೋ ಅವರೆಲ್ಲರನ್ನೂ ಸ್ಮರಿಸಿಕೊಂಡರು ಹಾಗೂ ಅವರೆಲ್ಲರೂ ಸನ್ಮಾರ್ಗದಲ್ಲಿ ಸಾಗುವಂತೆ ಪಿತನಲ್ಲಿ ಪ್ರಾರ್ಥಿಸಿಕೊಂಡರು (ಯೊವಾನ್ನ ೧೭:೧-೨೬)

ಮಾನವ ಮಾತ್ರ ಸಾಮಾನ್ಯವಾಗಿ ಅವನ ಆಶೆ ಆಕಾಂಕ್ಷೆಗಳೇ ನೆರವೇರಬೇಕೆಂಬ ಭಾವನೆಯಿಂದ, ದೇವರ ಇಚ್ಛೆಯನ್ನು ನೆರವೇರಿಸಲು ಸಂಪೂರ್ಣವಾಗಿ ಮರೆತುಬಿಡುತ್ತಾನೆ. ಆದರೆ ಯೇಸುಸ್ವಾಮಿ ತಮ್ಮ ಅಘೋರ ಯಾತನೆಯಲ್ಲೂ ಪಿತದೇವರ ಚಿತ್ತದಂತೆ ನೆರವೇರಲೆಂದು ಪ್ರಾರ್ಥಿಸುತ್ತಾರೆ. "ಓ ಪಿತನೇ ನಿಮಗೆ ಇಷ್ಟವಾದರೆ ಈ ಕಷ್ಟ ಕೊಡವನ್ನು ನನ್ನಿಂದ ತೊಲಗಿಸಿರಿ. ಾದರೂ ನನ್ನ ಚಿತ್ತವಲ್ಲ, ನಿಮ್ಮ ಚಿತ್ತ ನೆರವೇರಲಿ" ಎಂದರು. ಆಗ ಸ್ವರ್ಗದಿಂದ ದೂತನೊಬ್ಬನು ಯೇಸುವಿಗೆ ಪ್ರತ್ಯಕ್ಷನಾಗಿ ಅವರನ್ನು ಸಶಕ್ತರನ್ನಾಗಿ ಮಾಡಿದನು. (ಲೂಕ ೨೨:೪೨-೪೩) ಹೀಗೆ ದೇವರ ಚಿತ್ತಕ್ಕೆ ನಾವು ಮಣಿದರೆ ಕಷ್ಟನಷ್ಟಗಳಲ್ಲೂ ದೇವರ ಪ್ರೀತಿಯಲ್ಲಿ ಆನಂದ ಪಡಬಹುದು.

ಶಿಲುಬೆ ಮರದ ಮೇಲೆ ಪಡಬಾರದಂಥ ಬಾಧೆಯನ್ನು ಪಡುತ್ತಿದ್ದರೂ ಕೂಡ ತಮ್ಮನ್ನು ಶಿಲುಬೆ

ಮರಣಕ್ಕೆ ಗುರಿಪಡಿಸಿದವರ ವಿರುದ್ಧ "ನ್ಯಾಯ ತೀರ್ಪು" ಬಯಸಲಿಲ್ಲ, ಬದಲಿಗೆ ಪಿತದೇವರಲ್ಲಿ ಅವರಿಗೋಸ್ಕರ ಕರುಣೆ ಮತ್ತು ಕ್ಷಮೆಯನ್ನು ಯಾಚಿಸುತ್ತಾರೆ. "ಪಿತನೇ, ಇವರನ್ನು ಕ್ಷಮಿಸಿ, ತಾವೇನು ಮಾಡುತ್ತಿದ್ದೇವೆ ಎಂದು ಇವರು ಅರಿಯರು" ಎಂದು ಪ್ರಾರ್ಥಿಸಿದರು (ಲೂಕ ೨೨:೨೪)" ಲೌಕಿಕ ಜೀವನದ ಅಂತಿಮ ಗಳಿಗೆಯಲ್ಲೂ, ಶಿಲುಬೆ ಮರದ ಮೇಲೆ ತೂಗಾಡುತ್ತಿದ್ದ ಯೇಸುಸ್ವಾಮಿ, ತಮ್ಮ ಪಿತದೇವರೊಂದಿಗೆ ಮೌನವೆಂಬ ಸಾಂಕೇತಿಕ ಸಂಭಾಷಣೆಯಲ್ಲಿ ನಿರತರಾಗಿದ್ದರು. ಮೌನದಿಂದ ಕೂಡಿದ ಈ ಪ್ರಾರ್ಥನೆಯು ಯೇಸುಸ್ವಾಮಿಯ ಜೀವನಲ್ಲಿಯೇ ಅದ್ವಿತೀಯವಾದುದು. ಏಕೆಂದರೆ ಅದರಲ್ಲಿ ಪ್ರೀತಿಯ ಮತ್ತು ಯಾತನೆಯ ರಹಸ್ಯವು ಸಮ್ಮಿಲನಗೊಂಡು ಬಹಿರಂಗಗೊಳ್ಳುತ್ತದೆ. ಯೇಸುಸ್ವಾಮಿಯನ್ನು ಇರ್ವರು ಕಳ್ಳರ ಮಧ್ಯೆ ಶಿಲುಬೆಗೇರಿಸಿದುದರ ವಿರುದ್ಧ ಪ್ರತಿಕ್ರಿಯೆ ತೋರಿಲ್ಲ ಹಾದುಹೋಗುವವರು, ಸದ್ದುಕಾಯರು ಮತ್ತು ಧರ್ಮಶಾಸ್ತ್ರಿಗಳು ತೇಜೋಭಂಗ ಮಾಡಿದರೂ ಸಹ ತುಟಿತೆರೆಯಲಿಲ್ಲ.

"ನಿಜವಾಗಿಯೂ, ಶಿಲುಬೆಗೇರಿಸಿದ ಸಂದರ್ಭದಲ್ಲಿ, ಪಿತನಾದ ದೇವರೇ ಮೌನವಾಗಿರುತ್ತಾರೆ. ಪುತ್ರನಾದ ಯೇಸುಸ್ವಾಮಿಯನ್ನು ಸಂಪೂರ್ಣವಾಗಿ ಕೈಬಿಟ್ಟಂತೆ ಕಂಡುಬರುತ್ತದೆ. ಆದ್ದರಿಂದಲೇ ಯೇಸು "ನನ್ನ ದೇವರೇ, ನನ್ನ ದೇವರೇ, ನನ್ನನ್ನೇಕೆ ಕೈ ಬಿಟ್ಟಿದ್ದೀರಿ"? (ಮಾರ್ಕ್ ೧೫:೩೪) ಎಂಬುದಾಗಿ ಗಟ್ಟಿಯಾಗಿ ಕೂಗುತ್ತಾರೆ. ಆದರೆ, ಪಿತದೇವರು ಯೇಸುಸ್ವಾಮಿಯನ್ನು ಕುರಿತು ಘೋಷಿಸಿದ್ದ ಮಧುರ ನುಡಿಗಳು ಇದೀಗ ಫಲವನ್ನೀಯುವ ಹಂತದಲ್ಲಿವೆ. ನೀನೆನ್ನ ಪುತ್ರನು, ನನಗೆ ಪರಮಪ್ರಿಯನು ನನ್ನ ಅಪಾರ ಮೆಚ್ಚುಗೆಗೆ ಪಾತ್ರನು (ಮಾರ್ಕ ೧:೧೧) ಪಿತದೇವರು ಮೌನದಿಂದ ಇದ್ದರು ಎಂಬುದರ ಅರ್ಥ ಅವರು ಯೇಸುಸ್ವಾಮಿಯನ್ನು "ತಮ್ಮ ಪ್ರಿಯಪುತ್ರ"ನೆಂದು ಅಂಗೀಕರಿಸಿಕೊಂಡಿದ್ದಾರೆಂದೂ ಮತ್ತು ಅವರಿಗೆ ಮತ್ತಾವ ಆಧಾರಗಳು ಅವಶ್ಯವಿಲ್ಲವೆಂದು ಖಚಿತವಾಗುತ್ತದೆ. ಆದರೀಗ ಯೇಸುಸ್ವಾಮಿಯ ಪಾಲಿಗೆ ಪಿತದೇವರ ಸಂಪೂರ್ಣ ಮೌನದ ಬೀಕರತೆಯನ್ನು ಅನುಭವಿಸಿ, ತಮ್ಮ ಪುತ್ರತ್ವದ ವಿಧೇಯತೆಯನ್ನು ಮತ್ತು ಪರಿಪೂರ್ಣ ನಂಬಿಕೆಯನ್ನು ಅವರಲ್ಲಿ ತೇರಬೇಕಾಯಿತು. ಹೀಗೆ ಮೊದಲಬಾರಿಗೆ ಮತ್ತು ಎಂದೆಂದಿಗೂ ಯೇಸುಸ್ವಾಮಿಗೂ ಹಾಗೂ ಇಡೀ ಮಾನವ ಕುಲಕ್ಕೂ" ನಂಬಿಕೆಯ, ದೇವರ ಪುತ್ರತ್ವದ ಅನುಭವವು ಹತಾಶೆಯ ಮಟ್ಟವನ್ನು ಮೀರಿ ವಿಜಯತ್ವವನ್ನು ಸಂಪಾದಿಸುತ್ತದೆ. ಯೇಸುದೇವರು ಪುತ್ರರಾಗಿದ್ದರೂ ಹಿಂಸೆ ಬಾಧೆಗಳನ್ನು ತಪ್ಪಿಸಿಕೊಳ್ಳದೆ ವಿಧೇಯತೆಯನ್ನು ಅನುಭವದಿಂದ ಅರಿತುಕೊಂಡರು. ಹೀಗೆ, ಅವರು ಸ್ವತಃ ಪರಿಪೂರ್ಣರಾಗಿ ತಮಗೆ ವಿಧೇಯರಾಗುವ ಎಲ್ಲರಿಗೂ ಶಾಶ್ವತ ಜೀವೋದ್ಧಾರಕ್ಕೆ ಕಾರಣರಾದರು. (ಇಬ್ರಿಯ ೫:೮-೯) ಈ ಮೌನದಲ್ಲಿ ಪುನರುತ್ಥಾನದ ಅಂತಿಮ ಘೋಷಣೆಯು ದೇವರಿಂದ ಮರುಧ್ವನಿಸಲ್ಪಡುತ್ತದೆ. ಇದು ನಿಜವಾಗಿಯೂ ಶಿಲುಬೆಯ ನಿಃಶ್ಯಬ್ಧತೆಯಲ್ಲಿ, ಪಿತದೇವರ ಪ್ರೀತಿಮಯ ನುಡಿ ಮತ್ತು ಮಾನವನ ವಿಧೇಯತೆಯ ನುಡಿಯೂ ಅಂತಿಮವಾಗಿ ಸ್ಪಷ್ಟವಾಗಿ ಕಾರಣವಾಯಿತು."

ಯೇಸುಸ್ವಾಮಿ ಏಕಾಂತವಾಗಿ ಕೊಠಡಿಗೆ ಹೋಗಿ ಪ್ರಾರ್ಥಿಸಲು ತಿಳಿಯಪಡಿಸುತ್ತಾರೆ, ನಿಶ್ಯಬ್ಧತೆಯಿಂದ ಕೂಡಿರುವ ಸ್ಥಳದಲ್ಲಿ ಪ್ರಾರ್ಥಿಸಿದಾಗ ಎರಡು ರೀತಿಯಲ್ಲಿ ಲಾಭ ಉಂಟು. ಮೊದಲನೆಯಾಗಿ ದಿನನಿತ್ಯದ

ಜಂಜಾಟದಿಂದ ದೂರವಾಗಿದ್ದು ದೇವರೊಂದಿಗೆ ಸ್ವಲ್ಪಕಾಲ ಶಾಂತಿಯಿಂದಿರಬಹುದು. ಎರಡನೆಯದಾಗಿ, ಧ್ಯೇಯೋದ್ದೇಶಗಳು ನಿರ್ಮಲಗೊಳ್ಳುತ್ತವೆ. ಇಲ್ಲಿ ಯೇಸುಸ್ವಾಮಿ ಸಾಮೂಹಿಕ ಪ್ರಾರ್ಥನೆಯನ್ನು ಖಂಡಿಸುವುದಿಲ್ಲ. ಯಾರಿಗೆ ಏಕಾಂತದಲ್ಲಿ ಪ್ರಾರ್ಥಿಸುವುದು ಗೊತ್ತೋ ಅವರಿಗೆ ಸಾಮೂಹಿಕವಾಗಿಯೇ ಪ್ರಾರ್ಥಿಸಲು ಹೀಗೆ ಏಕಾಂತವಾಗಿ ಪ್ರಾರ್ಥಿಸುವುದಕ್ಕೆ ಯೇಸುಕ್ರಿಸ್ತ ಹೆಚ್ಚಿನ ಒತ್ತನ್ನೂ ನೀಡುತ್ತಾರೆ (ಮತ್ತಾಯ ೬:೫-೬) ಪದಗುಚ್ಚಗಳ ಸಮೂಹದಿಂದ ಪ್ರಾರ್ಥನೆ ಪ್ರಭಾವಶಾಲಿಯಾದುದು. ಪ್ರಾರ್ಥಿಸುವಾಗ ನಿರ್ಜೀವ ಯಂತ್ರದಂತೆ ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಬೇಡಿ, ನಿರರ್ಥಕವಾದ ಸಾವಿರ ಶಬ್ದಗಳನ್ನಾಡುವುದಕ್ಕಿಂತಲೂ ಮನಕ್ಕೆ ಶಾಂತಿ ನೀಡುವಂಥ ಒಂದೇ ಒಂದು ಶಬ್ದವನ್ನಿಡುವುದು ಎಷ್ಟೋ ಮೇಲು. ಅಂತೆಯೇ ಪ್ರಾರ್ಥಿಸುವಾಗ ಮಾತಿನಲ್ಲಿ ಮಿತಿ ಇರಬೇಕು. ಪ್ರಾರ್ಥನೆ ದೇವರೊಂದಿಗೆ ನಡೆಸುವ ಅತಿ ಮಧುರಮಯ ಸಂಭಾಷಣೆ. ಆದುದರಿಂದ ಯೇಸು ನಮಗೆ ಪ್ರಾರ್ಥನೆಯು ಮಿತವಾಗಿರಲೆಂದು ತಿಳಿಸುತ್ತಾರೆ.

"ಪ್ರಾರ್ಥನೆ ಮಾಡುವಾಗ ಪರಕೀಯರಂತೆ ನಿರರ್ಥಕ ಪದಗಳನ್ನು ಪಿಸುಗಟ್ಟಬೇಡ, ನಮ್ಮ ಪ್ರಾರ್ಥನೆ ದೀರ್ಘವಾದಷ್ಟು ದೇವರು ಆಲಿಸುತ್ತಾರೆಂದು ಅವರು ಭಾವಿಸುತ್ತಾರೆ. ನೀವು ಅವರಂತೆ ಆಗಬೇಡಿ, ನಿಮ್ಮ ಅಗತ್ಯಗಳೇನೆಂದು ನೀವು ಕೇಳುವುದಕ್ಕೆ ಮೊದಲೇ ನಿಮ್ಮ ತಂದೆಗೆ ಗೊತ್ತಿದೆ (ಮತ್ತಾಯ ೬: ೭-೮) ಯೇಸುಸ್ವಾಮಿ ಮುಗ್ಧ ಮಗುವಿನಂತೆ ಸರಳವಾಗಿ ಸುಗಮವಾಗಿ ಪ್ರಾರ್ಥಿಸಲು ಕಲಿಸುತ್ತಾರೆ. ನಾವು ಲೌಕಿಕವಾಗಿ ಅನುಭವಿಸುವ ಪ್ರೀತಿಗಿಂತಲೂ ಪಿತದೇವರ ಪರಮ ಪ್ರೀತಿ ಶ್ರೇಷ್ಠವಾದುದು ಎಂದು ಯೇಸು ನಮ್ಮ ನೆನಪಿಗೆ ತರುತ್ತಾರೆ. "ನಿಮ್ಮಲ್ಲಿ ಯಾವ ತಂದೆ ತಾನೇ ತನ್ನ ಮಗ ಮೀನನ್ನು ಕೇಳಿದರೆ ಹಾವನ್ನು ಕೊಡುತ್ತಾನೆ? ಅಥವಾ ಮೊಟ್ಟೆಯನ್ನು ಕೇಳಿದ್ದರೆ ಚೇಳನ್ನು ಕೊಡುತ್ತಾನೆ? ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ, ಅದಕ್ಕಿಂತಲೂ ಹೆಚ್ಚಾಗಿ ಸ್ವರ್ಗದಲ್ಲಿರುವ ನಿಮ್ಮ ತಂದೆ ತಮ್ಮನ್ನು ಕೇಳಿಕೊಳ್ಳುವವರಿಗೆ ಪವಿತ್ರಾತ್ಮರನ್ನೆ ಅನುಗ್ರಹಿಸಬಲ್ಲರು." (ಲೂಕ ೧೧:೧೧-೧೩)

ಪ್ರಾರ್ಥನೆ ವಿಶ್ವಾಸಭರಿತವಾಗಿರಬೇಕು. ವಿಶ್ವಾಸವಿಲ್ಲದವನ ಬಾಳು ಅಧ್ಯಾತ್ಮಿಕ ಜೀವನದಲ್ಲಿ ಶೂನ್ಯ ಪ್ರಾರ್ಥನೆಗೆ ವಿಶ್ವಾಸ ತಳಹದಿ ಅದಕ್ಕಾಗಿ ವಿಶ್ವಾಸಭರಿತರಾಗಿ ಪ್ರಾರ್ಥಿಸಿರೆಂದು ಯೇಸು ಕರೆ ನೀಡುತ್ತಾರೆ. "ನಾನು ನಿಮಗೆ ಖಂಡಿತವಾಗಿ ಹೇಳುತ್ತೇನೆ. ನೀವು ಸಂಶಯ ಪಡದೆ ವಿಶ್ವಾಸವನ್ನು ಇಟ್ಟರೆ ಅಂಜೂರದ ಮರಕ್ಕೆ ನಾನು ಏನು ಮಾಡಿದೆನೋ ನೀವು ಅಂತೆಯೇ ಮಾಡುವಿರಿ; ಅದು ಮಾತ್ರವಲ್ಲ, ಈ ಬೆಟ್ಟಕ್ಕೆ ನೀನು ಇಲ್ಲಿಂದ ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ನೀವು ಹೇಳಿದರೆ ಅದು ಹಾಗೆಯೇ ಆಗುವುದು. ವಿಶ್ವಾಸವಿಟ್ಟು ಏನನ್ನು ಪ್ರಾರ್ಥನೆಯಲ್ಲಿ ನೀವು ಬೇಡಿಕೊಳ್ಳುವಿರೋ, ಅದನ್ನೆಲ್ಲಾ ಪಡೆಯುವಿರಿ" (ಮಾತಾಯ ೨೧:೨೧-೨೨)

ಪ್ರಾರ್ಥನೆಯ ಫಲಿಸದಿದ್ದಾಗ, ಎಡರು-ತೊಡರುಗಳಲ್ಲಿ ಸಿಲುಕಿ ನಲುಗಿದಾಗ ಪ್ರಾರ್ಥಿಸುವುದನ್ನು ಮುಂದುವರಿಸುವುದು ಕಷ್ಟವಾಗುತ್ತದೆ. ಆದರೆ ಯೇಸುಸ್ವಾಮಿ ನಮಗೆ ಪ್ರಾರ್ಥಿಸುವಾಗ ಮನಗುಂದದೆ,

ನಿರಾಶರಾಗದೆ, ಎಡಬಿಡದೆ ಪ್ರಾರ್ಥಿಸಿರೆಂದು ಈ ದೃಷ್ಟಾಂತದ ಮೂಲಕ ಕಲಿಸುತ್ತಾರೆ. ಎಲ್ಲೆಲ್ಲೂ ಕತ್ತಲಿನಿಂದ ತುಂಬಿರುವ ವೇಳೆಯಲ್ಲಿ ತನ್ನ ಮನೆಗೆ ಬಂದ ಒಬ್ಬ ಸ್ನೇಹಿತನಿಗೆ ಕೊಡಲು, ಮನೆಯಲ್ಲಿ ಒಂದು ಚೂರು ರೊಟ್ಟಿಯೂ ಇರುವುದಿಲ್ಲ. ಆದಕಾರಣ ಅವನು ಮತ್ತೊಬ್ಬ ಸ್ನೇಹಿತನ ಮನೆಗೆ ಧಾವಿಸಿ ಬರುತ್ತಾನೆ. ಮನೆಯ ಕದವನ್ನು ತಟ್ಟುತ್ತಾನೆ. ನಿದ್ರಾಸುಖದಲ್ಲಿ ಮೈಮರೆತಿರುವ ಸ್ನೇಹಿತನು ನಿದ್ರೆಯಿಂದ ಎಚ್ಚೆತ್ತು, ಮಲಗಿದ್ದ ಸ್ಥಳದಿಂದಲೇ "ನನಗೀಗ ತೊಂದರೆಗೀಡುಮಾಡಬೇಡ, ಮಕ್ಕಳು ಬಾಗಿಲ ಬಳಿಯಲ್ಲಿಯೇ ಗಾಢನಿದ್ರೆಯಲ್ಲಿರುವರು" ನಿರಾಶನಾಗದ ಸ್ನೇಹಿತನು ಬಾಗಿಲನ್ನು ತಟ್ಟುತ್ತಾ ಇರುತ್ತಾನೆ. ಏಕೆಂದರೆ ಸ್ನೇಹಿತನು ಆಹಾರವನ್ನು ತಪ್ಪದೆ ಕೊಡುತ್ತಾನೆಂಬ ಸಂಪೂರ್ಣ ನಂಬಿಕೆಯಿರುತ್ತದೆ. (ಲೂಕ ೧೧:೫-೮). ಬಡವಿಧವೆ ದುಷ್ಟ ನ್ಯಾಯಾಧೀಶನ ಕತೆಯ ಮೂಲಕ ನಿರಂತರವಾಗಿ ಪ್ರಾರ್ಥಿಸಲು ಯೇಸುವು ಕರೆ ನೀಡುತ್ತಾರೆ.

ಯೇಸುಕ್ರಿಸ್ತ ತನ್ನ ಬದುಕಿನಾದ್ಯಂತ ತಾನು ಏನು ನುಡಿದನೋ ಅದರಂತೆ ನಡೆದ. ತಾನು ನಡೆದಂತೆ ನುಡಿದ. ತನ್ನ ನಡೆ ಉಡಿಗೆಯಲ್ಲಿ ಸಾಮ್ಯ ತೋರಿದ. 'ಕ್ಷಮೆ ನೀಡು-ಕ್ಷಮೆ ಬಿಡು' ಎನ್ನುವ ತನ್ನ ಸಿದ್ಧಾಂತದ ಮೂಲಕ ತನ್ನನ್ನು ಹಿಡಿದು, ಬಡಿದು, ಹಿಂಸಿಸಿ ಶಿಲುಬೆಯಲ್ಲಿ ಶಿಕ್ಷಿಸಿದವರಿಗಾಗಿಯೂ ಪ್ರಾರ್ಥಿಸಿದ. ಇಡೀ ಮನುಕುಲಕ್ಕೆ ಶ್ರೇಷ್ಠವಾದ ಕ್ಷಮೆ ಎಂದರೆ ಶಿಲುಬೆಯ ಮೇಲೆ ನೇತಾಡುವಾಗ ತನ್ನ ಶತ್ರುಗಳಿಗಾಗಿ ಪ್ರಾರ್ಥಿಸುತ್ತಾ 'ತಂದೆಯೆ ಅವರನ್ನು ಕ್ಷಮಿಸಿಬಿಡು. ತಾವೇನು ಮಾಡುತ್ತಿರುವರೆಂದು ಅವರು ಅರಿಯರು' ಎಂಬುದು ಕ್ಷಮಾಗುಣಕ್ಕೆ ಯೇಸು ತನ್ನ ಶತ್ರುಗಳಿಗಾಗಿ ಪ್ರಾರ್ಥಿಸಿದುದಕ್ಕೆ ಶ್ರೇಷ್ಠ ಉದಾಹರಣೆಯಾಗಿದೆ.

ಹೀಗೆ ಯೇಸು ಮತ್ತು ಪ್ರಾರ್ಥನೆ ಒಂದಕ್ಕೊಂದು ಅಂಟಿಕೊಂಡು ಯೇಸುವಿನ ಬದುಕಿನಲ್ಲಿ ಹಾಸು ಹೊಕ್ಕಾಗಿದೆ. ಪ್ರಾರ್ಥನೆ ಮೂಲಕ ಎಲ್ಲವೂ ಸಾಧ್ಯ ಎಂಬುದನ್ನು ಕೇವಲ ಬೋಧಿಸಲಿಲ್ಲ ಬದಲಾಗಿ ಅವನು ಮಾಡಿ ತೋರಿಸಿದ.

೪.೪.೧೬ ಬಸವಣ್ಣ ಮತ್ತು ಪ್ರಾರ್ಥನೆ

'ಪ್ರಾರ್ಥನೆ' ಸಾಧಕ ಜೀವಿಗೆ ಒಂದು ಸೌಮ್ಯವಾದ ಸ್ಥಿತಪ್ರಜ್ಞತೆಯ ಜೀವನವನ್ನು ಜೀವಿಸುವಂತೆ ಮಾಡಬಲ್ಲದು. ಬಸವಣ್ಣನಿಗಿಂತ ಪೂರ್ವದಲ್ಲಿ ಅನೇಕ ಜನ ಧಾರ್ಮಿಕ ಸುಧಾರಕರನ್ನು ನಾವು ಕಾಣಬಹುದು. ಆದರೆ ಅವರ್ಯಾರು ಬಸವಣ್ಣನಷ್ಟು ಪ್ರಭಾವಿಗಳಾಗಿರಲಿಲ್ಲ. ಏಕೆಂದರೆ: ಅವರು ಭಿಕ್ಷಾಟನೆ ಮಾಡುವುದರ ಮೂಲಕ ಪರಾವಲಂಬಿಗಳಾಗಿ ಬಾಳುತ್ತಿದ್ದರು. ಇಲ್ಲವೇ ಅತಿಯಾದ ಪ್ರಾಪಂಚಿಕತೆಯಲ್ಲಿ ಮುಳುಗಿದ್ದರು. ಆದರೆ ಬಸವಣ್ಣ ಹಾಗೂ ಶರಣರು ಭಿಕ್ಷಾಟನೆಯನ್ನು, ಪರಾವಲಂಬಿ ಜೀವನವನ್ನು ಸ್ಪಷ್ಟವಾಗಿ ತಿರಸ್ಕರಿಸಿ ತಮ್ಮ ದೃಷ್ಟಿಯನ್ನು ಭಗವಂತನ ಮೇಲೆ ಕೇಂದ್ರೀಕರಿಸಿ ಕಾಯಕನಿಷ್ಠೆಯನ್ನು ಮೆರೆದರು. 'ಕಾಯಕವೇ ಕೈಲಾಸ' ಎಂಬ ಮನೋಭಾವವನ್ನು ಅಂದಿನ ಸಮಾಜದಲ್ಲಿ ಬಿತ್ತಲು ಯಶಸ್ವಿಯಾದರು. ಈ ಪ್ರಪಂಚವಾಗಲಿ, ಪ್ರಪಂಚದ ಆಕರ್ಷಣೆಯಾಲಿ ಭಕ್ತನನ್ನು ತನ್ನ ಸಾಧನ ಮಾರ್ಗದಿಂದ ವಿಚಲಿತನಾಗದಂತೆ ಮಾಡಬಾರದು ಎಂಬುದು ಬಸವಾದಿ ಶರಣರ ಮುಖ್ಯ ಧೋರಣೆಯಾಗಿತ್ತು. ಗುಪ್ತಭಕ್ತಿಯ ಜೀವನಕ್ಕೆ ಬಸವಣ್ಣನೆ ಒಂದು ಮಾದರಿಯಾಗಿದ್ದ. ಬಸವಣ್ಣನ ಪ್ರಾರ್ಥನಾಜೀವಿತ ವಚನಗಳು, ಬೋಧನೆಗಳು ಆತನು ದಿವ್ಯದೊಂದಿಗೆ ನಿರಂತರ ಸಂಬಂಧವನ್ನು ಹೊಂದಿದ್ದನೆಂದು ಬಿಂಬಿಸುತ್ತಿವೆ. ಪ್ರಾರ್ಥನ ಜೀವಿಯಾಗಿದ್ದ ಬಸವಣ್ಣ ಜೀವನದಲ್ಲಿ ಕಷ್ಟ ಕೋಟಲೆಗಳು ಎದುರಾದಾಗ ದೈವವನ್ನು ಪ್ರಶ್ನಿಸುತ್ತಿದ್ದ. ಜೊತೆಗೆ ತನ್ನ ನೂತನ ಸಮಾಜೋ-ಧಾರ್ಮಿಕ ಚಳುವಳಿಯಲ್ಲಿ ತನ್ನ ಸಹಚರರ ಚಿಂತನೆಗಳನ್ನು ಪ್ರೇರಣೆಗಳನ್ನು, ಭಕ್ತಿಯ ವಿವಿಧ ಸ್ವರೂಪಗಳನ್ನು ಗೌರವಿಸುವುದರ ಮೂಲಕ ಶರಣ ಪಥದ ತತ್ವದ ಮುನ್ನೆಡೆಗೆ ಪ್ರೋತ್ಸಾಹಿಸಿದ. ಬಸವಾದಿ ಶರಣರು ನುಡಿದಂತೆ ನಡೆದರು. ಜೊತೆಗೆ ಶರಣಪಥದ ತತ್ವ ಕೇವಲ ಬುದ್ಧಿಮತ್ತೆಯ ಸಿದ್ಧಾಂತವಾಗುವುದರ ಬದಲು; ಅನುದಿನದ ಜೀವನದಲ್ಲಿ ಶರಣಪಥದ ತತ್ವ ಹಾಸುಹೊಕ್ಕಾಗುವಂತೆ ನೋಡಿಕೊಂಡರು. ಹೃದಯತುಂಬಿ ವಚನಗಳನ್ನು ಹಾಡಿದರು. ಅನು ಒಲಿದಂತೆ ಹಾಡಿದರು. ತಮ್ಮ ಭಕ್ತಿಯನ್ನು ತಮ್ಮ ಸಮಾಜದಲ್ಲೆಲ್ಲಾ ಪ್ರವಹಿಸಿದರು.

ಸಮಾಜದಲ್ಲಿ ಇನ್ನೊಬ್ಬರಿಗೆ ಹೊರೆಯಾಗದಂತೆ ಪ್ರತಿಯೊಂದು ಕಾಯಕದಲ್ಲೂ ದೈವಕರೆಯನ್ನು ಕಂಡರು. ಎಲ್ಲಕ್ಕಿಂತಲೂ ಮಿಗಿಲಾಗಿ ಷಟ್‌ಸ್ಥಲ ಸಿದ್ಧಾಂತವನ್ನು ಶರಣರು ಈ ಬುವಿಗಿತ್ತ ಅತ್ಯುತ್ತಮ ಕೊಡುಗೆಯಾಗಿದೆ. 'ಭವಿ' ಎಲ್ಲಾ ಆಶೆಗಳನ್ನು ಮೆಟ್ಟಿ ಭಗವಂತನನ್ನು ಮುಟ್ಟುವ ಬಗೆಯನ್ನು ತೋರಿದರು. ಹಂತಹಂತವಾಗಿ ಭಗವಂತನಲ್ಲಿ ಐಕ್ಯವಾಗುವ ವೈಜ್ಞಾನಿಕ ವಿಧಾನವನ್ನು ಆಧ್ಯಾತ್ಮಿಕ ಜಗತ್ತಿನಲ್ಲಿ ತೋರಿಸಿಕೊಟ್ಟರು. ಬಸವಣ್ಣ ತನ್ನ ಅಚಲ ಭಕ್ತಿಯಿಂದಾಗಿ ಭಕ್ತಿ ಭಂಡಾರಿ ಎನಿಸಿಕೊಂಡ. 'ಭಕ್ತಿ ಶ್ರೀಮಂತ

ಬೆಳೆ ಬಸವಣ್ಣ' ಎಂದು ಚನ್ನಬಸವ ಬಸವಣ್ಣನ ಭಕ್ತಿಯನ್ನು ಕೊಂಡಾಡಿದರೆ, 'ಬಸವಣ್ಣನೆ ಭಕ್ತಿಯ ಅವತಾರ, ನಿರಂತರತೆಯ ಅವತಾರ, ಆನಂದ ಅವತಾರ' ಎಂದು ಸಿದ್ಧರಾಮನು ಘೋಷಿಸಿದ್ದಾನೆ. ಮೂಲ ಭೂತವಾಗಿ ಬಸವಣ್ಣ ಪ್ರಾರ್ಥನ ಜೀವಿಯಾಗಿದ್ದ. ಭಕ್ತಿಯ ಅವತಾರವಾಗಿದ್ದ. ತನ್ನ ವಚನಗಳ ಮೂಲಕ ಓದುಗರ ಹೃದಯದಲ್ಲಿ ಭಕ್ತಿರಸ ಹರಿದಾಡುವಂತೆ ಮಾಡಿದ್ದಾನೆ. ಈ ಬದುಕಿನ ಜಂಜಾಟಗಳಲ್ಲಿ, ಒತ್ತಡ, ಆತಂಕಗಳಲ್ಲಿ ಹೃದಯದ ಬೇನೆಯಲ್ಲಿ ದೈವದಿಂದ ಸಾಂತ್ವನವನ್ನು ಪಡೆಯುವ ಬಗೆಯನ್ನು ವಿವರಿಸುತ್ತಾ 'ಬಂದುದೆಲ್ಲಾ ಬರಲಿ ಭಗವಂತನ ದಯೆ ಒಂದು ಇರಲಿ' ಎಂದು ಭಕ್ತಿ ವಿಶ್ವಾಸದಿಂದ ಭಕ್ತ ಬಾಳುವ ಬಗೆಯನ್ನು ಬಸವಣ್ಣ ತನ್ನ ವಚನಗಳ ಮೂಲಕ ತೋರ್ಪಡಿಸುತ್ತಾನೆ.

ಬಸವಾದಿ ಶರಣರು ಅಧ್ಯಾತ ಸಾಧಕರಿಗೆ ತಮ್ಮ ಜೀವನದ ಮೂಲಕ ಒಂದು ಜ್ವಲಂತ ಪುಸ್ತಕವಾಗಿದ್ದಾರೆ. ಬಸವಣ್ಣ ಗುಡಿಪೂಜೆ, ಯಜ್ಞ ಯಾಗಾದಿಗಳಿಗಿಂತ ಭಾವಪ್ರಜ್ಞೆಗೆ ಒತ್ತು ನೀಡಿದ. ದೇವರು ಪ್ರೀತಿಮಯ ತಂದೆ ಎಂಬುದನ್ನು ಎಲ್ಲರೂ ಅರಿಯಬೇಕೆಂದು ಬಯಸುತ್ತಿದ್ದ. ಪುರೋಹಿತಶಾಹಿ ಜನ ಸಾಮಾನ್ಯರಿಗೆ ದೇವರು ಪ್ರೀತಿಮಯ ತಂದೆ ಎಂಬುದನ್ನು ತೋರಿಸುವುದರ ಬದಲಾಗಿ ಶಿಕ್ಷಿಸುವವನಾಗಿ ಚಿತ್ರಿಸುತ್ತಾ ಜನರನ್ನು ಬೆದರಿಸಿ ತನ್ನ ಹುಳುಕುಗಳನ್ನೆಲ್ಲಾ ಮುಚ್ಚಿಕೊಳ್ಳುತ್ತಿತ್ತು. ಪುರೋಹಿತಶಾಹಿಗೆ ಜನರ ಭಕ್ತಿ ಶೋಷಣೆಗೆ ದಾರಿಯಾಗಿತ್ತು. ಇದನ್ನು ಖಂಡಿಸಿದ ಬಸವ ತನ್ನ ಶರಣರಿಗೆ ಹೊಸ ಪಥವನ್ನು ತೋರಿಸಿದ.

ಈ ಪ್ರಪಂಚ ಹಾಗೂ ಅದರ ಆಕರ್ಷಣೆಗೆ ವಿಮುಖವಾಗಿ ಜೀವಿಸುವುದೇ ಭಕ್ತಿಯ ಮೊದಲ ಮೆಟ್ಟಿಲು. ಇದು ಸಂಸಾರ ಹೇಯಸ್ಥಳ ಎಂದು ಬಸವಣ್ಣನ ವಚನದಲ್ಲಿ ಗುರುತಿಸಬಹುದು. ದೈವಿಕ ಅತೃಪ್ತಿ ಈ ಸಂಸಾರದ ನಿಸ್ಸಾರತೆ ಭಕ್ತನನ್ನು ಭಕ್ತಿಮಾರ್ಗದತ್ತ ದೈವ ಸಾಕ್ಷಾತ್ಕಾರದತ್ತ ತಳ್ಳುತ್ತದೆ. ತನ್ನ ಕಾಲದ ಧಾರ್ಮಿಕ ವಿಧಾನಗಳು, ತೋರಿಕೆಯ ಡಾಂಭಿಕತೆಯ ಧಾರ್ಮಿಕ ಕಾರ್ಯಗಳ ಬಗ್ಗೆ ತೀವ್ರ ಅತೃಪ್ತಿ ಹೊಂದಿದ್ದ. ಬಸವಣ್ಣ ಈ ಪ್ರಪಂಚದ ಆಕರ್ಷಣೆಗಳ ಬಗ್ಗೆಯೂ ಭಯಭೀತನಾಗಿದ್ದ. ಈ ಬುವಿಯ ಐಹಿಕ ಸುಖ ಭೋಗಗಳು ಎಷ್ಟೇ ಆಕರ್ಷಕವಾಗಿದ್ದರೂ ಅವು ವಿಷಕ್ಕೆ ಸಮಾನ ಎಂಬುದನ್ನು ಅರಿತು ದೇವತಂದೆಯನ್ನು ಈ ಬುವಿಯ ಕೃತಿಯ ಆಕರ್ಷಣೆಯ ಕದಂಬ ಬಾಹುವಿನಿಂದ ತನ್ನನ್ನು ರಕ್ಷಿಸೆಂದು ಪ್ರಾರ್ಥಿಸುತ್ತಿದ್ದ. ಈ ಪ್ರಪಂಚದ ರಾಹು ನನ್ನನ್ನು ನುಂಗಿದೆ. ಈ ಗ್ರಹಣದಿಂದ ನನಗೆ ಮುಕ್ತಿ ಎಂದು? ಹಾದಿನ ನೆಳಲಲ್ಲಿ ವಾಸಿಸುವ ಕಪ್ಪೆಯಂತಾಗಿದೆ ಎನ್ನಸ್ಥಿತಿ. ಇಂದು ಏನಾಗುವುದೋ ನಾಳೆ ಏನಾಗುವುದೋ ಎಂದು ಅರಿಯದೆ ಉರಿಯುತ್ತಿರುವ ತೊಗಲಿನ ಭಾರವನ್ನು ಹೊಂದಲಿದೆ. ಈ ಪ್ರಪಂಚದ ಸರ್ಪ ನನ್ನನ್ನು ತನ್ನ ವಿಷಭರಿತ ಪಂಚೇಂದ್ರಿಯಗಳಿಂದ ಕಚ್ಚಿದೆ. ಈ ಬುವಿಯ ತೊಂದರೆ ಕಡಿಮೆಯಾಗುವುದು ಯಾವಾಗ? ನನ್ನ ಮನವೆ ನನ್ನ ಮಾತು ಕೇಳುವುದಿಲ್ಲ. ಒಂದೆಡೆ ಸ್ಥಿರವಾಗಿ ನೆಲೆ ನಿಲ್ಲುವುದಿಲ್ಲ. ಮಂಗನಂತೆ ಕೊಂಬೆಯಿಂದ ಕೊಂಬೆಗೆ ಹಾರುತ್ತಲಿದೆ. ಹಿಟ್ಟು ಕಂಬಳಿಗೆ ಅಂಟಿಕೊಂಡಂತೆ ಮನಸ್ಸು ಸಂಸಾರಕ್ಕೆ ಅಂಟಿಕೊಂಡಿದೆ.

ತನ್ನನ್ನು ದೈವ ತಂದೆ ಸೃಷ್ಟಿಸಿದ ಎಂಬುದನ್ನು ಬಸವಣ್ಣ ಒಪ್ಪಿಕೊಂಡು ಆತನನ್ನು ಸೇರಲು ಮತ್ತು ಹುಡುಕಲು ಬೇಕಾದ ಕೃಪೆಗಾಗಿ ಪ್ರಾರ್ಥಿಸುತ್ತಾನೆ. ಭಕ್ತದೈವಕ್ಕೆ ಹತ್ತಿರವಾದಂತೆಲ್ಲಾ ಆತನ ಶೂನ್ಯತೆಯ ಅನುಭವವಾಗುತ್ತದೆ. ಭಕ್ತನಿಗೆ ದೈವ ಪರಿಪೂರ್ಣನಾಗಿದ್ದು ತಾನು ಶೂನ್ಯವಾಗಿರುವುದನ್ನು ಗುರುತಿಸುತ್ತಾನೆ. ಈ ವಚನದಲ್ಲಿ ಬಸವಣ್ಣ ಈ ರೀತಿ ಪ್ರಾರ್ಥಿಸುತ್ತಾನೆ.

ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ
ವಿಚಾರಿಸಿದಡೆ ಏನೂ ಹುರುಳಿಲ್ಲಯ್ಯಾ
ಪ್ರಪಂಚಿನ ಡಂಬಿನಲ್ಲಿ ಎನ್ನದೊಂದು ರೂಪು ಮಾಡಿ ನೀವಿರಿಸಿದಿರಿ
ಕೂಡಲ ಸಂಗಮದೇವಾ

ಈ ಪ್ರಪಂಚದ ಸುಖ ಕ್ಷಣಿಕವಾದುದು. ಆತ್ಮ ಅದರ ಅರಿವಿಲ್ಲದೆ ಈ ಬುವಿಯು ಒಡ್ಡಿರುವ ಪಾಪದ ಬಲೆಗೆ ಬಿದ್ದು ಪರಿತಪಿಸುತ್ತದೆಂದು ದೈವಕ್ಕೆ ದೂರುತ್ತಾನೆ. ಇಂತಹ ಸಂಕಷ್ಟಗಳಿಂದ ಪಾರು ಮಾಡುವಂತೆ ಪ್ರಾರ್ಥಿಸುತ್ತಾನೆ. ಇದಕ್ಕೆ ಉದಾಹರಣೆಯಾಗಿ:

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ
ಸಂಸಾರ ಸಂಗವ ಬಿಡದು ನೋಡೆನ್ನ ಮನವು
ಈ ನಾಯಿತನವ ಮಾಣಿಸು
ಕೂಡಲ ಸಂಗಮ ದೇವಯ್ಯಾ ನಿಮ್ಮ ಧರ್ಮ

ದಯಮಾಡಿ ನನ್ನ ಮನವನ್ನು ನಿನ್ನ ಪಾದದಲ್ಲಿರುವ ಕಮಲದ ಜೇನುಹುಳವನ್ನಾಗಿ ಮಾಡು. ದೇಹ, ಮನಸ್ಸು, ಇಂದ್ರಿಯ ವ್ಯಾಮೋಹಗಳು ನನ್ನನ್ನು ಮೆತ್ತಿಕೊಂಡಿವೆ. ಕೆಸರಿಗೆ ಬಿದ್ದ ಪಶುವಿನಂತೆ ನಾನಾಗಿದ್ದೇನೆ ಎಂದು ಗೋಳಿಡುತ್ತಾನೆ.

ಯಾವುದೇ ಒಬ್ಬ ಆಧ್ಯಾತ್ಮಿಕ ಸಾಧಕನ ಜೀವನದಲ್ಲಿ ನಡೆಯುವಂತೆ ಬಸವಣ್ಣನು ಸಹ ತನ್ನ ಅಧ್ಯಾತ್ಮಿಕ ಜೀವನದಲ್ಲಿ ಶುಷ್ಕ ಅವಧಿಯ ಅನುಭವವನ್ನು ಅನುಭವಿಸುತ್ತಾನೆ. ತನ್ನ ಪ್ರಾರ್ಥನೆಗಳಿಗೆ ಭಗವಂತ ಉತ್ತರಿಸದಿದ್ದಾಗ ಭಗವಂತನಿಗೆ ಹೃದಯವಿದೆಯಾ ಎಂಬ ಸಂದೇಹವನ್ನು ವ್ಯಕ್ತಪಡಿಸುತ್ತಾನೆ. ಈ ಮರಗಳು ನನಗಿಂತ ಉತ್ತಮವಲ್ಲವೆ? ದಾರಿಹೋಕರಿಗೆ ಅವು ನೆರಳನ್ನು ಕೊಡುತ್ತವೆ; ನೀ ಏಕೆ ಎನಗೆ ಜನ್ಮ ನೀಡಿದೆ? ನಾನು ಅವುಗಳಿಗಿಂತ ಕಡೆಯಾದನೇ ಎಂದು ದೈವವನ್ನು ಕೇಳುತ್ತಾನೆ. ಇಲ್ಲಿ ಬಸವಣ್ಣ ಆರಂಭಿಕ ಅಧ್ಯಾತ್ಮಿಕ ಜೀವನ ಘಟ್ಟವನ್ನು ಕಾಣಬಹುದು. ಇದು ಕೇವಲ ಆರಂಭಿಕ ಘಟ್ಟ. ಅದೇ ಅಧ್ಯಾತ್ಮಿಕವಾಗಿ ಮುಂದುವರಿದ ಸಾಧಕನಾದ ಬಸವಣ್ಣ ಹೀಗೆನ್ನುತ್ತಾನೆ.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ
ಕೂಡಲಸಂಗಮದೇವಾ[1]

ಆರಂಭಿಕ ಘಟ್ಟದಲ್ಲಿ 'ತನ್ನನೇಕೆ ಈ ಬುವಿಗೆ ಕರೆ ತಂದೆ?' ಎಂದು ದೈವವನ್ನು ಪ್ರಶ್ನಿಸುತ್ತಿದ್ದ ಬಸವಣ್ಣ ತದನಂತರ ತನ್ನ ಗುರುವಿನ ಕೃಪೆಯಿಂದಾಗಿ ಈ ಜೀವನದ ಗುರಿ ಹಾಗೂ ಅದನ್ನು ಹೊಂದುವ ಪರಿ ಎರಡನ್ನು ಅರಿತು ತನ್ನದೆಲ್ಲವನ್ನು ಕೂಡಲ ಸಂಗಯ್ಯನಿಗೆ ಅರ್ಪಿಸಿ ಪರಿಪೂರ್ಣ ಶರಣಾಗಿ ಆತನಲ್ಲೇ ಆಶ್ರಯ ಹೊಂದಿ ಹೀಗೆನ್ನುತ್ತಾನೆ:

ತಂದೆ ನೀನು ತಾಯಿ ನೀನು, ಬಂದು ನೀನು ಬಳಗ ನೀನು
ನೀನಲ್ಲದೆ ಮತ್ತಾರೂ ಇಲ್ಲಯ್ಯ
ಕೂಡಲ ಸಂಗಮ ದೇವಾ
ಹಾಲದ್ದುಲ್ಲದು ನೀರಲ್ಲದ್ದು

ಪ್ರಾರ್ಥನೆಯಲ್ಲಿ ದೈವಕ್ಕೆ ಅನಿರ್ಬಂಧಿತವಾಗಿ ಶರಣಾಗುವುದು ಮೊದಲ ಮೆಟ್ಟಿಲು. ವೈಷ್ಣವರು ಇದನ್ನೇ ಪ್ರಪತ್ತಿ ಎಂಬ ಪರಿಕಲ್ಪನೆಯಿಂದ ಕರೆಯುತ್ತಾರೆ.

ಎನ್ನ ವಾಮು - ಕ್ಷೇಮ ನಿಮ್ಮದಯ್ಯಾ
ಎನ್ನ ಹಾನಿ - ವೃದ್ಧಿ ನಿಮ್ಮದಯ್ಯಾ
ಎನ್ನ ಮಾನಾಪಮಾನವೂ ನಿಮ್ಮದಯ್ಯ
ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮ ದೇವಾ[ಽ]

ಹೀಗೆ ಪರಿಪೂರ್ಣವಾಗಿ ದೈವಕ್ಕೆ ಶರಣಾಗುವುದರ ಮೂಲಕ ದೈವಚಿತ್ತಕ್ಕೆ ತನ್ನ ಬದುಕಿನಲ್ಲಿ ನಡೆಯುವುದಕ್ಕೆ ಭಕ್ತ ಸಹಕರಿಸುತ್ತಾನೆ. ದೈವದ ಒಳಿತನ್ನು ಹಾಗೂ ದೈವದೊಂದಿಗೆ ಅನ್ಯೋನ್ಯವಾಗಿ ಭಕ್ತ ಒಂದಾಗಿದ್ದಾಗ ಮಾತ್ರ ಆತನಿಗೆ ಇದರ ಅರಿವು ಸಾಧ್ಯ. ಬಸವಣ್ಣ ತನ್ನ ದೈವಪ್ರೀತಿ, ಶರಣರ ದಯೆ ಅವರ ಕೊಡುಗೆ ಎಂದು ವಿನಮ್ರತೆಯಿಂದ ಒಪ್ಪಿಕೊಳ್ಳುತ್ತಾನೆ.

ಭಕ್ತಿಯಿಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲ್ಲೂ ಬೇಡಿದೆ
ಚೆನ್ನಯ್ಯನ ಮನೆಯಲ್ಲೂ ಬೇಡಿದ
ದಾಸಯ್ಯನ ಮನೆಯಲ್ಲೂ ಬೇಡಿದೆ
ಎಲ್ಲಾ ಪುರಾತರು ನೆರೆದು ಭಕ್ತಿ ಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮ ದೇವಾ

ಬಸವಣ್ಣನ ಮಾತುಗಳಲ್ಲಿ ತೋರಿಕೆಯ ವಿನಯಶೀಲತೆ ಇಲ್ಲ ಬದಲಾಗಿ ಪ್ರತಿಯೊಂದು ಮಾತು ಹೃದಯದ ಅಂತರಾಳದಿಂದ ನೇರವಾಗಿ ಹೊರಹೊಮ್ಮಿದೆ. ಈ ಕೆಳಕಂಡ ವಚನ ಆತನ ಆರ್ದ್ರ ವಿನಯತೆಯನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ. ಇದು ದೈವಕ್ಕೆ ತನ್ನ ಪಲ್ಲವ ಕುರಿತು ಮಾಡುವ ನಿಜವಾದ ಪ್ರಾರ್ಥನೆ.

ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯಲಿಲ್ಲ
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ
ಕೂಡಲಸಂಗಮ ದೇವಾ ಎನಗಿದೇ ದಿಬ್ಯ"

ಬಸವಣ್ಣನ ಕಾಲದಲ್ಲಿ ಅನೇಕ ಧಾರ್ಮಿಕ ನಾಯಕರು ಅಹಂಕಾರವೆಂಬ ಕೇಡನ್ನು ತಮ್ಮ ಜೀವಿತದಿಂದ ತೆಗೆದು ಹಾಕಿದ್ದರು. ಅಹಂಕಾರ ದೈವದಿಂದ ತಮ್ಮ ಸಂಬಂಧವನ್ನು ಅಡ್ಡಿಪಡಿಸುತ್ತದೆಂದು ನಂಬಿದ್ದರು. ಜಾತಿ ಮತ್ತು ಅಂತಸ್ತಿನ ದುರಹಂಕಾರ ಆ ಕಾಲದ ಸಮಾಜದಲ್ಲಿ ಭದ್ರವಾಗಿ ತಳವೂರಿದ್ದವು. ಒಬ್ಬ ವ್ಯಕ್ತಿಯ ಮೌಲ್ಯವನ್ನು ಆತನ ಜಾತಿಯಿಂದ ಅಳೆಯಲಾಗುತ್ತಿತ್ತು. ಜಾತಿಯ ಹಮ್ಮನ್ನು ಮುರಿಯುವುದು ಕಷ್ಟಸಾಧ್ಯವಾಗಿತ್ತು. ಬಸವಣ್ಣ ಈ ಮೂಢನಂಬಿಕೆಯ ವಿರುದ್ಧ ಬಂಡೆದ್ದು ತನ್ನನ್ನೇ ಅಪವರ್ಗೀಕರಿಸಿಕೊಂಡು ಂದಿನ ಸಮಾಜದಲ್ಲಿ ಅತ್ಯಂತ ಕೆಳಮಟ್ಟದಲ್ಲಿದ್ದ ಶೂದ್ರರೊಂದಿಗೆ ಹೃದಯಪೂರ್ವಕವಾಗಿ ತನ್ನನ್ನು ಗುರುತಿಸಿಕೊಂಡು ಜಾತಿ ಸಂಕೋಲೆಗಳನ್ನು ಭಕ್ತಿ, ಪ್ರೀತಿಯಿಂದ ಗೆಲ್ಲಲೆತ್ನಿಸಿದನು. ದೈವದ ಸಾಕ್ಷಾತ್ಕಾರಕ್ಕೆ ಜಾತಿಯ ಅಹಂ ಒಂದು ದೊಡ್ಡ ಅಡ್ಡಗೋಡೆಯಾಗಿತ್ತು ಅದಕ್ಕಾಗಿ ಬಸವಣ್ಣ ತನ್ನ ವಚನದಲ್ಲಿ ದೂರುತ್ತ ಹೀಗೆಂದು ಪ್ರಾರ್ಥಿಸುತ್ತಾನೆ.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ
ಹೊರೆಯ ಹೊರಿಸದಿರಯ್ಯ
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ,
ದಾಸಯ್ಯ ಶಿವದಾನವ ನೆರೆಯ ನೋಡಯ್ಯ
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ
ಉನ್ನತ ಮಹಿಮ
ಕೂಡಲಸಂಗಮ ದೇವಾ ಶಿವಧೋ ಶಿವಧೋ[7]

ಬಸವಣ್ಣ ಆ ಕಾಲದ ಅಸ್ಪೃಶ್ಯರೆಂದೆನಿಸಿಕೊಂಡಿದ್ದ ಚೆನ್ನಯ್ಯ, ದಾಸಯ್ಯ ಕಕ್ಕಯರಿಗಿಂತ ಕಡೆಯವನೆಂದು ಕರೆದುಕೊಳ್ಳುತ್ತಾನೆ. ಇದು ಆತನ ಮಾಗಿದ ಹೃದಯವನ್ನು ತೋರುತ್ತದೆ.

ಬೇರೆಯವರಿಗೆ ಅಧ್ಯಾತ್ಮ ದಾರಿಯನ್ನು ತೋರುವುದಕ್ಕೆ ಮುಂಚೆ ತಾನು ಮೊದಲು ತನ್ನ ಜೀವನವನ್ನು ಶಿಸ್ತಿಗೆ ಒಳಪಡಿಸಿಕೊಂಡು ತನಗೆ ತಾನು ನಾಯಕನಾಗಿ ಇತರರಿಗೆ ಮಾರ್ಗದರ್ಶನ ಮಾಡಬೇಕು. ಬಸವಣ್ಣ ತಾನು ನುಡಿದಂತೆ ನಡೆದ; ತಾನು ನಡೆದಂತೆ ನುಡಿದ. ಅಹಂಕಾರವನ್ನು ತ್ಯಜಿಸುವ ಸಾಧಕ ನಿಧಾನವಾಗಿ ಆಧ್ಯಾತ್ಮಿಕ ಶಿಖರದ ಮೆಟ್ಟಿಲನ್ನು ಏರುತ್ತಾನೆ. ಆಧ್ಯಾತ್ಮದ ದಾರಿ ಕಡುಕಷ್ಟವಾದುದು. ಹೆಜ್ಜೆ ಹೆಜ್ಜೆಗೂ ಕಷ್ಟ. ಕೋಟಲೆಗಳು ಪ್ರಲೋಭನೆಗಳ ಸಾಗರವೇ ಹರಿದು ಬರುತ್ತದೆ. ಇದಕ್ಕೆಲ್ಲಾ ಸಾಧಕ ಭಯಪಡದೆ ದೃಢ ಮನಸ್ಸಿನಿಂದ ಸಾಧನೆ ಗೈಯಬೇಕು. ಎಲ್ಲವನ್ನು ತ್ಯಜಿಸಿ ಸಂಗಮನಲ್ಲಿ ಶರಣಾಗುವುದರ ಮೂಲಕ ತಾನೆಂತಹ ಧೈರ್ಯವಂತ ಹಾಗೂ ತನ್ನ ಪಥಕ್ಕೆ ತಾನೆಷ್ಟು ನಂಬಿಕಸ್ಥನೆಂದು ತೋರಿಸುತ್ತಾನೆ. ನೀನು ನನಗೆ ಕೊಡು ಅಥವಾ ಬಿಡು ಎಲ್ಲವೂ ನಿನಗರ್ಪಣ. ನನಗೆ ಕಷ್ಟಗಳನ್ನು ಕೊಡುವುದರ ಮೂಲಕ ನನ್ನ ಕಷ್ಟ ಸಹಿಷ್ಣುತೆಗಳ ಮೂಲಕ ನನ್ನನ್ನು ಪರೀಕ್ಷಿಸೆಂದು ದೇವರನ್ನು ಪ್ರಾರ್ಥಿಸುತ್ತಾನೆ.

ಒಡೆದೋಡು ಎನ್ನ ಮನೆಯಲಿಲ್ಲದ್ ಮಾಡಯ್ಯಾ
ಕೊಡುದೇವ, ಎನ್ನ ಕೈಯಲೊಂದು ಕರಿಕೆಯನು

ಮೃಢದೇವಾ ಶರಣೆಂದು ಭಿಕ್ಷಕ್ಕೆ ಹೋದಡೆ
ಅಲ್ಲಿ 'ನಡೆದೇವಾ' ಎಂದೆನಿಸು ಕೂಡಲಸಂಗಮ ದೇವಾ

ಸಾವಿರಾರು ಉಳಿಯ ಪೆಟ್ಟುಗಳಿಂದ ಕಗ್ಗಲ್ಲು ಮೂರ್ತಿಯಾಗುವಂತೆ ಸಾಧಕನ ಹೃದಯ ಶೋಧನೆ, ಕಷ್ಟ ಕಾರ್ಪಣ್ಯಗಳಿಂದ ಶುದ್ಧವಾಗುತ್ತದೆ. ಆಗ ವಿಶ್ವಾತ್ಮನ ಚಿತ್ತವನ್ನು ಎಲ್ಲೆಡೆಯೂ ನೋಡುತ್ತದೆ. ಆ ಸ್ಥಿತಿಯಲ್ಲಿ ಸಾಧಕ ತನ್ನ ಎಲ್ಲಾ ನೋವು-ನಿರಾಸೆ ಸುಖ-ದುಃಖವನ್ನು ದ್ವಂದ್ವಗಳನ್ನು ಸಮಸ್ಥಿತಿಯಿಂದ ಕಾಣುತ್ತಾನೆ. ಕಷ್ಟಗಳು ದುಃಖಗಳು ಬಂದಾಗ ಅವನ್ನು ಶಿವನ ಕೃಪೆಯಂತೆ ಸ್ವಾಗತಿಸಿ ಶೋಧನೆಗಳನ್ನು ಜಯಿಸಬೇಕೆಂದು ಬಸವಣ್ಣ ಕರೆ ನೀಡುತ್ತಾನೆ. ಶಿವ ಭಕ್ತಿಗೆ ಕರಗುತ್ತಾನೆ. ಭಕ್ತಿ ಸರಾಗವಾಗಿ ಕಾಣುತ್ತದೆ; ಆದರೆ ಇನ್ನೊಂದು ಅರ್ಥದಲ್ಲಿ ಇದು ಕಷ್ಟವಾಗಿ ಕಾಣಿಸುತ್ತದೆ. ಅಚಲವಾದ ವಿಶ್ವಾಸವಿಲ್ಲದಿದ್ದಲ್ಲಿ ಭಕ್ತಿಯ ಫಲವನ್ನು ಕಾಣದು. ಇದು ಇಬ್ಬಾಯಿ ಕತ್ತಿಯಂತೆ. ಭಕ್ತಿ ಪರಿಪೂರ್ಣ. ಭಕ್ತಿಯಿಂದ ಕರೆದಾಗ ಮಾತ್ರ ಭಗವಂತ ಉತ್ತರಿಸುತ್ತಾನೆ; ಭಕ್ತಿಯಿಲ್ಲದೆ ಕರೆದಡೆ ಆತ ಕೇಳುವುದಿಲ್ಲ.

ಭಕ್ತ ಭಗವಂತನನ್ನು ಅನೇಕ ರೂಪದಲ್ಲಿ ಸಂಬಂಧಗಳಲ್ಲಿ ಪೂಜಿಸಿ ಉಪಾಸಿಸುತ್ತಾನೆ. ಧ್ಯಾನ ಭಾವದಿಂದ, ಸಖ್ಯಭಾವದಿಂದ ಸಂತ ಭಾವದಿಂದ ಉಪಾಸಿಸಿ ಆತನೊಂದಿಗೆ ನಿರಂತರ ಸಂಬಂಧದಲ್ಲಿರಲು ಯತ್ನಿಸುತ್ತಾನೆ. ಬಸವಣ್ಣ ತಾನು ವಿನಮ್ರ ಕರ್ತವ್ಯನಿಷ್ಠ ಸೇವಕನಂತೆ, ಪತಿವ್ರತ ಸ್ತ್ರೀಯಂತೆ, ಸಂಗಮನಲ್ಲಿ ಭಕ್ತಿಯ ಮೂಲಕ ಶರಣಾಗತನಾಗುತ್ತಾನೆ.

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ?
ತನುವಿನಲ್ಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನದೊಳಗೆ ಮನದೊಡೆಯ ನಿದ್ದಾನೊ, ಇಲ್ಲವೋ?
ಇಲ್ಲ ಕೂಡಲ ಸಂಗಮ ದೇವಾ

ಇಲ್ಲಿ ಮನೆ ಅಂದರೆ ಈದೇಹ ಕೂಡಲಸಂಗಮನ ವಾಸಸ್ಥಾನ. ಬಾಗಿಲಲ್ಲಿ ಹುಲ್ಲು ಬೆಳೆದು ಒಳಗೆಲ್ಲಾ ಧೂಳು ತುಂಬಿ ವಾಸಿಸುವುದಕ್ಕೆ ಅಯೋಗ್ಯವಾಗಿದೆ. ಇದೆಲ್ಲವೂ ಶುಚಿಯಾದಾಗ ಮಾತ್ರ ಮನೆಯೊಡೆಯ ಬಂದು ವಾಸಿಸುತ್ತಾನೆ ಎನ್ನುತ್ತಾನೆ ಬಸವಣ್ಣ.

ಬಸವಣ್ಣನ ಪ್ರಾರ್ಥನಾ ಜೀವಿತ ಹಾಗೂ ಶಿಸ್ತು ವೀರಶೈವ ತತ್ವಶಾಸ್ತ್ರದ ಹೃದಯವಾಗಿದೆ. ಷಟ್‌ಸ್ಥಳ ಅದರ ಆಧಾರವಾಗಿದೆ. ಅಷ್ಟಾವರಣಗಳು ನಂಬಿಕೆಯ ಕುರುಹುಗಳಾಗಿವೆ. ಬಸವಣ್ಣ ಭಕ್ತಿ ಮತ್ತು ಪ್ರಾರ್ಥನಾ ಜೀವಿತ ಅಷ್ಟಾವರಣಗಳೊಂದಿಗೆ ಮುಂದುವರಿಯುತ್ತದೆ. ಬಸವಣ್ಣ ತನ್ನ ದೇಹ, ಮನಸ್ಸು ಮತ್ತು ಆತ್ಮವನ್ನು ಗುರು, ಲಿಂಗ, ಜಂಗಮಕ್ಕೆ ಅರ್ಪಿಸಿ ಪ್ರಸಾದ ಮತ್ತು ಪಾದೋದಕವನ್ನು ಸ್ವೀಕರಿಸುತ್ತಾನೆ. ತನ್ನ ಅಂತರಂಗ ಶುದ್ಧತೆಯ ಗುರುತಾಗಿ ಭಸ್ಮ ಮತ್ತು ರುದ್ರಾಕ್ಷಿಯನ್ನು ಧರಿಸಿ ಪ್ರೀತಿ ಮತ್ತು ಭಕ್ತಿಯಿಂದ ಪಂಚಾಕ್ಷರಿ ಮಂತ್ರವನ್ನು ಪಠಿಸುತ್ತಾನೆ.

ಆಧ್ಯಾತ್ಮಿಕ ಪಥದಲ್ಲಿ ಪ್ರಗತಿ ಸಾಧಿಸಲು ಗುರು ಮೊದಲು ಬೇಕು. ಆತನಿಲ್ಲದೆ ಪ್ರಗತಿ ಕಷ್ಟದಾಯಕ. ಬಸವಣ್ಣ ಗುರುವಿನ ಮಹತ್ವವನ್ನು ಹೀಗೆಂದು ಬಣ್ಣಿಸುತ್ತಾನೆ.

ಮಡಕೆಯ ಮಾಡುವಡೆ ಮಣ್ಣು ಮೊದಲು
ತೊಡುಗೆಯ ಮಾಡುವಡೆ ಹೊನ್ನೆ ಮೊದಲು
ಶಿವಪಥವನರಿವಡೆ ಗುರುಪಥವೆ ಮೊದಲು
ಕೂಡಲ ಸಂಗಮ ದೇವನರಿವಡೆ
ಶರಣರ ಸಂಗಮ ಮೊದಲು[೧]

ಅದೆ ಧಾಟಿಯಲ್ಲಿ ಮುಂದುವರೆಯುತ್ತಾ

"ಗುರುವಚನವಲ್ಲದೆ ಲಿಂಗವೆಂದನಿಸದು
ಗುರುವಚನವಿಲ್ಲದೆ ನಿತ್ಯವೆಂದೆನಿಸದು
ಗುರು ವಚನವಲ್ಲದೆ ನೇಮವೆಂದೆನಿಸದು
ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟು
ಉಭಯ ಭ್ರಷ್ಟರ ಮೆಚ್ಚುವನೆ,
ನಮ್ಮ ಕೂಡಲಸಂಗಮ ದೇವ?'[೨]

'ಗುರುವಿಗೆ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ನಾಣ್ಣುಡಿ ಅನುಗುಣವಾಗಿ ಬಸವಣ್ಣ ಗುರುವಿನ ಕೃಪೆಯೊಂದು ಸಾಕು ಸಾಧಕನಿಗೆ ಈ ಭವಸಾಗರವ ದಾಟಲು ಎಂದು ಹೇಳಿ ಗುರು ಕೃಪೆಯನ್ನು ಕೊಂಡಾಡಿದ್ದಾನೆ. ವೀರಶೈವರು ಲಿಂಗವನ್ನು ಕೇವಲ ಕಲ್ಲಲ್ಲೆಂದು ನಿರ್ಜೀವ ವಸ್ತುವೆಂದು ಭಾವಿಸುವುದಿಲ್ಲ. ಬದಲಾಗಿ ಗುರುವಿನಿಂದ ಪ್ರಸಾದಿಸಿದ ಲಿಂಗದಲ್ಲಿ ಗುರುವಿನ ಪ್ರಜ್ಞೆಯು ಶಕ್ತಿ ಅದರಲ್ಲಿರುವುದರಿಂದ ಅದನ್ನು ಉಪಾಸಿಸುವ ಶಿಷ್ಯನಿಗೆ ತಾನು ಶಿವನಾಗುವ ಹಂತವನ್ನು ತಲುಪುತ್ತಾನೆ. ಈ ರಹಸ್ಯದ ಅರಿವಾಗುವುದರಿಂದ ಇಷ್ಟಲಿಂಗಪೂಜೆಯ ಉದ್ದೇಶ ಸಫಲವಾಗುತ್ತದೆ. ಈ ರಹಸ್ಯವನ್ನು ಗುರು ತನ್ನ ಶಿಷ್ಯನಿಗೆ ತಿಳಿಸುತ್ತಾನೆ. ಈ ರಹಸ್ಯ ಗುರುವಿನ ಮೂಲಕ ಅರ್ಥಮಾಡಿಕೊಳ್ಳದಿದ್ದಲ್ಲಿ ರುಂಡವಿಲ್ಲದ ದೇಹಕ್ಕೆ ಕಿರೀಟವಿಟ್ಟಂತೆ ಎಂಬ ಎಚ್ಚರಿಕೆಯನ್ನು ಬಸವಣ್ಣ ನೀಡುತ್ತಾನೆ.

ಲಿಂಗ ಉಪಾಸನೆಯಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದ ಬಸವಣ್ಣ ಜಂಗಮವನ್ನು ಉಪೇಕ್ಷಿಸಲಿಲ್ಲ. ಪ್ರಾರ್ಥನೆ ಮತ್ತು ಆರಾಧನೆ ಜೀವನೊಂದಿಗೆ ಅವಿನಾಭಾವ ಸಂಬಂಧವಿರಬೇಕೆ ಹೊರತು ಕೇವಲ ವಿಧಿ-ವಿಧಾನಗಳಲ್ಲಿ ಅಲ್ಲ ಎಂಬ ತತ್ವವನ್ನು ಪ್ರತಿಪಾದಿಸಿದ ಬಸವಣ್ಣ 'ಜಂಗಮ' ಪದಕ್ಕೆ ವಿಶಾಲಾರ್ಥವನ್ನು ನೀಡುತ್ತಾನೆ. 'ಜಂಗಮ' ಎನ್ನುವುದು ಒಂದು ಜಾತಿ ಸೂಚಕವಲ್ಲ. ಜಂಗಮ ಎಂದರೆ ಎಲ್ಲವನ್ನು ತಿಳಿದಾತ. ತನ್ನತನವನ್ನು ಇಲ್ಲವಾಗಿಸಿಕೊಂಡು ಅಹಂಪ್ರಜ್ಞೆಯನ್ನು ಕಳೆದುಕೊಂಡು ದಾಸೋಽಹಂ ಪ್ರಜ್ಞೆಯನ್ನು ಬೆಳೆಸಿಕೊಂಡ ವಿಶ್ವಾತ್ಮ. ಇದು 'ಜಂಗಮ'ದ ಬಗೆಗೆ ಬಸವಣ್ಣನಿಗಿದ್ದ ನಿಲುವು.

ಜಂಗಮದಲ್ಲಿ ಜಾತಿ ಉಂಟೆ? ಲಿಂಗದಲ್ಲಿ ಕಾಠಿಣ್ಯತೆ ಉಂಟೆ ಎಂದು ಪ್ರಶ್ನಿಸುತ್ತಾನೆ ಬಸವ. ಈ

ಹಿನ್ನೆಲೆಯಲ್ಲಿ ಬಸವಣ್ಣ ಜಂಗಮ ಸೇವೆಗೆ ಪ್ರಾಧಾನ್ಯತೆ ನೀಡುವುದರ ಮೂಲಕ ಲಿಂಗಪೂಜೆಯ ಉದ್ದೇಶ ಪರಿಪೂರ್ಣವಾಗುತ್ತದೆ ಎನ್ನುತ್ತಾನೆ. ಲಿಂಗದ ಶಕ್ತಿ ಜಂಗಮದ ಮೂಲಕ ಕಾರ್ಯ ನಿರ್ವಹಿಸುತ್ತದೆ. ಜಂಗಮ ಸೇವೆ ಮಾಡುವುದರ ಮೂಲಕ ಲಿಂಗಾರ್ಚನೆ ಮಾಡಿದಂತೆ ಎಂಬುದು ಬಸವಣ್ಣನ ನಿಲುವು. ಇದಕ್ಕೆ ಪೂರಕವಾಗಿ ಬಸವಣ್ಣ ಹೀಗೆನ್ನುತ್ತಾನೆ.

ಮರಕ್ಕೆ ಬೇರು ಬಾಯಿಯೆಂದು ತಳಿಯಿಂಕೆ ನೀರನೆರೆದಡೆ

ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಂತೆ
ಮುಂದೆ ಸಕಳಾರ್ಥವನೀವನು
ಆ ಜಂಗಮವ ಹರನೆಂದು ಕಂಡು,
ನರನೆಂದು ಭಾವಿಸಿದಡೆ
ನರಕ ತಪ್ಪದು, ಕಾಣಾ ಕೂಡಲಸಂಗಮ ದೇವಾ"

ಹೀಗೆ ಲಿಂಗ ಮತ್ತು ಜಂಗಮ ಸೇವೆ ಬಸವಣ್ಣನ ವಿಶಿಷ್ಟವಾದ ಭಕ್ತಿಯ ಸಾರವಾಗಿದೆ. ಈ ರೀತಿಯಾದ ದೈವಿಕಪ್ರೀತಿ ಭಕ್ತಿಯ ಭಾವವು ಸಾಗರೋಪಾದಿಯಾಗಿ ಬಸವಣ್ಣನವರಲ್ಲಿ ಉಕ್ಕಿ ಹರಿಯುತ್ತದೆ. ದಿನೇದಿನೇ ಕೂಡಲಸಂಗಯ್ಯ ಆರಾಧನೆಯಲ್ಲಿ ತನ್ನನ್ನೇ ಮುಳುಗಿಸಿಕೊಂಡು ಬಸವಣ್ಣ ಮನತುಂಬಿ ಹಾಡುತ್ತಾನೆ.

ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು
ಹಾಡಿ ನಾಲಗೆ ದಣಿಯದು, ಇನ್ನೇವೆ ನಿನ್ನೇವೆ
ನಾ ನಿಮ್ಮ ಕೈಯಾರೆ ಪೂಜಿಸಿ ಮನದಣಿಯಲೊಲ್ಲದಿನ್ನೇವೆ ನಿನ್ನೇವೆ?
ನಿಮ್ಮ ಉದರವ ಬಗಿದಾನು ಹೊಗುವ ಭರವೆನೆಗೆ.[8]

ಕೂಡಲ ಸಂಗಯ್ಯನನ್ನು ಮನಸಾರೆ ಪ್ರಾರ್ಥಿಸಿ, ಹಾಡಿ, ಪಾಡಿ ಭಜಿಸಿ ಆತನಲ್ಲೇ ಐಕ್ಯವಾಗುವ ತವಕ ಬಸವಣ್ಣನದು. ಭಕ್ತಿ ಮತ್ತು ಪ್ರಾರ್ಥನೆಯನ್ನೇ ಉಸಿರಾಗಿಸಿಕೊಂಡ ಬಸವಣ್ಣ ಅರಿವಿನ ಕುರುಹು ಆದ ದೈವಪ್ರಜ್ಞೆಯಿಂದಾಗಿ ಲಿಂಗಾಂಗ ಸಾಮರಸ್ಯ ಸಾಧಿಸಿದ. ಇದನ್ನೇ ಈ ವಚನದಲ್ಲಿ ಹೀಗೆಂದಿದ್ದಾನೆ.

ಭಕ್ತಿಯೆಂಬ ಪೃಥ್ವಿಯ ಮೇಲೆ, ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟ ಕಳಚಿ ಬೀಳುವಲ್ಲಿ
ಕೂಡಲಸಂಗಮ ದೇವ ತನಗೆ ಬೇಕೆಂದು ಎತ್ತಿಕೊಂಡ.

ವೀರಶೈವ ಪಥದಲ್ಲಿ ಬಸವಣ್ಣ ತನ್ನ ಸಾಧನೆಯನ್ನು ದ್ವೈತ ನೆಲೆಯಲ್ಲಿ ಆರಂಭಿಸಿದರೂ ಅದ್ವೈತದಲ್ಲಿ ಗುರಿ ಕಾಣುತ್ತಾನೆ. ಇದು ದಾಸ ಮತ್ತು ಶರಣ ಪಥಕ್ಕಿರುವ ಮುಖ್ಯ ವ್ಯತ್ಯಾಸ. ದಾಸರು ಹರಿಯೇ ಸರ್ವೋತ್ತಮ ಎನ್ನುವ ದ್ವೈತ ಸಿದ್ಧಾಂತದ ಅನುಯಾಯಿಗಳು. ಅದರ ಭಕ್ತಿ ದ್ವೈತದಲ್ಲಿ ಆರಂಭವಾಗಿ

ಅದ್ವೈತದಲ್ಲೇ ಅಂತ್ಯವಾಗುತ್ತದೆ. ಹರಿಗಿಂತ ಭಿನ್ನವಾಗಿ ಆನಂದವನ್ನು ಸವಿಯುತ್ತ ದ್ವೈತ ಸ್ಥಿತಿಯಲ್ಲೆ ಉಳಿಯುತ್ತಾರೆ. ಆದರೆ ಶರಣರು ದ್ವೈತದಿಂದ ಆರಂಭಿಸಿ ಅದ್ವೈತದಲ್ಲಿ ಮುಕ್ತಿ ಕಾಣುತ್ತಾರೆ. ಸತ್-ಚಿತ್-ಆನಂದವನ್ನು ಅನುಭವಿಸಿ ತಾವೆ ಸಚ್ಚಿದಾನಂದ ಸ್ವರೂಪರಾಗುತ್ತಾರೆ. ಆ ಅಂತಿಮ ಸ್ಥಿತಿಯಲ್ಲಿ ಭಕ್ತಿಯಾಗಲಿ ಭಕ್ತನಾಗಲಿ ಇಲ್ಲ, ಪೂಜಿಸುವವನು ಇಲ್ಲ ಪೂಜಿಸಲ್ಪಡುವುದೂ ಇಲ್ಲ. ಭಕ್ತ ಈ ಎಲ್ಲಾ ದ್ವಂದ್ವಗಳನ್ನು ದಾಟಿ ವಿಶ್ವಾತ್ಮನೊಂದಿಗೆ ಒಂದಾಗುತ್ತಾನೆ. ಇದನ್ನೇ ಬಸವಣ್ಣನು ಈ ರೀತಿ ಹಾಡಿದ್ದಾನೆ:

ಪೂಜೆಯುಳ್ಳನ್ನ ಬರ ಲಿಂಗವ ಹಾಡಿದೆ
ಮಾಟವುಳ್ಳನ್ನ ಬರ ಲಿಂಗವ ಹಾಡಿದೆ
ಮಾಟವುಳ್ಳನ್ನ ಬರ ಜಂಗಮವ ಹಾಡಿದೆ
ಜಿಹ್ವೆಯುಳ್ಳನ್ನ ಬರ ಜಂಗಮವ ಹಾಡಿದೆ
ಈ ತ್ರಿವಿಧ ನಾಸ್ತಿಯಾದ ಬಳಿಕ
ಎನ್ನ ನಾ ಹಾಡಿಕೊಂಡೆ ಕಾಣಾ
ಕೂಡಲಸಂಗಮ ದೇವಾ"೩

ಬಸವಣ್ಣನ ಭಕ್ತಿಪಥದಲ್ಲಿ ಭಾವನಾತ್ಮಕ ಸಂಭ್ರಮ, ತಾತ್ವಿಕ ದೃಷ್ಟಿಕೋನ, ಮನುಕುಲದ ಒಳಿತಿಗಾಗಿ ಚಲನಶೀಲ ದಯೆ ಇದೆ. ಬಸವಣ್ಣನ ಭಕ್ತಿ ಕೇವಲ ಭಾವನಾತ್ಮಕ ಬಡಬಡಿಕೆಯಲ್ಲ, ಶುಷ್ಕ ತಾತ್ವಿಕ ಅನ್ವೇಷಣೆ ಹಾಗೂ ಕೂದಲು ಸೀಲುವಿಕೆಯಂತವಾದವಲ್ಲ. ಬದಲಾಗಿ ಜೀವನನ್ನು ಶಿವನನ್ನಾಗಿಸುವ ಸಾಧನ. ನದಿ ಸಾಗರವ ಸೇರಿ ಸಾಗರವೇ ಆಗುವಂತೆ ಬಸವಣ್ಣನ ಭಕ್ತಿಯು ಕೂಡಲಸಂಗಮನನ್ನು ನೆನೆದು ಅಂತಿಮವಾಗಿ ಕೂಡಲ ಸಂಗಮವೇ ಆಗುವುದಾಗಿದೆ.

ಮಹಾ ಬೆಳಕಿನಲ್ಲಿ ಬೆಳಕು ಇರುವಂತೆ, ಮೌನದಲ್ಲಿ ಶಬ್ದವಿರುವಂತೆ ಬಸವಣ್ಣನ ಜೀವನ ಮಹಾಮೌನದಲ್ಲಿ ಒಂದಾಗುತ್ತದೆ.

ಮಾತಿಲ್ಲ ನುಡಿಯಿಲ್ಲ ಏತಕ್ಕೆ ಮುನಿದಿರಿ?
ಮಾತಾಡಿದಡೆ ಕೆಯ್ಯ ಬೆಳಸೆಂಬುದನಿರಿಯಿರೆ ಅಯ್ಯಾ?
ಮಾತು ಕೆಟ್ಟಲ್ಲದೆ ತಾನಾಗಬಾರದು
ಕೂಡಲ ಸಂಗಮ ದೇವಯ್ಯಾ
ಮಾತಿಂದ ಬರ್ಕು ಭವಭಾರ ಘೋರ

ಈ ರೀತಿಯಾಗಿ ಬಸವಣ್ಣ ಅಂತಿಮ ಮೌನವನ್ನು ವಿವರಿಸಿ ಮಾತೆ ಮೌನವಾಗುವ ಚಿತ್ರಣ ನೀಡುತ್ತಾನೆ. ಆದಾಗ್ಯೂ ಮಾನವನ ಮಾತುಗಳಿಗೆ ನಿಲುಕದ ಮೌನದ ಮಹಾಬೆಳಕನ್ನು ಹೀಗೆಂದು ವರ್ಣಿಸುತ್ತಾನೆ:

ಘನಗಂಬೀರ ಮಹಾಘನದೊಳಗೆ
ಘನಕ್ಕೆ ಘನವಾಗಿದ್ದೆನಯ್ಯಾ
ಕೂಡಲ ಸಂಗಮ ದೇವಯ್ಯನೆಂಬ

ಮಹಾ ಬೆಳಗಿನ ಬೆಳಗಿನೊಳಗಿದ್ದೇನೆಂಬ ಶಬ್ದ
ಮುಗ್ಧವಾದುದನೇನೆಂಬೆನಯ್ಯಾ?

ಸಮಸ್ತ ಕತ್ತಲೆಯ ಮುಸಕವ ಕಳೆದಿಪ್ಪ ಇರವ ನೋಡಾ
ಬೆಳಗಿಗೆ ಬೆಳಗು ಸಿಂಹಾಸನವಾಗಿ
ಬೆಳಗು ಬೆಳಗ ಕೂಡಿದ ಕೂಟವ
ಕೂಡಲ ಸಂಗಯ್ಯ ತಾನೆ ಬಲ್ಲ!

ಮಹದ್ ಗಾಂಭೀರ್ಯದ ಅತ್ಯಂತ ಉನ್ನತಮಯವಾದುದರೊಳಗೆ ಅತ್ಯುನ್ನತವಾಗಿದ್ದ ಕೂಡಲ ಸಂಗಮದೇವನೆಂಬ ಬೆಳಗಿನ ಮುಂಬೆಳಗಿನಲ್ಲಿ ಶಬ್ದ ಮುಗ್ಧವಾದುದು ಎಂದೆಂಬನು ಎಂಬುದರ ಮೂಲಕ ತಾನು ಆಧ್ಯಾತ್ಮಿಕವಾಗಿ ಯಾವ ಮಟ್ಟದಲ್ಲಿದ್ದೆನೆಂಬುದು ಬಸವಣ್ಣ ಇಲ್ಲಿ ವ್ಯಕ್ತಪಡಿಸುತ್ತಾನೆ.

ಬೆಳಕು ಬೆಳಕಿನೊಂದಿಗೆ ಬೆರೆತು ಮಹಾ ಬೆಳಕಾಯಿತು. ಕೊನೆಯಲ್ಲಿ ಉಳಿಯುವುದು ಬೆಳಕೆ. ಅದೇ ರೀತಿ ಪ್ರಾರ್ಥನೆ ಮಾನವನನ್ನು ದೈವಿಕತೆಯತ್ತ ಕರೆದೊಯ್ದು ದೈವದೊಂದಿಗೆ ಬೆರಸಿ ಜೀವವು ಶಿವನಾಗುವುದಕ್ಕೆ ದಾರಿಯಾಗಿದೆ. ಇದಕ್ಕೆ ಮುಖ್ಯವಾಗಿ ಬೇಕಾಗಿರುವುದು ವಿಶ್ವಾಸ. ಬಸವಣ್ಣ ತನ್ನ ಪ್ರಾರ್ಥನಾ ಜೀವಿತ ಹಾಗೂ ಭಕ್ತಿಯ ಮೂಲಕ ತಾನು ಅನುಭವಿಸಿದ ದೈವಿಕತೆಯನ್ನು ಅನುಭವಿಸಲು ವಚನ ಸಂವಾದದ ಮೂಲಕ ಕರೆ ನೀಡುತ್ತಾನೆ.

೪.೫ ಪರ್ವತ ಮೇಲಿನ ಪ್ರಸಂಗ ಮತ್ತು ಯೇಸುಕ್ರಿಸ್ತ

ಪ್ರಪಂಚದ ಎಲ್ಲಾ ಮಹನೀಯರುಗಳಿಂದ ಹಿಡಿದು ಸಮಾಜದ ಕಟ್ಟ ಕಡೆಯ ವ್ಯಕ್ತಿಯ ವರೆಗೂ ಎಲ್ಲರೂ ಒಪ್ಪುವ ಅಪ್ಪುವ ಸರ್ವ ಜನಪ್ರಿಯ ಬೋಧನೆ ಎಂದರೆ **ಯೇಸುವಿನ ಪರ್ವತ ಪ್ರಸಂಗ** ಎಂದರೆ ಉತ್ಪ್ರೇಕ್ಷೆಯಾಗಲಾರದು. ನಮ್ಮ ರಾಷ್ಟ್ರದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಯೇಸುವಿನ ಪರ್ವಥ ಪ್ರಸಂಗವನ್ನು ಪ್ರತಿದಿನ ಓದಿ ಧ್ಯಾನಿಸುತ್ತಿದ್ದರೆಂದು ಅವರೇ ಹೇಳಿಕೊಂಡಿದ್ದಾರೆ. ಅವರ ಅಹಿಂಸಾ ಮನೋಭೂಮಿಕೆಗೆ ಪರ್ವತ ಪ್ರಸಂಗ ಬಹಳಷ್ಟು ಪ್ರೇರಣೆಯಾಯಿತು. ಇಡೀ 'ಕ್ರೈಸ್ತ ಧರ್ಮ ಸಾರ' ಪರ್ವತ ಪ್ರಸಂಗದಲ್ಲಿದೆ. ಯೇಸುವಿನ ಜೀವನ ಎರಡು ಅಂಕಗಳ ನಾಟಕವಿದ್ದಂತೆ ಮೊದಲನೇ ಅಂಕದಲ್ಲಿ ಯೇಸು ತಾನು ಪರ್ವತದ ಮೇಲೆ ಕುಳಿತು ಬೋಧಿಸಿದರೆ ಎರಡನೆ ಅಂಕದಲ್ಲಿ ಕಲ್ವಾರಿ ಬೆಟ್ಟದಲ್ಲಿ ಶಿಲುಬೆಯಲ್ಲಿ ಪ್ರಾಣ ಕೊಡುವುದರ ಮೂಲಕ ಬೋಧಿಸಿದನ್ನು ಸಾಧಿಸುತ್ತಾರೆ.

ಹೇಗೆ ಹಗಲಿನಿಂದ ಇರುಳನ್ನು ಬೇರ್ಪಡಿಸಲು ಆಗುವುದಿಲ್ಲವೋ ಹಾಗೆಯೇ ಪರ್ವತ ಮೇಲಿನ ಪ್ರಸಂಗದಿಂದ ಯೇಸುವಿನ ಶಿಲುಬೆಯನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಯೇಸುಸ್ವಾಮಿ ಬೋಧಿಸಲಿದ್ದ ಅಷ್ಟಭಾಗ್ಯಗಳನ್ನು ಅನುಸರಿಸುವ ಪ್ರತಿಯೊಬ್ಬನು ಪ್ರಪಂಚದ ಕೋಪಕ್ಕೆ ಬಲಿಯಾಗಬೇಕಾಗುತ್ತದೆ. ಪ್ರಪಂಚದಲ್ಲಿ ಎಲ್ಲರೂ ಸಂತೋಷವಾಗಿ ಭಾಗ್ಯವಂತರಾಗಿ ಜೀವಿಸಬೇಕೆಂದು ಬಯಸುತ್ತಾರೆ.[೧೪೫] ಆದರೆ ಯೇಸುಕ್ರಿಸ್ತ ಬೋಧಿಸುವ ಪರ್ವತದ ಮೇಲಿನ ಪ್ರಸಂಗವನ್ನು ಅನುಸರಿಸಿದರೆ ಎಲ್ಲರೂ ಸಂತೋಷವಾಗಿ ಭಾಗ್ಯವಂತರಾಗಿ ಬಾಳಬಹುದು ಆ ಸಂತೋಷ ಪ್ರಾಪಂಚಿಕ ದೃಷ್ಟಿಯ ಸಂತೋಷವಲ್ಲ.

೪.೫.೧ ಅಷ್ಟ ಭಾಗ್ಯಗಳು

ಯೇಸು ನೀಡಿದ ಮೊದಲನೆ ಸೂತ್ರ ಮನಮೋಹಕವಾದದ್ದು. 'ಪಾರಮಾರ್ಥಿಕವಾಗಿ ಬಡವರೆನಿಸಿದವರು ಭಾಗ್ಯವಂತರು; ಸ್ವರ್ಗ ಸಾಮ್ರಾಜ್ಯಕ್ಕೆ ಅವರೇ ಬಾಧ್ಯಸ್ಥರು."[೧೪೬] ಯೇಸುವಿನ ಈ ಮಾತುಗಳನ್ನು ಅರ್ಥ ಮಾಡುವುದು ಸುಲಭ. ಮನುಷ್ಯನಿಗೆ ಮುಖ್ಯವಾದದ್ದು ದೀನ ಮನಸ್ಸು. 'ಪಾರಮಾರ್ಥಿಕವಾಗಿ ನಾನು ಏನೂ ಅಲ್ಲಾ - ಭಗವನಂತ ನೀನೆ ಎಲ್ಲಾ' ಎಂಬ ಮನೋಭಾವ. ಇದು ಯಾರಲ್ಲಿ ಇರುತ್ತದೆಯೋ ಅವರೇ ಪಾರಮಾರ್ಥಿಕವಾಗಿ ಬಡವರು. ದುರಹಂಕಾರ, ದುರಭಿಮಾನ ಮನುಷ್ಯನ ಅಧಃಪತನಕ್ಕೆ ಮೂಲ. ದೀನ ಮನಸ್ಸು ಒಂದು ದೊಡ್ಡ ಸದ್ಗುಣ. ಒಳ್ಳೆಯ ನಡತೆಗೆ ದೀನ ಮನಸ್ಸಿಗೆ ದೀನತೆ ಆಭರಣವಿದ್ದಂತೆ. ಮನಸ್ಸಿನಲ್ಲಿ ಹಿಗ್ಗದೆ, ಕುಗ್ಗದೆ, ಬಗ್ಗದೆ, ಜಗ್ಗದೆ, ಸನ್ಮಾರ್ಗದಲ್ಲಿ ನಡೆಯುವುದೇ ದೀನತೆಯ ಲಕ್ಷಣ. ಅಂಥವರಿಗೆ ಸ್ವರ್ಗಸಾಮ್ರಾಜ್ಯ ಲಭಿಸುವುದು.

ಯೇಸು ನೀಡಿದ ಎರಡನೇ ಸೂತ್ರ ಮೇಲೆ ಹೇಳಿದ ಸೂತ್ರದೊಂದಿಗೆ ಮುಂದುವರಿಸಿ ನೋಡಬಹುದು:

'ವಿನಯಶೀಲರು ಭಾಗ್ಯವಂತರು
ದೇವರ ವಾಗ್ದತ್ತ ನಾಡು ಅವರದು'[೧೪೭]

ಇಲ್ಲಿ ವಿನಯಶೀಲತೆ ಎಂದರೆ ಸೋತು ಶರಣಾಗತನಾದವನ ಲಕ್ಷಣವಲ್ಲ. ಕೈಲಾಗದ ಹೇಡಿಯ ಸ್ಥಿತಿಯಲ್ಲ. ವಿನಯಶೀಲತೆ ವ್ಯಕ್ತಿಗೆ ಆಭರಣವಿದ್ದಂತೆ. ಸಣ್ಣವರು ದೊಡ್ಡವರೆನಿಸಿಕೊಂಡು, ದೊಡ್ಡವರು ಸರಳವಾಗಿ ಬಾಳುವ ಪೂರ್ಣ ಪ್ರಮಾಣದ ಹೊಂದಾಣಿಕೆಯೆ ನಿಜವಾದ ವಿನಯಶೀಲತೆ. ಇಲ್ಲಿ ಒಣ ಜಂಭಕ್ಕೆ ಅವಕಾಶವಿಲ್ಲ. ದೇವರ ಚಿತ್ತವನ್ನು ತನ್ನ ಬಾಳಿನಲ್ಲಿ ಸ್ವೀಕರಿಸುವವನು ವಿನಯಶೀಲನಾಗುತ್ತಾನೆ. ಬಾಳು ಹಸನಾಗಲು ವಿನಯಶೀಲತೆ ಬೇಕೆಬೇಕು. ವಿನಯಶೀಲತೆ ವಿದ್ಯೆಯಿಂದ ಸತ್ಸಂಗದಿಂದ, ದೈವ ಇಚ್ಛೆಗೆ ಸಂಪೂರ್ಣವಾಗಿ ತಲೆ ಬಾಗುವುದರಿಂದ ಬರುತ್ತದೆ. ದೇವರ ನಾಡಿಗೆ ಅದೊಂದು ದಾರಿ.

ಯೇಸು ಮೂರನೇ ಸೂತ್ರವನ್ನು ಅನಾವರಣಗೊಳಿಸುತ್ತಾರೆ.
ದುಃಖಿಗಳು ಭಾಗ್ಯವಂತರು ದೇವರು ಅವರನ್ನು ಸಂತೈಸುವರು.[೧೪೮]

ಮಾನವನ ಬದುಕು ಬೇವು-ಬೆಲ್ಲ ಇದ್ದಂತೆ. ದುಃಖ-ಸುಖ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. 'ನೀನಕ್ಕರೆ ಇಡೀ ಜಗತ್ತೇ ನಿನ್ನೊಂದಿಗೆ ನಗುತ್ತದೆ' ಎಂದು ಪ್ರಪಂಚ ಹೇಳಿದರೆ-ಯೇಸು ಹೇಳುತ್ತಾರೆ "ನೀ ಅಳು ಆಗ ನೀ ಭಾಗ್ಯವಂತನಾಗುವೆ' ಎಂಥ ವಿಪರ್ಯಾಸದ ಹೇಳಿಕೆ. ಯೇಸು ಇಲ್ಲಿ ವಿವಿಧ ಹಿಂಸೆಗಳಿಗೆ ಒಳಗಾಗಿ ದುಃಖಿಗಳಾಗಿರುವವರನ್ನು ಕುರಿತು ಹೇಳುವಾಗ ಅವರ ಸಾಂತ್ವನ ದೇವರು. ಇಂದು ಶ್ರೀಮಂತರ ದರ್ಪಕ್ಕೆ ಒಳಗಾಗಿ, ತುಳಿತಕ್ಕೆ ಒಳಗಾಗಿ ನೋವೂ ಹಿಂಸೆ, ದುಃಖಕ್ಕೆ ಒಳಗಾಗಿ ನೀ ದುಃಖಿಯಾಗಿದ್ದರೆ ದೇವರಿಂದಲೇ ಸಾಂತ್ವನವನ್ನು ಪಡೆಯುವಿ ಎನ್ನುತ್ತಾರೆ. ದೇವರು ಕಷ್ಟ ಪಡುವವರ, ದುಃಖಿಗಳ ಬಂಧು, ಸ್ನೇಹಿತ ಹಾಗೂ ಪರಿಪಾಲಕನಾಗಿರುತ್ತಾನೆ. ಯೇಸುವಿನ ಮೂರನೇ ಸೂತ್ರ ತಿಳಿದ ಮೇಲೆ ನಾಲ್ಕಕ್ಕೆ ಹೇಗಬಹುದು.

ಯೇಸುವಿನ ನಾಲ್ಕನೆಯ ಸೂತ್ರ ಹೀಗಿದೆ:

ನ್ಯಾಯ ನೀತಿಗಾಗಿ ಹಾತೊರೆಯುವವರು ಭಾಗ್ಯವಂತರು
ದೇವರು ಅವರಿಗೆ ಸಂತೃಪ್ತಿಯನ್ನೀಯುವರು.[೧೪೯]

ಪ್ರತಿಯೊಬ್ಬರು ಸಮಾಜದಲ್ಲಿ ನ್ಯಾಯ ನೀತಿಯ ಅನುಷ್ಠಾನಕ್ಕೆ ಶಕ್ತಿ ಮೀರಿ ಶ್ರಮಿಸಬೇಕು. ಸಮಾಜದಲ್ಲಿ ಕಾನೂನಿನ ದೃಷ್ಟಿಯಿಂದ ನೀಡಿದ ಸೂತ್ರವಲ್ಲ. ನ್ಯಾಯನೀತಿಯನ್ನು ಗಾಳಿಗೆ ತೂರಿ ಭ್ರಷ್ಟಾಚಾರ-ಅನಾಚಾರ-ಅತ್ಯಾಚಾರಗಳ ವಿರುದ್ಧ ಧ್ವನಿಎತ್ತುವಂತೆ ಈ ಸೂತ್ರ ಎಲ್ಲರಿಗೂ ಕರೆ ನೀಡುತ್ತದೆ. ಸಾಮಾಜಿಕವಾಗಿ, ಆರ್ಥಿಕವಾಗಿರುವ ಬಡವರನ್ನು, ದೀನ ದಲಿತರನ್ನು, ಸಮಾಜದ ತಳ ಸಮುದಾಯದವರನ್ನು ಅಸ್ಪೃಶ್ಯರನ್ನು ಕಾಡುವವರನ್ನು ತನ್ನ ಸೃಷ್ಟಿಕರ್ತನ್ನು ನಿಂದಿಸಿದಂತೆ. ಆದುದರಿಂದ ಪ್ರತಿಯೊಬ್ಬರು ಸಾಮಾಜಿಕ ನ್ಯಾಯಕ್ಕಾಗಿ ಮುಖ ಮಾಡಬೇಕು. ದೇವರು ಅವರಿಗೆ ಸಂತೃಪ್ತಿಯನ್ನು ನೀಡುವರು.

ಈಗ ಯೇಸುವಿನ ಐದನೇ ಸೂತ್ರವನ್ನು ವ್ಯಾಖ್ಯಾನಿಸೋಣ:

‘ದಯಾವಂತರು ಭಾಗ್ಯವಂತರು
ದೇವರ ದಯೆ ಅವರದ್ದಾಗುವುದು’[೧೫೦]

ದಯೆಯೆ ಧರ್ಮದ ಮೂಲವಯ್ಯ, ದಯೆ ಇಲ್ಲದ ಧರ್ಮ ಯಾವುದಯ್ಯಾ ಎನ್ನುವ ಅಣ್ಣ ಬಸವಣ್ಣನ ಮಾತುಗಳು ಯೇಸುವಿನ ಈ ಸೂತ್ರಕ್ಕೆ ದಯಾಭಾಗ್ಯವನ್ನು ಬರೆದಂತಿದೆ. ಇಂಥ ದಯೆ ಯಾರಿಗೆ ಬೇಡ?

ನ್ಯಾಯಕ್ಕಾಗಿ ದೇವರ ನಿಮಿತ್ತ ಹಿಂಸೆಯನ್ನು ಸಹಿಸುವಾಗ ಸಂತೋಷಪಡಿ. ಏಕೆಂದರೆ ನೀವೊಂದು ನ್ಯಾಯವಾದ ಕಾರಣಕ್ಕಾಗಿ ಸತ್ಯಕ್ಕಾಗಿ, ಇತರರ ಒಳಿತಿಗಾಗಿ ಹಿಂಸೆಯನ್ನು ಪಡುತ್ತಿರುವಿರಿ ದೇವರ ಸಾಮ್ರಾಜ್ಯ ನಿಮ್ಮದಾಗುವುದು ಎನ್ನುತ್ತಾರೆ ಯೇಸುಸ್ವಾಮಿ. ಈ ಎಲ್ಲಾ ಅಷ್ಟಸೂತ್ರಗಳನ್ನು ಅನುಸರಿಸುವುದರಿಂದ ಉಂಟಾಗುವ ಪ್ರತಿಫಲವೇನು ಎಂಬುದನ್ನು ಯೇಸು ಸ್ಪಷ್ಟ ಮಾತುಗಳಲ್ಲಿ ಹೀಗೆನ್ನುತ್ತಾರೆ.

“ನೀವು ನನ್ನ ಶಿಷ್ಯರಾದ್ದರಿಂದ ನಿಮ್ಮನ್ನು ಧಿಕ್ಕರಿಸುವರು, ಹಿಂಸಿಸಿ, ಅನ್ಯಾಯವಾಗಿ ಇಲ್ಲ ಸಲ್ಲದ್ದನ್ನು ನಿಮ್ಮ ಮೇಲೆ ಹೊರಿಸುವರು. ಆಗ ನೀವು ಭಾಗ್ಯವಂತರು. ಅದಕ್ಕಾಗಿ ಹರ್ಷಿಸಿ, ಆನಂದಪಡಿ, ಏಕೆಂದರೆ ಸ್ವರ್ಗದಲ್ಲಿ ನಿಮಗೆ ಸಿಗುವ ಪ್ರತಿಫಲ ಹಿರಿಮೆ ನಿಮಗಿಂತ ಮೊದಲಿದ್ದ ಪ್ರವಾದಿಗಳನ್ನು ಜನರು ಹೀಗೆಯೇ ಚಿತ್ರಹಿಂಸೆಗೆ ಒಳಪಡಿಸಿದರು.”[೧೫೧] ಯೇಸುವನ್ನು ಹಿಂಬಾಲಿಸಿ ಹೋದರೆ ತಮಗೆ ಏನಾಗಬಹುದು ಎಂಬುದರ ಮುನ್ಸೂಚನೆ ಮೇಲಿನ ಮಾತಿನಲ್ಲಿದೆ. ಯೇಸು ನೀಡಿದ್ದ ಈ ಅಷ್ಟಸೂತ್ರಗಳ ಅನುಷ್ಠಾನ ಎಲ್ಲೆಲ್ಲೂ ಸಂತೋಷದ ಪ್ರಕ್ಷೇಪಣವಾಗಲಿತ್ತು. ಸೂತ್ರಗಳನ್ನು ತಿರಸ್ಕರಿಸಿದ್ದೆಯಾದರೆ ಎಲ್ಲೆಲ್ಲೂ ಅಸಂತುಷ್ಟಿ ಹರಡಲಿತ್ತು.

೪.೫.೨ ಕೋಪ ಕೊಲೆಗೆ ಮೂಲ

ಯೇಸುಸ್ವಾಮಿಯ ಬೋಧನೆಗಳು ನೂತನವಾಗಿದ್ದರೂ ಅನು ಹಳೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ಬೋಧನೆಯನ್ನಾಗಲಿ ತಿರಸ್ಕರಿಸುವುದಿಲ್ಲ. ಬದಲಾಗಿ ಅವುಗಳನ್ನು ಪರಿಪೂರ್ಣಗೊಳಿಸಲು ಬಂದಿವೆ. ಹೀಗೆ ಹೇಳುವುದರ ಮೂಲಕ ತಾನು ಸಮಾಜದಲ್ಲಿ ಒಂದು ಆಂದೋಲನವನ್ನೇ ಹುಟ್ಟುಹಾಕುತ್ತಿರುವುದನ್ನು ಯೇಸುಸ್ಪಷ್ಟಪಡಿಸುತ್ತಾರೆ. ‘ದಯೆ ತೋರು-ದಯೆ ಬೇಡು’ ಆಗ ಮಾತ್ರನ ಈ ದಯೆಗೆ ಅಡಿ ಮಾನವನ ತಪ್ಪುಗಳನ್ನು ಕ್ಷಮಿಸುವ ಸ್ವರ್ಗದ ತಂದೆಯ ಆದರ್ಶವನ್ನು ನಾವು ಅನುಸರಿಸಬೇಕು. ಆಗ ದೇವರ ಕರುಣೆ, ದಯೆ ನಮ್ಮ ಮೇಲೆ ಇರುತ್ತದೆ. ಇಂತಹ ಜನರು ಬೇರೆಯವರು. ಅವರಿಗೆ ಕೇಡನ್ನು ಮಾಡಿದರೂ ಅಂತಹವರಿಗೆ ಒಳ್ಳೆಯದನ್ನೇ ಮಾಡುವರು. ಯೇಸುಸ್ವಾಮಿಯ ಆರನೇ ಸೂತ್ರ ಹೀಗಿದೆ:

“ನಿರ್ಮಲ ಹೃದಯಿಗಳು ಭಾಗ್ಯವಂತರು
ಅವರು ದೇವರನ್ನು ಕಾಣುವರು”[೧೫೨]

ಯಾವುದೇ ಕಪಟತನ ಅಥವಾ ಮೋಸವಿಲ್ಲದೆ ಪರಿಶುದ್ಧವಾದ ಜೀವನವನ್ನು ನಡೆಸುವರು. ತ್ರಿಕರಣ ಶುದ್ಧಿಯುಳ್ಳವರಾಗಿ ಅಡ್ಡಹಾದಿ ಕಾಮತೃಷೆಯನ್ನು ವರ್ಜಿಸುವುದಲ್ಲದೆ ಬಾಳಿನಲ್ಲಿ ಶುದ್ಧವಾದ ಗುರಿಯನ್ನು ಹೊಂದಿರುತ್ತಾರೆ. ಇಂತಹವರಿಗೆ ದೇವರನ್ನು ಕಾಣುವ ಭಾಗ್ಯ ಲಭಿಸುವುದು.

ಯೇಸುಸ್ವಾಮಿಯ ಏಳನೇ ಸೂತ್ರ ಹೀಗಿದೆ:

"ಶಾಂತಿಗಾಗಿ ಶ್ರಮಿಸುವರು ಭಾಗ್ಯವಂತರು
ಅವರು ದೇವರ ಮಕ್ಕಳೆನಿಸಿಕೊಳ್ಳುವರು"[೧೫೩]

ಇಡೀ ಪ್ರಪಂಚದ ಶಾಂತಿಗೆ ಮತ್ತು ಸೌಹಾರ್ದತೆಗೆ ದೇವರೆ ಮೂಲ ಕಾರಣ. ನ್ಯಾಯದಿಂದ ಕೂಡಿದ ಕ್ರಮಬದ್ಧತೆ ಶಾಂತಿಗೆ ಕಾರಣವಾಗಿದೆ. ಶಾಂತಿಯು ಬೇರೆಯವರ ಹಕ್ಕನ್ನು ಗೌರವಿಸುತ್ತದೆ. ಯುದ್ಧ, ಕಲಹ, ಗಲಾಟೆಗಳಲ್ಲಿ ಶಾಂತಿಯನ್ನು ಸ್ಥಾಪಿಸಲು ಯಾರು ಮಧ್ಯವರ್ತಿಯಾಗಿ ಮುಂದೆ ಬರುವರೋ ಅಂತಹ ವ್ಯಕ್ತಿಯ ಶಾಂತಿಪ್ರಿಯ ದೇವರ ಮಕ್ಕಳೆನಿಸಿಕೊಳ್ಳುತ್ತಾರೆ. ಶಾಂತಿಗಾಗಿ ಶ್ರಮಿಸುವರು ಸ್ವಾರ್ಥಿಗಳ, ಯುದ್ಧಕೋರರ, ಕೆಟ್ಟ ರಾಜಕೀಯ ವ್ಯಕ್ತಿಗಳ ದ್ವೇಷಕ್ಕೆ ಗುರಿಯಾದರೂ ದೇವರ ಹಾಗೂ ಶಾಂತಿಪ್ರಿಯ ಮುಗ್ಧಜನರ ಪ್ರೀತಿಗೆ ಪಾತ್ರರಾಗುತ್ತಾರೆ.

ಯೇಸುಸ್ವಾಮಿಯ ಎಂಟನೇ ಸೂತ್ರವು ಹೀಗಿದೆ:

"ನ್ಯಾಯನೀತಿಯ ನಿಮಿತ್ತ ಹಿಂಸೆಯನ್ನು ತಾಳುವವರು ಭಾಗ್ಯವಂತರು
ಸ್ವರ್ಗ ಸಾಮ್ರಾಜ್ಯ ಅವರದು"[೧೫೪]

ಅಂದಿನ ಮೋಸೆಯ ಧರ್ಮಶಾಸ್ತ್ರದಲ್ಲಿ ದೇವರು ನೀಡಿದ ದಶಾಜ್ಞೆಗಳನ್ನು ಪ್ರಸ್ತಾಪಿಸುತ್ತಾ 'ಕೊಲಬೇಡ' ಎಂಬ ಆಜ್ಞೆಯನ್ನು ನೀವು ಕೇಳಿದ್ದೀರಲ್ಲಾ ಆದರೆ ಈಗ ನಾನು ನೀಡುವ ಹೊಸ ಆಜ್ಞೆ ತನ್ನ ಸಹೋದರನ ಮೇಲೆ ಕೋಪಗೊಳ್ಳುವ ನ್ಯಾಯತೀರ್ಪಿಗೆ ಈಡಾಗುವನು. "ಹಾಗಾದರೆ ಒಬ್ಬನು ಸಾಯಲಿ ಎಂದು ಮನದಲ್ಲಿ ಬಯಸಿದರೆ ಅದೊಂದು ಕೊಲೆಯೆ? ಯೇಸುವಿನ ವಿಚಾರ ಲಹರಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದು ಹೌದೆನಿಸುತ್ತದೆ. ಒಬ್ಬಾತನಿಗೆ ತನ್ನ ಸಹೋದರನ ಮೇಲೆ ಏನಾದರೂ ಮನಸ್ತಾಪವಿದ್ದರೆ ಇಬ್ಬರಿಗೂ ದೇವಾಲಯ ನಿಷಿದ್ಧ! ಆತನು ದೇವರಿಗೆ ಅರ್ಪಿಸಲು ತಂದಿರುವ ಕಾಣಿಕೆಯನ್ನು ಹಾಗೇ ಬಿಟ್ಟು ಮನಸ್ತಾಪವಿರುವ ತನ್ನ ಸಹೋದರನನ್ನು ಹುಡುಕಾಡಿ ಮೊದಲು ರಾಜಿಯಾಗಲಿ. ಆಗ ಮಾತ್ರ ಒಬ್ಬಾತನು ದೇವರಿಗೆ ಶುದ್ಧ ಮನಸ್ಸಿನಿಂದ ಆರಾಧನೆಯನ್ನು ಸಲ್ಲಿಸಬಹುದು. ಪರಿಸ್ಥಿತಿ ಹತೋಟಿ ಮೀರುವ ಮೊದಲೇ ಒಬ್ಬಾತನು ತನ್ನ ಎದುರಾಳಿಯೊಂದಿಗೆ ಸಂಧಾನ ಮಾಡಿಕೊಳ್ಳಲಿ೧೫೫

ಪರ್ವತ ಮೇಲಿನ ಪ್ರಸಂಗದಲ್ಲಿ ಯೇಸು ಹೇಳುವ ಈ ಮಾತನ್ನು ಪ್ರಸ್ತುತ ಸಮಾಜದ ಜನಗಳು ಆಚರಣೆಗೆ ತಂದರೆ ಬಹುತೇಕ ಕೋರ್ಟಿನ ಕೇಸುಗಳು ಕಣ್ಮರೆಯಾಗುತ್ತವೆ; ಸಮಾಜ ಸ್ವಸ್ಥವಾಗುತ್ತದೆ. ಜನರ ಬದುಕು ಸಹನೀಯವಾಗುತ್ತದೆ. ಬದುಕಿನಲ್ಲಿ ಸಂಧಾನ, ರಾಜಿ ಮಾಡಿಕೊಳ್ಳುವುದರಿಂದ ಅನೇಕ

ಸಮಸ್ಯೆಗಳ ಲಯವಾಗುತ್ತವೆ. ಪರ್ವತ ಪ್ರಸಂಗದಲ್ಲಿ ಯೇಸು ಜನರ ಸಾಮಾಜಿಕ ಜೀವನದ ಬಗ್ಗೆ ಎಂತಹ ಆಳವಾದ ಜ್ಞಾನ ಅನುಭವ ಹೊಂದಿದ್ದರು ಮತ್ತು ಅಲ್ಲಿಯ ಸಮಸ್ಯೆಗಳಿಗೆ ಪರಿಹಾರ ತೋರಿಸುತ್ತಿದ್ದರೆಂಬುದನ್ನು ಅರಿಯಬಹುದು.

೪.೫.೩ ಕಾಮುಕತನಕ್ಕೆ ಕೊಡಲಿ ಪೆಟ್ಟು

ಕಾಮ ಬದುಕಿನ ಒಂದು ಆಯಾಮ. ಆದರೆ ವ್ಯಭಿಚಾರ ಸಲ್ಲದು. ಆದರೆ, ಯೇಸುವಿನ ಹೊಸ ಬೋಧನೆ 'ಕಾಮದೃಷ್ಟಿಯಿಂದ ಪರಸ್ತ್ರೀಯನ್ನು ನೋಡುವ ಪ್ರತಿಯೊಬ್ಬನೂ ತನ್ನ ಹೃದಯದಲ್ಲಿ ಆಕೆಯೊಡನೆ ಆಗಲೇ ವ್ಯಭಿಚಾರ ಮಾಡಿದವನಾಗಿರುತ್ತಾನೆ. ಯೇಸುವಿನ ಅನುಯಾಯಿಗಳಿಗೆ ಕಾಮುಕ ದೃಷ್ಟಿಯ ಆಲೋಚನೆಗಳು ತರವಲ್ಲ. ಕಾಮುಕ ಆಲೋಚನೆಗಳು, ಕಾಮುಕ ಕ್ರಿಯೆಗಳಿಗೆ ಯಾವಾತ ಕಾಯಾ, ವಾಚಾ, ಮನಸಾ ಪರಿಶುದ್ಧ ಜೀವನ ನಡೆಸುತ್ತಾನೋ ಅವನೇ ವೀರ, ಧೀರ, ಸ್ವರ್ಗ ಸಾಮ್ರಾಜ್ಯಕ್ಕೆ ಬಾಧ್ಯಸ್ಥ. ಕಾಮುಕತನದ ವಿಷಯದಲ್ಲಿ ಯೇಸುವಿನ ಬೋಧನೆ ಎಷ್ಟೊಂದು ಕಠಿಣವಾಗಿದೆ ಎಂದರೆ 'ನಿನ್ನ ಬಲಗಣ್ಣು ನಿನ್ನ ಪಾಪಕ್ಕೆ ಕಾರಣವಾದರೆ ಅದನ್ನು ಕಿತ್ತೆಸೆದು ಬಿಡು; ನಿನ್ನ ಇಡೀ ದೇಹ ನರಕಕ್ಕೆ ಹೋಗುವುದಕ್ಕಿಂತ ನಿನ್ನ ಒಂದು ಅಂಗ ನಾಶವಾಗುವುದೇ ಲೇಸು. ನಿನ್ನ ಬಲಗೈ ನಿನಗೆ ಪಾಪಕ್ಕೆ ಕಾರಣವಾದರೆ ಅದನ್ನು ಕತ್ತರಿಸಿ ಬಿಸಾಡಿಬಿಡು; ನಿನ್ನ ಇಡೀ ದೇಹ ನರಕದ ಪಾಲಾಗುವುದಕ್ಕಿಂತ ಒಂದು ಅವಯವ ನಾಶವಾಗುವುದು ಎಷ್ಟೋ ಮೇಲು.[೧೫೬]

ಈ ಬದುಕು ಹೂವಿನ ಹಾಸಿಗೆಯಲ್ಲ! ಬಟ್ಟೆ ಬದಲಾಯಿಸುವಷ್ಟು ನಿರ್ಲಿಪ್ತವಾಗಿ ವಿವಾಹ ವಿಚ್ಛೇದನೆ ದೊರಕುತ್ತಿದ್ದ ಸಮಾಜದಲ್ಲಿ ಇನ್ನು ಅದಕ್ಕೆ ಅವಕಾಶವಿಲ್ಲದಂತೆ ಯೇಸು ತನ್ನ ಬೋಧನೆಯ ಮೂಲಕ ಮಾಡುತ್ತಾನೆ. ಮದುವೆ ಒಂದು ಸಂಸ್ಕಾರ. ಮನಸ್ಸಿಗೆ ಇಷ್ಟಬಂದಾಗ ಹೆಂಡತಿ ಬೇಕು ಬೇಡ ಅಂದಾಗ ಆಕೆಯ ಬಿಟ್ಟು ಬಿಡುವುದಕ್ಕೆ ಆಕೆಯೇನು ಮಾರುಕಟ್ಟೆಯಲ್ಲಿ ಬಿಕರಿಯಾಗುವ ಸರಕೆ? 'ಒಬ್ಬ ಪತಿಗೆ ಒಬ್ಬಳೆ ಸತಿ' ಎಂಬ ತತ್ವವನ್ನು ಯೇಸು ಎತ್ತಿಹಿಡಿಯುತ್ತಾರೆ. ಹೆಂಡತಿಯಾದವಳು ಎಷ್ಟೇ ಅವಿವೇಕಿಯಾಗಿರಲಿ, ಇನ್ನೊಬ್ಬ ಕಾಮುಕ ಸ್ತ್ರೀ ಆತನನ್ನು ಎಷ್ಟೇ ಆಕರ್ಷಿಸುತ್ತಿದ್ದರೂ ಆತ ತನ್ನ ಕಾನೂನು ಬದ್ಧ ಹೆಂಡತಿಯನ್ನು ಬಿಡುವಂತಿಲ್ಲ. ಹಾಗೆ ಬಿಟ್ಟಿದ್ದೇ ಆದರೆ ಆಕೆ ವೇಶ್ಯೆಯಾಗುವುದಕ್ಕೆ ಆತನೇ ಕಾರಣನಾಗುತ್ತಾನೆ. ಅಲ್ಲದೇ ಗಂಡ ಬಿಟ್ಟವಳನ್ನು ಮದುವೆಯಾಗುವನು ಕೂಡ ವ್ಯಭಿಚಾರಿಯಾಗುತ್ತಾನೆ ಎಂದು ಹೇಳುತ್ತಾನೆ.

೪.೫.೪ ಅಪಕಾರಕ್ಕೆ ಉಪಕಾರ ಮತ್ತು ಶತ್ರುಪ್ರೇಮ

ಯೇಸುಕ್ರಿಸ್ತನಿಗೆ ಹಿಂಸೆಗೆ ಪ್ರತಿಹಿಂಸೆ ಉತ್ತರವಲ್ಲ ಎಂಬ ಅರಿವು ಬಹಳವಿತ್ತು. ಇದರ ಅರಿವು ಎಲ್ಲರಿಗೂ ಬಂದಾಗ ಲೋಕದಲ್ಲಿ ಶಾಂತಿ ಸಾಧ್ಯ. ಆಕ್ರಮಣಕ್ಕೆ ಪ್ರತಿ ಆಕ್ರಮಣ, ದಾಳಿಗೆ ಪ್ರತಿದಾಳಿ ಇರುವ ತನಕ ಯುದ್ಧಗಳಿಗೆ ಕೊನೆಯಿಲ್ಲ. ಒಬ್ಬನ ವೈಯಕ್ತಿಕ ಜೀವನದಲ್ಲಿಯೂ ಇದೇ ಪರಿಸ್ಥಿತಿ. ಒಬ್ಬಾತನು ನಿನ್ನ ಬಲಗೆನ್ನೆಗೆ ಹೊಡೆದರೆ ಪ್ರತಿಯಾಗಿ ಹೊಡೆಯಬೇಡ. ಬದಲಾಗಿ ಆತನಿಗೆ ನಿನ್ನ ಎಡಗೆನ್ನೆಯನ್ನು ಒಡ್ಡು! ವ್ಯಾಜ್ಯ ಮಾಡಿ ನಿನ್ನ ಹೊರ ಅಂಗಿಯನ್ನು ಕಿತ್ತುಕೊಳ್ಳುವವನಿಗೆ ಒಳ ಅಂಗಿಯನ್ನು ಕೊಟ್ಟುಬಿಡು![೧೫೭]

೪.೫.೫ ದಾನ-ಧರ್ಮದ-ಜಪತಪದ ಹೊಸ ವಿಧಾನ

ಯೇಸು ತಮ್ಮ ಪರ್ವತ ಪ್ರಸಂಗದಲ್ಲಿ ಜನತೆಗೆ ಹೊಸ ವಿಧಾನದಲ್ಲಿ ದಾನಧರ್ಮವನ್ನು ಜಪತಪವನ್ನು ಮಾಡುವ ಬಗೆಯನ್ನು ತಿಳಿಸುತ್ತಾರೆ. ಡಾಂಭಿಕತೆಯು, ನಟನೆಯು, ಆಷಾಢಭೂತಿತನ ಧಾರ್ಮಿಕ ಕಾರ್ಯಗಳನ್ನು ತುತ್ತೂರಿ ಊದುತ್ತಾ ದಾನಧರ್ಮವನ್ನು ಮಾಡಬೇಡಿರಿ. ನೀ ಮಾಡುವ ಬಲಗೈ ದಾನ ನಿನ್ನ ಎಡಗೈಗೂ ತಿಳಿಯದ ಹಾಗೆ ಮಾಡಿ. ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿಮ್ಮ ಸ್ವರ್ಗೀಯ ತಂದೆ ನಿಮಗೆ ಪ್ರತಿಫಲವನ್ನು ಕೊಡುವರು. ಪ್ರಾರ್ಥನೆ ಮಾಡುವಾಗ ಜನ ನಮ್ಮನ್ನು ನೋಡಲಿ ಎಂದು, ಪೇಟೆ ಬೀದಿಗಳಲ್ಲಿ ಪ್ರಾರ್ಥನಾ ಮಂದಿರಗಳಲ್ಲಿ ನಿಂತು ಅವರ ಗಮನವನ್ನು ನಿಮ್ಮ ಕಡೆ ಸೆಳೆದು ತೋರಿಕೆಯ, ಕಪಟಿಗಳಂತೆ ಪ್ರಾರ್ಥಿಸಬಾರದು. 'ನೀನು ಪ್ರಾರ್ಥನೆ ಮಾಡುವಾಗ ನಿನ್ನ ಕೊಠಡಿಗೆ ಹೋಗು; ಬಾಗಿಲನ್ನು ಮುಚ್ಚು, ಅಂತರಂಗದಲ್ಲಿರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು. ಆತ ನಿನಗೆ ಪ್ರತಿಫಲ ಕೊಡುವನು.

ಯೇಸು ಪರ್ವತ ಪ್ರಸಂಗದಲ್ಲಿ ಪ್ರಾರ್ಥನೆಯ ಮಹತ್ವವನ್ನು ಒತ್ತಿ ಹೇಳಿದ್ದಾನೆ. ನಿರರ್ಥಕ ಪದಗಳನ್ನು ಪೋಣಿಸುತ್ತಾ, ಉದ್ದುದ್ದ ಪ್ರಾರ್ಥನೆಗಳನ್ನು ಮಾಡುವುದು ವ್ಯರ್ಥ. ಒಬ್ಬಾತನ ಅಗತ್ಯಗಳೇನೆಂಬುದು ತಂದೆ ದೇವರಿಗೆ ಮೊದಲೇ ಗೊತ್ತಿದೆ. ಆದ್ದರಿಂದ ಅತ್ಯಂತ ಸರಳವಾದ ಮತ್ತು ಅರ್ಥಭರಿತವಾದ ಪ್ರಾರ್ಥನೆಯನ್ನು ಯೇಸು ಕಲಿಸಿಕೊಟ್ಟರು.

> **'ಪರಲೋಕದಲ್ಲಿರುವ ಓ ನಮ್ಮ ತಂದೆಯೇ**
> **ನಿಮ್ಮ ಪವಿತ್ರ ನಾಮ ಪೂಜಿತವಾಗಲಿ'**

ನಿಮ್ಮ ಸಾಮ್ರಾಜ್ಯಬರಲಿ; ನಿಮ್ಮ ಚಿತ್ತವು ಸ್ವರ್ಗದಲ್ಲಿ ನೆರವೇರುವ ಪ್ರಕಾರ ಜಗತ್ತಿನಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ನಮಗಿಂದು ಕೊಡಿ. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸುವ ಪ್ರಕಾರ ನಾವು ಮಾಡಿದ ತಪ್ಪುಗಳನ್ನು ಕ್ಷಮಿಸಿ. ನಮ್ಮನ್ನು ಶೋಧನೆಗೆ ಒಳಪಡಿಸಬೇಡಿ ಕೇಡಿನಿಂದ ನಮ್ಮನ್ನು ರಕ್ಷಿಸಿರಿ.'[೧೫೮] ಮಿತ್ರರನ್ನು ಪ್ರೀತಿಸಿ, ಶತ್ರುವನ್ನು ದ್ವೇಷಿಸಿರಿ. ಕಣ್ಣಿಗೆ ಪ್ರತಿಯಾಗಿ ಕಣ್ಣು, ಹಲ್ಲಿಗೆ ಬದಲಾಗಿ ಹಲ್ಲು, ಇದು ಆದಿಯಿಂದಲೂ ಬಂದ ರೂಢಿ ಮುಂದೆ ಮೋಶೆಯ ನಿಯಮವು ಮನುಷ್ಯನ ಅನಿರ್ಬಂಧಿತ ದ್ವೇಷಕ್ಕೆ ಕಡಿವಾಣ ಹಾಕಿತು. ಹಳೆಯ ಕಟ್ಟಳೆಗೆ ಯೇಸು ತಿದ್ದುಪಡಿ ತಂದು ಅದನ್ನು ಔದಾರ್ಯದಿಂದ ವಿಸ್ತರಿಸಿದ. ರೋಮನ್ನರ ಅಮಾನವೀಯ ಕಟ್ಟಳೆಗಳಿಂದಾಗಿ ಬಸವಳಿದು ಅವರ ದ್ಯಾಬಳಿಕೆಯಲ್ಲಿ ವಾಸಿಸುತ್ತಿದ್ದರೂ ದ್ವೇಷಮಯ ಭಾವನೆ ಬೇಡ! ನಡುಬಿಸಿಲಿನಲ್ಲಿ ರೋಮನ್ ಸೈನಿಕನೊಬ್ಬ ನಿನ್ನನ್ನು ಅಡ್ಡಗಟ್ಟಿ ಆತನ ಗುರಾಣಿ, ಶಿರಸ್ತ್ರಾಣ ಮತ್ತು ಭರ್ಜಿಯನ್ನು ಹೊತ್ತುಕೊಂಡು ನಡೆಯಲು ಒತ್ತಾಯಿಸಿದರೆ, ಒಂದು ಕಿಲೋಮೀಟರ್‌ಗೆ ಬದಲಾಗಿ ಎರಡು ಕಿಲೋಮೀಟರ್ ಬೇಕಾದರೂ ಹೋಗು! ಶತ್ರುಗಳನ್ನು ಮಿತ್ರರೆಂದು ತಿಳಿದುಕೋ.

ಯೇಸುವಿನ ಬೋಧನೆಯಂತೆ ನಡೆದರೆ ವ್ಯಕ್ತಿಯೊಬ್ಬ ಸರ್ವತಂತ್ರ ಸ್ವತಂತ್ರ್ಯ ವ್ಯಕ್ತಿಯಾಗಲು

ಸಾಧ್ಯವಿತ್ತು. ಸ್ವೀಕರಿಸುವುದಕ್ಕಿಂತಲೂ ಕೊಡುವುದರಲ್ಲೇ ಆತನು ಹೆಚ್ಚು ತೃಪ್ತಿ ಕಾಣುವನು. ಹಂತ ಹಂತವಾಗಿ ಯೇಸು ಅಧಿಕಾರ ಮತ್ತು ಮಹಿಮೆಯಿಂದ ತುಂಬಿದವರಾಗಿ ಜೀವನದ ಸರ್ವಶ್ರೇಷ್ಠ ಸೂತ್ರವನ್ನು ಮನುಕುಲಕ್ಕೆ ನೀಡಿದರು. ಜೀವನದ ಈ ಸುವರ್ಣ ಸೂತ್ರ ಎಷ್ಟೊಂದು ಆಪ್ಯಾಯಮಾನವಾಗಿದೆ.

'ಜನರು ನಿಮಗೆ ಏನೇನು ಮಾಡಬೇಕೆಂದು ನೀವು ಅಪೇಕ್ಷಿಸುತ್ತಿರೋ ಅದನ್ನೇ ನೀವು ಅವರಿಗೂ ಮಾಡಿರಿ. ಇದೇ ಧರ್ಮಶಾಸ್ತ್ರಗಳ ಹಾಗೂ ಪ್ರವಾದನೆಗಳ ಸಾರಸರ್ವಸ್ವ.'[೧೫೯] ಇಂಥ ಸೇವಾ ಮನೋಭಾವನೆ ಸಕಾರಾತ್ಮಕವಾದದ್ದು, ಕ್ರಿಯಾತ್ಮಕವಾದದ್ದು ಹಾಗೂ ಯೇಸುವಿನ ಮನೋಭಾವವನ್ನೇ ಪ್ರತಿಬಿಂಬಿಸುವಂಥದ್ದು. ಹಳೆಯ ಕಟ್ಟಳೆಯು ಶತ್ರುವನ್ನು ದ್ವೇಷಿಸಿ ಮಿತ್ರರನ್ನು ಪ್ರೀತಿಸಲು ಆಸ್ಪದ ಕೊಟ್ಟಿತು. ಆದರೆ, ಯೇಸು ಇಂತಹ ತಾರತಮ್ಯ ಇಷ್ಟಪಡಲಿಲ್ಲ. 'ನಾನು ಹೇಳುವುದನ್ನು ಚೆನ್ನಾಗಿ ಗಮನಿಸಿರಿ. ನಿಮ್ಮ ಶತ್ರುಗಳನ್ನು ಪ್ರೀತಿಸಿರಿ; ನಿಮ್ಮನ್ನು ಪೀಡಿಸುವವರಿಗಾಗಿ ಪ್ರಾರ್ಥಿಸಿರಿ. ಮಾನಸಿಕವಾಗಿಯೂ, ದೈಹಿಕವಾಗಿಯೂ ನಿಮಗೆ ಕೇಡು ಬಗೆಯುವವರಿಗೆ ಒಳ್ಳೆಯದನ್ನೇ ಮಾಡಿರಿ. ನಿಮಗೆ ಹಿಡಿಶಾಪ ಹಾಕುವವರನ್ನು ಆಶೀರ್ವದಿಸಿರಿ.' ನೂತನವಾದ ಪ್ರಾರ್ಥನೆಯ ಪರಿ ಹಾಗೂ ದಾನ ಧರ್ಮದ ಬಗ್ಗೆ ಹೇಳಿದ ಯೇಸು ಇನ್ನು ಉಪವಾಸ ಮಾಡುವ ವಿಧಾನವನ್ನು ಹೇಳುತ್ತಾರೆ. ಉಪವಾಸ ಮಾಡುವಾಗಲೂ ಕಪಟಿಗಳಂತೆ ಮೈತುಂಬಾ ವಿಭೂತಿ ಬಳಿದುಕೊಂಡು ಮುಖ ಸಪ್ಪಗೆ ಮಾಡಿಕೊಂಡು ಜನರ ಕಣ್ಣಿಗೆ ನೀವು ುಪವಾಸಿಗಳೆಂದು ತೋರ್ಪಡಿಸಬೇಡಿ. ಮುಖವನ್ನು ಬಾಡಿಸಿಕೊಂಡು ಜನರ ಗಮನ ಸೆಳೆಯಲು ಮಾತ್ರ ಪ್ರಯತ್ನಿಸಿದರೆ ಇದರಿಂದ ಏನು ಪ್ರಯೋಜನ? ಆದರೆ ನಿಮ್ಮ ಉಪವಾಸ ಒಂದು ಆದರ್ಶವಾಗಿರಲಿ. ನೀವಾದರೋ ಉಪವಾಸ ಮಾಡುವಾಗ ಚೆನ್ನಾಗಿ ಮುಖ ತೊಳೆದುಕೊಂಡು, ಅಚ್ಚುಕಟ್ಟಾಗಿ ತಲೆಬಾಚಿ ತುಟಿ ತುಂಬ ಮುಗುಳ್ನಗೆ ಇರಲಿ. ಆಗ ನೀವು ಉಪವಾಸ ಮಾಡುವವರಂತೆ ಕಾಣುವುದಿಲ್ಲ. ನಿಮ್ಮ ಅಂತರಂಗವನ್ನು ಅರಿಯುವ ನಿಮ್ಮ ತಂದೆ ದೇವರು ನಿಮಗೆ ತಕ್ಕುದಾದ ಪ್ರತಿಫಲವನ್ನು ಕೊಡುವರು.' ಪರ್ವತ ಪ್ರಸಂಗದಲ್ಲಿ ಯೇಸು ಹಳೆಯ ಗೊಡ್ಡು, ನಿರರ್ಥಕ ಸಂಪ್ರದಾಯಗಳನ್ನು ಬೀಳ್ಕೊಟ್ಟು ದೇವರನ್ನು ಪ್ರಾರ್ಥಿಸುವ, ದಾನಧರ್ಮವನ್ನು ಮಾಡುವ, ಯೋಗ್ಯರೀತಿಯಲ್ಲಿ ಉಪವಾಸ ಹಾಗೂ ಉಪಾಸನೆಯನ್ನು ತೋರಿಸುತ್ತಾರೆ.

೪.೫.೬ ಲೋಕದ ಡೊಂಕನ್ನು ನೀವೇಕೆ ತಿದ್ದುವಿರಿ?

ಒಬ್ಬಾತನು ತನ್ನ ನಡತೆ ಹಾಗೂ ಮಾನಸಿಕ ಪ್ರವೃತ್ತಿಗಳನ್ನು ಯಾವರೀತಿ ನಿಭಾಯಿಸಬೇಕೆಂದು ಯೇಸು ಮನಬಿಚ್ಚಿ ಹೇಳಿದರು. ಸದಾಪರರ ದುರ್ಗುಣಗಳನ್ನೇ ಎತ್ತಿ ಆಡುವುದು ಮಾನವನ ಜಾಯಮಾನ. ಇದರಿಂದಾಗಿ ಪಾಪ, ಆತ ತನ್ನ ದುರ್ಗುಣಗಳನ್ನೇ ತೋರಿಸಿಕೊಳ್ಳುತ್ತಾನೆಂಬ ಅರಿವು ಇರುವುದಿಲ್ಲ. ಇತರರ ಬಗ್ಗೆ ತೀರ್ಪಿಡಲು ನಾವು ಯಾರು? ಇತರರನ್ನು ಖಂಡಿಸಲು ನಮಗೆಲ್ಲಿದೆ ಹಕ್ಕು? ಇತರರಿಗೆ ತೀರ್ಪಿತ್ತರೆ ಸಮಗುಣ ತೀರ್ಪಾಗುತ್ತದೆ. ಬೇರೆಯವರನ್ನು ಮನಃಪೂರ್ವಕವಾಗಿ ಕ್ಷಮಿಸಿದರೆ ನಮಗೂ ಕ್ಷಮೆ ದೊರೆಯುತ್ತದೆ. ನಮ್ಮೆಲ್ಲರಿಗೂ ನೈತಿಕ ಸ್ವಾತಂತ್ರ್ಯ ಇದೆಯಾದ್ದರಿಂದ ಆ ಸ್ವಾತಂತ್ರ್ಯವನ್ನು

ನಿಷ್ಪಕ್ಷಪಾತವಾಗಿ ನಡೆಸುವುದು ನಮ್ಮ ಧರ್ಮ. ಇತರರನ್ನು ಟೀಕಿಸಿ ತಪ್ಪು ಹುಡುಕುವವರಿಗೂ ಯೇಸುವಿನ ನಿರ್ದೇಶನ ಸಿದ್ಧ. ಯೇಸುವಿನ ಶಿಷ್ಯರು ತಮ್ಮ ಸೋದರರಲ್ಲಿ ಸಣ್ಣ-ಪುಟ್ಟ ತಪ್ಪುಗಳನ್ನು ಕಂಡುಹಿಡಿಯಲು ಕಾಲವ್ಯಯ ಮಾಡಬಾರದು. ಮೊದಲು ತನ್ನ ತಪ್ಪುಗಳನ್ನೇ ತಿದ್ದಿಕೊಳ್ಳುವ ವಿಶಾಲ ಮನೋಭಾವನೆ ಬೆಳಸಿಕೊಳ್ಳಬೇಕು. ಸ್ವಂತ ಕಣ್ಣಿನಲ್ಲಿ ಇರುವ ದಿಮ್ಮಿಯನ್ನು ಕಡೆಗಣಿಸಿ ಸಹೋದರನ ಕಣ್ಣಿನಲ್ಲಿರುವ ಅಣುವನ್ನು ಗಮನಿಸುವುದು ತರವೆ? ಯೇಸು ನೇರ ಹಾಗೂ ಸ್ಪಷ್ಟಮಾತುಗಳಲ್ಲಿ ಹೇಳುತ್ತಾನೆ. "ಎಲೈ ಕಪಟಿಯೇ, ಮೊದಲು ನಿನ್ನ ಕಣ್ಣಿನಲ್ಲಿರುವ ದಿಮ್ಮಿಯನ್ನು ತೆಗೆದು ಹಾಕು. ಅನಂತರ ನಿನ್ನ ಸೋದರನ ಕಣ್ಣಿನಿಂದ ಅಣುವನ್ನು ತೆಗೆಯಲು ನಿನಗೆ ನಿನ್ನ ಕಣ್ಣು ನಿಚ್ಚಳವಾಗಿ ಕಾಣಿಸುವುದು."[೧೬೦]

ಆಧ್ಯಾತ್ಮಿಕ ವರಪ್ರಸಾದಗಳನ್ನು ಪಡೆಯಲು ಸಿದ್ಧರಿಲ್ಲದವರಿಗೆ ಅವುಗಳನ್ನು ನೀಡಿ ಏನು ಪ್ರಯೋಜನ? ಬೆಲೆ ಬಾಳುವ ಮುತ್ತು ರತ್ನಗಳನ್ನು ಹಂದಿಗಳ ಮುಂದೆ ಹಾಕಿದಂತಾಗುತ್ತದೆ ಅಷ್ಟೆ! ಪ್ರತಿಯೊಬ್ಬರು ತಮ್ಮ ತಮ್ಮ ಕಾರ್ಯಗಳಿಗೆ, ನುಡಿಗಳಿಗೆ ಹಾಗೂ ಚಿಂತನೆಗಳಿಗೆ ಜವಾಬ್ದಾರರು. ಸ್ವರ್ಗಲೋಕದಲ್ಲಿ ಪ್ರತಿಯೊಬ್ಬನ ಜೀವನದ ಲೆಕ್ಕವನ್ನು ದಾಖಲಿಸಲಾಗಿದೆ. ಕೊನೆಯ ತೀರ್ಪಿನ ದಿನದಂದು ಅವೆಲ್ಲಾ ಬಹಿರಂಗವಾಗುವುದು ಲೋಕದಲ್ಲಿ ಗುಣವಂತರು ಬಹಳ ವಿರಳ, ಗುಣಹೀನರೆನಿಸಿಕೊಂಡವರೇ ಬಹಳ! ಗುಣವಂತನ ಸತ್ಕಾರ್ಯಗಳು, ಒಳ್ಳೆಯ ಮಾತುಗಳು, ಅನುಕರಣೆಯ ಆಲೋಚನೆಗಳು ಆತನಿಗೆ ಒಂದು ವರದಾನವಿದ್ದಂತೆ. ಅಂಥವನು ತನ್ನ ಮನೆಯನ್ನು ಒಳ್ಳೆಯ ಅಸ್ತಿವಾರದ ಬಂಡೆಯ ಮೇಲೆ ಕಟ್ಟಿದ ಬುದ್ಧಿವಂತನಿಗೆ ಹೋಲುತ್ತಾನೆ. ಚಂಡಮಾರುತ, ಕುಂಭದ್ರೋಣಮಳೆ ಬಂದರೂ ಅದು ಬೀಳುವುದಿಲ್ಲ. ಆದರೆ ಬುದ್ಧಿಹೀನರು ಯೇಸುವಿನ ಜೀವ ನೀಡುವ ವಚನಗಳನ್ನು ಕೇಳಿಯೂ ಉಸುಕಿನ ಮೇಲೆ ಮನೆ ಕಟ್ಟುತ್ತಾನೆ. ಆತನ ಗತಿಯಾದರೊ ಅಧೋಗತಿ! ಮಳೆ ಬಂದರೆ, ನೆರೆ ಹರಿದರೆ ಗಾಳಿ ಬೀಸಿ ಆ ಮನೆಗೆ ಅಪ್ಪಳಿಸಿದರೆ ಆಗ ಅದು ದೊಪ್ಪನೆ ಬೀಳುತ್ತದೆ. ಯೇಸು ರೂಪಕದ ಮೂಲಕ ಇಲ್ಲಿ ವ್ಯಾಖ್ಯಾನಿಸುತ್ತಿದ್ದಾನೆ.

೪.೫.೭ ಹಾಳು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಚಿಂತೆ ಏಕೆ?

ಯೇಸು ತನ್ನ ಪರ್ವತ ಪ್ರಸಂಗದಲ್ಲಿ ತನ್ನ ಅನುಯಾಯಿಗಳಿಗೆ ಯಾವುದಕ್ಕೂ ಚಿಂತಿಸದೆ ನಿಶ್ಚಿಂತರಾಗಿ ಜೀವಿಸಲು ಕರೆ ನೀಡುತ್ತಾರೆ ಯೇಸುವಿನ ಈ ಬೋಧನೆ ಕಡ್ಡಿಮುರಿದು ಕೈಗೆ ಕೊಟ್ಟಷ್ಟು ನೇರ ಮತ್ತು ಸಮರ್ಪಕ.

ಒಬ್ಬಾತನು ಲೌಕಿಕ ಹಾಗೂ ಭೌತಿಕ ಜೀವನದಲ್ಲೇ ಆಸಕ್ತನಾಗಿರದೆ ಪಾರಮಾರ್ಥಿಕ ಜೀವನಕ್ಕೆ ಹೆಚ್ಚಿನ ಮಹತ್ವ ಕೊಡಬೇಕು. ಹಾಳು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಚಿಂತೆ ಏಕೆ? ಆಕಾಶದಲ್ಲಿ ಹಾರಾಡುವ ಪಕ್ಷಿಗಳ ಜೀವನ ಪರಿ ಎಂತು? ಅವು ಬಿತ್ತುವುದಿಲ್ಲ, ಕೊಯ್ಯುವುದಿಲ್ಲ, ಕಣಜಗಳಲ್ಲಿ ತುಂಬಿಡುವುದೂ ಇಲ್ಲ. ಆದರೆ ಸ್ವರ್ಗದಲ್ಲಿರುವ ತಂದೆ ಅವುಗಳನ್ನೆಲ್ಲಾ ಸಂತೃಪ್ತಿಯಲ್ಲಿರಿಸಿದ್ದಾರೆ. ತನ್ನ ಹಿಂಬಾಲಕರು ಹೇಗೆ ತಂದೆಯಾದ ದೇವರ ಮೇಲೆ ಹೊಂದಿಕೊಂಡಿರಬೇಕೆಂಬುದಕ್ಕೆ ಯೇಸು ವನಕುಸುಮಗಳ ಉದಾಹರಣೆ

ಕೊಟ್ಟರು: 'ವನಕುಸುಮಗಳು ಬೆಳೆಯುವ ರೀತಿಯನ್ನು ನೋಡಿ: ಅವು ದುಡಿಯುವುದಿಲ್ಲ, ನೂಲುವುದಿಲ್ಲ. ಆದರೆ ಅರಸ ಸಾಲೋಮನನು ಸರ್ವ ವೈಭವದಲ್ಲಿದ್ದಾಗಲೂ ಈ ಕುಸುಮಗಳಲ್ಲಿ ಒಂದರಷ್ಟೂ ಸುಂದರವಾದ ಉಡುಪನ್ನು ಧರಿಸಿರಲಿಲ್ಲ?[೧೬೧]

ಆದುದರಿಂದ ನನ್ನ ಅನುಯಾಯಿಗಳಾದ ನೀವು ಈ ಧರೆಗೆ ಉಪ್ಪಾಗಿರಬೇಕು. ಉಪ್ಪೇ ಸಪ್ಪಗಾದರೆ ಅದು ನಿಷ್ಪ್ರಯೋಜಕ. ಅಷ್ಟೇ ಅಲ್ಲ. ನೀವೆಲ್ಲಾ ಜಗತ್ತಿಗೆ ಜ್ಯೋತಿ. ಹೇಗೆ ಒಂದು ದೀಪವು ಮನೆಯಲ್ಲಿರುವವರಿಗೆಲ್ಲ ಬೆಳಕನ್ನು ನೀಡುತ್ತದೋ, ಅದೇರೀತಿ ನಿಮ್ಮ ಜ್ಯೋತಿ ಜನರ ಮುಂದೆ ಬೆಳಗಲಿ. ಹೀಗೆ ಅವರು ನಿಮ್ಮ ಸತ್ಕಾರ್ಯಗಳನ್ನು ಕಂಡು ಸ್ವರ್ಗದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡಲಿ' ಎಂದರು.[೧೬೨]

ಒಬ್ಬನು ದುಡ್ಡಿನ ಬಡತನವಿದ್ದರೂ ಬದುಕಿಯಾನು; ಆದರೆ ಆಧ್ಯಾತ್ಮಿಕ ಬಡತನವಿದ್ದರೆ ಬದುಕಲಾರನು! ಈ ನಿಟ್ಟಿನಲ್ಲಿ ಯೇಸು ತನ್ನ ಶಿಷ್ಯರಿಗೆ, ಇಹಲೋಕದಲ್ಲಿ ಆಸ್ತಿ-ಪಾಸ್ತಿ ಶೇಖರಿಸಿಡಬಹುದು ನಿಮ್ಮ ಆಸ್ತಿಯನ್ನು ಸ್ವರ್ಗದಲ್ಲಿ ಕೂಡಿಡಿ. ದೇವರೊಬ್ಬರನ್ನು ಮಾತ್ರ ಪೂರ್ಣವಾಗಿ ಆರಾಧಿಸಬೇಕು. ಯಾರು ಇಬ್ಬರು ಯಜಮಾನರಿಗೆ ಒಟ್ಟಿಗೆ ಸೇವೆ ಮಾಡಲಾಗದು. ಅವನು ಒಬ್ಬನನ್ನು ದ್ವೇಷಿಸಿ ಇನ್ನೊಬ್ಬನನ್ನು ಪ್ರೀತಿಸುತ್ತಾನೆ. ಇಲ್ಲವೇ ಒಬ್ಬನನ್ನು ಹೊಂದಿಕೊಂಡು ಇನ್ನೊಬ್ಬನನ್ನು ತಾತ್ಸಾರ ಮಾಡುತ್ತಾನೆ. ದೇವರಿಗೂ ದ್ರವ್ಯಕ್ಕೂ ಒಟ್ಟಿಗೆ ಸೇವೆ ಮಾಡಲಾಗದು."[೧೬೩] ಯೇಸು ಪರ್ವತ ಪ್ರಸಂದಲ್ಲಿ ತಮ್ಮ ಶಿಷ್ಯರಿಗೆ ಒಂದು ಎಚ್ಚರಿಕೆಯ ಮಾತನ್ನು ಹೇಳುತ್ತಾರೆ: "ಅಲ್ಪ ವಿಶ್ವಾಸಿಗಳೆ, ನೀವು ಮೊದಲು ದೇವರ ಸಾಮ್ರಾಜ್ಯಕ್ಕಾಗಿ ಅಧರ ತತ್ಸಂಬಂಧಕ್ಕಾಗಿ ಹಾತೊರೆಯಿರಿ. ಇದರೊಂದಿಗೆ ನಿಮಗೆ ಎಲ್ಲವನ್ನು ನೀಡಲಾಗುವುದು.... ಕೇಳಿರಿ, ನಿಮಗೆ ಕೊಡಲಾಗುವುದು ಹುಡುಕಿರಿ, ನಿಮಗೆ ಸಿಗುವುದು ತಟ್ಟಿರಿ, ನಿಮಗೆ ಬಾಗಿಲು ತೆರೆಯಲಾಗುವುದು."[೧೬೪] ಎಂದು ಹೇಳುವುದರ ಮೂಲಕ ಮಾನವ ತನ್ನ ಜೀವನದಲ್ಲಿ ಯಾವುದಕ್ಕೆ ಮೊದಲು ಪ್ರಾಶಸ್ತ್ಯ ನೀಡಬೇಕು ಎಂದು ತಿಳಿಹೇಳುತ್ತಾರೆ.

ಯೇಸುವಿನ ಈ ಪರ್ವತ ಪ್ರಸಂಗ ಇದೆಂಥ ಪ್ರಸಂಗ! ಯೇಸು ಬೋಧಿಸಿದ ಬೋಧನೆಗಳೆಲ್ಲಾ ನರಮಾನವರಿಗೆ ಅನುಸರಿಸಲು ಸಾಧ್ಯವೇ? ಶತಶತಮಾನಗಳು ಉರುಳಿದರೂ ಇದೇ ಪ್ರಶ್ನೆಯನ್ನು ಕ್ರೈಸ್ತರನ್ನು ಮಾತ್ರವಲ್ಲ ಎಲ್ಲರನ್ನೂ ಕಾಡುತ್ತ ಬಂದಿದೆ! ನನ್ನ ಪ್ರಾಣಹರಣ ಮಾಡಲು ಹೊಂಚು ಹಾಕುತ್ತಿರುವ ಶತ್ರುವನ್ನು ಹೇಗೆ ತಾನೆ ಒಬ್ಬ ಪ್ರೀತಿಸಲು ಸಾಧ್ಯ? ಆದರೆ, ಯೇಸುವಿನ ಬೋಧನೆಯು ತಂದೆ ದೇವರ ಇಷ್ಟಾರ್ಥ ಸಿದ್ಧಿಯಾಗಿತ್ತು. ದೇವರಿಗೆ ಯಾವುದೇ ಭಿನ್ನ ಭೇದವಿಲ್ಲ. ಎಲ್ಲರೂ ಅವರಿಗೆ ಪ್ರೀತಿಯ ಮಕ್ಕಳೇ. ಆದ್ದರಿಂದ ದೇವರಂತೆ ಪರಿಪೂರ್ಣತೆ ಪಡೆಯಲು ಯೇಸು ತನ್ನ ಅನುಯಾಯಿಗಳಿಗೆ ಒಂದು ಪಂಥಾಹ್ವಾನ ನೀಡುತ್ತಾರೆ. "ಸ್ವರ್ಗದಲ್ಲಿರುವ ನಿಮ್ಮ ತಂದೆ ಪರಿಪೂರ್ಣರಾಗಿರುವಂತೆ ನೀವೂ ಪರಿಪೂರ್ಣರಾಗಿರಿ."[೧೬೫] ಯೇಸುಕ್ರಿಸ್ತನ ಪರ್ವತ ಮೇಲಿನ ಪ್ರಬೋಧನೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಈ ಸಮಾಜದ ಶ್ರೇಣಿ

ಮೌಲ್ಯಗಳೆಲ್ಲವೂ ಸೈತಾನನ ಕೆಲಸ ಎಂದೇ ಕ್ರಿಸ್ತ ಭಾವಿಸಿದ್ದ. ಈ ಕಾರಣದಿಂದಲೇ ತಮ್ಮ ಸಾಮ್ರಾಜ್ಯದಲ್ಲಿ ಇವೆಲ್ಲ ಏರುಪೇರಾಗುತ್ತದೆ ಎಂದು ಒತ್ತಿ ಹೇಳಿದ್ದ. ಈ ಸಮಾಜದ ಒಣಪ್ರತಿಷ್ಠೆ, ಶ್ರೇಷ್ಠತೆಗಾಗಿ ಹಾತೊರೆಯುವವನು ದೇವರ ಸಾಮ್ರಾಜ್ಯಕ್ಕೆ ಎಂದಿಗೂ ಯೋಗ್ಯನಲ್ಲ.

ಯೇಸು ತಾನು ಪರ್ವತದ ಮೇಲೆ ಬೋಧಿಸಿದ ದೇವರ ಸಾಮ್ರಾಜ್ಯದ ರಾಜಕೀಯ ವ್ಯವಸ್ಥೆಯಲ್ಲಿ ಅಧಿಕಾರ, ಪ್ರಭುತ್ವ, ಆಳ್ವಿಕೆ ಎಲ್ಲವೂ ಕೇವಲ ಸೇವಾ ಸಾಧನಗಳಾಗಿರುತ್ತವೆ. ಈ ಆಳ್ವಿಕೆಯಲ್ಲಿ ಎಲ್ಲಾ ರೀತಿಯ ಶೋಷಣೆ, ದಬ್ಬಾಳಿಕೆ, ಗುಲಾಮಗಿರಿಯನ್ನು ರದ್ದುಮಾಡಿದ ಮೇಲೆ ಪ್ರೀತಿ, ದಯೆ, ದಾಕ್ಷಿಣ್ಯದಿಂದ ಒಬ್ಬರಿಗೊಬ್ಬರು ಸೇವೆ ಮಾಡುವ ನೆಲೆ ಸೃಷ್ಟಿಯಾಗುತ್ತದೆ. ಇದೇ ಪರ್ವತ ಪ್ರಸಂಗದ ನಿಜವಾದ ಉದ್ದೇಶ. ಇದೇ ನಿಜವಾದ ಧರ್ಮನಿಷ್ಠೆ.

೪.೬ ಬಸವಣ್ಣ ಮತ್ತು ಅನುಭವ ಮಂಟಪ

ಅನುಭಾವಿಗಳು ತಮ್ಮ ಆಧ್ಯಾತ್ಮಿಕ, ಧಾರ್ಮಿಕ, ಸಾಂಸ್ಕತಿಕ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರದಲ್ಲಿನ ತಮ್ಮ ಅನುಭವಗಳನ್ನು ವಿವರಿಸುವ, ಚರ್ಚಿಸುವ ವೇದಿಕೆಯೇ ಅನುಭವ ಮಂಟಪ. ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದ ಇತಿಹಾಸದ ಪುಟಗಳು ಸಂಭ್ರಮದಿಂದ ಕಂಗೊಳಿಸುತ್ತಿದ್ದವು. ಬಸವಣ್ಣನವರು ಸಮಾಜೋ-ಧಾರ್ಮಿಕ ಕ್ರಾಂತಿಯ ಮುಂದಾಳತ್ವವನ್ನು ವಹಿಸಿಕೊಂಡು ಲಿಂಗಾಯತ ಧರ್ಮದ ಉದ್ಧಾರಕನಾದ.

ಇಂತಹ ಸಂದರ್ಭದಲ್ಲಿ 'ಅನುಭವ ಮಂಟಪ'ವು ಲಿಂಗಾಯತ ಧರ್ಮದ ಹೃದಯವಾಗಿ ಮೂಡಿಬಂದಿದೆ. ಬಸವಣ್ಣ ಮಾಡಿದ ಅನೇಕ ಕಾರ್ಯಗಳಲ್ಲಿ ಅನುಭವ ಮಂಟಪದ ಸಂಸ್ಥಾಪನ ಕಾರ್ಯವೂ ಒಂದು. ಇದು ಮುಕುಟಮಣಿಯಾಗಿ ಕಂಗೊಳಿಸುತ್ತಿದೆ. ಬಸವಣ್ಣ ಸ್ಥಾಪಿಸಿದ ಈ ಶಿವಾನುಭವ ಮಂಟಪದಲ್ಲಿ ನೀತಿ ನಿಪುಣರು, ಭಕ್ತಿ ಸಂಪನ್ನರೂ, ಲಿಂಗ ನಿಷ್ಠರೂ ಆದ ೩೦೦ ಜನ ಶರಣರು ನೇಕ ಜನ ಶಿವಶರಣೆಯರು ಅದರ ಸಭಾಸದಸ್ಯರಾಗಿ ಅತ್ಯದ್ಭುತವಾದ ಕಾರ್ಯವನ್ನು ಮಾಡಿದರು. ಬಸವಣ್ಣನ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿ ಭಾರತದ ಮೂಲೆ ಮೂಲೆಗಳಿಂದಲೂ ಕಲ್ಯಾಣಕ್ಕೆ ಆಗಮಿಸಿದ ಶಿವಶರಣರು ಅನುಭವ ಮಂಟಪದಲ್ಲಿ ತಮ್ಮ ಅನುಭವಗಳನ್ನು ಚರ್ಚಿಸುತಿದ್ದರು. ಈ ಚರ್ಚೆಯ ಫಲವಾಗಿ ಅಪಾರವಾದ ವಚನಸಾಹಿತ್ಯವು ಸೃಷ್ಟಿಯಾಯಿತು. ಈ ಎಲ್ಲಾ ಗೋಷ್ಠಿಗಳು ವಿಚಾರವಾದ, ವಾಸ್ತವವಾದ ಹಾಗೂ ವೈಜ್ಞಾನಿಕ ವಿಚಾರಧಾರೆಗೆ ಅನುಗುಣವಾಗಿ ನಡೆದದೆಂಬುದು ವಚನಸಾಹಿತ್ಯದ ಪರಿಶೀಲನೆಯಿಂದ ನಮಗೆ ತಿಳಿದುಬರುತ್ತದೆ.[೧೬೬]

ಬಸವಣ್ಣ ಸ್ಥಾಪಿಸಿದ ಅನುಭವ ಮಂಟಪದಲ್ಲಿ, ಆ ಕಾಲದಲ್ಲಿ ಆಗಿಹೋದ ಅನೇಕ ಶಿವಶರಣರು "ಅನುಭವ ಮಂಟಪ"ವನ್ನು ಕಣ್ಣಾರೆ ಕಂಡು ಅದರಲ್ಲಿ ಸ್ವತಃ ಅನುಭವಗೋಷ್ಠಿಗಳನ್ನು ಮಾಡಿದವರೇ ತಮ್ಮ ವಚನಗಳಲ್ಲಿ ಈ ವಿಷಯವಾಗಿ ಹೇಳಿಕೊಂಡಿರುವುದರಿಂದ ಇದು ಐತಿಹಾಸಿಕ ಸಂಸ್ಥೆ ಎಂಬುದರಲ್ಲಿ ಅನುಮಾನವಿಲ್ಲ. "ಅನುಭವ ಮಂಟಪ" ಧಾರ್ಮಿಕ ಕ್ಷೇತ್ರದಲ್ಲಿ ಕೇವಲ ಜ್ಞಾನ, ಕೇವಲ ಭಕ್ತಿ ಇಲ್ಲವೇ ಕರ್ಮಗಳ ಮೇಲೆ ಅವಲಂಬಿಸದೆ ಅವುಗಳ ಪ್ರತ್ಯಕ್ಷ ಅನುಭವವನ್ನು ಸಾಯುತ್ತಿದ್ದ ಧರ್ಮಕ್ಕೆ ಜೀವಕಳೆಯನ್ನು ಕೊಡುವ ಉದ್ದೇಶದಿಂದ ಬಸವಣ್ಣನು 'ಅನುಭವ ಮಂಟಪ' ಎಂಬ ಹೊಸ ಮಾದರಿಯ ಸಂಸ್ಥೆಯನ್ನು ಸ್ಥಾಪಿಸಿದನೆಂದು ತೋರುತ್ತದೆ.

ಬಸವಣ್ಣನ ಕಾಲದಲ್ಲಿದ್ದ ಬೌದ್ಧ, ಬ್ರಾಹ್ಮಣ, ಜೈನ ಧರ್ಮಗಳು ಹೀನಾವಸ್ಥೆಯನ್ನು ತಲುಪಿ ಕೇವಲ

ಬಹಿರಂಗ ಆಚರಣೆಗೆ ಮುಖ ಮಾಡಿದ್ದವು. ಇಂತಹ ಸಂದರ್ಭದಲ್ಲಿ ಜನತೆಗೆ ನಿಜವಾದ ಧರ್ಮದ ಬಗ್ಗೆ ತಿಳಿಹೇಳುವ ವಿಧಾನವನ್ನು ಯೋಚಿಸುತ್ತಿದ್ದಾಗ ಆತನಿಗೆ 'ಅನುಭವ ಮಂಟಪ'ದ ವಿಚಾರ ಹೊಳೆದಿರಬೇಕು. ಅನುಭಾವಿಗಳು ತಮ್ಮ ತಮ್ಮ ಅಧ್ಯಾತ್ಮಿಕ ಅನುಭವಗಳನ್ನು ಮಂಡಿಸುವುದರ ಮೂಲಕ ದೈವವನ್ನು ಜನರಿಗೆ ಹತ್ತಿರವಾಗಿಸುವ - ದೈವ-ಧರ್ಮ-ಜೀವನ ಒಂದಕ್ಕೊಂದು ಪೂರಕವಾಗುವಂತೆ ಮಾಡುವುದಕ್ಕೆ ಒಂದು ಸಂಸ್ಥೆಯನ್ನು ಹುಟ್ಟುಹಾಕಿ ಅನುಭವ ಮಂಟಪವೆಂದು ಹೆಸರಿಟ್ಟಿದ್ದರು.

ಬಸವಣ್ಣ ಧರ್ಮದ ಜೀವಾಳವನ್ನು ಕಂಡು ಹಿಡಿದು ಅದನ್ನು ಅನುಭವದ ತಳಹದಿಯ ಮೇಲೆ ಕಟ್ಟಿದನು. ಇಂತಹ ಅನುಭವ ಮಂಟಪಕ್ಕೆ ಬಸವಣ್ಣನು ಪರಮ ವೈರಾಗ್ಯ ಚಕ್ರವರ್ತಿಗಳಾದ ಶಿವಯೋಗಿಗಳು ಜ್ಞಾನವಂತರಲ್ಲಿ ಮಿಗಿಲಾದವರೂ ಆಗಿದ್ದ ಅಲ್ಲಮಪ್ರಭುಗಳನ್ನು ಅಧ್ಯಕ್ಷರನ್ನಾಗಿಯೂ, ನಿಜಸ್ಥಲಾಚರಣೆಯಲ್ಲಿ ಬಲ್ಲಿದರೂ, ಕಾರ್ಯದಲ್ಲಿ ದಕ್ಷರೂ ಚಿಕ್ಕ ವಯಸ್ಸಿನವರೂ ಆದ ಚನ್ನಬಸವಣ್ಣನವರು ಕಾರ್ಯದರ್ಶಿ ಯಾಗಿಯೂ ಸಿದ್ಧರಾಮ ಶಿವಯೋಗಿಗಳೂ, ಮಡಿವಾಳ ಮಾಚರಸರೂ, ಅಕ್ಕಮಹಾದೇವಿ, ಸೊಡ್ಡಳ ಬಾಚರಸ ಮುಂತಾದವರು ಕಾರ್ಯಕಾರಿಮಂಡಲದ ಸಭಾಸದಸ್ಯರಾಗಿದ್ದರು. ಯಾವುದಾದರೊಂದು ನಿರ್ಣಯವನ್ನು ಮಾಡಬೇಕಾದರೆ 'ಅನುಭವ ಮಂಟಪದಲ್ಲಿ' ಅದರ ಸಾಧಕ ಬಾಧಕಗಳನ್ನು ಚರ್ಚಿಸಿ ನಿರ್ಣಯವನ್ನು ಮಾಡಿ ಸಭಾಧ್ಯಕ್ಷರ ಮುದ್ರೆ ಬಿದ್ದು ಅದು ಪ್ರಚಾರಕರಾದ ಕಾಯಕದ ಪ್ರಥಮರಿಂದ ದೇಶದ ಹಳ್ಳಿ-ಪಳ್ಳಿಗಳಲ್ಲಿಯೂ ಕೂಡ ಅದರ ಪ್ರಚಾರವಾಗಿ ಕೃತಿಯಲ್ಲಿ ಬರುತ್ತಿತ್ತು. ಇದು ಅನುಭವ ಮಂಟಪದ ಕಾರ್ಯ ಪದ್ಧತಿಯಾಗಿತ್ತು. ಇದೊಂದು ಅಂಶ ಬಸವಣ್ಣ ಎಂತಹ ದೂರದರ್ಶಿಯೂ ಹಾಗೂ ಪ್ರಜಾಪ್ರಭುತ್ವವಾದಿಯಾಗಿದ್ದನೆಂದು ಈ ಮೂಲಕ ತೋರುತ್ತದೆ.

ಅನುಭವ ಮಂಟಪದ ಕಾರ್ಯಕಲಾಪಗಳು, ಪ್ಲೋಟೋ ಸಂಗ್ರಹಿಸಿದ ಸಾಕ್ರೆಟೀಸನ ಸಂಭಾಷಣೆಗಳಿಗೂ, ತಮಿಳು ನಾಡಿನ ಸಂಘ ಸಾಹಿತ್ಯಕ್ಕೂ, ಉಪನಿಷತ್ ಕಾಲದ ಜನಕರಾಜನ ಸಭೆಗೂ ಅಶೋಕನ ಸಭೆಗೂ ಇದು ಕಡಿಮೆಯಿಲ್ಲ. ಅನುಭವ ಮಂಟಪದಿಂದ ಹೊರಬಿದ್ದ ಉತ್ಪನ್ನವೆ "ಶೂನ್ಯ ಸಂಪಾದನೆ" ಕನ್ನಡ ಸಾಹಿತ್ಯದಲ್ಲಿ ಈ ಗ್ರಂಥ ರಚನಾ ಪದ್ಧತಿಯು ಅಪೂರ್ವವಾದದ್ದು ಹಾಗೂ ಇದೊಂದು ಹೆಮ್ಮೆಯ ಗ್ರಂಥವಾಗಿದೆ.

ಅನುಭವ ಮಂಟಪದ ಖ್ಯಾತಿ ಭರತ ಖಂಡದಲ್ಲೆಲ್ಲಾ ಹರಡಿತು. ಅನುಭಾವಿಗಳು, ಸಾಧಕರು, ಶಿವಭಕ್ತರು, ಶರಣರು ತಂಡೋಪತಂಡವಾಗಿ ಕಲ್ಯಾಣದತ್ತ ಅನುಭವ ಮಂಟಪಕ್ಕೆ ಬರುತ್ತಿದ್ದರು. ಇವರಲ್ಲಿ ಪ್ರಮುಖರೆಂದರೆ ಕಾಶ್ಮೀರದ ರಾಜನಾದ ಮೋಳಿಗೆಯ ಮಾರಯ್ಯ ಹಾಗೂ ಅವನ ಹೆಂಡತಿ ರಾಣಿ ಮಹಾದೇವಿ ಹಾಗೆಯೇ ದಕ್ಷಿಣ ದೇಶದ ಅರಸ ಸಕಲೇಶ ಮಾದರಸ ಪ್ರಮುಖರಾಗಿದ್ದರು. ಹಡಪದ ಅಪ್ಪಣ್ಣ, ಜೇಡರ ದಾಸಿಮಯ್ಯ, ಸಿಂಪಿಗ ಶಂಕರ, ಮಾಡಿವಾಳ ಮಾಚಿದೇವ, ರಾಮಣ್ಣ, ಸುಂಕದ ಬಂಕಣ್ಣ, ಬೊಮ್ಮಣ್ಣ, ಡೋಹರ ಕಕ್ಕಯ್ಯ, ತಳವಾರ ರಾಮಿದೇವ, ವೈದ್ಯ ಸಂಗಣ್ಣ, ನುಲಿಯ ಚಂದಯ್ಯ,

ಬೇಡರ ಸಂಗಯ್ಯ, ಸೂಜಿಕಾರ ರಾಮಿತಂದೆ, ಕಂಚುಗಾರ ಚಿಕ್ಕದೇವ, ಕನ್ನಡಿಕಾರ ಅಮ್ಮದೇವ, ಮೇದಾರ ಕೇತಯ್ಯ, ಆಯ್ದಕ್ಕಿ ಮಾರಯ್ಯ, ಒಕ್ಕಲು ಮುದ್ದಯ್ಯ, ಗಾಣದ ಕನ್ನಪ್ಪಯ್ಯ, ಬೋದರ ಮಾದಣ್ಣ, ಬಡಿಗ ಬಸವಪ್ಪ, ಕೊಟ್ಟಣದ ಸೋಮವ್ವೆ, ಸತ್ಯಕ್ಕ, ಮುಕ್ತಾಯಕ್ಕ, ಅಕ್ಕಮಹಾದೇವಿ, ತಿಮ್ಮವ್ವೆ, ಲಿಂಗಮ್ಮ ಕಾಳವ್ವೆ, ಗಂಗಾಂಬಿಕಾ, ನೀಲಾಂಬಿಕಾ ಮೊದಲಾದವರು ಅನುಭವ ಮಂಟಪದಲ್ಲಿ ತಮ್ಮ ತಮಗೆ ಶಕ್ಯವಾದ ಕಾರ್ಯವನ್ನು ಮಾಡಿ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಿದ್ದರು.

ಅನುಭವ ಮಂಟಪದಲ್ಲಿ ಕುಲ, ಜಾತಿ, ಬಣ್ಣ, ಭಾಷೆ, ಸ್ತ್ರೀಯರು, ಪುರುಷರು, ಸಣ್ಣವರು, ದೊಡ್ಡವರು, ಬಡವರು ಬಲ್ಲಿದರು, ವಿದ್ಯಾವಂತರು, ನಿರಕ್ಷರಿಗಳು ಮುಂತಾದ ಭೇದಗಳಿಲ್ಲದೆ ಎಲ್ಲರೂ ಲಿಂಗನಿಷ್ಠರಾಗಿ, ಪರಸ್ಪರ ಭೋಜನ, ಲಗ್ನ, ಶಿವಾನುಭವಜ್ಞಾನ ಹಂಚಿ ಆನಂದದಿಂದ ಇದ್ದರು.

ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ಧ್ಯೇಯ ನಿರೂಪಣೆ, ಸಾಧನೆಗಳನ್ನು ಶ್ರೀಮಾನ್ ಉತ್ತಂಗಿ ಚೆನ್ನಪ್ಪನವರು 'ಅನುಭವ ಮಂಟಪ' ಎಂಬ ಪುಸ್ತಕದಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ಅವರ ಮಾತುಗಳನ್ನು ಹೀಗೆ ಸಂಗ್ರಹಿಸಬಹುದು:

೧. ಈ ಸಂಸ್ಥೆಯು ಪ್ರತಿಮಾ ಪೂಜೆಯಿಂದ ತುಂಬಿದ ಹಿಂದೂ ದೇಶದಲ್ಲಿ ಈಶ್ವರನನ್ನು ಹೊಸ ರೀತಿಯಿಂದ ಪೂಜಿಸುವುದಕ್ಕೆ ಹಚ್ಚಿತು. ಈ ನೂತನ ಪದ್ಧತಿಗೆ "ಇಷ್ಟಲಿಂಗ ಪೂಜೆ" ಎಂದು ಹೆಸರು. ಆಗಮ ಧರ್ಮವು ವೇದದ ಕರ್ಮಮಾರ್ಗವನ್ನು ತೊರೆದು ಯಜ್ಞಯಾಗಾದಿಯ ಬದಲಾಗಿ ಸ್ಥಾವರಲಿಂಗ ಪೂಜೆಯನ್ನು ಪ್ರಚಾರದಲ್ಲಿ ತಂದರೆ, ಈ ಸಂಸ್ಥೆಯು ಉಭಯ ಮಾರ್ಗಗಳನ್ನು ಸುಧಾರಿಸಿ ಮೇಲೆ ಹೇಳಿದಂತೆ ಹೊಸದೊಂದು ಮಾರ್ಗವನ್ನು ಕಲ್ಪಿಸಿಕೊಟ್ಟಿತು. ಇದು ಸಾಕಾರ ನಿರಾಕಾರಗಳೆರಡಕ್ಕೂ ಸಂಬಂಧಿಸಿದ ಮಾರ್ಗವಾಗಿರುವುದರಿಂದ ಒಂದು ಥರದ ಸುಧಾರಣೆಯನ್ನು ಮಾಡಿತೆಂದು ಹೇಳಬಹುದು. ಉಪನಿಷತ್ತುಗಳಲ್ಲಿ ನಿರ್ದಿಷ್ಟವಾದ ನಿರಾಕಾರ ಬ್ರಹ್ಮವನ್ನು ಇಷ್ಟಲಿಂಗಾಕಾರದಲ್ಲಿಯೇ ಅಂದರೆ ರೂಪರಹಿತವಾದ ರೂಪದಲ್ಲಿಯೇ ಪೂಜಿಸಬೇಕೆಂದು ಇದರ ತಿಳುವಳಿಕೆಯು ಇಲ್ಲಿ ತಿಳಿದಂತೆ ನಡೆಯುವುದೇ ಕ್ರಿಯೆ ಎಂಬ ಶರಣರ ಸೂತ್ರವು ಸಾರ್ಥಕವು. ಇಷ್ಟಲಿಂಗವು ಆತ್ಮಲಿಂಗದ ಪ್ರತಿಚ್ಛಾಯೆಯಾಗಿದ್ದು ವ್ಯಕ್ತಿಗತವಾಗಿರುವುದರಿಂದಲೂ ಅದು ಗುಡಿಯೊಳಗಿನ ಯಾವುದೊಂದು ದೇವತೆ ಇಲ್ಲವೆ ಸ್ಥಾವರ ಲಿಂಗಗಳಂತೆ ಸಾಮಾನ್ಯವಾಗಿ ಸರ್ವರಿಂದ ಪೂಜಿಸಲ್ಪಡದೆ ಇರುವುದರಿಂದಲೂ 'ಇಷ್ಟಲಿಂಗವು' ಚಿಲ್ಲಿಂಗಕ್ಕೆ ಸಾಂಕೇತಿಕವಾಗಿರುವುದರಿಂದಲೂ ಮೂರ್ತಿಪೂಜೆಯಲ್ಲವೆಂದು ವೀರಶೈವ ಸಿದ್ಧಾಂತವು. ಇದಲ್ಲದೆ ಇದು ಅನೇಕ ದೇವೋಪಾಸನೆಯನ್ನು ಖಂಡಿಸಿ ಏಕದೇವೋಪಾಸನೆಯನ್ನು ಸ್ಥಾಪಿಸಿದ್ದರಿಂದ 'ದೇವರೊಬ್ಬನೆ' ಎಂಬ ಪ್ರಥಮ ಆಜ್ಞೆಯನ್ನು ಹಿಂದೂ ದೇಶದಲ್ಲಿ ಘಂಟಾಘೋಷವಾಗಿ ಸಾರಿತೆಂದು ಹೇಳಬಹುದು. ಹಾಗೆಯೇ ಇರಲಿ, ಹಿಂದೂ ಜನರ ರಕ್ತದಲ್ಲಿ ಬೆರೆತು ಹೋಗಿರುವ ಮೂರ್ತಿಪೂಜೆಯ ವಿಷಯವಾಗಿ ಈ ಸಂಸ್ಥೆಯು ವಿಶೇಷ ಥರದ ಸ್ಥಿತ್ಯಂತರವನ್ನುಂಟುಮಾಡಿತೆಂಬ ಮಾತು ಮಾತ್ರ ನಿರ್ವಿವಾದವಾಗಿದೆ.

೨. ಇದು ಲಿಂಗದೀಕ್ಷೆಯ ಮೂಲಕವಾಗಿ ತನ್ನ ಧರ್ಮದ ದ್ವಾರವನ್ನು ಎಲ್ಲಾ ಜಾತಿಯ ಸ್ತ್ರೀ ಪುರುಷರಿಗೆ ತೆರೆದಿಟ್ಟಿತು. ಆದ್ದರಿಂದ, ಹಿಂದೂ ಸಮಾಜದ ಜೀವನದಲ್ಲಿ ಅತಿದೊಡ್ಡ ಕ್ರಾಂತಿಯನ್ನುಂಟುಮಾಡಿತೆಂದು ಹೇಳಬೇಕು. ಇದು ನೂರೆಂಟು ಜಾತಿಮತ ಪಂಥಗಳುಳ್ಳ ಹಿಂದೂ ಸಮಾಜವನ್ನು ಒಂದುಗೂಡಿಸಿ ಅದನ್ನೂ ಉಚ್ಚತರದ ಸಮಾನತ್ವದ ಮೇಲೆ ರಚಿಸಿ, ಕೀಳು ಮೇಲೆನ್ನದೆ ಎಲ್ಲರೂ ಸಮಾನರೆಂದು ಸಾರಿ ಹೇಳಿತು. ಇದರಿಂದ ಸಮಾಜದಲ್ಲಿ ಒಂದು ಬಾಂಧವ್ಯ ಭಗಿನಿಭಾವವೂ ಬೆಳೆಯಿತು. ಸ್ತ್ರೀಯರಿಗೆ ಪುರುಷರಂತೆ ಸಮಾನ ಹಕ್ಕುಗಳು ದೊರೆತವು. ಆದ್ದರಿಂದ ಧಾರ್ಮಿಕ ಸಾಮಾಜಿಕ ವಿಷಯಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಸಂಪೂರ್ಣ ಸ್ವಾತಂತ್ರ್ಯವು ಸಿಕ್ಕಿತು. ಈಗ ವೀರಶೈವರಲ್ಲಿ ರೂಢಿಯಾಗಿರುವ ಅಪ್ಪ, ಅಣ್ಣ, ಅಯ್ಯ, ಅಕ್ಕ ಮುಂತಾದ ನಾಮವಾಚಕಗಳು ಅನುಭವ ಮಂಟಪದ ಕಾಲದಿಂದ ವೀರಶೈವರಲ್ಲಿ ಪ್ರಚಾರಕ್ಕೆ ಬಂದಿದ್ದು ಇನ್ನೂ ಉಳಿದುಕೊಂಡಿರುವ ಅದರ ಕುರುಹುಗಳೆಂದು ಹೇಳಿದರೆ ತಪ್ಪಾಗದು. ಇಷ್ಟಲಿಂಗಕ್ಕೆ ಒಬ್ಬ ವಿಲಾಯತಿಯ ಪಂಡಿತರು "ಸಾಮಾಜಿಕ ತಗ್ಗುದಿನ್ನೆಗಳನ್ನು ಸಮಮಾಡುವ ಒಂದು ಸಾಧನ" ಎಂದು ಕರೆದಿದ್ದಾರೆ.

೨. ಷಟ್‌ಸ್ಥಳ ಸಿದ್ಧಾಂತದ ಮೂಲಕ ಅದು ಕರ್ಮವಾದದ ಬೇರುಗಳನ್ನು ಸಡಿಲಿಸಿಬಿಟ್ಟಿತು. ಹಿಂದೂ ಧರ್ಮದ ಪ್ರಕಾರ ಕರ್ಮಿಗೆ ಮುಕ್ತಿ ಇಲ್ಲ. ಅದು ಅವನಿಗೆ ಫಲಪ್ರದವನ್ನು ಕೊಡಬಹುದಲ್ಲದೆ ನಿತ್ಯ ಪದವನ್ನು ಕೊಡಲಾರದು. ಆದ್ದರಿಂದ ೮೪ ಲಕ್ಷ ಯೋನಿಗಳಲ್ಲಿ ತಿರುಗುತ್ತಿರಬೇಕು. ಅತ್ತ ಕಡೆಯಲ್ಲಿ ಜ್ಞಾನಮಾರ್ಗವು ಮುಕ್ತಿಯನ್ನು ಕೊಡುವದಾಗಿದ್ದರೂ ಅದು ಜ್ಞಾನಿಗಳಾದ ಬಹು ಕೊಂಚ ಜನರಿಗೆ ಮಾತ್ರ ಸಾಧ್ಯ. ಅವರೂ ಸಹಾ ಕ್ರಿಯಾಶೂನ್ಯರಾಗುತ್ತ ಕ್ರಿಯೆಯನ್ನು ಜ್ಞಾನಕ್ಕೆ ಸಾಧನವೆಂದು ತಳೆದಿದ್ದರಿಂದ ಹಿಂದೂ ದೇಶವು ಕ್ರಿಯಾಶೂನ್ಯವಾಯಿತು. ಇದನ್ನು ಪರಿಹರಿಸುವುದಕ್ಕಾಗಿ ಭಗವದ್ಗೀತೆಯು ಮಧ್ಯಮಮಾರ್ಗವನ್ನು ಹಿಡಿದು ಕ್ರಿಯೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆಂದೂ ಅದರಿಂದ ಕ್ರಿಯೆಯನ್ನು ಮಾಡಿದರೂ ಅದರ ಫಲವನ್ನು ಅಪೇಕ್ಷಿಸದಿರುವುದೇ ಕರ್ಮಬಂಧನದಿಂದ ಮುಕ್ತವಾಗುವ ಮಾರ್ಗವೆಂದೂ ಕರ್ಮಯೋಗವನ್ನು ಸಾರಿತು. ಮತ್ತೊಂದು ಕಡೆಯಲ್ಲಿ ಭಕ್ತಿಮಾರ್ಗವು ಅನನ್ಯ ಮನಸ್ಸಿಂದ ಶರಣಾಗತನಾದವನಿಗೆ ಕರುಣಾಸಾಗರನಾದ ದೇವರು ಕೇವಲ ಕೃಪೆಯಿಂದ ಸಕಲ ಪಾಪಗಳನ್ನು ಕ್ಷಮಿಸುವನೆಂದೂ ಹೇಳಿತು. ಆದರೆ ಈ ವಾದವು, ಮಾಡಿದ್ದನ್ನು ತಿಂದೇ ತೀರಬೇಕೆಂಬ ಕರ್ಮವಾದಕ್ಕೆ ವಿರೋಧವಾಗಿದೆ. ಹೀಗೆ ವಿವಿಧ ವಿಚಾರಗಳುಳ್ಳ ಹಿಂದೂ ದೇಶದಲ್ಲಿ ಈ ಸಂಸ್ಥೆಯು ಒಂದೇ ಜನ್ಮದಲ್ಲಿ ಮುಕ್ತಿ ಹೊಂದಲೂ ಶಕ್ಯವಿದೆ ಎಂದು ತೋರಿಸಿಕೊಟ್ಟದ್ದಲ್ಲದೆ, ಲಿಂಗಧಾರಣದ ಮೂಲಕ ಅದು ಪ್ರತಿಯೊಬ್ಬನ ಸೊತ್ತೆಂದೂ ಪ್ರಕಟಮಾಡಿತು. ಹಿಂದಿನ ಜನ್ಮವುಂಟು, ಆದರೆ ಮುಂದಿನ ಜನ್ಮವಿಲ್ಲವೆಂಬುದು ವೀರಶೈವ ಸಿದ್ಧಾಂತವು. ಮೋಕ್ಷ ವಿಚಾರದಲ್ಲಿ ದೇವರ ಕೃಪೆ ಮನುಷ್ಯನ ಪ್ರಯತ್ನ ಇವೆರಡಕ್ಕೆ ಭೇದಭಾವು ಇಲ್ಲೆಂದು ತೋರಿಸುವುದೇ ಲಿಂಗಾಂಗ ಸಕೀಲ. ಕರ್ಮಗಳಲ್ಲಿ ಜನ್ಮವನ್ನು ಕೊಡುವ ಬೀಜಶಕ್ತಿಯನ್ನು ನಾಶಮಾಡಿ ಅವೆಲ್ಲವುಗಳನ್ನು

ಪ್ರಸಾದ ರೂಪವಾಗಿ ಪ್ರಕಟಿಸುವಂತೆ ಮಾಡುವುದೇ ಷಟ್ಸ್ಥಲ ಸಿದ್ಧಾಂತ. ಪ್ರಾರಬ್ಧ ಕರ್ಮವನ್ನು ಸದಾ ಪ್ರಸಾದ ರೂಪವಾಗಿ ಹಾಕಿ ಭೋಗಿಸಬಹುದೆಂಬುದಕ್ಕೆ ಇದೊಂದು ಬಸವಣ್ಣನವರ ವಚನ.

ಪಂಡಿತನಾಗಲಿ, ಮೂರ್ಖನಾಗಲಿ
ಸಂಚಿತ ಕರ್ಮ ಉಂಡಲ್ಲದೆ ಪೂಣದು
ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ ಹೋಗದೆಂದು
ಶ್ರುತಿ ಸಾರುತ್ತೈದಾವೆ ನೋಡಾ
ತಾನಾವಾವ ಲೋಕದೊಳಗಿದ್ದಡೆಯು ಬಿಡದು
ಕರ್ಮಫಲಗೂಡಿ ಕೂಡಲಸಂಗವು ದೇವರಿಗೆ
ಆತ್ಮನೈವೇದ್ಯವ ಮಾಡಿದವನೆ ಧನ್ಯ

೪. ಆಧ್ಯಾತ್ಮಿಕ ವಿಷಯದಲ್ಲಿ ಸ್ತ್ರೀಯರು ಪುರುಷರಿಗಿಂತ ಯಾವ ರೀತಿಯಿಂದಲೂ ಕಡಿಮೆಯವರಲ್ಲನೆಂದು ಇದು ತೋರಿಸಿಕೊಟ್ಟಿತು. ಇದರಿಂದ ಸ್ತ್ರೀಯರ ಉನ್ನತಿಯ ವಿಲಕ್ಷಣವಾಗಿ ಆಯಿತು. ಅನೇಕ ಸ್ತ್ರೀಯರು ಶಿವಾನುಭವದಲ್ಲಿ ಪುರುಷರನ್ನು ಹಿಮ್ಮೆಟ್ಟಿಸಿದ ಜೈನರಾಗಲಿ, ಬ್ರಾಹ್ಮಣರಾಗಲಿ ಸ್ತ್ರೀಯರಿಗೆ ಹೀಗೆ ಅಧಿಕಾರವನ್ನು ಕೊಟ್ಟಿರಲಿಲ್ಲ. ಜೈನರು ಸ್ತ್ರೀಯರಿಗೆ ಮೋಕ್ಷವೇ ಇಲ್ಲವೆಂದು ಹೇಳುತ್ತಿರುವರಲ್ಲಿ ಬ್ರಾಹ್ಮಣರು ಅವರಿಗೆ ಮೋಕ್ಷಕ್ಕೆ ಅಧಿಕಾವಿದ್ದರೂ ವೇದಗಳನೋದಲಿಕ್ಕೆ ಅಧಿಕಾರವಿಲ್ಲವೆಂದು ನಿರ್ಬಂಧಪಡಿಸಿದ್ದರು. ಮಹಾದೇವಿಯಕ್ಕ, ಸತ್ಯಕ್ಕ ಮುಂತಾದ ಅತ್ಯುತ್ಕಟ ಶಿವಭಕ್ತಿಯುಳ್ಳ ಮತ್ತು ನಿಷ್ಕಳಂಕ ಹಾಗೂ ಸ್ವತಂತ್ರವಾದ ಶೀಲವುಳ್ಳ ಶಿವಶರಣೆಯರು ಉದ್ಧಾರವಾಗುವುದಕ್ಕೆ ಈ ಅನುಭವ ಮಂಟಪದಂತಹ ಸಂಸ್ಥೆಗಳು ಹುಟ್ಟಿಸಿದ ಅನುಕೂಲ ವಾತಾವರಣವೇ ಕಾರಣವಾಯಿತು. ಇವರ ಸಂಖ್ಯೆ ಸುಮಾರು ೧೦೮. ಇವರಲ್ಲಿ ಅನೇಕರು ವಚನಗಳು ಓದತಕ್ಕವುಗಳಾಗಿವೆ. ಇವರು ವೀರಶೈವ ಧರ್ಮಕ್ಕೆ ಮಾತ್ರವೇ ಅಲ್ಲ, ಇತರ ಸ್ತ್ರೀ ಸಮಾಜಕ್ಕೂ ಭೂಷಣಪ್ರಾಯರಾಗಿದ್ದಾರೆ.

೫. ಈ ಅನುಭವ ಮಂಟಪದ ವಿದ್ಯುತ್ ಶಕ್ತಿಯನ್ನು ಆಗರದಲ್ಲಿ ಹುಟ್ಟಿದ ಶಕ್ತಿಯ ಮೂಲಕ ಇಡೀ ಸಮಾಜದಲ್ಲಿ ಒಂದು ತರಹದ ಹೊಸ ಜೀವ. ಹೊಸ ಬೆಳಕು, ಹೊಸ ತೇಜವೇ ಮಿಂಚತೊಡಗಿತು. ಅದರ ಪರಿಣಾಮವೇನಾಯಿತೆಂದರೆ ಅತ್ಯಂತ ಪಾಪಿಗಳು, ನೀಚರು ಎಂದಾಗಿರುವವರೂ ಕೂಡ ಪಾವನರಾದರು. ಅವರು ತಮ್ಮ ನೀಚತನವನ್ನು ಬಿಟ್ಟುಕೊಟ್ಟು ಒಳ್ಳೆಮಾರ್ಗವನ್ನು ಅವಲಂಬಿಸಿದರು. ಅನುಭವ ಮಂಟಪದ ಉಷ್ಣತೆಯಿಂದ ಅನೇಕ ಹಸಿ ಇದ್ದಿಲುಗಳು ಹೊತ್ತಿ ಉರಿಯುತ್ತಿದ್ದವು.

೬. ಈ ಸಂಸ್ಥೆಯು ಪ್ರತಿಯೊಂದು ವ್ಯಕ್ತಿಗೆ ವಿಚಾರ ಸ್ವಾತಂತ್ರ್ಯವನ್ನು ಆಚಾರ ಸ್ವಾತಂತ್ರ್ಯವನ್ನು ಕೊಟ್ಟಿತು. ಅದರಿಂದ, ಮಂಟಪಕ್ಕೆ ಸೇರಿದ ಪ್ರತಿಯೊಬ್ಬರೂ ಸ್ತ್ರೀ-ಪುರುಷರೆಂಬ ವ್ಯತ್ಯಾಸವಿಲ್ಲದೆ ಶಿವಾನುಭವವನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಯತ್ನಿಸಲಾರಂಭಿಸಿದರು. ಮತ್ತು ತಾನು ಸಂಪಾದಿಸಿದ ಆಧ್ಯಾತ್ಮಿಕ ಅನುಭವವನ್ನು ಶೂನ್ಯಪೀಠವನ್ನಲಂಕರಿಸಿದ ಆ ಪ್ರಭುದೇವರ ಚರಣಕಮಲಗಳಿಗೆ ಬಹು ವಿನಯದಿಂದ ಸಮರ್ಪಣ ಮಾಡಿದ ಬಳಿಕ ಅನುಭವ ಮಂಟಪದಲ್ಲಿದ್ದ ಇತರ ಶಿವಶರಣರು ಅವರ

ಯೋಗ್ಯಾಯೋಗ್ಯತೆಯನ್ನು ಕುರಿತು ವಾದ ಮಾಡುವರು. ಅವರವರು ಪಡೆದುಕೊಂಡ ಇಲ್ಲವೆ ಸಂಪಾದಿಸಿದ ಶಿವಾನುಭವಕ್ಕೆ "ಸಂಪಾದನೆ" ಎಂದು ಹೆಸರು. ಇದು ತರುವಾಯದ ಶೀಲದಲ್ಲಿ ಅವರವರ ಸಂಪಾದನೆ ಎಂದು ಕರೆಯಲ್ಪಟ್ಟಿತು.

೭. ಇದು ಕನ್ನಡದ ವಾಙ್ಮಯದಲ್ಲಿ ಹೊಸ ಜೀವಕಳೆಯನ್ನು ತುಂಬಿತು. ಬಸವನಿಗಿಂತ ಮುಂಚೆ ಕನ್ನಡ ಭಾಷೆಯು ಪ್ರಾಕೃತ ಸಂಸ್ಕೃತಮಯವಾಗಿದ್ದು ವಿಶಿಷ್ಟ ವರ್ಗದವರಲ್ಲಿ ಮಾತ್ರವೇ ಆದರಣೀಯವಾಗಿತ್ತು. ಆದರೆ, ಮುಂದೆ ಸಾಮಾನ್ಯರಿಗೂ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಹುಟ್ಟಿತು ಮತ್ತು ಆ ಶಿವಶರಣರ ಹೃದಯದಿಂದ ಹೊರಹೊಮ್ಮಿದ ಮಿಂಚಿನಂತಿದ್ದ ಉದ್ಗಾರಗಳು ಕನ್ನಡ ವಾಙ್ಮಯದಲ್ಲಿ ಹೊಸ ತೇಜವನ್ನು ಹುಟ್ಟಿಸಿದವು. ಇವುಗಳಿಗೆ ದಕ್ಷಿಣದ ಉಪನಿಷತ್ತುಗಳೆಂದರೂ ಸಲ್ಲುವುದು. ೧೯೩೧ನೆಯ ಡಿಸೆಂಬರದಲ್ಲಿ ಕಾರವಾರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಮುಳಿಯ ತಿಮ್ಮಪ್ಪನವರು ಹೇಳಿದ ಮಾತುಗಳು ಇಲ್ಲಿ ಉದಾಹರಿಸತಕ್ಕವುಗಳಾಗಿವೆ. "ಸಾಹಿತ್ಯವು ಲಕ್ಷಣಬದ್ಧವಾಗಿರಬೇಕೆಂದು ಹೋರಾಡಿದ ಮನ್ನಣೆಯನ್ನು ಜೈನರಿಗೆ, ಸಾಹಿತ್ಯವೆಂದರೆ ಒಬ್ಬಿಬ್ಬರ ಸೊತ್ತಲ್ಲ ಅದು ಜನಸಾಮಾನ್ಯರ ಹಕ್ಕಿನದು ಎಂದು ಅದನ್ನು ಊರಲ್ಲೆಲ್ಲಾ ಹಾಸುಹೊಕ್ಕಾಗಿ ಹೆಣೆದ ಹೆಗ್ಗಳಿಕೆ ವೀರಶೈವರಿಗೆ. ಒಂದು ತಣ್ಣೀರು, ಮತ್ತೊಂದು ಬೀಸಿನೀರು. ಇವೆರಡನ್ನು ಸಾಧಿಸಿದ ಜಾಣ್ಮೆ ವೈಷ್ಣವರಿಗೆ" ಹೀಗೆಂದು ಹೇಳಿದ್ದಾರೆ.

೮. ಪ್ರತಿಯೊಬ್ಬನಿಗೂ ಯಾವುದಾದರೊಂದು ಕೈಕೆಲಸವನ್ನು ಕೈಕೊಳ್ಳಬೇಕೆಂದು ಕಾಯಕವನ್ನು ಕಟ್ಟುಮಾಡಿದ್ದರಿಂದ ಉದ್ಯೋಗದ ಗೌರವವು ಬೆಳೆಯಿತು. ತೋರಲಿಕ್ಕೆ ಎಷ್ಟೇ ಕೀಳು ಕೆಲಸವಾದರೂ ಅದು ಈಶ ಸೇವೆ, ಮಾನವ ಸೇವೆಯ ದೃಷ್ಟಿಯಿಂದ ಮಾಡಲ್ಪಡಬಾರದ್ದರಿಂದ ಉದ್ಯೋಗವೆಲ್ಲವೂ ಪವಿತ್ರವಾದುದು ಎಂಬ ಭಾವನೆಯನ್ನು ಹುಟ್ಟಿಸಿತು. ಉತ್ತಮ ಕುಲದವರಿಗೆ ಉತ್ತಮ ಕಸುಬುಗಳು, ಹೀನಕುಲದವರಿಗೆ ಹೀನ ಕಸುಬುಗಳು ಈ ಮೊದಲು ಸೇವಕವಾಗಿದ್ದು ಉತ್ತಮರು ಕೀಳು ಕಸುಬಿನವರನ್ನು ಕಡೆಗಣ್ಣಿನಿಂದ ನೋಡುತ್ತಿದ್ದರು. ವಾಸ್ತವವಾಗಿ ಇದು ಹಿಂದೂ ದೇಶದ ಔದ್ಯೋಗಿಕ ಇತಿಹಾಸದಲ್ಲಿಯೇ ದೊಡ್ಡದೊಂದು ಕ್ರಾಂತಿಯನ್ನುಂಟುಮಾಡಿತೆಂದು ಹೇಳಬೇಕು. ವೀರಶೈವ ಸಮಾಜದಲ್ಲಿ ಸರ್ವತರಹದ ಕಸಬಿನವರೂ ದೊರೆಯುವುದರಿಂದ ಇದು ಆ ಸಮಾಜಕ್ಕೆ ಸ್ವಾವಲಂಬನದ ಮೂಲಾಕ್ಷರಗಳನ್ನೇ ಕಲಿಸಿಕೊಟ್ಟದ್ದರಿಂದ ಈ ದೇಶದ ಅರ್ಥಿಕಶಾಸ್ತ್ರವನ್ನೇ ಬೇರೊಂದು ತಳಹದಿಯ ಮೇಲೆ ರಚಿಸಿತೆಂದು ಹೇಳಬಹುದು.

೯. ಈ ಸಂಸ್ಥೆಯು ಭಾವುಕತನ, ಮಡಿ ಮೈಲಿಗೆಗಳ ಕಲ್ಪನೆ, ಪಂಚಸೂತಕ ಮುಂತಾದ ದೋಷಗಳಿಂದಲೂ, ನಿಷ್ಕಾರಣವಾದ ಅಸ್ಪೃಶ್ಯತೆ ಮುಂತಾದ ಹೊಲೆಯಿಂದಲೂ ಸಮಾಜವನ್ನು ಮುಕ್ತಮಾಡಿತು. ಲಿಂಗಧಾರಣನಾದ ಬಳಿಕ ಸರ್ವವನ್ನು ಪ್ರಸಾದರೂಪವಾಗಿ ಕೇಳಬೇಕಾಗಿ ಉಳಿದ ಮತಗಳಲ್ಲಿ

ರೂಢವಾಗಿರುವ ಸೂತಕ ಮುಂತಾದವುಗಳಿಗೆ ಈ ಮತದಲ್ಲಿ ಆಸ್ಪದವಿರುವುದಿಲ್ಲ. ವೀರಶೈವ ಸಮಾಜದಲ್ಲಿ ಕೆಲವು ಮಟ್ಟಿಗೆ ಕಡಿಮೆಯಾಗಿ ತೋರುವ ಈ ತರಹ ದೋಷಗಳು ಮಿಕ್ಕ ಹಿಂದೂ ಪಂಥಗಳಲ್ಲಿ ಇನ್ನೂ ಹೇರಳವಾಗಿ ಕಂಡುಬರುವುದರಿಂದಲೂ, ಅವುಗಳಲ್ಲಿ ಆಧುನಿಕ ಆರೋಗ್ಯಶಾಸ್ತ್ರಕ್ಕೆ ಮೀರಿದ ಬಹು ಸೂಕ್ಷ್ಮವಾದ ಕೆಲವು ಮಡಿ ಮೈಲಿಗೆಯ ನಿಯಮಗಳು ವಿಶೇಷವಾಗಿ ಸ್ತ್ರೀಯರನ್ನು ಅಂಟಿಕೊಂಡಿರುವುದರಿಂದಲೂ ಹಿಂದೂ ದೇಶದಲ್ಲಿ ಎಂತಹ ಸಮಾಜ ಸುಧಾರಕರಿಂದಲೂ ಪ್ರಗತಿಯಾಗಲೊಲ್ಲದು.

೧೦. ಇದು ವಿವಿಧ ಅನುಭವ ಪುಷ್ಪಗಳಿಂದ ಶೋಭಿಸುವ ಒಂದು ವಸ್ತು ಪ್ರದರ್ಶನ ಶಾಲೆಯಾಗಿತ್ತು. ಈ ಹೂದೋಟದಲ್ಲಿ ದೇಶದ ಮೇಲಿರುವ ಸಕಲತರದ ಅನುಭವದ ಹೂವಿನ ಗಿಡಗಳು ಸಂಗ್ರಹಿಸಲ್ಪಟ್ಟಿದ್ದವು. ಒಂದೊಂದು ಹೂವಿಗೆ ಒಂದೊಂದು ಸೌಂದರ್ಯ. ಒಂದೊಂದು ತರಹದ ವಾಸನೆ. ಈ ಅನುಭವ ಮಂಟಪದಲ್ಲಿ ಶಿವಾನುಭವ ಪುಷ್ಪಗಳು ಬಹು ರಮಣೀಯವಾಗಿ ಶೋಭಿಸುತ್ತಿದ್ದವು. ಆಧುನಿಕ ಶಾಸ್ತ್ರಜ್ಞರು ಈ ಅನುಭವಗಳನ್ನು ಮಾನಸ ಶಾಸ್ತ್ರಾನುಸಾರ ವಿವಿಧ ಜಾತಿಗಳಾಗಿ ವರ್ಗೀಕರಿಸಿದ್ದಾರೆ.

೧೧. ಅನುಭವ ಮಂಟಪವು, ಪ್ರತಿಯೊಬ್ಬನು ಸ್ನಾನಮಾಡಿ ತನ್ನ ದೋಷಗಳನ್ನೆಲ್ಲ ಕಳೆದುಕೊಳ್ಳುವುದೊಂದು ದೊಡ್ಡ ಜಲಸಂಚಯವೇ ಆಗಿತ್ತು. ಅನೇಕ ಶಿವಶರಣರು ಈ ತೀರ್ಥದಲ್ಲಿ ಸ್ನಾನಮಾಡಿ ಅಹಂಕಾರವೇ ಮುಂತಾದ ದೋಷಗಳನ್ನು ದೂರಮಾಡಿಕೊಂಡ ಉದಾಹರಣೆಗಳನ್ನು ನಾವು "ಶೂನ್ಯ ಸಂಪಾದನೆ" ಎಂಬ ಗ್ರಂಥದಲ್ಲಿ ಓದಬಹುದು. ಅನುಭವವೇ ಶುಭ್ರವಾದ ಖಾದಿ. ಅನುಭವದ ಅರಿದಾಟವೇ ಸಾಬೂನು. ಅನುಭವದ ಮಂಟಪವೇ ಖೋಳ ಎಂಬಂತಿತ್ತು.

೧೨. ಜ್ಞಾನ ಭಕ್ತಿ ಮತ್ತು ಕರ್ಮ ಇವು ಮೂರರೊಳಗೆ ಯಾವುದು ಹೆಚ್ಚಿನದೆಂಬ ವಾದವನ್ನು ಇದು ನಿಲ್ಲಿಸಿಬಿಟ್ಟಿತು ಅವು ಮೂರು ಸಮವಾಗಿಯೇ ಮಹತ್ವದವುಗಳೆಂಬುದು ಸಾರಿ ಹೇಳಿತು. ಗುರು, ಲಿಂಗ, ಜಂಗಮವೆಂಬುವುಗಳೇ ಇದರ ಬಾಹ್ಯ ಕುರುಹುಗಳು. ಭಗವದ್ಗೀತೆಯು ಕೂಡ ಬಹುಶಃ ಇವೇ ತರಹದ ಉಚ್ಚತತ್ವವನ್ನು ಹೇಳುತ್ತಿದ್ದರೂ ಅದರಲ್ಲಿ ಈ ನಿಷಂಬ ವೀರಶೈವ ಧರ್ಮದಲ್ಲಿ ಹೇಳಲ್ಪಟ್ಟಷ್ಟು ಸೂಕ್ಷ್ಮವಾಗಿಯೂ ಸ್ಪಷ್ಟವಾಗಿಯೂ ನಿರ್ದೇಶಿಸಲ್ಪಟ್ಟಿಲ್ಲವೆಂದು ಹೇಳಬೇಕು.

೧೩. ಇದು ಗೃಹಸ್ಥಾಶ್ರಮಕ್ಕೆ ಬಹಳ ಗೌರವವನ್ನು ಕೊಟ್ಟಿತು. ಜೈನ, ಬೌದ್ಧಾದಿ ಧರ್ಮಗಳು ಸನ್ಯಾಸಕ್ಕೆ ಬಹಳ ಮನ್ನಣೆಯನ್ನು ಕೊಟ್ಟಿದ್ದರಿಂದ ಸಮಾಜದ ಮೇಲೆ ನಿವೃತ್ತಿಯ ಪರಿಣಾಮವೇ ಬಹಳವಾಗಿ ಆಗಿತ್ತು. ಈ ಭಾವನೆಯನ್ನು ಕತ್ತುಹಾಕಿ ಸಮಾಜವನ್ನು ಸುಧಾರಿಸಿ ಸನ್ಯಾಸಿಯಂತೆ ಗೃಹಸ್ಥನೂ ಮೋಕ್ಷಕ್ಕೆ ಅಧಿಕಾರಿಯೆಂದೂ ಈ ಸಂಸ್ಥೆಯು ಘಂಟಾಘೋಷವಾಗಿ ಸಾರಿತು. ವೀರಶೈವ ಮತೋದ್ಧಾರಕನಾದ ನಿಜಾರ್ಥದಲ್ಲಿ ಸಂಸ್ಥಾಪಕನಾದ ಬಸವೇಶ್ವರನೂ ಸ್ವತಃ ಗೃಹಸ್ಥಾಶ್ರಮಿಯೇ.

೧೪. ಯಾವ ಅಸ್ಪೃಶ್ಯರು ಮಾನವ ಜಾತಿಗಿರುವ ತಮ್ಮ ಹಕ್ಕುಗಳನ್ನು ಕಳೆದುಕೊಂಡು ಇದು ವರೆಗೆ ಹಿಂದೂ ಸಮಾಜದ ಹೊರಗೆ ನಿಂತುಕೊಂಡಿರುವರೋ, ಯಾವ ಜನರ ಉದ್ಧಾರದ ಮೇಲೆ ಹಿಂದೂದೇಶದ ಭಾವೀ ರಾಜಕೀಯ ಸ್ಥಿತಿಯು ಅವಲಂಬಿಸಿಕೊಂಡಿರುವುದೋ ಅಂತಹ ಅಸ್ಪೃಶ್ಯರನ್ನು ಈ ಸಂಸ್ಥೆಯು ಬಿಗಿದಪ್ಪಿ ಅವರೊಡನೆ ಸಹಪಂಕ್ತಿಭೋಜನ ಲಗ್ನ ಸಂಬಂಧವಾದ ವ್ಯವಹಾರವನ್ನು ಮಾಡಿದ್ದಲ್ಲದೆ ಅವರಿಗೆ ಆತ್ಮೋನ್ನತಿಯ ಶಿಕ್ಷಣವನ್ನು ಕೊಟ್ಟಿತೆಂಬುದು ಬಹು ಆಶ್ಚರ್ಯಕರವಾದ ಸಂಗತಿಯಾಗಿದೆ. ಇಪ್ಪತ್ತನೆಯ ಶತಮಾನದಲ್ಲೂ ಈ ವಿಷಯವು ಇಷ್ಟು ಕಠಿಣವೆನಿಸಿರುವಲ್ಲಿ ೮೦೦ ವರುಷಗಳ ಪೂರ್ವದಲ್ಲಿ ಶಿವಶರಣರು ಇದನ್ನು ಸಹಜವಾಗಿ ಆಚಾರದಲ್ಲಿ ತಂದದ್ದನ್ನು ನೋಡಿದರೆ ಆಧುನಿಕ ಸುಧಾರಕರೆಲ್ಲರೂ ತಲೆಬಾಗಿಸಬೇಕಾಗುವುದು.[೧೬]

ಅಡಿಟಿಪ್ಪಣಿ

೧. ಡಾ. ಡಿ.ಎಲ್. ಪಾಟೀಲ್, **ಕ.ವಿ. ವಿಶ್ವಕೋಶ ಧರ್ಮ** ಸಂ. ರಹಮತ ತರೀಕೆರೆ ಪುಟ ೧೫೨
೨. ಶೇಷ ನವರತ್ನ, **ಜಾಗತಿಕ ಧರ್ಮಗಳು,** ಪುಟ x, xi
೩. ಅಲ್ಲೆ ಪುಟ xiv
೪. ಡಾ. ವಿಲ್ಯಂ ಮಾಡ್ತಾ, **ವೀರಶೈವ ದರ್ಶನ,** ಪುಟ ೬೪
೪. ಡಾ. ವಿಲ್ಯಂ ಮಾಡ್ತಾ, ವೀರಶೈವ ದರ್ಶನ, ತೌಲನಿಕ ವಿವೇಚನೆ, ಪುಟ ೬೪
೫. ಅಲ್ಲೆ ಪುಟ ೭೩
೬. ಚಸರಾ, **'ಕ್ರಿಸ್ತನೊಳಗಿನ ಕ್ರಿಸ್ತ',** ಪುಟ iii ಸಂಚಲನ, ಬೆಂಗಳೂರು, ೧೯೯೯
೭. ಲೂಕ ೩:೧೧-೧೪
೮. ಯೆಶಾಯ ೨೯:೧೮-೧೯
೯. ಯೆಶಾಯ ೩೫:೬
೧೦. ಯೆಶಾಯ ೬೧:೧-೨
೧೧. **ಚಸರಾ 'ಕ್ರಿಸ್ತನೊಳಗಿನ ಕ್ರಿಸ್ತ'** ಪುಟ ೩೯, ಸಂಚಲನ, ಬೆಂಗಳೂರು, ೧೯೯೯
೧೨. ಮಾರ್ಕ ೧೬:೧೫
೧೩. ಮತ್ತಾಯ ೨೩:೧೨
೧೪. ಮತ್ತಾಯ ೫:೧೭
೧೫. ಮತ್ತಾಯ ೫:೨೦
೧೬. ಚಸರಾ **'ಕ್ರಿಸ್ತನೊಳಗಿನ ಕ್ರಿಸ್ತ'** ಪುಟ ೯೨, ಸಂಚಲನ, ಬೆಂಗಳೂರು, ೧೯೯೯
೧೭. ಡಾ. ಎಂ. ಚಿದಾನಂದ ಮೂರ್ತಿ, **'ಚಿದಾನಂದ ಸಮಗ್ರ ಸಂಪುಟ ೪'** ಪುಟ ೧೧೦
೧೮. ಸಂ. ಎಲ್. ಬಸವರಾಜು, **'ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆ',** ಪುಟ ೨೧೯
೧೯. ಶ್ರೀ ಎನ್.ಕೆ. ಕುಲಕರ್ಣಿ, **'ಬಸವೇಶ್ವರ ಸಮಾಜ ರಚನಾ ಕಲ್ಪನೆ'** ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿಯವರ ಸ್ಮಾರಕ ಸಂಪುಟ, ಪುಟ ೨೩೯, ವಿಜಾಪೂರ, ೧೯೭೮.
೨೦. ಶ್ರೀಮತಿ ಎಸ್. ಉಮಾದೇವಿ, (ಸಂ.) ಬಸವಣ್ಣನವರ ವಚನಗಳು, ಪುಟ ೨೧೪

೨೧. ಶ್ರೀ ಎನ್.ಕೆ. ಕುಲಕರ್ಣಿ, **'ಪಾ ಫ.ಗು. ಹಳಕಟ್ಟಿ ಸ್ಮಾರಕ ಸಂಪುಟ**, ಪುಟ ೨-೩೯
೨೨. ಡಾ. ಎಂ.ಎಂ. ಕಲಬುರ್ಗಿ, (ಸಂ.) ಬಸವಣ್ಣನವರ ವಚನ ಸಂಪುಟ, ಪುಟ ೧೪೭
೨೩. ಡಾ. ಎಂ. ಎಂ. ಕಲಬುರ್ಗಿ, (ಸಂ.) 'ಬಸವಣ್ಣನವರ ವಚನ ಸಂಪುಟ', ಪುಟ ೧೮
೨೪. ಅಲ್ಲೆ ಪುಟ ೮೭
೨೫. ಅಲ್ಲೆ ಪುಟ ೧೬
೨೬. ಅಲ್ಲೆ ಪುಟ ೪೨
೨೭. ಅಲ್ಲೆ ಪುಟ ೬೦
೨೮. ಅಲ್ಲೆ ಪುಟ ೨೧೧
೨೯. ಅಲ್ಲೆ ಪುಟ ೩೪
೩೦. ಅಲ್ಲೆ ಪುಟ ೩೨
೩೧. ಅಲ್ಲೆ ಪುಟ ೧೪೮
೩೨. ಅಲ್ಲೆ ಪುಟ ೫೯
೩೩. ಎಂ. ಯಮನಾಚಾರ್ಯ, **'Sri Basaveshwara, Commeration volume'**, P. 75.
೩೪. Armando Menezes, **'Sri Basaveshwara a commerition Volue'**, P. 214
೩೫. ಚಂದ್ರಶೇಖರ ಶಾಸ್ತ್ರೀ ಹಿರೇಮಠ, **'ಬಸವ ತತ್ವ ರತ್ನಾಕರ'**, ಪುಟ ೩೪೪
೩೬. ಡಾ. ಎಂ.ಎಂ. ಕಲಬುರ್ಗಿ, (ಸಂ) **'ಬಸವಣ್ಣನವರ ವಚನ ಸಂಪುಟ'** ಪುಟ ೧೪೮
೩೭. ಅಲ್ಲೆ ಪುಟ ೧೪೭
೩೮. ವಿಹಾರಿ, **'ಶ್ರೀ ಬಸವಣ್ಣನವರ ವಚನಗಳು'**, ಪುಟ ೧೩೦
೩೯. ಡಾ. ಎಂ.ಎಂ. ಕಲಬುರ್ಗಿ, (ಸಂ), **'ಬಸವಣ್ಣನವರ ವಚನ ಸಂಪುಟ'**, ಪುಟ ೮೩
೪೦. ಅಲ್ಲೆ ಪುಟ ೧೧೨
೪೧. ಡಾ. ಎಸ್. ವಿದ್ಯಾಶಂಕರ, **'ವಚನ ಪುರುಷ'**, ಪುಟ ೨೮
೪೨. ಡಾ. ಎಂ. ಚಿದಾನಂದ ಮೂರ್ತಿ, **'ವಚನ ಸಾಹಿತ್ಯ'**, ಪುಟ ೭೪
೪೩. ಡಾ. ಸಿದ್ಧಲಿಂಗಯ್ಯ, **'ಅಮರ ಪ್ರೀತಿಯ ಕಥನ'**, ಅನುವಾದ ಡಾ. ಬಿ.ಎಸ್. ತಲ್ವಾಡಿ ಬೆನ್ನುಡಿ
೪೪. ಚಸರಾ, **'ಕ್ರಿಸ್ತನೊಳಗಿನ ಕ್ರಿಸ್ತ'** ಪುಟ ೧೮
೪೫. ಅಲ್ಲೇ ಪುಟ ೭೪.
೪೬. ಯೊವಾನ್ನ ೪:೨೪
೪೭. ಮತ್ತಾಯ ೬:೫-೬
೪೮. ಮತ್ತಾಯ ೬:೧೦-೧೩
೪೯. ಮತ್ತಾಯ ೫, ೬ ಮತ್ತು ೭ನೇ ಅದ್ಯಾಯಗಳು
೫೦. ಮತ್ತಾಯ ೧೨:೭
೫೧. ಯೊವಾನ್ನ ೧೪:೧
೫೨. ಡಾ. ಎಂ. ಎಂ. ಕಲಬುರ್ಗಿ, (ಸಂ) **'ಬಸವಣ್ಣನವರ ವಚನ ಸಂಪುಟ'**, ಪುಟ ೧೩೬
೫೩. ಅಲ್ಲೆ ಪುಟ ೧೫೪
೫೪. ಅಲ್ಲೆ ಪುಟ ೧೩೮
೫೫. ಅಲ್ಲೆ ಪುಟ ೧೩೮
೫೬. ಅಲ್ಲೆ ಪುಟ ೧೩೯
೫೭. ಚಂದ್ರಶೇಖರ ಶಾಸ್ತ್ರಿ ಹಿರೇಮಠ, **'ಬಸವತತ್ವ ರತ್ನಾಕರ'**, ಪುಟ ೩೪೫
೫೮. ಡಾ. ಎಂ.ಎಂ. ಕಲಬುರ್ಗಿ, (ಸಂ), **ಬಸವಣ್ಣನವರ ವಚನ ಸಂಪುಟ**, ಪುಟ ೧೫೪
೫೯. ಅಲ್ಲೇ ಪುಟ ೪೬

೬೦. ಸಿ.ಪಿ. ಕೃಷ್ಣಮೂರ್ತಿ, 'ಬಸವ ಭಾವನೆ', ಪುಟ ೨.
೬೧. ಡಾ. ಎಂ.ಎಂ. ಕಲಬುರ್ಗಿ, (ಸಂ), **'ಬಸವಣ್ಣನವರ ವಚನ ಸಂಪುಟ'**, ಪುಟ - ೫೯
೬೨. ಅಲ್ಲೆ ಪುಟ ೧೫೦
೬೩. ಅಲ್ಲೆ ಪುಟ
೬೪. ಅಲ್ಲೆ ಪುಟ
೬೫. ಅಲ್ಲೆ ಪುಟ ೪೯
೬೬. ಅಲ್ಲೆ ಪುಟ ೨೧೧
೬೭. Sarojini Shintri, Sri Basaveshwara A Comeration Volume P. 154
೬೮. ಡಾ. ಎಂ. ಎಂ. ಕಲಬುರ್ಗಿ, (ಸಂ), **'ಬಸವಣ್ಣನವರ ವಚನ ಸಂಪುಟ'**, ಪುಟ ೧೨೩
೬೯. ಅಲ್ಲೇ ಪುಟ ೧೬೧
೭೦. ಅಲ್ಲೇ ಪುಟ ೧೬೧
೭೧. ಅಲ್ಲೇ ಪುಟ ೧೬೧
೭೨. ಅಲ್ಲೇ ಪುಟ ೧೬೧
೭೩. ಅಲ್ಲೇ ಪುಟ ೧೬೦
೭೪. ಅಲ್ಲೇ ಪುಟ ೧೦೮
೭೫. ಎಂ. ಎಸ್. ಆಶಾದೇವಿ, **'ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ'**, ಪುಟ ೬೩
೭೬. ಅಲ್ಲೇ ಪುಟ ೨೮
೭೭. ಅಲ್ಲೇ ಪುಟ ೧೫೫
೭೮. ಅಲ್ಲೇ ಪುಟ ೩೦
೭೯. ಅಲ್ಲೇ ಪುಟ ೩೦
೮೦. ಸಿ.ಪಿ.ಕೆ. **ಬಸವ ಭಾವನೆ,** ಪುಟ. ೫೪-೫೫, ಸಂವಹನ ಪ್ರಕಾಶ, ಮೈಸೂರು, ೧೯೮೭
೮೧. **ಜೇಡರ ದಾಸಿಮಯ್ಯನ ವಚನಗಳು**
೮೨. ಎಂ. ಎಸ್. ಆಶಾದೇವಿ, **'ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ'** ಪುಟ ೧೬.
೮೩. Sarojini Shintri, **'Sri Basaveshwara, A commorative Volume'**, P. 157
೮೪. ಫಾದರ್ ಸ್ಟಾನಿ ಬ್ಯಾಪ್ಟಿಸ್ಟ್, **ಬೈಬಲ್ಲಿನ ಸ್ತ್ರೀಯರು,** ಪುಟ ೧೦೯
೮೫. ಗಲ್ಯಾತ ೩:೨೮
೮೬. ಯೋವಾನ ೨:೧-೧೦
೮೭. ಯೋವಾನ ೪:೯
೮೮. ಫಾದರ್ ಸ್ಟಾನಿ ಬ್ಯಾಪ್ಟಸ್ಟ್-**ಬೈಬಲ್ಲಿನ ಸ್ತ್ರೀಯರು** ಪುಟ ೧೧೮
೮೯. ಮತ್ತಾಯ ೨೧:೩೧
೯೦. ಯೋವಾನ ೮:೧-೧೦
೯೧. ಲೂಕ ೫:೩೨
೯೨. ಯೋವಾನ ೪:೨೬
೯೩. ಮತ್ತಾಯ ೧೫:೨೮
೯೪. ಮಾರ್ಕ ೧೬:೯
೯೫. ಯೊವಾನ ೮:೧-೧೦
೯೬. ಗಲ್ಯಾತ ೪:೨೭
೯೭. ಮತ್ತಾಯ ೨೧:೩೧

೯೮. ಮತ್ತಾಯ ೫:೨೭-೨೮

೯೯. V.K. Javali, **Sri Basaveshwara, A Commeration Volume,** P. 140

೧೦೦. ಸಿಪಿಕೆ, 'ಬಸವ ಭಾವನೆ', ಪುಟ ೧೫

೧೦೧. ಅಲ್ಲೇ ಪುಟ ೧೬

೧೦೨. ಆದಿಕಾಂಡ ೧ ಮತ್ತು ೨ನೇ ಅಧ್ಯಾಯ

೧೦೩. ಆದಿಕಾಂಡ ೩:೧೯

೧೦೪. Karl Herman Schelkle, **Theology of the N.T.,** Vol. III, P. 287

೧೦೫. ಕೀರ್ತನೆ ೧೦೪:೨೩, ೯೦:೧೭

೧೦೬. ಜ್ಞಾನೋಕ್ತಿಗಳು ೬:೬-೧೧

೧೦೭. ಸಿರಾಕ್ ೧೦:೨೭

೧೦೮. ಜ್ಞಾನೋಕ್ತಿಗಳು ೧೩:೪

೧೦೯. ಮಾರ್ಕ ೬:೩

೧೧೦. John P. neir, **A Marginal Jew Rethinking the Historical Jeses,** P. 279,

೧೧೧. Geroge Wesley Bachanan, **Jesus and the opper class,** Novum Testamentum, pp 175-209.

೧೧೨. ಮತ್ತಾಯ ೪:೧೮-೨೨ ಲೂಕ ೫:೧-೧೧

೧೧೩. ಲೂಕ ೧೨:೧೫

೧೧೪. ಪಾದರ್ ಪ್ಯಾಟ್ರಿಕ್ ದಜೆವಿಯರ್, ಅಪ್ರಕಟಿತ ಪ್ರೌಢಪ್ರಬಂಧ, **ಬಸವಣ್ಣ ಹಾಗೂ ಯೇಸುಕ್ರಿಸ್ತನ ಪ್ರಾರ್ಥನಾ ಜೀವಿತ'** ಪುಟ ೨೨೩

೧೧೫. ಶ್ರೀ ಜ.ಚ.ನಿ, **'ಕಾಯಕ ಕಲೆ',** ಪುಟ ೧೦೧

೧೧೬. ಮಾತೆ ಮಹಾದೇವಿ, **ಬಸವ ತತ್ವದರ್ಶನ,** ಪುಟ ೬೦೪, ಕರ್ನಾಟಕ ವಿ.ವಿ. ಧಾರವಾಡ ೧೯೬೯

೧೧೯. ಸಿ. ಸೋಮಶೇಖರ, **ಹನ್ನೆರಡನೆಯ ಶತಮಾನದ ವಚನಗಳಲ್ಲಿ ಸಾಮಾಜಿಕ ಚಿಂತನೆ,** ಪುಟ ೫, ೨೦೦೩

೧೨೦. ಡಾ. ಎಂ. ಎಂ. ಕಲಬುರ್ಗಿ, (ಸಂ), **ಬಸವಣ್ಣನವರ ವಚನ ಸಂಪುಟ,** ಪುಟ. ೭೦೮

೧೨೧. ಅಲ್ಲೇ ಪುಟ ೨೨೯

೧೨೨. ಅದೇ ಪುಟ ೧೦೯

೧೨೩. ಅದೇ ಪುಟ ೧೪೮

೧೨೪. ಶ್ರೀಮತಿ ಎಸ್. ಉಮಾದೇವಿ, (ಸಂ), **'ಬಸವಣ್ಣನವರ ವಚನಗಳು',** ಪುಟ ೨೧೪

೧೨೫. ಶ್ರೀ ಜ.ಚ.ನಿ., **'ಕಾಯಕ ತಲೆ'** ಪುಟ ೧೦೨

೧೨೬. ಚಸರಾ, **'ಕ್ರಿಸ್ತನೊಳಗಿನ ಕ್ರಿಸ್ತ'** ಪುಟ ೧೮

೧೨೭. ನಾ. ಡಿಸೋಜ, **'ಏಸುಕ್ರಿಸ್ತ',** ಪುಟ ೪೫

೧೨೮. ಡಾ. ಎಂ.ಎಂ. ಕಲಬುರ್ಗಿ, (ಸಂ), **'ಬಸವಣ್ಣನವರ ವಚನ ಸಂಪುಟ',** ಪುಟ ೨೩೩

೧೨೯. ಚಂದ್ರಶೇಖರ ಶಾಸ್ತ್ರಿ ಹಿರೇಮಠ, 'ಬಸವ ತತ್ವ ರತ್ನಾಕರ' ಪುಟ ೪೪೨.

೧೩೦. ಪ್ರೊ. ಬಿ.ಸಿ. ಜವಳಿ, **ಧರ್ಮಭಂಡಾರಿ ಬಸವಣ್ಣನವರು,** ಪುಟ viii

೧೩೧. ಚಂದ್ರಶೇಖರ ಶಾಸ್ತ್ರಿ, ಹಿರೇಮಠ, **'ಬಸವತತ್ವರತ್ನಾಕರ'** ಪುಟ ೪೪೪

೧೩೨. ನಾ. ಡಿಸೋಜ, **'ಯೇಸುಕ್ರಿಸ್ತ'** ಪುಟ ೨೭

೧೩೩. ಚಸರಾ, **ಕ್ರಿಸ್ತನೊಳಗಿನ ಕ್ರಿಸ್ತ,** ಪುಟ ೨೫ ರಿಂದ ೨೯

೧೩೪. ವಿಲ್ಲಂಮಾಡ್ತಾ, **ಸರ್ವಧರ್ಮ ದರ್ಶನ,** ಪುಟ ೧೯೬

೧೩೫. ಲೂಕ ೩:೨೧

೧೩೬. ಲೂಕ ೪:೧೬

೧೩೭. ಮತ್ತಾಯ ೨೫:೩೧-೪೬; ಮಾಕ ೧೨:೨೮-೩೪

೧೩೮. ಮತ್ತಾಯ ೧೧:೨೮-೨೯

೧೩೯. ಮತ್ತಾಯ ೨೨:೩೯

೧೪೦. ಮತ್ತಾಯ ೭:೧೨

೧೪೧. ವಿಲ್ಯಂಮಾಡ್ತಾ **'ಸರ್ವಧರ್ಮ ದರ್ಶನ'** ಪುಟ. ೧೯೭

೧೪೨. ಎಂ. ಚಿದಾನಂದ ಮೂರ್ತಿ, ಬಸವಣ್ಣನವರು, ಪುಟ ೨೫

೧೪೩. ಷಣ್ಮುಖಯ್ಯ ಅಕ್ಕುರ ಮಠ, **ಕ.ವಿ. ವಿಶ್ವಕೋಶ ಧರ್ಮ**, ಪುಟ ೨೦೫

೧೪೪. ವೀ. ಸೀತಾರಾಮಯ್ಯ, ಬಸವೇಶ್ವರ, ಪುಟ ೧೫೭

೧೪೫. Fulton J. Sheen, **Life of Christ,** P. 114

೧೪೬. ಮತ್ತಾಯ ೫:೩

೧೪೭. ಮತ್ತಾಯ ೫:೪

೧೪೮. ಮತ್ತಾಯ ೫:೪

೧೪೯. ಮತ್ತಾಯ ೫:೬

೧೫೦. ಮತ್ತಾಯ ೫:೭

೧೫೧. ಮತ್ತಾಯ ೫:೧೧

೧೫೨. ಮತ್ತಾಯ ೫:೮

೧೫೩. ಮತ್ತಾಯ ೫:೯

೧೫೪. ಮತ್ತಾಯ ೫:೧೦

೧೫೫. ಡಾ. ದಯಾನಂದ ಪ್ರಭು, **ಭುವನ ಜ್ಯೋತಿ,** ಪುಟ ೨೬೮

೧೫೬. ಮತ್ತಾಯ ೫:೨೭ ರಿಂದ ೩೦

೧೫೭. ಮತ್ತಾಯ ೫:೩೮ ರಿಂದ ೪೨

೧೫೮. ಮತ್ತಾಯ ೬:೫ ರಿಂದ ೧೩

೧೫೯. ಮತ್ತಾಯ ೭:೧೨

೧೬೦. ಮತ್ತಾಯ ೭:೫

೧೬೧. ಮತ್ತಾಯ ೬:೨೫

೧೬೨. ಮತ್ತಾಯ ೫:೧೩

೧೬೩. ಮತ್ತಾಯ ೫:೨೪

೧೬೪. ಮತ್ತಾಯ ೬:೩೪

೧೬೫. ಮತ್ತಾಯ ೫:೪೮

೧೬೬. ಪ್ರೊ. ಬಿ. ವಿರೂಪಾಕ್ಷಪ್ಪ, **'ಶರಣತತ್ವ ವಿವೇಚನೆ'**, ಪುಟ ೧೪೭.

೧೬೭. ರೆವರೆಂಡ್ ಉತ್ತಂಗಿ ಚೆನ್ನಪ್ಪ **'ಅನುಭವ ಮಂಟಪ'** ಪುಟ ೧.

ಅಧ್ಯಾಯ - ೫

೫.೧ ಸಮಾಜ ಹಾಗೂ ಅದರ ಪರಿಕಲ್ಪನೆ

'ಸಮಾಜ' ಎಂಬ ಪದಕ್ಕೆ ಇಂಗ್ಲಿಷ್‌ನಲ್ಲಿ ಸಮಾನವಾದ ಅರ್ಥ ಕೊಡುವ ಪದ 'ಸೊಸೈಟಿ'. ಈ ಸೊಸೈಟಿ ಎಂಬ ಪದವು ಲ್ಯಾಟಿನ್ ಭಾಷೆಯ 'ಸೊಚಿಯುಸ್' ಎಂಬ ಶಬ್ದದಿಂದ ಬಂದಿದೆ. ಸೊಚಿಯುಸ್ ಎಂದರೆ 'ಒಡನಾಡಿತನ' ಎಂದರ್ಥ. ಒಡನಾಡಿಗಳ ಒಡನಾಟದಿಂದ ಒಟ್ಟುಗೂಡಿರುವ ವ್ಯವಸ್ಥೆಯೇ 'ಸಮಾಜ'. ಈ ಪರಿಕಲ್ಪನೆಗೆ ಪೂರ್ಣ ಒಮ್ಮತವಿಲ್ಲ. ಆದರೂ ಮಾನವರು ಸಮಾಜ ಜೀವಿಗಳೇ. ಸಮಾಜವಿಲ್ಲದೆ ಒಂಟಿಯಾಗಿ ಜೀವಿಸಲು ಯಾರೂ ಇಚ್ಛಿಸುವುದಿಲ್ಲ. ಮಾನವ ಸಮಾಜವೆಂಬ ಚೌಕಟ್ಟಿನ ಹೊರತಾಗಿ ಮಾನವ ವ್ಯಕ್ತಿತ್ವವೆಂಬುದು ರೂಪುಗೊಳ್ಳುವುದೇ ಇಲ್ಲ. ಮಾನವ ಸಮಾಜದ ಭಾಗವಷ್ಟೆ ಅಲ್ಲ ಸಮಾಜವೂ ಕೂಡಾ ಮಾನವನು ಜೀವಿತದ ಒಂದು ಭಾಗವೇ. ವ್ಯಕ್ತಿ ಮತ್ತು ಸಮಾಜ ಪರಸ್ಪರ ಅವಿಭಜನೀಯ. ಪೀಟರ್ ಬರ್ಜರ್ ಹೇಳುವಂತೆ "ಸಮಾಜವು ನಮ್ಮ ಹುಟ್ಟಿಗೂ ಪೂರ್ವದಲ್ಲಿದ್ದು ನಮ್ಮ ಸಾವಿನ ನಂತರವೂ ಮುಂದುವರಿಯಲಿದೆ......" ಅದು ನಮ್ಮ ಜೀವನಕ್ಕೊಂದು - ಉದ್ದೇಶವನ್ನು, ಅರ್ಥವನ್ನು, ದಿಕ್ಕನ್ನು ಕೊಡುವುದು."[೧]

ಸಮಾಜಕ್ಕೆ ವಿವಿಧ ರೀತಿಯ ಅರ್ಥಗಳು ವ್ಯಾಖ್ಯಾನಗಳು ಇವೆ Maclver ಮತ್ತು Page ಅವರ ಪ್ರಕಾರ; "Society is a system of usages and procedures, of authority and mutual aid, of many groupings and decisions of controls of human behaviour and of liberties. This ever-changing, complex system, we call society."[೨]

"ಸಮಾಜವೆಂಬುದು ಸಾಮಾಜಿಕ ಸಂಬಂಧಗಳ ಬಲೆ" ಎಂದು ಮೆಕ್ಕವರ್ ಮತ್ತು ಪೇಜ್ ಎಂಬವರು ಸರಳವಾಗಿ ವ್ಯಾಖ್ಯಾನಿಸಿದ್ದಾರೆ. "ಕೇವಲ ಜನರ ಗುಂಪಿನಿಂದ ಅಥವಾ ಸಮಾವೇಶದಿಂದ ಸಮಾಜವಾಗಲಾರದು. ಸಮೂಹಗಳ ಅಥವಾ ಗುಂಪಿನ ಸದಸ್ಯರು ಪರಸ್ಪರ ಸಂಬಂಧ ಹೊಂದಿರಬೇಕು. ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳ ನಡುವಿನ 'ಪರಸ್ಪರ' ಕೊಡುವ ಹಾಗೂ ತೆಗೆದುಕೊಳ್ಳುವ ಸಂಬಂಧವನ್ನು 'ಸಾಮಾಜಿಕ ಸಂಬಂಧ'ವೆನ್ನಬಹುದಾಗಿದೆ. ಉದಾಹರಣೆಗೆ: ತಾಯಿ-ಮಗು, ಗುರು-ಶಿಷ್ಯ, ಸ್ನೇಹಿತ- ಗಿರಾಕಿಗಳು, ಭಾಷಣಕಾರರು ಶ್ರೋತೃಗಳು..... ಇವರುಗಳ ಮಧ್ಯೆ ಅಂತಹ ಸಂಬಂಧವನ್ನು ಕಾಣಬಹುದು. ಜನರ ನಡುವೆ ಕಾಣಬರುವ ಪರಸ್ಪರ ಅರಿವು ಮತ್ತು ಪರಸ್ಪರ ಗುರುತಿಸಿಕೊಳ್ಳುವ

ಅಂಶವು ಇಂತಹ ಸಾಮಾನ್ಯ ಸಂಬಂಧವನ್ನು ಬೆಳೆಸಿಕೊಳ್ಳಲು ಸಹಾಯಕವಾಗುವುದು.”[೩] ಯಾವುದೇ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯೊಂದಿಗೆ ಸಾಮಾಜಿಕ ಸಂಬಂಧ ಸ್ಥಾಪಿಸಬೇಕಾದರೆ ಅಲ್ಲಿ ಅಗತ್ಯವಾಗಿ ಬೇಕಾಗಿರುವುದು ಮಾನಸಿಕ ಪರಿಸ್ಥಿತಿಯೇ. ಸಾಮಾಜಿಕ ಜೀವಿಗಳೆನಿಸಿಕೊಂಡ ಮನುಜರು ಒಬ್ಬರನ್ನೊಬ್ಬರು ಗುರುತಿಸಿಕೊಂಡು ವರ್ತಿಸುವಂತಹ ಪರಿಸ್ಥಿತಿ ಎಲ್ಲಿರುತ್ತದೆಯೋ ಅಲ್ಲಿ ಮಾತ್ರ ಸಮಾಜವೆಂಬುದಿರುತ್ತದೆ.

ಸಮಾಜ ಹೋಲಿಕೆ ಅಥವಾ ಸಾಮ್ಯತೆಯನ್ನು ಅವಲಂಬಿಸಿರುತ್ತದೆ. ‘ಒಂದೇ ಜಾತಿಯ ಪಕ್ಷಿಗಳು ಒಂದುಗೂಡುತ್ತವೆ’ (Birds of the same feather flock together) ಎನ್ನುವ ಮಾತಿಗನುಗುಣವಾಗಿ ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಹೋಲಿಕೆಗಳು, ಸಾಮಾನ್ಯ ಭಾವನೆಗಳು, ಉದ್ದೇಶಗಳು, ಆಸೆ-ಆಕಾಂಕ್ಷೆಗಳು, ಆದರ್ಶ ಹಾಗೂ ಮೌಲ್ಯಗಳು ಒಂದೆಡೆ ಸೇರುವಂತೆ ಮಾಡುತ್ತವೆ. ಸಮಾಜವು ಗತಿಶೀಲವಾಗಿದ್ದು ಸಂಸ್ಕೃತಿಯೊಂದಿಗೆ ಒಟ್ಟಿಗೆ ಸಾಗುತ್ತದೆ. ಮಾನವನ ಸಾಂಘಿಕತೆಯನ್ನು ಅವಲಂಬಿಸಿ ನಿಂತಿರುವುದು ಸಮಾಜ. ಮಾನವ ಹಾಗೂ ಸಮೂಹ ಇವೆರಡು ಯಾವಾಗಲೂ ಒಟ್ಟಿಗೆ ಸಾಗುವಂತಹವು.

ಸಮಾಜ ಮನುಜನ ರಕ್ಷಣೆ ಹಾಗೂ ಸಂಪೋಷಣೆಗೆ ಅಗತ್ಯವಾದುದು. ಹೋಲಿಕೆ-ವ್ಯತ್ಯಾಸ, ಪರಸ್ಪರ ಸಹಾಯ-ಸಹಕಾರ, ಶ್ರಮ ವಿಭಜನೆ- ಪರಸ್ಪರಾವಲಂಬನೆ, ಸಾಮಾಜಿಕ ನಿಯಂತ್ರಣ- ಸಾಮಾಜಿಕ ಪರಿವರ್ತನೆ, ಅಧಿಕಾರ-ಸ್ವಾತಂತ್ರ್ಯ, ಸಂಸ್ಕೃತಿ-ಸಾಮರಸ್ಯ ಇವೆಲ್ಲವುಗಳ ಸಮ್ಮಿಶ್ರಣಗೊಂಡ ಸಂಕೀರ್ಣ ವ್ಯವಸ್ಥೆಯೇ ಸಮಾಜ. ಸಮಾಜದ ಹೊರತಾದ ಜೀವನ ಅಸಹನೀಯವಾದುದು ಮಾತ್ರವಲ್ಲ; ಆದರ ಕಲ್ಪನೆಯೂ ಭಯಾನಕವಾಗಿರುತ್ತದೆ; ಹೌದು. ಸಮಾಜವು ಮಾನವನಿಗೆ ರಕ್ಷಣೆಯನ್ನು ನೀಡುತ್ತದೆ, ಅವನ ಬದುಕಿಗೆ ನೆಮ್ಮದಿಗೆ, ಪಾಲನೆ-ಪೋಷಣೆಗೆ, ಬೆಳವಣಿಗೆಗೆ ಅದು ಸಹಕಾರಿಯಾಗಿದೆ. “ವ್ಯಕ್ತಿತ್ವ ನಿರ್ಮಾಣಲ್ಲಿ ಸಮಾಜದ ಪಾತ್ರ ಹಿರಿಯದಾಗಿದೆ. ಆತನ ಜೀವನದ ದಿಕ್ಕು-ದೆಸೆಗಳನ್ನು, ಗೊತ್ತು ಗುರಿಗಳನ್ನು ನಿರ್ಧಾರ ಪಡಿಸುವುದು. ಎಲ್ಲಕ್ಕಿಂತ ಮಿಗಿಲಾಗಿ ಮಾನವನು ಮಾನವ ಸಹಜ ಗುಣಗಳನ್ನು ಬೆಳೆಸಿಕೊಳ್ಳುವುದೂ ಸಮಾಜದಲ್ಲಿಯೇ ಸಮಾಜವು ಮಾನವನ ಸುಪ್ತ ಚೇತನದ ಪ್ರಕಾಶಕ್ಕೆ, ಪ್ರತಿಭೆಯ ಪ್ರಕಟಣೆಗೆ ಸೂಕ್ತ ಅವಕಾಶಗಳನ್ನು ಕಲ್ಪಿಸುತ್ತದೆ. ಸಮಾಜವೆಂಬ ವಿಶಾಲವಾದ ವ್ಯವಸ್ಥೆಯು ನಮ್ಮ ಜೀವನವನ್ನು ಸಂಪೂರ್ಣವಾಗಿ ಆವರಿಸಿ ನಿಂತಿದೆ. ಅದು ಮಾನವನನ್ನು ಕೇವಲ ಹೊರಗಿನಿಂದ ಆವರಿಸುವುದು ಮಾತ್ರವಲ್ಲ, ಅದು ಅಂತರಂಗವನ್ನು ಪ್ರವೇಶಿಸುವುದು. ಮಾನವ ಮತ್ತು ಸಮಾಜದ ಸಂಬಂಧವು ಬಹಳ ಗಹನವೂ ಸಂಕೀರ್ಣಮಯವೂ ಆದುದು. ಸಮಾಜವು ಮಾನವನ ಚಲನ-ವಲನಗಳನ್ನು ನಿಯಂತ್ರಿಸುವುದು, ಮಾನವನ ಅನನ್ಯತೆಯನ್ನು ಚಿಂತನೆ ಮತ್ತು ಭಾವನೆಗಳನ್ನು ರೂಪಿಸುತ್ತದೆ. ಮಾನವನ ಸಾಮಾಜಿಕ ಬದುಕನ್ನು ಸಾಧ್ಯವಾಗಿರಿಸುವುದೇ ಸಮಾಜ.”[೪]

೫.೨ ಧರ್ಮ ಮತ್ತು ಸಮಾಜದ ಸಂಬಂಧ

ಧರ್ಮ ಮತ್ತು ಸಮಾಜದ ನಡುವಿನ ಸಂಬಂಧಗಳು ಸ್ವಾಭಾವಿಕವಾಗಿ ಒಂದಕ್ಕೊಂದು ಆಧಾರವಾಗಿವೆ. ಧರ್ಮವು ಸಮಾಜಕ್ಕೆ ಸಹಜವಾಗಿ ತಳಹದಿಯಾದರೆ ಸಮಾಜವು ಧರ್ಮದೊಂದಿಗೆ ನೈಜಸಂಬಂಧವನ್ನು ಹೊಂದಿದೆ. "ಸಮಾಜಗಳು, ವೈಯಕ್ತಿಕ ಹಾಗೂ ಸಮೂಹದ ಧ್ಯೇಯಗಳನ್ನು, ಉದ್ದೇಶಗಳನ್ನು, ಪ್ರೋತ್ಸಾಹಿಸುತ್ತವೆ. ನ್ಯಾಯ ನಿರ್ಣಯವನ್ನು ಪ್ರೇರಣೆಗಳನ್ನು ಉತ್ತೇಜಿಸುತ್ತವೆ. ಉನ್ನತ ಆದರ್ಶಗಳನ್ನು, ನಂಬಿಕೆಗಳನ್ನು ಮನೋಸ್ಥೈರ್ಯವನ್ನು, ವರ್ತನೆಗಳನ್ನು ರೂಪಿಸುತ್ತವೆ. ಸಮಾಜಗಳು ಮೌಲ್ಯಗಳನ್ನು ರೂಪಿಸುವ ಅಂಗಗಳಾಗಿವೆ. ಈ ಮೇರೆಗೆ ಧರ್ಮವನ್ನು ಸಮಾಜವಿಲ್ಲದೆ ಗುರುತಿಸಲು ಸಾಧ್ಯವಿಲ್ಲ ಮಾನವೀಯ ಸಮಾಜ ಸಂಬಂಧಗಳ ವಿನಾ ಧರ್ಮವನ್ನು ವಿವರಿಸಲು ನಮಗೆ ಸಾಧ್ಯವಿಲ್ಲ. ಧರ್ಮವು ಸಾಮಾಜಿಕ ಕ್ರಮಬದ್ಧತೆಗೆ, ವೈಯಕ್ತಿಕ ವರ್ತನೆಗೆ ಸಮೂಹದ ಕ್ರಿಯೆಗೆ ಪ್ರೇರಣೆಯನ್ನು ನೀಡುತ್ತದೆ. ಆದುದರಿಂದ ಎಲ್ಲಾ ಧಾರ್ಮಿಕ ಸಂಪ್ರದಾಯಗಳು ಮಾನವನ ಬದುಕಿನ ದೈನಂದಿನ ನಡವಳಿಕೆಗಳನ್ನು ಒಪ್ಪಿಕೊಂಡು ಅನುಮೋದಿಸುತ್ತವೆ. ಪ್ರಪಂಚದ ಧರ್ಮಗಳನ್ನು ಸಮಾಜದ ಬಗ್ಗೆ ತಮಗಿರುವ ಸಂಬಂಧದ ಮೂಲಕ ಅವುಗಳನ್ನು ವರ್ಗೀಕರಿಸಬಹುದು. ಧರ್ಮಗಳು ಆಯ್ದುಕೊಂಡ ಸಮಾಜದ ಮೂಲಭೂತ ವಿವರಣೆಗಳ ಮೇಲೆ ಸಮಾಜಗಳಿಗೆ ನೀಡುವ ಗೌರವದ ಮೇಲೆ ಅವುಗಳನ್ನು ವರ್ಗೀಕರಿಸಬಹುದು. ಆದರೂ ಸಹ ಎಲ್ಲ ಧರ್ಮಗಳು ಸಾಮಾನ್ಯವಾಗಿ ಮನಗಾಣಿಸುವುದು ಮೂಲಭೂತ ಸಂಬಂಧವಾದ ಸಮಾಜ ಮತ್ತು ಧಾರ್ಮಿಕ ಸಂಪ್ರದಾಯಗಳ ನಡುವಿನ ಸಂಬಂಧ."[೫]

೫.೨.೧ ಕನ್‌ಪ್ಯೂಸಿಯಿಸಂ ಮತ್ತು ಸಮಾಜ

ಜನರಲ್ಲಿ ಸಾಮಾಜಿಕ ಮತ್ತು ರಾಜಕೀಯ ಸುಧಾರಣೆ ತರಲು ಚೀನಾ ದೇಶದಾದ್ಯಂತ ಕನ್‌ಪ್ಯೂಸಿಯಸ್ ಸುತ್ತಾಡಿ ಅವರಲ್ಲಿ ಜಾಗೃತಿ ಮೂಡಿಸಿದ. ಜನತೆ ತಮ್ಮ ಜೀವನವನ್ನು ಶಾಂತಿಯುತವಾಗಿ ನಡೆಸಲು, ಆಧ್ಯಾತ್ಮಿಕತೆಯನ್ನು ಉತ್ತಮ ಸಾಮರಸ್ಯದ ಕೌಟುಂಬಿಕ ಜೀವನವನ್ನು ನಡೆಸಲು ನೈತಿಕತೆಯನ್ನು, ರಾಜಕೀಯದ ಮೂಲಕ ಸಹಬಾಳ್ವೆಯ ಸಮಪಾಲಿನ ರಾಜ್ಯಾಡಳಿತವನ್ನು ನಡೆಸಲು ಸಾಮಾಜಿಕ ಸಮತೆಯನ್ನು, ಅವನು ಬೋಧಿಸಿದ. ಮನುಷ್ಯ ನೈತಿಕವಾಗಿ ಮುಂದುವರೆದಂತೆಲ್ಲಾ ಆತನ ವೈಯಕ್ತಿಕ ನಡತೆ, ಸಾಮಾಜಿಕ ನ್ಯಾಯ, ಕ್ರಮಬದ್ಧವಾದ ರಾಜ್ಯಾಡಳಿತ ಉತ್ತಮಗೊಳ್ಳುತ್ತದೆ ಎಂದು ಅವನು ಸಾರಿದ. ವೈಯಕ್ತಿಕ ನೈತಿಕ ಜೀವನದ ಬಗ್ಗೆ ಹೆಚ್ಚಿನ ಒತ್ತು ನೀಡಿದ. ಮತ್ತೊಂದೆಡೆ ಸಾಮರಸ್ಯದ ಸಾಮಾಜಿಕ ಜೀವನವನ್ನು ಜೀವಿಸಲು ತನ್ನ ಅನುಯಾಯಿಗಳನ್ನು ಉತ್ತೇಜಿಸಿದ. ಇದನ್ನು ಎರಡು ಮಾರ್ಗಗಳಾಗಿ ಅವನ ಅನುಯಾಯಿಗಳು ನಿರ್ದೇಶಿಸಿದರು. ಒಂದು ಮಹಾಕಲಿಯುವಿಕೆಯ ಮಾರ್ಗ. ಇದು ಕ್ರಿ.ಪೂ. ಐದನೇ ಶತಮಾನದ ಕನ್‌ಪ್ಯೂಸಿಯಸ್‌ನ ಸಾಮಾಜಿಕ ಬೋಧನೆಗಳಿಗೆ ಮಹತ್ವ ನೀಡಿತು. ಎರಡನೇ ಮಾರ್ಗ ಕನ್‌ಪ್ಯೂಸಿಯಸ್‌ನ ಮೊಮ್ಮಗ ತ್ಸು-ಸೂ ಎಂಬುವವನ್ನು ಹೆಚ್ಚು ಪ್ರಚುರಪಡಿಸಿದ.

ಈ ಮಾರ್ಗಕ್ಕೆ ಅರ್ಥ ಕೊಡುವ ಸಿದ್ಧಾಂತ ಎನ್ನುತ್ತಾರೆ. ಇಲ್ಲಿ ಮನುಷ್ಯನ ಭಾವನೆಗಳು, ಪ್ರಕೃತಿ ಸ್ವಭಾವ ಮತ್ತು ಬುದ್ಧಿಮತ್ತೆಗಳ ಮೇಲೆ ಹೆಚ್ಚಿನ ಒತ್ತು ನೀಡಿ ತನ್ಮೂಲಕ ಪ್ರತಿಯೊಬ್ಬರು ತಮ್ಮ ನೈಜ ಸ್ವಭಾವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು. ಇಲ್ಲಿ ವ್ಯಕ್ತಿ ವೈಯಕ್ತಿಕವಾಗಿ ಸ್ವಚ್ಛ ನಡತೆಯವನಾದರೆ ಸಮಾಜ ತಾನೇ ತಾನಾಗಿ ಸ್ವಚ್ಛವಾಗುತ್ತದೆ. ವೈಯಕ್ತಿಕ ನೈತಿಕತೆಯ ಮೂಲಕ ರಾಜಕೀಯ ಹಾಗೂ ಸಾಮಾಜಿಕ ಜೀವನದ ಸಾಮರಸ್ಯವನ್ನು ತರಲು ಕನ್‌ಪ್ಯೂಜಿಯಸ್ ಯತ್ನಿಸಿದ. ಉತ್ತಮ ಸಮಾಜ ನಿರ್ಮಾಣಕ್ಕೆ ನೈತಿಕತೆಯೇ ತಳಹದಿ ಎಂಬುದನ್ನು ಸಾರಿದ ಚೀನಿಯರ ಧರ್ಮ, ತತ್ವಶಾಸ್ತ್ರ, ಸರ್ಕಾರ, ನ್ಯಾಯಾಲಯ, ಶಿಕ್ಷಣ ಎಲ್ಲಾ ರಂಗಗಳಲ್ಲಿ ಈತನ ಬೋಧನೆಗಳು ಪ್ರಭಾವ ಬೀರಿವೆ. ಉತ್ತಮ ನೈತಿಕ ಜೀವನ ಪ್ರಶ್ನಾತೀತವಾಗಿ ಸಾಮಾಜಿಕ ಜೀವನವನ್ನು ನೈತಿಕತೆಯತ್ತ ಕರೆದೊಯ್ಯುತ್ತದೆ ಎಂದು ತಿಳಿಸಿ ಸಮಾಜದಲ್ಲಿ ನೈತಿಕತೆಯ ಮಹತ್ವವನ್ನು ಕನ್‌ಪ್ಯೂಷಿಯನ್ ಎತ್ತಿ ಹಿಡಿದ.

೫.೨.೨ ಇಸ್ಲಾಂ ಧರ್ಮ ಮತ್ತು ಸಮಾಜ

ಇಸ್ಲಾಂ ಧರ್ಮವು ತನ್ನ ಸಮಾಜ ಇಸ್ಲಾಮಿಕ್ ಸಿದ್ಧಾಂತಗಳ ಮೇಲೆ ರಚಿತವಾಗುವಂತೆ ಪ್ರೇರೇಪಿಸುತ್ತದೆ. ಎಲ್ಲೆಲ್ಲಿ ಇಸ್ಲಾಂಧರ್ಮ ಹೆಚ್ಚಿನ ಪ್ರಮಾಣದಲ್ಲಿ ಆಚರಿಸಲಾಗುತ್ತದೆಯೋ ಅಲ್ಲೆಲ್ಲಾ ಇಸ್ಲಾಮಿಕ್ ರಾಷ್ಟ್ರಗಳು ರಚನೆಯಾಗಿವೆ. ಸಾಮಾಜಿಕ ವ್ಯವಸ್ಥೆಯಲ್ಲಿ ತನ್ನ ಮತ್ತು ಸಮಾಜದೊಂದಿನ ಸಂಬಂಧ ಹಾಗೂ ತನ್ನ ಮತ್ತು ದೈವದೊಂದಿಗಿನ ಸಂಬಂಧ ಇವೆರಡು ಒಂದಕ್ಕೊಂದು ಗಾಢ ಸಂಬಂಧಗಳನ್ನು ಹೊಂದಿವೆ. ಇವುಗಳ ಆಧಾರದ ಮೇಲೆ ಇಸ್ಲಾಮಿಕ್ ಉನ್ನತ ಧ್ಯೇಯಗಳೊಂದಿಗೆ ಆರಂಭದಲ್ಲಿ ಪುಟ್ಟಪುಟ್ಟ ಸಮುದಾಯಗಳಾಗಿ ಬೆಳೆದ ಇಸ್ಲಾಮಿಕ್ ಕೂಟಗಳು ಅಂತಿಮವಾಗಿ ಬೃಹತ್ ಪ್ರಮಾಣದಲ್ಲಿ ಇಂದು ಇಸ್ಲಾಮಿಕ್ ರಾಷ್ಟ್ರಗಳಾಗಿ ರೂಪಗೊಂಡಿವೆ. ಮುಸ್ಲಿಂ ಎಂದರೆ ದೇವರಚಿತ್ತಕ್ಕೆ ಸಂಪೂರ್ಣವಾಗಿ ಶರಣನಾದವನನ್ನು ಹಾಗೂ ಅಲ್ಲಾ ಒಬ್ಬನೇ ದೇವರು ಮತ್ತು ಮಹಮದ್ ಆತನ ಪ್ರವಾದಿ ಎಂದು ನಂಬುವವನೇ ಆಗಿದ್ದಾನೆ. ಸುಮಾರು ಕ್ರಿ.ಶ. ಏಳನೇ ಶತಮಾನದಲ್ಲಿ ಅರೇಬಿಯಾದಲ್ಲಿ ಜೀವಿಸಿದ ಮಹಮದ್ ಎಂಬ ಪ್ರವಾದಿಯ ಒಳ ತಿಳಿವುಗಳು, ಆತನ ಬೋಧನೆಗಳಿಂದ ಪ್ರೇರಿತವಾಗಿ ಇಸ್ಲಾಂ ಧರ್ಮ ಹಾಗೂ ಇಸ್ಲಾಮಿಕ್ ನಾಗರಿಕತೆ ಬೆಳೆದುಬಂತು. ಇಸ್ಲಾಮಿಕ್ ಕಾನೂನುಗಳು ಹಾಗೂ ಇಸ್ಲಾಂ ಸಿದ್ಧಾಂತಗಳು ಒಂದೇ ದೈವಚಿತ್ತದಿಂದ ಮೂಡಿಬಂದಿವೆ.

ಇಸ್ಲಾಂ ನೈತಿಕ ಕಾನೂನುಗಳು ಹಾಗೂ ಸಿದ್ಧಾಂತಗಳು ಆಧ್ಯಾತ್ಮಿಕ ಹಾಗೂ ಪ್ರಾಪಂಚಿಕ, ಸಾರ್ವಜನಿಕ ಹಾಗೂ ಖಾಸಗಿ, ವೈಯಕ್ತಿಕ, ಧಾರ್ಮಿಕ ಬಯಕೆಗಳು ಮತ್ತು ರಾಜ್ಯಾಡಳಿತಗಳು ಒಂದಕ್ಕೊಂದು ಸಮ್ಮಿಳಿತವಾಗಿವೆ. ಇಸ್ಲಾಮಿಕ್ ರಾಜ್ಯಗಳು ದೈವ ಯೋಜನೆಯಂತೆ ದೈವಚಿತ್ತಕ್ಕೆ ತಕ್ಕಂತೆ ಮೂಡಿಬಂದಿವೆ ಎಂದು ಪ್ರತಿಯೊಬ್ಬ ಮುಸ್ಲಿಂ ನಂಬುತ್ತಾನೆ. ಆದಿಯಿಂದಲೂ ಮುಸ್ಲಿಂ ಜಗತ್ತು ದೈವಾಡಳಿತಕ್ಕೆ ಒಳಪಟ್ಟ ರಾಷ್ಟ್ರಗಳೆಂದೇ ಜನಪ್ರಿಯವಾಗಿವೆ. ಹಿಂದೆ ಧಾರ್ಮಿಕ ಮತ್ತು ಸಾಮಾಜಿಕ ಸಾಮರಸ್ಯದ ಹಾಗೂ ಸಂಪ್ರದಾಯಬದ್ಧವಾದ ಇಸ್ಲಾಮಿಕ್ ಕಾನೂನುಗಳ ನಡುವೆ ಹೊಂದಾಣಿಕೆ ಇತ್ತು. ಇಂದಿನ ಇಸ್ಲಾಮಿಕ್ ಜಗತ್ತಿನಲ್ಲಿನ ಉದ್ವೇಗದ ಆತಂಕದ ವಾತಾವರಣಕ್ಕೆ ಆಧುನಿಕ ಶಿಕ್ಷಣ, ಸಾಮಾಜಿಕ ಸುಧಾರಣೆಗಳು, ರಾಜಕೀಯ ಪ್ರಜಾಪ್ರಭುತ್ವಗಳು ಸಂಪ್ರದಾಯ ಇಸ್ಲಾಮಿಕ್ ಕಾನೂನುಗಳ ಹಾಗೂ ಇಸ್ಲಾಮಿಕ್ ಆಧುನಿಕ ಸಮಾಜದ ನಡುವಿನ ಸಂಬಂಧಗಳು ಕದಡಲು ಕಾರಣಗಳಾಗಿವೆ.

೫.೨.೩ ಶಿಂಟೋ ಧರ್ಮ ಮತ್ತು ಸಮಾಜ

ಜಪಾನಿನ ಅಂತರಂಗದ ಸುಮಧುರ ಭಾವಗೀತೆಯಾಗಿ ಶಿಂಟೋ ಧರ್ಮ ಹೊರಹೊಮ್ಮಿದೆ. ಸಂಸ್ಕೃತಿ, ಅಧ್ಯಾತ್ಮ, ನೈತಿಕತೆ ಇವೆಲ್ಲವೂ ಒಂದರ ಮೇಲೊಂದು ಪೂರಕವಾಗಿದ್ದು ಆಧ್ಯಾತ್ಮಿಕ ಹಾಗೂ ವ್ಯವಹಾರಿಕ ಜಗತ್ತಿನ ಅಂಶಗಳನ್ನು ಬೇರ್ಪಡಿಸುವುದು ಕಷ್ಟಸಾಧ್ಯ ಎನ್ನುವಷ್ಟು ಅವುಗಳ ಸಂಬಂಧಗಳು ಗಾಢವಾಗಿವೆ. ಐತಿಹ್ಯಗಳು, ಪುರಾಣಗಳು, ಪುರಾತನರ ಜಾನಪದ ಕತೆಗಳು, ಜಪಾನಿಯರ ಆರಾಧನ ವಿಧಿ-ವಿಧಾನಗಳ ಮೇಲೆ ರೂಪಗೊಂಡ ಶಿಂಟೋ ಧರ್ಮವು ಜಪಾನೀಯರ ಸಮಾಜದ ಕುರುಹು ಆಗಿ ಮೂಡಿಬಂದಿದೆ. ಜಪಾನೀಯರ ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು ಇವೆಲ್ಲವನ್ನು ಶಿಂಟೋ ಧರ್ಮ ಒಳಗೊಂಡಿದೆ. ಈ ಧರ್ಮಕ್ಕೆ ಯಾರೊಬ್ಬ ಸಂಸ್ಥಾಪಕನಿಲ್ಲ. ಯಾವುದೇ ಅಧಿಕೃತ ಪವಿತ್ರ ಗ್ರಂಥಗಳಿಲ್ಲ. ಯಾವುದೇ ನಿರ್ದಿಷ್ಟ ಲಿಖಿತವಾದ ಸಿದ್ಧಾಂತಗಳಿಲ್ಲ. ಪುರಾಣ, ಪುಣ್ಯಕತೆಗಳು, ದಂತಕತೆಗಳೆ ಈ ಧರ್ಮದ ಜೀವಾಳ. ಆದರೂ ಸಹ ಶಿಂಟೋ ತನ್ನ ಅದ್ವಿತೀಯ ಪ್ರಭಾವವನ್ನು ಜಪಾನಿನ ಅದರ ಸಮಾಜಿಕ ಸಾಂಸ್ಕೃತಿಕ ಜೀವನದ ಮೇಲೆ ಬೀರಿದೆ. ಬೇರೆಡೆಯಿಂದ ಬಂದ ಕನ್‌ಪೂಸಿಯಿಸಂ, ಟಾವೋಯಿಸಂ, ಬೌದ್ಧ ಧರ್ಮಗಳ ಪ್ರಭಾವವನ್ನು ಮೀರಿ ಅವುಗಳ ಒಳಿತನ್ನು ಹೀರಿ ಶಿಂಟೋ ಧರ್ಮ ಬೆಳೆದಿದೆ. ತಲಾತಲಾಂತರಗಳಿಂದ ಹಿರಿಯರನ್ನು ಸಂಪ್ರದಾಯಗಳನ್ನು ಗೌರವಿಸುವ ಅದನ್ನು ಮುಂದಿನ ಪೀಳಿಗೆಗೆ ಪರಿಚಯಿಸಿ ಬೆಳೆಸುವ ದಿಟ್ಟ ನಿಲುವು ಶಿಂಟೋ ಧರ್ಮದಲ್ಲಿದೆ. ಇದರ ಫಲವಾಗಿ ರಾಜನ ಆಡಳಿತಕ್ಕೆ ಒಲವು ಬೆಲೆದುಬಂದಿದೆ.

೫.೨.೪ ಹಿಂದೂ ಧರ್ಮ ಮತ್ತು ಸಮಾಜ

ಹಿಂದೂ ಧರ್ಮ ಒಂದು ಸಂಕೀರ್ಣ ಜೀವನ ವಿಧಾನವಾಗಿದೆ. ಹಿಂದೂ ಧರ್ಮದಲ್ಲಿ ಹೆಚ್ಚಿನ ಮಟ್ಟದಲ್ಲಿ ರಾಷ್ಟ್ರವಾದೀ ನಿಲುವುಗಳಿಲ್ಲ ಬದಲಾಗಿ ವೈಯಕ್ತಿಕ ಮುಕ್ತಿ ಹಾಗೂ ಸಾಧನೆಗೆ ಹೆಚ್ಚಿನ ಒಲವಿದೆ. 'ಪುನರಪಿ ಜನನಂ ಪುನರಪಿ ಮರಣಂ' ಎಂಬ ಧ್ಯೇಯದಂತೆ ಮುಕ್ತಿ ಪಡೆಯಲು ಜೀವಿ ತನ್ನ ಸಾಧನೆಯ ಮೂಲಕ ಅನೇಕ ಜನ್ಮಗಳನ್ನೆತ್ತಬೇಕಾಗುತ್ತದೆ. ಎಲ್ಲಕ್ಕೂ ಆತನ ಕರ್ಮಗಳೆ ಕಾರಣ ಎಂದು ಹಿಂದೂ ಧರ್ಮದ ಕರ್ಮಸಿದ್ಧಾಂತ ಬೋಧಿಸುತ್ತದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ವೈದಿಕ ವರ್ಗವು ಚತುರ್ವರ್ಣಾಶ್ರಮವನ್ನು ಎತ್ತಿಹಿಡಿದು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ಸಮಾಜವನ್ನು ಅವರವರ ಕರ್ಮಗಳ ಮೇಲೆ ಆಧರಿಸಿ ಸಮಾಜ ವ್ಯವಸ್ಥೆಯನ್ನು ಉಂಟುಮಾಡಿತ್ತು. ಅಂದು ಸದುದ್ದೇಶದಿಂದ ಕರ್ಮಗಳ ಆಧಾರದ ಮೇಲೆ ಆರಂಭವಾದ ವರ್ಣವ್ಯವಸ್ಥೆ ಇಂದು ಜಾತಿಸಮಸ್ಯೆಯ ಪೆಡಂಭೂತವಾಗಿ ಬೆಳೆದು ನಿಂತಿದೆ. ಅವೈದಿಕ ಧರ್ಮಗಳಲ್ಲು ವರ್ಣವ್ಯವಸ್ಥೆಯನ್ನು ಎತ್ತಿ ಹಿಡಿಯದಿದ್ದರೂ ಅವುಗಳನ್ನು ಅನುಸರಿಸುವರ ಸಂಖ್ಯೆ ನಗಣ್ಯ. ಸಮಾಜ ವ್ಯವಸ್ಥೆಯಲ್ಲಿ ಕರ್ಮದ ಪಾತ್ರ ದೊಡ್ಡದು. ಈ ಸಂಸಾರ ಸಾಗರದಿಂದ ಪಾರಾಗಲು ಬೇಕಾಗಿರುವುದು ಸಾಧನೆ. ಸರಿಯಾದ ಕರ್ಮಗಳನ್ನು ನಿರ್ವಹಿಸುವುದರ ಮೂಲಕ ಸಾಧಕ ತನ್ನ ಗುರಿಯನ್ನು ಸಾಧಿಸಬಹುದು. ಹಿಂದೂಧರ್ಮದಲ್ಲಿ ಅನೇಕ ಸಿದ್ಧಾಂತಗಳಿದ್ದು ಎಲ್ಲರಿಗೂ ಅವರವರ ಇಷ್ಟದಂತೆ ದೈವವನ್ನು ಆಚರಿಸುವ ಸ್ವಾತಂತ್ರ್ಯ ಉಂಟು. ಸಮಾಜದಲ್ಲಿ ಜಾತಿ ವ್ಯವಸ್ಥೆಯಿಂದಾಗಿ ಪ್ರಗತಿ ಅಸಾಧ್ಯವಾಗತೊಡಗಿದೆ. ಹಿಂದೂ ಧರ್ಮದಲ್ಲಿ 'ವಸುದೈವ ಕುಟುಂಬಕಂ' ಎಂಬ ವಿಶಾಲವಾದ ಮನೋಭಾವವಿದೆ. ಜೀವಾತ್ಮ ಈ ಸಮಾಜ ಸೇವೆ ಹಾಗೂ ಅಧ್ಯಾತ್ಮ ಮಾರ್ಗದಿಂದ ವಿಶಾತ್ಮನನ್ನು ಸೇರುವನೆಂಬ ನಂಬಿಕೆಯಿದೆ.

೫.೨.೫ ಬೌದ್ಧ ಧರ್ಮ ಮತ್ತು ಸಮಾಜ

ಮಾನವನ ಈ ಪ್ರಾಪಂಚಿಕ ಬದುಕಿನಲ್ಲಿ ನೋವು, ನಿರಾಸೆ, ದುಃಖ ಹಾಗೂ ಅಧ್ಯಾತ್ಮಿಕ ಅಜ್ಞಾನ ತುಂಬಿಕೊಂಡಿದೆ. ಇಂತಹ ಬದುಕಿನಲ್ಲಿ ಅಂತಿಮ ಸುಖ ಅಥವಾ ನಿರಂತರವಾದ ಸುಖ ಎಂಬುದಿಲ್ಲ ಎಂಬ ಸತ್ಯವನ್ನು ಧರ್ಮ ಮತ್ತು ಸಮಾಜದಲ್ಲಿ ಸಂಬಂಧ ಬೆಸೆಯುವುದರ ಮೂಲಕ ಶ್ರುತಪಡಿಸುತ್ತದೆ. ಈ ಧರ್ಮದ ಸಂಸ್ಥಾಪಕನಾದ ಸಿದ್ಧಾರ್ಥ ಗೌತಮನು ತನ್ನ ಅನುಯಾಯಿಗಳಿಗೆ 'ಮಧ್ಯಮ ವರ್ಗ'ವೆಂದರೆ ಅತಿಯಾದ ಭೋಗ ವಿಲಾಸವಾಗಲಿ ಅಥವಾ ಉಗ್ರವಾದ ತಪಸ್ಸಿನ ಜೀವನವನವನ್ನಾಗರಿ ಬೋಧಿಸದೆ, ಇವೆರಡರ ನಡುವಿನ ಮಾರ್ಗವೇ ಮದ್ಯಮ ಮಾರ್ಗವನ್ನು ಬೋಧಿಸಿದ. ಈ ಮಾರ್ಗದಲ್ಲಿ ಅಷ್ಟಾಂಗ ಪಥವನ್ನು ಅಭ್ಯಸಿಸುವುದರ ಮೂಲಕ ನಿಜವಾದ ಜ್ಞಾನ, ಸಮಾಧಾನ, ಸಾಕ್ಷಾತ್ಕಾರ ಹಾಗೂ ಜೀವನದ ಅಂತಿಮ ಗುರಿಯಾದ ನಿರ್ವಾಣವನ್ನು ಹೊಂದಲು ಸಾಧ್ಯ. ಹಿಂದೂ ಧರ್ಮದಂತೆ ಬೌದ್ಧಧರ್ಮವು ಪುನರ್‌ಜನ್ಮ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತದೆ. ಜೀವನದ ಅಂತಿಮ ಗುರಿಯಾದ ಸುಖ-ದುಃಖಗಳನ್ನು ಮೀರಿ ನಿಲ್ಲುವಂಥ ಸ್ಥಿತಿ ಅದಾಗಿದೆ.

ಆಶ್ರಮ ವ್ಯವಸ್ಥೆಯನ್ನು ಬೌದ್ಧಧರ್ಮ ಸಮಾಜಕ್ಕೆ ನೀಡಿತು. ಆಶ್ರಮ ವ್ಯವಸ್ಥೆಯ ಉದ್ದೇಶ ಜಿಜ್ಞಾಸುಗಳಿಗೆ ಅಷ್ಟಾಂಗಮಾರ್ಗದಲ್ಲಿ ಉತ್ತಮ ತರಬೇತಿ ನೀಡಿ ಅವರಿಗೆ ಅಂತಿಮ 'ನಿರ್ವಾಣ' ಸ್ಥಿತಿ ತಲುಪಲು ಸಹಕರಿಸುವುದೇ ಆಗಿದೆ. ಬೌದ್ಧ ಸಂಘಗಳಲ್ಲಿ ಅತಿರೇಕದ ವರ್ತನೆಗಳಿಗೆ ಅವಕಾಶವಿಲ್ಲ. ಕೆಲವೊಮ್ಮೆ ಬೌದ್ಧಧರ್ಮ ಆಶ್ರಮಧರ್ಮವಾಗಿ ಕಾಣಿಸಿಕೊಳ್ಳುತ್ತದೆ. ಈ ಆಶ್ರಮ ವ್ಯವಸ್ಥೆಗೆ ಶ್ರೀಸಾಮಾನ್ಯರು ಒತ್ತಾಸೆ ನೀಡುವುದರ ಜೊತೆಗೆ ಅದನ್ನು ಅನುಸರಿಸಬೇಕಾಗುತ್ತದೆ. ಈ ಮೂಲಕ ಬೌದ್ಧಧರ್ಮ ತನ್ನ ಸಮಾಜದ ಮೇಲೆ ಗಾಢವಾದ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ಭಾರತ, ಚೀನಾ, ಜಪಾನ್, ತಿಬೇಟ್, ಬರ್ಮಾ, ಶ್ರೀಲಂಕಾ ಹಾಗೂ ದಕ್ಷಿಣ ಏಷ್ಯಾ, ರಾಷ್ಟ್ರಗಳಲ್ಲಿ ಇದರ ಪ್ರಭಾವವನ್ನು ನಾವು ಕಾಣುತ್ತೇವೆ.

ಬೌದ್ಧಧರ್ಮದಲ್ಲಿ ಭಿಕ್ಷುಗಳನ್ನು ಅತ್ಯಂತ ಗೌರವದಿಂದ ಕಂಡು ಅವರನ್ನು ನೈತಿಕ ನಾಯಕರಾಗಿ ಬೌದ್ಧ ಸಮಾಜ ಗೌರವಿಸುತ್ತದೆ. ಸಮಾಜದಲ್ಲಿರುವ ನೋವಿಗೆ, ಕಷ್ಟ-ಸಂಕಷ್ಟಗಳಿಗೆ ಪರಿಹಾರವೆಂದರೆ ದಯಾಸೇವೆ. ಸಮಾಜಸೇವೆ ಮೂಲಕ ಮಾನವಸೇವೆಗೆ ನೆರವಾಗಲು ಬೌದ್ಧಧರ್ಮ ಕರೆ ನೀಡುತ್ತದೆ. ಉದಾಹರಣೆ ಆಸ್ಪತ್ರೆಗಳ ಮೂಲಕ ಶಾಲೆ, ಅನಾಥಾಲಯಗಳ ಮೂಲಕ ಬೇರೆ ದಯಾಪೂರಿತ ಕಾರ್ಯಗಳನ್ನು ಹಮ್ಮಿಕೊಳ್ಳುವುದರ ಮೂಲಕ ಮಾನವ ಸೇವೆಯನ್ನು ಮಾಡಲು ಬೌದ್ಧಧರ್ಮ ಪ್ರೋತ್ಸಾಹಿಸುತ್ತದೆ.

ದಯೆ, ಕರುಣೆಯ ಜೊತೆಗೆ ವೈಯಕ್ತಿಕ ಸದ್ಗುಣಗಳಾದ ಔದಾರ್ಯ, ನೈತಿಕತೆ, ಸಂಯಮ, ಶಕ್ತಿ, ದ್ಯಾನದಲ್ಲಿ ಏಕಾಗ್ರತೆ, ಜ್ಞಾನ ಈ ಎಲ್ಲ ಸದ್ಗುಣಗಳನ್ನು ಬೆಳೆಸಿಕೊಂಡು ವೈಯಕ್ತಿಕ ಪ್ರಜ್ಞೆಯನ್ನು ಎತ್ತಿ ಹಿಡಿಯುತ್ತದೆ. ತೆರವಾದ ಬೌದ್ಧ ಧರ್ಮವು ಬುದ್ಧನೊಂದಿಗೆ ಸಂಯೋಗಕ್ಕೆ ಮುಂದಾದರೆ ಮಹಾಯಾನ ಬೌದ್ಧಧರ್ಮವು ಮಾನವ ಶಕ್ತಿಯು ಬದ್ಧನಾಗುವತ್ತ ಮುಖಮಾಡುತ್ತದೆ.

೫.೨.೬ ಯೆಹೂದಿ ಧರ್ಮ ಮತ್ತು ಸಮಾಜ

ಯೆಹೂದಿ ಧರ್ಮ ಮತ್ತು ಅದರ ಸಮಾಜದ ಸಂಬಂಧ ತುಸು ಸಂಕೀರ್ಣವಾದುದು. ಮಾನವ ಸೃಷ್ಟಿಯ ಮುಕುಟಮಣಿ, ಈ ಭೂಮಿ ಒಳ್ಳೆಯದು ಇದನ್ನು ಮಾನವನ ಸುಖಕ್ಕಾಗಿ ಆತನ ಅನುಭೋಗಕ್ಕಾಗಿ ಸೃಷ್ಟಿಸಿದೆ ಎಂದು ಆದಿಕಾಂಡ ಹೇಳಿದರೂ, ಒಡಂಬಡಿಕೆಗೆ ಒಳಗಾದ ದೈವಪ್ರಜೆ ಪವಿತ್ರವಾದ ಕಟ್ಟುನಿಟ್ಟಾದ, ಜೀವನವನ್ನು ಶಾಸ್ತ್ರಗಳ ಮೂಲಕ ಹೇಳುವುದರೊಂದಿಗೆ ಧರ್ಮ ಮತ್ತು ಸಮಾಜದ ಸಂಬಂಧ ಸಂಕೀರ್ಣವಾಗಿ ಕಾಣಿಸಿಕೊಳ್ಳುತ್ತದೆ. "ನೀವು ನನ್ನ ಮಾತುಗಳನ್ನು ಆಲಿಸಿ ನನ್ನ ಆಜ್ಞೆಗಳನ್ನು ಕೈಗೊಂಡರೆ ನಾನು ನಿಮ್ಮ ದೇವರಾಗಿಯೂ, ನೀವು ನನ್ನ ಪ್ರಜೆಗಳಾಗಿಯೂ ಇರುವಿರಿ" (ವಿಮಾ. ೧೯:೫) ಎಂಬುದು ಒಡಂಬಡಿಕೆಯ ಪ್ರಮಾಣ. ಈ ಒಡಂಬಡಿಕೆ ಎಲ್ಲಾ ಜನರಿಗೆ ಕೊಟ್ಟಿಲ್ಲ ಬದಲಾಗಿ ನಮಗೆ ಮಾತ್ರ ಕೊಟ್ಟಿದ್ದಾರೆ. ನಾವು ದೇವರು ಆಯ್ದುಕೊಂಡ ಜನಾಂಗ ಎಂಬುದು ಯೆಹೂದಿಗಳ ಅಭಿಮತ. ಈ ಬುವಿಯಲ್ಲಿರುವ ಎಲ್ಲರೂ ಸರ್ವೇಶ್ವರನಿಗೆ ಸೇರತಕ್ಕದ್ದು ಅದನ್ನು ಸರಿಯಾಗಿ ವಿನಿಯೋಗಿಸಿ ಪವಿತ್ರೀಕರಿಸಬೇಕಾಗುತ್ತದೆ.

ಯೆಹೂದಿಧರ್ಮ ತನ್ನ ಕಾನೂನುಗಳನ್ನು ಆರಾಧನಾ ವಿಧಿ-ವಿಧಾನಗಳನ್ನು ತನ್ನ ಸಮಾಜದ ಮೇಲೆ ಬಲವಾಗಿ ಹೇರುವುದರ ಮೂಲಕ ಒಡಂಬಡಿಕೆಯನ್ನು ಬಿಟ್ಟು ಕದಲದಂತೆ ನೋಡಿಕೊಳ್ಳುತ್ತದೆ. ಈ ಮೂಲಕ ಒಡಂಬಡಿಕೆಯನ್ನು ಗೌರವಿಸಿ ರಕ್ಷಿಸಲಾಗಿರುತ್ತದೆ. ಯಾರ್ಯಾರು ದೈವ ಒಡಂಬಡಿಕೆಯನ್ನು ನಿಷ್ಠೆಯಿಂದ ವಿವರಿಸುತ್ತಾರೋ ಅವರು ದೈವಪ್ರಜೆಗಳಾಗಿ ದೈವಿರಾಷ್ಟ್ರದವರಾಗಿ ವಿಶಿಷ್ಟವಾದ ಗುರುತಿಗೆ ಪಾತ್ರರಾಗುತ್ತಾರೆ. ಈ ಒಂದು ವಿಶಿಷ್ಟ ಗುರುತು ಇತರರಿಗಿಂತ ಭಿನ್ನವಾಗಿರುವುದನ್ನು ತೋರಿಸುತ್ತದೆ.

ಯೆಹೂದಿ ಆಲೋಚನಾ ಹಿನ್ನೆಲೆಯಲ್ಲಿ, ಧರ್ಮ ಮತ್ತು ಸಮಾಜದ ಸಂಬಂಧಗಳನ್ನು ವಿಶ್ಲೇಷಿಸಿದಾಗ, ಎರಡು ಘಟ್ಟಗಳಲ್ಲಿ ಇದನ್ನು ಅರ್ಥೈಸಹುದು. ಒಂದು ಬಾಹ್ಯ ಹಾಗೂ ಇನ್ನೊಂದು ಆಂತರಿಕ ಒಡಂಬಡಿಕೆಯ ಸಂಬಂಧ. ಸೂಕ್ಷ್ಮವಾಗಿ ಗಮನಿಸಿದಾಗ ಜಗದೀಶ್ವರ ಈ ಜಗತ್ತನ್ನು ಸೃಷ್ಟಿ ತನ್ನ ಮತ್ತು ಜನರ ಸುಮಧುರ ಸಂಬಂಧಕ್ಕೆ ನಾಂದಿ ಹಾಡಿದ. ಒಡಂಬಡಿಕೆಯ ಮೂಲಕ ತಾನು ಒಂದು ಜನಾಂಗವನ್ನು ಆಯ್ದುಕೊಂಡು ಆ ಜನಾಂಗದ ಮೂಲಕ ಮನುಕುಲದ ರಕ್ಷಣೆಯನ್ನು ಮಾಡುವುದು ಆತನ ಉದ್ದೇಶವಾಗಿತ್ತು. ಈ ಹಿನ್ನೆಲೆಯಲ್ಲಿ ಯೆಹೂದಿ ಧರ್ಮವು ಪ್ರಪಂಚ ಮತ್ತು ಸಮಾಜವನ್ನು ಅರ್ಥೈಸಿ ದೈವಿಕ್ರಿಯೆಗಳು ನಡೆಯಲು ಸೂಕ್ತ ವೇದಿಕೆಯನ್ನು ಸಿದ್ಧಪಡಿಸುತ್ತದೆ.

ಸೃಷ್ಟಿಕರ್ತನ ಸೃಷ್ಟಿಯ ಉದ್ದೇಶವನ್ನು ಅರಿಯುವುದೇ ರಕ್ಷಣಾ ಕಾರ್ಯದ ಉದ್ದೇಶವಾಗಿದೆ. ಹೀಗೆ ಯೆಹೂದಿ ಧರ್ಮವು ಧಾರ್ಮಿಕ ಉನ್ನತ ಧ್ಯೇಯಗಳನ್ನು ವಾಸ್ತವಿಕ ಸಮಾಜವನ್ನು ಶತಶತಮಾನಗಳಿಂದ ಬೆಸೆಯುವ ಕೊಂಡಿಯಾಗಿದ್ದು ಇಸ್ರೇಲ್ ರಾಷ್ಟ್ರದ ಉಗಮಕ್ಕೆ ಕಾರಣವಾಗಿದೆ.

೫.೨.೭ ಕ್ರೈಸ್ತಧರ್ಮ ಮತ್ತು ಸಮಾಜ

ಯೆಹೂದಿ ಧರ್ಮದ ನೆರಳಿನಲ್ಲಿ ಕ್ರೈಸ್ತಧರ್ಮ ಒಂದು ಆಂದೋಲನವಾಗಿ ಆರಂಭವಾಯಿತು. ಆರಂಭದಲ್ಲಿ ಯೆಹೂದಿ ಧರ್ಮದ ನೆರಳಿನಲ್ಲೆ ಬೆಳೆಯಿತು. ಯೆಹೂದಿ ಧರ್ಮದ ಒಡಂಬಡಿಕೆ ಹಾಗೂ ಏಕ ದೇವೋಪಾಸನೆಯನ್ನು ಕ್ರೈಸ್ತ ಧರ್ಮವು ಎತ್ತಿ ಹಿಡಿಯಿತು. ಕ್ರೈಸ್ತ ಧರ್ಮದ ಆರಂಭದ ದಿನಗಳಲ್ಲಿ ಯೆಹೂದಿಯರಿಗೆ ಹಾಗೂ ಗ್ರೀಕ್-ರೋಮನ್ ಪ್ರಜೆಗಳಿಗೆ ಕ್ರೈಸ್ತ ಧರ್ಮವನ್ನು ಸೇರಲು ಒಡಂಬಡಿಕೆಗೆ ಅಧ್ಯಾತ್ಮಿಕ ಅರ್ಥವನ್ನು ನೀಡಿ ಹೆಚ್ಚು ಜನಪ್ರಿಯವಾಗಲು ಕಾರಣವಾಯಿತು. ತ್ರಯೇಕ ದೇವರ ಸಿದ್ಧಾಂತವನ್ನು ಕ್ರೈಸ್ತಧರ್ಮವು ಸಾರಿತು.

ಯೆಹೂದಿಗಳಿಗೆ ದೇವರೊಂದಿಗೆ ಹಳೆಯ ಒಡಂಬಡಿಕೆಯಿದ್ದರೆ ಕ್ರೈಸ್ತರ ಹೊಸ ಜಗತ್ತಿನಲ್ಲಿ ಯೇಸುಕ್ರಿಸ್ತ ಹೊಸ ಒಡಂಬಡಿಕೆಯ ಕೇಂದ್ರಬಿಂದು ಆಗಿದ್ದಾನೆ. ಕ್ರಿಸ್ತನ ಮೂಲಕ ಒಂದು ಹೊಸ ಸಮುದಾಯದ ಗುರುತು ಕ್ರೈಸ್ತರಿಗೆ ದೊರಕಿತು. ಈ ಹೊಸ ಒಡಂಬಡಿಕೆಯ ಮೂಲಕ ಕ್ರೈಸ್ತ ಸಮಾಜ ಸಾರ್ವತ್ರಿಕವಾದುದೆಂದು ಸಾರಲು ಅನುಕೂಲವಾಯಿತು. ಕ್ರಿಸ್ತಮರಣ ಮತ್ತು ಪುನರುತ್ಥಾನ ಕ್ರೈಸ್ತಸಮಾಜದ ಕೇಂದ್ರಬಿಂದುವಾಗಿ ಮಾನವ ರಕ್ಷಣೆಗೆ ಸಹಾಯವಾಯಿತು. ಪಾಪಮಾಡಿ ದೇವರಿಂದ ದೂರಸರಿದು ರಕ್ಷಣೆ ಇಲ್ಲದೆ ತೊಳಲಾಡುತ್ತಿದ್ದ ಮಾನವನಿಗೆ ರಕ್ಷಕನಾಗಿ ಆಗಮಿಸಿ ದೇವ ಮಾನವನಾಗಿ, ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸಿ ಮನುಕುಲದ ರಕ್ಷಣೆಯ ಹೆಬ್ಬಾಗಿಲನ್ನೆ ಅವನು ತೆರೆದ. ತನ್ನ ಬೋದನೆಗಳ ಮೂಲಕ ಸಮಾಜದಲ್ಲಿ ಹೊಸ ಅಲೆಯನ್ನೇ ಸೃಷ್ಟಿಸಿದ. ಕ್ರಿಸ್ತನ ಬೋಧನೆಗಳಿಂದ ಪ್ರೇರಿತರಾಗಿ ಅವನ ಆಂದೋಲನದಲ್ಲಿ ಭಾಗಿಯಾಗಿ ಅಂತಿಮವಾಗಿ ಕ್ರಿಶ್ಚಿಯನ್ ಸಮಾಜದ ರಾಷ್ಟ್ರಗಳೇ ನಿರ್ಮಾಣಗೊಂಡವು.

"ಧರೆಗೆ ನೀವೇ ಉಪ್ಪು' ಎನ್ನುವ ಯೇಸುಕ್ರಿಸ್ತನ ಬೋಧನೆ ಅನುಯಾಯಿಗಳಿಗೆ ತಾವು ಎಲ್ಲೆಲ್ಲಿ ಹೋದರೋ ಅಲ್ಲೆಲ್ಲಾ ಜ್ಯೋತಿಗಳಾಗಿ, ಉಪ್ಪಾಗಿ ಜೀವಿಸಲು ಯತ್ನಿಸಿ ಬಹು ಸಂಖ್ಯಾತರನ್ನು ಕ್ರೈಸ್ತ ಸಮಾಜಕ್ಕೆ ಸೆಳೆದು, ಆಂತರಿಕ ಹೊಳಹುಗಳ ಗ್ರೀಕ್ ಸಂಸ್ಕೃತಿಯ ಪ್ರಭಾವದೊಂದಿಗೆ ಮೂಲಭೂತ ಧಾರ್ಮಿಕ ಸತ್ಯಗಳನ್ನು/ಒಪ್ಪಿಗೆಗಳನ್ನು ಬೆರೆಸುವುದರ ಮೂಲಕ ಸಮಾಜ ಕ್ರೈಸ್ತಸ್ವರ್ಗ ಸಾಮ್ರಾಜ್ಯ ಮತ್ತು ಗ್ರೀಕ್ ಪ್ರಭಾವದ ಉನ್ನತ ಧೈರ್ಯ, ಆದರ್ಶಗಳನ್ನು ಸಮೀಕರಿಸಿ ಕ್ರೈಸ್ತಸಮಾಜ ಪ್ರಗತಿಯತ್ತ ದಾಪುಗಾಲು ಹಾಕಲು ಸಾಧ್ಯವಾಯಿತು. ಧರ್ಮ ಮತ್ತು ಸಮಾಜದ ಸಂಬಂಧವನ್ನು ತೋರ್ಪಡಿಸುವಾಗ ಧಾರ್ಮಿಕ ಸಂಪ್ರದಾಯಗಳು ಸಮಾಜವನ್ನು ನಿರ್ದೇಶಿಸುತ್ತಿದ್ದವು. ಧರ್ಮವು ಸಮಾಜದ ಎಲ್ಲಾ ಆಗು-ಹೋಗುಗಳ

ಮೇಲೂ ತನ್ನ ನಿಚ್ಚಳ ಪ್ರಭಾವವನ್ನು ಬೀರಿ ವ್ಯಕ್ತಿಯ ವೈಯಕ್ತಿಕ ಹಾಗೂ ಸಮುದಾಯದ ಸಾಮೂಹಿಕ ಪ್ರಜ್ಞೆಯ ಪಾತಾಳಿಯಲ್ಲಿ ತನ್ನ ಇರುವಿಕೆಯನ್ನು ತೋರ್ಪಡಿಸಿತ್ತು.

ಆದಿಯಲ್ಲಿ ಯೇಸು ಕ್ರಿಸ್ತ ಆರಂಭಿಸಿದ ಕ್ರೈಸ್ತಾಂದೋಲನ ಲವಲವಿಕೆಯ ಅಂದೋಲನವಾಗಿದ್ದಿತು. ಇದು ಒಂದು ಚಿಕ್ಕ ಸಮುದಾಯದಲ್ಲಿ ಗೋಚರಿಸಿತು. ಅದು ಕ್ರಿ.ಶ. ೪ನೇ ಶತಮಾನದಲ್ಲಿ ಯಾವಾಗ ಕ್ರೈಸ್ತ ಧರ್ಮ ರಾಜಧರ್ಮವಾಗಿ ಸ್ವೀಕೃತವಾಯಿತೋ ಆಗಿನಿಂದ ಅದು ಸಾಂಸ್ಥಿಕರೂಪ ಪಡೆದುಕೊಂಡು ವಿಶ್ವದ ಅತ್ಯಂತ ಬಲಾಢ್ಯ ಧರ್ಮವಾಗಿ ಹಾಗೂ ಸಮಾಜವಾಗಿ ಹೊರಹೊಮ್ಮಿತು.

೫.೩ ಯೇಸುಕ್ರಿಸ್ತನ ಕಾಲದ ಸಮಾಜ

ಒಂದು ಸಮಾಜದ ಇತಿಹಾಸವೆಲ್ಲಾ ಕೇವಲ ರಾಜ ಮಹಾರಾಜರುಗಳ, ಅಧಿಕಾರ ಶಾಹಿಗಳ, ಅವರ ಯುದ್ಧ, ಆಕ್ರಮಣಗಳ ಇತಿಹಾಸವಷ್ಟೇ ಹೆಚ್ಚಿನ ಭಾಗ ದಾಖಲಾಗಿರುತ್ತದೆ. ಇದು ನೊಂದವರ, ಶೋಷಿತರ ದುರ್ಬಲರ, ಶ್ರೀಸಾಮಾನ್ಯನ ಇತಿಹಾಸವಲ್ಲ ಎಂಬ ಸತ್ಯಗೋಚರಿಸುತ್ತದೆ. ರೋಮಾಂಚಕ ಯುದ್ಧ ಕದನಗಳ ಬಗ್ಗೆ ತಿಳಿಸುವ ಇತಿಹಾಸವಾಗಿ ಅಲ್ಲಿ ಮಡಿದು, ಅದಕ್ಕೆ ಬಲಿಯಾದವರ ಶೋಷಿತರ ನೋವಿನ ಬಗ್ಗೆ ಹೇಳುವುದು ಬಹು ಕಡಿಮೆ. ಈ ಹಿನ್ನೆಲೆಯಿಂದ ಯಾವುದೇ ಇತಿಹಾಸ ಸಮಾಜದ ಒಂದು ಪಾರ್ಶ್ವದ ಸತ್ಯವಷ್ಟೆ. ಇಲ್ಲಿ ಪೂರ್ಣ ಸತ್ಯ ಗೋಚರಿಸದಿದ್ದರೂ ಆಂಶಿಕ ಸತ್ಯವನ್ನು ಕಾಣಬಹುದು.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು ಉದಾಹರಣೆಗೆ ಇಮ್ಮಡಿ ಪುಲಕೇಶಿಯ ಬಗ್ಗೆ ಆತನ ಇತಿಹಾಸ ಓದುವಾಗ ಆತನ ಆಳ್ವಿಕೆಯಲ್ಲಿ ನೊಂದವರ ಶೋಷಿತ ಸಮಾಜದ ಇತಿಹಾಸ ತಿಳಿಯಲಾಗದಿದ್ದರೂ ಇಮ್ಮಡಿ ಪುಲಕೇಶಿಯ ಬಗ್ಗೆ ಸಾಕಷ್ಟು ತಿಳಿಯಬಹುದು. ಆದರೆ ಯೇಸುಕ್ರಿಸ್ತನಿಗೆ ಸಂಬಂಧ ಪಟ್ಟಂತೆ ಆ ಕಾಲದ ಸಮಾಜದ ಜನರ ಬದುಕನ್ನು ತಿಳಿಯದೆ ಯೇಸುಕ್ರಿಸ್ತನನ್ನು ಅರ್ಥ ಮಾಡಿಕೊಳ್ಳುವುದು ಸ್ವಲ್ಪ ಕಷ್ಟವೇ ಸರಿ. ಈ ದೃಷ್ಟಿಯಿಂದ ಯೇಸುಕ್ರಿಸ್ತನನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾದರೆ ಆತ ಬದುಕಿ ಬಾಳಿದ ಸಮಾಜದ ಸ್ಥಿತಿಗತಿಗಳನ್ನು ತಿಳಿಯುವುದು ಅನಿವಾರ್ಯವಾಗುತ್ತದೆ. ಯೇಸುವಿನ ಕಾಲದಲ್ಲಿ ಆತನ ಸುತ್ತ ಮುತ್ತ ಜನಸಾಮಾನ್ಯರ ಗುಂಪು, ಶಿಷ್ಯರು, ಮತಾಭಿಮಾನಿಗಳು, ಪರಿಸಾಯರು, ಶಾಸ್ತ್ರಿಗಳು, ಸದ್ದುಕಾಯರು, ಎಸ್ಸೀನಿಯೋರು, ಪಾಪಿಗಳು, ಸುಂಕದವರು, ಕುಷ್ಠ ರೋಗಿಗಳು, ಮಕ್ಕಳು, ಸ್ತ್ರೀಯರು ಸುತ್ತುವರಿದಿರುವುದನ್ನು ಸುವಾರ್ತೆಗಳು ದಾಖಲಿಸುತ್ತವೆ. ಯೇಸುಕ್ರಿಸ್ತನ ಕಾಲದ ಸಮಾಜವನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಎಲ್ಲಾ ಗುಂಪುಗಳನ್ನು ಅರ್ಥೈಸಿಕೊಂಡರೆ ಆತನ ಕಾಲದ ಸಮಾಜವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.

ಮೊಟ್ಟಮೊದಲನೆಯದಾಗಿ ಶ್ರೀಸಾಮಾನ್ಯರ ಗುಂಪಿನತ್ತ ದೃಷ್ಟಿ ಹರಿಸಿದಾಗ ಯೇಸುವಿನ ಕಾಲದ ಶ್ರೀಸಾಮಾನ್ಯನ ಗತಿ ಅಧೋಗತಿಯಾಗಿತ್ತು. ಇಸ್ರೇಯಲ್ ಜನಾಂಗದ ಬಹುಸಂಖ್ಯಾಕ ಜನ ಬಡವರು ಶೋಷಿತರು ಆಗಿದ್ದು ಪರಿಸಾಯರ ಪ್ರಕಾರ ನೀತಿ-ನಿಯಮಗಳನ್ನು ಅರಿಯದ ಅಜ್ಞಾನಿಗಳಾಗಿದ್ದರು. ಈ ಬಹುಸಂಖ್ಯಾಕ ಬಡವರ ಗುಂಪಿಗೆ ಕುರುಡರು, ಕುಂಟರು, ಅಂಗವಿಕಲರು, ಕುಷ್ಟ ರೋಗಿಗಳು, ಪಾಪಿಷ್ಟರು, ತಳ ಸಮುದಾಯದವರು ಸೇರಿದ್ದರು. ವಿದ್ಯಾವಂತರು, ಫರಿಸಾಯರು, ಧರ್ಮಶಾಸ್ತ್ರಿಗಳು ವಿವಿಧ

ಕಸುಬುದಾರರು, ವಾಣಿಜ್ಯ ವ್ಯಾಪಾರಿಗಳು, ಬಡಗಿಯರು, ಮೀನುಗಾರರು ಇವರು ಮಧ್ಯಮ ವರ್ಗದವರೆನಿಸಿಕೊಂಡು ಸಮಾಜದಲ್ಲಿ ಗೌರವಾನ್ವಿತ ಜೀವನವನ್ನು ನಡೆಸುತ್ತಿದ್ದರು. ರಾಜಮನೆತನದವರು, ಯಾಜಕ ಕುಲದವರು, ಶ್ರೀಮಂತ ವರ್ಗದವರು ಮೇಲ್‌ವರ್ಗಕ್ಕೆ ಸೇರಿದವರಾಗಿದ್ದು ಬೋಗಜೀವನ ನಡೆಸುತ್ತಿದ್ದರು. ಇವರಿಗೆ ದೇವಾಲಯದ ಆದಾಯ, ಸ್ವಂತ, ತೆರಿಗೆಗಳು ನೇರವಾಗಿ ಬಂದು ತಲುಪುತ್ತಿದ್ದವು. ಜೊತೆಗೆ ಹೆಚ್ಚು ಕಡಿಮೆ ಇಡೀ ನಾಡಿನ ಎಲ್ಲಾ ಭೂಮಿಯು ಇವರ ಆಸ್ತಿಯೇ ಆಗಿದ್ದು; ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅದರ ಫಲವನ್ನು ಕುಳಿತು ಉಣ್ಣುತ್ತಿದ್ದರು.

ಜನಸಮೂಹದ ನಡುವೆ ಯೇಸುಕ್ರಿಸ್ತ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿದ್ದ ಎಂಬುದನ್ನು ಸಮಾನ ದೃಷ್ಟಿಯ ಸುವಾರ್ತೆಗಳು ದಾಖಲಿಸುತ್ತವೆ. (ಮಾರ್ಕ ೧:೨೮) "ಜನಸಾಮಾನ್ಯರ ನಡುವೆ ಯೇಸುಕ್ರಿಸ್ತ ಯಾವಾಗಲೂ ಆಕರ್ಷಕ ವ್ಯಕ್ತಿಯಾಗಿರುತ್ತಿದ್ದ. ಎಲ್ಲರ ಕೇಂದ್ರಬಿಂದು ಆತನೇ ಆಗಿರುತ್ತಿದ್ದ. ಕಾನೂನಿನ ಅಂದರೆ ಧರ್ಮಶಾಸ್ತ್ರದ ಗಂಧ, ಗಾಳಿ ಗೊತ್ತಿಲ್ಲದ, ಹೆಚ್ಚಿನ ನಯ-ನಾಜೂಕಿನ ಅರಿವಿಲ್ಲದ, ಅವಿದ್ಯಾವಂತರ ಗುಂಪು ಯಾವಾಗಲೂ ಕ್ರಿಸ್ತನನ್ನು ಸುತ್ತುವರಿಯುತ್ತಿತ್ತು. ಏಕೆಂದರೆ: ಯೇಸುಕ್ರಿಸ್ತ ಅವರ ಆಡುಭಾಷೆಯಲ್ಲೇ, ಅವರಿಗೆ ತಿಳಿಯುವ ಕತೆಗಳ ಮೂಲಕ ಸರಳವಾಗಿ ದೇವರ ರಾಜ್ಯದ ಬಗ್ಗೆ ತಿಳಿ ಹೇಳುತ್ತಿದ್ದ. ಯೇಸು ಮಾನವ ನಿರ್ಮಿತ ಕಟ್ಟಳೆಗಳನ್ನು ಮುರಿಯಲು ಹಿಂದೂ ಮುಂದೂ ನೋಡಲಿಲ್ಲ. ತನ್ನಲ್ಲಿಗೆ ಬರುತ್ತಿದ್ದ ಜನರೆಲ್ಲರನ್ನು ಗೌರವಿಸುತ್ತಿದ್ದ. ಯೇಸು ನುಡಿದಂತೆ ನಡೆಯುತ್ತಿದ್ದ; ಆತನ ಬೋಧನೆ ಅಧಿಕಾರಯುತವಾಗಿತ್ತು. ಯೇಸುವಿನ ಅದ್ಭುತಕಾರ್ಯಗಳು ಜನಸಾಮಾನ್ಯರನ್ನು ಹೆಚ್ಚುಹೆಚ್ಚಾಗಿ ಆಕರ್ಷಿಸುತ್ತಿತ್ತು.

ಫರಿಸಾಯರು ಧರ್ಮಶಾಸ್ತ್ರಿಗಳು ಈ ಬಡವರ್ಗದ ಸಮಾಜವನ್ನು ತುಚ್ಛೀಕರಿಸಿ ಮುಕ್ತಿಗೆ ಅರ್ಹರಲ್ಲವರೆಂದು ದೂರವಿಟ್ಟಿತು. ಇವರ ಬದುಕು ನರಕ ಸದೃಶವಾಗಿತ್ತು. ಈ ವರ್ಗದ ಜನರಿಗೆ ಯಾವ ಆಶ್ರಯದಾತರಿಲ್ಲದ ಕಾರಣ, ಅವರನ್ನು ಪೋಷಿಸಲು ಈಗಿನಂತೆ ಯಾವುದೇ ಸಂಸ್ಥೆಗಳು ಇರಲಿಲ್ಲವಾದ್ದರಿಂದ ಒಟ್ಟಾರೆ ಇವರೆಲ್ಲಾ ಭಿಕ್ಷುಕರೇ ಆಗಿದ್ದರು. ತಮ್ಮ ದುರ್ಭರವಾದ ಜೀವನವನ್ನು ಸಾಗಿಸಲು ಕುಂಟರಿಗೆ, ಕುರುಡರಿಗೆ, ಕುಷ್ಠರೋಗಿಗಳಿಗೆ ಭಿಕ್ಷಾಟನೆಯೇ ಜೀವನಮಾರ್ಗವಾಗಿತ್ತು. ಹೀಗಾಗಿ 'ಬಡವರು' ಎಂದು ಹಣೆಪಟ್ಟಿಲ್ಲಿ ಸಮಾಜದ ಎಲ್ಲಾ ರೀತಿಯ ಶೋಷಿತರು, ಪರಾವಲಂಬಿಗಳು, ದಬ್ಬಾಳಿಕೆಗೆ ಒಳಗಾದವರು, ತಳ ಸಮುದಾಯದವರಿಗೆ ದೇವರೆ ದಿಕ್ಕಾಗಿ ಆತನ ಕರುಣೆ ಮತ್ತು ಅನುಕಂಪದ ಭರವಸೆಯತ್ತ ಮುಖ ಮಾಡಿದ್ದರು. ಯೆಹೂದಿ ಸಮಾಜದಲ್ಲಿ ಪ್ರಚಲಿತವಾಗಿದ್ದ ಧರ್ಮಶಾಸ್ತ್ರವು ಕಗ್ಗಂಟಾಗಿತ್ತು. ಅದನ್ನು ಪಾಲಿಸುವುದಕ್ಕಿಂತ ಅದನ್ನು ಅರ್ಥಮಾಡಿಕೊಳ್ಳುವುದೇ ಕಷ್ಟವಾಗಿತ್ತು. ಜನಸಾಮಾನ್ಯರಿಗೆ ಇದು ಒಂದು ರೀತಿ ಗಗನ ಕುಸುಮವಾಗಿ ಕಾಣಿಸುತ್ತಿತ್ತು. ಜನಸಾಮಾನ್ಯರು ಇದನ್ನು ಕಲಿಸಲು ಎಂದಿಗೂ ಸಾಧ್ಯವಾಗುತ್ತಿರಲಿಲ್ಲ. ಅದರಿಂದ ಇರುವವರು, ಅರಿತವರು ಧರ್ಮಶಾಸ್ತ್ರವನ್ನು ಓದಿಕೊಂಡ ಮೇಲುವರ್ಗದ ಜನರು ಇವರನ್ನು ಪಾಪಿಗಳು ಎಂದಿಗೂ ಮುಕ್ತಿ ದೊರೆಯದವರು, ಸಮಾಜದಲ್ಲಿ ಸಹಜವಾಗಿಯೇ ಈ

ಬಡಜನರ ಬದುಕು ಒಂದು ದೊಡ್ಡ ಹೊರಲಾರದ ಹೊರೆಯಾಗಿ ಮಾರ್ಪಟ್ಟಿತ್ತು. ಇದು ತಮ್ಮ ಪೂರ್ವಜನ್ಮದ ಕರ್ಮ ಎಂದು ಅರಿತು ಬಡವರು ಎನ್ನಿಸಿಕೊಂಡ ಪಾಪಿಗಳು ಸಮಾಜದಲ್ಲಿ ಅವಮಾನಿತರಾಗಿ ಜೀವಿಸುತ್ತಿದ್ದರು."[೬]

ಈ ಪಾಪಿಗಳೆನಿಸಿಕೊಂಡ ಬಡವರ ಬದುಕು ಒಂದು ದೊಡ್ಡ ಹೊರೆಯಾಗಿದ್ದರೆ ಈ ಹೊರೆಗೆ ಒಂದೆಡೆ 'ಶಾಪ' ಕಾರಣವಾದರೆ, ಇದನ್ನೊಂದೆಡೆ ಸಮಾಜದ ಶ್ರೀಮಂತ ವರ್ಗದ ದಬ್ಬಾಳಿಕೆ ಗುಡಿ ಪೂಜಾರಿಗಳ ಶೋಷಣೆ ಮತ್ತೊಂದು ಕಾರಣವಾಗಿತ್ತು. ಈ ಸಮಾಜದ ಜನಕ್ಕೆ ಯಾವುದೇ ಪೌರ ಹಕ್ಕುಗಳಾಗಲಿ, ನಾಗರೀಕ ಹಕ್ಕುಗಳಾಗಲಿ, ಮಾನವೀಯ ಹಕ್ಕುಗಳಾಗಲಿ ಇರಲಿಲ್ಲ. ಸಮಾಜದಲ್ಲಿ ಸ್ಥಾನಮಾನಗಳಿಗೆ ಖೋತಾ ನ್ಯಾಯಾಲಯದಲ್ಲಿ ಇವರು ಅಸ್ಪೃಶ್ಯರಾಗಿದ್ದರು. ದೇವಾಲಯಕ್ಕೆ ಪ್ರವೇಶವಿರಲಿಲ್ಲ. ಒಟ್ಟಾರೆ ಮಾನವ ಪ್ರೇಮವೇನೆಂಬುದು ಗೊತ್ತಿರದೆ ಗೌರವವೂ ಇಲ್ಲದೆ ನೀಚ ಮಟ್ಟದ ಬದುಕನ್ನು ಸಾಗಿಸುತ್ತಿದ್ದರು.

ಹೀಗೆ ಕ್ರಿಸ್ತನ ಕಾಲದ ಸಮಾಜವನ್ನು ಇನ್ನು ಚೆನ್ನಾಗಿ ಅರ್ಥೈಸಿಕೊಳ್ಳಬೇಕಾದರೆ ನಾವು ಅಂದಿನ ರಾಜಕೀಯ ಹಾಗೂ ಧಾರ್ಮಿಕ ಪರಿಸ್ಥಿತಿಯನ್ನು ತುಸು ಅವಲೋಕಿಸಿದರೆ ನಮಗೆ ಯೇಸುವಿನ ಕಾಲದ ಸಮಾಜದ ಸ್ಪಷ್ಟ ಚಿತ್ರಣ ಲಭ್ಯವಾಗುತ್ತದೆ. ಈಗಾಗಲೇ ಕೆಲವು ಅಂಶಗಳನ್ನು ಹಿಂದಿನ ಅಧ್ಯಾಯದಲ್ಲಿ ತಿಳಿದಿದ್ದೇವೆ. ಯೇಸುಕ್ರಿಸ್ತನ ಕಾಲದ ಸಮಾಜವನ್ನು ಅರಿಯಬೇಕಾದರೆ ಕ್ರಿ.ಶ. ಒಂದನೇ ಶತಮಾನದ ರಾಜಕೀಯ ಪರಿಸ್ಥಿತಿಯ ಪರಿಚಯ ಅಗತ್ಯವಾದುದು. ಯೇಸು ಹುಟ್ಟಿ ಬೆಳೆದುದ್ದು ಪಾಲೆಸ್ತೀನ್ ದೇಶದಲ್ಲಿ. ಯೇಸುವಿನ ಕಾಲದಲ್ಲಿ ಪಾಲೆಸ್ತೀನ್ ದೇಶವು ರೋಮ್ ಸಾಮ್ರಾಜ್ಯದ ಒಂದು ಪ್ರಾಂತ್ಯವಾಗಿತ್ತು. ರೋಮ್ ಸಾಮ್ರಾಜ್ಯದ ಮಹಾನ್ ದಂಡನಾಯಕನಾಗಿದ್ದ ಪಾಂಪೆ ಎಂಬುವನು ಕ್ರಿ.ಪೂ. ೬೩ರಲ್ಲಿ ಜೆರೂಸಲೇಮ್ ಪಟ್ಟಣದ ಮೇಲೆ ದಂಡೆತ್ತಿ ಬಂದು ಯೆಹೂದ್ಯರನ್ನು ಸೋಲಿಸಿ ಪಾಲೆಸ್ತೀನ್ ನಾಡನ್ನು ರೋಮ್ ಸಾಮ್ರಾಜ್ಯಕ್ಕೆ ಸೇರಿಸಿದನು. ತದನಂತರ ಪಾಲೆಸ್ತೀನ್ ಪ್ರಾಂತ್ಯದಲ್ಲೆಲ್ಲಾ ರೋಮನ್ನರ ಸಂಸ್ಕೃತಿಯ ಪ್ರಭಾವವೇ ಹೆಚ್ಚಾಯಿತು.

ಯೇಸು ಸ್ವಾಮಿಯ ಕಾಲದಲ್ಲಿ ಹೆರೋದರಸನ ಮನೆತನದವರು ಪಾಲೆಸ್ತೀನ್ ದೇಶವನ್ನು ಗೆಲಿಲಿಯಾ, ಸಮಾರಿಯ, ಯೂದಯ ಹಾಗೂ ಪೆರೆಯ ಎಂಬ ನಾಲ್ಕು ಚಿಕ್ಕ ಪ್ರಾಂತ್ಯಗಳನ್ನಾಗಿ ವಿಭಾಗಿಸಿ ಆಳುತ್ತಿದ್ದರು. ಅವರು ರೋಮನ್ನರಿಗೆ ಸಾಮಂತರಾಗಿ ಆಳುತ್ತಿದ್ದರು. ಹೆರೋದರಸನು ಮೂಲತಃ ಇದುಮೆಯ ನಾಡಿನಿಂದ ಬಂದ ಗ್ರೀಕ್ ಸಂಸ್ಕೃತಿಯವನು. ಯೆಹೂದಿ ವಂಶದವನಲ್ಲ. ಈತ ಗ್ರೀಕ್‌ಸಂಸ್ಕೃತಿ ಮತ್ತು ಮತೀಯ ಧೋರಣೆಗಳನ್ನೇ ಅನುಸರಿಸುತ್ತಿದ್ದ. ಜೊತೆಗೆ ಕ್ರೂರಿಯಾಗಿದ್ದ. ಈತ ಎಲ್ಲಿ ತನ್ನ ಅಧಿಕಾರಕ್ಕೆ ಧಕ್ಕೆ ಬರುತ್ತದೋ ಎಂಬ ಭ್ರಮೆಯಿಂದ ತನ್ನ ಹಿರಿಯ ಮಕ್ಕಳನ್ನೆ ಕೊಲ್ಲಿಸಿದ. ನಿರಪರಾಧಿ ಹಸುಳೆಗಳನ್ನೇ ಕೊಲ್ಲಿಸಿದ್ದು ಈತನ ಕ್ರೌರ್ಯಕ್ಕೆ ಸಾಕ್ಷಿ (ಮತ್ತಾಯ ೨:೧೬-೧೮) ಈ ಕೃತ್ಯದಿಂದಾಗಿ ತನ್ನ ಪ್ರಜೆಗಳ ಅನುರಾಗವನ್ನೇ ಕಳೆದುಕೊಂಡ. ಚರಿತ್ರೆಕಾರರು ಈತನು ನರಿಯಂತೆ (ಕುತಂತ್ರದಿಂದ) ಸಿಂಹಾಸನವನ್ನೇರಿ, ಹುಲಿಯಂತೆ ರಾಜ್ಯವಾಳಿ

ನಾಯಿಯಂತೆ ಸತ್ತನೆಂದು ಬರೆದಿದ್ದಾರೆ. ಯಹೂದಿಗಳು ಈತ ಅನ್ಯ ಧರ್ಮೀಯನು ಹಾಗೂ ವಿದೇಶಿ ಆಡಳಿತದವನೆಂದು ದ್ವೇಷಿಸುತ್ತಿದ್ದರು. ಅವರ ಪ್ರೀತಿ ವಿಶ್ವಾಸ ಸಂಪಾದಿಸಲು ಯೆರುಸಲೇಮಿನ ದೇವಾಲಯವನ್ನು ಪುನರ್ನಿರ್ಮಿಸುವುದಾಗಿ ಅವರಲ್ಲಿ ಆಶೆ ತುಂಬಿಸಿದ. ದೊಡ್ಡ ಹೆರೋದರಸನ ಕಾಲಾನಂತರ ಈತನ ಮೂರು ಮಂದಿ ಗಂಡು ಮಕ್ಕಳು ಅಂದಿನ ರೋಮ್ ಚಕ್ರವರ್ತಿಯಾದ ಔಗುಪ್ತ ಕೈಸರನು ರಾಜ್ಯವನ್ನು ಮೂವರಿಗೆ ಹಂಚಿಕೊಟ್ಟನು. ಇವರೆಲ್ಲರೂ ರೋಮನ್ ಚಕ್ರವರ್ತಿಯ ಆದೇಶದಂತೆ ಅವನ ಅಧೀನತೆಯಲ್ಲಿದ್ದು ಆಡಳಿತ ನಡೆಸಬೇಕಿತ್ತು.

ಅರ್ಖೆಲಾಯನು ಹೆರೋದರಸನ ನಂತರ ಯೂದಾಯ ಸಮಾರಿಯಗಳನ್ನು ಆಳುತ್ತಿದ್ದ. ಇವನ ದುರಾಡಳಿತವನ್ನು ಪ್ರತಿಭಟಿಸಿ ಜನರು ದಂಗೆ ಎದ್ದರು. ಇವನನ್ನು ಪದಚ್ಯುತಗೊಳಿಸಿ ರೋಮ್ ಚಕ್ರವರ್ತಿಯು ರೋಮನ್ ರಾಜ್ಯಪಾಲನೊಬ್ಬನನ್ನು ನೇಮಿಸಿದನು. ಯೇಸುವಿನ ಕಾಲದಲ್ಲಿ ಪೊಂತ್ಯ ಪಿಲಾತನೆಂಬ ಹೆಸರಿನಿಂದ (ಕ್ರಿ.ಶ. ೨೬ ರಿಂದ ೩೦) ರಾಜ್ಯಪಾಲ ಆಡಳಿತ ಮಾಡುತ್ತಿದ್ದ. ಯೇಸು ಸ್ವಾಮಿಯಲ್ಲಿ ಯಾವ ಅಪರಾಧವನ್ನು ಕಾಣದಿದ್ದರೂ ಯೆಹೂದ್ಯರ ಪ್ರಭಾವಕ್ಕೆ ಒಳಗಾಗಿ ಮರಣ ದಂಡನೆ ವಿಧಿಸಿದ. ತದನಂತರ ಹೆರೋದರಸನ ಇನ್ನೊಬ್ಬ ಪುತ್ರ ಹೆರೋದ್ ಅಂತಿಪಾಸ್‌ನನ್ನು ಯೇಸುಸ್ವಾಮಿ ನರಿ ಎಂಬುದಾಗಿ ಸಂಬೋಧಿಸುವುದನ್ನು ಲೂಕ ತನ್ನ ಸುವಾರ್ತೆಯಲ್ಲಿ ದಾಖಲಿಸುತ್ತಾನೆ (ಲೂಕ ೧೩:೧೨) ಈತನು ವಿಲಾಸಿಯಾಗಿದ್ದು ಸ್ನಾನಿಕ ಯೊವಾನ್ನನು ಕಾರಾಗೃಹದಲ್ಲಿರಿಸಿ ಆತನ ಶಿರಚ್ಛೇದನ ಮಾಡಿಸುತ್ತಾನೆ. ಇಲ್ಲಿ ಆತನ ಉಪಪತ್ನಿ ಹೆರೋದಿಗಳ ಪಾತ್ರ ದೊಡ್ಡ ಕಥನವಾಗಿದೆ. (ಮಾರ್ಕ ೬:೧೬-೨೯)

ಯೇಸುಸ್ವಾಮಿಯ ಬಗ್ಗೆ ಕೇಳಿದ್ದ ಹೆರೋದ್ ಅಂತಿಪಾಸನು ರಾಜಕೀಯ ಉದ್ದೇಶಗಳಿಂದಲೂ (ಲೂಕ ೧೩:೩೧) ಮತ್ತು ಕುತೂಹಲದಿಂದಲೂ (ಲೂಕ ೯:೭-೯) ಯೇಸುಸ್ವಾಮಿ ಬಗ್ಗೆ ಆಸಕ್ತನಾಗಿದ್ದನು. ಯೇಸುಸ್ವಾಮಿಯ ವಿಚಾರಣೆಯ ಸಂದರ್ಭದಲ್ಲಿ ಈತನು ನ್ಯಾಯವನ್ನು ಸಂಪೂರ್ಣ ಬದಿಗೊತ್ತಿ ಯೇಸುಸ್ವಾಮಿಯ ಪವಾಡಗಳ ಬಗ್ಗೆ ಆಸಕ್ತಿ ವಹಿಸುತ್ತಾನೆ. ಯೇಸುಸ್ವಾಮಿ ಮೌನವಹಿಸುತ್ತಾನೆ. ಹೆರೋದನು ಸೋಲನ್ನೊಪ್ಪಲಿಚ್ಛಿಸದೆ ಯೇಸುಸ್ವಾಮಿಯನ್ನು ಅಣಕಿಸಿ ಅವಮಾನ ಮಾಡುತ್ತಾನೆ (ಲೂಕ ೨೩:೬-೧೨)

ಯೇಸುಕ್ರಿಸ್ತನ ಕಾಲದಲ್ಲಿ ರಾಜ್ಯವಾಳಿದವರು ತುಂಬಾ ಕಠಿಣವಾಗಿ ಜನರನ್ನು ನಡೆಸಿಕೊಂಡರು. ಹೊರಗಡೆ ರೋಮ್ ಸಾಮ್ರಾಜ್ಯವು ಬಹು ವೈಭವದಲ್ಲಿ ಇದ್ದಂತೆ ತೋರಿತು. ಇಡೀ ರಾಜ್ಯದಲ್ಲೆಲ್ಲಾ ರೋಮನ್ನರು ಏಕರೀತಿಯ ಆಡಳಿತದ ಕ್ರಮವನ್ನು ಇಟ್ಟುಕೊಂಡು ಬಹುದಕ್ಷತೆಯಿಂದ ಸಾಮ್ರಾಜ್ಯದ ಐಕ್ಯತೆಯನ್ನು ಕಾಪಾಡಿಕೊಂಡಿದ್ದರು.

ವಿವಿಧ ಜನಾಂಗಗಳನ್ನು ಒಂದುಗೂಡಿಸಲು ಕೆಲವು ಸಂಗತಿಗಳು ಅವರಿಗೆ ನೇರವಾಗಿದ್ದವು

೧. ರಾಜ್ಯದಲ್ಲಿ ಒಂದು ರೀತಿಯ ಸಮಾಧಾನ ನೆಲಸಿತ್ತು. ಕ್ರಿಸ್ತನ ಕಾಲದ ಸುಮಾರು ಒಂದು ಶತಮಾನದ ಹಿಂದೆ ರಾಜ್ಯದಲ್ಲಿ ಕಷ್ಟಕರವಾದ ಪರಿಸ್ಥಿತಿ ಇತ್ತು. ಯೇಸುಕ್ರಿಸ್ತನ ಕಾಲದಲ್ಲಿ ಯಾವುದೇ ಭಾರಿ ಯುದ್ಧ ದಂಗೆಗಳಿಲ್ಲದೆ ಒಂದು ರೀತಿಯ ನೆಮ್ಮದಿ ನೆಲಸಿದ್ದಿತೆಂದು ಹೇಳಬಹುದು.

೨. ರೋಮನ್ನರು ವಿಸ್ತಾರವಾದ ತಮ್ಮ ಸಾಮ್ರಾಜ್ಯವನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸೇನೆಗಳನ್ನು ವೇಗವಾಗಿ ಕಳುಹಿಸಲು ಸಾಧ್ಯವಾಗುವಂತಹ ಹೆದ್ದಾರಿಗಳನ್ನು ರಚಿಸಿದ್ದರು. ವ್ಯಾಪಾರ ವಿನಿಮಯಕ್ಕೆ ಈ ಹೆದ್ದಾರಿಗಳು ಒಳ್ಳೇ ಅನುಕೂಲಕರವಾಗಿದ್ದವು.

೩. ಸಾಮ್ರಾಜ್ಯದಲ್ಲೆಲ್ಲಾ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳು ಬಳಕೆಯಲ್ಲಿದ್ದವು ಲ್ಯಾಟಿನ್ ಭಾಷೆಯು ಆಡಳಿತ ಭಾಷೆಯಾಗಿಯೂ, ಗ್ರೀಕ್ ಭಾಷೆಯು ಸಂಸ್ಕೃತಿಯ ಭಾಷೆಯಾಗಿಯೂ ಇದ್ದಿತು. ಈ ಎರಡು ಭಾಷೆಗಳು ರೋಮ ಸಾಮ್ರಾಜ್ಯದಲ್ಲೆಲ್ಲಾ ಜನರಿಗೆ ಸಾಮಾನ್ಯವಾಗಿ ತಿಳಿದಿದ್ದಿತು.

೪. ಇಡೀ ಸಾಮ್ರಾಜ್ಯದಲ್ಲಿ (ಪಾಲೆಸ್ತೀನನ್ನು ಬಿಟ್ಟು) ಚಕ್ರವರ್ತಿಯ ಪೂಜೆಯ ಮುಖಾಂತರ ಐಕ್ಯತೆ ಸಾಧಿಸಲ್ಪಟ್ಟಿತು. ಜನರ ವೈಯಕ್ತಿಕ ಧರ್ಮ ಏನೇ ಇದ್ದರೂ ಈ ಪೂಜೆ ನಡೆದರೆ ಸಾಕು ಎಂದು ರೋಮನ್ನರು ಇದನ್ನು ಜಾರಿಗೆ ತಂದಿದ್ದರು.

ಈ ಕಾರಣಗಳಿಂದಾಗಿ ರೋಮ್ ಸಾಮ್ರಾಜ್ಯದಲ್ಲಿ ನೆಲಸಿದ್ದ ರಾಜಕೀಯ ಸ್ಥಿತಿಯು ಒಂದು ರೀತಿಯಲ್ಲಿ ಕ್ರಿಸ್ತನ ಬರುವಿಕೆಗೂ ಸುವಾರ್ತೆಯ ಪ್ರಸಾರಕ್ಕೂ ಅನುಕೂಲವಾಗಿತ್ತು.

ಲೂಕನು, ತಿಬೇರಿಯಸ್ ಚಕ್ರವರ್ತಿಯ ೧೫ನೇ ವರ್ಷದ ಆಡಳಿತ ಕಾಲದಲ್ಲಿ ಸ್ನಾನಿಕ ಯೊವಾನನ್ನ ಬೋಧಿಸಲಾರಂಭಿಸಿದ ಎಂದು ದಾಖಲಿಸುವುದರ ಮೂಲಕ (ಲೂಕ ೩:೧) ತಿಬೇರಿಯಸ್ ಚಕ್ರವರ್ತಿಯ ಚಿತ್ರಣವನ್ನು ನಮಗೆ ನೀಡುತ್ತಾನೆ. ಇದು ಕ್ರಿ.ಶ. ೨೭ಕ್ಕೆ ಸರಿ ಹೊಂದುತ್ತದೆ. ಸ್ನಾನಿಕ ಯೊವಾನ್ನನಿಂದ ಸ್ನಾನದೀಕ್ಷೆ ಪಡೆಯುವಾಗ ಯೇಸುಸ್ವಾಮಿಗೆ ಸುಮಾರು ೩೦ ವರ್ಷ ವಯಸ್ಸು (ಲೂಕ ೩:೨೩) ಯೇಸು ತಮ್ಮ ಬಹಿರಂಗ ಜೀವನದಲ್ಲಿ ನಾಲ್ಕು ಪಾಸ್ಕ ಹಬ್ಬಗಳನ್ನು ಆಚರಿಸಿದನೆಂದು ಯೊವಾನ್ನ ತನ್ನ ಸುವಾರ್ತೆಯಲ್ಲಿ ದಾಖಲಿಸುತ್ತಾನೆ. (ಯೊವಾನ ೨:೧೩, ೫:೧, ೬:೪, ೧೧:೫೫) ಇದರಿಂದ ಯೇಸುವಿನ ಬಹಿರಂಗ ಜೀವನದ ಅವಧಿಯು ಸುಮಾರು ೩ ವರ್ಷವೆಂದು ಪರಿಗಣಿಸಬಹುದು. ಈ ಎಲ್ಲಾ ಪುರಾವೆಗಳಿಂದ ಯೇಸುಸ್ವಾಮಿಯ ಬಹಿರಂಗ ಜೀವನಾವಧಿಯು ಕ್ರಿ.ಶ. ೨೭-೩೦ ಎಂದು ತಿಳಿಯಬಹುದಾಗಿದೆ.

ಯೆಹೂದಿ ದೇಶಪ್ರೇಮಿಗಳು ಕ್ರಾಂತಿಕಾರಕ ಮನೋಭಾವದವರಾಗಿದ್ದು ಹೇಗಾದರೂ ಮಾಡಿ ಹೆರೋದರಸನ ಆಳ್ವಿಕೆಯಿಂದಲೂ, ಪರಕೀಯ ರೋಮನ್ ಚಕ್ರಾಧಿಪತ್ಯದ ಆಡಳಿತದಿಂದಲೂ ಮುಕ್ತಿ ಹೊಂದಲು ಕಾತರಿಸುತ್ತಿದ್ದರು. ಒಬ್ಬ ಸರಿಯಾದ ರಾಜಕೀಯ ಮುಖಂಡನಿಗಾಗಿ ಯೆಹೂದಿ ದೇಶ ಪ್ರೇಮಿಗಳು ಎದುರು ನೋಡುತ್ತಿದ್ದರು. ಮೊದಮೊದಲು ಆ ಧುರೀಣ ಯೇಸುವೆ ಇರಬೇಕೆಂದು ಭಾವಿಸಿದ್ದರು.

ಯೇಸು ಯಾವ ರಾಜಕೀಯ ಅಧಿಕಾರಕ್ಕೂ ಒಳಪಡದಂತಹ ಧಾರ್ಮಿಕ ವಿಜಯವನ್ನು ಯೇಸುಸ್ವಾಮಿ ಲೋಕಕ್ಕೆ ಸಾರಿದ (ಮತ್ತಾಯ ೨೮:೧೮-೨೦) ರಾಜಕೀಯ ಪರಿಸ್ಥಿತಿ ಹೀಗಾದರೆ ಅಂತರ್ಯದ ಪರಿಸ್ಥಿತಿ ಶಿಥಿಲವಾಗಿತ್ತು. ಆರ್ಥಿಕ ದೃಷ್ಟಿಯಿಂದ ಅದು ಕುಗ್ಗಿಹೋಗಿತ್ತು. ದುಂದುಗಾರಿಕೆ, ವಿಲಾಸೀ ಜೀವನ, ತೋರಿಕೆಯ ಅಂದಚಂದದ ಕಟ್ಟಡಗಳು ಇವೆಲ್ಲವೂ ಆರ್ಥಿಕ ಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿದ್ದವು. ರೋಮ್ ನಗರದಲ್ಲೇ ಪ್ರತಿ ಮೂವರಲ್ಲಿ ಇಬ್ಬರು ಗುಲಾಮರಾಗಿದ್ದರು. ಜನಸಾಮಾನ್ಯರ ಬದುಕು ದುರ್ಬಲವಾಗಿದ್ದು ಬಹು ಕಷ್ಟದಿಂದ ಕೂಡಿತ್ತು. ಭಾರವಾದ ತೆರಿಗೆಗಳ ಪರಿಣಾಮದಿಂದಾಗಿ ಬಡತನ ತಾಂಡವವಾಡುತ್ತಿತ್ತು. ಮೇಲ್ ವರ್ಗದ ಜನ ಬೂಟಾಟಿಕೆಯ ತೋರಿಕೆಯ ಜೀವನದಲ್ಲಿ ನಿರತರಾಗಿದ್ದರು. ಶುದ್ಧ ಜೀವನಕ್ಕೆ, ಸರಳ, ಪವಿತ್ರ ಜೀವನಕ್ಕೆ ಮುನ್ನಣೆಯೇ ಇರಲಿಲ್ಲ. ಒಟ್ಟಿನಲ್ಲಿ ಎಲ್ಲ ಕಡೆ ನಿರಾಶೆ, ಜೀವನದ ಮೇಲೆ ಜುಗುಪ್ಸೆ ನೈತಿಕ ಸೂತ್ರಗಳ ಕಡೆಗೆ ಅಸಡ್ಡೆ ಎದ್ದು ಕಾಣುತ್ತಿದ್ದವು. ಆ ಕಾಲದ ವಿಶೇಷವಾಗಿ ಆಡಳಿತ ವರ್ಗ ಹಾಗೂ ಪುರೋಹಿತಶಾಹಿಯ ದುರಾಚಾರಗಳಿಂದ ಬೆಂದು, ಬೆಂಡಾಗಿ, ಬೇಸತ್ತು, ಹಿಂಸಾಮಾರ್ಗವನ್ನು ಹಿಡಿದಿದ್ದ ಜನರಿಗೆ ಕ್ರಿಸ್ತನ ಸಂದೇಶ ಸಮಯಕ್ಕೆ ತಕ್ಕ ದಿವ್ಯ ಔಷಧಿಯಂತೆ ದೊರೆಯಿತು.

ಯೇಸುಕ್ರಿಸ್ತನ ಕಾಲದ ಧಾರ್ಮಿಕ ಪರಿಸ್ಥಿತಿಯನ್ನು, ಅವಲೋಕಿಸಿದರೆ, ಕ್ರಿಸ್ತಪೂರ್ವ ಒಂದನೇ ಶತಮಾನದಲ್ಲಿ ಹಾಗೂ ತದನಂತರದ ಕಾಲದಲ್ಲಿ ರೋಮ್ ಸಾಮ್ರಾಜ್ಯದ ಧಾರ್ಮಿಕ ಪರಿಸ್ಥಿತಿಯೂ ತೀರಾ ಕೆಳಮಟ್ಟದಲ್ಲಿತ್ತು. ರೋಮನ್ನರಿಗೆ ತಾವು ಪೂಜಿಸುತ್ತಿದ್ದ ದೇವ ದೇವತೆಗಳ ಮೇಲೆ ನಂಬಿಕೆಯು ಕಡಿಮೆಯಾಗುತ್ತಾ ಬಂದಿತ್ತು. ಅವುಗಳ ಬದಲಾಗಿ ಹೊರನಾಡುಗಳಲ್ಲಿದ್ದ ನಾನಾ ರೀತಿಯ ದೇವದೇವತೆಗಳನ್ನು ಸ್ವೀಕರಿಸಿ, ಅವುಗಳನ್ನು ಆರಾಧಿಸತೊಡಗಿದರು. ಇವ್ಯಾವುವು ಅವರಿಗೆ ತೃಪ್ತಿಯನ್ನು ನೀಡುತ್ತಿರಲಿಲ್ಲ. ಇದರಿಂದ ಆ ಕಾಲದ ಜನರಲ್ಲಿದ್ದ ಆತ್ಮಿಕ ಹಸಿವೆಯು ಎಷ್ಟಿತ್ತೆಂಬುದು ಮಾತ್ರವಲ್ಲ ಆ ಹಸಿವೆಯನ್ನು ನಿವಾರಿಸಲು ಅವರಲ್ಲಿ ಪ್ರಚಲಿತವಾಗಿದ್ದ ಮತ ಧರ್ಮಗಳಿಗೆ ಶಕ್ತಿಯಿರಲಿಲ್ಲವೆಂಬುದೂ ನಮಗೆ ಸ್ಪಷ್ಟವಾಗುತ್ತದೆ.

ಯೇಸು ಸುತ್ತಲಿನ ಸಮಾಜದ ಯೆಹೂದಿಗಳ ಆಧ್ಯಾತ್ಮಿಕ ದಾಹವನ್ನು ಕಂಡಿದ್ದ. ಇಡೀ ಸಮಾಜ 'ಮಸ್ಸಿಯ'ನ ಆಗಮನದ ನಿರೀಕ್ಷೆಯಲ್ಲಿತ್ತು. ಮೆಸ್ಸಿಯನನ್ನು ಕುರಿತು ಮಹಾ ಪ್ರವಾದಿಗಳಾದ ಯೆಶಾಯ (೯:೬, ೧೧:೧, ೩೨:೧) ಯೆರೆಮಿಯಾ (೩೧:೩೧, ೩೩:೧೭) ಮೀಕ (೪:೧, ೫:೨) ಮುಂತಾದ ಪ್ರವಾದಿಗಳು ಪ್ರವಾದಿಸಿದ್ದರು. ಮೆಸ್ಸಿಯ ಅಂದರೆ 'ಲೋಕರಕ್ಷಕ'. ಈತ ದಾವೀದ್ ಅರಸನ ಮನೆತನಕ್ಕೆ ಸೇರಿದವನಾಗಿದ್ದು ಇಡೀ ಲೋಕಕ್ಕೆ ಶಾಂತಿ ಸಮಾಧಾನವನ್ನುಂಟುಮಾಡುತ್ತಾನೆ. ದೇವರ ಚಿತ್ತದ ಪ್ರಕಾರ ಸಮಸ್ತವನ್ನು ನಡೆಸುವ ಮೂಲಕ ನಿತ್ಯ ರಾಜ್ಯವನ್ನು ಸ್ಥಾಪಿಸುವನು ಎಂದು ಜನರಲ್ಲಿ ನಿರೀಕ್ಷೆಯನ್ನು ಪ್ರವಾದಿಗಳು ಉಂಟುಮಾಡಿದ್ದರು.

ಯೆಹೂದ್ಯರು ಸೆರೆಯಿಂದ ಬಿಡುಗಡೆ ಹೊಂದಿ ಅಂದರೆ ಬ್ಯಾಬಿಲೋನಿಯಾದಿಂದ ಹಿಂತಿರುಗಿ

ಸ್ವದೇಶಕ್ಕೆ ಮರಳಿದ ಮೇಲೆ ಧರ್ಮಶಾಸ್ತ್ರಕ್ಕೆ ವಿಧೇಯರಾಗಿ ನಡೆಯುವುದಕ್ಕೆ ಬರಲಿರುವ ಮೆಸ್ಸಿಯನ ಆಗಮನಕ್ಕಾಗಿ ತಮ್ಮನ್ನು ಸಿದ್ಧಪಡಿಸಿಕೊಳ್ಳತೊಡಗಿದರು (ಯೋವಾಲ ೨:೨೮; ಹಾಗ್ಗಾಯ್ ೧:೧೨ ಯೆಶಾಯ ೬೦.೧) ನಿಷ್ಠಾವಂತ ಯೆಹೂದ್ಯರು ಮೆಸ್ಸೀಯನು ಲೋಕದ ಪಾಪವನ್ನು ನೀಗಿಸಿ ಅದನ್ನು ಪಾವನಗೊಳಿಸಲಿರುವನೆಂದೂ ಜೊತೆಗೆ ಎಲ್ಲರಿಗೂ ಮೋಕ್ಷ ಪದವನ್ನು ಗಳಿಸಿಕೊಡುವನೆಂದೂ ನಂಬಿದ್ದರು.

ಆದರೆ, ಕಾಲಕ್ರಮೇಣ ಮೆಸ್ಸೀಯನ ವಿಷಯದಲ್ಲಿದ್ದ ಅವರ ಅಭಿಪ್ರಾಯ ಬದಲಾಗುತ್ತ ಬಂತು. ಮೆಸ್ಸೀಯ ಬರುವುದು ತಮ್ಮ ಆತ್ಮದ ರಕ್ಷಣೆಗೆ ಎಂಬುದನ್ನು ಮರೆತು ಬೂಟಾಟಿಕೆಯ, ಡಾಂಭಿಕತೆಯ, ದುರಾಚಾರದ ಜೀವನದಲ್ಲೆ ಮುಳುಗಿದರು. ಮೆಸ್ಸೀಯ ಬಂದು ತಮ್ಮನ್ನು ರೋಮನ್ನರ ದಾಸತ್ವದಿಂದ ಬಿಡುಗಡೆ ಮಾಡಿ ಐಹಿಕ ಸುಖ ಸಂಪತ್ತುಗಳನ್ನು ಗಳಿಸಿಕೊಡುವನೆಂದು ನಂಬತೊಡಗಿದರು. ತಾವು ದೇವರಿಂದ ಆಯ್ದುಕೊಂಡ ಸ್ವಂತ ಜನ ಎಂಬ ಹಮ್ಮು ಬೇರೆ ಸೇರಿಕೊಂಡಿತ್ತು.

ಯೆಹೂದಿಗಳ ಯೋಚನಾ ಲಹರಿಯಲ್ಲಿ ಅಧ್ಯಾತ್ಮಿಕ ಮೆಸ್ಸೀಯ ಲೌಕಿಕ ಮೆಸ್ಸೀಯನಾಗಿ ಬದಲಾಗತೊಡಗಿದ. ಈ ರೀತಿಯ ಬದಲಾವಣೆ ಆದುದರಲ್ಲಿ ಆಶ್ಚರ್ಯವೇನೂ ಇಲ್ಲ. ತಮ್ಮದು ಶ್ರೇಷ್ಠತಮವಾದ ಏಕದೇವೋಪಾಸನೆ, ಮೇಲಾಗಿ ಸಂಸ್ಕೃತಿ ಮತ್ತು ನಾಗರಿಕತೆಗಳಲ್ಲಿ ತಮ್ಮನ್ನು ಸರಿಗಟ್ಟುವವರು ಯಾರೂ ಇಲ್ಲ ಎಂಬ ಒಣ ಜಂಬದಲ್ಲಿ ಮರೆಯತೊಡಗಿದರು. ಆದರೆ ಅವರಿಗೆ ತೊಡಕಾದುದು ರೋಮನ್ನರ ಬಹುದೇವತಾವಾದದ ಮಧ್ಯೆ ಜೀವಿಸುವುದು. ರೋಮನ್ನರ ದಬ್ಬಾಳಿಕೆಯಿಂದಾಗಿ ಯೆಹೂದಿಗಳ ರಾಜಕೀಯ ಸ್ವಾತಂತ್ರ್ಯಕ್ಕೂ ಅಡ್ಡಿಯಾಗಿತ್ತು.

ಹೀಗೆ ಧಾರ್ಮಿಕ ಹಾಗೂ ರಾಜಕೀಯ, ಸಾಮಾಜಿಕ ಹಾಗೂ ಮಾನಸಿಕ ರಂಗಗಳಲ್ಲಿ ಸೋಲನ್ನೊಪ್ಪಿಕೊಂಡೇ ಜೀವಿಸುತ್ತಿದ್ದ ಇವರು ಬರಲಿರುವ ಮೆಸ್ಸೀಯನು ತಮ್ಮ ನಾಯಕನಾಗಿ, ರಾಜನಾಗಿ ಬಂದು ರೋಮನ್ನರ ನೊಗವನ್ನು ಕಿತ್ತೊಗೆದು ಬಂಧನದಿಂದ ತಮ್ಮನ್ನು ಬಿಡುಗಡೆ ಮಾಡಿ ತಮ್ಮ ಗತವೈಭವವನ್ನು ತಿರುಗಿ ತಂದುಕೊಡುವನೆಂದು ನಿರೀಕ್ಷಿಸುತ್ತಿದ್ದರು. (ಯೋಹಾನ ೬:೧೫)

ಯೇಸುವಿನ ಜನನ ಕಾಲದಲ್ಲಿ ಅನೇಕ ನಿಷ್ಠಾವಂತ ಯೆಹೂದ್ಯರು ಆಧ್ಯಾತ್ಮಿಕ ಭಾವನೆಯಿಂದ ಮೆಸ್ಸೀಯನ ಆಗಮನವನ್ನು ಆದರದಿಂದ ಕಾಯುತ್ತಿದ್ದರು. ಸಿಮೆಯೋನ (ಲೂಕ ೨:೨೫-೩೫) ಅನ್ನ (ಲೂಕ ೨:೩೬-೩೮) ಇವರಂತಹ ಆಶಾವಾದಿಗಳಾದ ವ್ಯಕ್ತಿಗಳು ದೇವರ ಮೇಲೆ ಭರವಸೆಯಿಟ್ಟು ತನ್ನ ಜನರ ರಕ್ಷಣೆಗಾಗಿ ಒಬ್ಬ ರಕ್ಷನನ್ನು ಕಳುಹಿಸುವನು ಎಂದು ಬಲವಾಗಿ ನಂಬಿದ್ದರು. ಯೇಸುಸ್ವಾಮಿಯ ಜೊತೆಯಲ್ಲಿ ಸಾಮಾನ್ಯ ಜನರ ಗುಂಪು, ಶಿಷ್ಯರು ಪರಿಸಾಯರು, ಶಾಸ್ತ್ರಿಗಳು, ಸದ್ದುಕಾಯರು, ಮತಾಭಿಮಾನಿಗಳು ಇವುಗಳಲ್ಲಿ ಯೊರೊಬ್ಬರಾದರು ಸದಾ ಇರುತ್ತಿದ್ದರು.

ಮಾತಾಭಿಮಾನಿಗಳು - ಯೇಸುಸ್ವಾಮಿಯ್ಯ ಕಾಲದಲ್ಲಿದ್ದ ಸ್ವರಾಜ್ಯ ಪಕ್ಷದವರು. ಇವರು ದೇವರೊಬ್ಬರೆ

ತಮ್ಮ ಒಡೆಯ ತಾವು ಲೋಕದ ಇತರರಿಗೆ ಅಧೀನರಲ್ಲ, ಹೇಗಾದರೂ ಮಾಡಿ ರೋಮನ್ ಸಾಮ್ರಾಜ್ಯದ ನೊಗವನ್ನು ಕಿತ್ತೊಗೆಯಲು ಹೊಂಚು ಹಾಕುತಿದ್ದರು. ಹೆಚ್ಚು ಕಡಿಮೆ ಉಗ್ರಗಾಮಿ ಕೃತ್ಯಗಳನ್ನು ನಡೆಸುತ್ತಾ ರೋಮನ್ನರ ಸಾಮ್ರಾಜ್ಯಕ್ಕೆ ತಲೆನೋವಾಗಿದ್ದರು. ದರ್ಮಶಾಸ್ತ್ರದ ಮೇಲೆ ಮತಾಭಿಮಾನಿಗಳಿಗಿದ್ದ ಅಭಿಮಾನ ಫರಿಸಾಯರ ಅಭಿಮಾನಕ್ಕಿಂತಲೂ ಕಟ್ಟುನಿಟ್ಟಾಗಿತ್ತು. ಮೊದಮೊದಲು ಮತಾಭಿಮಾನಿಗಳು ಯೇಸುವಿಗೆ ಉತ್ತಮ ಪ್ರತಿಕ್ರಿಯೆ ತೋರಿದರು ಆದರೆ ಯೇಸುಕ್ಷಮೆಯನ್ನು ಬೋಧಿಸುವುದಕ್ಕೆ ಪಾರಂಭಿಸಿದ ಮೇಲೆ ಯೇಸುವಿನಿಂದ ದೂರ ಸರಿದರು.

ಸದ್ದುಕಾಯರು: ಕ್ರಿ.ಪೂ. ೩೦೦ನೆಯ ವರುಷದಲ್ಲಿ ಯೆಹೂದ್ಯರೊಳಗೆ ವಿಧವಿಧವಾದ ಬೋಧನೆಗಳು ಹುಟ್ಟಿದಾಗ ಅವರೊಳಗೆ ಒಂದು ಶಾಖೆಗೆ ಸೇರಿದವರು ಸದ್ದುಕಾಯರು. ಇವರು ಯಾಜಕರ ಪರವಾಗಿದ್ದರು. ಇವರು ಯಾಜಕ ವರ್ಗಕ್ಕೆ ಸೇರಿದವರಾಗಿದ್ದು ಧನವಂತರ ಪರವಾಗಿದ್ದು ಬಹಳ ಉತ್ಸಾಹದಿಂದ ರಾಜಕೀಯ ಕಾರ್ಯಗಳನ್ನು ನಡೆಸುತ್ತಿದ್ದರು.

"ಯೇಸುವು ವಾಡಿಕೆಯಾಗಿ ಸಾಮಾನ್ಯ ಜನಗಳೊಡನೆ ಸಂಚಾರ ಮಾಡಿ ಅವರಿಗೆ ಬೋಧನೆ ಮಾಡುತ್ತಾ ಬಂದುದರಿಂದ ಫರಿಸಾಯರು ಯೇಸುವಿಗೆ ವಿರೋಧಿಗಳಾದರು. ಪ್ರಾರಂಭದಲ್ಲಿ ಸದ್ದುಕಾಯರಿಗೂ ಯೇಸುವಿಗೂ ಯಾವ ವಿರೋಧವೂ ಇರಲಿಲ್ಲ. ಸದ್ದುಕಾಯರ ರಾಷ್ಟ್ರೀಯ ನೀತಿಯು ರೋಮನ್‌ರೊಂದಿಗೆ ಸಹಕರಿಸುವುದಾಗಿತ್ತು. ಸದ್ದುಕಾಯರೂ ಯಾವ ಮೆಸ್ಸೀಯನನ್ನು ನಿರೀಕ್ಷಿಸಿರಲಿಲ್ಲ. ಯೇಸು ಅವರಿಗೆ ಬರುಬರುತ್ತಾ ತಲೆನೋವಾಗಿ ಪರಿಣಮಿಸಿದನು. ಏಕೆಂದರೆ ಯೇಸುವು ದರಿದ್ರತೆ, ಮರಣಾನಂತರದ ಜೀವನ ಇತ್ಯಾದಿ ವಿಷಯಗಳನ್ನೂ ಬೋಧಿಸತೊಡಗಿದ. ಬರುಬರುತ್ತಾ ಯೇಸು ಯೆರೂಸಲೇಮಿನಲ್ಲಿದ್ದ ಜನಸಾಮಾನ್ಯರಲ್ಲಿ ಪ್ರಸಿದ್ಧನಾಗುತ್ತ ಬಂದುದರಿಂದಲೂ ಜನ ಆತನ ಬಳಿಗೆ ಗುಂಪುಗುಂಪಾಗಿ ಬಂದು ಸೇರಿಕೊಂಡುದರಿಂದ ಯೆರೂಸಲೇಮಿನಲ್ಲಿ ಗಲಭೆಗೆ ಆತನೇ ಕಾರಣನಾಗುವನೆಂದು ಭಯಪಟ್ಟು ಸದ್ದುಕಾಯರ ವರ್ಗಕ್ಕೆ ಸೇರಿದ್ದ ಯಾಜಕರು ಆತನನ್ನು ಕೊಲ್ಲುವುದಕ್ಕೆ ತೀರ್ಮಾನ ಮಾಡಿಕೊಂಡರು (ಯೋಹಾ ೧೧:೪೭)

ಪರಿಸಾಯರು: ಪರಿಸಾಯರದು ಮತ್ತೊಂದು ಪ್ರಬಲವಾದ ಗುಂಪು ಇವರಿಗೂ ಮತಾಭಿಮಾನಿಗಳಿಗೂ ಅಷ್ಟೊಂದು ವ್ಯತ್ಯಾಸವೇನು ಇರಲಿಲ್ಲ. ಸುಮಾರು ಆರು ಸಾವಿರ ಫರಿಸಾಯರು ರೋಮ್ ಸಾಮ್ರಾಜ್ಯದ ದೊರೆ ಸೀಜರನೊಂದಿಗೆ ಹೊಂದಾಣಿಕೆಯ ಪ್ರಮಾಣ ವಚನಕ್ಕೆ ಸಹಿ ಹಾಕಲು ಒಮ್ಮತದಿಂದ ತಿರಸ್ಕರಿಸಿದರು. ಆದರೆ ಮತಾಭಿಮಾನಿಗಳಂತೆ ರೋಮನ್ನರ ವಿರುದ್ಧ ಅಸ್ತ್ರಗಳನ್ನು ಎತ್ತಿಕೊಳ್ಳಲಿಲ್ಲ. ಇವರು ಬಯಸ್ಸಿದ್ದು ಧಾರ್ಮಿಕ ಸುಧಾರಣೆ. ಯಹೂದ್ಯ ಧರ್ಮಶಾಸ್ತ್ರ ಮತ್ತು ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಅನುಸರಿಸದ ಕಾರಣ ದೇವರು ಕುಪಿತರಾಗಿ ಇಸ್ರೇಲರನ್ನು ರೋಮನ್ನರ ದಬ್ಬಾಳಿಕೆಗೆ ತಳ್ಳಿದ್ದಾರೆಂಬುದು ಇವರ ನಂಬಿಕೆಯಾಗಿತ್ತು. ಒಂದೆಡೆ ರೋಮನ್ನರನ್ನು ಪ್ರತಿಭಟಿಸುತ್ತಾ ಮತ್ತೊಂದೆಡೆ ತೆರಿಗೆಯನ್ನು ನೀಡುತ್ತಿದ್ದರು.

ಪರಿಸಾಯರು ಲಿಖಿತ ಧರ್ಮಶಾಸ್ತ್ರದ ವಿಧಿಗಳನ್ನು ಮಾತ್ರವೇ ಅಲ್ಲ, ಹಿರಿಯರ ಸಂಪ್ರದಾಯಗಳನ್ನು ಬಹಳ ಕಟ್ಟುನಿಟ್ಟಾಗಿ ಕೈಗೊಳ್ಳುತ್ತಾ ಜನಸಾಮಾನ್ಯರಿಗೆ ಯೆಹೂದ್ಯ ಮತವನ್ನು ಹೊರಲಾರದ ಹೊರೆಯನ್ನಾಗಿ ಮಾಡಿದ್ದರು. ಭೂಲೋಕದಲ್ಲಿ ರಾಜ್ಯವನ್ನು ಸ್ಥಾಪಿಸಿ ಅದರ ಮೇಲೆ ಒಡೆತನವನ್ನು ಮಾಡುವ ಒಬ್ಬ ಮಸ್ಸೀಯನಿಗಾಗಿ ಈ ಪರಿಸಾಯರು ಕಾದಿದ್ದರು. ಸತ್ತಮೇಲೆ ದೇಹಕ್ಕೆ ಪುನರುತ್ಥಾನ ಉಂಟೆಂದೂ ಆತ್ಮವು ನಿತ್ಯ ವಸ್ತುವೆಂದು, ನೀತಿವಂತರು ಮೆಸ್ಸೀಯನ ರಾಜ್ಯಕ್ಕೆ ಸಂಬಂಧಪಟ್ಟ ಆಶೀರ್ವಾದಗಳನ್ನು ಪಡೆಯುವರೆಂದು, ಅನೀತಿವಂತರು ದಂಡನೆಯನ್ನು ಭರಿಸುವರೆಂದು ನಂಬುತ್ತಿದ್ದರು. ತಾವೇ ಪವಿತ್ರ ಜನಾಂಗ, ನಿಜವಾದ ಇಸ್ತ್ರೇಯೇಲರೆಂಬ ಭಾವನೆ ಇವರಲ್ಲಿ ತೀವ್ರವಾಯಿತು.

ಎಸ್ಸೀನಿಯರು: ಇವರು ಎಲ್ಲದರಲ್ಲೂ ಫರಿಸಾಯರಿಗಿಂತ ಒಂದು ಹೆಜ್ಜೆ ಮುಂದೆ ಇದ್ದವರು. ಇವರು ಉಗ್ರವಾದ ತಪಸ್ಸು, ಬ್ರಹ್ಮಚರ್ಯೆ ವ್ರತವನ್ನು ಪಾಲಿಸುತ್ತಾ ಮರಳುಗಾಡಿನಲ್ಲಿ ವಾಸಿಸುತ್ತಿದ್ದರು. ಪ್ರಪಂಚ ದೋಷಪೂರಿತವಾಗಿದೆ, ಅಪವಿತ್ರವಾಗಿದೆ ಎಂದು ನಂಬಿ ಧಾರ್ಮಿಕ ಕ್ರಿಯಾವಿಧಿಗಳನ್ನು ಕಟ್ಟುನಿಟ್ಟಾಗಿ ಆಚರಿಸುವ ಮಡಿವಂತಿಕೆ ಇವರದಾಗಿತ್ತು. ಎಸ್ಸೀನಿಯರು ತಾವು ಬೆಳಕಿನ ಜನಾಂಗದವರೆಂದೂ ಉಳಿದವರು ಕತ್ತಲೆಯ ಜನಾಂಗದವರೆಂದೂ ನಂಬಿ; ಮೆಸ್ಸೀಯ ಬಂದಾಗ ಬೆಳಕಿನ ಜನಾಂಗದವರೊಡನೆ ಸೇರಿ, ಕತ್ತಲ ಜನಾಂಗವನ್ನು ಅಳಿಸಿ ಬಿಡುವನೆಂಬ ನಂಬಿಕೆಯೂ ಇವರದಾಗಿತ್ತು.

ಶಾಸ್ತ್ರಿ: ಇವರು ಯೇಸುವಿನ ಕಾಲದ ಆಚಾರ ಪದ್ಧತಿಗಳು ಧರ್ಮಶಾಸ್ತ್ರದಂತೆಯೇ ಅಧಿಕಾರಯುಕ್ತ ವಾದವುಗಳೆಂದು ಬೋಧಿಸುತ್ತಿದ್ದರು. (ಮತ್ತಾಯ ೧೫:೧) ಇವರಿಗೂ ಫರಿಸಾಯರಿಗೂ ಹತ್ತಿರದ ಸಂಬಂಧವಿದ್ದಿತು.(ಮತ್ತಾ ೧೨:೩೮, ಮಾರ್ಕ್ ೨:೧೬ ಲೂಕ್ ೬:೭) ಅನೇಕ ಶಾಸ್ತ್ರಿಗಳು ಯೇಸುವಿಗೆ ವಿರೋಧಿಗಳಾಗೇ ಇದ್ದರು. ಇವರು ಯಾವಾಗಲೂ ಆಚಾರ ಪದ್ಧತಿಗಳನ್ನೇ ಶ್ರೇಷ್ಠವೆಂದು ಭಾವಿಸುತ್ತಾ ಬಂದಿದ್ದರು. ಈ ಕಾರಣದಿಂದ ಯೇಸು ಇವರನ್ನು ಖಂಡಿಸುತ್ತಿದ್ದನು (ಮತ್ತಾ ೫:೨೦ ೨೩:೧) ಶಾಸ್ತ್ರಿಗಳಿಗೆ ಆಚಾರ, ಪದ್ಧತಿಗಳೇ ಶ್ರೇಷ್ಟವಾದ್ದರಿಂದ ಸ್ನಾನಿಕ ಯೋವಾನ್ನ ಮತ್ತು ಯೇಸುವಿನ ಬೋದನೆಗಳನ್ನು ತಳ್ಳಿ ಹಾಕಿದರು. ಮೆಸ್ಸೀಯ ಜಯಶೀಲನೂ ಶ್ರೇಷ್ಠನು ಆಗಿರುತ್ತಾನೆಂದು ಶಾಸ್ತ್ರಿಗಳು ಭಾವಿಸಿದ್ದರೆ ಯೇಸು 'ಮೆಸ್ಸೀಯ'ನು ಅನುಭವಿಸಬೇಕಾದ ಕಷ್ಟ, ನೋವು, ಸಾವಿನ ಬಗ್ಗೆ ಬೋಧಿಸುತ್ತಿದ್ದನು. ಆದ್ದರಿಂದ ಇವರು ಯೇಸು ಮೆಸ್ಸಿಯನಲ್ಲವೆಂದು ತೀರ್ಮಾನಿಸಿ ಆತನನ್ನು ಕೊಲೆ ಮಾಡುವುದಕ್ಕೆ ಸಹಕಾರ ನೀಡುತ್ತಾರೆ.

ಯೇಸುವಿನ ಕಾಲದಲ್ಲಿ ಈ ಎಲ್ಲಾ ಧಾರ್ಮಿಕ ಮತ್ತು ರಾಜಕೀಯ ಹೋರಾಟಗಳ, ವಿವಿಧ ಸಂಘಟನೆ ಮತ್ತು ಗುಂಪುಗಳ ನಡುವೆ ವಿಪರ್ಯಾಸಗಳ ಶಿಖರವಾಗಿ ನಿಂತವನು ಸ್ನಾನಿಕ ಯೊವಾನ್ನ. ಪ್ರವಾದಿಯ ಲಕ್ಷಣಗಳನ್ನೆಲ್ಲ ಹೊಂದಿದ್ದ ಇವನು, ಈ ಹಿಂದಿನ ಪ್ರವಾದಿಗಳಂತೆ ಇಸ್ರೇಯೇಲರ ವಿನಾಶವನ್ನು ಸಾರಿದ. ಈತನ ಬದುಕು, ಬೋಧನೆ, ಸಂದೇಶ ಎಲ್ಲರ ಹೃದಯವನ್ನು ತಟ್ಟಿ ಬಡಿದೆಬ್ಬಿಸುವಂತಿತ್ತು. ಪಾಪಿಗಳು, ವೇಶ್ಯೆಯರು, ಸುಂಕದವರು, ಸಿಪಾಯಿಗಳು, ಫರಿಸಾಯರು ಮೊದಲಾದ ಎಲ್ಲರನ್ನು

ಮನಃಪರಿವರ್ತನೆಗೆ ಕರೆದುದಲ್ಲದೆ, ಅಪ್ರಾಮಾಣಿಕ ಹೆರೋದರಾಜನಿಗೆ ಸವಾಲೆಸೆಯುತ್ತಾನೆ. ಇದರಿಂದ ಕುಪಿತನಾದ ಹೆರೋದ ಸ್ನಾನಿಕ ಯೊವಾನ್ನನ ಶಿರಚ್ಛೇದನ ಮಾಡಿಸುತ್ತಾನೆ.

ಈ ಸನ್ನಿವೇಶದಲ್ಲಿ ಯೇಸುಕ್ರಿಸ್ತನು ಫರಿಸಾಯರು, ಮತಾಭಿಮಾನಿಗಳು, ಎಸ್ಸೀನಿಯರು, ಸದ್ದುಕಾಯರು, ಶಾಸ್ತ್ರಿಗಳು ಜನಸಾಮಾನ್ಯರ ಗುಂಪುಗಳನ್ನು ಅವರ ನಂಬಿಕೆಗಳನ್ನು ತೊರೆದು ಸ್ನಾನಿಕ ಯೊವಾನ್ನನ ಸಂದೇಶಕ್ಕೆ ತಲೆಬಾಗಿ ದೀಕ್ಷಾಸ್ನಾನ ಪಡೆಯುವುದರ ಮೂಲಕ, ಅವನ ವೈಶಿಷ್ಟತೆಯನ್ನು ಎತ್ತಿ ಹಿಡಿಯುತ್ತಾನೆ."[2] ಇದು ಯೇಸುವಿನ ಕಾಲದ ಸ್ಥೂಲವಾದ ಸಮಾಜ ಚಿತ್ರಣ.

೫.೪ ಯೇಸುಕ್ರಿಸ್ತನ ಆಲೋಚನೆಯಲ್ಲಿ ಸಾಮಾಜಿಕ ಸಮಾನತೆಯ ನವ ಸಮಾಜ - ಸ್ವರ್ಗ ಸಾಮ್ರಾಜ್ಯ

"ಯೇಸುಕ್ರಿಸ್ತ ಹುಟ್ಟಿ ಸುಮಾರು ೨೦೦೦ ವರ್ಷಗಳು ಕಳೆದರೂ ಆತ ಬೋಧಿಸಿದ ತತ್ವಗಳು ಇಂದಿಗೂ ಜನಾಕರ್ಷಣೆಯನ್ನು ಉಳಿಸಿಕೊಂಡು ಆತನು ಈ ಪ್ರಪಂಚದ ನೂರಾರು ಕೋಟಿ ಜನಗಳ ಆರಾಧ್ಯ ದೈವವಾಗಿ ಉಳಿದಿದ್ದಾನೆ. ವಿಶ್ವ ಬ್ರಾತೃತ್ವ, ಸಮಾನತೆ ಹಾಗೂ ಮಾನವ ಸೇವೆಯನ್ನು ಸಾರಿದ ಯೇಸುಕ್ರಿಸ್ತನ ಆದರ್ಶ ಇಂದಿಗೂ ಪಾಲಿಸಲೂ ಯೋಗ್ಯವಾಗಿದ್ದು ಅದೊಂದು ಜೀವನ ವಿಧಾನವೇ ಆಗಿದೆ. ಇಂದಿನ ಆಧುನಿಕ ಸಮಾಜದಲ್ಲಿ ಆತನ ಬೋಧನೆಗಳಂತೆ ಬದುಕುವುದು ಬಹಳ ಕಠಿಣವೆನಿಸಿದರೂ ಸಹಸ್ರಾರು ಮಂದಿ ಆ ದಾರಿಯಲ್ಲಿ ಹೊರಟಿದ್ದಾರೆ.

ಕೆಲವೊಮ್ಮೆ ದುರಂತವೆನ್ನುವಂತೆ ಕೊಲೆ, ಅಪರಾಧ, ಬೆದರಿಕೆ, ಜಾತಿ, ಜನಾಂಗೀಯತೆಗಳನ್ನು ಪೋಷಿಸುವ ಮತ್ತು ಹಣ ಮಾಡುವ ಹಾಗೂ ವ್ಯವಹಾರಿಕ ಪ್ರಪಂಚದಲ್ಲಿ, ಆರ್ಥಿಕ ಪ್ರಪಂಚದಲ್ಲಿ, ಆತನ ಹೆಸರನ್ನು ಉಪಯೋಗಿಸಿಕೊಂಡು ಆರ್ಥಿಕ ಪ್ರಪಂಚದಲ್ಲಿ, ಆತನ ಹೆಸರನ್ನು ಉಪಯೋಗಿಸಿಕೊಂಡು ಆತನ ಹೆಸರಿಗೆ ಮಸಿ ಬಳಿಯುವ ಕಾರ್ಯ ಇತಿಹಾಸದ ಉದ್ದಕ್ಕೂ ನಡೆದೇ ಇದೆ. ಯೇಸುಕ್ರಿಸ್ತ ತನ್ನ ಬದುಕಿನ ಉದ್ದಕ್ಕೂ ಯಾವುದನ್ನು ವಿರೋಧಿಸಿ, ಹೋರಾಡಿ ಅದಕ್ಕಾಗಿ ತನ್ನ ಪ್ರಾಣವನ್ನೇ ಕೊಟ್ಟನೋ ಅಂತಹ ಘನವಾದ ಗುರಿಯನ್ನೇ ಮರೆತು ಇಂದು ಯೇಸುಕ್ರಿಸ್ತ ಉತ್ಸವ ಮೂರ್ತಿಯಾಗಿ ಗೋಚರಿಸುವಂತೆ ಮಾಡುತ್ತಿರುವುದು ಇತಿಹಾಸದ ದುರಂತವೆಂದು ಭಾಸವಾಗುತ್ತದೆ."[೪]

ಯೇಸುಕ್ರಿಸ್ತನನ್ನು ನಾವು ಆತನ ಕ್ರೈಸ್ತಮತದ ಸಂಸ್ಥಾಪಕ ಎಂದಷ್ಟೆ ನೋಡಬಾರದು. ಅದು ಸೂಕ್ತವಲ್ಲ, ಕೆಲವು ಪಾಶ್ಚಾತ್ಯರು ಸಂಕುಚಿತ ಅರ್ಥದಲ್ಲಿ ಈ ರೀತಿ ನೋಡಿದ್ದಾರೆ. ಯೇಸುಕ್ರಿಸ್ತ ನಂತರ ಯುಗಪುರುಷ, ಶಕ ಪುರುಷ, ವಿಶ್ವಮಾನವ, ಶಾಂತಿಯ ಅರಸ, ಮಾನವೀಯತೆಯ ಮಹಾಮೂರ್ತಿ, ದೇವ ತಂದೆಯ ಅಪಾರ ಮೆಚ್ಚುಗೆಗೆ ಪಾತ್ರನಾದ ಪುತ್ರನಾಗಿರುವ ಯೇಸುಕ್ರಿಸ್ತ ಧರ್ಮಕ್ಕೆ ಅತೀತನಾದವನು. ಯೇಸುಕ್ರಿಸ್ತ ಕೇವಲ ಕ್ರೈಸ್ತರಿಗೆ ಮಾತ್ರ ಸೇರಿದವನು-ಅವರ ಸ್ವಂತ ಆಸ್ತಿಯೆಂಬಂತೆ ಪರಿಗಣಿಸುವುದು ಸೂಕ್ತವಲ್ಲ. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಶೋಷಿತ ಸಮಾಜದ ಬಗ್ಗೆ ಕಳಕಳಿ ಹೊಂದಿರುವ ಪ್ರತಿಯೊಬ್ಬ ಜೀವಿಗೂ ಯೇಸುಕ್ರಿಸ್ತ ಸೇರಿದವನಾಗಿದ್ದಾನೆ. ಇಂದಿನ ರಾಕೆಟ್ ಯುಗದಲ್ಲಿ, ಆಧುನಿಕವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೃಹತ್ ಬೆಳವಣಿಗೆಯ ಈ ಯುಗದಲ್ಲಿ ಯೇಸುಕ್ರಿಸ್ತ ಆತನ ಬೋಧನೆಗಳು

ಆತ ಕಂಡ ಸಾಮಾಜಿಕ ಸಮತೆಯು ನವ ಸಮಾಜದ ಕನಸು ಎಷ್ಟರಮಟ್ಟಿಗೆ ಪ್ರಸ್ತುತ ಎಂಬುದನ್ನು ಅವಲೋಕಿಸಿ ನೋಡಿದಾಗ ಯೇಸುಕ್ರಿಸ್ತ ಹಾಗೂ ಆತನ ನಿತ್ಯನೂತನ ಬೋದನೆಗಳು ಅಶಾಂತಿ, ಅತೃಪ್ತಿ ಅಲಸ್ಯದಿಂದ ತೊಳಲಾಡುತ್ತಿರುವ ಇಂದಿನ ಮನುಕುಲಕ್ಕೆ ಎಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವೆನಿಸುತ್ತವೆ.

ಇಂದಿನ ನಮ್ಮ ವಾಸ್ತವ ಬದುಕಿನ ಸಮಸ್ಯೆಗಳು ಹತ್ತು ಹಲವಾರು. ಈ ಎಲ್ಲ ಸಮಸ್ಯೆಗಳ ನಡುವೆ ನಿಂತು ಯೇಸುಕ್ರಿಸ್ತನನ್ನು ನೋಡಿದಾಗ ಯೇಸುಕ್ರಿಸ್ತ ಜೀವಿಸಿದ ಒಂದನೇ ಶತಮಾನಕ್ಕೂ ವೈಜ್ಞಾನಿಕವಾಗಿ ಮುಂದುವರೆದಿರುವ ಇಪ್ಪತ್ತನೆ ಶತಮಾನಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಆಧುನಿಕ ಸೌಲಭ್ಯಗಳಿಂದಾಗಿ ಇಡೀ ಪ್ರಪಂಚವೇ ಒಂದು ಪುಟ್ಟಹಳ್ಳಿಯಾಗಿ ಗೋಚರಿಸುತ್ತದೆ. ಹೀಗೆ ಒಂದನೇ ಶತಮಾನ ಹಾಗೂ ಇಪ್ಪತ್ತನೆಯ ಶತಮಾನಗಳು ಸಂಪೂರ್ಣ ಭಿನ್ನಕಾಲಗಳಾಗಿದ್ದರೂ ಅಂದಿನ ಯೇಸುಕ್ರಿಸ್ತ ಇಂದಿಗೂ ಪ್ರಸ್ತುತವಾಗಿದ್ದಾನೆ.

"ಇಪ್ಪತ್ತನೆಯ ಶತಮಾನದ ನಮ್ಮ ವಾಸ್ತವ ಬದುಕಿನ ಪ್ರಶ್ನೆಗಳು ಜೀವನ್ಮರಣದ ಪ್ರಶ್ನೆಗಳಾಗಿವೆ. 'ಭಯೋತ್ಪಾದನೆ' ಎಂಬ ಬ್ರಹ್ಮರಾಕ್ಷಸ ವಿಶ್ವದ ಎಲ್ಲೆಡೆ ಕೇಕೆಹಾಕಿ ಅಟ್ಟಹಾಸದಿಂದ ವಿಜೃಂಭಿಸುತ್ತಿದೆ. ಅಣುಬಾಂಬ್, ಜೀವ ವಿರೋಧಿ ಬಾಂಬ್‌ಗಳು ಇಡೀ ವಿಶ್ವವನ್ನೆ ನುಂಗಿ ಹಾಕಲು ಮುಂದುವರೆದ ರಾಷ್ಟ್ರಗಳ ಯುದ್ಧಸಾಮಗ್ರಿಗಳ ಕೊಠಡಿಗಳಲ್ಲಿ ಸಜ್ಜಾಗಿ ನಿಂತಿವೆ. ಯುದ್ಧದ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಿ ಮುಂದುವರಿದ ರಾಷ್ಟ್ರಗಳು ಬಡರಾಷ್ಟ್ರಗಳಿಗೆ ಮಾರಿ ತಮ್ಮ ತಿಜೋರಿಗಳನ್ನು ತುಂಬಿಸಿಕೊಳ್ಳುತ್ತಿದ್ದರೆ 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎಂಬಂತೆ ಬಡತನವೇ ಇಡೀ ದೇಶದಾದ್ಯಂತ ತಾಂಡವವಾಡುತ್ತಿದ್ದರೂ ಶಸ್ತ್ರಾಸ್ತ್ರ ಖರೀದಿ ಹಾಗೂ ಸಂಗ್ರಹ ಈ ಬಡರಾಷ್ಟ್ರಗಳು ಮುಂದಾಗುತ್ತಿರುವುದು ಮಾನವ ಸಮಾಜದ ದುರಂತ. ಅಣುಬಾಂಬ್ ಯುದ್ಧ ಭೀತಿಯಿಂದಾಗಿ ಇಡೀ ಜಗತ್ತೆ ಭಯದ ನೆರಳಿನಲ್ಲಿ ತತ್ತರಿಸುತ್ತಿದೆ. ಏಡ್ಸ್, ಎಬೋಲಾ, ಕ್ಯಾನ್ಸರ್‌ನಂಥ ಮಹಾಮಾರಿಗಳು ಇಂದಿನ ಮನುಷ್ಯನನ್ನು ಹೀರಿ ಆತನನ್ನು ಇನ್ನಿಲ್ಲದ ಸಂಕಟಕ್ಕೆ ಗುರಿ ಮಾಡುತ್ತಿವೆ. ಮಿತಿ ಮೀರಿದ ಜನಸಂಖ್ಯೆಯಿಂದಾಗಿ ಬಡರಾಷ್ಟ್ರಗಳು ವಾಯುಮಾಲಿನ್ಯ, ಜಲಮಾಲಿನ್ಯ, ಪರಿಸರ ಮಾಲಿನ್ಯಗಳಿಂದಾಗಿ ತಡಬಡಾಯಿಸುತ್ತಿವೆ. ಜನಸಂಖ್ಯೆ ಹೆಚ್ಚಿದಂತೆಲ್ಲಾ ಸ್ವಾಭಾವಿಕ ಸಂಪತ್ತು ಕುಗ್ಗುತಿದ್ದು ಆಹಾರ ಸಾಮಗ್ರಿಗಳ ಕೊರತೆ ಉಂಟಾಗಿ ಮನುಷ್ಯ ವಿನಾಶದ ಪರಮಾವದಿಯತ್ತ ಮುಖ ಮಾಡಿರುವಂತೆ ತೋರುತ್ತಾನೆ.

ಇಂದಿನ ಭ್ರಷ್ಟ ರಾಜಕೀಯ ಆರ್ಥಿಕ ವ್ಯವಸ್ಥೆಯಿಂದಾಗಿ 'ಇರುವವರ' ಮತ್ತು 'ಇಲ್ಲದವರ' ನಡುವಿನ ಅಂತರ ದಿನೇದಿನೇ ಅಗಾಧವಾಗಿ ಹೆಚ್ಚುತ್ತಿದೆ. ಶ್ರೀಮಂತ ತನ್ನ ಶ್ರೀಮಂತಿಕೆಯನ್ನು ಬೃಹತ್ ಆಗಿ ಹೆಚ್ಚಿಸಿಕೊಳ್ಳುತ್ತಿದ್ದರೆ ಬಡವ ಕಡುಬಡವನಾಗುತ್ತಿದ್ದಾನೆ. ಇಂದಿನ ಜಾಗತೀಕರಣ, ಖಾಸಗೀಕರಣಗಳು ನೇರವಾಗಿ ಬಡವನನ್ನು ಕೈಲಾಗದವನನ್ನು ಕೊಳ್ಳೆ ಹೊಡೆದು ಲಾಭ ಮಾಡಿಕೊಳ್ಳುವುದೇ ಅವುಗಳ ಗುರಿಯಾಗಿವೆ. ಜಾಗತೀಕರಣ ಮತ್ತು ಖಾಸಗೀಕರಣಗಳೆಂಬ ಪೆಡಂಭೂತಗಳು ಹೃದಯಹೀನ ಆರ್ಥಿಕ

ವ್ಯವಸ್ಥೆಗಳನ್ನು ಪೋಷಿಸುತ್ತವೆ. ಇವಕ್ಕೆ ಕೈಲಾಗದವರಿಗೆ ಸಹಾಯ, ಶೋಷಿತರ ಉದ್ಧಾರ, ತಳಸಮುದಾಯ ಕಲ್ಯಾಣ ಈ ಮಾತುಗಳೆಲ್ಲಾ ಅಪಥ್ಯವಾಗಿವೆ. ಇವೆಲ್ಲದರ ನಡುವೆ ಮಾನವ ನಿರ್ಮಿತ ಜಾತಿ, ವರ್ಗ, ವರ್ಣ ಸಂಸ್ಥೆಗಳು ಕೋಮು ಗಲಭೆಗಳು ಇಂದಿನ ಸಮಾಜದಲ್ಲಿ ರುದ್ರನರ್ತನ ಮಾಡುತ್ತಿವೆ. ಅತಿವೃಷ್ಠಿ ಅನಾವೃಷ್ಠಿಗಳು ನಿತ್ಯಗೀತೆಗಳಾಗಿ ಗುನುಗುತ್ತಿವೆ. ನಿರುದ್ಯೋಗ ಅಸಮವಾದ ಸಂಪತ್ತಿನ ಹಂಚಿಕೆ, ಬಡತನ, ಅನಕ್ಷರತೆ, ಅನಾರೋಗ್ಯ, ಒತ್ತಡಗಳು, ಸ್ಪರ್ಧೆ, ಉಗ್ರಮತೀಯವಾದ, ಹೃದಯಹೀನ ಅರ್ಥವ್ಯವಸ್ಥೆ, ಏರುತ್ತಿರುವ ಜನಸಂಖ್ಯೆ, ಕುಗ್ಗುತ್ತಿರುವ ನೈಸರ್ಗಿಕ ಸಂಪತ್ತು, ಪ್ರಕೃತಿ ವಿಕೋಪಗಳು ಹೀಗೆ ಹತ್ತಾರು ಸಮಸ್ಯೆಗಳು ಇಂದಿನ ಆಧುನಿಕ ಮಾನವನಿಗೆ ಪೆಡಂಭೂತಗಳಾಗಿ ಗೋಚರಿಸುತ್ತಿವೆ. ಇಂತಹ ಹಿನ್ನೆಲೆಯಲ್ಲಿ ಮಾಡಬೇಕಾಗಿರುವುದು ಏನು ಎಂಬುದನ್ನು ಮಾನವ ನಿಧಾನವಾಗಿ ಆಲೋಚಿಸಬೇಕು.”[೬]

ಮೇಲಿನ ಎಲ್ಲಾ ಸಮಸ್ಯೆಗಳನ್ನು ಅವುಗಳ ಗಂಭೀರ ಸ್ಥಿತಿಯನ್ನು ಪ್ರಮಾಣಿಕವಾಗಿ ಒಪ್ಪಿಕೊಂಡು ‘ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದೆ’ ಎಂದು ತಿಳಿದು ಆಶಾಭರಿತ ಜೀವನ ಜೀವಿಸಬೇಕು. ಕೆಲವೊಮ್ಮೆ ಪುರೋಹಿತಗಾಮಿ, ಸಂಪ್ರದಾಯವಾದಿ ಉತ್ತರಗಳು ಸಹ ನಿರುಪಯೋಗಿ ಎಂಬಂತೆ ಭಾಸವಾಗುತ್ತವೆ. ಸಮಸ್ಯೆಗಳ ಸುಳಿಯಲ್ಲಿರುವ ಆಧುನಿಕಮಾನವನು ಉತ್ತರಕ್ಕೆ ಯೇಸುಕ್ರಿಸ್ತನತ್ತ ನೋಡಿದರೆ ಆಶಾಕಿರಣ ಗೋಚರಿಸುತ್ತದೆ. ಒಂದನೇ ಶತಮಾನದಲ್ಲಿ ಜೀವಿಸಿದ್ದ ಯೇಸುಕ್ರಿಸ್ತನಿಗೆ ಸಮಸ್ಯೆಗಳು ಇಂದಿನಂತೆ ಬೃಹತ್ ಗಾತ್ರದ್ದಾಗಿರದೆ ಹೋದರೂ ಆತನ ಕಾಲದ ಸಮಸ್ಯೆಗಳಿಗೂ ಇಂದಿನ ಸಮಸ್ಯೆಗಳಿಗೂ ವಿಶಾಲಾರ್ಥದಲ್ಲಿ ಪರಿಣಾಮ ಒಂದೇ ಆಗಿತ್ತು ಎನ್ನಬಹುದು. ತನ್ನ ಸಮಕಾಲೀನ ಜನತೆಗೆ ಅದರದೇ ಧಾರ್ಮಿಕ ಚಿಂತನೆಗಳನ್ನು ಬಳಸಿಕೊಡ ಕ್ರಿಸ್ತ ತನ್ನ ಸೃಜನಾತ್ಮಕ ಶಕ್ತಿಯಿಂದ ಒಂದು ಹೊಸ ಮಾರ್ಗವನ್ನು ತೋರಿದ. ಕ್ರಿಸ್ತ ಕಂಡ ಕನಸಿನ, ಸಾಮಾಜಿಕ ಸಮಾನತೆಯ ನವ ಸಮಾಜ ಹೇಗಿರಬೇಕೆಂಬುದು ಆಲೋಚಿಸುತ್ತಿದ್ದ. ಆಚಾರ, ವಿಚಾರ, ನಡೆ, ಸಂಸ್ಕೃತಿಯಲ್ಲಿ ಸಮಾನತೆಯಿದ್ದು, ಒಂದೇ ಲಾಂಛನದ ಅಡಿಯಲ್ಲಿ ವಾಸಿಸುವ ಗುಂಪಿನ ಜನಾಂಗವು ಒಂದು ಸಮಾಜ ಎನಿಸುವುದು. ಸಮಾಜ ಎಂಬ ಪದದ ಅರ್ಥ ಅತೀ ವಿಶಾಲವಾದುದು. ಸಮಾಜಕ್ಕೆ ಧರ್ಮದ ಲೇಪನವಾದಾಗ ಅದು ವಿಶಾಲವಾಗಿಯೂ, ಜಾತಿಯ ಲೇಪನವಾದಾಗ ಸಂಕುಚಿತವಾಗಿಯೂ ತೋರುತ್ತದೆ. ಸಮಾಜವು ನಿತ್ಯಪರಿವರ್ತನ ಶೀಲವಾದುದು, ಇದು ದಿನದಿಂದ ದಿನಕ್ಕೆ ಕಾಲದಿಂದ ಕಾಲಕ್ಕೆ ಚಕ್ರದ ಗತಿಯಿಂದ ಬದಲಾಗುತ್ತ ಹೋಗುತ್ತದೆ. ಈ ಬದಲಾವಣೆಗೆ ವ್ಯಕ್ತಿಗಳ ದೇಶದ ಚಿಂತನೆ ಇರುತ್ತದೆ.” 'Change is the only unchanging reality in the world' ಎನ್ನುವಂತೆ ಬದಲಾವಣೆ ಸಮಾಜದ ಒಂದು ನಿರಂತರ ಪ್ರಕ್ರಿಯೆ. ವ್ಯಕ್ತಿಯ ಹುಟ್ಟಿನಿಂದ ಅವನ ಮರಣದ ವರೆಗಿನ ಜೀವನ ಕಾಲದ ನಿಬಂಧನೆಯನ್ನು ಹೇಳುತ್ತದೆ. ಕಾಲ ವ್ಯಕ್ತಿಯನ್ನು ಸಮಾಜದಲ್ಲಿ ನಿರ್ಬಂಧಿಸುತ್ತದೆ ಕಾಲ ಸಮಾಜವೆಂಬ ಒಂದು ಛತ್ರದ ಅಡಿಯಲ್ಲಿ ಬಾಳಲು ಸಹಾಯಕವಾಗುತ್ತದೆ. ಸಮಾಜದಲ್ಲಿ ಕಾನೂನುಗಳ ನೀತಿ ನಿಬಂದನೆಗಳಿರುತ್ತವೆ. ನೀತಿ ನಿರ್ಬಂಧನೆಗಳಿಲ್ಲದ ಸಮಾಜ ತನ್ನ ಅಸ್ತಿತ್ವವನ್ನು ಬಹುಬೇಗ ಕಳೆದುಕೊಳ್ಳುತ್ತದೆ. ಪ್ರತಿಯೊಂದು ಸಮಾಜವು ಭಿನ್ನವಾಗಿರುತ್ತದೆ. ಪ್ರತಿಯೊಂದು ಸಮಾಜವು

ಭಿನ್ನವಾಗಿರುತ್ತದೆ. ಅದು ತನ್ನದೇ ಆದ ನಿಯಮಗಳನ್ನು ಪದ್ಧತಿಗಳನ್ನು ಹೊಂದಿರುತ್ತದೆ. ಎಲ್ಲಾ ನೀತಿ, ನಿಯಮಗಳು, ಪದ್ಧತಿಗಳು, ನಿರ್ಬಂದಗಳ ಹಿಂದೆ ಇರುವ ಉದ್ದೇಶ ವ್ಯಕ್ತಿಯ ಸಮೂಹದ ಸರ್ವಾಂಗೀಣ ಉನ್ನತಿಯೇ ಆಗಿರುತ್ತದೆ.

“ಧರ್ಮ ಪ್ರತಿಯೊಬ್ಬನಿಗೂ ನೀತಿ ಸಂಹಿತೆಯನ್ನು ಬೋಧಿಸುತ್ತದೆ. ವ್ಯಕ್ತಿಯ ಸಮೂಹದ ದುರ್ನಡತೆಯನ್ನು ನಿರ್ಬಂಧಿಸುತ್ತದೆ. ಸತ್ಯ-ಅಸತ್ಯ, ಒಳ್ಳೆಯ-ಕೆಟ್ಟ ವಿಚಾರಗಳ ಭೇದವನ್ನು ತಿಳಿಸಿ, ಮುನ್ನಡಿಸುತ್ತದೆ. ಅಂತೆಯೇ ಸಮಾಜ ರಚನಾಕಾರರು, ಚಿಂತಕರು, ಈ ಸಮಾಜ ರಚನೆಯ ಕಾಲಕ್ಕೆ ಅಥವಾ ಸಮಾಜ ಸುಧಾರಣೆ ಕಾರ್ಯಕ್ಕೆ ಪ್ರಮುಖವಾಗಿ ಧರ್ಮವನ್ನು ಆಶ್ರಯಿಸುತ್ತಾರೆ. ಅಂದರೆ ಧರ್ಮದ ಮುಖಾಂತರ ಸಮಾಜದ ಸುಧಾರಣೆಗೆ ಹೊಸ ಸಮಾಜ ರಚನೆಗೆ ಪ್ರಯತ್ನಿಸುತ್ತಾರೆ. ಧರ್ಮವು ಇಲ್ಲಿ ಸಮಾಜ ರಚನೆಗೆ ಸಹಾಯವಾಗಬಹುದು ಅಥವಾ ಪ್ರೇರಕವಾಗಬಹುದು.”[೧೦]

ಯೇಸುಕ್ರಿಸ್ತ ಹೊಸ ಸಮಾಜದ ನಿರ್ಮಾಣದತ್ತ ಮುನ್ನಾಗಿ ಒಂದು ಹೊಸ ಆಂದೋಲನವನ್ನೇ ಆರಂಭಿಸಿದ. ಬಡತನ, ರೋಗ ರುಜಿನಗಳು, ಆರ್ಥಿಕ ಪರಿಸ್ಥಿತಿಯಿಂದ, ಪುರೋಹಿತಶಾಹಿಯ ದೌರ್ಜನ್ಯದಿಂದ, ಆಡಳಿತ ವರ್ಗದವರ ಅಟ್ಟಹಾಸದಿಂದಾಗಿ ಅಂದಿನ ಜನಸಾಮಾನ್ಯ ಯೆಹೂದಿ ಸಮಾಜ ಬಳಲಿ ಬೆಂಡಾಗಿತ್ತು. ಧಾರ್ಮಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ತತ್ತರಿಸಿ ಹೋಗಿದ್ದ ಯೆಹೂದಿ ಶೋಷಿತ ಸಮಾಜಕ್ಕೆ ಒಂದು ಸುಧೃಡ, ಸುಶೀಲ, ಸುಸಂಸ್ಕೃತ, ಆತ್ಮವಿಶ್ವಾಸದ ರೂಪ ಕೊಟ್ಟು ತನ್ನ ಆಂದೋಲನದ ಮೂಲಕ ಹೊಸ ಸಮಾಜವನ್ನು ಕಟ್ಟುವ ಆಲೋಚನೆ ಮಾಡಿದ. ತಾನು ಬಾಳಿನುದ್ದಕ್ಕೂ ಕಂಡಿದ್ದ ಶೋಷಿತ ವರ್ಗದವರ ನೋವ, ಅವಮಾನ, ಬೇಗುದಿಗಳನ್ನು ಅರ್ಥಮಾಡಿಕೊಂಡಿದ್ದ ಯೇಸು ಅವರ ಬದುಕನ್ನು ಹಸನು ಮಾಡಲು ಅವರಲ್ಲಿ ತಾನೊಬ್ಬನಾಗಿ ತನ್ನ ಬೋಧನೆಗಳ ಮೂಲಕ ಅವರನ್ನು ತಿದ್ದಿ ರೂಪಕೊಟ್ಟು ಆ ಸಮಾಜದಲ್ಲಿದ್ದ ಕೊಳಚೆಯನ್ನು ಸರಿಗೊಳಿಸಿ ಪಾಚಿ-ವೀಚಿಗಳನ್ನೂ ಕಿತ್ತೆಸೆದು ಹೊಸ ಸಮಾಜವನ್ನು ಕಟ್ಟಲು ಮುಂದಾದ.

ತನ್ನ ಹೊಸ ಸಾಮ್ರಾಜ್ಯವನ್ನು ಯೇಸುಕ್ರಿಸ್ತ ದೇವರ ಸಾಮ್ರಾಜ್ಯ 'Kingdom of God' ಎಂದು ಕರೆದ. ಹೇಳಿ ಕೇಳಿ ಕ್ರಿಸ್ತನ ಜಗತ್ತು ಬಡವರ, ದಲಿತರ, ಶೋಷಿತರ ಜಗತ್ತಾಗಿತ್ತು. ದಲಿತನನ್ನು ಒಳಿತನನ್ನಾಗಿ ಮಾಡುವುದೇ ತನ್ನ ಮುಖ್ಯ ಕರ್ತವ್ಯ ಎಂಬುದನ್ನು ಯೆಶಾಯ ಪ್ರವಾದಿ ನೂರಾರು ವರ್ಷಗಳ ಹಿಂದೆಯೇ ಪ್ರವಾದಿಸಿದ್ದ. ಈ ಪ್ರವಾದಿಯ ಮಾತುಗಳನ್ನು ಸುವಾರ್ತಿಕನಾದ ಲೂಕನು ನೇರವಾಗಿ ಉದ್ಘೋಷಿಸಿ ಯೇಸುಕ್ರಿಸ್ತನ ಕಾರ್ಯವೇನೆಂಬುದನ್ನು ತೋರಿಸುತ್ತಾನೆ.

ಯೇಸುಕ್ರಿಸ್ತ ತನ್ನ ನವ ಸಮಾಜ ನಿರ್ಮಾಣದರಲ್ಲಿ ಮೊದಲು ಮಾಡಬೇಕಾಗಿರುವುದು ದೀನದಲಿತರಿಗೆ ಆತ್ಮವಿಶ್ವಾಸವನ್ನು ತುಂಬುವ ಹಾಗೂ ಶುಭಸಂದೇಶವನ್ನು ಸಾರುವುದು; ಮನ ನೊಂದವರನ್ನು ಸಂತೈಸುವುದು;

ಶತಶತಮಾನಗಳಿಂದ ವಿವಿಧ ಕಷ್ಟ ಕೊಟಲೆ, ಹಣೆ ಬರಹ, ವಿಧಿ, ಮುಂತಾದವುಗಳಿಂದ ಬಂಧಿತರಿಗೆ ಬಿಡುಗಡೆ ಕೊಟ್ಟು ಸರ್ವರಿಗೂ ಮುಕ್ತಿ ತೋರಿಸುವುದೇ ಯೇಸುಕ್ರಿಸ್ತನ ಮುಖ್ಯ ಕಾರ್ಯವಾಗಿತ್ತು. ಇಲ್ಲಿ ದೀನ ದಲಿತರಿಗೆ ಶುಭಸಂದೇಶ ಬೋಧಿಸುವ ಗುರುತರವಾದ ಹೊಣೆಗಾರಿಕೆ ಯೇಸುಕ್ರಿಸ್ತನದಾಗಿತ್ತು. ಇಲ್ಲಿ ಶುಭಸಂದೇಶ ಎಂದರೆ ಒಳ್ಳೆಯ ಸಮಾಚಾರ ಮನಸ್ಸಿಗೆ ನೆಮ್ಮದಿ ತರುವ ಬದುಕಿಗೆ ಭರವಸೆ ತರುವ ಶುಭ ಸಂಗತಿ. ಯೇಸುಕ್ರಿಸ್ತ ಸಾರಿದ್ದು ಇಂಥಾ ಬಿಡುಗಡೆ ಮತ್ತು ಭರವಸೆಯ ಸಮಾಚಾರವಾದ್ದರಿಂದ ದಲಿತರಿಗೆ, ಬಡವರಿಗೆ ಶೋಷಿತರಿಗೆ ಅದು ನಿಜವಾಗಿಯೂ ಶುಭ ಸಂದೇಶವೇ ಆಗಿತ್ತು.

"ಯೇಸುಕ್ರಿಸ್ತನ ಈ ಶುಭ ಸಂದೇಶ ಬಡವರ ಬದುಕಿಗೆ ಒಂದು ಪ್ರವಾದನೆಯಾಗಿತ್ತು. ಅವರ ಭವಿಷ್ಯಕ್ಕೆ ಭರವಸೆ ನೀಡುವ ಮಾತುಗಳಾಗಿದ್ದವು. ತಮ್ಮ ಪರಿಸ್ಥಿತಿ ಯಾವಾಗಲೂ ಹೀಗೆಯೇ ಇರಲಾರದು, ಬವಣೆಗಳಿಂದ ಬಿಡುಗಡೆ ಇದೆ ಎಂಬ ನಂಬಿಕೆಯನ್ನು ಕ್ರಿಸ್ತ ಅವರಿಗೆ ಬಿತ್ತಿದ. ಇಸ್ರೇಯಲಿರಿಗೆ ಧರ್ಮದಲ್ಲಿ ಅತಿಶ್ರದ್ಧೆಯಿದ್ದುದರಿಂದ ಕ್ರಿಸ್ತ ಧಾರ್ಮಿಕಭಾಷೆಯನ್ನೇ ಬಳಸಿದ. 'ದೇವರ ಸಾಮ್ರಾಜ್ಯ ನಿಮ್ಮಲ್ಲಿ ಬರಲಿದೆ' ಎಂದಾಗ ದೇವರ ಅನುಗ್ರಹದಿಂದ ನಿಮಗೆ ಹೊಸ ಬದುಕು ಬರಲಿದೆ ಎಂದೇ ಅರ್ಥ. ಕ್ರಿಸ್ತ ಹೇಳಿದ 'ದೇವರ ಸಾಮ್ರಾಜ್ಯ' ಸತ್ತ ಮೇಲೆ ಮುಂದಿನ ಬದುಕಲ್ಲಿ ಸಿಗಬಹುದಾದ ದೇವರ ಸಾಮ್ರಾಜ್ಯವನ್ನು ಸೂಚಿಸುವುದಿಲ್ಲ. ಅದು ಇಲ್ಲೇ, ಈ ಬದುಕಲ್ಲೇ ಬರುವ ದೇವರ ಸಾಮ್ರಾಜ್ಯ. ಈ ಕಾರಣದಿಂದಲೇ ಕ್ರಿಸ್ತ ಆ ಜನರಿಗೆ 'ದೇವರ ಸಾಮ್ರಾಜ್ಯ ನಿಮ್ಮ ಮಧ್ಯದಲ್ಲೆ ಇದೆ', ದೇವರ ಸಾಮ್ರಾಜ್ಯ ನಿಮ್ಮದು ಎನ್ನುತ್ತಿದ್ದ (ಲೂಕ ೬:೨೦)"[೧೧]

ತಾನು ಆಲೋಚಿಸುತ್ತಿದ್ದ ಸಾಮಾಜಿಕ ಸಮತೆಯ ಸಮಾಜದ ಬಗ್ಗೆ ಯೇಸುಕ್ರಿಸ್ತ ತನ್ನ ಸಾರ್ವಜನಿಕ ಜೀವನಾದ್ಯಂತ ಉತ್ಸುಹಕನಾಗಿರುವುದನ್ನು ಸುವಾರ್ತೆಗಳಲ್ಲಿ ಕಾಣಬಹುದು. "ದೈವನಿಷ್ಠೆಯಿಲ್ಲದ ಈ ಪಾಪಿಷ್ಟ ಪೀಳಿಗೆಯವರು......" (ಲೂಕ ೮:೩೮) ಎನ್ನುವುದರ ಮೂಲಕ ಜನರ ಪಾಪ ಪ್ರವೃತ್ತಿಯನ್ನು ಕೇಳಿ ಇದಕ್ಕೆ ಕಾರಣ ಸೈತಾನ. ಯೇಸುಕ್ರಿಸ್ತನ ಪ್ರಕಾರ ಈ ಸಾಮ್ರಾಜ್ಯವನ್ನು ಆಳುತ್ತಿರುವವನು ಸೈತಾನ. ಈ ಪ್ರಪಂಚವನ್ನು ಆಳುತ್ತಿರುವುದು ಪಾಪವೇ. ಇದಕ್ಕೆ ಮುಖ್ಯವಾದ ಗುರುತು, ಶೋಷಿತ ಸಮಾಜ. 'ಇಲ್ಲದವರ' ಮೇಲೆ 'ಉಳ್ಳವರ' ದಬ್ಬಾಳಿಕೆ. ಧಾರ್ಮಿಕ ಮುಖಂಡರ ಡಾಂಬಿಕತೆ, ಕಪಟತನ, ಸೋಗಲಾಡಿತನವನ್ನು ಕಣ್ಣಾರೆ ಕಂಡಿದ್ದ ಕ್ರಿಸ್ತನಿಗೆ ಇವರು ಬಡಜನರನ್ನು ಧಾರ್ಮಿಕವಾಗಿ ಆರ್ಥಿಕವಾಗಿ ಹೇಗೆ ಶೋಷಿಸುತ್ತಿದ್ದರು ಎಂಬುದನ್ನು ಅರಿತಿದ್ದ. ಪುರೋಹಿತಶಾಹಿಯ ದಮನಕಾರಿ ಪ್ರವೃತ್ತಿಯನ್ನು ಯೇಸುಕ್ರಿಸ್ತ ಖಂಡಿಸುತ್ತಿದ್ದ. ಸೈತಾನ ಈ ಸಮಾಜವನ್ನು ಪರೋಕ್ಷವಾಗಿ ಆಳುತ್ತಿದ್ದ.

"ಯೇಸುಕ್ರಿಸ್ತನ ನವ ಸಮಾಜ ಸೈತಾನನ ನೊಗವನ್ನು ಕಿತ್ತೆಸೆದು ದೇವರ ರಾಜ್ಯದತ್ತ ಮುಖ ಮಾಡಬೇಕಾಗುತ್ತದೆ. ದೇವರ ರಾಜ್ಯ ಬಂದಾಗ ಇಲ್ಲಿ ಕೆಡುಕುತನ, ದುಷ್ಟತನ, ಭ್ರಷ್ಟಚಾರವೆಲ್ಲಾ ಅಳಿದು ಒಳ್ಳೆತನವೆ ರಾಜ್ಯವಾಳುತ್ತದೆ. ದೇವರಾತ್ಮನಿಂದ ನಡೆಸಲ್ಪಡುವ ಸಮಾಜ ಸಮೃದ್ಧವಾದ, ಸುಭಿಕ್ಷವಾದ

ಧರ್ಮ ರಾಜ್ಯವಾಗಿರುತ್ತದೆ ಎಂಬುದನ್ನು ಅರಿತಿದ್ದು ಜನಕ್ಕೆ ಅದನ್ನೇ ಬೋಧಿಸುತ್ತಿದ್ದರು. ಕ್ರಿಸ್ತ ಜನರೊಂದಿಗೆ ಸ್ಪಂದಿಸುತ್ತಿದ್ದ ರೀತಿ, ರೋಗ-ರುಜಿನಗಳಿಂದ ಗುಣಪಡಿಸುತ್ತಿದ್ದ ಕಾರ್ಯ ನಿಜವಾಗಿಯೂ ಸೈತಾನನ ಮನೆಗೆ ನುಗ್ಗಿ ಅವನ ಸ್ವತ್ತನ್ನೇ ಸೂರೆ ಮಾಡುವುದಾಗಿತ್ತು. (ಮಾರ್ಕ ೩:೨೭) ಒಳ್ಳೆಯತನ ದುಷ್ಟತನಕ್ಕಿಂತ ಹೆಚ್ಚು ಪರಾಕ್ರಮವುಳ್ಳದಾಗಿದ್ದರಿಂದ ಒಂದಲ್ಲಾ ಒಂದು ದಿನ ದೇವರ ಸಾಮ್ರಾಜ್ಯ ಈ ಸೈತಾನ ಸಾಮ್ರಾಜ್ಯವನ್ನು ಕೆಡವಿ ರಾಜ್ಯವಾಳುತ್ತದೆ ಎಂಬ ಆಳವಾದ ನಂಬಿಕೆ ಕ್ರಿಸ್ತನಿಗಿತ್ತು."[೧೨] ಆದ್ದರಿಂದಲೇ ಪ್ರತಿಯೊಬ್ಬರೂ ಈ ದೇವರ ಸಾಮ್ರಾಜ್ಯಕ್ಕೆ ಹಾತೊರೆಯಬೇಕೆಂದು ಕೊಟ್ಟರು. 'ಯಾರು ಇಬ್ಬರೂ ಯಜಮಾನರಿಗೆ ಸೇವೆ ಸಲ್ಲಿಸಲಾಗದು. ಆದೇರೀತಿ ದೇವರಿಗೂ ದ್ರವ್ಯಕ್ಕೂ ಒಟ್ಟಿಗೆ ಸೇವೆ ಮಾಡಲು ನಿಮ್ಮಿಂದಾಗದು' ಎನ್ನುವುದರ ಮೂಲಕ ಹಣವನ್ನು ಬೆಂಬತ್ತಿ ಹೋಗುವವರು ಎಂದಿಗೂ ದೇವರನ್ನು ಹುಡುಕಲಾರರು ಎಂದು ಕ್ರಿಸ್ತ ಕರೆ ನೀಡುತ್ತಾನೆ. ಇಂದಿನ ಸಮಾಜದಲ್ಲಿ ಹಣ ಅಗತ್ಯವಾಗಿ ಬೇಕು. ಆದರೆ ಧನಪಿಶಾಚಿಯಾಗಿ ಅದರ ಹಿಂದೆ ಹೋಗುವ ಯಾವುದೇ ಸಮಾಜವಾಗಲಿ ದೇವರನ್ನು ಸೇವಿಸುವುದಿಲ್ಲ ಎಂಬ ಕ್ರಿಸ್ತನ ಅಭಿಮತವನ್ನು ಮತ್ತಾಯ ತನ್ನ ಸುವಾರ್ತೆಯಲ್ಲಿ ದಾಖಲಿಸುತ್ತಾನೆ.

ಶ್ರೀಮಂತನಿಗೆ ದೇವರ ಸಾಮ್ರಾಜ್ಯ ಅರ್ಥಾತ್ ಯೇಸುಕ್ರಿಸ್ತನ ನೂತನ ಸಾಮಾಜಿಕ ಸಮತೆಯ ಸಮಾಜವನ್ನು ಪ್ರವೇಶಿಸುವುದು ಕಷ್ಟಕರ. ಏಕೆಂದರೆ ಹಣ ತನ್ನ ಕೈಬಿಟ್ಟು ಹೋಗುವುದನ್ನು ಯಾವ ಶ್ರೀಮಂತನು ಇಷ್ಟಪಡುವುದಿಲ್ಲ. ಯೇಸು ತನ್ನ ನೂತನ ಸಮಾಜದಲ್ಲಿ ಇಷ್ಟಪಡುವುದು ಹಂಚಿ ಜೀವಿಸುವ ಬದುಕನ್ನು. ಅದಕ್ಕಾಗಿ ತನ್ನ ಬಳಿ ಬಂದು ದೇವರ ಸಾಮ್ರಾಜ್ಯ ಸೇರಲು ತಾನೇನು ಮಾಡಬೇಕೆಂದು ಶ್ರೀಮಂತ ಯುವಕನೊಬ್ಬ ಕೇಳಿದಾಗ ಯೇಸುಕ್ರಿಸ್ತ ಹೇಳುವುದು: "ಹೋಗು ನಿನ್ನ ಆಸ್ತಿ ಪಾಸ್ತಿಯನ್ನೆಲ್ಲಾ ಮಾರಿ ಬಡಬಗ್ಗರಿಗೆ ದಾನಮಾಡು ಸ್ವರ್ಗದಲ್ಲಿ ನಿನಗೆ ಸಂಪತ್ತು ಇರುತ್ತದೆ."

ಶ್ರೀಮಂತರು ಎಲ್ಲಿಯತನಕ ಸುಖ-ಸಂಪತ್ತನ್ನು ಬಡವರೊಂದಿಗೆ ಹಂಚಿಕೊಳ್ಳುವುದಿಲ್ಲವೋ ಅಲ್ಲಿಯತನಕ ಸ್ವರ್ಗ ಸಾಮ್ರಾಜ್ಯದಲ್ಲಿ ಪಾಲು ಪಡೆಯುವುದಿಲ್ಲ ಎಂಬುದು ಯೇಸುಕ್ರಿಸ್ತನ ಅಭಿಮತ. ಒಂದೇ ಮಾತಿನಲ್ಲಿ ಹೇಳುವುದಾದರೆ ಯೇಸುಕ್ರಿಸ್ತನ ನೂತನ ಸಾಮ್ರಾಜ್ಯದಲ್ಲಿ ಹಂಚುವುದು ಎಂದರೆ "ಉಳ್ಳವರು ಇಲ್ಲದವರ ಬಗ್ಗೆ ಕಾಳಜಿ" ತೋರುವುದೇ ಆಗಿದೆ.

ಯೇಸುಕ್ರಿಸ್ತನ ಆಲೋಚನೆಯ ಸಾಮಾಜಿಕ ಸಮಾನತೆಯ ನವಸಮಾಜವನ್ನು ಸ್ವರ್ಗ ಸಾಮ್ರಾಜ್ಯ ದೇವರ ಸಾಮ್ರಾಜ್ಯ ಎಂದು ಕರೆಯುತ್ತಾರೆ. ಈ ಸಾಮ್ರಾಜ್ಯದಲ್ಲಿ ಸ್ಥಾನಮಾನಗಳ ವಿಷಯ ಬಂದಾಗ ಯೇಸುಕ್ರಿಸ್ತ ಶ್ರೇಣೀಕೃತ ಸಮಾಜದ ಮೌಲ್ಯಗಳನ್ನು ಕಿತ್ತೆಸೆದು ಅದು ಸೈತಾನನ ಕುಲವೆಂದು ಭಾವಿಸಿ ವಿನಮ್ರವಾಗಿ ಜೀವಿಸುವುದಕ್ಕೆ ಕರೆ ನೀಡಿದ. ತನ್ನ ನೂತನ ಸಾಮ್ರಾಜ್ಯಕ್ಕೆ ಸೇರುವವರು ಯಾರೆಂಬುದನ್ನು ಯೇಸು ಒಂದು ಚಿಕ್ಕ ಮಗುವನ್ನು ಹತ್ತಿರಕ್ಕೆ ಕರೆದು ಶಿಷ್ಯರ ನಡುವೆ ನಿಲ್ಲಿಸಿ ಹೀಗೆಂದೆ "ನೀವು ಪರಿವರ್ತನೆ ಹೊಂದಿ ಮಕ್ಕಳಂತೆ ಆಗದಿದ್ದರೆ ಸ್ವರ್ಗ ಸಾಮ್ರಾಜ್ಯವನ್ನು ಸೇರಲಾರಿರಿ ಎಂದು ನಿಶ್ಚಯವಾಗಿ ಹೇಳುತ್ತೇನೆ.

ಈ ಮಗುವಿನಂತೆ ನಮ್ರಭಾವನೆಯುಳ್ಳವನೇ ಸ್ವರ್ಗ ಸಾಮ್ರಾಜ್ಯದಲ್ಲಿ ಎಲ್ಲರಿಗೆ ದೊಡ್ಡವನು." (ಮತ್ತಾಯ ೧೮:೧-೪) ಅಂದಿನ ಯೆಹೂದ್ಯ ಸಮಾಜದಲ್ಲಿ ಒಂದು ಚಿಕ್ಕ ಮಗುವಿಗೆ ಯಾವುದೇ ಸ್ಥಾನಮಾನಗಳಿರಲಿಲ್ಲ. ಅದು ಅಲ್ಪತನದ ಪ್ರತೀಕವಾಗಿತ್ತು. ಆದ್ದರಿಂದಲೇ ಯೇಸುಕ್ರಿಸ್ತ ಮಗುವಿನ ಉದಾಹರಣೆ ಮುಂದಿಡುತ್ತಾ ಪ್ರತಿಷ್ಠೆ, ಸ್ಥಾನಮಾನಗಳನ್ನು ಖಂಡಿಸುತ್ತಾನೆ.

ಯೇಸುಕ್ರಿಸ್ತ ತನ್ನ ನೂತನ ಸಮಾಜದಲ್ಲಿ ಮೊದಲಿಗನಾಗಬೇಕಾದವನು ಎಲ್ಲರ ಸೇವೆ ಮಾಡುವವನಾಗಿರಬೇಕು (ಮಾರ್ಕ ೯:೩೫) ಎನ್ನುತ್ತಾನೆ. ತಗ್ಗಿ ಬಗ್ಗಿ ನಡೆಯಬೇಕು. 'ತನ್ನನ್ನೇ ತಗ್ಗಿಸಿಕೊಳ್ಳುವನು ಹೆಚ್ಚಿಸಲ್ಪಡುವನು' ಎನ್ನುವುದರ ಮೂಲಕ ಯೇಸುಕ್ರಿಸ್ತ ಲೌಕಿಕ ಪ್ರತಿಷ್ಠೆಗಳಿಗೆ ಧೋರಣೆಗಳಿಗೆ ವಿರುದ್ಧವಾದ ನಿಲುವನ್ನು ಹೊಂದುತ್ತಾನೆ. ತನ್ನ ಸಾಮ್ರಾಜ್ಯದಲ್ಲಿ ಯಾವುದೇ ಸ್ಥಾನ-ಪ್ರತಿಷ್ಠೆ, ಉಚ್ಚ-ನೀಚ, ಮೇಲು-ಕೀಳು ಮುಂತಾದ ತಾರತಮ್ಯದ ಭಾವನೆಗಳಿರಲು ಸಾಧ್ಯವಿಲ್ಲ ಬದಲಾಗಿ ಎಲ್ಲರಿಗೂ ಸಮಾನ ಪ್ರೀತಿ ಸಮಾನ ಗೌರವ ಸಲ್ಲತಕ್ಕದು. ಸ್ಥಾನಮಾನ ಬರುವುದು ನಾವೆಲ್ಲ ದೇವರ ಮಕ್ಕಳು ಎಂಬ ಕಾರಣಕ್ಕಾಗಿ ಎಂಬುದು ಕ್ರಿಸ್ತನ ಅಭಿಮತವಾಗಿತ್ತು.

"ತನ್ನ ಸಾಮ್ರಾಜ್ಯದಲ್ಲಿ ಎಲ್ಲರೂ ಐಕ್ಯಮತ್ಯದಿಂದ ಒಟ್ಟಾಗಿ ಬಾಳಬೇಕೆಂಬುದು ಯೇಸುಕ್ರಿಸ್ತನ ಕನಸು. ಈ ಐಕ್ಯಮತ್ಯವನ್ನು ಪ್ರೀತಿಯಿಂದ ಸಾದಿಸಿ ಎಂಬುದಾಗಿ ಬೋಧಿಸುತ್ತಿದ್ದ. ಇದಕ್ಕೆ ಪೂರಕವಾಗಿ "ನಾನು ಹೇಳುವುದನ್ನು ಮನ್ನಿಸಿರಿ ನಿಮ್ಮ ಶತ್ರುಗಳನ್ನು ಪ್ರೀತಿಸಿರಿ ನಿಮ್ಮನ್ನು ಪೀಡಿಸುವವರಿಗಾಗಿ ಪ್ರಾರ್ಥನೆ ಮಾಡಿರಿ" (ಮತ್ತಾಯ ೫:೪೪) ಎನ್ನುವುದರ ಮೂಲಕ ಇಡೀ ಮನುಕುಲವನ್ನೇ ಪ್ರೀತಿಸಲು ಕರೆ ನೀಡಿದ. ಏಕೆಂದರೆ ಎಲ್ಲರು ದೇವರ ಮಕ್ಕಳು. ಎಲ್ಲರೂ ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಆಗಿರುವಾಗ ಅವರನ್ನು ಪ್ರೀತಿಸುವುದು ಮೊದಲ ಕರ್ತವ್ಯ ಎಂದು ಯೇಸು ಸಾರಿದ. ಇದೇ ಸ್ವರ್ಗ ಸಾಮ್ರಾಜ್ಯದ ಪ್ರಥಮ ನಿಲುವು ಎಂದು ಘೋಷಿಸಿದ.

ಶತಶತಮಾನಗಳಿಂದ ಬಡವರು, ಶೋಷಿತರು ಪ್ರೀತಿ ಗೌರವದಿಂದ ವಂಚಿತರಾಗಿದ್ದು ಸಮಾಜದ ಮುಖ್ಯ ವಾಹಿನಿಯಿಂದ ತಿರಸ್ಕೃತರಾಗಿದ್ದರು. ಅಂಥವರಿಗೆ ದೇವರ ಪ್ರೀತಿ ತೋರಿಸುವುದು ದೇವರ ಸಾಮ್ರಾಜ್ಯದ ಮೊದಲ ಆದ್ಯತೆಯಾಗಿತ್ತು. ಸಹೋದರ ಪ್ರೇಮ, ಐಕ್ಯತೆ, ಒಗ್ಗಟ್ಟು ಇವು ಸ್ವರ್ಗ ಸಾಮ್ರಾಜ್ಯಕ್ಕೆ ಅರ್ಹತೆ. ಅಂತಿಮವಾಗಿ ಶತ್ರುಗಳು ಕೂಡ ಮಿತ್ರರಾಗಬಲ್ಲರು ಎಂಬ ಅರಿವು ಮೂಡಿದಾಗ ದೇವರಸಾಮ್ರಾಜ್ಯ ಮೂಡಿ ಬರಲು ಸಾದ್ಯ. ಯಾವುದೇ ಒಂದು ಸಮಾಜದಲ್ಲಿ ಕಟ್ಟಳೆ-ಕಾನೂನುಗಳು, ರೀತಿ-ರಿವಾಜುಗಳು ಅದರ ಸುಲಲಿತವಾದ ಮುನ್ನಡೆಗೆ ಅಗತ್ಯ. ಕ್ರಿಸ್ತನ ಸಮಾಜದಲ್ಲಿ ಆ ಕಾಲದಲ್ಲಿ ಮುಖಂಡರು ಮತ್ತು ಶಾಸ್ತ್ರಿಗಳು ಕಾನೂನಿಗೆ ಅಕ್ಷರಶಃ ಗುಲಾಮರಾಗಿದ್ದರು. ಕಾನೂನು ಇರುವುದು ಮನುಷ್ಯ ಉಪಯೋಗಕ್ಕೆ ಹೊರತು ಮನುಷ್ಯ ಉರುವುದು ಕಾನೂನಿಗಲ್ಲ. 'ಕಾನೂನಿಗಿಂತ ಮನುಷ್ಯ ಮೇಲು' ಎಂಬ ಅಂಶವನ್ನು ಮರೆತಿದ್ದರು. "ಯೇಸುಕ್ರಿಸ್ತ ತನ್ನ ಸಾಮ್ರಾಜ್ಯದಲ್ಲಿ ಉಸಿರುಗಟ್ಟಿಸುವ ಕಾನೂನುಗಳನ್ನು ಧರ್ಮಶಾಸ್ತ್ರದ

ಬಿಗಿ ಹಿಡಿತದಿಂದ ಬಿಡುಗಡೆಗೊಳಿಸುವುದೇ ಮೊದಲ ಆದ್ಯತೆಯಾಗಿತ್ತು. ತನ್ನ ಸಾಮ್ರಾಜ್ಯದ ರಾಜಕೀಯ ವ್ಯವಸ್ಥೆಯಲ್ಲಿ ಅಧಿಕಾರ, ಪ್ರಭುತ್ವ, ಆಳ್ವಿಕೆ ಎಲ್ಲವೂ ಕೇವಲ ಸೇವಾ ಸಾಧನಗಳಾಗಿರುತ್ತದೆ. ಈ ಆಳ್ವಿಕೆಯಲ್ಲಿ ಎಲ್ಲಾ ರೀತಿಯ ಶೋಷಣೆ, ದಬ್ಬಾಳಿಕೆ, ಗುಲಾಮಗಿರಿಯನ್ನು ರದ್ದು ಮಾಡಿದ ಮೇಲೆ ಪ್ರೀತಿ, ದಯೆ ದಾಕ್ಷಿಣ್ಯದಿಂದ ಒಬ್ಬರಿಗೊಬ್ಬರು ಸೇವೆ ಮಾಡುವ ನೆಲೆ ಸೃಷ್ಟಿಯಾಗುತ್ತದೆ. ಇದೇ ನಿಜವಾದ ಧರ್ಮಶಾಸ್ತ್ರದ ಉದ್ದೇಶ ಹಾಗೂ ಧರ್ಮನಿಷ್ಠೆ ಎಂದು ಯೇಸುಸಾರಿದ. “ಧರ್ಮಶಾಸ್ತ್ರಿಗಳ ಹಾಗೂ ಫರಿಸಾಯರ ಧರ್ಮನಿಷ್ಠೆಗಿಂತ ನಿಮ್ಮ ಧರ್ಮನಿಷ್ಠೆ ಉತ್ತಮವಾಗದ ಹೊರತು ನೀವು ಸ್ವರ್ಗ ಸಾಮ್ರಾಜ್ಯವನ್ನು ಸೇರಲಾರಿರಿ. ಇದು ನಿಶ್ಚಯ” ಎಂದು ಸಾರಿದ.”[೧೩] (ಮತ್ತಾಯ ೫.೨೦)

ಯೇಸುಕ್ರಿಸ್ತ ‘ಚಕ್ರವರ್ತಿಗೆ ಸಲ್ಲತಕ್ಕದ್ದನ್ನು ಚಕ್ರವರ್ತಿಗೂ, ದೇವರಿಗೆ ಸಲ್ಲತಕ್ಕದ್ದನ್ನು ದೇವರಿಗೆ ಸಲ್ಲಿಸಿರಿ’ ಎನ್ನುವುದರ ಮೂಲಕ ತಾನು ಸಮಾಜಮುಖಿಯಾಗಿದ್ದು ಪೌರಪ್ರಜ್ಞೆಯನ್ನು ತೋರುತ್ತಾನೆ. ತನ್ನ ನೂತನ ಸಮಾಜ ಎಲ್ಲ ತರಹದ ದಬ್ಬಾಳಿಕೆಯಿಂದ ಮುಕ್ತವಾಗಿರಬೇಕು. ಯಾವ ತರಹದ ಶೋಷಣೆಗಳು ಇರಬಾರದು ಎಂದು ಇಚ್ಚಿಸುತ್ತಾನೆ. ತನ್ನ ಸಾಮಾಜಿಕ ಸಮತೆಯ ರಾಜ್ಯ ಪ್ರೀತಿ ಮತ್ತು ಅನುಕಂಪದ ರಾಜ್ಯ ಎಂಬುದನ್ನು ಮತ್ತೆ ಮತ್ತೆ ಸಾಮತಿಗಳ ಮೂಲಕ ನಿರೂಪಿಸಿ ತೋರಿಸುತ್ತಾನೆ.

೫.೫ ಬಸವಣ್ಣನ ಕಾಲದ ಸಮಾಜ

ಬಸವಣ್ಣ ಹಾಗೂ ಅವನ ಪೂರ್ವಕಾಲದ ಅಂದರೆ ಹತ್ತು, ಹನ್ನೊಂದನೆಯ ಶತಮಾನದ ಅವಧಿಯಲ್ಲಿ ಆ ಕಾಲದ ಸಮಾಜವನ್ನು ಕುರಿತು ಹೇಳುವಾಗ ಯಾವುದೇ ಒಂದು ನಿರ್ದಿಷ್ಟ ರೂಪವು ಪ್ರತಿನಿಧಿಸುವುದೆಂದು ಹೇಳಲು ಬರುವುದಿಲ್ಲ. ಆ ಕಾಲದ ಸಮಾಜ ಅಸಮ ಸಾಮಾಜಿಕ ಬೆಳವಣಿಗೆಯ ಪ್ರತೀಕವಾಗಿತ್ತು. ಬಗೆಬಗೆಯ ಜೀವನೋಪಾಯಗಳು, ಉತ್ಪಾದನೆ ಹಾಗೂ ಹಂಚಿಕೆಗಳು ಜೊತೆ ಜೊತೆಯಲ್ಲಿಯೇ ಇದ್ದವು. ಬಸವಣ್ಣನ ಕಾಲದ ವೇಳೆಗೆ ಕರುನಾಡಿನ ಕರ್ನಾಟಕದ ಫಲವತ್ತಾದ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉಳುಮೆಯ ತಂತ್ರಜ್ಞಾನ, ರುತುಮಾನದ ಅರಿವು, ಮತ್ತಿತರ ಸಾಂಸ್ಥಿಕ ಕುಶಲತೆಗಳಿಂದಾಗಿ ಕೃಷಿಯು ಹೊಸ ಚಾಲನೆ ಪಡೆದಿತ್ತು. ಇದರಿಂದಾಗಿ ಭೂ ಮಾಲೀಕರು ಹಾಗೂ ಭೂಕೃಷಿ ಕಾರ್ಮಿಕರ ವರ್ಗ ತಲೆ ಎತ್ತಿತು. ಕೃಷಿ ಮಾಡುವ ಅಸಂಖ್ಯಾತ ರೈತವರ್ಗ ಕೇವಲ ಆಡಳಿತ ಕ್ಷೇತ್ರದಲ್ಲಿ ಕೇವಲ ಮೂಕ ಪ್ರೇಕ್ಷಕವಾಯಿತು. ದಾನ ಧರ್ಮವನ್ನು ಅವಲಂಬಿಸಿದ್ದ ಬ್ರಾಹ್ಮಣ ಹಾಗೂ ಜೈನರ ಗುಂಪು ಸ್ಥಳೀಯ ರೈತಾಪಿ ಜನರ ಮೇಲೆ ಭಾರಿ ಜಮೀನುಗಳನ್ನು ಉನ್ನತ ಸ್ಥಾನಗಳನ್ನು ಪಡೆದು ಅಧಿಕಾರ ಮಾಡುತ್ತಿತ್ತು. "ಸ್ಥಳೀಯ ರೈತಾಪಿ ಹಾಗೂ ಜನ ಸಾಮಾನ್ಯರ ಬಗ್ಗೆ ಶಾಸನಗಳಿಂದ ಹೆಚ್ಚೇನು ತಿಳಿದುಬರುವುದಿಲ್ಲ. ಉನ್ನತ ಜಾತಿಯ ಭೂಮಾಲೀಕರ ಬಗೆಗೆ ಸ್ಥಳೀಯ ಜನತೆ ನಿಷ್ಠೆಯಿಂದಿರುವುದೆಂದರೆ, ಅವರ ಸಾಮಾಜಿಕ-ಧಾರ್ಮಿಕ ಸಿದ್ಧಾಂತಗಳನ್ನು ವರ್ಣಾಶ್ರಮವನ್ನು, ಜಾತೀಯ ವಾಸ್ತವತೆಯನ್ನು ಒಪ್ಪಿಕೊಳ್ಳುವುದೇ ಎಂದು ಅರ್ಥವಾಗುತ್ತಿತ್ತು."[೧೪]

"ಶಾಸನಗಳು ಕೃಷಿ ಆರ್ಥಿಕತೆಯ ಚಿತ್ರವನ್ನು ನೀಡುತ್ತವೆ. ಆದರೆ ಕುಶಲ ಕರ್ಮಿಗಳು ಹಾಗೂ ವಣಿಕ ವರ್ಗಗಳು, ನೇಕಾರರು, ಗಾಣಿಗರು, ಲೇಹಾರರ ಸಂಘಗಳು ಸುಮಾರು ೧೨ನೇ ಶತಮಾನದ ಆರಂಭದಲ್ಲೆ ಪ್ರಧಾನವಾಗಿದ್ದವು. ಬಸವಣ್ಣನ ಕಾಲದ ಸಮಾಜವು ಯಾವ ರೀತಿಯಿಂದಲೂ ಏಕರೂಪದ್ದಾಗಿರಲಿಲ್ಲ. ಆಗಮಿಕ ಆರಾಧನೆಯ ಆಚರಣೆಗಳು, ಶಂಕರ, ರಾಮಾನುಜರ, ಮಧ್ವ ಈ ಮೂವರು ಆಚಾರ್ಯರು ಪ್ರವರ್ತಿಸಿ ಮುನ್ನಡೆಸಿದ ದಾರ್ಶನಿಕ ಮತ್ತು ಧಾರ್ಮಿಕ ಆಂದೋಲನಗಳು ಮೂಲತಃ ಸ್ವೀಕೃತ ಸಾಂಪ್ರದಾಯಿಕತೆಯ ಚೌಕಟ್ಟನ್ನು ಮೀರಲಿಲ್ಲ. ಜನ ಸಾಮಾನ್ಯರು ಇವರಿಂದ ದೂರವೇ ನಿಂತರು. ಇವರು ಸಹ ಶ್ರೀಸಾಮಾನ್ಯನನ್ನು ಅಷ್ಟಾಗಿ ಅಪ್ಪಿಕೊಳ್ಳಲಿಲ್ಲ. ಆಚಾರ್ಯರುಗಳು ಯಾರು ಸಾಮಾಜಿಕ ವ್ಯವಸ್ಥೆಯನ್ನು ನಿಜವಾಗಿ ಪ್ರಶ್ನಿಸಲಿಲ್ಲ, ಅಥವಾ ಸಂಪ್ರದಾಯದ ಚಿಪ್ಪನ್ನು ಒಡೆಯಲಿಲ್ಲ".[೧೫]

ಬಸವಣ್ಣನ ಕಾಲದಲ್ಲಿ ಸಮಾಜ ಒಡೆದ ಮನೆಯಾಗಿತ್ತು. “ಸಮಾಜದ ಒಡಕಿಗೆ ಮುಖ್ಯ ಕಾರಣಗಳೆಂದರೆ ವರ್ಣಾಶ್ರಮಧರ್ಮ ಧರ್ಮ ಸಹಿಷ್ಣುತೆ, ಅಧಿಕಾರ ಬಯಕೆ ಮತ್ತು ಸುಖ ಲೋಲುಪತೆ, ಆರ್ಥಿಕ ಪರಿಸ್ಥಿತಿ, ವಿಚಾರ ಶೂನ್ಯತೆ ಮತ್ತು ಉದಾಸೀನತೆ, ಹದಿನೆಂಟು ಜಾತಿಗಳು.”[೧೬] “ಬಸವಣ್ಣನವರ ಕಾಲಕ್ಕೆ ಸಮಾಜದಲ್ಲಿ ಹದಿನೆಂಟು ಜಾತಿಗಳಿದ್ದವು. ಅವರು ಬೇರೆ ಬೇರೆ ಕೇರಿಗಳಲ್ಲಿ ವಾಸಿಸುತ್ತಿದ್ದರು. ಅವುಗಳಿಗೆ ಶ್ರೇಣಿಗಳೆಂದು ಹೆಸರು. ಸಾರ್ವಜನಿಕ ಕಾರ್ಯಗಳಲ್ಲಿ ಆ ಹದಿನೆಂಟು ಜನ ಹೆಗ್ಗಡೆಗಳು ಒಟ್ಟಿಗೆ ಸೇರಿ ಅವರ ವಿಚಾರ ವಿನಿಮಯದಿಂದ ಕಾರ್ಯಕ್ರಮಗಳು ನಿರ್ಣೀತವಾಗಿ, ಅವುಗಳನ್ನು ಆಚರಿಸುವ ಪದ್ಧತಿ ಇತ್ತು. ಯಾರಾದರೂ ಆ ಕ್ರಮವನ್ನು ತಪ್ಪಿದರೆ ಬಹಿಷ್ಕೃತರಾಗುತ್ತಿದ್ದರು. ಸಾಮಾಜಿಕ ಕಟ್ಟುಗಳು ಹೀಗೆ ಬಿಗಿಯಾಗಿದ್ದರೂ ಬೇರೆ ಬೇರೆ ಮತಗಳಿಂದ ಈ ಬಂಧನಗಳಲ್ಲಿ ಶಿಥಿಲತೆಯುಂಟಾಯಿತು. ಜನರು ಉದಾಸೀನರಾಗಿದ್ದುದರಿಂದ ಅವರ ಮಾನಸಿಕ ಸ್ಥಿತಿಯೂ ಬಲಿಷ್ಠವಾಗಿರಲಿಲ್ಲ ಮತ್ತು ಜನರು ವಿಚಾರ ಮಾಡದೆ ಇದ್ದುದರಿಂದ, ಯಾವ ಮತದವರು ಬಂದರೂ, ಅವರಿಗೆ, ‘ನೀವೆನ್ನುವುದು ಸರಿ’ ಎಂದು ಹೇಳಬೇಕಾಗುತ್ತಿತ್ತು. ಇವುಗಳ ಜೊತೆಗೆ ಅವಿದೆಯೊಂದು ಸಹಾಯ ಮಾಡಲು ಸಿದ್ಧವಾಗಿಯೇ ಇತ್ತು. ಬ್ರಾಹ್ಮಣರಿಗೆ, ಜೈನರಿಗೆ, ಅರಸರಿಗೆ ಮತ್ತು ಮಾಂಡಲಿಕರಿಗೆ ಶಿಕ್ಷಣವು ದೊರೆಯುತ್ತಿತ್ತು. ಬಹುತೇಕ ಉಳಿದ ಜನರೆಲ್ಲರೂ ಅಶಿಕ್ಷಿತರಾಗಿಯೇ ಇರುತ್ತಿದ್ದರು.”[೧೭]

ಬಸವಣ್ಣ ಕಾಲದ ಸಮಾಜ ಒಟ್ಟಿನಲ್ಲಿ ಛಿದ್ರ ಛಿದ್ರವಾದ ಸಮಾಜವಾಗಿತ್ತು. ಮತೀಯವಾಗಿ, ಜಾತೀಯ ದೃಷ್ಟಿಯಿಂದ, ಆರ್ಥಿಕವಾಗಿ ಹೀಗೆ ಎಲ್ಲಾ ರಂಗಗಳಲ್ಲಿ ಅಸಮಾನತೆ ತಾಂಡವವಾಡುತ್ತಿತ್ತು. ಸಮಾಜದ ತಳ ಸಮುದಾಯಗಳು ಅಕ್ಷರಸೂರ್ಯನಿಂದ ರಹದಾರಿ ದೂರದಲ್ಲಿದ್ದವು. ಈ ಸಮಾಜದಲ್ಲಿ ಸಹಜವಾಗಿಯೇ ಮೂಢ ನಂಬಿಕೆಗಳು ಪ್ರಾಣಿ ಬಲಿಗಳು, ನಿರಕ್ಷರತೆ, ಬಡತನ ತಾಂಡವವಾಡುತ್ತಿದ್ದವು. ಊಳಿಗಮಾನ ಪದ್ಧತಿ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಅಸ್ಪೃಶ್ಯತೆ ಶಾಪವಾಗಿ ಕಾಡುತ್ತಿತ್ತು. ಸಮಾಜದ ಮೇಲ್ವರ್ಗದ ಜನತೆ ಕೆಳವರ್ಗದವರ ನೆರಳು ಬಿದ್ದರೂ ಮಡಿ ಎಂಬ ಸ್ಥಿತಿ ಇತ್ತು. ಉನ್ನತ ಅಧಿಕಾರಿಗಳು, ಭೂ ಮಾಂಡಲಿಕ ಒಡೆತನಗಳು, ರಾಜಾಶ್ರಯಗಳು ಇವೆಲ್ಲವು ಮೇಲ್‌ಜಾತಿಯವರ ಪಾಲಾಗಿದ್ದವು.

ಬಸವಣ್ಣನ ಕಾಲದ ಸಮಾಜದಲ್ಲಿ ವರ್ಣಾಶ್ರಮ ವ್ಯವಸ್ಥೆ ರಾಜಮರ್ಯಾದೆಯಿಂದ ಮೆರೆಯುತ್ತಿತ್ತು. ಹೀಗೆ ಬಸವಣ್ಣ ತನ್ನ ಕಾಲದ ಸಮಾಜವ ಕಂಡು ಇದರ ರಿಪೇರಿಗೆ ಇವರ ಉದ್ಧಾರಕ್ಕಾಗಿ ಸಮಾಜೋ-ಧಾರ್ಮಿಕ ಕ್ರಾಂತಿಯನ್ನೇ ಆರಂಭಿಸಿದ. ಸಮಾಜೈಕ್ಯವು ಜನಾಂಗದ ಐಕ್ಯಕ್ಕೆ ಕಾರಣವಾಗಿರುವಂತೆ, ಧರ್ಮೈಕ್ಯವು ಸಮಾಜೈಕ್ಯಕ್ಕೆ ಕಾರಣವಾಗಿದೆ ಎಂಬ ಸತ್ಯವನ್ನು ಅರಿತ. ಜನಾಂಗ, ಧರ್ಮ, ಜಾತಿ ಒಂದೇ ಇರಬೇಕೆಂಬ ಸತ್ಯ ತನ್ನ ಕುಶಾಗ್ರ ಬುದ್ಧಿಯಿಂದ ಬಸವಣ್ಣ ಕಂಡುಕೊಂಡ. ನೂರೆಂಟು ಜಾತಿಗಳು, ಮತಗಳು ಇದ್ದಲ್ಲಿ ದೂರ್ತರು ತಮ್ಮ ಸ್ವಾರ್ಥ ಸಾಧಿಸುತ್ತಾರೆ ಎಂಬ ಅರಿವಿತ್ತು. ಆದ್ದರಿಂದ ಸಮಾಜದಲ್ಲಿ ಒಂದೇ ಮತ, ಜಾತಿ, ಧರ್ಮ ಇರುವಂತೆ ಬಸವಣ್ಣ ಶ್ರಮಿಸಿ ಅದಕ್ಕಾಗಿ ವೀರಶೈವವನ್ನು ಎತ್ತಿಹಿಡಿದ.

"ಬಸವಣ್ಣ ಗತಿಸಿದ ನೂರಾರು ವರ್ಷದ ತರುವಾಯ ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಇಂಗ್ಲೆಂಡಿನಲ್ಲಿ ಪ್ರೊಟೆಸ್ಟೆಂಟ್ ಕ್ರೈಸ್ತಮತವೊಂದೇ ಇರಬೇಕೆಂದು ಕಟ್ಟಳೆ ಮಾಡಿದಳು. ಇದು ಬಸವಣ್ಣನ ವಿಚಾರವಲ್ಲವೆ?"[೧೮]

ಬಸವಣ್ಣ ಕಾಲದಲ್ಲಿ ವೀರಶೈವ ಪ್ರವರ್ಧಮಾನಕ್ಕೆ ಬರಲು ಕಾರಣ ವರ್ಗಕಲಹದಿಂದುಂಟಾಗಿದ್ದ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ತುಡಿತಗಳು. ವೀರಶೈವ ಸಿದ್ಧಾಂತ ಪ್ರಜ್ವಲಿಸಲು ಕಾರಣ ಬಸವಣ್ಣನ ಕಾಲದ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಪರಿಸರಗಳು. "ಅಂತಹ ಪರಿಸರದಲ್ಲಿ ಅರಮನೆ, ಮಠ, ದೇವಸ್ಥಾನ ಮತ್ತು ಮಹಾಜನ ಸಂಸ್ಥೆಗಳು ಒಂದುಗೂಡಿ ಒಂದು ವಿಶಿಷ್ಠ ಸಮಾಜ ಪದ್ಧತಿಯನ್ನು ಪರಂಪರಾನುಗತವಾಗಿ ಬೆಲೆಸಿಕೊಂಡು ಬಂದಿದ್ದವು. ಅರಮನೆಯ ದೊರೆಗೆ ದೇವಸ್ಥಾನದ ಪೂಜಾರಿಯ ನೆರವು. ಧರ್ಮದ ನೇತಾರನಾಗಿದ್ದ ಬ್ರಾಹ್ಮಣ ಪೂಜಾರಿಗೆ ದೊರೆಯ ಬೆಂಬಲ. ದೊರೆ ಹಾಗೂ ಪೂಜಾರಿಗಳಿಬ್ಬರಿಗೂ ಅಗ್ರಹಾರಗಳ ಆಡಳಿತ ವರ್ಗವಾಗಿದ್ದ ಮಹಾಜನರ ಸಹಕಾರ. ರಾಜನಗರಿಯಿಂದ ಹಳ್ಳಿಯ ವರೆಗೂ ತಮ್ಮ ನಿರಂಕುಶ ಪ್ರಭುತ್ವವನ್ನು ಬೆಳೆಸಿಕೊಂಡು ಬಂದ ರಾಜ, ಗುರು ಮತ್ತು ಮಹಾಜನ ಈ ಮೂವರು ಸೇರಿಕೊಂಡು ಜನಸಾಮಾನ್ಯರ ದೈನಂದಿನ ನಡೆವಳಿಕೆಯನ್ನು ನಿಯಂತ್ರಿಸುವುದರ ಜೊತೆಗೆ ಪ್ರಾಪಂಚಿಕ ತುಡಿತಗಳನ್ನು ಮೌನದಿಂದ ಸಹಿಸುವುದಕ್ಕೆ ಸಹಾಯಕಾರಿ ಯಾಗುವಂತಹ ದೈವಿಕ ಮೋಡಿಯನ್ನು ಒದಗಿಸಿಕೊಟ್ಟರು."[೧೯]

ಬಸವಣ್ಣನ ಕಾಲದ ಸಮಾಜದಲ್ಲಿನ ಧಾರ್ಮಿಕ ಪರಿಸರವನ್ನು ವಿಶ್ಲೇಷಿಸುತ್ತ ಹಿರೇಮಲ್ಲೂರು ಈಶ್ವರನ್ ಈ ರೀತಿ ಹೇಳುತ್ತಾರೆ.: "ಅಗ್ರಹಾರ ಆ ಕಾಲದ ಪಾಳೆಗಾರಿಕೆಯ ವ್ಯವಸ್ಥಾಪದ್ಧತಿಯನ್ನು ನಿಯಂತ್ರಿಸಿಕೊಂಡು ಬಂದ ಸಂಸ್ಥೆಯೆಂದು ಕರೆಯುತ್ತೇನೆ. ಅಗ್ರಹಾರದ ಭೂಮಿಗೆ ಸೇರಿದ ಜಲ, ವೃಕ್ಷ ಖನಿಜಗಳೇ ಮೊದಲಾದ ಎಂಟು ತೆರನಾದ ಆಸ್ತಿಗಳ ಮೇಲೆ ಧಾತೃಗಳಿಗೆ ಮೂರು ತೆರನಾದ ಹಕ್ಕು ಬಾಧ್ಯತೆಗಳಿರುತ್ತವೆ.

೧. ರಾಜನಿಗೆ ಆ ಹಳ್ಳಿಯ ಉತ್ಪಾದನೆಯ ಮೇಲೆ ತೆರಿಗೆ ಮತ್ತು ಸೇವೆಯನ್ನು ಅವರು ನೀಡುವಂತಿಲ್ಲ.

೨. ಅಗ್ರಹಾರದ ಆಸ್ತಿಪಾಸ್ತಿಗಳ ವಿವರಗಳ ಬಗೆಗೆ ಅವರನ್ನು ಪ್ರಶ್ನಿಸುವ ಹಕ್ಕು ರಾಜ್ಯದ ಅಧಿಕಾರಿಗಳಿಗಿಲ್ಲ.

೩. ಅಗ್ರಹಾರವನ್ನು ಆಂತರಿಕ ಮತ್ತು ಬಾಹ್ಯಶಕ್ತಿಗಳಿಂದ ಪೋಷಿಸುವುದು ರಾಜನ ಕರ್ತವ್ಯ."[೨೦]

ಇದೊಂದು ಅಂಶವೇ ಸಾಕು, ಬಸವಣ್ಣನ ಕಾಲದಲ್ಲಿ ಅಗ್ರಹಾರ ವ್ಯವಸ್ಥೆ ಎಷ್ಟೊಂದು ಬಲಿಷ್ಠವಾಗಿತ್ತು ರಾಜನ ಮೇಲೆ ಹಿಡಿತವನ್ನು ತಳವರ್ಗದ ಮೇಲೆ ಸವಾರಿಯನ್ನು ಮಾಡುತ್ತಿತ್ತು ಎಂದು ಅರ್ಥ ಮಾಡಿಕೊಳ್ಳಲು!

ಇನ್ನು ಬಸವಣ್ಣನ ಕಾಲದ ಸಮಾಜದಲ್ಲಿ ಆರ್ಥಿಕ ಪರಿಸರದ ಕಡೆ ಕಣ್ಣು ಹಾಯಿಸಿದರೆ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಬಲವಾದ ಮೂರು ಜಮೀನುದಾರರ ಗುಂಪುಗಳಿದ್ದವು. "ಆ ಗುಂಪಿನಲ್ಲಿ ಎಲ್ಲರಿಗೂ ಮಿಗಿಲಾದ ಜಮೀನುದಾರರೆಂದರೆ ಅರಸರು ಮತ್ತು ಅವರ ಮಾಂಡಲಿಕ ವರ್ಗ; ಆ ತರುವಾಯ ರಾಜರುಗಳು, ಮಹಾಜನರು ಮತ್ತು ಶೆಟ್ಟರು; ಅನಂತರ ಬರುವರು ಅತಿಸಣ್ಣ ಪ್ರಮಾಣದಲ್ಲಿ ಭೂಮಿಯುಳ್ಳ ರೈತರು ಎಲ್ಲಕ್ಕೂ ಕೆಳಗೆ. ಸಂಗ್ರಾಮಗಳಿಗೂ, ದೇಶ ರಕ್ಷಣೆಗೂ, ಸ್ವಂತ ಭೋಗಕ್ಕೂ ರಾಜನ ಮತ್ತು ಮಾಂಡಲಿಕರ ಭೂ ಸಂಪತ್ತು ವಿನಿಯೋಗವಾಗುತ್ತಿದ್ದರೆ, ಎರಡನೆಯವರ ಸಂಪತ್ತು ಧರ್ಮ ಪ್ರಸಾರಕ್ಕೂ, ವೈಯಕ್ತಿಕ ಸುಖ, ಲಾಭ, ಖ್ಯಾತಿಗಳಿಗಾಗಿ ವ್ಯಯವಾಗುತ್ತಿದ್ದಿತು. ವಿಶೇಷವೆಂದರೆ ಗಣ್ಯ ಕುಟುಂಬಗಳಿಗೆ ಸೇರಿದ ಮಹಾರಾಜರು ಸುವ್ಯಕ್ತ ಅನುಭೋಗಕ್ಕೆ ಹೆಸರಾದವರು. ಅವರು ತಮ್ಮ ಕಾಲದ ಸಂನ್ಯಾಸಿಗಳಂತೆ, ಶ್ರೀಮಂತ ಪ್ರಭುತ್ವದ ನೆರವಿನೊಂದಿಗೆ ಸಮಾಜದ ವಿಶಿಷ್ಟ ವರ್ಗವೊಂದರ ನಿರ್ಮಾಣಕ್ಕೆ ಕಾರಣರಾದರು. ಸಂನ್ಯಾಸಿಗಳೂ ಮಹಾಜನರು ಒಂದು ಕಡೆ. ಶೂದ್ರರು ಇನ್ನೊಂದು ಕಡೆ. ಅವರ ನಡುವೆ ನಿಂತುಕೊಂಡು ಭೂಮಿಯ ಉತ್ಪಾದನೆಯನ್ನು ಪಡೆಯುವ ಹಾಗೂ ಮಾರಾಟ ಮಾಡುವ ಕೆಲಸ ಕೈಗೊಂಡಿದ್ದ ವಣಿಕರು ಸುತ್ತಣ ಸನ್ನಿವೇಶವನ್ನು ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಂಡಂತೆ ವ್ಯವಹಾರೋದ್ಯಮದ ಪ್ರಗತಿಗೂ ಉಪಯೋಗಿಸಿಕೊಂಡರು. ಅಂತಹ ಪರಿಸರದಲ್ಲಿ ಸಿಕ್ಕ ಶೂದ್ರರದೇ ಒಂದು ಶೋಷಿತ ಗುಂಪು ರಚಿತವಾದುದಕ್ಕೆ ಅರಮನೆ, ದೇವಸ್ಥಾನಗಳನ್ನಾವರಿಸಿ ಬೆಳೆದಿದ್ದ ಆ ಕಾಲದ ಆರ್ಥಿಕ ವ್ಯವಸ್ಥೆಯೆ ಕಾರಣ.

ಹನ್ನೆರಡನೆಯ ಶತಮಾನದ ಕರ್ನಾಟಕದ ಆರ್ಥಿಕ ಪದ್ಧತಿಯನ್ನು ಮುಕ್ತ ಹಿಡುವಳಿಕೆಗೆ (free holding) ವಿಶೇಷ ಪ್ರಾಧಾನ್ಯ. ರಾಜನೂ ಅವನ ಮಾಡಲಿಕರು ತಮಗೆ ಬೇಕೆಂದೆನ್ನಿಸಿದಾಗ ಸಾಗುವಳಿದಾರರಿಂದ ಜಮೀನನ್ನು ಕಸಿದುಕೊಳ್ಳುವ ಅಧಿಕಾರ ಅವರಿಗೆ ಇದ್ದುದರಿಂದ ಬೇಸಾಯಗಾರರು ಇಂದಿಲ್ಲ ನಾಳೆ ಗತಿಗೇಡಿಗಳಾಗುವೆವೆಂಬ ಅಂಜಿಕೆಯಲ್ಲಿ ಕಾಲ ಕಳೆಯುತ್ತಿದ್ದರೆನ್ನುವುದನ್ನು ಆ ಕಾಲದ ಶಾಸನಗಳೇ ಸೂಚಿಸುತ್ತಿವೆ."[೨೧]

ಬಸವಣ್ಣನವರ ಕಾಲದಲ್ಲಿ ಕಸಬುದಾರರೂ, ಬೇಸಾಯಗಾರರೂ, ಸಿಂಪಿಗಳು, ಪತ್ತಾರರು, ಗಾಣಿಗರು, ಕಮ್ಮಾರರು ಇತ್ಯಾದಿ ಜನಾಂಗದವರು ಶೂದ್ರವರ್ಗಕ್ಕೆ ಸೇರಿದವರಾಗಿದ್ದರು. ಶೋಷಣೆಗೆ ಹೆಸರಾದ ಇನ್ನೊಂದು ಸಂಸ್ಥೆ ಬ್ರಾಹ್ಮಣ ಜಾತಿಗೆ ಸೇರಿದ ಮಹಾಜನರದ್ದು. ಅಗ್ರಹಾರ ವ್ಯವಸ್ಥೆ, ಅಲ್ಲಿನ ನಿಯಂತ್ರಣ, ಆಡಳಿತ ವ್ಯವಸ್ಥೆ, ಒಡೆತನ, ಕಾಲಕಾಲಕ್ಕೆ ತೆರಿಗೆನಿಷ್ಕರ್ಷೆ, ಇವೆಲ್ಲವು ಮಹಾಜನ ಸಂಸ್ಥೆಗೆ ಸೇರಿದ್ದು ಆ ಕಾಲಕ್ಕೆ ಒಂದು ದುವ್ಯವಸ್ಥೆಯ ಆಗರವಾಗಿ ತಳ ಸಮುದಾಯದವರನ್ನು ಹಿಂಸಿಸುವ ವರ್ಗವಾಗಿ ರೂಪಗೊಂಡಿತ್ತು.

ಬಸವಣ್ಣನ ಕಾಲದ ಸಮಾಜವನ್ನು ನೋಡುವಾಗ ನಿರಂಕುಶ ಪ್ರಭುತ್ವಕ್ಕೆ ಹೆಸರಾದ ಅರಮನೆ, ದೇವಸ್ಥಾನ ಮತ್ತು ಮಹಾಜನ ಸಂಸ್ಥೆಗಳು, ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿಯಂತೆ, ಒಂದನ್ನೊಂದು

ಸಮರ್ಥಿಸುತ್ತ ಸಾಮಾಜಿಕ ಹಾಗೂ ಆರ್ಥಿಕ ವೈಷಮ್ಯಗಳಿಂದ ಕೂಡಿದ ನಾಡನ್ನು ಕಟ್ಟಿಕೊಂಡು ತಮ್ಮ ಅಭ್ಯುದಯದ ಸಾಧನೆಯಲ್ಲಿ ತೊಡಗಿದ್ದವು. ಧಾರ್ಮಿಕವಾಗಿ ಆಡಳಿತರೂಡರ ಪರವಾಗಿದ್ದ ಶೈವ ಹಾಗೂ ಕಾಳಮುಖ ಆಚಾರ್ಯರು ಆನುವಂಶಿಕ ಅಸಮಾನತೆಯನ್ನು ಧರ್ಮದ ಮೂಲಕ ರಕ್ಷಿಸುತ್ತಿದ್ದರು.

ಈ ಸೋಗಲಾಡಿತನದ ಆಚಾರ್ಯರನ್ನು ಎತ್ತಿಹಿಡಿದು ನಾಡನ್ನು ಮತ್ತೆಮತ್ತೆ ಕೊಳ್ಳೆ ಹೊಡೆದು ತಮ್ಮ ರಾಜ್ಯ ವಿಸ್ತರಣೆಗೆ ತೊಡಗಿದರೆ ಅಂತಹ ರಾಜರಿಗೆ ಬೆಂಬಲವಾಗಿ ಮಠ, ದೇವಸ್ಥಾನ, ಮಹಾಜನ ಸಂಸ್ಥೆಗಳು, ಆಚಾರ್ಯರು ಬೆಂಬಲಿಸುತ್ತಾ ಶ್ರೀಸಾಮಾನ್ಯನ ಜೀವನವನ್ನು ಅಸಹನೀಯವಾಗಿಸುತ್ತಿದ್ದರು. ಈ ಎರಡು ವರ್ಗಗಳ ನಡುವೆ ಸಿಲುಕಿ ಬಳಲಿ, ಬೆಂಡಾಗಿದ್ದು ಶ್ರೀಸಾಮಾನ್ಯನ ಸಮಾಜ. ಈ ಸಮಾಜದ ಹಿನ್ನೆಲೆಯಲ್ಲಿ ಧರ್ಮ ದರ್ಶಕನ ದಾರಿಯನ್ನು ಕಾಯುತ್ತಿದ್ದ ಸಮಯದಲ್ಲಿ ಲಿಂಗಾಯತ ಧರ್ಮದರ್ಶಿ ಬಸವಣ್ಣ ಉದಯ ರವಿಯಂತೆ ಗೋಚರಿಸಿದ.

೫.೬ ಬಸವಣ್ಣನ ಆಲೋಚನೆಯಲ್ಲಿ ಸಾಮಾಜಿಕ ಸಮಾನತೆಯ ನವ ಸಮಾಜ

"ಸಾಮಾಜಿಕ ದೂರದೃಷ್ಟಿಯುಳ್ಳ ಬಸವಣ್ಣ ಸಮಾಜದ ಎಲ್ಲಾ ಹಂತಗಳಲ್ಲೂ ಸಮಾನತೆ ತರುವ ನಿಟ್ಟಿನಲ್ಲಿ ಬಹುವಾಗಿ ಶ್ರಮಿಸಿದ. ವರ್ಣ ವ್ಯವಸ್ಥೆಯನ್ನು ವಿರೋದಿಸಿದ. ಕಾಯಕ ತತ್ವ ಹಾಗೂ ವಿವಿಧ ವೃತ್ತಿಗಳಲ್ಲಿನ ಸಮಾನತೆಯಲ್ಲಿ ಬಸವಣ್ಣನಿಗಿದ್ದ ನಂಬಿಕೆಯೂ ಹಳೆಯ ಜಾತಿ ಪದ್ಧತಿಯ ಪರಿಕಲ್ಪನೆಗೆ ವಿರೋಧವಾಗಿತ್ತು. ಬಸವಣ್ಣನ ದೃಷ್ಟಿಯಲ್ಲಿ ಜಾತಿಪದ್ಧತಿಯನ್ನು ತೆಗೆದು ಹಾಕದ ಹೊರತು ಸಾರ್ವತ್ರಿಕ ಭ್ರಾತೃತ್ವನ್ನು ಸ್ಥಾಪಿಸಲು ಸಾಧ್ಯವಿಲ್ಲ. ಮುಂದೆ ಈ ನಿಟ್ಟಿನಲ್ಲಿ ಅಂತರ್ಜಾತಿ ವಿವಾಹಗಳಿಗೂ ಪ್ರೇರೇಪಿಸಿದ. ಒಬ್ಬ ಬ್ರಾಹ್ಮಣ ಕನ್ಯೆ ಹಾಗೂ ಒಬ್ಬ ಕೆಳಜಾತಿಯ ಯುವಕನ ಮಧ್ಯೆ ಜರುಗಿದ ಅಂತರ್ಜಾತಿ ವಿವಾಹದ ಪೌರೋಹಿತ್ಯವನ್ನು ಬಸವಣ್ಣ ವಹಿಸಿದ್ದ. ಅಂತರ್ಜಾತೀಯ ಭೋಜನ ಕೂಟಗಳಲ್ಲಿ ಯಾವುದಕ್ಕೂ ಹಿಂಜರಿಯದೆ ಸ್ವೇಚ್ಛಾ ಪ್ರೇಮದಿಂದ ಭಾಗವಹಿಸಿದ."[೨೨]

"ಭಾರತಕ್ಕೆ ಬೇರೆ ದೇಶದಿಂದ ಬಂದ ದಾಳಿಗಾರರು ಆರ್ಯರು ಇಲ್ಲೆ ನೆಲೆನಿಂತು ಮೂಲ ನಿವಾಸಿಗಳೊಂದಿಗೆ ಬೆರೆತು ಹೋದರು. ಕ್ರಮ ಪ್ರಾಪ್ತಬುದ್ಧಿ, ಬೆಳವಣಿಗೆಯ ಕೂಡ ಸಂಸ್ಕಾರವು ಬೆಳೆಯುತ್ತಾ ಹೋಗಿ ಈಗಿನ ರೂಪದಲ್ಲಿ ನಿಂತಿತು. ಹಿಂದೂ ಧರ್ಮವು ರೂಢವಾಯಿತು. ಮುಂದೆ ಜೈನ-ಬೌದ್ಧ ಧರ್ಮಗಳು ಬೆಳೆಯಲಾರಂಬಿಸಿದವು. ಕ್ರಮೇಣ ಹಿಂದೂ ಧರ್ಮದಲ್ಲಿ ಸ್ಮಾರ್ತ, ಭಾಗವತ, ಶ್ರೀ ವೈಷ್ಣವ ಮುಂತಾದ ಪಂಗಡಗಳಾದವು ಸಮಾಜವು ಈ ಎಲ್ಲ ಧರ್ಮಗಳ ಮತ್ತು ಅವುಗಳಲ್ಲಿನ ರೂಢಿಯ ಸಂಪರ್ಕದಿಂದ ಒಡೆದು ತುಂಡು ತುಂಡಾಗಿ ಹೋಯಿತು. ಆ ಧರ್ಮಗಳ ಒಳ ಬೇಧದಿಂದ ಮನೆಗೊಂದು ಜಾತಿ, ಮನೆಗೊಂದು ಸಮಾಜವಾಗಿರುವಂತೆ ತೋರಹತ್ತಿತು.[೨೩]

ಭಾರತದಲ್ಲಿ ಜಾತಿಗಳು ಹೇಗೆ ಹುಟ್ಟಿಕೊಂಡವು ಎಂಬುದೇ ಒಂದು ಸೋಜಿಗವಾಗಿ ಕಾಣಿಸಿಕೊಳ್ಳುತ್ತದೆ. ಪಶುಪಕ್ಷಿಗಳು ಒಟ್ಟೊಟ್ಟಿಗೆ ಜೀವಿಸಿ ಸಂಘ ಶಕ್ತಿಯನ್ನು ತೋರುತ್ತವೆ. ಇದೇ ಸಂಘ ಶಕ್ತಿತತ್ವ ಮನುಷ್ಯನಿಗೂ ಅನ್ವಯಿಸುತ್ತದೆ. ಮೂಲಭೂತವಾಗಿ ಮಾನವನು ಒಂದು ಪ್ರಾಣಿ. ಗಂಡಸಿಗೆ ತನ್ನ ಮಕ್ಕಳು ಮರಿಗಳನ್ನು, ಸ್ತ್ರೀಯರನ್ನು ರಕ್ಷಣೆ ಮಾಡುವುದು ಸ್ವಭಾವಿಕವಾಗಿ ಬಂದಿದೆ. ಇದು ಆತನ ಪ್ರಮುಖ ಕಾರ್ಯಗಳಲ್ಲಿ ಒಂದಾಗಿತ್ತು. ಕಾಡಿನ ವ್ಯವಸ್ಥೆಯಲ್ಲಿದ್ದಾಗ ಆತನು ಒಂದು ಗುಂಪನ್ನು ಕಟ್ಟಿಕೊಂಡು ಜೀವಿಸುವ ಸ್ಥಿತಿಯತ್ತ ಹೊರಳಿದನೆಂಬುದನ್ನು ಇತಿಹಾಸ ತಿಳಿಸುತ್ತದೆ. ಆ ಗುಂಪೇ ಸಮಾಜದ ಆರಂಭ. ಕಾಲ ಕಳೆದಂತೆಲ್ಲಾ ಕಾಡು ಜನರೇ ಕ್ರಮೇಣ ನಾಡು ಜನರಾದರು.

"ಕಾಡುಜನರ ಸಮಾಜಕ್ಕೆ ಅಡಿಗಲ್ಲಾಗಿರುವ ಪ್ರೇಮ, ಸಹಾನುಭೂತಿ, ಪರಸ್ಪರ ಸಹಾಯ ಮುಂತಾದ ಗುಣಗಳ ಹಿಂಬದಿಯಲ್ಲಿ ಇನ್ನೂ ಕೆಲವು ಗುಣಗಳಿವೆ; ಅವು ಸತ್ಯ, ಪ್ರಾಮಾಣಿಕತನ, ನಿಸ್ವಾರ್ಥ, ನಿರ್ವಂಚನೆ ಮುಂತಾದ ಗುಣಗಳು. ದ್ರವ್ಯದ ಕಲ್ಪನೆಯೇ ಇಲ್ಲದಿರುವಾಗ ಕೊಲೆ ಸುಲಿಗೆಗಳಿಲ್ಲ, ಅಂದರೆ ಮಕ್ಕಳ ಮನಸ್ಸಿನಂತೆ, ತಿಳಿನೀರಿನಂತೆ, ಗಾಜಿನಂತೆ ಶುದ್ಧ ಭಾವ. ಇದಕ್ಕೆ ನಾವು ಅಂತರಂಗ ಶುದ್ಧಿ ಎನ್ನಬುಹುದು. ಇವೆಲ್ಲ ಗುಣಗಳು ಒಟ್ಟಾರೆ ಸೇರಿ ಅವರ ಸಮಾಜದ ಐಕ್ಯಕ್ಕೆ ಕಾರಣವಾಗಿದ್ದವು. ಇವೇ ಅವರ ಸಮಾಜದ ಕಟ್ಟುಗಳು. ಇವೇ ಗುಣಗಳು ನಿರಂತರವಾಗಿ ಸಮಾಜಕ್ಕೆ ಅಡಿಗಲ್ಲುಗಳೆಂದು ತತ್ವಜ್ಞರು ಹೇಳುವ ಮಾತು ಎಂದು ಹುಸಿಯಾಗದು. ಸಮಾಜ ಮಂದಿರ ಭದ್ರವಾಗಿ ಉಳಿಯ ಬೇಕಾದರೆ ನೀತಿಯೆಂಬ ತಳಹದಿಯು ಬಹಳ ಶುದ್ದವಾಗಿರಬೇಕು. ಆಫ್ರಿಕಾ ಕಂಡದಲ್ಲಿ, ಅಮೇರಿಕಾ ಖಂಡದಲ್ಲಿ ಮತ್ತು ಹಿಂದೂ ಮಹಾಸಾಗರದೊಳಗಿನ ಕೆಲವು ದ್ವೀಪಗಳಲ್ಲಿ ಈವರೆಗೂ ಕಾಡು ಜನರಿರುವರು. ಅವರ ಸಮಾಜವು ಸ್ಥಿರವಾಗಿ ಉಲಿಯಲು ಅವರ ನೈತಿಕ ಬಲವೇ ಬಲವು. ಅವರಲ್ಲಿ ಒಡಕುಗಳಿಲ್ಲ. ಅವರಲ್ಲಿ ಪಂಗಡಗಳಿಲ್ಲ. ಅವರಲ್ಲಿ ಉಚ್ಚ ನೀಚತೆಯಿಲ್ಲ, ಯೋಗ್ಯತೆಯಲ್ಲಿ ಎಲ್ಲರೂ ಒಂದೇ."[೨೪]

ಭಾರತ ದೇಶದಲ್ಲಿ ಜಾತಿ ವ್ಯವಸ್ಥೆ ಬಂದಿದ್ದು ಹೊರನಾಡಿನಿಂದ ಬಂದ ಆರ್ಯರಿಂದಾಗಿ. ಇಲ್ಲಿನ ಮೂಲನಿವಾಸಿಗಳೊಂದಿಗೆ ಮರೆತು ವರ್ಣಾಶ್ರಮವನ್ನು ಹೇರಿ ಮೂಲ ನಿವಾಸಿಗಳನ್ನು ಶೋಷಿಸುವ ಜಾತಿಪದ್ಧತಿಯನ್ನು ಜಾರಿಗೆ ತಂದರು. 'ನಾನು ಶ್ರೇಷ್ಠ ಇತರರು ಕೀಳು' ಎಂಬ ಭಾವನೆಯೇ ಸಮಾಜ ಹಿತದೃಷ್ಟಿಯಿಂದ ಘಾತುಕವಾದುದು. ಹಿಂದೂ ಸಮಾಜವು ಶತಶತ ಮಾನಗಳಿಂದ ತಳಸಮುದಾಯದವರನ್ನು ಹೊಲೆಯರು, ಮಾದಿಗರು, ಅಸ್ಪೃಶ್ಯರು, ಕನಿಷ್ಠ ಕುಲದವರೆಂದು ಸಾರಿ, ಅವರು ಮನುಷ್ಯರಂತೆ ಬಾಳಲು ಬೇಕಾಗುವ ಎಲ್ಲ ಸೌಕರ್ಯಗಳನ್ನು ನಿರಾಕರಿಸಿ ಮಹಾ ಪಾಪವನ್ನೆಸಗುತ್ತಾ ಬಂದಿದೆ.

ಬಸವಣ್ಣ ತಾನು ಬ್ರಾಹ್ಮಣ ವರ್ಗದಲ್ಲೆ ಹುಟ್ಟಿದರು ತನ್ನನ್ನು ತಾನು ಅಪವರ್ಗಿಸಿಕೊಂಡ. ಬಾಲ್ಯದಲ್ಲಿ ವೇದಾಧ್ಯಯನಾದಿ ವೈದಿಕಶಾಸ್ತ್ರಗಳಲ್ಲಿ ಪಾರಂಗತನಾಗುತ್ತಿದ್ದಂತೆಯೇ, ತನ್ನ ಸುತ್ತಮುತ್ತ ನಡೆಯುತ್ತಿದ್ದ ಕ್ರೂರ ಸಾಮಾಜಿಕ ಅನ್ಯಾಯಗಳು ಜಾತಿ ಸಮಸ್ಯೆ ಮತಾಂಧತೆ, ಜಾತೀಯತೆ, ಅಸ್ಪೃಶ್ಯತೆ, ಮೌಢ್ಯ ಅಜ್ಞಾನಗಳನ್ನು ಕಂಡು ದಂಗಾದ. "ಭರತಮಾತೆಯ ಶರೀದ ಅರ್ಬುದ ವ್ರಣಗಳಂತಿದ್ದ ವರ್ಣ ಜಾತಿಗಳನ್ನು, ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತುಹಾಕಿದರೆ ಮಾತ್ರ ಆಕೆಯ ಆರೋಗ್ಯ ಸುಧಾರಿಸಿ, ನವಚೈತನ್ಯದಿಂದ ಪ್ರಕಾಶಿಸುತ್ತಾಳೆಂಬುದನ್ನು ಬಸವಣ್ಣ ಮೊದಲು ಕಂಡು ಕೊಂಡ ಸತ್ಯ. ವರ್ಣಭೇದ ಜಾತಿ ಭೇದಗಳನ್ನು ಬ್ರಾಹ್ಮಣರೇ ಸೃಷ್ಟಿ ಮಾಡಿರುವುದರಿಂದ, ಜನ್ಮತಃ ಬ್ರಾಹ್ಮಣರಾದ ಬಸವಣ್ಣನ ಉಪದೇಶವನ್ನು ಜನ ನಂಬುವುದುಂಟೆ? ಇದು ಬಸವಣ್ಣನ ಮುಂದಿದ್ದ ಭೀಕರ ಪ್ರಶ್ನೆ. ತಾನು ಹುಟ್ಟಿದ ಜಾತಿಯನ್ನು ಆತ ಕಡ್ಡಿ ತುಂಡು ಮಾಡಿದಂತೆ ನಿರಾಕರಿಸುತ್ತಾನೆ. "ಕಷ್ಟ ಜಾತಿಯ ಜನ್ಮದಲ್ಲಿ ಜನಿಸಿದೆ, ಎನಗಿದು ವಿಧಿಯೆ! ಕೂಡಲ ಸಂಗಮದೇವಾ ಎಂದು ಹಲುಬುತ್ತಾನೆ. ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತಯ್ಯ ಚನ್ನಯ್ಯನಾದಡೆ

ಅನು ಬದುಕೆನೆ? ಹಾಗಾದರೆ ಮಾತ್ರ ತಾವು ಬದುಕಬೇಕು; ಆಗದಿದ್ದರೆ ಬದುಕುವುದೇ ಬೇಡ ಎಂದು ಘೋಷಿಸುತ್ತಾನೆ. ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ; ಕೆಟ್ಟದಾದ ಬ್ರಾಹ್ಮಣ ಜಾತಿಯಲ್ಲಿ ಹುಟ್ಟ ಬಾರದಿತ್ತೆಂದವ ಗೋಳಾಡುತ್ತಾನೆ.[೨೫]

ಬಸವಣ್ಣ ಉದ್ದಕ್ಕೂ ಜಾತಿಯ ವಿರುದ್ದ ಬಡಿದಾಡಿದ. ಜಾತಿಮತಗಳ ಅವಾಂತರದಿಂದಾಗಿ ಹಿಂದೂಸ್ಥಾನಕ್ಕೆ ಶಾಶ್ವತವಾದ ಕಳಂಕ ತಟ್ಟಿದೆ ಎಂಬ ಅರಿವಿತ್ತು. "ಭಗವಾನ್ ಶ್ರೀ ಕೃಷ್ಣನೇ ಗುಣಕರ್ಮಗಳಿಂದ ಜಾತಿ ನಿರ್ಣಯವಾಗಬೇಕೆ ಹೊರತು ಹುಟ್ಟಿನಿಂದ ಅಲ್ಲ ಎಂದು ಸಾರಿದ್ದ. ಆದರವನ ಮಾತು ಗ್ರಂಥದ ಗ್ರಂಥಿಯಾಗಿಯೇ ಉಳಿಯಿತು. ಕಾಲ ಉರುಳುತ್ತಾ ಉರುಳುತ್ತಾ ಹೊಸ ಹೊಸ ಜಾತಿಗಳು ತಲೆಹಾಕಲಾರಂಭಿಸಿದವು. ತಾನು ಹೆಚ್ಚು ತಾನು ಹೆಚ್ಚು ಎಂಬ ಬಡಿವಾರದ ಬಂಡಾಯ ಕಾಲಕಾಲಗಳಲ್ಲಿಯೂ ತಲೆದೂರುತ್ತಿತ್ತು. ಒಂದು ಜಾತಿಯಲ್ಲಿ ಹುಟ್ಟಿದವನೆಂದು ಮನುಷ್ಯ ಹಿರಿಯನಾಗುತ್ತಾನೆಯೇ, ಅವನ ಗುಣ, ಧರ್ಮ, ನಡತೆ, ಶೀಲಗಳಿಂದ ಹಿರಿಯನಾಗುತ್ತಾನೆಯೇ ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿತ್ತು. ಬಸವಣ್ಣನವರೇ ತಮ್ಮ ಜೀವನದಲ್ಲಿ ಈ ಹೋರಾಟವನ್ನು ಕಂಡು ಅತಿಮಾನವರಂತೆ ಆದರ ಸಾಮಾನ್ಯ ಹಂತದಿಂದ ಮೇಲಕ್ಕೆದ್ದಿದರು. ಜಾತಿಯ ಹುಟ್ಟನ್ನು ನೀಗಿಕೊಂಡ ಮೇಲೆ ತಮ್ಮ ಮನಸ್ಸಿಗಾದ ಅತುಲ ಶಾಂತಿ ಸುಖವನ್ನು ಎಲ್ಲರಿಗೂ ಧಾರೆಯೆರೆಯಬೇಕೆಂದು ಅವರು ಸಂಕಲ್ಪಿಸಿದರು. ಜಾತಿವಿಡಿದು ಸೂತಕವನ್ನು ಅರಸುವ ಜ್ಯೋತಿವಿಡಿದು ಕತ್ತಲೆಯನರಸುವವರನ್ನು ಎಚ್ಚರಿಸಿ ತಿದ್ದಿ ತಮ್ಮ ಪಥಕ್ಕೆ ತಿರುಗಿಸಿಕೊಳ್ಳ ಬೇಕಾಯಿತು. ಜಾತಿ ಕುಲಗಳಿಗೆ ಬಸವಣ್ಣನವರು ಹೊಸ ಪ್ರಸ್ಥಾನವೊಂದನ್ನೇರ್ಪಡಿಸಿದರು. ಯಾವನ ಮುಖ ಮನಸ್ಸು ಶಿವನ ಕಡೆಗಿದೆಯೋ ಅವನು ಕುಲಜ, ಯಾವನು ಶಿವನಿಂದ ದೂರವಿರುವನೋ ಅವನು ಹೊಲೆಯ.[೨೬]

ಬಸವಣ್ಣನಿಗೆ ಸಾಮಾಜಿಕವಾಗಿ ಎಲ್ಲರೂ ಸಮಾನರು ಎಂಬ ಅಂಶವನ್ನು ರೂಪಿಸುವ ಬಗ್ಗೆ ಮನ ಯಾವಾಗಲು ಕುದಿಯುತ್ತಿತ್ತು. ತನ್ನ ಕಾಲದ ಸಮಾಜದಲ್ಲಿನ ಜಾತಿಪದ್ಧತಿ ಕಂಡು ಬಸವಣ್ಣ ರೋಸಿ ಹೋಗಿದ್ದ. "ಹಿಂದೂ ಸಮಾಜದ ಕೀಳನ್ನು, ಕಳಚುತ್ತಿದ್ದ ಸ್ಪೃಶ್ಯಾಸ್ಪೃಶ್ಯತೆಯನ್ನು ತೊಡೆದುಹಾಕಲು ಬಸವಣ್ಣ ನಿರ್ಧರಿಸಿದ. ಹಿಂದೂ ಸಮಾಜದ ಬಹುಕಾಲದ ದಬ್ಬಾಳಿಕೆಯಿಂದ ಹೊಲೆಯರು ಮನುಷ್ಯತ್ವವನ್ನೇ ನೀಗಿಕೊಂಡಿದ್ದರು. ತಮ್ಮ ವಾತಾವರಣವನ್ನು ಬಿಟ್ಟು ಹೊರಗೆ ಬರಲು ಅವರಿಗೆ ಅವಕಾಶವೇ ಇರಲಿಲ್ಲ. ಹೀಗಾಗಿ ಅವರು ಶ್ವಪಚಪ ಜೀವನದಲ್ಲಿಯೇ ತೃಪ್ತರಾಗಬೇಕಾಗಿತ್ತು. ಬಸವಣ್ಣನವರು ಅವರ ಪರ ವಾದ ಮಾಡಿ ಉತ್ತಮಕುಲಜರೆಂದು ಮೆರೆಯುತ್ತಿದ್ದವರನ್ನು ಒಂದು ಪ್ರಶ್ನೆ ಕೇಳುತ್ತಾರೆ.

ಹೊಲೆಯೊಳಗೆ ಹುಟ್ಟಿ ಕುಲವನರಸುವೆ,
ಎಲವೋ ಮಾತಂಗಿಯ ಮಗ ನೀನು,
ಸತ್ತುದನೆಳೆವನೆತ್ತಣ ಹೊಲೆಯ?
ಹೋತ ತಂದು ಕೊಲ್ಲುವಿರಿ.

ಶಾಸ್ತ್ರವೆಂಬುದು ಹೋತಿಂಗೆ ಮಾರಿ.
ವೇದವೆಂಬುದು ನಿಮಗೆ ತಿಳಿಯದು.

ನಮ್ಮ ಕೂಡಲ ಸಂಗನ ಶರಣರು ಕರ್ಮವಿರಹಿತರು, ಶರಣಸನ್ನಿತರು, ಅನುಪಮ ಚರಿತರು. ಹೊಟ್ಟೆಯ ಕಾತರಕ್ಕಾಗಿ ಸತ್ತ ಪ್ರಾಣಿಯನ್ನು ಸುಟ್ಟು ತಿನ್ನುವವನು ಹೊಲೆಯನಲ್ಲವೋ? ಹೊಲೆಯ-ಹಾರುವರನ್ನು ನಿರ್ಧರಿಸುವುದು ಅವರ ಹುಟ್ಟಲ್ಲ, ಬಾಳುವೆ ಎಂದು ಸಾರಿ ಹೊರೆಯರನ್ನು ಅವರ ಪತಿತಾವಸ್ಥೆಯಿಂದ ಮೇಲಕ್ಕೆತ್ತಿ ಲಿಂಗಾಂಗಿಗಳನ್ನಾಗಿ ಮಾಡತೊಡಗಿದರು.

ಶ್ವಪಚನಾದಡೇನು, ಲಿಂಗವಿದ್ದವನೇ ಕುಲಜ
ನಂಬಿಯೂ ನಂಬದಿದ್ದರೆ ಸಂದೇಹಿ ನೋಡಾ
ಕಟ್ಟಿದಡೇನು, ಮುಟ್ಟಿದಡೇನು, ಮನ ಮುಟ್ಟದನ್ನಕ್ಕ
ಭಾವಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು

ಕೂಡಲ ಸಂಗಮದೇವಾ ನೀನೊಲಿದಂಗಲ್ಲದೆ?
ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ?
ಕುಲವುಂಟೇ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೇ ಪ್ರಸಾದವಿದ್ದೆಡೆಯಲ್ಲಿ?
ಇಂತೀ ಅಪವಿತ್ರದ ನುಡಿಯ ನುಡಿವ ಸೂತ್ರವೇ ಪಾತಕ.
ನಿಷ್ಕಳಂಕ, ನಿಜೈಕ್ಯ, ತ್ರಿವಿಧ ನಿರ್ಣಯ
ಕೂಡಲ ಸಂಗಮದೇವಾ ನಿಮ್ಮ ಶರಣರಿಗಲ್ಲದಿಲ್ಲ.

ಸಂಗನ ಕೃಪಾಛತ್ರದ ಕೆಳಗೆ ಎಲ್ಲರೂ ಸಮಾನರು. ಹರಭಕ್ತರಲ್ಲಿ ಜಾತಿಭೇದವಿಲ್ಲ. ಹೊಲೆಯ ಹಾರುವನೆಂಬ ವ್ಯತ್ಯಾಸವೇ ಹೊಲ್ಲ. ಶಿವಭಕ್ತರು ಜಾತಿ ಭೇದವನ್ನೆಣಿಸದೆ ಒಂದು ಸಂಸಾರದ ಹಾಗೆ ನಡೆದುಕೊಳ್ಳಬೇಕು, ಎಂದು ಅವರಲ್ಲಿ ಸಹಪಂಕ್ತಿ ಭೋಜನವನ್ನು ವಿವಾಹ ಸಂಬಂಧಗಳನ್ನು ಪ್ರೋತ್ಸಾಹಿಸಿದರು.”[೨೭] ತನ್ನ ಸಾಮಾಜಿಕ ಸಮತೆಯ ತತ್ತ್ವ ಜೀವಂತವಾಗಿ ಉಳಿಯಬೇಕಾದರೆ ತನ್ನ ಶರಣತತ್ವವನ್ನು ಅಪ್ಪಿಕೊಂಡಿರುವ ಶರಣ ಸಮೂಹ ಆಧ್ಯಾತ್ಮಿಕ ಜೀವನದ ಕಡೆಗೆ ಆರ್ಥಿಕ ಜೀವನದ ಕಡೆಗೆ ಗಮನ ಹರಿಸಬೇಕೆಂದು ಬಸವಣ್ಣ ಚಿಂತಿಸಿದ. ಶರಣ ಸಮಾಜವು ಸ್ವತಂತ್ರವಾಗಿ ಬಾಳಬೇಕಾದರೆ ಪರಾಶ್ರಯದಿಂದ ಜೀವಿಸುವ ಹೀನ ಬದುಕಿನಿಂದ ದೂರ ಉಳಿಯಬೇಕಾದರೆ ಅದು ಕಾಯಕತತ್ವದ ಮೊರೆ ಹೋಗಬೇಕೆಂಬುದನ್ನು ಅರಿತು ‘ಕಾಯಕವೇ ಕೈಲಾಸ’ ಎಂಬ ನೀತಿಯನ್ನು ಜಾರಿಗೆ ತಂದ.

“ಕಾಯಗಳ ಬಗ್ಗೆಯೂ ಪರಂಪರಾಗತವಾಗಿ ಹಲವು ಮೂಢ ಅಭಿಪ್ರಾಯಗಳು ಬೆಳೆದು ಬಂದಿದ್ದವು. ಒಂದು ಹೆಚ್ಚು ಒಂದು ಕಡಿಮೆ; ಒಂದು ಮೇಲು, ಒಂದು ಕೀಳು ಎಂಬ ಭಾವನೆಗಳು ಪ್ರಸಾರದಲ್ಲಿದ್ದವು. ಯಾವ ಕಾಯಕವೂ ಹೀನವಾದುದಲ್ಲ. ತ್ರಿಕರಣ ಶುದ್ಧಿಯಿಂದ ಕಾಯಕದಲ್ಲಿ ನಿರತನಾದವನಿಗೆ ಅದೇ ಕೈಲಾಸ. ಹೂಮಾರುವವನು ಶ್ರೇಷ್ಠನಲ್ಲ, ಮೊಟ್ಟೆ ಮಾರುವವನು ಕನಿಷ್ಠನಲ್ಲ. ಆದರೆ ಸಮಾಜಕ್ಕೆ ನಿಷ್ಪ್ರಯೋಜಕನಾಗಿ ಅದರ ಮೇಲೆ ಅವಲಂಬಿಸುವನು ಕನಿಷ್ಠ. ಕೈಗೊಂಡ ಕಾಯಕವನ್ನು ಯೋಗ್ಯರೀತಿಯಿಂದ

ನಿರ್ವಹಿಸಿದವನು ಕನಿಷ್ಠ. 'ಯೋಗಃ ಕರ್ಮ ಸುಕೌಶಲಂ', ಎಂದು ಭಗವದ್ಗೀತೆ ಹೇಳಿದ ಮಾತನ್ನು ಬಸವಣ್ಣನವರು ಜೀವನರಂಗದಲ್ಲಿ ಪ್ರಯೋಗ ಮಾಡಿ ತೋರಿಸಿದರು. ಅವರ ಜೀವನಾದರ್ಶವೇ ಇದಾಗಿತ್ತು. ಕರಣಿಕವೃತ್ತಿ ಕರ್ಮಕೌಶಲ್ಯದ ಪ್ರಭಾವದಿಂದ ಕಾರಣಿಕ ವೃತ್ತಿಯಾಗಿ ಪರಿಣಮಿಸಿತ್ತು.

ಬಸವಣ್ಣ ತಾನು ಕಂಡ ಸಮಾಜದಲ್ಲಿ ಅದರ ರೂಪ ರೇಶ್ಲೆಗಳ ಬಗ್ಗೆ ಆತನಿಗೆ ಖಚಿತವಾದ ನಿಲುವಿತ್ತು. ಮೊಟ್ಟ ಮೊದಲನೆಯದಾಗಿ ತನ್ನ ನವಸಮಾಜ ವರ್ಣ ವರ್ಗರಹಿತ ಸಮಾಜವಾಗಿರಬೇಕೆಂಬ ಕನಸಾಗಿತ್ತು. ಸಮಾಜಕ್ಕೆ ಕಂಠಕಪ್ರಾಯವಾಗಿದ್ದ ಜಾತಿಯನ್ನು ಸಮೂಲಾಗ್ರವಾಗಿ ನಾಶಪಡಿಸಿ ವರ್ಗವನ್ನು ಉದಾತ್ತೀಕರಿಸಿ, ಹೊಸ ಸಮಾಜಕ್ಕೆ ನಾಂದಿ ಹಿಡಿಯಲು ಯತ್ನಿಸಿದ."[೨೮]

ಏಕದೇವೋಪಾಸನೆ ಬಸವಣ್ಣನ ನವ ಸಮಾಜ ನಿರ್ಮಾಣದ ಮತ್ತೊಂದು ಮಂತ್ರವಾಗಿತ್ತು. ಏಕದೇವೋಪಾಸನೆಯ ಮೂಲಕ ಸಮಾಜದಲ್ಲಿ ಸಮಾನತೆಯನ್ನು ತರಲು ಸಾಧ್ಯ ಎಂಬುದು ಬಸವಣ್ಣ ನಂಬಿದ್ದ. ತನ್ನ ಸಾಮಾಜಿಕ ಸಮತೆಯ ನವಸಮಾಜದಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನರು, ದೇವರ ಪೂಜೆ ಮತ್ತು ಧರ್ಮದಲ್ಲಿ ಇಬ್ಬರೂ ಸಮಾನರು ಎಂದು ಸಾರಿ ಸ್ತ್ರೀ ವಿಮೋಚನೆಗೆ ಅನುಭವ ಮಂಟಪದ ಮೂಲಕ ಹೊಸ ಹಾದಿ ತೋರಿಸಿದ. 'ಕಾಯಕವೇ ಕೈಲಾಸ' ಎಂಬ ನೀತಿಯನ್ನು ಅನುಸರಿಸುವುದರ ಮೂಲಕ ಎಲ್ಲ ಕಾಯಕಗಳನ್ನು ಸಮಾನವಾಗಿ ನೋಡಿ ಆರ್ಥಿಕ ಸಮಾನತೆ ತರಲು ಬಸವಣ್ಣ ಯತ್ನಿಸಿದ. ಸರ್ವರಿಗೂ ಶಿಕ್ಷಣ ಬಸವಣ್ಣನ ನವ ಸಮಾಜದ ಕನಸಿನ ಕೂಸಾಗಿತ್ತು. ತನ್ನ ನವ ಸಮಾಜದಲ್ಲಿ ವಿವಾಹಕ್ಕೆ ಜಾತಿ ಬಂಧನ ವಿರಬಾರದೆಂದು ಸಾರಿದ. ಭ್ರಷ್ಟರು ಅಧಿಕಾರದಲ್ಲಿರಬಾರದೆಂದು ಬಸವಣ್ಣ ಸ್ಪಷ್ಟವಾಗಿ ಸಾರಿದ. ತಾನು ಕಟ್ಟುವ ಹೊಸ ಸಮಾಜ ಹೀಗಿರಬೇಕೆಂಬುದು ಬಸವಣ್ಣನ ಇಚ್ಛೆಯಾಗಿತ್ತು.

"ಏಕದೇವ ನಿಷ್ಠಾಪಕರಾದ ಭಕ್ತರು, ವರ್ಗಭೇದ, ವರ್ಣ ಭೇದವನ್ನು ತೊರೆದು ಲಿಂಗಧಾರಿಗಳೆಲ್ಲ "ಲಿಂಗಾಯಿತರು" ಎಂಬ ಭಾವದಲ್ಲಿ ಬಾಳಬೇಕು. ಮುಖ್ಯವಾಗಿ ನಡೆನುಡಿಗಳಲ್ಲಿ ಒಂದಾಗಿರಬೇಕು. ದಾಸಿಪುತ್ರನಾಗಲಿ ವೇಶ್ಯಾಪುತ್ರನಾಗಿರಲಿ "ಶಿವದೀಕ್ಷೆ" ಆದ ಬಳಿಕ ಸಾಕ್ಷಾತ್ "ಶಿವನೆಂದು" ವಂದಿಸಬೇಕು. ಸಮಾಜದಲ್ಲಿ ಎಲ್ಲರೂ ಸಮಾನರು ಎಂಬುದನ್ನು ಸ್ಥಿರಗೊಳಿಸಲು, ಸಹಪಂಕ್ತಿ ಭೋಜನ, ಅಂತರ ಜಾತಿಗಳಲ್ಲಿ ವಿವಾಹ ನಡೆಯಬೇಕು. ಕುಲವ ನೋಡದೆ ಆಚಾರ ನೋಡಿ ಅವರಿಗೆ ಬೇಕಾದ ಹೆಣ್ಣು ಕೊಟ್ಟು ತಮಗೆ ಬೇಕಾದ ಹೆಣ್ಣು ತಂದುಕೊಳ್ಳಬೇಕು. ದುಡಿಮೆಯೇ ದೇವರೆಂದು ನಂಬಿ ಬಾಳಬೇಕು. ದುರಾಶೆ ಕಾಯಕದಲ್ಲಿರಬಾರದು. ಚಿತ್ತ ಶುದ್ಧವಾಗಿ ಕಾಯಕ ಮಾಡುವಲ್ಲಿ ಸದ್ಭಕ್ತರಿಗೆ ಎತ್ತ ನೋಡಿದತ್ತ ಲಕ್ಷ್ಮಿ. ಇಂಥವರು ಸಮಾಜದಲ್ಲಿ ತಲೆ ಎತ್ತಿಕೊಂಡು ಬಾಳಬಹುದು. ಹೆಮ್ಮೆಯಿಂದ ಸಹಜೀವನ ನಡೆಯಿಸಬಹುದು. ಇಂಥವರಿಂದ ಸಮಾಜದಲ್ಲಿ ಸಂಘಟನೆಯ ಬಲಗೊಂಡು, ಸಮಾಜವು ವೃದ್ಧಿ ಹೊಂದುತ್ತವೆ.

ಬಸವಣ್ಣನವರ ಸಮಾಜ ರಚನೆ ಒಂದು ಸಹಕಾರ ಮನೋಭಾವದ ಆದರ್ಶ ರಚನೆಯಾಗಿದೆ. ಇದರಲ್ಲಿ ಸಮತಾಭಾವ ಅಡಗಿದೆ. ಪ್ರಬಲವಾದ ಪ್ರಜಾಸತ್ತಾತ್ಮಕ ರಾಷ್ಟ್ರಕಟ್ಟುವ ಕಲ್ಪನೆಯಿದೆ. ಸಮಾಜದ ಸರ್ವರೂ ಸುಖಿ, ಸಮೃದ್ಧ ಜೀವನ ನಡೆಯಿಸುವ ಅನುಕೂಲತೆ ಇದೆ. ಸ್ತ್ರೀ-ಪುರುಷರಿಗೂ ಸರ್ವ ಕಾರ್ಯದಲ್ಲಿಯೂ ಸಮಾನ ಹಕ್ಕಿದೆ. ಸರ್ವ ಜಾತಿಯವರಿಗೆ, ಆತ್ಮೋದ್ಧಾರದ ದ್ವಾರವು ಮುಕ್ತವಾಗಿದೆ.[೨೯] ಈ ರೀತಿಯ ಪರಿಕಲ್ಪನೆ ಬಸವಣ್ಣನವರ ನವ ಸಮಾಜ ನಿರ್ಮಾಣದಲ್ಲಿದೆ.

೫.೭ "ಯೇಸುಕ್ರಿಸ್ತನ ಪರ್ವತ ಪ್ರಸಂಗ"ದಲ್ಲಿನ ಸಾಮಾಜಿಕ ಹಾಗೂ ನೈತಿಕ ಬೋಧನೆಗಳಿಗೆ ಸಂವಾದಿಯಾಗಿ "ಬಸವಣ್ಣನ ವಚನಗಳು"

ಯೇಸುಕ್ರಿಸ್ತನ ಉಪದೇಶಗಳು ಜನರ ಮನಮುಟ್ಟುವಂತೆ ಹೃದಯ ತಟ್ಟುವಂತೆ ಸರಳ, ಸುಂದರ ಹಾಗೂ ಆದರ್ಶಪೂರ್ಣವಾಗಿದ್ದವು. ಕ್ರಿಸ್ತನ ಬೋಧನೆಗೆ ಆಕರ್ಶಿತರಾದ ಜನರು ಗಲಿಲಾಯ, ದಕಪೊಲಿ, ಯೊರೊಸಲೇಮ್, ಯುದಾಯ ಮತ್ತು ಜೊರ್ದನ್ ಹೊಳೆಯ ಆಚೆಯಿಂದಲೂ ದನರು ಗುಂಪು ಗುಂಪಾಗಿ ಸೇರಿ ಆತನ ಬೋಧನೆಗಳನ್ನು ಆಲಿಸುತ್ತಿದ್ದರು. ಗಲಿಲಾಯ ಬೆಟ್ಟವನ್ನು ಏರಿಹೋದ ಏಸುಕ್ರಿಸ್ತನು ಬಂಡೆಯ ಮೇಲೆ ಕುಳಿತಿರುವಾಗ ಆತನ ಶಿಷ್ಯರು ಆತನಬಳಿಗೆ ಬಂದಾಗ ಅವರನ್ನು ಹಾಗೂ ನೆರದ ಜನಸಮೂಹವನ್ನು ಕುರಿತು ಉಪದೇಶಮಾಡುತ್ತಾನೆ. ಈ ಉಪದೇಶ 'ಪರ್ವತ ಪ್ರಸಂಗಗಳು' "Sermon on the mount" ಎಂದು ಪ್ರಸಿದ್ಧವಾಗಿವೆ.

ಯೇಸುಕ್ರಿಸ್ತನ ಬೆಟ್ಟದ ಮೇಲೆ ಮಾಡಿದ ಪ್ರಸಂಗ ಮತ್ತಾಯನು ಬರೆದ ಸುವಾರ್ತೆ ಹಾಗೂ ಲೂಕನು ಬರೆದ ಸುವಾರ್ತೆಗಳಲ್ಲಿ ಪ್ರಸ್ತಾಪಗೊಂಡಿವೆ. ಮತ್ತಾಯನು ಬರೆದ ಸುವಾರ್ತೆಯಲ್ಲಿ ೫,೬,೭, ಮೂರು ಅಧ್ಯಾಯಗಳ ೧೦೯ ಉಪದೇಶ ವಾಕ್ಯಗಳಿದ್ದರೆ, ಲೂಕನು ಬರೆದ ಸುವಾರ್ತೆಯ ೬ನೇ ಧ್ಯಾಯದ ಕೇವಲ ೨೯ ಉಪದೇಶ ವಾಕ್ಯಗಳು ಹೇಳಲ್ಪಟ್ಟಿರುತ್ತವೆ. ಮತ್ತಾಯ ಮತ್ತು ಲೂಕರು ದಾಖಲಿಸಿದ ಪರ್ವತ ಪ್ರಸಂಗದ ಉಪದೇಶಗಳಲ್ಲಿ ಯಾವುದೇ ವಿರೋಧಾಭಾಸಗಳಿರುವುದಿಲ್ಲ. ಲೂಕನು ದಾಖಲಿಸಿದ ವಾರ್ತೆಯಲ್ಲಿ ಕೆಲವೇ ಅಂಶಗಳಿದ್ದು, ಮತ್ತಾಯನು ಬರೆದ ವಾರ್ತೆಯಲ್ಲಿ ಕ್ರಿಸ್ತನ ಬೋಧನೆಗಳು ಸವಿಸ್ತಾರವಾದ ಸಾಮಾಜಿಕ ಮತ್ತು ನೈತಿಕ ಅಂಶಗಳನ್ನು ಒಳಗೊಂಡಂತಿವೆ.

ತುಲನಾತ್ಮಕ ಅಧ್ಯಯನದ ಹಿನ್ನೆಲೆಯಲ್ಲಿ ಕಲ್ಯಾಣದ ಜ್ಯೋತಿ 'ಬಸವಣ್ಣ', ಯೆರೋಸಲೇಮಿನ ಜ್ಯೋತಿ 'ಯೇಸು' ವಿನ ವಚನಗಳಲ್ಲಿ ಇರಬಹುದಾದ 'ಸಾಮಾಜಿಕ ಹಾಗೂ ನೈತಿಕ' ಬೋಧನೆಗಳ ಪರಸ್ಪರ ಸಂವಾದಿ ಅಂಶಗಳನ್ನು ಈ ಕೆಳ ಕಂಡಂತೆ ಗುರುತಿಸಲಾಗಿದೆ.

೧. ಯೇಸು ಕ್ರಿಸ್ತನ ಪರ್ವತದ ಮೇಲಿನ ಬೋಧನೆಗಳು ನಿರ್ದಿಷ್ಟಕಾಲದಲ್ಲಿ ಜನಸಮೂಹವನ್ನು ನಿರ್ದೇಶಿಸಿ ಮಾಡಿದಂತವುಗಳು. ಬಸವಣ್ಣನವರ ವಚನಗಳು ಒಂದು ಸನ್ನಿವೇಶ ಅಥವಾ ಪ್ರಸಂಗದಲ್ಲಿ ಮಾತ್ರ ಹೇಳಲ್ಪಟ್ಟವುಗಳಲ್ಲ. ವಿವಿಧ ಸಂದರ್ಭ, ಸನ್ನಿವೇಶ, ಸ್ತರಗಳಲ್ಲಿ ಮೂಡಿಬಂದಂತವುಗಳು. ಈ ವಚನಗಳಲ್ಲಿ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕವಾಗಿ ವಿವಿಧ ಅಂಶಗಳು ಒಳಗೊಂಡಿರುತ್ತವೆ.

ವಚನಗಳಲ್ಲಿಯ ವಸ್ತುವಿಷಯ,ದೇವನ ಅರಿವು, ಅಸ್ತಿತ್ವದಿಂದ ಮೊದಲುಗೊಂಡು ಸಮಾಜದ ವಿವಿಧ ಅಂಶಗಳಾದ ಅರಿವು, ಆಚರಣೆ, ಮೂಢನಂಬಿಕೆ ಮುಂತಾದ ವಿಷಯಗಳಲ್ಲಿ ಹರವಿ ಕೊಂಡಿದೆ. ಬಸವಣ್ಣನವರ ವಚನ ನಿರೂಪಣೆಯಲ್ಲಿ ಹೆಚ್ಚಾಗಿ ಆತ್ಮಾವಲೋಕನ, ಸ್ವವಿಮರ್ಶೆ, ಬೇಕು. ಬೇಡೆಂಬ ಸವಿನಯದ ಬೋಧೆಯೋಪಾದಿಯಲ್ಲಿರುವುದನ್ನು ಕಾಣಬಹುದು. ಎಲ್ಲೋ ಕಿಂಚಿತ್ತಾಗಿ ಅಧಿಕಾರವಾಣಿಯಿಂದ ಹೇಳಿದ ಮಾತುಗಳು ಕಂಡುಬರುವುದುಂಟು.

೨. ಯೇಸುಕ್ರಿಸ್ತನ ಪರ್ವತದ ಬೋಧನೆಗಳಲ್ಲಿ ಸಾಮಾಜಿಕ ಮತ್ತು ನೈತಿಕ ಅಂಶಗಳೇ ಇದ್ದು, ಅವು ತಾನು, ಅಂದರೆ ಯೇಸುಕ್ರಿಸ್ತ ಬರುವುದಕ್ಕಿಂತ ಮೊದಲು ಶಾಸ್ತ್ರಿಗಳು ಬೋಧಿಸುತ್ತಿದ್ದ ಬೋಧನೆಗಳಿಗೆ ಪರಿಷ್ಕರಣಾತ್ಮಕವಾಗಿ ಹೊಸ ವಿಚಾರ ಮತ್ತು ಹೊಸ ಅಂಶಗಳನ್ನು ಮನವರಿಕೆ ಮಾಡಿಸಿದಂತಿವೆ. ಈ ಪರ್ವತ ಪ್ರಸಂಗ ಬೋಧನೆಗಳು ಅಧಿಕಾರವಾಣಿಯಿಂದ ಹೇಳಿದ ಶಾಸನಗಳಂತಿರುವುದನ್ನು ಇಲ್ಲಿ ಕಾಣಬಹುದು.

ಮತ್ತಾಯನು ಬರೆದ ಸುವಾರ್ತೆಯ ೫ನೇ ಅಧ್ಯಾಯದ ಯೇಸುಕ್ರಿಸ್ತನ ಪರ್ವತದ ಮೇಲೆ ಮಾಡಿದ ಪ್ರಸಂಗದ ಆರಂಭದ ಹನ್ನೆರಡು ಬೋಧೆಗಳು. ಮಾನವನು ಇಹಪರಗಳಲ್ಲಿ ದೇವನ ಕೃಪೆ ಹಾಗೂ ಸಾನ್ನಿಧ್ಯ ಪಡೆಯಲು ಇರಬೇಕಾದ ವರ್ತನಾ ಗುಣ ವಿಶೇಷವಾಗಿವೆ. "ಆತ್ಮದಲ್ಲಿ ಬಡವರಾದವರು, ದುಃಖಪಡುವವರು, ಶಾಂತರು, ನೀತಿಗೆ ಹಸಿದು ಬಾಯಾರಿದವರು, ಕರುಣೆಯುಳ್ಳವರು, ನಿರ್ಮಲಚಿತ್ತರು, ಸಮಾದಾನ ಪಡಿಸುವವರು, ನೀತಿಯ ನಿಮಿತ್ತ ಹಿಂಸೆಯನ್ನು ತಾಳಿಕೊಳ್ಳುವವರು, ಧನ್ಯರಾಗಿದ್ದಾರೆ. ಕಾರಣ, ಇವರಿಗೆ ಭೂಲೋಕದಲ್ಲಿ ಬಾಧ್ಯತೆ, ಪರಲೋಕದಲ್ಲಿ ಸ್ಥಾನ, ಪರಮಾತ್ಮನ ಕೃಪೆ ಲಭಿಸುತ್ತದೆ. ಕ್ರಿಸ್ತನ ನಿಮಿತ್ತವಾಗಿ (ಸತ್ಯ-ದೇವ) ನಿಂದನೆಗೆ, ಹಿಂಸೆಗೆ, ದುಃಖಕ್ಕೆ ಗುರಿಯಾದವರು ಧನ್ಯರೆಂದು, ಅದಕ್ಕಾಗಿ ಸಂತೋಷ ಪಡಿರಿ, ಉಲ್ಲಾಸಪಡಿರಿ."[೨೦] ಎಂದು ಹೇಳುವ ಈ ವಾಕ್ಯಗಳು ನಾನೆಂಬ ಶರೀರಗುಣದ ಅಹಂ ಅಳಿದು, ಲೋಕಪರ ಅನುಕಂಪ ಅಳವಿಟ್ಟಲ್ಲಿ ದೈವಕೃಪೆ ಸಾಧ್ಯವೆಂಬುದನ್ನು ಸಾರುತ್ತಿವೆ.

೩. ಈ ಕಿಂಕರ, ದಾಸೋಹಂಭಾವದ ಅಂಶಗಳನ್ನೇ ಬಸವಣ್ಣನವರ ವಚನಗಳಲ್ಲಿ ಕಾಣಬಹುದಾಗಿದೆ. ಬಸವಣ್ಣನವರು ವಚನಗಳಲ್ಲಿ ಉಪದೇಶಾತ್ಮಕ ಪರಬೋಧೆಯಂತೆ ಹೇಳದೇ ತಮಗೆ ತಾವೇಹೇಳಿ ಕೊಂಡಂತೆ ತಿಳಿಸಿರುತ್ತಾರೆ. "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಯರಿಲ್ಲ"[೨೧] "ಮೇಲಾಗಲೊಲ್ಲೆ ಕೀಳಾಗಿರಲಾರೆ"[೨೨] ಎಂಬಲ್ಲಿ ಆತ್ಮದಲ್ಲಿ ಬಡತನವನ್ನು, "ಎನ್ನ ಮಾನಾಪಮಾನ ನಿಮ್ಮದಯ್ಯ. ಎನ್ನ ಹಾನಿ ವೃದ್ಧಿ ನಿನ್ನದಯ್ಯ"[೨೩] ಎನ್ನುವಲ್ಲಿ ದುಃಖ ಪಡುವುದನ್ನು ಕಾಣಬಹುದು. ಅಂತೆಯೇ ಕರುಣೆಯನ್ನು "ಎನ್ನ ಹೃದಯದಲ್ಲಿ ನಿಮ್ಮಚರಣದುಂದಿಗೆ ಯನೊತ್ತಯ್ಯಾ"[೨೪] ಎಂದು, 'ಎನ್ನ ಚಿತ್ತವು ನಿಮ್ಮ ಮೇಲೆ ಸಂಗಯ್ಯ'[೨೫] ಎಂಬ ನಿರ್ಮಲ ಚಿತ್ತ, "ಸಂದೇಹಿನಾನು, ಡಂಬಕ ನಾನು, ಶರಣರ ಡಿಂಗರಿಗ ನಾನು ಎಂಬ ನೀತಿಯನ್ನು"[೨೬] ಹೊಂದಿರಬೇಕೆಂಬ ಅಂಶವನ್ನು ಬಸವಣ್ಣನವರು ನಿರೂಪಿಸುತ್ತಾರೆ.

‘ಕಾಯಗುಣಂಗಳ ಕಳೆದವರಿಗೆ ಶರಣೆಂಬೆ[೩೭]
‘ನೀನೊಲಿಯೆತ್ತೆ ಪುಣ್ಯ, ನೀನೊಲ್ಲದುದೆ ಪಾಪ[೩೮]
‘ಮಾಡುವಲ್ಲಿ ನೀಡುವಲ್ಲಿ ಕೂಡೆ ಶುದ್ದನಲ್ಲ-
‘ದಿರ್ದಡೆ ನೀನಂದೆ ಮೂಗ ಕೊಯಿ’[೩೯]
‘ಕಲಹ ಕಡುಕೋಪಿನಾನಯ್ಯ, ದುರಾಚಾರಿನಾನು,
ಎನಗೆ ಕರುಣಿಸು ಕೂಡಲ ಸಂಗಮ ದೇವಾ’[೪೦]
‘ತ್ರಾಹಿ ತ್ರಾಹಿ ತಪ್ಪೆನ್ನದು ಕ್ಷಮೆನಿಮ್ಮದು
‘ಕೂಡಲ ಸಂಗಮ ದೇವಾ ನಿಮ್ಮಕರುಣೆಯಕಂದನಾನು’[೪೧]

ಮುಂತಾದ ಈ ಎಲ್ಲಾ ವಚನಗಳಲ್ಲಿ ಕ್ರಿಸ್ತನ ನೀತಿ, ಶಾಂತಿ, ನಿರ್ಮಲಚಿತ್ತ, ಸಮಾಧಾನ, ಸಹನೆ ಹಾಗೂ ಆತ್ಮದ ಬಡತನದ ಅಂಶಗಳು ಸಂವಾದಿಯಾಗಿ ಮೂಡಿವೆ. ನೆಲೆಗೊಳ್ಳುವಂತ ಇಂತಹ ಸದ್ಗುಣಗಳು ಕೂಡಲ ಸಂಗಮನಲ್ಲಿ ಬಸವಣ್ಣನ ಬಿನ್ನಹ ಕಾಣುತ್ತದೆ.

೪. “ದೈವ ನಿಮಿತ್ತವಾಗಿ ಹಿಂಸೆಗೆ ಒಳಗಾಗುವವರನ್ನು ನಿಂದೆಗೆ, ಅಪವಾದಕ್ಕೆ ಗುರಿಯಾಗುವವರನ್ನು ಧನ್ಯರೆಂದು ಅದಕ್ಕಾಗಿ ಸಂತೋಷ, ಉಲ್ಲಾಸ ಪಡಿರಿ”[೪೨] ಯೇಸುಕ್ರಿಸ್ತ ಹೇಳುತ್ತಾ, ಪರ ಲೋಕದಲ್ಲಿ ಹೆಚ್ಚಿನ ಫಲಸಿಗುವುದೆಂದು ನುಡಿಯುತ್ತಾನೆ. ಇದಕ್ಕಾಗಿಯೇ ಬಸವಣ್ಣನವರು ಎಲ್ಲ ನಿಂದೆ, ಅಪಮಾನ, ಹಿಂಸೆಗಳನ್ನು ಸಹಿಸಿಕೊಳ್ಳುತ್ತಾರೆ.

‘ಹೊಯಿದವರೆನ್ನ ಹೊರೆದವರೆಂಬೆ,
ಬಯಿದವರೆನ್ನ ಬಂಧುಗಳೆಂಬೆ,
ನಿಂದಿಸಿದವರೆನ್ನ ತಂದೆ ತಾಯಿಗಳೆಂಬೆ,
ಆಳಿಗೊಂಡವರೆನ್ನ ಆಳ್ದವರೆಂಬೆ,
ಜರಿದವರೆನ್ನ ಜನ್ಮ ಬಂಧುಗಳೆಂಬೆ,
ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದರೆಂಬೆ,’[೪೩]

ಕೂಡಲ ಸಂಗಮ ದೇವಾ, ಎನ್ನುತ್ತ ಹೊಗಳಿದವರು ಹೊನ್ನಶೂಲದಿಂದ ಇರಿದ ವೈರಿಗಳಾಗಿ, ಹೊಡೆದವರು, ಬಯ್ದವರು, ನಿಂದಿಸಿದರು, ಸಿಟ್ಟಾದವರು, ತಿರಸ್ಕರಿಸಿದವರನ್ನೆಲ್ಲಾ ಸಾಕಿದವರು, ಬಂಧುಗಳು, ತಂದೆ ತಾಯಿಗಳು, ಒಡೆಯರು, ಜನ್ಮ ಬಂಧುಗಳೆಂದು ಗೌರವಿಸುತ್ತಾನೆ. ಸ್ತುತಿಸಿದ ಮತ್ತು ನಿಂದಿಸಿದ ಇಬ್ಬರನ್ನು ಬಂಧುಗಳೆಂದು ಕರೆಯುತ್ತಾರೆ. ಏಕೆಂದರೆ, ಈ ಇಬ್ಬರೂ “ಪಾಪವನೊಬ್ಬಕೊಂಬ, ಪುಣ್ಯವನೊಬ್ಬಕೊಂಬ, ಕೂಡಲ ಸಂಗಮ ದೇವಾ ನಿಮ್ಮ ಶರಣರು ನಿತ್ಯ ಮುಕ್ತರು”[೪೪] ಎನ್ನುತ್ತ ನಿಂದೆ, ಅಪಮಾನ, ಹಿಂಸೆ, ನೋವುಗಳು ದೇವನೊಲುಮೆಯ ಸಾಧನೆಗಳೆಂದು ಬಸವಣ್ಣನ ವಚನಗಳು ಪರೋಕ್ಷವಾಗಿ ಯೇಸುಕ್ರಿಸ್ತರ ಮಾತನ್ನೇ ಅನುಮೋದಿಸಿದಂತಿದೆ.

೫. “ನೀವು ಭೂಮಿಗೆ ಉಪ್ಪಾಗಿದ್ದೀರಿ. ಉಪ್ಪು ಸಪ್ಪಗಾದರೆ ಇನ್ನಾತರಿಂದ ಉಪ್ಪಿನ ರುಚಿ ಬಂದೀತು? ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಗುಡ್ಡದ ಮೇಲೆ ಕಟ್ಟಿರುವ ಊರುಮರೆಯಾಗಿರಲಾರದು”[೪೫] ಎಂಬ ಕ್ರಿಸ್ತನ ಬೋಧನೆಯಲ್ಲಿ ಜಗತ್ತಿನಲ್ಲಿ ಶ್ರೇಷ್ಠ ಜೀವಿ ಎನಿಸಿದ ಮಾನವನ ಮಹತ್ವ ಹಾಗೂ ಅದನ್ನು ಮರೆತರೆ

ಸರಿಪಡಿಸಲಾರದ ಸ್ಥಿತಿಯ ಅಂಶವು ವ್ಯಕ್ತವಾಗಿರುವುದನ್ನು ಇಲ್ಲಿ ಕಾಣಬಹುದು. ಇದೇ ಅಂಶವನ್ನೇ ಬಸವಣ್ಣನವರು ತಮ್ಮದೇ ಆದ ರೀತಿಯಲ್ಲಿ ದೇವರನ್ನೇ ಪ್ರಶ್ನಿಸುತ್ತಾರೆ.

> **"ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ**
> **ಧರೆ ಹತ್ತಿ ಉರಿದಡೆ ನಿಲಲುಬಾರದು**
> **ಏರಿ ನೀರುಂಬಡೆ, ಬೇಲಿಕೆಯ್ಯಮೇವಡೆ,**
> **ತಾಯಿಮೊಲೆವಾಲು ನಂಜಾಗಿ ಕೊಲುವಡೆ,**
> **ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ"**[೪೬]

ಜೀವಿಗಳ ಆಸರೆ ಭೂಮಿ, ನೀರಿನ ನಿಲುಗಡೆ ಏರಿ, ಮನೆಯ ಸಂರಕ್ಷಣೆ ಮನೆಯೊಡತಿ, ಮಗುವಿನ ಜೀವದ ಅಮೃತ ತಾಯಿ ಎದೆ ಹಾಲು. ಇವೇ ತಮ್ಮತನವನ್ನು ಕಳೆದುಕೊಂಡರೆ ಏನೂ ಮಾಡಲಾಗದೋ ಹಾಗೆಯೇ ಪದಾರ್ಥಕ್ಕೆ ಮಧುರತೆ ನೀಡುವ ಉಪ್ಪಿನಂತೆ, ಜೀವ ಜಗತ್ತಿನ ಕಿರೀಟವಾದ ಮಾನವ ತನ್ನ ಮಾನವೀಯ ಮೌಲ್ಯ ಕಳೆದುಕೊಂಡರೆ, ತನ್ನ ಪ್ರಕಾಶವೇನೆಂದು ಅರಿತು ಜ್ಯೋತಿಯಾಗಿ ಬೆಳಗದಿದ್ದರೆ ಹೇಗೆ? ಅರಿತು ಬಾಳಿ ಬೆಳಗಿದರೆ ಜಗದ ಒಡೆಯ ಜಗದೀಶನು ಕೊಂಡಾಡುವನು.

೬. ಸಾಮತಿ, ದೃಷ್ಟಾಂತಗಳ ಮೂಲಕ ಜನರಿಗೆ ಅರಿವನ್ನುಂಟುಮಾಡುತ್ತ ಸಾಗಿದಾಗ, ಇವರೇನೋ ಹಿಂದೆ ಇಲ್ಲದ ಯಾವುದೋ ಹೊಸದನ್ನು ತಿಳಿಸುತ್ತಿದ್ದಾರೆ. ನಮ್ಮ ಪೂರ್ವ ಪರಂಪರೆಯನ್ನು ನಾಶ ಮಾಡುವಂತಿದೆ ಎಂಬ ಸಂಶಯವು ಜನರಲ್ಲಿ, ಶಾಸ್ತ್ರಿಗಳಲ್ಲಿ, ಫರಿಸಾಯರಲ್ಲಿ, ಯಾಜಕ ವರ್ಗದವರಲ್ಲಿ ಅವರ ಅಜ್ಞಾನದ ದೆಸೆಯಿಂದ ಉಂಟಾಯಿತು. ಆ ಸಂಶಯ ಅನುಮಾನಗಳ ಜನರ ಮುಖದ ಮೇಲಿನ ಲಕ್ಷಣವನ್ನು ಕಂಡು ಯೇಸು ಕ್ರಿಸ್ತರು, "ನಾನು ಮೋಶೆಯ ಧರ್ಮಶಾಸ್ತ್ರವನ್ನಾಗಲಿ, ಪ್ರವಾದಿಗಳ ವಚನಗಳನ್ನಾಗಲಿ ತಗೆದು ಹಾಕುವುದಕ್ಕೆ ಬಂದಿಲ್ಲ. ಅವುಗಳನ್ನು ನೆರವೇರಿಸಲು ಬಂದಿದ್ದೇನೆ. ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಪರಿಸಾಯರ ನೀತಿಗಿಂತಲೂ ಹೆಚ್ಚಾದರೆ ಪರಲೋಕ ರಾಜ್ಯ ಸೇರಬಲ್ಲಿರೆಂದು ಹೇಳಲು ಬಂದಿದ್ದೇನೆ."[೪೭]

ಬಸವಣ್ಣನವರು ಕೂಡ ಮಹಾದೇವನ ಆಣತಿಯಂತೆ ಭೂಲೋಕದ ನಡೆ ಕೆಡಬಾರದೆಂದು, ಅಂದಿನ ಆಚರಣೆಗಳ ದೋಷವನ್ನು ತಿಳಿಸಿ, ಸರಿಯಾದ ನಡೆ, ನುಡಿ ಆಚರಣೆಗಳಿಂದ 'ಶಿವಪದ' ಪರಲೋಕ ರಾಜ್ಯ ಜನರಿಗೆ ಇಲ್ಲೇ ದೊರೆಯುವಂತೆ ಮಾಡಲು ಭೂಲೋಕಕ್ಕೆ ಬಂದಿದ್ದಾರೆ. ಆದರೆ ಈ ಮಾತನ್ನು ಬಸವಣ್ಣನವರು ತಮ್ಮ ವಚನದಲ್ಲಿ ಎಲ್ಲೂ ಹೇಳಿಲ್ಲ. ಸಮಕಾಲೀನರಾದ ಅನುಭವ ಮಂಟಪದ ಶೂನ್ಯಸಿಂಹಾಸನದ ಅಧ್ಯಕ್ಷನಾಗಿದ್ದ ಅಲ್ಲಮ ಪ್ರಭು ತನ್ನ ವಚನದಲ್ಲಿ ಹೇಳಿರುವುದನ್ನು ಕಾಣಬಹುದು.

> **ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು,**
> **ಕರ್ತನಟ್ಟಿದೆನಯ್ಯಾ ಒಬ್ಬ ಶರಣನ, ಆಶರಣ ಬಂದು,**
> **ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿ,**
> **ರುದ್ರಗಣ ಪ್ರಮಥಗಣಂಗಳೆಲ್ಲರ ಹಿಡಿತಂದು,**

ಅಸಂಖ್ಯಾತರೆಂಬ ಹೆಸರಿಟ್ಟು ಕರೆದು, ಭಕ್ತಿಯ
ಕುಳಸ್ಥಳವ ಶ್ರುತದೃಷ್ಟ ಪವಾಡದಿಂದ
ಮೆರೆದು ತೋರಿ, ಜಗವರಿಯಲು ಶಿವಾಚಾರದ
ಧ್ವಜವನೆತ್ತಿ, ಮತ್ರ್ಯಲೋಕ ಶಿವಲೋಕವೆರಡಕ್ಕೆ
ನಿಚ್ಚಣಿಕೆಯಾದನು[೪೮]

೭. ಹಿಂಸೆ, ವ್ಯಭಿಚಾರಗಳು ಪಶುವರ್ತನೆಗಳಾಗಿದ್ದು, ನರಹತ್ಯೆಯಂತೂ ರಾಕ್ಷಸೀ ಕೃತ್ಯವೆನಿಸುತ್ತದೆ. ಯೇಸುಕ್ರಿಸ್ತ "ನರಹತ್ಯ ಮಾಡಬಾರದು. ಸಹೋದರನ ಮೇಲೆ ಸಿಟ್ಟಾಗಬಾರದು, ಛೀ ನೀಚ, ಮೂರ್ಖ ಎಂದು ನಿಂದಿಸಬಾರದು, ವ್ಯಭಿಚಾರ ಮಾಡಬಾರದು, ಪರಸ್ತ್ರೀ ವ್ಯಾಮೋಹ ಸಲ್ಲದು ಈ ಕೃತ್ಯಗಳಿಗೆ ಎಳೆಯುವ ಕಣ್ಣು, ಕೈಗಳು ಹೋದರು ಚಿಂತಿಸಬಾರದು. ದೇಹವೆಲ್ಲ ನರಕದಲ್ಲಿ ಬೀಳುವುದಕ್ಕಿಂತ ಅವಯವಗಳು ಹೋಗುವುದೇ ಲೇಸು"[೪೯] ಎಂದು ಹೇಳುತ್ತಾನೆ. ಪರರನ್ನು ಹಿಂಸಿಸುವುದು ಪರಮಾತ್ಮನನ್ನೇ ಹಿಂಸಿಸಿದಂತೆ. ಆದ್ದರಿಂದಲೇ ಬಸವಣ್ಣನವರ ಮಾನವ ಕುಲದ ಶಾಸನವೆಂಬಂತಿರುವ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಬಹಿರಂಗಗಳ ಶುದ್ಧಿ ಇದೇ ದೇವರನ್ನು ಒಲಿಸುವ ಸುಲಭ ವಿಧಾನ"[೫೦]ವೆಂದು ಹೇಳಿದ ವಚನದಲ್ಲಿ ಕಳ್ಳತನ, ಪರಹಿಂಸೆ, ವ್ಯಭಿಚಾರಗಳು ಸಲ್ಲವೆಂದು ಅರಿಯಬಹುದಾಗಿದೆ. ಯೇಸು ಕ್ರಿಸ್ತರು, ತಮ್ಮ ಪೂರ್ವಜರು ಉಪದೇಶಿಸಿದ ಮಾತುಗಳಲ್ಲಿ ಸೂಕ್ಷ್ಮತೆಯನ್ನು ತಿಳಿಸುವಲ್ಲಿ, ನರಹತ್ಯೆಯೆಂದರೆ ಆಯುಧದಿಂದ ಒಬ್ಬನನ್ನು ಕೊಲ್ಲುವುದು ಮಾತ್ರವಲ್ಲದೇ, ಮಾತಿನಿಂದ ಮನಸ್ಸಿಗೆ ನೋವನ್ನುಂಟುಮಾಡುವುದು ಹತ್ಯೆಯಷ್ಟೇ ಭಯಂಕರವೆಂದು ಹೇಳುತ್ತಾರೆ. ಈ ಭಾವದಿಂದ ದೇವರಿಗೆ ಅರ್ಪಿಸುವ ಕಾಣಿಕೆ ಸಲ್ಲದೆಂದು ಹೇಳಿದ ಮಾತಿನ ಪ್ರತಿಧ್ವನಿಯಂತೆ ಬಂದ ಬಸವಣ್ಣನವರ ವಚನ ಈ ರೀತಿ ಇದೆ.

"ಕೋಪಿ ಮಜ್ಜನಕ್ಕೆರೆದಡೆ ರಕ್ತದ ಧಾರೆ,
ಪಾಪಿ ಹೂವನೇರಿಸಿದಡೆ ಮಸೆದಡ್ಡಾಯುಧದ ಗಾಯ."[೫೧]

ಕೋಪ, ಪಾಪಗಳಿಂದ ಮಾಡುವ ಪೂಜೆ ದೇವನಿಗೆ ಘಾಸಿಗೊಳಿಸುವವು. ವ್ಯಭಿಚಾರದ ಮಾತು ಬಂದಾಗ "ನೋಡಲಾಗದು ನುಡಿಯಲಾಗದು ಪರಸ್ತ್ರೀಯ ಬೇಡಕಾಣಿರೋ."[೫೨] "ಹರಿವ ಹಾವು, ಉರಿವ ಬೆಂಕಿ, ಸುರಗಿಯ ಮೊನೆಗೆ ಅಂಜದ ನಾನು ಪರಸ್ತ್ರೀ ಪರಧನವೆಂಬೀ ಜೋಬಿಂಗಂಜುವೆ"[೫೩]ನೆನ್ನುತ್ತಾರೆ ಬಸವಣ್ಣ. ಪಾಪಕ್ಕೆ ಕಾರಣವಾಗುವ ಅಂಗಾಂಗಗಳನ್ನು ಕಳೆದುಕೊಂಡರು ಚಿಂತೆಯಿಲ್ಲ, ಆದರೆ ಪಾಪ ಮಾಡದೆ ದೈವಾಭಿಮುಖವಾಗಿರು ಕ್ರಿಸ್ತ ನುಡಿದರೆ, ತಾಗುವಾ ಮುನ್ನ ಬಾಗುವಾಕಲೆ ಲೇಸೆಂಬುವಂತೆ' ಅತ್ತಲಿತ್ತ ಹೋಗದಂತೆ ಹೆಳವನ ಮಾಡು, ಸುತ್ತಿಸುಳಿದು ನೋಡದಂತೆ ಅಂಧಕನ ಮಾಡು. ಮತ್ತೊಂದ ಕೇಳದಂತೆ ಕಿವುಡನ ಮಾಡು, ನಿಮ್ಮ ಶರಣರ ಪಾದವಲ್ಲದೇ ಅನ್ಯ ವಿಷಯಕ್ಕೆ ಎಳಯದಂತೆ ಇರಿಸು"[೫೪] ಎಂದು ಬಸವಣ್ಣ ದೇವರಲ್ಲಿ ಪ್ರಾರ್ಥಿಸುತ್ತಾನೆ.

೮. ಪ್ರಮಾಣ ಪೂರ್ವಕ ನಾನು ಇದ್ದೇನೆ. ಮಾಡಿದ್ದೇನೆಂದು ಖಂಡಿತವಾಗಿ ಹೇಳುವಲ್ಲಿ ಮಾನವರು. 'ಆಣೆ'ಯನ್ನು ಇಡುತ್ತಾರೆ. ಇದು ತಪ್ಪೆಂದು, ಅದರಲ್ಲೂ ದೇವರ ಮೇಲೆ ಆಣೆ ಇಡುವುದಂತು ಮಹಾ ಅಪರಾಧವೆಂಬುದು ಯೇಸುಕ್ರಿಸ್ತ, ಬಸವಣ್ಣನವರಿಬ್ಬರ ಅಭಿಪ್ರಾಯವಾಗಿದೆ.

'ನೀನು ಸುಳ್ಳಾಣೆಯನ್ನೇ ಇಡಬೇಡ, ಆಕಾಶದ ಮೇಲೆ ಆಣೆ ಇಡಬೇಡ, ಭೂಮಿಯ ಮೇಲೆ ಆಣೆ ಇಡಬೇಡ, ಯೂರೋಸಲೇಮಿನ ಮೇಲೆ ಆಣೆ ಇಡಬೇಡ, ನಿನ್ನ ತಲೆಯ ಮೇಲೆ ಕೂಡ ಆಣೆ ಇಡಬೇಡ"[೫೫]ವೆಂದು ಯೇಸುಕ್ರಿಸ್ತರು ಹೇಳಿದರೆ, 'ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ, ಅಡಿಗಡಿಗೆ ಗುರುವಿನಾಣೆ ಎಂಬ ವಚನವೇ ಹೊಲ್ಲ. ಇದು, ನಗುನಗುತ್ತ ಅಲಗಿನಿಂದ ಇರಿದುಕೊಂಡಂತೆ"[೫೬] ಎಂದೆನ್ನುತ್ತಾನೆ ಬಸವಣ್ಣ.

೯. ಏಟಿಗೆ-ಏಟು, ಸೇಡಿಗೆ-ಸೇಡು ಸಲ್ಲದು. ದ್ವೇಷವನ್ನು ಪ್ರೀತಿಯಿಂದಲೂ, ಹಿಂಸೆಯನ್ನು ಅಹಿಂಸೆಯಿಂದಲೂ ಎದುರಿಸಬೇಕು. ಅದೇ ನಿಜವಾದ ಸಾಧನೆ ಪಥವೆಂದು ಯೇಸುಕ್ರಿಸ್ತ ಈ ಉಪದೇಶದ ಮೂಲಕ ಸಾರುತ್ತಾನೆ. ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗಿಸು ಎಂದು ಹೇಳಿದೆ ಎಂದು ಕೇಳಿದ್ದೀರಿ. ಆದರೆ, ನಾನು ನಿಮಗೆ ಹೇಳುವುದೆಂದರೆ ಕೆಡುಕನನ್ನು ಎದುರಿಸಬೇಡ, ಒಬ್ಬನು ನಿನ್ನ ಬಲಕೆನ್ನೆಗೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಕೊಡು. ನಿನ್ನ ಸಂಗಡ ವ್ಯಾಜ್ಯಾವಾಡಿ ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನು ಬಿಡು"[೫೭] ಇದಕ್ಕೆ ಕೆಂಪಂಗಿಯಾಗಿ ಬಸವಣ್ಣ "ತನಗೆ ಮುನಿದವರಿಗೆ ತಾ ಮುನಿಯಲೇಕೆ?" ಎಂದು ಪ್ರಶ್ನಿಸಿ, "ತನುವಿನ ಕೋಪ ತನ್ನ ಹಿರಿತನದ ಕೇಡು. ಮನದ ಕೋಪ ತನ್ನ ಅರಿವಿನ ಕೇಡು, ಮನೆಯಲ್ಲಿಯ ಬೆಂಕಿ ಮೊದಲು ಆ ಮನೆಯನ್ನು ಸುಡುತ್ತದೆ, ನೆರ ಮನೆಯನ್ನು ಸುಡಲಾರದು"[೫೮] ಹೇಳುತ್ತಾನೆ. ಅರಮನೆಗೆ ಕಳ್ಳತನಕ್ಕೆಂದು ಬಂದ ಕಳ್ಳ ಬಸವಣ್ಣನ ಹೆಂಡತಿಯ ಕಿವಿಯ ಓಲೆ ಕದಿಯುವಾಗ ಸಿಕ್ಕಿಬಿದ್ದರೆ, ಅವನನ್ನು ದಂಡಿಸುವ ಬದಲು ವಂದಿಸುತ್ತಾನೆ. ಒಳ ಅಂಗಿ ಬೇಡುವವನಿಗೆ ಮೇಲಂಗಿ ಕೊಟ್ಟಂತೆ "ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ ಕೂಡಲಸಂಗಮ ದೇವನಲ್ಲದೆ ಆರೂ ಇಲ್ಲ. ನಮ್ಮಯ್ಯನ ಕೈನೊಂದಿತು. ಓಲೆಯನ್ನು ಬಿಚ್ಚಿಕೊಡೆ ಚಂಡಾಲಗಿತ್ತಿ"[೫೯] ಎಂದು ಹೆಂಡತಿಯನ್ನು ಭಕ್ತಿಯ ಆವೇಗದಲ್ಲಿ ಬೈಯುತ್ತಾನೆ. ಮತ್ತೊಮ್ಮೆ ಕಳ್ಳರು ಆಕಳುಗಳನ್ನು ಕದ್ದು ಒಯ್ದಾಗ "ಅಲ್ಲಿ ಉಂಬಡೆ ಸಂಗ, ಇಲ್ಲಿ ಉಂಬಡೆ ಸಂಗ ಅರಸಾಡ ಬೇದಿರಿ. ಕರುಗಳನ್ನು ಕೊಂಡೊಯ್ದು ಆಕಳ ಬಳಿ ಬಿಟ್ಟು ಬನ್ನಿ"[೬೦] ಎಂದು ಆಕಳನ್ನು ಕದ್ದ ಕಳ್ಳರಿಗೆ ಅವುಗಳ ಕರುಗಳನ್ನೂ ಕೊಡುತ್ತಾನೆ. ಬೇಡುವವರು ಬಂದರೆ ನೀಡುವ ಹಂಬಲ ಬಸವಣ್ಣನಿಗೆ ಎಷ್ಟಿತ್ತೆಂದರೆ, "ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ, ಕಣ್ಣು ಬೇಡಿದಡೀವೆ, ತಲೆ ಬೇಡಿದಡೀವೆ, ಕೂಡಲ ಸಂಗಮ ದೇವಾ ನಿಮಗಿತ್ತು ನಿಮ್ಮ ಪುರಾತನರ ಮನೆಯಲ್ಲಿ ಶುದ್ಧನಾಗಿಪ್ಪೆನು"[೬೧] ಎನ್ನುತ್ತಾನೆ. ಕ್ರಿಸ್ತನ ಆದೇಶವು ಈ ಮಾತಿನ ಪ್ರತಿರೂಪವಾಗಿ 'ನಿನ್ನನ್ನು ಬೇಡುವವನಿಗೆ ಕೊಡು, ನಿನ್ನಲ್ಲಿ ಕಡಾ ಕೇಳಬೇಕೆಂದು ಬಂದವನಿಗೆ ಮುಖ ತಿರುವಿಕೊಳ್ಳಬೇಡ'ವೆಂದು ಮೂಡಿಬಂದಿದೆ."[೬೨]

೧೦. ನೆರೆಹೊರೆಯವರು ಅನ್ಯೋನ್ಯವಾಗಿರಬೇಕು. ನೆರೆ, ಹೊರೆಯಾಗಬಾರದೆಂದು ಕ್ರಿಸ್ತರು ತಮ್ಮ ಸಂದೇಶದಲ್ಲಿ "ನಿನ್ನ ನೆರೆಯವನನ್ನು ಪ್ರೀತಿಸು, ನಿಮ್ಮ ವೈರಿಗಳನ್ನು ಪ್ರೀತಿಸಿರಿ. ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ನಿಮ್ಮನ್ನು ಪ್ರೀತಿಸುವವರನ್ನೂ ನೀವು ಪ್ರೀತಿಸಿದರೆ ಫಲವೇನು? ಭ್ರಷ್ಟನೂ ಹಾಗೆ ಮಾಡುತ್ತಾನೆ. ನೀವು ಅನ್ಯರನ್ನು ಪ್ರೀತಿಸುವ ಮೂಲಕ ಪರಲೋಕದಲ್ಲಿರುವ ನಿಮ್ಮ ತಂದೆಯಂತೆ ದೋಷವಿಲ್ಲದವರಾಗಿರಿ"[೬೩] ಎಂದು ಸಾರಿದ ವಾಣಿಯನ್ನೆ ಬಸವಣ್ಣ "ಇವನಾರವ ಇವನಾರವ, ಇವನಾರವನೆಂದೆನಿಸದಿರಯ್ಯಾ, ಇವನಮ್ಮವ, ಇವನಮ್ಮವ, ಇವನಮ್ಮವನಿಂದೆನಿಸಯ್ಯಾ, ಕೂಡಲ ಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸ್ಯಾ. ಎಂದು ಹೇಳುವ ಮೂಲಕ ಸರ್ವರನ್ನು ತನ್ನವರೇ ತನ್ನ ಒಡಹುಟ್ಟಿದವರೇ, ರಕ್ತ ಸಂಬಂಧಿಗಳೇ ಎಂಬಂತೆ ಭಾವಿಸಿರೆನ್ನುತ್ತಾನೆ.

೧೧. ಜನರು ಪ್ರಚಾರ ಪ್ರಿಯರು, ಬೇರೆಯವರು ನೋಡಲೆಂದು, ಮೆಚ್ಚಲೆಂದು ತೋರಿಕೆಯ ಆಚರಣೆಗಳನ್ನೆ ಮಾಡುವವರು ಜಾಸ್ತಿ. ಆದರೆ ಈ ಆಚರಣೆ ದೇವರ ಮುಂದೆ ಸಲ್ಲದು. ದೇವರು ಒಳ ಹೊರಗೆರಡನ್ನೂ ಬಲ್ಲವನು. ಆತನಲ್ಲಿ ಬೇಡುವುದೇನಿದೆ. ಜಗತ್ತಿನ ಕ್ರಿಮಿ, ಕೀಟ, ಪಶು, ಪಕ್ಷಿಗಳಿಗಾದಿಯಾಗಿ ಕಾಪಾಡುವ ಆತನಿಗೆ ತಿಳಿಯದೇ? ಎಂದು ಕ್ರಿಸ್ತ ನುಡಿಯುತ್ತಾನೆ. "ಜನರು ನೋಡಲಿ ಎಂದು ಧರ್ಮ ಕಾರ್ಯಗಳನ್ನು ಅವರ ಮುಂದೆ ಮಾಡಬಾರದು, ನೀನು ಧರ್ಮ ಕೊಡುವಾಗ ನಿನ್ನ ಮುಂದೆ ಕೊಂಬೂದಿಸಬೇಡ, ನೀನು ಧರ್ಮ ಕೊಟ್ಟದ್ದು ನಿನ್ನ ಅಂತರಂಗದಲ್ಲಿರು, ಬಲಗೈ ಮಾಡಿದು ಎಡಗೈಗೆ ತಿಳಿಯದಿರಲಿ, ಪ್ರಾರ್ಥನೆ ಮಾಡುವಾಗ ಕಪಟಿಗಳಂತೆ ಮಾಡದೇ ಏಕಾಂತದಲ್ಲಿ, ಅಂತರಂಗದಲ್ಲಿ ಪ್ರಾರ್ಥಿಸಿರಿ. ನೀವು ನಿಮ್ಮ ತಂದೆಯನ್ನು ಬೇಡುವ ಮೊದಲೇ ಆತನಿಗೆ ಗೊತ್ತಿದೆ ನಿಮ್ಮ ಅಗತ್ಯತೆಗಳೇನೆಂದು"[೬೪] ಇದು ಕ್ರಿಸ್ತನ ಸಂದೇಶವಾದರೆ, ಬಸವಣ್ಣ ತನ್ನ ವಚನದಲ್ಲಿ "ಹರಹಿ ಮಾಡೋದು ಹರಕೆಯ ಕೇಡು, ನೆರಹಿ ಮಾಡೋದು ಡಂಬಿನ ಭಕ್ತಿ, ಹರಹಬೇಡ, ನೆರಹಬೇಡವೆಂದು ಹೇಳಿ ಸಹಜವಾಗಿ ಇದ್ದಂತೆ ಭಕ್ತಿ ಮಾಡಿರೆ ದೇವನು ಅನುಗ್ರಹಿಸುತ್ತಾನೆ"[೬೬] ಎನ್ನುತ್ತಾರೆ. "ಮಾಡೋದು ಮಾಡೋದು ಮನಮುಟ್ಟಿ. ಮಾಡೋದು ಮಾಡೋದು ತನು ಮುಟ್ಟಿ, ತನು ಮುಟ್ಟಿ ಮನ ಮುಟ್ಟಿದಿರ್ದಡೆ ದೇವನು ಒಲಿಯನು."[೬೭] "ಅಂತರಂಗ ಆತ್ಮಶುದ್ಧವಿಲ್ಲದವನರ್ನು ದೇವರು ನಂಬನು."[೬೮] ಬಹಳ ಜನ ಮಾಡಬೇಕೆಂದು, ನೀಡಬೇಕೆಂದು ಮಾಡುವ, ನೀವು ಕ್ರಿಯೆಯಲ್ಲಿ ತೊಡಗುತ್ತಾರೆ. ಇದರಿಂದ ಏನು ಪ್ರಯೋಜನ? "ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ, ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ, ಮಾಡುವ ನೀಡುವ ನಿಜಗುಣವಿದ್ದರೆ ದೇವನು ಕೂಡಿಕೊಂಡಿರುತ್ತಾನೆ"[೬೯] ಮಾಡುವ ಮಾಟ ಹೀಗಿರಬೇಕು. "ಮಾಡುವಂತಿರಬೇಕು, ಮಾಡದಂತಿರಬೇಕು. ಮಾಡುವಾ ಮಾಟದೊಳಗೆ ತಾನಿಲ್ಲದಂತಿರಬೇಕು. ಕೂಡಲ ಸಂಗಮ ದೇವರ ನೆನವುತ್ತ, ನೆನವುತ್ತ ನೆನೆಯದಂತಿರಬೇಕು"[೭೦] ಎಂದು ಹೇಳುವ ಮೂಲಕ ಸಾಧಕ ಅಥವಾ ಭಕ್ತನು ಮಾಡುವ ಕಾರ್ಯಗಳೆಲ್ಲ ತೋರಿಕೆಗಾಗಿ ಆಗಬಾರದು. ಆಂತರಂಗಿಕವಾಗಿರಬೇಕೆನ್ನುತ್ತಾನೆ.

೧೨. ದೇವರನ್ನು ಪ್ರಾರ್ಥಿಸುವ ರೀತಿಯನ್ನು ಯೇಸುಕ್ರಿಸ್ತ ಜನರಿಗೆ ಹೀಗೆಂದು ತಿಳಿಸುತ್ತಾನೆ. “ಪರಲೋಕದಲ್ಲಿರುವ ನಮ್ಮ ತಂದೆಯೆ ನಿಮ್ಮನಾಮಕ್ಕೆ ಸ್ತೋತ್ರವಾಗಲಿ, ನಿಮ್ಮ ಚಿತ್ತಪರ ಲೋಕದಲ್ಲಿ ನೆರವೇರುವ ರಾಜ್ಯ ಬರಲಿ. ನಿಮ್ಮ ಚಿತ್ರಪರ ಲೋಕದಲ್ಲಿ ನೆರವೇರುವ ರಾಜ್ಯ ಬರಲಿ. ನಿಮ್ಮ ಚಿತ್ರಪರ ಲೋಕದಲ್ಲಿ ನೆರವೇರುವ ಪ್ರಕಾರ, ಭೂಲೋಕದಲ್ಲಿಯೂ ನೆರವೇರಲಿ, ಭೂಲೋಕದಲ್ಲಿಯೂ ನೆರವೇರಲಿ, ನಮ್ಮ ಅನುದಿನದ ಆಹಾರವನ್ನು ಇಂದು ನಮಗೆ ಕೊಡಿರಿ, ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸುವ ಪ್ರಕಾರ ನಮ್ಮನ್ನು ಕ್ಷಮಿಸಿರಿ, ನಮ್ಮನ್ನು ಶೋಧನೆಗೆ ಒಳಪಡಿಸದೇ ಕೇಡಿನಿಂದ ನಮ್ಮನ್ನು ರಕ್ಷಿಸಿರಿ.”[೭೧] ಈ ಪ್ರಾರ್ಥನೆಯಲ್ಲಿ ದೇವನಿಗೆ ಸ್ತೋತ್ರ, ದೇವರಾಜ್ಯದ ಬೇಡಿಕೆ, ದೈವಚಿತ್ತದಂತೆ ಕಾರ್ಯ ನೆರವೇರಿಕೆ, ನಮ್ಮ ರಕ್ಷಣೆ, ನಾವು ಪರರನ್ನು ಕ್ಷಮಿಸುವಂತೆ ನಮ್ಮನ್ನು ಕ್ಷಮಿಸುವಿಕೆ. ನಮ್ಮನ್ನು ಶೋಧನೆಗೆ ಒಳಪಡಿಸದಿರುವುದು, ಕೇಡಿನಿಂದ ಸಂರಕ್ಷಣೆಗಳು. ಪ್ರತಿ ಜೀವಿಯ ನಿಸ್ವಾರ್ಥ ಭಾವದ ಬೇಡಿಕೆಗಳಾಗಿದ್ದು, ಬಸವಣ್ಣ ತನ್ನ ತಂದೆ ದೇವರನ್ನು ಹಾಗೆಯೇ ಬೇಡುತ್ತಾರೆ. “ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರು ಇಲ್ಲ. ಹಾಲಲದ್ದು, ನೀರಲದ್ದು.”[೭೨] “ಎನ್ನ ವಾಮಕ್ಷೇಮ ನಿಮ್ಮದು, ಎನ್ನ ಹಾನಿ ವೃದ್ಧಿ ನಿಮ್ಮದು, ಎನ್ನ ಮಾನಾಪಮಾನ ನಿಮ್ಮದು”[೭೩] “ಎನ್ನ ಆಪತ್ತು ಸುಖ-ದುಃಖ ನೀನೆ ಕಂಡಯ್ಯಾ, ಮತ್ತಾರು ಇಲ್ಲ ಹರಹರ ನೀನೇ ಕಂಡಯ್ಯಾ, ಎನ್ನ ಮಾತಾಪಿತನು ನೀನೆ.”[೭೪] “ಅಡಿಗಡಿಗೆ ಎನ್ನಮನವ ಜಡಿದು ನೋಡದಿರು, ಬಡವನೆಂದೆನ್ನ ಕಾಡದಿರು”[೭೫] “ಎನ್ನ ಭಕ್ತಿ ಎಲವದ ಕಾಯ ಫಲದಂತೆ ಹೊರಗೆ ಹೆಂಪು, ಒಳಗೆ ಬೂರವ, ಸಗುಣ ನಿರ್ಗುಣವೆರಡು ಆಳವಡರ ಸಂದೇಹಿ ನಾನು; ಎನ್ನ ಅಪರಾದವ ಸೈರಿಸುವಡೆ, ನೀನಲ್ಲದೆ ಮತ್ತಾರನು ಕಾಣೆ ಶರಣಾರ್ಥಿ, ಶರಣಾರ್ಥಿ ಕೃಪೆಯಿಂದ ಕರುಣಿಸಯ್ಯಾ”[೭೬] ಎನ್ನುವ ಮೂಲಕ ಶೋಧನೆಗೆ ಒಳಪಡಿಸದಿರು. ನನ್ನನ್ನು ಕಾಪಾಡು ಎಂಬ ನಿರಹಂಭಾವವನ್ನು ವ್ಯಕ್ತಪಡಿಸುತ್ತಾನೆ.

೧೩. ಭೂಲೋಕ ವ್ಯವಹಾರದಲ್ಲಿ ಮಾನವನನ್ನು ಆವರಿಸುವ, ಭವಬಂಧನಕ್ಕೆ ಕಾರಣವಾಗುವ ವ್ಯಾಮೋಹದಲ್ಲಿ ಧನವ್ಯಾಮೋಹ ಪ್ರಬಲವಾದುದು. ಹಣಕ್ಕೆ ಆಸೆ ಬಿದ್ದ ಮಾನವ ಪಿಶಾಚಿಯಂತಾಗಿ, ಸುಖವನ್ನು ಸೂರೆಗೊಂಡು ನಿತ್ಯದುಃಖಿಯಾಗಿ ಉಳಿಯುತ್ತಾನೆ. ಪರಲೋಕದೂರನಾಗುತ್ತಾನೆ. ಆದ್ದರಿಂದ ಹಣ ಕೂಡಿಟ್ಟುಕೊಳ್ಳಬೇಡಿರೆಂದು ಯೇಸುಕ್ರಿಸ್ತ, ಬಸವಣ್ಣ ಇಬ್ಬರು ಪ್ರತಿಪಾದಿಸುತ್ತಾರೆ. “ಭೂಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಬೇಡಿರಿ. ಪರಲೋಕದಲ್ಲಿ ಗಂಟುಮಾಡಿಟ್ಟುಕೊಳ್ಳಿರಿ. ನಿನ್ನ ಗಂಟು ಇದ್ದಲ್ಲೇ ನಿನ್ನ ಮನಸ್ಸು ಇರುವುದಷ್ಟೇ ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು. ನೀವು ದೇವರನ್ನು ಧನವನ್ನು ಕೂಡ ಸೇವಿಸಲಾರಿರಿ.”[೭೭] ಎಂಬ ಯೇಸುಕ್ರಿಸ್ತನ ಮಾತುಗಳಿಗೆ ಸಂವಾದಿಯಾಗಿ ಬಸವಣ್ಣ “ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ. ಆಯುಷ್ಯತೀರಿ ಪ್ರಳಯ ಬಂದಡೆ ಆಅರ್ಥವ ನಂಬುವರಿಲ್ಲ. ನೆಲನ ನೆಗೆದು ಮಡುಗದಿರಾ, ನೆಲನುಂಗಿದಡುಗುಳೋದೇ? ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೇ ಹೋಗದಿರಾ, ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೇಡಬೇಡ.”[೭೮] “ಮಾಯಾ

ಪಾಶಾ ಹಿಂಗಿ, ಮನದ ಗಂಟು ಬಿಡದನ್ನಕ್ಕ ದೇವನೆಂತೊಲಿವನು"[೩೯] "ಧನವ ನಿರಿಸದಿರಾ, ಇರಿಸಿದಡೆ ಭವಬಪ್ಪುದು ತಪ್ಪದು"[೪೦] "ಪಾಪಿಯಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದು. ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ"[೪೧] ಎಂದಿದ್ದಾರೆ. "ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ"[೪೨] ಎಂಬ ಯೇಸುಕ್ರಿಸ್ತರ ಮಾತನ್ನು "ಕಾಂಚನವೆಂಬ ನಾಯನೆಚ್ಚಿ ನಿಮ್ಮ ನಾಮ ಮರೆದೆನಯ್ಯಾ, ಕಾಂಚನಕ್ಕೆ ವೇಳೆಯಲ್ಲದೇ ಲಿಂಗಕ್ಕೆ ವೇಳೆಯಿಲ್ಲ"[೪೩] ಎಂದು ಹೇಳುತ್ತ ಪುಷ್ಟೀಕರಿಸುತ್ತಾರೆ. ಜೊತೆಗೆ ಭೂಲೋಕದಲ್ಲಿ ಸಂಗ್ರಹಿಸೆ, ಕೂಡಿಡೆ ಎಂಬುದಕ್ಕೆ "ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ. ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆನೆನ್ನುತ್ತ ಪರಲೋಕದಲ್ಲಿ ಗಂಟಿಲ್ಲ,"[೪೪] ಭವಪಾಶದ ಯಾವ ನಂಟನ್ನು ಅಂಟಿಸಿಕೊಳ್ಳದ ನಿರ್ಲಿಪ್ತತೆಯನ್ನು ವ್ಯಕ್ತಪಡಿಸುತ್ತಾರೆ.

೧೪. ದೈವಚಿಂತನೆ ಹೊರತು, ಮಾನವನು ಅನ್ಯ ಚಿಂತೆಯನ್ನು ಮಾಡಬಾರದು. ಪರಮಾತ್ಮನು ಯಾರಿಗೆ? ಯಾವುದನ್ನು? ಎಂದು? ಹೇಗೆ? ಕೊಡಬೇಕೆಂಬುದನ್ನು ಬಲ್ಲವನಾಗಿದ್ದಾನೆ. ವ್ಯರ್ಥವಾಗಿ ಚಿಂತಿಸಬೇಡಿರೆಂದು ಯೇಸುಕ್ರಿಸ್ತ ತಮ್ಮ ಬೋಧನೆಯಲ್ಲಿ ಹೀಗೆ ಹೇಳುತ್ತಾನೆ. ನಮ್ಮ ಪ್ರಾಣಧಾರಣೆಗಾಗಿ ಏನು ಊಟ ಮಾಡಬೇಕು? ಏನು ಕುಡಿಯಬೇಕು? ನಮ್ಮ ದೇಹರಕ್ಷಣೆಗೆ ಏನು ಹೊದ್ದುಕೊಳ್ಳಬೇಕು? ಎಂದು ಚಿಂತೆ ಮಾಡಬೇಡಿರಿ. ಆಕಾಶದಲ್ಲಿ ಹಾರಾಡುವ ಪಕ್ಕಿಗಳಿಗೆ, ಅವುಗಳಿಗೆ ಆಹಾರ, ಅಂದವನ್ನು ಕೊಟ್ಟ ಪರಲೋಕದಲ್ಲಿರುವ ನಿಮ್ಮ ತಂದೆಗೆ ನಿಮಗೇನು ಬೇಕೆಂದು ಗೊತ್ತಿದೆ. ನಾಳಿನ ವಿಷಯವಾಗಿ ಚಿಂತೆ ಮಾಡಬೇಡಿರಿ"[೪೫] ಎಂದು ಇದನ್ನೇ ಬಸವಣ್ಣ ತಮ್ಮ ವಚನದಲ್ಲಿ "ಹೊತ್ತಾರೆ ಎದ್ದು ಕಣ್ಣು ಹೊಸೆಯುತ್ತ, ಎನ್ನ ಒಡಲಿಂಗೆ, ಎನ್ನ ಒಡವೆಗೆಂದು, ಎನ್ನ ಮಡದಿ ಮಕ್ಕಳಿಗೆಂದು, ಕುದಿದೆನಾದರೆ ಎನ್ನ ಮನಕ್ಕೆ ಮನವೆ ಸಾಕ್ಷಿ ಹೊಲೆ ಹೊಲೆಯರ ಮನೆಯ ಹೊಕ್ಕಾದರೂ, ಸಲೆ ಕೂಲಿಯ ಮಾಡಿಯಾದಡೆಯೂ ನಿಮ್ಮ ನಿಲುವಿಂಗೆ ಕುದಿವೆನಲ್ಲದೆ ಎನ್ನ ಒಡಲವಸರಕ್ಕೆ ಕುದಿದೆನಾದಡೆ ತಲೆ ದಂಡ"[೪೬] ಎನ್ನುತ್ತಾನೆ. ದಾಸನಂತೆ ತವನಿಧಿಯ ಬೇಡುವನಲ್ಲ, ಚೋಳನಂತೆ ಹೊನ್ನ ಮಳೆಯ ಕರೆಸೆಂಬನಲ್ಲ, ಅಂಜದಿರು"[೪೭] ಅಂಜದಿರೆಂದು ತನ್ನದೇವ ಕೂಡಲಸಂಗಯ್ಯನಿಗೆ ಹೇಳುತ್ತ ಎನಗೆ ಸದ್ಭಕ್ತಿಯನ್ನು ಕರುಣಿಸೆನ್ನುತ್ತಾನೆ. "ನಿಮ್ಮ ಆಳಾಗಿ ಲೋಕ ವಿಗರ್ಭಣೆಗೆ ಅಂಜುವುದಿಲ್ಲ"[೪೮]ವೆನ್ನುತ್ತಾರೆ. "ಕೂಡಲಸಂಗಯ್ಯ ಒಲ್ಲನೋ ಬಲ್ಲನೋ ಎಂಬ ಚಿಂತೆ ನನಗೆ"[೪೯] "ಸಂಗನ ಶರಣರ ನೆನವುದೇ ಚಿಂತೆ"[೫೦] ಎಂದರೂ, ಚಂಚಲ ಮನದ ಸ್ವಭಾವ ಇಂದಿಗೆಂತು ನಾಳಿಂಗೆಂತು ಎಂತು ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ"[೫೧]ವೆಂದು ದುಃಖಿಸುತ್ತಾರೆ. "ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು ನಮಗೀಗಲೇ ಬರಲೆಂದು"[೫೨] ಸ್ವಾಗತಿಸುತ್ತಾರೆ.

೧೫. ಮತ್ತೊಬ್ಬರ ಬಗ್ಗೆ ತೀರ್ಪು ನೀಡುವುದಾಗಲಿ, ಪರರ ದೋಷಗಳನ್ನು ಎಣಿಸುವುದಾಗಲಿ

ಮಾನವನ ಸಹಜ ವರ್ತನೆಯಾಗಿದೆ. ಇದು ಸಲ್ಲದೆಂದು ಯೇಸುಕ್ರಿಸ್ತ "ತೀರ್ಪು ಮಾಡಬೇಡಿರಿ ಹಾಗೆ ನಿಮಗೂ ತೀರ್ಪಾಗುವುದಿಲ್ಲ. ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವುದೇಕೆ? ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತಗೆದು ಹಾಕು"[೯೩] ಬಸವಣ್ಣನವರಾದರೋ "ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರಮನೆಯ ದುಃಖಕ್ಕೆ ಅಳುವವರನ್ನು ದೇವರಪು ಮೆಚ್ಚನು"[೯೪] ಎನ್ನುತ್ತಾರೆ. "ಬೇಡಿಕೊಳ್ಳಿರಿ ನಿಮಗೆ ದೊರೆಯುವುದು. ಹುಡುಕಿರಿ ನಿಮಗೆ ಸಿಕ್ಕುವುದು, ತಟ್ಟಿರಿ ನಿಮಗೆ ತೆರೆಯುವುದು' ಯೇಸುಕ್ರಿಸ್ತ ಎಂದರೆ ದೇವ ಸಾಮ್ರಾಜ್ಯದಲ್ಲಿ ಬೇಡಿದ, ಹುಡುಕಿದ, ತಟ್ಟಿದವರಿಗೆಲ್ಲರಿಗೂ ದೊರಕುವುದೆಂಬ[೯೫] ಆಶ್ವಾಸನೆಯ ಧ್ವನಿಯ ಮರುಧ್ವನಿಯಂತೆ "ಸುರರ ಬೇಡಿದಡಿಲ್ಲ, ನರರ ಬೇಡಿದಡಿಲ್ಲ, ಆರನಾದಡೆಯೂ ಬೇಡಿ ಬೇಡಿ ಬರಿದೆ ಧೃತಿಗೆಡಬೇಡ ಮನವೆ! ಕೂಡಲ ಸಂಗಮ ದೇವನಲ್ಲದೆ, ಆರ ಬೇಡಿದಡಿಲ್ಲ ಮನವೆ!"[೯೬] ಎಂದು ಬಸವಣ್ಣ ದೇವರನ್ನು ಬೇಡೆಂದು ಹೇಳುತ್ತಾನೆ.

೧೬. ಭಕ್ತಿಯ ಮಾರ್ಗ ದುರ್ಗಮವಾದುದು. ಅದರಲ್ಲಿ ನಡೆಯುವವರು ವೀರರು. ಇದಕ್ಕೆ ಸಾಹಸಬೇಕು. ಇದನ್ನು ಬಹಳ ಜನ ತುಳಿಯಲಾರರೆಂಬುದನ್ನು ಬಸವಣ್ಣ ತನ್ನ ವಚನದಲ್ಲಿ "ಭಕ್ತಿಯೆಂಬುದ ಮಾಡಬಾರದು. ಕರಗಸದಂತೆ ಹೋಗುತ್ತ ಕೊರೆದು, ಬರುತ್ತ ಕೊಯ್ವುದು"[೯೭] ಎಂದು ನುಡಿದರೆ ಅದಕ್ಕೆ ಸಂವಾದಿಯಾಗಿ ಯೇಸುಕ್ರಿಸ್ತ "ಇಕ್ಕಟ್ಟಾದ ಬಾಗಿಲಿನಿಂದ ಒಳಗೆ ಹೋಗಿರಿ. ನಿತ್ಯ ಜೀವಕ್ಕೆ ಹೋಗುವ ದಾರಿ ಇಕ್ಕಟ್ಟು, ದಾರಿ ಬಿಕ್ಕಟ್ಟು. ಅದನ್ನು ಕಂಡು ಹಿಡಿಯುವವರು ಸ್ವಲ್ಪ ಜನ"[೯೮] ಎಂದಿದ್ದಾನೆ.

ಕಪಟ ವೇಷಧಾರಿ ಪ್ರವಾದಿಗಳ ಬಗೆಗೆ ಯೇಸುಕ್ರಿಸ್ತ ತನ್ನ ಪ್ರಬೋಧನೆಯಲ್ಲಿ, "ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರಿ. ಅವರು ಕುರಿ ವೇಷ ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ, ಆದರೆ ಒಳಗೆ ನೋಡಿದರೆ ಅವರು ಹಿಡುಕೊಂಡು ಹೋಗುವ ತೋಳಗಳೇ ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳಿರಿ"[೯೯] ಎಂದು ಎಚ್ಚರಿಸುತ್ತಾನೆ. ಬಸವಣ್ಣನಾದರೋ "ಸಾರ ಸಜ್ಜನರ ಸಂಗವ ಮಾಡೋದು, ದೂರ ದುರ್ಜನರ ಸಂಗ ಬೇಡವಯ್ಯಾ, ಆವ ಹಾವಾದಡೇನು? ವಿಷವೊಂದೆ, ಅಂತವರ ಸಂಗ ಬೇಡಯ್ಯ? ಅಂತರಂಗ ಶುದ್ಧವಿಲ್ಲದವರ ಸಂಗವು ಸಿಂಗಿ, ಕಾಳಕೂಟ ವಿಷ"[೧೦೦]ವೆನ್ನುತ್ತಾನೆ.

೧೭. ನಡೆ ನುಡಿ ಒಂದಾದ ಜೀವನವೇ ದೇವರಿಗೆ ಪ್ರಿಯವಾದದ್ದು, ಕೇವಲ ಸವಿಯಾಗಿ ನುಡಿದು ಜನರನ್ನು ಮರುಳು ಮಾಡಬಹುದೇ ವಿನಹ, ದೇವರನ್ನು ವಂಚಿಸಲಾಗದು. "ನುಡಿಯು ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಪಟಿಕದ ಶಲಾಕೆಯಂತೆ, ದೇವರು ಮೆಚ್ಚಿ ಹೌದು ಹೌದು ಎನ್ನುವಂತಿರಬಹುದು ಆದರೆ ನುಡಿಯಂತೆ ನಡೆಯದಿದ್ದರೆ ಕೂಡಲ ಸಂಗಯ್ಯನು ಒಲಿಯನು"[೧೦೧] ಎಂದ ಬಸವಣ್ಣ ನುಡಿಯಂತೆ ನಡೆಯದಿದ್ದರೆ ಆ ನುಡಿಯೇ ನಮ್ಮ ಸಾಗೆ ಕಾರಣವಾಗುವುದೆಂಬುದನ್ನು "ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ

ತಪ್ಪಿದರೆ ಹಿಡಿದ್ದ ಲಿಂಗ ಘಟಸರ್ಪ"[೧೦೨] ಎಂದು ಎಚ್ಚರಿಸುತ್ತಾನೆ. "ದಿಟವ ನುಡಿವುದು, ನುಡಿದಂತೆ ನಡೆವುದು, ಹುಸಿಯ ನಡೆದು ತಪ್ಪುವ ಪ್ರಪಂಚಿಯನೊಲ್ಲ" ಕೂಡಲಸಂಗಮದೇವನು"[೧೦೩] ಎಂದು ಹೇಳಿ ದೇವರನ್ನು ಕೂಡುವ ಪರಿಯನ್ನು ತಿಳಿಸುತ್ತಾನೆ. "ನಡೆಯ ಚೆನ್ನ ನುಡಿದು ತೋರಿ, ನುಡಿಯು ಚೆನ್ನ ನಡೆಯು ತೋರಿ, ಆ ನಡೆ ನುಡಿ ಎರಡರ ಚೆನ್ನ ವ್ಯಥ ನಿರ್ಮೊಳಡಗಿಸಿ, ತಾವೆಡೆಯಿಲ್ಲದೆ ಪರಿಪೂರ್ಣರಾದವರ ಸೇವೆಯಿಂದ"[೧೦೪] ನಿನ್ನನ್ನು ಕೂಡಬಹುದೆಂದು ದೇವರಲ್ಲಿ ಮೊರೆ ಹೋಗುತ್ತಾನೆ. ಇದಕ್ಕಾಗಿ ನಡೆ ನುಡಿಯೊಂದಾದವರ ಉಗುಳು ಪಾತ್ರೆಯನ್ನು ಹೊರುತ್ತೇನೆ. ಪಾದರಕ್ಷೆಯನ್ನು ಹಿಡಿಯುತ್ತೇನೆಂದು ಹೇಳುತ್ತಾನೆ. ಇದು ಭಕ್ತನು ಹೇಳಿದ ನಿರ್ದೇಶದಂತಿದ್ದರೆ, ಇದಕ್ಕೆ ಪೂರಕವಾಗಿ ಯೇಸುಕ್ರಿಸ್ತ ಅಧಿಕಾರವಾಣಿಯ ಆದೇಶದಂತೆ ಹೇಳುತ್ತಾನೆ. "ನನ್ನನ್ನು ಸ್ವಾಮಿ ಸ್ವಾಮಿ ಅನ್ನುವವರೆಲ್ಲರು ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ. ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು. ಸ್ವಾಮಿ ಸ್ವಾಮಿ ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ? ಎಂದು ಕೇಳಿದ ಎಷ್ಟೋ ಜನಗಳಿಗೆ ನಾನು, ನಾನೆಂದೂ ನಿಮ್ಮ ಗುರುತು ಕಾಣೆನು ಧರ್ಮವನ್ನು ಮೀರಿ ನಡೆಯುವವರೇ ನನ್ನಿಂದ ತೊಲಗಿ ಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು."[೧೦೫] ಅಂದರೆ, ಕೇವಲ ನುಡಿಯುವವರನ್ನು ದೇವರು ಮೆಚ್ಚಲಾರನೆಂಬುದು ಯೇಸುಕ್ರಿಸ್ತ ಹಾಗೂ ಬಸವಣ್ಣನವರ ವಚನಗಳಿಂದ ವೇದ್ಯವಾಗುತ್ತದೆ.

ಯೇಸುಕ್ರಿಸ್ತ ಹಾಗೂ ಬಸವಣ್ಣನವರು ಕಾಲ, ದೇಶ, ಭಾಷೆ, ಧರ್ಮಗಳಿಂದ ವಿಭಿನ್ನವಾಗಿ ಕಂಡರೂ, ಮಾನವೀಯ ಅನುಕಂಪ, ತ್ಯಾಗ, ಸಮರ್ಪಣಾ ಭಾವಗಳಿಂದ ಒಂದೇ ಆಗಿ ಕಂಡು ಬರುತ್ತಾರೆ. ಯೇಸುಕ್ರಿಸ್ತರ ಪರ್ವತ ಪ್ರಸಂಗದ ಬೋಧನೆಗಳಲ್ಲಿಯ ಸಾಮಾಜಿಕ ಹಾಗೂ ನೈತಿಕ ನೆಲೆಗಳಲ್ಲಿ ಬಸವಣ್ಣನವರ ವಚನಗಳು ಸಂವಾದಿಯಾಗಿ ಮೂಡಿಬಂದಿರುವ ಹಿನ್ನೆಲೆಯಲ್ಲಿ ಈ ಅಂಶಗಳನ್ನು ಗುರುತಿಸಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಚ. ನ. ಶಂಕರರಾವ್, 'ಸಮಾಜ ಶಾಸ್ತ್ರದ ಮೂಲತತ್ವಗಳು' ಪು. ೬

೨. Maclver and page 'Sociology-An introductory Analysis', P.5

೩. ಚ. ನ. ಶಂಕರರಾವ್, 'ಸಮಾಜ ಶಾಸ್ತ್ರದ ಮೂಲತತ್ವಗಳು' ಪು. ೩೮

೪. ಅದೇ ಪುಟ ೩೯

೫. MIRCEA, Eliade (Editor in chief) 'Encyclopedia of world religion', Vol. 13, P. 335

೬. ಚಸರಾ, ಕ್ರಿಸ್ತನೊಳಗಿನ ಕ್ರಿಸ್ತ, ಪುಟ ೭೧

೭. ಅದೇ ಪುಟ ೩೨

೮. ಅದೇ ಪುಟ ೩

೯. ಎಂ.ಎಸ್. ಸಿಂಧ್ಯರ, ನಾ ಕಂಡ ಅಣ್ಣ ಬಸವಣ್ಣ, ಪುಟ ೧೭

೧೦. ಅಲ್ಲೇ ಪುಟ ೧೮

೧೧. ಚಸರಾ, ಕ್ರಿಸ್ತನೊಳಗಿನ ಕ್ರಿಸ್ತ, ಪುಟ ೪೦. "Blessed are you poor, For yours is the Kingdom of God." LK. 6:20.

೧೨. ಅದೇ ಪುಟ ೪೧

೧೩. ಅದೇ ಪುಟ ೭೦

೧೪. ಪ್ರೊ. ಬಿ. ಸುರೇಂದ್ರ ರಾವ್ ಸಂಪುಟ ಸಂಪಾದಕರು, ಕರ್ನಾಟಕ ಚರಿತ್ರೆ, ಸಂಪುಟ ೩, ಪುಟ ೨೧೩.

೧೫. ಅಲ್ಲೇ ಪುಟ ೨೧೬

೧೬. ಕೆ.ಜಿ. ಕುಂದಣಗಾರ, ಬಸವ ಸಾಹಿತ್ಯ, ಪುಟ ೨೮

೧೭. ಅಲ್ಲೇ ಪುಟ ೩೨

೧೮. ಅಲ್ಲೇ ಪುಟ ೩೭

೧೯. ಹಿರೇ ಮಲ್ಲೂರು ಈಶ್ವರನ್ ಲಿಂಗಾಯತ ಧರ್ಮ. ಒಂದು ಅಧ್ಯಯನ, ಪು. ೨೭

೨೦. ಅಲ್ಲೇ ಪುಟ ೩೮

೨೧. ಅಲ್ಲೇ ಪುಟ ೪೪-೪೫

೨೨. ಡಾ. ಎಂ.ಜಿ. ಮೂಡಬಿದ್ರಿ, ಬಸವತತ್ವ ಒಂದು ಪ್ರತಿಭಟನೆಂ ಚಲುವಳಿಯಾಗಿ, ಬಸವತತ್ವ ಸಾಮಾಜಿಕ ಬದಲಾವಣೆ, ಮಹೇಶ ತಿಪ್ಪಶೆಟ್ಟಿ (ಸಂ.) ಪುಟ ೫೩

೨೩. ಕೆ.ಜಿ. ಕುಂದಣಗಾರ, ಬಸವಣ್ಣನವರ ಸಾಮಾಜಿಕ ವಿಚಾರಗಳು, ಬಸವ ಸಾಹಿತ್ಯ, ಪುಟ ೨೭

೨೪. ಅಲ್ಲೇ ಪು. ೨೭

೨೫. ದೇಜಗೌ, ಬಸವೇಶ್ವರ-ಕುವೆಂಪು, ಪುಟ ೪೨, ೪೩

೨೬. ಅನಕೃ, ಬಸವಣ್ಣನವರ ಅಮೃತವಾಣಿ, ಪುಟ ೬೨

೨೭. ಅಲ್ಲೇ ಪುಟ ೬೫

೨೮. ಅಲ್ಲೇ ಪುಟ ೬೬

೨೯. ಎಂ.ಎಸ್. ಸಿಂದೂರ, 'ನಾ ಕಂಡ ಅಣ್ಣ ಬಸವಣ್ಣ' ಪುಟ ೩೫.

೩೦. ಮತ್ತಾಯ ೫: ೧-೧೨

೩೧. ಡಾ. ಎಂ.ಎಂ. ಕಲ್ಬುರ್ಗಿ (ಪ್ರ ಸಂ) ಸಮಗ್ರ ವಚನ ಸಂಪುಟ ೧ - ವಚನ ೩೩೫

೩೨. ಅದೇ, ವಚನ ೩೬೦

೩೩. ಅದೇ, ವಚನ ೬೦

೩೪. ಅದೇ, ವಚನ ೪೯೮.

೩೫. ಅದೇ, ವಚನ ೪೯೬

೩೬. ಅದೇ, ವಚನ ೪೬೫

೩೭. ಅದೇ, ವಚನ ೫೧೧

೩೮. ಅದೇ, ವಚನ ೫೦೬

೩೯. ಅದೇ, ವಚನ ೧೩೨೪

೪೦. ಅದೇ, ವಚನ ೧೦೮೧

೪೧. ಅದೇ ವಚನ ೧೦೭೬

೪೨. ಮತ್ತಾಯ ೫: ೧೧-೧೨

೪೩. ಡಾ. ಎಂ.ಎಂ. ಕಲ್ಬುರ್ಗಿ, (ಸಂ), ಸಮಗ್ರ ವಚನ ಸಂಪುಟ-೧, ವಚನ-೧೪೨೩

೪೪. ಅದೇ ವಚನ ೧೨೫೩

೪೫. ಮತ್ತಾಯ ೫: ೧೩-೧೬

೪೬. ಡಾ. ಎಂ.ಎಂ. ಕಲ್ಬುರ್ಗಿ (ಸಂ), ಸಮಗ್ರ ವಚನ ಸಂಪುಟ - ೧, ವಚನ - ೨೬
೪೭. ಮತ್ತಾಯ ೫: ೧೭-೧೮
೪೮. ಡಾ. ಎಂ.ಎಂ. ಕಲ್ಬುರ್ಗಿ (ಸಂ), ಸಮಗ್ರ ವಚನ ಸಂಪುಟ ೨, ವಚನ - ೧೪೫೯
೪೯. ಮತ್ತಾಯ ೫: ೨೧-೩೨
೫೦. ಡಾ. ಎಂ.ಎಂ. ಕಲ್ಬುರ್ಗಿ (ಸಂ), ಸಮಗ್ರ ವಚನ ಸಂಪುಟ ೧, ವಚನ ೨೩೫
೫೧. ಅದೇ ವಚನಗಳು ೩೩ ಮತ್ತ ೬೫೦
೫೨. ಅದೇ, ವಚನ ೬೪೩
೫೩. ಅದೇ ವಚನ ೪೪೭
೫೪. ಅದೇ, ವಚನ ೫೯
೫೫. ಮತ್ತಾಯ ೫: ೩೩-೩೭
೫೬. ಡಾ. ಎಂ. ಎಂ. ಕಲಬುರ್ಗಿ (ಸಂ), ಸಮಗ್ರ ವಚನ ಸಂಪುಟ ೧, ವಚನ ೬೬೦
೫೭. ಮತ್ತಾಯ ೫: ೩೮-೪೧
೫೮. ಡಾ. ಎಂ.ಎಂ. ಕಲಬುರ್ಗಿ (ಸಂ), ಸಮಗ್ರ ವಚನ ಸಂಪುಟ-೧, ವಚನ -೨೪೮
೫೯. ಅದೇ ವಚನ ೧೫೪
೬೦. ಅದೇ ವಚನ ೩೪
೬೧. ಅದೇ ವಚನ ೭೦೮
೬೨. ಮತ್ತಾಯ ೫:೪೩
೬೩. ಮತ್ತಾಯ ೫:೪೩-೪೯
೬೪. ಡಾ. ಎಂ. ಎಂ. ಕಲಬುರ್ಗಿ (ಸಂ), ಸಮಗ್ರ ವಚನ ಸಂಪುಟ ೧, ವಚನ - ೬೩
೬೫. ಮತ್ತಾಯ ೬: ೧-೮
೬೬. ಡಾ. ಎಂ.ಎಂ. ಕಲಬುರ್ಗಿ (ಸಂ), ಸಮಗ್ರ ವಚನ ಸಂಪುಟ ೧, ವಚನ -೩೩೮
೬೭. ಅದೇ ವಚನ ೧೮೨
೬೮. ಅದೇ ವಚನ ೧೧೭
೬೯. ಅದೇ ವಚನ ೨೩೩
೭೦. ಅದೇ ವಚನ ೩೬೨
೭೧. ಮತ್ತಾಯ ೬: ೧೦-೧೩
೭೨. ಡಾ. ಎಂ.ಎಂ. ಕಲಬುರ್ಗಿ (ಸಂ), 'ಸಮಗ್ರ ವಚನ ಸಂಪುಟ-೧' ವಚನ - ೪೮೧
೭೩. ಅದೇ ವಚನ ೬೦
೭೪. ಅದೇ ವಚನ ೪೮೩
೭೫. ಅದೇ ವಚನ ೩೨೪
೭೬. ಅದೇ ವಚನ ೧೩೯
೭೭. ಮತ್ತಾಯ ೬: ೧೯-೩೪
೭೮. ಡಾ. ಎಂ.ಎಂ. ಕಲಬುರ್ಗಿ (ಸಂ), 'ಸಮಗ್ರ ವಚನ ಸಂಪುಟ-೧', ವಚನ ೨೦೧
೭೯. ಅದೇ ವಚನ ೩೦೩
೮೦. ಅದೇ ವಚನ ೧೯೯
೮೧. ಅದೇ ವಚನ ೨೨೩
೮೨. ಮತ್ತಾಯ ೬:೩೪
೮೩. ಡಾ. ಎಂ. ಎಂ. ಕಲಬುರ್ಗಿ (ಸಂ), 'ಸಮಗ್ರ ವಚನ ಸಂಪುಟ-೧' ವಚನ ೩೧೪

೮೪. ಅದೇ ವಚನ ೪೩೬

೮೫. ಮತ್ತಾಯ ೬: ೨೫-೩೪

೮೬. ಡಾ. ಎಂ.ಎಂ. ಕಲಬುರ್ಗಿ (ಸಂ), 'ಸಮಗ್ರ ವಚನ ಸಂಪುಟ ೧' ವಚನ - ೭೧೦

೮೭. ಅದೇ ವಚನ ೭೬೧

೮೮. ಅದೇ ವಚನ ೬೩೦

೮೯. ಅದೇ ವಚನ ೫೧೯

೯೦. ಅದೇ ವಚನ ೩೬೫

೯೧. ಅದೇ ವಚನ ೧೭

೯೨. ಅದೇ ವಚನ - ೬೯೭

೯೩. ಮತ್ತಾಯ ೭: ೧-೫

೯೪. ಡಾ. ಎಂ. ಎಂ. ಕಲಬುರ್ಗಿ (ಸಂ), 'ಸಮಗ್ರ ವಚನ ಸಂಪುಟ-೧' ವಚನ ೧೨೪

೯೫. ಮತ್ತಾಯ ೭: ೭-೧೦

೯೬. ಡಾ. ಎಂ.ಎಂ. ಕಲಬುರ್ಗಿ (ಸಂ), 'ಸಮಗ್ರ ವಚನ ಸಂಪುಟ-೧' ವಚನ ೨೭೮

೯೭. ಅದೇ ವಚನ ೨೧೨

೯೮. ಮತ್ತಾಯ ೭: ೧೩-೧೪

೯೯. ಮತ್ತಾಯ ೭: ೧೫-೩೦

೧೦೦. ಡಾ. ಎಂ.ಎಂ. ಕಲಬುರ್ಗಿ (ಸಂ), 'ಸಮಗ್ರ ವಚನ ಸಂಪುಟ-೧', ವಚನ ೧೧೯

೧೦೧. ಅದೇ ವಚನ ೮೦೩

೧೦೨. ಅದೇ ವಚನ ೬೪೬

೧೦೩. ಅದೇ ವಚನ ೧೨೨೪

೧೦೪. ಅದೇ ವಚನ ೧೨೪೩

೧೦೫. ಮತ್ತಾಯ ೭: ೨೧-೨೩

ಅಧ್ಯಾಯ ೬

ಮಹಾ ಪ್ರಬಂಧದ ಉಪಸಂಹಾರ

ಯೇಸುಕ್ರಿಸ್ತ ಹಾಗೂ ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದವನ್ನು ಐದು ಅಧ್ಯಾಯಗಳಲ್ಲಿ ವ್ಯಾಖ್ಯಾನಿಸಿಕೊಳ್ಳಲಾಯಿತು. ಈ ಸಂವಾದವು ಸಾಹಿತ್ಯಕ ಸಂವಾದ ಆಗಿದೆ; ಇದು ಅಂತಿಮವಾಗಿ ಧಾರ್ಮಿಕ ಸಂವಾದ ಆಗುವ ದಿಕ್ಕಿನತ್ತ ಪ್ರಸ್ತುತ ನಿಬಂಧವು ಒಲವನ್ನು ಪಡೆದಿದೆ. ಧಾರ್ಮಿಕ ಸಂವಾದ ಎಂದರೆ ಅದೊಂದು Religious Discourse ಎಂದು ಸಾಮಾನ್ಯಾರ್ಥವನ್ನು ಇಟ್ಟುಕೊಳ್ಳಬೇಕಿಲ್ಲ. 'ಧರ್ಮ' ಎಂಬ ಪರಿಕಲ್ಪನೆಯು ವ್ಯಕ್ತಿ, ಕುಟುಂಬ, ಸಮಾಜ, ದೇಶ, ರಾಷ್ಟ್ರ ಎಂಬ ವಿಭಿನ್ನ ಘಟಕಗಳ ಸಮಸ್ತ ಆಶಯಗಳನ್ನು ಇದು ಒಳಗೊಂಡಿದೆ. ಈ ಬಗೆಯ ನಿಲುವು ಈ ನಿಬಂಧದ ಪ್ರಧಾನ ಉದ್ದೇಶವೂ ಆಗಿದೆ.

ವಚನಸಾಹಿತ್ಯ ಮತ್ತು ಕ್ರಿಸ್ತ ಸಾಹಿತ್ಯದ ನಡುವಣ ಸಂವಾದಕ್ಕೆ ಒಂದು ಮಹತ್ವದ ಚಾಲನೆ ನೀಡಬೇಕೆಂಬ ಉದ್ದೇಶವು ಪ್ರಸ್ತುತ ನಿಬಂಧದ ಆಶಯವಾಗಿದೆ. ಈ ಉದ್ದೇಶವು ಬಹು ಮುಖ್ಯವಾಗಿ ವ್ಯಾಖ್ಯಾನ ಸ್ವರೂಪವಾಗಿದೆ. ಒಟ್ಟು ಐದು ಅಧ್ಯಾಯಗಳಲ್ಲಿ ಮೊದಲೆರಡು ಅಧ್ಯಾಯಗಳು 'ಧಾರ್ಮಿಕ ಸಂವಾದ'ಕ್ಕೆ ಪ್ರಾಮುಖ್ಯವಾದ ಭಿತ್ತಿಯ ಸ್ವರೂಪವನ್ನು ರೂಪಿಸಿದೆ. ಈ ರೂಪಣ ಕ್ರಿಯೆಯು ಮುಂದಿನ ಅಧ್ಯಾಯಕ್ಕೆ ತೆರೆದ ಬಾಗಿಲನ್ನು ಹೊಂದಿದೆ. ಕರ್ನಾಟಕದ ಧಾರ್ಮಿಕ ಸಂವಾದಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದರೂ ತನ್ಮೂಲಕ ಭಾರತೀಯ ಧಾರ್ಮಿಕ ಸಂವಾದಕ್ಕೆ ಬೇಕಾದ ಹೊಸ ಪರಿಕಲ್ಪನೆಗಳನ್ನು ನೀಡುವ ಉದ್ದೇಶವೂ ಈ ನಿಬಂಧದ ಬಹುಮುಖ್ಯ ಆಶಯವಾಗಿದೆ. ಇಂಥ ಹೊಸ ಪರಿಕಲ್ಪನೆಗಳ ವ್ಯಾಖ್ಯಾನವು ನಾಲ್ಕನೆಯ ಅಧ್ಯಾಯಕ್ಕೆ ಬೇಕಾದ ತಾತ್ವಿಕ ತಳಹದಿಯನ್ನು ಇರಿಸಿಕೊಂಡು ವ್ಯಾಖ್ಯಾನಿಸಲಾಗಿದೆ. ಈ ಅಧ್ಯಾಯದ ಮೂಲಕ ಧಾರ್ಮಿಕ ಸಂವಾದದ ವ್ಯಾಖ್ಯಾನಕ್ಕೆ ಕೀಲಿಕೈಯನ್ನು ಮೊದಲಬಾರಿಗೆ ತೆರೆಯಲಾಗಿದೆ. ಇದು ಒಟ್ಟು ನಿಬಂಧದ ಪ್ರಾಮುಖ್ಯತೆಯನ್ನೂ ಅದರ ತಾತ್ವಿಕಾಶಯವನ್ನೂ ಜೋಡು ಹೆಣೆಗೆಯಾಗಿ ಹಿಡಿದಿದೆ.

ಯೇಸುಕ್ರಿಸ್ತ ಮತ್ತು ಬಸವಣ್ಣನವರ ಧಾರ್ಮಿಕ ಸಂವಾದವನ್ನು ಅಧ್ಯಯನದ ವಿಷಯವಾಗಿ ತೆಗೆದುಕೊಳ್ಳುವಾಗ ಜಾಗತೀಕರಣದ ಈ ಸಂದರ್ಭದಲ್ಲಿ ಧರ್ಮಗಳು ಮತಗಳಾಗಿ ಬೇರ್ಪಟ್ಟು ಅವು ಪ್ರದರ್ಶನೀಯ ಗುಣ ಹೊಂದಿರುವುದರಿಂದ ಆ ಬಗೆಯ ಅಪಪ್ರಥೆಯನ್ನು ಹೋಗಲಾಡಿಸುವ ಉದ್ದೇಶವು ಈ ಅಧ್ಯಯನದ ಉದ್ದೇಶವಾಗಿತ್ತು. ಅದು ಈ ನಿಬಂಧದ ಮೂಲಕ ಈಡೇರಿದೆ. ಅಧ್ಯಯನಗಳು ಕೇವಲ

ಏಕಾಂತದ ಆಲಾಪವಾಗದೆ ಅದು ಜೀವನ ಶೋಧನೆಯ ಹಲವು ಮಗ್ಗುಲುಗಳನ್ನು ತೋರಿಸುವ ಉದ್ದೇಶವೂ ಇರಬೇಕಿತ್ತು. ಇಂದು ಸಮಾಜವು ಪ್ರದರ್ಶನದ ಅತಿ ವ್ಯಾಮೋಹದಿಂದ ಅಪವಿತ್ರಗೊಂಡಿದೆ. ಈ ಪ್ರದರ್ಶನವು 'ಧರ್ಮ'ದ ವಿಶಾಲ ಹಾಗೂ ವೈಶಾಲ್ಯ ಸ್ಥಿತಿಯ ನೆಲೆಯನ್ನು ಮುಚ್ಚಿಹಾಕುತ್ತಿದೆ. ಇಂಥ ಅಪಾಯಗಳಿಂದ ಸಮಾಜ-ದೇಶ ಮತ್ತು ರಾಷ್ಟ್ರಗಳು ಮುಕ್ತಗೊಳ್ಳಬೇಕಾಗಿದೆ. ಹೀಗೆ ಮುಕ್ತಗೊಳ್ಳಲು ಈ ಬಗೆಯ 'ಸಂವಾದ'ದ ವ್ಯಾಖ್ಯಾನಗಳು ಅಗತ್ಯಗಳಾಗುತ್ತವೆ. ಆ ಉದ್ದೇಶ ನಿಬಂಧದ ಉದ್ದಕ್ಕೂ ಇರುವಂತೆ ಎಚ್ಚರ ವಹಿಸಲಾಗಿದೆ. ಅದು ಇಲ್ಲಿ ತಕ್ಕಷ್ಟು ನೆರವೇರಿದೆ.

ಇಂದು ಜಾಗತಿಕ ಪ್ರಪಂಚದಲ್ಲಿ ಕ್ರೈಸ್ತಧರ್ಮವು ವಿಶಾಲವಾಗಿಯೂ ವ್ಯಾಪಕವಾಗಿಯೂ ಹರಡಿದೆ. ಅದು ಒಂದು ಕಡೆ ಅತಿ ಮತೀಯವಾದದ ನೆಲೆಯಿಂದಲೂ ಅತ್ಯಾಚರಣೆಯ ನೆಲೆಯಿಂದಲೂ ನಿಂತನೀರಾಗಿದೆ. ಅಂಥ ಅಪಾಯಗಳಿಂದ ಹೊರಬರುವ ಉದ್ದೇಶವೂ ಈ ನಿಬಂಧದ ಆಶಯವಾಗಿತ್ತು. ಯೇಸುಕ್ರಿಸ್ತ ಬದುಕಿದ್ದ ಸಮಾಜದ ಚಾರಿತ್ರಿಕ ನೆಲೆಯಿಂದ ನೋಡಿದರೆ ಈ 'ಅತಿವಾದ' ಆಗ ಇರಲಿಲ್ಲ. ಆ ಸಮಾಜವು 'ಧರ್ಮ'ದ ಬೇರನ್ನು ಹಿಡಿದಿತ್ತು. ಆದರೆ, ಅದು ಕಾಲಕ್ರಮೇಣ ಅತಿಯಾದ ಆಚಾರಗಳಿಗೆ ಬಲಿಬಿದ್ದು 'ಮತೀಯವಾದ'ದ ಸಂಕುಚಿತತೆಗೆ ಒಳಗಾಯಿತು. ಆ ಅಪಾಯದಿಂದ ಕ್ರೈಸ್ತಪಂಥವು ಹೊರಬರಬೇಕಾಗಿದೆ.

ಬಸವಣ್ಣನ ಕಾಲದಲ್ಲಿ ಹುಟ್ಟಿಕೊಂಡ 'ಶರಣಧರ್ಮ'ವು ವಿಶಾಲವಾದ ಭಿತ್ತಿಯ ಮೇಲೆ ರಚನೆಗೊಂಡಿತ್ತು. ಅದೂ ಕೂಡ ಮತೀಯ ಹಾಗೂ ಮತೀಯ ಮೂಲಭೂತವಾದಿಗಳ ಅಡಕೊತ್ತರಿಗೆ ಈಡಾಗಿ ಕೇವಲ ಕೆಲವೇ ಜನರ ಸ್ವತ್ತಾಗಿ ಉಳಿದಿರುವುದು ದುರ್ದೈವ. ಬಸವಣ್ಣ ಎಲ್ಲ ದಮನಿತ ಸಮಾಜಕ್ಕೆ ಸೇರಿದವನು ಮಾತ್ರವಲ್ಲ 'ನವ ಸಮಾಜ'ದ ನವ ಮನ್ವಂತರಕ್ಕೆ ಸೇರಿದವನಾಗಿದ್ದಾನೆ.

ಯೇಸುಕ್ರಿಸ್ತ-ಬಸವಣ್ಣ ಇವರಿಬ್ಬರನ್ನು ನವಸಮಾಜದ ಆಶಯವಾಗಿಯೇ ಇಲ್ಲಿ ವ್ಯಾಖ್ಯಾನಿಸಲಾಗಿದೆ. ಈ ವ್ಯಾಖ್ಯಾನವು ಕೇವಲ ಜಡ ಸಂಶೋಧನೆಯ ಕಡೆ ಕರೆದುಕೊಂಡು ಹೋಗದೆ ಸಾಮಾಜಿಕ ಪರಿವರ್ತನೆಗೂ ಹೊಸ ಸಮಾಜದ ಮನ್ವಂತರಕ್ಕೂ ಬೇಕಾದ ತಾತ್ವಿಕ ಭಿತ್ತಿಗಳನ್ನು ನಿರ್ಮಿಸುವ ಉದ್ದೇಶ ಪ್ರಮುಖವಾಗಿದೆ. ಇಡೀ ನಿಬಂಧವು ಇಂಥ ಆಶಯದ ದಾರಿಗಳನ್ನು ನಿರ್ಮಿಸಿದೆ. ಇಲ್ಲಿ ಯೇಸುಕ್ರಿಸ್ತ ಹಾಗೂ ಬಸವಣ್ಣನವರು ಮೂಲ ರೂಪಿಕೆಗಳಲ್ಲಿ ನಿಂತು ಹೊಸ ಮನ್ವಂತರದ ಧಾರ್ಮಿಕ ಸಂವಾದದ ವ್ಯಾಖ್ಯಾನಕ್ಕೆ ಕಾರಣರಾಗಿದ್ದಾರೆ. ಈ ಉದ್ದೇಶ ನಿಬಂಧದ ಬದ್ದಕ್ಕೂ ಇದೆ. ಅದು ತಕ್ಕಷ್ಟು ನೆರವೇರಿದೆಯೆಂಬ ಆಶಯ ಈ ನಿಬಂಧಕಾರನದು. ಅಧ್ಯಯನ ಮೋಜಿನದ್ದಲ್ಲ ಅಥವ ಅದೊಂದು ಶೈಕ್ಷಣಿಕ ಶಿಸ್ತು ಮಾತ್ರವಲ್ಲ - ಅದು ಸಮಕಾಲೀನ ವಿದ್ಯಮಾನಗಳಿಗೆ ತಾತ್ವಿಕ ಭಿತ್ತಿಯನ್ನೂ ಹೊಸ ಹೊಸ ರೂಪಕಗಳನ್ನೂ ನೀಡುವ ಉದ್ದೇಶ ಕೊಡುವುದಾಗಿದೆ. ಒಟ್ಟು ಈ ಮಹಾ ನಿಬಂಧವು ಅಂಥ ಆಶಯಗಳ ಕಡೆ ದಾರಿ ತೋರಿಸಿದೆ.

ಆಕರ ಸಾಹಿತ್ಯ

ಪ್ರಾಥಮಿಕ ಆಕರಗಳು

English:

1. **The Holy Bible,** New R.S.V. Catholic edition, T.P.I. Publications, Bangalore, India 1991

2. **The open Bible,** The New Kings James Version, Expanded Edition, Thomas Nelson Publishers, New York, U.S.A., 1995.

3. **The New Jerome Biblical Commentary,** T.P.I. Publications, Bangalore, India. 1996

4. **Second Vatican** Council, St. Paul's Publications, India. 1992

5. **Pavitra Bible,** KRCBC & United Bible Societies, Bangalore, India, 1995.

ಕನ್ನಡ

೧. **ಬಸವಣ್ಣನವರ ವಚನ ಸಂಪುಟ,** ಪ್ರಧಾನ ಸಂಪಾದಕರು, ಎಂ.ಎಂ. ಕಲಬುರ್ಗಿ, ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೨. **ಬಸವಣ್ಣನವರ ವಚನಗಳು,** ಸಂ. ಆರ್.ಸಿ. ಹಿರೇಮಠ, ಮುರಘಾಮಠ, ಧಾರವಾಡ, ೧೯೮೮

೩. **ಶೂನ್ಯ ಸಂಪಾದನೆಯ ಪರಾಮರ್ಶೆ,** ಸಂ.ಶಿ. ಭೂಸನೂರಮಠ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಆನುಷಂಗಿಕ ಆಕರಗಳು

English,

1. Armando Menezes : **Sri Basavesvara Acommemorative** Volume, Pirecorate of Kannada and Culture, Bangalore, India, 2003

2. V.K. Javali : **Sri Basavesvara A Commemorative** Volume, Directorate of Kannada and Culture, Bangalore, India, 2003

3. Sarojini Shintri : **'Basava A Woman wood'** Sri Basava Acommemorative Volume, Directorate of Kannada and Culture, Bangalore, India, 2003.

4. PERE M.J. Lagrange, O.P. : **'The Gospel of Jesus Christ'** T.P.I, Bangalore, India, 1992.

5. Reynolds R. Edstorom : 'The New concige catholic Dictionary', Twenty-Third publications, U.S.A. 2002.

6. J. Neuner, S.J. J. Dupuis, Sj. (eds.,) **'The Christian Faith'** T.P.I, Bangalore, India, 1982

7. Prof. B. Virupakshappa : **'Anubhava Mantapa in Scientific Percpective',** Basava Samiti, Bangalore, India, 2002

8. John L. Mclaughlin : **'The questions of Jesus',** St. Pauls Publications, Mumbai, India, 2005

9. Anselm Grun : **'Images of Jesus'** translated by John St. Paul's Publications, Mumbai, India, 2004

10. Sergeei Tokarev : **'History of Religion',** translated by Paula Gars, Progress Publishers, New Delhi, India, 1989

11. Prof. B. Virupakshappa : **'Sharanas' divine Revolution'** Basava Samithi, Bangalore, India, 2001.

12. Bro. D.G.S. Dhinakaran : **'Seven Sayings of the Saviour',** word of Christ, Madurai, India

13. B. Joseph Francies : **'Come Lord Jesus come'** St. Peters pontifical Institute publications, Bangalore, India, 2002

14. B. Joseph Francis : **"God in dynamic Relation to Us Life of Grace"** - Prematory, SPIT, Bangalore, India 2002

15. B. Joseph Francis : **'God-Man-World Theology'** TPI, Bangalore, 2003

16. Rao Sahib Dr. P.G. Halakatti Dr. C.R. Yaravinatelimuthi : **Vacanas of Sri Basaveswara,** BLDE, Blde Association, Bijapur, 2003

17. Y. Masih : **'A Comparative Study of Religions'** Motilal Banarasidas publishers, New Delhi, 1990.

18. Fr. Felix A Machado : **The teaching of Christianity regarding Religious plurality'** 'OMNIS TERRA, May - 2001.

19. Fr. X. Rudaya Raj (ed.) Fr. L. sundaram (ed.) : **"Inter-faith dialogue intruchirapalli,"** Madras, 1978

20. SAR Grant : **"Towards An altenative Theology"** confession of a non-dualist christion. ATC., Bangalore, 1991

21. MIRCEA ELIADE (editor in chief) : **'The Encyclopedia of Religions'** Vol. 12-13 Muslimillem Publishing Compress, Newyork, 1986.

22. Holger kristine : **"Jesus Lived in India",** Penguine Publications, New Delhi, India.

ಆನುಷಂಗಿಕ ಪಠ್ಯಗಳು

ಕನ್ನಡ

೧. ಡಾ. ಬಸವರಾಜು ಎಲ್. : **'ಬಸವಣ್ಣನವರ ಷಟ್‌ಸ್ಥಲದ ವಚನಗಳು'**, ಗುಲ್ಬರ್ಗ ವಿಶ್ವವಿದ್ಯಾಲಯ ಪ್ರಕಾಶಕರು, ಗುಲ್ಬರ್ಗಾ, ಇಂಡಿಯಾ, ೧೯೯೦

೨. ಡಾ. ಎಂ. ಚಿದಾನಂದ ಮೂರ್ತಿ : **'ಬಸವಣ್ಣ'**, ನ್ಯಾಶನಲ್ ಬುಕ್ ಟ್ರಸ್ಟ್ ಪಬ್ಲಿಕೇಷನ್ ನವದೆಹಲಿ, ಇಂಡಿಯಾ, ೧೯೯೧

೩. ಡಾ. ರಹಮತ್ ತರೀಕೆರೆ (ಸಂ) : **'ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ: ೩ ಧರ್ಮ'** ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೦೦.

೪. ಪ್ರೊ. ಎಂ. ಸುಧಾಕರ್ (ಸಂ) : **'ಕನ್ನಡ ಸಾಹಿತ್ಯ ದರ್ಶನ ಸಂಪುಟ, ೧,೨,೩ ಮತ್ತು ೪'** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೮೯೯.

೫. ಡೇವಿಡ್ ಅಂತೋಣಪ್ಪ : **'ಯೇಸುಕ್ರಿಸ್ತರ ಜೀವನ ಚರಿತ್ರೆ'** ಸಂತ ಪೌಲರ ಪ್ರಕಾಶನ, ಬೆಂಗಳೂರು, ೨೦೦೫.

೬. ಡಾ. ಪಾಲಾಕ್ಷ : **'ದಕ್ಷಿಣ ಭಾರತದ ಇತಿಹಾಸ ಮತ್ತು ಸಂಸ್ಕೃತಿ'** ಭಾಗ-೧ ಶಶಿ ಪ್ರಕಾಶನ, ತಿಪಟೂರು, ೨೦೦೫

೭. ಡಾ. ಮಹೇಶ ತಿಪ್ಪಶೆಟ್ಟಿ (ಸಂ) : **'ಬಸವ ತತ್ವ, ಸಾಮಾಜಿಕ ಬದಲಾವಣೆ,'** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೮. ಡಾ. ದಯಾನಂದ ಪ್ರಭು : **'ಭುವನ ಜ್ಯೋತಿ'**, ಮೈಸೂರು, ೨೦೦೬

೯. ಡಾ. ಎಸ್.ಎಫ್, ಜಕಬಾಳ : **'ಕನಕದಾಸರು'**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೦೪.

೧೦. ಪ್ರೊ. ದೇಜಗೌ	:	**‘ಬಸವೇಶ್ವರ – ಕುವೆಂಪು’**, ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ, ೨೦೦೪
೧೧. ಎಂ.ಎಸ್. ಸಿಂಧೂರ	:	**‘ನಾ ಕಂಡ ಅಣ್ಣ ಬಸವಣ್ಣ’**, ಸಿಂಧೂರ ಪ್ರಕಾಶನ, ತುಂಗಳ, ೨೦೦೩
೧೨. ಡಾ. ಪಿ.ವಿ. ನಾರಾಯಣ	:	**‘ವಚನ ಪರಿಸರ’**, ಬೆಂಗಳೂರು, ೧೯೯೪.
೧೩. ಪ್ರೊ. ಹಿರೇಮಲ್ಲೂರು ಈಶ್ವರನ್	:	**‘ಲಿಂಗಾಯತ ಧರ್ಮ : ಒಂದು ಅಧ್ಯಯನ’**, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೭.
೧೪. ಡಾ. ಬಸವರಾಜ ಕಲ್ಗುಡಿ	:	**‘ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ’**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧.
೧೫. ಚಸರಾ	:	**‘ಕ್ರಿಸ್ತನೊಳಗಿನ ಕ್ರಿಸ್ತ’**, ಸಂಚಲನ ಪ್ರಕಾಶನ, ಬೆಂಗಳೂರು ೧೯೯೯.
೧೬. ಡಾ. ಬಿ.ಎಸ್. ತಲ್ವಾಡಿ	:	**‘ದೇವಪುತ್ರ ಯೇಸು’**, ಕರ್ನಾಟಕ ಕ್ರೈಸ್ತ ಜನಪದ ಕೇಂದ್ರ ಪ್ರಕಾಶನ, ಬೆಂಗಳೂರು, ೧೯೯೬.
೧೭. ರೆವರಂಡ್ ಜಯವಂತ ಎಮ್.ಜೋಗಳ	:	**‘ಚೆನ್ನಪ್ಪ ಉತ್ತಂಗಿ ಸಮಗ್ರ ಸಾಹಿತ್ಯ ಭಾಗ-೧’** ಚೆನ್ನಪ್ಪ ಉತ್ತಂಗಿ ಸಮಗ್ರ ಸಾಹಿತ್ಯ ಪ್ರಕಾಶನ ಸಮಿತಿ, ಹುಬ್ಬಳ್ಳಿ, ೧೯೯೧.
೧೮. ಸ್ವಾಮಿ ಯತೀಶ್ವರಾನಂದ	:	**‘ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ’**, ರಾಮಕೃಷ್ಣ ಮಠ ಪ್ರಕಾಶನ, ಬೆಂಗಳೂರು, ೨೦೦೨.
೧೯. ಸ್ವಾಮಿ ಸ್ವಾಮಿ ಬ್ಯಾಪ್ಟಿಸ್ಟ್ ಡಾ. ಎನ್.ಎಸ್. ಮರಿಜೋ	:	**‘ಬೈಬಲ್, ಹಿನ್ನೆಲೆ ಮತ್ತು ವಸ್ತು ಮತ್ತು ವ್ಯಾಖ್ಯಾನ’**, ಸಂಚಲನ ಪ್ರಕಾಶನ, ಬೆಂಗಳೂರು, ೧೯೯೯.
೨೦. ಪ್ರೊ. ಎಚ್ಚೆಸ್ಕೆ	:	**‘ರಾಮಾನುಜ’**, ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ೧೯೯೮.
೨೧. ರೆ.ಸಿ.ಡಿ. ಉತ್ತಂಗಿ ಚೆನ್ನಪ್ಪ ಡಾ. ಎಸ್.ಆರ್. ಗುಂಜಾಳ (ಸಂ)	:	**‘ಅನುಭವ ಮಂಟಪ’**, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಪ್ರಕಾಶನ ಬೆಂಗಳೂರು, ೨೦೦೨
೨೨. ನಾ. ಡಿಸೋಜ	:	**‘ಏಸುಕ್ರಿಸ್ತ’**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೧.

೨೩. ಜಗದ್ಗುರು ಮಾತೆ ಮಹಾದೇವಿ : **'ಕಲ್ಯಾಣ ಕ್ರಾಂತಿ'** ವಿಶ್ವ ಕಲ್ಯಾಣ ಮಿಷನ್, ಬೆಂಗಳೂರು, ೨೦೦೪.

೨೪. ಡಾ. ಅಮರೇಶ ನುಗಡೋಣಿ (ಸಂ) : **'ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ'** ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೦೪.

: **'ಶರಣರು ಕಂಡ ಬಸವಣ್ಣ'**, ಸಿವಿಜಿ ಪಬ್ಲಿಕೇಶನ್, ಬೆಂಗಳೂರು, ೨೦೦೧.

೨೭. ಡಾ. ಅಬ್ದುಲ್ ಹಮೀದ್ : **'ಸೂಫಿಪಥ ಮತ್ತು ಶರಣಪಥಗಳ ತೌಲನಿಕ ಅಧ್ಯಯನ'** ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೮.

೨೮. ಡಾ. ಆರ್.ಸಿ. ಹಿರೇಮಠ : **'ಸರ್ವಧರ್ಮ ದರ್ಶನ'**, ಚೆನ್ನ ಚೇತನ ಪ್ರಕಾಶನ, ಹೊನ್ನಾಳಿ, ೧೯೯೮.

೨೯. ಮಲ್ಲೇಪುರಂ ಜಿ. ವೆಂಕಟೇಶ (ಸಂ): **'ದೇವುಡು ಅವರ ಶ್ರೀಶಾಂಕರ ವೇದಾಂತ'**, ದೇವುಡು ಪ್ರತಿಷ್ಠಾನ, ಬೆಂಗಳೂರು, ೨೦೦೦

೩೦. ಡಾ. ಆರ್.ಸಿ. ಹಿರೇಮಠ : **'ಮಹಾಯಾತ್ರೆ'**, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ, ೧೯೯೭.

೩೧. ಡಾ. ಎಂ.ಎ. ಜಯಚಂದ್ರ : **'ಭಗವಾನ್ ಮಹಾವೀರ'**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೪.

೩೨. ಬೆ.ಗೋ. ರಮೇಶ್ : **'ಶ್ರೀಮಧ್ವಾಚಾರ್ಯರು'**, ಸೃಷ್ಟಿ ಪಬ್ಲಿಕೇಶನ್ಸ್, ಬೆಂಗಳೂರು, ೧೯೯೮.

೩೩. ಪ್ರೊ. ಬಿ. ವಿರೂಪಾಕ್ಷಪ್ಪ : **'ಶರಣತತ್ವ ವಿವೇಚನೆ'**, ಬಸವ ಸಮಿತಿ, ಬೆಂಗಳೂರು, ೨೦೦೩.

೩೪. ಸಂಚಲನ : **'ಚರ್ಚ್ ಇತಿಹಾಸ'**, ಸಂಚಲನ ಪ್ರಕಾಶನ, ಬೆಂಗಳೂರು, ೧೯೯೯.

೩೫. ಸ್ವಾಮಿ ಡಾ. ಐ. ಅಂತಪ್ಪ : 'ಉತ್ತರ ಕರ್ನಾಟಕದಲ್ಲಿ ಕ್ರೈಸ್ತ ಧರ್ಮದ ಉಗಮ ಕೆಥೋಲಿಕ್ ಕ್ರೈಸ್ತರ ಕನ್ನಡ ಸಾಹಿತ್ಯ ಸಂಘ, ಬೆಂಗಳೂರು, ೨೦೦೧.

೩೫. ಸ್ವಾಮಿ ಡಾ. ಐ. ಅಂತಪ್ಪ : **‘ಬೆಂಗಳೂರು ಮತ್ತು ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ’**

೩೬. ಸ್ವಾಮಿ ಡಾ. ಐ. ಅಂತಪ್ಪ : **‘ಶ್ರೀ ಕನಕದಾಸ’**, ಶ್ರೀ ತಿಮ್ಮಪ್ಪ ದಾಸ ಇವರು ಕ್ರೈಸ್ತರಾದರೇ? ೨೦೦೬

೩೭. ಫಾದರ್ ಕಾಣಿಕ್‌ರಾಜ್ : **‘ಪ್ರಾರ್ಥನೆ ಅಗತ್ಯವೇ’**, ಆರೋಗ್ಯ ಮಾತೆ ಪ್ರಕಾಶನ, ಬೆಂಗಳೂರು, ೧೯೯೮.

೩೮. ಬೆಂಗಳೂರು ಮಹಾಧರ್ಮ ಕ್ಷೇತ್ರ : **‘ಎರಡನೇ ವ್ಯಾಟಿಕನ್ ಮಂಜರಿ’**, ಸೆಂಟ್ ಮೆರೀಸ್ ಪ್ರೆಸ್, ಬೆಂಗಳೂರು, ೧೯೬೬.

೩೯. ರಂಗನಾಥ ರಾಮಚಂದ್ರ ದಿವಾಕರ : **‘ವಚನಶಾಸ್ತ್ರ ರಹಸ್ಯವು’**, ಅಧ್ಯಾತ್ಮ ಕಾರ್ಯಾಲಯ, ಧಾರವಾಡ ೧೯೩೬.

೧೦. ಕೆ.ಜಿ. ಕುಂದಣಗಾರ : **‘ಬಸವಣ್ಣನವರ ಸಾಮಾಜಿಕ ವಿಚಾರಗಳು’**, ಬಸವ ಸಾಹಿತ್ಯ, ಬಸವ ಪಥ, ಮೇ ೧೯೮೪.

೪೧. ಶ್ರೀ ಬನ್ನಂಜೆ ಗೋವಿಂದಾಚಾರ್ಯ : **‘ದಾಸ, ಸಂತ ಸಾಹಿತ್ಯ ರಾಷ್ಟ್ರೀಯ ಸಮ್ಮೇಳನ’**, ಸಮ್ಮೇಳನಾಧ್ಯಕ್ಷರ ಭಾಷಣ, ಪಂಡರಾಪುರ, ಮಹಾರಾಷ್ಟ್ರ, ೨೦೦೫.

೪೨. ಪ್ರೊ. ಸಿ.ಪಿ.ಕೆ : **‘ಬಸವ ಭಾವನೆ’**, ಸಂವಹನ ಪ್ರಕಾಶನ, ಮೈಸೂರು, ೧೯೮೭.

೪೩. ವಿ. ಸೀತಾರಾಮಯ್ಯ (ಸಂ) : **‘ಬಸವೇಶ್ವರ, ಕವಿ ಕಾವ್ಯ ಪರಂಪರೆ’**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೮.

೪೩. ಮಾತೆ ಮಹಾದೇವಿ : **‘ಬಸವ ತತ್ವದರ್ಶನ’**, ಕರ್ನಾಟಕ ವಿ.ವಿ., ಧಾರವಾಡ, ೧೯೬೯

೪೪. ಶೇಷ ನವರತ್ನ : **‘ಜಾಗತಿಕ ಧರ್ಮಗಳು’**, ಕೂಡ್ಲಿಗಿ, ೧೯೯೫

೪೫. ಡಾ. ವೀರಣ್ಣ ರಾಜೂರ : **‘ವೀರಶೈವ ದರ್ಶನ, ತೌಲನಿಕ ವಿವೇಚನೆ’**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ, ೨೦೦೧

೪೬. ಡಾ. ಎಂ. ಚಿದಾನಂದ ಮೂರ್ತಿ : **'ಚಿದಾನಂದ ಸಮಗ್ರ ಸಂಪುಟ ೪'**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೪

೪೭. ಡಾ. ಎಂ. ಚಿದಾನಂದ ಮೂರ್ತಿ : **'ಚಿದಾನಂದ ಸಮಗ್ರ ಸಂಪುಟ ೫'**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೪

೪೮. ಡಾ. ಎಲ್. ಬಸವರಾಜು (ಸಂ) : **'ಶಿವ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆ'**, ಮುರುಘಾಮಠ, ಚಿತ್ರದುರ್ಗ

೪೯. ಶ್ರೀ ಎನ್.ಕೆ. ಕುಲಕರ್ಣಿ : **'ಬಸವೇಶ್ವರ ಸಮಾಜ ರಚನಾ ಕಲ್ಪನೆ'**, ವಚನ ಪಿತಾಮಹ ಫ.ಗು. ಹಳಕಟ್ಟಿಯವರ ಸ್ಮಾರಕ ಸಂಪುಟ, ವಿಜಾಪೂರ, ೧೯೬೮

೫೦. ಚಂದ್ರಶೇಖರ ಶಾಸ್ತ್ರೀ ಹಿರೇಮಠ : **'ಬಸವತತ್ತ್ವ ರತ್ನಾಕರ'**, ವಿಶ್ವನಾಥ ಸಹೋದರರು ಪ್ರಕಾಶನ, ಹೊಳಲು, ೧೯೬೧.

೫೧. ಫಾದರ್ ಸ್ವಾನಿ ಬ್ಯಾಪ್ಟಿಸ್ಟ್ : **'ಬೈಬಲ್ಲಿನ ಸ್ತ್ರೀಯರು'**, ಕೆಥೋಲಿಕ್ ಕೇಂದ್ರ, ಮೈಸೂರು, ೨೦೦೧

೫೨. ಫಾದರ್ ಪ್ಯಾಟ್ರಿಕ್ ಜೇವಿಯರ್ : (ಅಪ್ರಕಟಿತ ಪ್ರೌಢ ಪ್ರಬಂಧ) **'ಬಸವಣ್ಣ ಮತ್ತು ಯೇಸು ಕ್ರಿಸ್ತರ ಪ್ರಾರ್ಥನ ಜೀವನ'**, ಎಸ್‌ಪಿಪಿಐಟಿ, ಬೆಂಗಳೂರು

೫೩. ಡಾ. ಎಂ.ಎಂ. ಕಲಬುರ್ಗಿ : **'ಮಾರ್ಗ-೧'**, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೫

೫೪. ಪ್ರೊ. ಬಿ. ಷೇಕ್ ಅಲಿ (ಪ್ರ.ಸಂ.) : **'ಕರ್ನಾಟಕ ಚರಿತ್ರೆ ಸಂಪುಟ-೨'**, ಪ್ರಸಾರಾಂಗ,
ಪ್ರೊ. ಬಿ. ಸುರೇಂದ್ರ ರಾವ್ (ಸಂ.) ಕನ್ನಡ ವಿ.ವಿ. ಹಂಪಿ, ೧೯೯೭

೫೫. ಡಾ. ಎಚ್. ತಿಪ್ಪೇರುದ್ರಸ್ವಾಮಿ : 'ವಚನ ಚಳುವಳಿ', ಶ್ರೀ ಶರಣ ಬಸವೇಶ್ವರ ಗ್ರಂಥ ವಿಶ್ವವಿದ್ಯಾನಿಲಯ, ಗುಲ್ಬರ್ಗಾ, ೧೯೮೭

೫೬. ಕರಿಯಪ್ಪ ಜಿ. : 'ಬಳ್ಳಾರಿ ಜಿಲ್ಲೆಯ ಅವಧೂತರು', (ಅಪ್ರಕಟಿತ) ಪ್ರೌಢ ಪ್ರಬಂಧ, ಹಂಪಿ ಕನ್ನಡ ವಿ.ವಿ. ೨೦೦೪.